ಇಂಥ ಕಾಲದಲ್ಲಿ ಈಷಣತ್ರಯಗಳ ಬಾಧೆಗಳಿಗೆ ಒಳಗಾಗದಂತೆ ಸರ್ವಸಂಗ ಪರಿತ್ಯಾಗಮಾಡಿ, ಪರಮ ವಿರಕ್ತ ಯತಿ ಶಿಖಾಮಣಿಗಳಾಗಿ ಕ್ಷಣ ಕ್ಷಣಶಃ ಶ್ರೀ ಹರಿವಾಯು ದೇವರ ಆಜ್ಞಾನುಸಾರ ನಡೆದು, ಶ್ರೀ ಹರಿ ಗುರುಗಳ ಕೃಪಾಕಟಾಕ್ಷದ ಸಾಗರದಲ್ಲಿ ಸ್ವೇಚ್ಛೆಯಾಗಿ ವಿಹರಿಸುತ್ತಿರುವ ಈ ಮಹಾತ್ಮರ ಚರಿತ್ರವು ಸರ್ವತೋಮುಖದಿಂದ ಸುಜನರಲ್ಲಿ ಭೇರಿತಾಡನದಂತೆ ಮೊಳಗಿ ನಭೋ ಮಂಡಲವನ್ನು ವ್ಯಾಪಿಸಿತು. ಸುಜನರ ಉದ್ಧಾರಕ್ಕಾಗಿಯೇ ಉದಯಿಸಿದ ಈ ಚರಿತ್ರ ನಾಯಕರ ಕೀರ್ತಿಯು ಧನಂಜಯನ ಕೀರ್ತಿ ದಿಗಂತಕ್ಕೆ ವ್ಯಾಪಿಸಿದಂತೆ ಇವರ ಕೀರ್ತಿಯು ವ್ಯಾಪಿಸುವದರಲ್ಲಿ ಸಂಶಯವೇ ಇಲ್ಲ. ಇಂತಹ ಮಹನೀಯರ ಕೃಪಾಕಟಾಕ್ಷವು ಸಹಸ್ರಾರು ಜನ್ಮಗಳಲ್ಲಿ ಒಂದಾವರ್ತಿಯಾದರೂ ಒದಗಿದರೆ ಅಂಥವನಿಗೆ **'ಅಂತರಂಗದ ಕದವು ತೆರೆಯಿತಿನ್ನು'** ಎಂಬ ದಾಸರಾರ್ಯರ ವಾಣಿಯಂತೆ ಅಜ್ಞಾನದ ಮುಸುಕು ಕಳಚಿ ಜ್ಞಾನೋದಯವಾಗಿ ಶ್ರೀ ಹರಿವಾಯುಗಳನ್ನು ನೋಡುವ ಅಂತರಂಗದ ಕಣ್ಣು ತೆರೆಯುವದೆಂಬುದು ನಿಸ್ಸಂದೇಹ. ಸುಜನರನ್ನು ಸುಜನರೇ ಅರಿಯಬಲ್ಲವರಲ್ಲದೆ ಅನ್ಯರಿಗೆ ಅರಿಯಲು ಸಾಧ್ಯವೇ? ಎಂದು ಕೊಪ್ಪಳದ ಶ್ರೀ ರಾವುಜಿರಾಯರು ಅನ್ನುತ್ತಿರುವಂತೆ ಶ್ರೀಗಳವರ ದೇಹವನ್ನು ಭೂ ಸ್ಥಾಪನಾ ಮಾಡಲಾಯಿತು.

॥ ಶುಭಂ ॥

॥ ಶ್ರೀ ಗುರುಮಧ್ವೇಶಾರ್ಪಣಮಸ್ತು ॥

ವಿರಚಿತ :- **ಮುತ್ತಿಗಿ ಸ್ವಾಮಿರಾಯಾಚಾರ್ಯ**

ಶ್ರೀ ಮುತ್ತಿಗಿ ವಂಶವೃಕ್ಷ – (ಅಗಸ್ತ್ಯಗೋತ್ರ)



|| ಶ್ರೀ ಮನ್ಮೂಲಪಟ್ಟಾಭಿರಾಮಪ್ರಸೀದ ||

|| ಶ್ರೀ ಶ್ರೀ ೧೦೦೮ ಶ್ರೀ ಮಜ್ಜಯತೀರ್ಥ ಶ್ರೀವ್ಯಾಸತೀರ್ಥ
ಶ್ರೀ ರಾಘವೇಂದ್ರತೀರ್ಥ ಶ್ರೀಗುರುಭ್ಯೋ ನಮಃ ||

ಶ್ರೀಮತ್ ಕೂಡ್ಲಿ ಆರ್ಯಅಕ್ಷೋಭ್ಯತೀರ್ಥಸಂಸ್ಥಾನಾಧೀಶ
ಶ್ರೀ ೧೦೦೮

ಶ್ರೀ ರಘುಪ್ರೇಮತೀರ್ಥರ
ಚರಿತ್ರೆ
ಸುಮಸೌರಭ

ಶ್ಲೋಕ: ವಂದೇ ಮುಕುಂದಮಜರುದ್ರಮಹೇಂದ್ರಪೂಜ್ಯಂ
ವ್ಯಾಪ್ತಂ ಸಮಾಭ್ಯಧಿಕಶೂನ್ಯಮನಂತವೀರ್ಯಮ್।
ಸರ್ಗಸ್ಥಿತಿ-ಪ್ರಲಯಕೃದ್ವಿಭುಮಪ್ರಮೇಯಂ
ನಿರ್ದೋಷಸದ್ಗುಣಗಣಾರ್ಣವಮಿಂದಿರೇಶಮ್॥

"ನಮಾಮಿ ಮಾಧವಂ ನಿತ್ಯಂ ವಾಣೀವರಮನಂತರಂ।
ಮದ್ಗುರೂನ್ ತದ್‌ಗುರೂಂಶ್ಚಾಪಿ ಸಕಲೇಷ್ಟಾರ್ಥಸಿದ್ಧಯೇ॥"

I ಅಥ ಪ್ರಥಮಾಧ್ಯಾಯಃ

೧. ಪಾರ್ಥ ಪೃಥಿವಿಗಿಳಿದ

ಈ ಭರತಖಂಡದ ಕರ್ನಾಟಕ ಪ್ರದೇಶದ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದ ಅಗಸ್ತ್ಯ ಗೋತ್ರ ವಂಶಜ ಮುತ್ತಿಗಿ ರಘುನಾಥಾಚಾರ್ಯರು ಶ್ರೀ ನರಸಿಂಹದೇವರ ಹಾಗು ಶ್ರೀವ್ಯಾಸರಾಜ ಪ್ರತಿಷ್ಠಿತ ಶ್ರೀ ಮುಖ್ಯಪ್ರಾಣದೇವರ ಸೇವಾಸಕ್ತರಾಗಿ ಭಾಗವತ ಧರ್ಮಾನುಷ್ಠಾತೃಗಳಾಗಿದ್ದರು. ಅವರು ಅಲ್ಲಿಯ ಧರ್ಮದರ್ಶಿಗಳೂ ಆಗಿದ್ದರು. ಅವರ ಮಕ್ಕಳಾದ ಸ್ವಾಮಿರಾಯಾಚಾರ್ಯ, ವೆಂಕೋಬಾಚಾರ್ಯರೆಂಬುವರಲ್ಲಿ ಜ್ಯೇಷ್ಠ ಪುತ್ರರಾದ ಸ್ವಾಮಿರಾಯಾಚಾರ್ಯರ ಧರ್ಮಪತ್ನಿ ಕುಂ ॥ಸೌ॥ ತುಂಗಾಬಾಯಿಯನ್ನು ಒಂದು ಬ್ರಹ್ಮರಾಕ್ಷಸವು ಪೀಡಿಸುತ್ತಿತ್ತು. ಅದು ಮೂರು ನಾಲ್ಕು ಗರ್ಭಭೇದನ ಮಾಡಿತು. ಪುನಃ ಗರ್ಭ ಧರಿಸಲು ಪೂರ್ವದಂತೆ ಗರ್ಭವು ವ್ಯರ್ಥವಾದೀತೆಂದು ಆ ದಂಪತಿಗಳು ಆಲೋಚಿಸಿ ಶ್ರೀಮನ್‌ಮಂತ್ರಾಲಯ ಕ್ಷೇತ್ರಕ್ಕೆ ಬರಲು ಶ್ರೀ ಶ್ರೀ ರಾಘವೇಂದ್ರತೀರ್ಥ ಶ್ರೀಪಾದಂಗಳವರ ಅನುಗ್ರಹ ಬಲದಿಂದ ಗರ್ಭವು ಸ್ಥಿರವಾಗಿ ಅಭಿವೃದ್ಧಿಹೊಂದಿ, ಒಂದು ಗಂಡು ಶಿಶು ಜನಿಸಿತು. ಅದಕ್ಕೆ ಸುಮುಹೂರ್ತದಲ್ಲಿ "ರಘುನಾಥ"ನೆಂದು ಹೆಸರಿಟ್ಟರು. ನಾಲ್ಕೈದು ವರ್ಷಗಳು ಕಳೆದನಂತರ ಪುನಃ ಗರ್ಭ ಧರಿಸಲು ಪೂರ್ವದಂತೆ ಮಂತ್ರಾಲಯಕ್ಕೆ ಬಂದು ಸೇವೆ ಮಾಡಲು

ಬಗ್ಗೆ ಕೊಂಡಾಡಿದರು. ಮರುದಿವಸ ಯಾರೋ ಒಬ್ಬ ಗೃಹಸ್ಥನು ಬಂದು ಬ್ರಹ್ಮೋತ್ಸವ ಸೇವಾ ಕಟ್ಟಿ ಆತನಿಗೆ ನಿಲ್ಲಲು ಅವಕಾಶವಿಲ್ಲದ್ದರಿಂದ ಈ ಆಚಾರ್ಯರ ಮುಖಾಂತರ ಉತ್ಸವಾದಿಗಳನ್ನು ನಡೆಸುವಂತೆ ಅಲ್ಲಿಯ ಪೇಷ್ಕಾರರಿಗೆ ತಿಳಿಸಿ ತೆರಳಿದರು. ಈ ಉತ್ಸವವನ್ನು ಯಥಾಸಾಂಗಗೊಳಿಸಿ ನಂತರ ಸ್ವಗ್ರಾಮಕ್ಕೆ ಪ್ರಯಾಣ ಮಾಡಿದರು.

೨. ದತ್ತು ಕುತ್ತು ತಂದರೂ ಚಿತ್ತಜನಯ್ಯನ ಬಿಡಲಿಲ್ಲ.

ಉಭಯ ಪುತ್ರರಿಂದೊಡಗೂಡಿ ಸ್ವಗೃಹದಲ್ಲಿ ಆನಂದದಿಂದ ಕಾಲ ಕಳೆಯುತ್ತಿರುವ ಆ ದಾಂಪತ್ಯದಲ್ಲಿ ಒಂದು ವರ್ಷದಲ್ಲಿಯೇ ರವಿಗೆ ರಾಹು ಅಡ್ಡಬಂದಂತೆ ಕುಂ ||ಸೌ|| ತುಂಗಾಬಾಯಿಯನ್ನು ಕಾಲನು ಗ್ರಾಸಮಾಡಿಬಿಟ್ಟನು. ತಾಯಿಯು ಇಲ್ಲದಿರುವ ಉಭಯ ಬಾಲಕರನ್ನು ಸಂರಕ್ಷಿಸುವುದು ಈ ಸ್ವಾಮಿರಾಯಾಚಾರ್ಯರಿಗೆ ದುಸ್ತರವಾಗಿರಲು, ಅವರ ಭಾವ ಮೈದುನರು ಈ ಬಾಲಕರನ್ನು ತಮ್ಮಲ್ಲಿಗೆ ಕರೆದುಕೊಂಡು ಹೋದರು. ಸೋದರ ಮಾವಂದಿರ ಛಾಯೆಯಲ್ಲಿ ಜೀವಿಸುತ್ತಿದ್ದ ಈ ಬಾಲಕರು ಕಷ್ಟ ತರಂಗದಲ್ಲಿಯೇ ಮುಳುಗಿ ತೇಲುತ್ತಿದ್ದರು. ಇತ್ತ ಒಂಟಿಗರಾಗಿದ್ದ ಸ್ವಾಮಿರಾಯಾಚಾರ್ಯರಿಗೆ ಸ್ವಗೃಹವು ಬೇಸರ ಕೊಡುತ್ತಿತ್ತು. ಈ ಮೂಲಕ ಆಚಾರ್ಯರು ಸ್ವಗ್ರಾಮವನ್ನು ಬಿಟ್ಟು ಅಲ್ಲಲ್ಲಿ ಪುರಾಣ ಶ್ರವಣ ಮಾಡಿಸುತ್ತ ತಮ್ಮ ಮಕ್ಕಳಿದ್ದ 'ಕಂಪ್ಲಿಗೆ' ಬಂದರು. ಕಷ್ಟದಿಂದ ಬಳಲುತ್ತಿರುವ ಉಭಯ ಬಾಲಕರನ್ನು ನೋಡಿ ಖಿನ್ನರಾಗಿ ಅಲ್ಲಿಂದ ತೆರಳುವಾಗ ಆ ಬಾಲಕರನ್ನು ತಮ್ಮ ಸಂಗಡವೇ ಇಟ್ಟುಕೊಂಡು ಸಂಚರಿಸುತ್ತ 'ಆದವಾನಿ'ಗೆ ಬಂದರು. ಭಾಗವತ ಪುರಾಣಾರಂಭಮಾಡಿ ಸರ್ವರಿಂದ ಆದರಣೀಯರಾದರು. ಈ ಸಂದರ್ಭದಲ್ಲಿ ಈ ಗ್ರಾಮವಾಸಿಗಳಾದ ಶ್ರೀಮಂತರಾದ ಪುತ್ರರಹಿತ ವ್ಯಸನಗ್ರಸ್ತ **ಮುತ್ತಿಗಿ ಗುಂಡಾಚಾರ್ಯರೆಂಬ** ಆಗರ್ಭ ಶ್ರೀಮಂತರು ಉಭಯ ಬಾಲಕರಲ್ಲೊಬ್ಬನನ್ನು ತಮಗೆ ಪುತ್ರತ್ವೇನ ಸ್ವೀಕಾರ ಕೊಡಲು ಕೇಳಿದರು. ಅಭಾಗ್ಯನಾದ ನಾನು ಸಂರಕ್ಷಿಸುವ ಭಾರ ಇಟ್ಟುಕೊಳ್ಳುವುದಕ್ಕಿಂತಲೂ, ದೈವ ಯೋಗದಿಂದ ದೊರೆತ ಶ್ರೀಮಂತ ಮನೆಯನ್ನು ಯಾತಕ್ಕೆ ಬಿಡಬೇಕು; ಇದರಿಂದ ಉಭಯರಿಗಾಗಲಿ ಅಥವಾ ಒಬ್ಬನಿಗಾದರೂ ಗ್ರಸ್ತನಾದ ಅದೃಷ್ಟ ರವಿಯು ಮುಕ್ತನಾಗಿ ಪ್ರಕಾಶಕ್ಕೆ ಬರಲಿ ಅಂತ ಮನಸಾ ಆಲೋಚಿಸಿ ಧರ್ಮ ಶಾಸ್ತ್ರ ರೀತ್ಯಾ ಜ್ಯೇಷ್ಠ ಪುತ್ರನನ್ನು ಕೊಡಲು ಬರುವದಿಲ್ಲ, ಎರಡನೆಯವನಾದ ಈ ಶ್ರೀನಿವಾಸನನ್ನು ಸ್ವೀಕಾರ ಮಾಡಬಹುದು ಅಂತ ಹೇಳಿದರು. ಆ ಕ್ಷಣವೇ **ಗುಂಡಾಚಾರ್ಯರು** ಮತ್ತು ಅವರ ಪತ್ನಿ **ಕುಂ|| ಸೌ|| ರಾಧಾಬಾಯಿಯು** ವಾದ್ಯ ವೈಭವಗಳ ಸಂಭ್ರಮದಿಂದ ತಮ್ಮ ಮನೆಗೆ ಕರೆದುಕೊಂಡು ಹೋಗಿ ನೂತನ ವಸ್ತ್ರಾಭರಣಗಳಿಂದ ಅಲಂಕಾರ ಮಾಡಿ ತಾವು ಆನಂದ ಹೊಂದಿದ್ದಲ್ಲದೆ ಜನಕರಿಗೂ ತಥಾ ಆಪ್ತೇಷ್ಟ ಮಿತ್ರ ಸ್ವಜನರಿಗೂ ಆನಂದಗೊಳಿಸಿದರು. ಮತ್ತು ನಾಲ್ಕಾರು ದಿನಗಳಲ್ಲಿಯೇ ಶುಭ ಮುಹೂರ್ತ ನೋಡಿ ಪುಣ್ಯಾಹವಾಚನ ಮೊದಲಾದ ವಿಧಿಗಳನ್ನು ಮುಗಿಸಿ ಬ್ರಾಹ್ಮಣಾದಿ ಸರ್ವರಿಗೂ ಗೋದಾನ, ಇತರ ದಾನ ಧರ್ಮ ಯಥಾ ಯೋಗ್ಯ ಮರ್ಯಾದೆ ಮಾಡಿದರು. ಅತಿ ಲುಬ್ಧರಾದ ಈ ಗುಂಡಾಚಾರ್ಯರು ಯಾವಾಗಲೂ ಯಾರಿಗೂ ಯಾವ ದಾನ ಧರ್ಮ ಮಾಡುತ್ತಿರಲಿಲ್ಲ. ಈ ಬಾಲಕನ ಪುಣ್ಯ ಪ್ರಭಾವದಿಂದ

ಶ್ರೀ ತಿರುಪತಿ ಕ್ಷೇತ್ರಕ್ಕೆ ಹೋಗುವದಾಗಿ ಗುರುರಾಜರು ಆಜ್ಞೆ ಮಾಡಿದರು. ತದನುಗುಣವಾಗಿ ತಿರುಪತಿ ಕ್ಷೇತ್ರಕ್ಕೆ ಪಾದಚಾರಿಗಳಾಗಿ ಪ್ರಯಾಣ ಮಾಡಿದರು. ಮಾರ್ಗದಲ್ಲಿ ಕಡಪಾ ಜಿಲ್ಲೆಯ **'ರಾಯಚೋಟಿ'** ಎಂಬ ಗ್ರಾಮಕ್ಕೆ ಬರಲು, ಮುಂದೆ ಪ್ರಯಾಣ ಮಾಡಲವಕಾಶವಾಗದಂತೆ ಪ್ರತಿ ದಿವಸ ಮಳೆಯು ಸುರಿಯುತ್ತಿತ್ತು. ಈ ಮೂಲಕ ಅಲ್ಲಿಯೇ ನಿಲ್ಲಬೇಕಾಯಿತು. ಪ್ರಸವ ದಿನಗಳು ಸಮೀಪಿಸಿದವು. ರಿಕ್ತರಾದ ಈ ದಂಪತಿಗಳು ವ್ಯಾಕುಲ ಪಡುತ್ತಿರಲು ಆ ದಿನ ರಾತ್ರಿ **"ವ್ಯಾಕುಲವ್ಯಾಕೋಮನವೆ ಸಾಕುವದಾತನು ಶ್ರೀಕಾಂತನನುದಿನ"** ಅಂತ ಒಬ್ಬ ತ್ರಿನಾಮಧಾರಿಯು ಸ್ವಪ್ನದಲ್ಲಿ ಹೇಳಿದಂತಾಯಿತು. ತಟ್ಟನೇ ಎಚ್ಚೆತ್ತ ಆಚಾರ್ಯರು ಆಶ್ಚರ್ಯಚಕಿತರಾಗಿ ತಮ್ಮ ಪತ್ನಿಯಲ್ಲಿ ತಿಳಿಸಿ ಹರ್ಷಚಿತ್ತ ಉಳ್ಳವರಾದರು. ಮರುದಿವಸದಿಂದ ಈ ಆಚಾರ್ಯರು ಭಾಗವತಪುರಾಣ ಆರಂಭಿಸಿ ಅಲ್ಲಿಯೇ ವಾಸಮಾಡಿದರು. ಆ ಗ್ರಾಮವು ವೀರಭದ್ರದೇವರ ಕ್ಷೇತ್ರವಾದ್ದರಿಂದ ಅಲ್ಲಿ ಶೈವರ ಪ್ರಾಬಲ್ಯವಿತ್ತು. **"ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ"** ಎಂಬ ಯುಕ್ತಿಗನುಸರಿಸಿ ಪರಮಾತ್ಮನ ಅನುಗ್ರಹ ಬಲವಿದ್ದುದರಿಂದ ಇವರಲ್ಲಿ ಸರ್ವರಿಗೂ ವಿಶ್ವಾಸವುಂಟಾಗಿ ನಿತ್ಯನೈಮಿತ್ತಿಕಾನ್ಹಿಕಾದಿಗಳಿಗೆ ಯಾವ ತೊಂದರೆಯಾಗದಂತೆ ಪುರವಾಸಿಗಳು ನೋಡಿಕೊಳ್ಳುತ್ತಿದ್ದರು. ಇತ್ತ ಶುಕ್ಲಪಕ್ಷದ ಚಂದ್ರಮನಂತೆ ಅಭಿವೃದ್ಧಿ ಹೊಂದುತ್ತಿದ್ದ ಗರ್ಭವು ಪೂರ್ಣಾವಸ್ಥೆ ಹೊಂದಿ ಶಾಲಿವಾಹನ ಶಕೆ ಒಂದು ಸಾವಿರದಾ ಏಳುನೂರಾ ಎಂಭತ್ತೆರಡನೇಯ ಸಿದ್ಧಾರ್ಥಿ ಸಂವತ್ಸರ (ಕ್ರಿಸ್ತ ಶಕೆ ೧೮೬೦) ಆಶ್ವಯುಜ ಕೃಷ್ಣಪಕ್ಷ (ವದ್ಯ) ಅಷ್ಟಮಿ, ಬುಧವಾರ, ಪುನರ್ವಸು ನಕ್ಷತ್ರ, ಚತುರ್ಥ ಚರಣದಲ್ಲಿ ಸೂರ್ಯೋದಯಾನಂತರ ಎಂಟು ಘಳಿಗೆ ಸುಮುಹೂರ್ತಕ್ಕೆ ಸಲ್ಲುವ ವೃಶ್ಚಿಕ ಲಗ್ನದಲ್ಲಿ ಅರಣಿಯಿಂದ ಅಗ್ನಿಜಾತವಾದಂತೆ ಈ ಚರಿತ್ರ ನಾಯಕರು ಜನಿಸಿದರು.

ತತ್ಕಾಲ ಗ್ರಹ ಸಂಪತ್ತಿಯು ಚಿತ್ರಾ ಚತುರ್ಥ ರವಿಃ, ಪುನರ್ವಸು ಚತುರ್ಥ ಚಂದ್ರಃ, ಉತ್ತರಾ ದ್ವಿತೀಯೋ ಬುಧಃ, ಪುಷ್ಯಾ ಪ್ರಥಮೋ ಗುರುಃ, ಸ್ವಾತಿ ಪ್ರಥಮೋ ಶುಕ್ರಃ, ಮಘಾ ದ್ವಿತೀಯೋ ಶನಿಃ, ಧನಿಷ್ಠಾ ಪ್ರಥಮೋ ರಾಹುಃ, ಆಶ್ಲೇಷಾ ತೃತಿಯಃ ಕೇತುಃ, ಇದ್ದು ಗುರುಮಹರ್ದಶೆಯೂ, ಮೂರು ವರ್ಷ ಎರಡು ತಿಂಗಳು ಮಾತ್ರ ಉಳಿದಿತ್ತು. ಈ ಶಿಶುವಿಗೆ ಸುಮುಹೂರ್ತದಲ್ಲಿ ಜಾತಕ ನಾಮಕರಣ ಸಂಸ್ಕಾರ ಮಾಡಲ್ಪಟ್ಟು ಆ ಕ್ಷೇತ್ರ ನಿಯಮಕ್ಕನುಸರಿಸಿ ಕ್ಷೇತ್ರಾಭಿಮಾನಿಯ ಹೆಸರು ಪ್ರಥಮದಲ್ಲಿಟ್ಟು ಶ್ರೀ ಶ್ರೀನಿವಾಸನ ಕೃಪಾಕಟಾಕ್ಷ ಬಲದಿಂದ ಜನಿಸಿದ ಕಾರಣ **'ಶ್ರೀನಿವಾಸ'**ನೆಂದು ನಾಮಕರಣ ಮಾಡಿದರು. ಆಮೇಲೆ ಶ್ರೀ ಕ್ಷೇತ್ರ ತಿರುಪತಿಗೆ ತೆರಳಿ ಸ್ವಾಮಿಪುಷ್ಕರಣಿ ಸ್ನಾನ, ಆ ವೆಂಕಟಗಿರಿ ನಿಲಯ ವರಾಹ, ಶ್ರೀನಿವಾಸರ ಸಂದರ್ಶನದಿಂದ ಆನಂದಭರಿತರಾಗಿ ಆ ದಂಪತಿಗಳು ನಾವು ಬ್ರಹ್ಮೋತ್ಸವ ಮಾಡಿಸುವ ಯೋಗ್ಯತಾವುಳ್ಳವರಾಗಲಿಲ್ಲ, ನಾವು ಬ್ರಹ್ಮೋತ್ಸವಕ್ಕೆ ಬಂದು ಸಂಭ್ರಮ ನೋಡಲಾಗಲಿಲ್ಲ. ಅಥವಾ ಮುಂದಿನ ವರುಷವಾದರೂ ಬಂದು ಬ್ರಹ್ಮೋತ್ಸವವನ್ನು ನೋಡಿ ಹೋಗಬಹುದೆಂದು ಧೈರ್ಯವಿರುವ ಅದೃಷ್ಟವಂತರೂ ಅಲ್ಲ ಇತ್ಯಾದಿ ತಮ್ಮ ಬಡತನದ ಬಗ್ಗೆ ನಿಂದಿಸಿಕೊಂಡರು. ಆ ದಿನರಾತ್ರಿ "ನಾಳಿನಿಂದ ಬ್ರಹ್ಮೋತ್ಸವ ನೋಡಿರಿ, ಮುಂದೆ ನಿಮ್ಮ ಕೂಸಿನಿಂದ ವಿಶೇಷ ಸೇವಾ ತೆಗೆದುಕೊಳ್ಳುತ್ತೇನೆ" ಅಂತ ಸ್ವಪ್ನವಾಗಲು ಶ್ರೀ ಪರಮಾತ್ಮನ ಕೃಪಾ ಸಮುದ್ರತೆಯು

ಬಗ್ಗೆ ಕೊಂಡಾಡಿದರು. ಮರುದಿವಸ ಯಾರೋ ಒಬ್ಬ ಗೃಹಸ್ಥನು ಬಂದು ಬ್ರಹ್ಮೋತ್ಸವ ಸೇವಾ ಕಟ್ಟಿ ಆತನಿಗೆ ನಿಲ್ಲಲು ಅವಕಾಶವಿಲ್ಲದ್ದರಿಂದ ಈ ಆಚಾರ್ಯರ ಮುಖಾಂತರ ಉತ್ಸವಾದಿಗಳನ್ನು ನಡೆಸುವಂತೆ ಅಲ್ಲಿಯ ಪೇಷ್ಕಾರರಿಗೆ ತಿಳಿಸಿ ತೆರಳಿದರು. ಈ ಉತ್ಸವವನ್ನು ಯಥಾಸಾಂಗಗೊಳಿಸಿ ನಂತರ ಸ್ವಗ್ರಾಮಕ್ಕೆ ಪ್ರಯಾಣ ಮಾಡಿದರು.

೨. ದತ್ತು ಕುತ್ತು ತಂದರೂ ಚಿತ್ತಜನಯ್ಯನ ಬಿಡಲಿಲ್ಲ.

ಉಭಯ ಪುತ್ರರಿಂದೊಡಗೂಡಿ ಸ್ವಗೃಹದಲ್ಲಿ ಆನಂದದಿಂದ ಕಾಲ ಕಳೆಯುತ್ತಿರುವ ಆ ದಾಂಪತ್ಯದಲ್ಲಿ ಒಂದು ವರ್ಷದಲ್ಲಿಯೇ ರವಿಗೆ ರಾಹು ಅಡ್ಡಬಂದಂತೆ ಕುಂ ॥ಸೌ॥ ತುಂಗಾಬಾಯಿಯನ್ನು ಕಾಲನು ಗ್ರಾಸಮಾಡಿಬಿಟ್ಟನು. ತಾಯಿಯು ಇಲ್ಲದಿರುವ ಉಭಯ ಬಾಲಕರನ್ನು ಸಂರಕ್ಷಿಸುವುದು ಈ ಸ್ವಾಮಿರಾಯಾಚಾರ್ಯರಿಗೆ ದುಸ್ತರವಾಗಿರಲು, ಅವರ ಭಾವ ಮೈದುನರು ಈ ಬಾಲಕರನ್ನು ತಮ್ಮಲ್ಲಿಗೆ ಕರೆದುಕೊಂಡು ಹೋದರು. ಸೋದರ ಮಾವಂದಿರ ಛಾಯೆಯಲ್ಲಿ ಜೀವಿಸುತ್ತಿದ್ದ ಈ ಬಾಲಕರು ಕಷ್ಟ ತರಂಗದಲ್ಲಿಯೇ ಮುಳುಗಿ ತೇಲುತ್ತಿದ್ದರು. ಇತ್ತ ಒಂಟಿಗರಾಗಿದ್ದ ಸ್ವಾಮಿರಾಯಾಚಾರ್ಯರಿಗೆ ಸ್ವಗೃಹವು ಬೇಸರ ಕೊಡುತ್ತಿತ್ತು. ಈ ಮೂಲಕ ಆಚಾರ್ಯರು ಸ್ವಗ್ರಾಮವನ್ನು ಬಿಟ್ಟು ಅಲ್ಲಲ್ಲಿ ಪುರಾಣ ಶ್ರವಣ ಮಾಡಿಸುತ್ತ ತಮ್ಮ ಮಕ್ಕಳಿದ್ದ 'ಕಂಪ್ಲಿಗೆ' ಬಂದರು. ಕಷ್ಟದಿಂದ ಬಳಲುತ್ತಿರುವ ಉಭಯ ಬಾಲಕರನ್ನು ನೋಡಿ ಖಿನ್ನರಾಗಿ ಅಲ್ಲಿಂದ ತೆರಳುವಾಗ ಆ ಬಾಲಕರನ್ನು ತಮ್ಮ ಸಂಗಡವೇ ಇಟ್ಟುಕೊಂಡು ಸಂಚರಿಸುತ್ತ 'ಆದವಾನಿ'ಗೆ ಬಂದರು. ಭಾಗವತ ಪುರಾಣಾರಂಭಮಾಡಿ ಸರ್ವರಿಂದ ಆದರಣೀಯರಾದರು. ಈ ಸಂದರ್ಭದಲ್ಲಿ ಈ ಗ್ರಾಮವಾಸಿಗಳಾದ ಶ್ರೀಮಂತರಾದ ಪುತ್ರರಹಿತ ವ್ಯಸನಗ್ರಸ್ತ **ಮುತ್ತಿಗಿ ಗುಂಡಾಚಾರ್ಯರೆಂಬ** ಆಗರ್ಭ ಶ್ರೀಮಂತರು ಉಭಯ ಬಾಲಕರಲ್ಲೊಬ್ಬನನ್ನು ತಮಗೆ ಪುತ್ರತ್ವೇನ ಸ್ವೀಕಾರ ಕೊಡಲು ಕೇಳಿದರು. ಅಭಾಗ್ಯನಾದ ನಾನು ಸಂರಕ್ಷಿಸುವ ಭಾರ ಇಟ್ಟುಕೊಳ್ಳುವುದಕ್ಕಿಂತಲೂ, ದೈವ ಯೋಗದಿಂದ ದೊರೆತ ಶ್ರೀಮಂತ ಮನೆಯನ್ನು ಯಾತಕ್ಕೆ ಬಿಡಬೇಕು; ಇದರಿಂದ ಉಭಯರಿಗಾಗಲಿ ಅಥವಾ ಒಬ್ಬನಿಗಾದರೂ ಗ್ರಸ್ತನಾದ ಅದೃಷ್ಟ ರವಿಯು ಮುಕ್ತನಾಗಿ ಪ್ರಕಾಶಕ್ಕೆ ಬರಲಿ ಅಂತ ಮನಸಾ ಆಲೋಚಿಸಿ ಧರ್ಮ ಶಾಸ್ತ್ರ ರೀತ್ಯಾ ಜ್ಯೇಷ್ಠ ಪುತ್ರನನ್ನು ಕೊಡಲು ಬರುವದಿಲ್ಲ, ಎರಡನೆಯವನಾದ ಈ ಶ್ರೀನಿವಾಸನನ್ನು ಸ್ವೀಕಾರ ಮಾಡಬಹುದು ಅಂತ ಹೇಳಿದರು. ಆ ಕ್ಷಣವೇ **ಗುಂಡಾಚಾರ್ಯರು** ಮತ್ತು ಅವರ ಪತ್ನಿ **ಕುಂ॥ ಸೌ॥ ರಾಧಾಬಾಯಿಯು** ವಾದ್ಯ ವೈಭವಗಳ ಸಂಭ್ರಮದಿಂದ ತಮ್ಮ ಮನೆಗೆ ಕರೆದುಕೊಂಡು ಹೋಗಿ ನೂತನ ವಸ್ತ್ರಾಭರಣಗಳಿಂದ ಅಲಂಕಾರ ಮಾಡಿ ತಾವು ಆನಂದ ಹೊಂದಿದ್ದಲ್ಲದೆ ಜನಕರಿಗೂ ತಥಾ ಆಪ್ತೇಷ್ಟ ಮಿತ್ರ ಸ್ವಜನರಿಗೂ ಆನಂದಗೊಳಿಸಿದರು. ಮತ್ತು ನಾಲ್ಕಾರು ದಿನಗಳಲ್ಲಿಯೇ ಶುಭ ಮುಹೂರ್ತ ನೋಡಿ ಪುಣ್ಯಾಹವಾಚನ ಮೊದಲಾದ ವಿಧಿಗಳನ್ನು ಮುಗಿಸಿ ಬ್ರಾಹ್ಮಣಾದಿ ಸರ್ವರಿಗೂ ಗೋದಾನ, ಇತರ ದಾನ ಧರ್ಮ ಯಥಾ ಯೋಗ್ಯ ಮರ್ಯಾದೆ ಮಾಡಿದರು. ಅತಿ ಲುಬ್ಧರಾದ ಈ ಗುಂಡಾಚಾರ್ಯರು ಯಾವಾಗಲೂ ಯಾರಿಗೂ ಯಾವ ದಾನ ಧರ್ಮ ಮಾಡುತ್ತಿರಲಿಲ್ಲ. ಈ ಬಾಲಕನ ಪುಣ್ಯ ಪ್ರಭಾವದಿಂದ

ಧರ್ಮದೇವತೆಯು ಮನೆ ಪ್ರವೇಶ ಮಾಡಿದಳು ಅಂತ ಜನರಂದುಕೊಂಡರು. ಮುಂದೆ ಸ್ವಾಮಿರಾಯಾಚಾರ್ಯರು ಸ್ವಲ್ಪ ದಿನಗಳು ಅಲ್ಲಿದ್ದು ರಘುನಾಥನೆಂಬ ಹುಡುಗನ ಸಹ ಕರ್ನಾಟಕ ಪ್ರಾಂತದ 'ರಾಯಚೂರು' ಅನಂತರ 'ಮಾಸ್ವಿ' ಗ್ರಾಮದಲ್ಲಿ ಪುರಾಣ ಹೇಳುತ್ತಿರುವ ಸಂದರ್ಭದಲ್ಲಿ ತತ್ಸಮೀಪದಲ್ಲಿ **'ಮೊರಟ'**ವೆಂಬ ಗ್ರಾಮದ **ಜೋಯಿಸರಾದ ನರಸಪ್ಪಾಚಾರ್ಯ**ರೆಂಬುವರು ಬಂದು ತಮ್ಮ ಗ್ರಾಮಕ್ಕೆ ಬರಬೇಕೆಂಬುದಾಗಿ ಪ್ರಾರ್ಥನೆ ಮಾಡಿದರು. ಅಲ್ಲಿ ಪುರಾಣ ಮುಗಿಸಿದ ನಂತರ ಆ ಗ್ರಾಮಕ್ಕೆ ಹೋಗಿ ಅಲ್ಲಿ ಪುರಾಣ ಆರಂಭ ಮಾಡಿದರು. ಈ ಆಚಾರ್ಯರ ಮತ್ತು ಮಕ್ಕಳ ಗುಣಶೀಲಗಳಿಗೆ ಲುಬ್ಧರಾದ ಈ ಜೋಯಿಸ ನರಸಿಂಹಾಚಾರ್ಯರು ತಮಗೆ ಇದ್ದ ಒಬ್ಬ ಮಗಳನ್ನು ಮದುವೆ ಮಾಡಿಕೊಟ್ಟು, ಈ ರಘುನಾಥಾಚಾರ್ಯನನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳುವ ಅಪೇಕ್ಷೆವುಳ್ಳವರಾಗಿ ಸ್ವಾಮಿರಾಯಾಚಾರ್ಯರನ್ನು ವಿಚಾರಿಸಲು, ಒಳ್ಳೇದು ಅಂತಾ ಒಪ್ಪಿಕೊಂಡರು. ಆ ಕಾಲವು ಬಾಲ್ಯವಿವಾಹದ ಕಾಲವು. ಕೆಲವು ದಿನಗಳ ನಂತರ ಸುಮುಹೂರ್ತದಲ್ಲಿ ಲಗ್ನಮಾಡಿ ತಮ್ಮ ಇಚ್ಛೆಯ ಪ್ರಕಾರ ಮನೆಯಲ್ಲಿಯೇ ಇಟ್ಟುಕೊಂಡರು. ಆಮೇಲೆ ಸ್ವಾಮಿರಾಯಾಚಾರ್ಯರೊಬ್ಬರೇ ಸಂಚಾರ ಮಾಡುತ್ತ ಸ್ವಗ್ರಾಮಕ್ಕೆ ನಡೆದರು. ಇತ್ತ ಗುಂಡಾಚಾರ್ಯರ ಅಕ್ಕ ನರಸಮ್ಮಗೆ ಭಾಗೀರಥಿಬಾಯಿ ಎಂಬ ಹೆಣ್ಣು ಮಗಳು ಇದ್ದಳು. ಆಕೆಗಾದರೂ ಗಂಡು ಮಕ್ಕಳಾದರೆ, ಆ ಹುಡುಗನನ್ನು ಪುತ್ರತ್ವೇನ ಸ್ವೀಕಾರ ಮಾಡಿಕೊಳ್ಳುವದೆಂದು ಬಾಂಧವ್ಯಲೋಭ ಮೂಲಕ ಇಚ್ಛಾ ಇತ್ತು. ಈ ಭಾಗೀರಥಿಬಾಯಿಗೆ ಜಾಗೃತ ಮಕ್ಕಳಾಗಲಿಲ್ಲ. ಬಹುಕಾಲದ ನಂತರ ಸೂರ್ಯಾರಾಧನೆ ಮಾಡಿ ಗರ್ಭವತಿಯಾದಳು. ಇದರಿಂದ ತಮ್ಮ ಸಂಕಲ್ಪವು ನೆರವೇರುವದೆಂಬ ಭ್ರಾಂತಿಯಿಂದ ಈ ಶ್ರೀನಿವಾಸನಲ್ಲಿ ಉದಾಸೀನತೆ ಉಂಟಾಗಲಾರಂಭಿಸಿತು. ದೈವ ಸಂಕಲ್ಪವೇ ಬೇರೆ ಇರುವದರಿಂದ ಹೆಣ್ಣು ಕೂಸು ಹುಟ್ಟಿತು. ತಮ್ಮ ಪತ್ನಿಯಂತೆ ಭಾಗೀರಥಿಬಾಯಿಯಾದರೂ ವಂಧ್ಯಳೆಂದೆಣಿಸಿ ನಿರಾಶಾದಿಂದ ಅನ್ಯ ಹುಡುಗನನ್ನು ಪುತ್ರತ್ವೇನ ಸ್ವೀಕಾರ ಮಾಡಬಹುದು. ಅಥವಾ ಮುಂದೆಯಾದರೂ ಗಂಡು ಕೂಸು ಹುಟ್ಟೀತೆಂದು ಆಶಾ ಉಂಟಾಯಿತು. ತದನುಗುಣವಾಗಿ ಪುನಃ ಗರ್ಭವತಿಯಾಗಿ ಗಂಡುಕೂಸನ್ನೇ ಹೆತ್ತಳು. ತಮ್ಮ ಮನಸ್ಸಿನಂತಾಯಿತೆಂಬೋ ಸಂತೋಷದಿಂದ ಗುಂಡಾಚಾರ್ಯರು ಅವರನ್ನು 'ಈ ಗಂಡು ಕೂಸನ್ನು ನನಗೆ ಕೊಡಿರಿ' ಅಂತಾ ಕೇಳಿದರು. ಬಹುಕಾಲದಿಂದ ಮಕ್ಕಳಿಲ್ಲದೇ ಈಗೀಗ ಒಂದು ಹೆಣ್ಣು ಒಂದು ಗಂಡು ಹುಟ್ಟಿದ ಮಾತ್ರದಿಂದ ನಮ್ಮ ಮನೆತನಕ್ಕೆ ಇಲ್ಲದೆ ನಿಮಗೆ ಕೊಡುವದಾದೀತೇ, ಬೇಕಾದರೆ ಈ ಹೆಣ್ಣನ್ನು ಸ್ವೀಕೃತಪುತ್ರ ಶ್ರೀನಿವಾಸನಿಗೆ ಕೊಟ್ಟು ಲಗ್ನಮಾಡಿ ನಮ್ಮ ನಿಮ್ಮ ಆಪ್ತತ್ವ ಅಭಿವೃದ್ಧಿ ಮಾಡಿಕೊಳ್ಳುವದು ಯುಕ್ತ ಅಂತಾ ಫೇರಿಕಾರ ವೆಂಕೋಬರಾಯರೆಂದರು. ಈ ಆಲೋಚನೆಯಾದರೂ ಒಂದು ರೀತಿಯಿಂದ ಯೋಗ್ಯವಿದೆ ಎಂದು ಅಂದುಕೊಂಡು ಆಗ ಸುಮ್ಮನಾದರು. ಆಮೇಲೆ ಈ ಶ್ರೀನಿವಾಸನಿಗೆ ೮ ವರ್ಷ ವಯಸ್ಸಾಗಲು ಉಪನಯನ ಮಾಡಿದರು. ತದನಂತರ ಈ ಗುಂಡಾಚಾರ್ಯರ ಸೋದರಳಿಯಂದಿರಾದ ನ್ಯಾಯವೇದಾಂತ ಪಂಡಿತರಾದ ವೇದಾವ್ಯಾಸಾಚಾರ್ಯರಲ್ಲಿ ವಿದ್ಯಾಭ್ಯಾಸವು ಪ್ರಾರಂಭವಾಯಿತು. "ಅರ್ಜುನನು

ತನ್ನ ಕುಶಾಗ್ರಬುದ್ಧಿಯಿಂದ ಅಲ್ಪಾವಧಿಯಲ್ಲಿಯೇ ವಿದ್ಯೆ ಕಲಿತು ತನ್ನ ಗುರುಗಳಿಗೆ ಯಾವ ರೀತಿ ಆನಂದವನ್ನುಂಟು ಮಾಡಿದನೋ" ಆ ರೀತಿಯಾಗಿ ಶ್ರೀನಿವಾಸನು ತನ್ನ ಕುಶಾಗ್ರ ಬುದ್ಧಿಯಿಂದ ಅಲ್ಪಾವಧಿಯಲ್ಲಿಯೇ ಹೇಳಿದ ಪಾಠವನ್ನು ಕಲಿತು ಈ ಗುರುಗಳಿಗೆ ಸಂತೋಷವನ್ನುಂಟು ಮಾಡುತ್ತಿದ್ದನು. 'ಪರಮಾತ್ಮನ ಲೀಲೆಯು ಅಗಾಧವಾದದ್ದು ,' ಮುಂದೆ ವೈರಾಗ್ಯಕ್ಕೆ ಕಾರಣವಾಗಬೇಕಾಗಿ ಇವರಿಗೆ ಅನೇಕ ವಿಧ ಐಹಿಕ ಕಷ್ಟ ಪರಂಪರೆಗಳು ಒದಗುವಲೋಸುಗ ಈ ಗುಂಡಾಚಾರ್ಯ ಹಾಗು ರಾಧಾಬಾಯಿಯರ ಆಶಾಕ್ಕನುಸರಿಸಿ ಫೇರಿಕಾರಿ ಭಾಗೀರಥೀಬಾಯಿಯು ಪುನಃ ಗರ್ಭವತಿಯಾದಳು. ಇದರಿಂದ ಪೂರ್ವದಲ್ಲಿ ಇವರ ವಿಷಯಕ್ಕಿದ್ದ ಉದಾಸೀನತೆಯ ಬೀಜವು ಮೊಳಕೆಯಾಯಿತು. ಮುಂದೆ ಗಂಡುಕೂಸು ಜನಿಸಿತು. ಇದರಿಂದಂತೂ ಉದಾಸೀನ ವೃಕ್ಷಾಭಿವೃದ್ಧಿಯಾಯಿತು. ಈ ಮೂಲಕ ಮನೆಯಲ್ಲಿ ಚಿಟಿಪಿಟಿ ಹೆಚ್ಚಾಯಿತು. ಆದಾಗ್ಯೂ ಲಕ್ಷ್ಯ ಕೊಡದೆ ತಂದೆ ತಾಯಿಗಳು ಪ್ರೀತರಾಗಲೆಂಬ ಉದ್ದೇಶದಿಂದಲೇ ಅವರುಗಳು ಮಾಡುವ ಆಜ್ಞಾವನ್ನು ಶಿರಸಾವಹಿಸಿ ಉಚ್ಚನೀಚಗಳೆನ್ನದೆ ಹೇಳಿದ ಕೆಲಸಗಳೆಲ್ಲವನ್ನು ನೆರವೇರಿಸಿ ವಿದ್ಯಾಭ್ಯಾಸಕ್ಕೆ ತೆರಳುತ್ತಿದ್ದರು. ಇದರಂತೆ ಕೆಲಕಾಲ ಗತಿಸಿತು. ನಂತರ ಫೇರಿಕಾರ್ ವೆಂಕೋಬರಾಯರಿಗೆ ಗಂಡು ಶಿಶು ಜನಿಸಿತು. ಮೊದಲು ನಿಮಗೆ ಒಂದು ಹೆಣ್ಣು ಒಂದು ಗಂಡು ಮಾತ್ರ ಇದ್ದಾಗ ಸ್ವೀಕಾರ ಕೊಡಲು ಕೇಳಿದರೆ ಒಪ್ಪಲಿಲ್ಲ. ಈಗ ಜೇಷ್ಠ ಪುತ್ರನಾದ 'ರಾಘವೇಂದ್ರನು' ಉಪನಯನದ ವಯಸ್ಕನಾಗಿದ್ದಾನೆ. ಎರಡನೆಯ ಪುತ್ರನಾದ ಶ್ರೀನಿವಾಸನು ನಾಲ್ಕೈದು ವರ್ಷದವನಾಗಿದ್ದಾನೆ. ಈ ಮೂರನೆಯ ಶಿಶುವಾದರೂ ಅಭಿವೃದ್ಧಿ ಹೊಂದುತ್ತಲಿದೆ. ಆದ್ದರಿಂದ ಇವರುಗಳಲ್ಲಿ ಯಾವನೊಬ್ಬನನ್ನಾದರೂ ನಮಗೆ ಪುತ್ರತ್ವೇನ ಸ್ವೀಕಾರ ಕೊಡಿರಿ ಅಂತಾ ಆಗ್ರಹದಿಂದ ಕೇಳಿದರು. ಈ ವಿಷಯವು ಭಾಗೀರಥಿಬಾಯಿಗೆ ಸಮ್ಮತವಾದರೂ ವೆಂಕೋಬರಾಯರಿಗೆ ಸಮ್ಮತವಾಗಲಿಲ್ಲ. ಈ ಮೊದಲೇ ಒಬ್ಬ ಪರದೇಶಿ ಹುಡುಗನನ್ನು ಸ್ವೀಕಾರ ಮಾಡಿದ್ದೀರಿ, ಮುಂದೆ ಅವನಿಗೆ ಲಗ್ನ ಮಾಡುವದು ಸಹ ಗೊತ್ತಾಗಿದೆ. ಹೀಗಿದ್ದರೂ ಭ್ರಾಂತರಂತೆ ಪುನಃ ಪುನಃ ಅದೇ ವಿಷಯವನ್ನು ತೆಗೆಯುತ್ತೀರಿ, ಇದು ಸರಿಯಾದುದಲ್ಲ ಅಂತಾ ಝುಬರಿಸಿಕೊಂಡರು. ಆದಾಗ್ಯೂ ಸಮಾಧಾನವಾಗದಿದ್ದರೂ ತತ್ಕಾಲ ಸುಮ್ಮನಾದರು. ಈ ವಿಷಯವು ಗುಂಡಾಚಾರ್ಯರ ಆಪ್ತಮಿತ್ರರಾದ ಲಂಬೂಸುಬ್ಬಣ್ಣಾ, ನಬಾತೆ ನಾರಾಯಣರಾಯರೆಂಬ ಶ್ರೀಮಂತ ಮುಖಂಡರಿಗೆ ತಿಳಿದಕೂಡಲೇ ಆ ಗೃಹಸ್ಥರು ಪರದೇಶಿಯಾದ ಈ ಶ್ರೀನಿವಾಸನನ್ನು ಬಿಟ್ಟು ಅನ್ಯ ಹುಡುಗನನ್ನು ದತ್ತು ತೆಗೆದುಕೊಳ್ಳುವ ಅಪೇಕ್ಷೆ ಮಾಡಬೇಡಿರಿ. ಹಾಕ್ಷಕ ಮಾಡಿದರೆ ಆ ಕಾರ್ಯವು ಹ್ಯಾಂಗೆ ನಡೆಯುವದೋ ಅಂತಾ ಗುಂಡಾಚಾರ್ಯರ ಮನೆಗೆ ಬಂದು ಗರ್ಜನೆ ಮಾಡಿದರು. ಮತ್ತು ವೆಂಕೋಬರಾಯರ ಪುತ್ರಿಯಾದ ಕುಂ|| ಸೌ|| 'ಲಕ್ಷ್ಮೀದೇವಿ'ಯನ್ನು ಕೊಡಿಸಿ ಲಗ್ನ ಮಾಡಿಸಿಬಿಡುವದು ಒಳ್ಳೆಯದು ಅಂತಾ ಅವರ ಯತ್ನ ನಡೆಸಿದರು. ಇತ್ತ ಕರ್ಕಶ ಸ್ವಭಾವದ ಕುಂ|| ಸೌ|| ರಾಧಾಬಾಯಿಯು, ಈ ಶ್ರೀನಿವಾಸನು ತಾನಾಗಿಯೇ ಬೇಸತ್ತು ಮನೆಬಿಟ್ಟು ಹೋಗಲೆಂಬ ದುರ್ಬುದ್ಧಿಯಿಂದ ಕಸ ಮುಸರೆ ಮೊದಲು ಮಾಡಿ ಹಾಸಿಗೆ ಹಾಸುವ ಪರ್ಯಂತ, ಎಲ್ಲಾ ಕೆಲಸಗಳನ್ನು ಮಾಡಿಸುವದಲ್ಲದೆ

ಹೊಟ್ಟೆ ತುಂಬುವಷ್ಟು ಆಹಾರ ಸಹ ಹಾಕದೆ, ಸದಾ ಬಯ್ಯುವದು, ಹೊಡೆಯುವದು ಇತ್ಯಾದಿ ಬಾಧೆಗಳನ್ನು ಕೊಡಲಾರಂಭಿಸಿದಳು. ಈ ಬಾಧೆಗಳನ್ನೆಲ್ಲ ಸಹನ ಮಾಡಿಕೊಳ್ಳುತ್ತ ಪರಮಾತ್ಮನನ್ನು ಸ್ಮರಿಸುತ್ತ ಎಲ್ಲಾ ಕೆಲಸವನ್ನು ನೆರವೇರಿಸುತ್ತಿದ್ದರು. ಒಂದು ದಿನ "ರಣಮಂಡಲ ಪ್ರಾಣದೇವರಲ್ಲಿಗೆ (ಹಿಂದಕ್ಕೆ ಶ್ರೀರಾಮಚಂದ್ರನು ಆದವಾನಿಯ ಈ ಪರ್ವತ ಶಿಖರದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ಸಮಯದಲ್ಲಿ ಕೆಲವು ರಾಕ್ಷಸರು ಹಾವಳಿ ಮಾಡಲು ಬಂದಾಗ ಹನುಮಂತನು ಯುದ್ಧಮಾಡಿ ರಾಕ್ಷಸರುಗಳನ್ನು ಸಂಹರಿಸಿದ ಕಾರಣ ರಣಮಂಡಲವೆಂದು ಹೆಸರು ಬಂದಿದೆ. ಇದನ್ನು ಜ್ಞಾನಿಗಳಾದ ಶ್ರೀಮದ್ ವ್ಯಾಸತೀರ್ಥ ಸ್ವಾಮಿಗಳವರು ತಿಳಿದು ಪ್ರಾಣದೇವರ ಮೂರ್ತಿಯನ್ನು ಸ್ಥಾಪಿಸಿದ್ದಾರೆ.) ಹೋಗಿಬರುವಷ್ಟರಲ್ಲಿ ರಾತ್ರಿ ಒಂದು ಪ್ರಹರವಾಗಿತ್ತು. 'ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದೆ? ಮನೆಯ ಕೆಲಸ ಬೊಗಸೆಗಳನ್ನು ಯಾರು ಮಾಡಬೇಕು? ಇನ್ನು ನಮ್ಮ ಮನೆಯಲ್ಲಿ ಇರತಕ್ಕದ್ದಿಲ್ಲ ನಡೆ ಎಂದು ಹೊರಗೆ ಹಾಕಿ ಬಾಗಿಲು ಮುಚ್ಚಿದರು.' ಉಟ್ಟ ಹರಕು ಬಟ್ಟೆಯ ವಿನಃ ಮತ್ತಾವದೂ ಇಲ್ಲದೆ ರಾತ್ರಿಯಲ್ಲಿ ಚಳಿಯಿಂದ ನಡುಗುತ್ತ ಅಳುತ್ತ ವಾಯುದೇವರನ್ನು ಪ್ರಾರ್ಥಿಸುತ್ತ ಮನೆಯ ಮುಂದೆ ಕುಳಿತುಗೊಂಡು ಆ ರಾತ್ರಿಯನ್ನು ಕಳೆಯುತ್ತಿರಲು **"ಗಾಬರಿಯಾಗಬೇಡ, ನಾವಿದ್ದೇವೆ"** ಅಂತ ಆಕಾಶವಾಣಿಯು ಕೇಳಿಸಿತು. ಇದು ಕೇಳಿದೊಡನೆಯೇ ಕಂಠಬಿಗಿದು ರೋಮಾಂಚಿತರಾಗಿ ದೃಗ್ಬಾಷ್ಪಗಳನ್ನು ಉದುರಿಸುತ್ತ ಕೃಪಾ ಸಾಂದ್ರನಾದ ಪರಮಾತ್ಮನೇ! ಧ್ರುವ ಪ್ರಲ್ಹಾದರನ್ನು ರಕ್ಷಿಸಿದಂತೆ ರಕ್ಷಿಸಬೇಕಾದವನು ನೀನೇ. ನಿನ್ನ ಹೊರತು ಅನ್ಯರಾರಿಲ್ಲವೆಂದು ಘಟ್ಟಿಯಾಗಿ ಮೊರೆಯಿಟ್ಟು ಅಳಲಾರಂಭಿಸಿದರು. ಆಗ ೧೨ ವರ್ಷ ವಯಸ್ಸಿತ್ತು. ರಿಕ್ತರಾದ ಜನಕರು, ಶ್ರೀಮಂತ ಮನೆ ದೊರೆತದ್ದರಿಂದ ಗ್ರಸ್ತನಾದ ಅದೃಷ್ಟ ರವಿಯು ಪ್ರಕಾಶಕ್ಕೆ ಬರಲೆಂದೆಣಿಸಿದ್ದರೆ (ಅದರ) ಬದಲು ದಟ್ಟವಾಗಿ ಮೇಘಾಚ್ಛಾದಿತ ವಾದಂತಾಯಿತು. ಮಾತಾ ಪಿತೃಗಳಿಂದ ಲಾಲನೆ ಮಾಡಿಸಿಕೊಳ್ಳುತ್ತ ಆನಂದದಿಂದ ಕಾಲ ಕಳೆಯುವ ಕೌಮಾರಾವಸ್ಥೆಯು ಕಷ್ಟ ಪರಂಪರೆಗಳನ್ನು ಅನುಭವಿಸುವುದರಲ್ಲಿಯೇ ಪರ್ಯವಸಾನವಾಯಿತು. ಆ ರಾತ್ರಿ ಕಾಲವನ್ನು ಈ ರೀತಿ ಕಳೆದ ಬಳಿಕ ಬೆಳಗು ಮುಂಜಾನೆ ಕಠೋರ ಮನಸ್ಕಳಾದ ರಾಧಾಬಾಯಿಯು ಕಸಬರಿಗಿ ಹಿಡಿದುಕೊಂಡು ಒಂದು ನಾಲ್ಕಾರು ಪೆಟ್ಟುಗಳನ್ನು ಹಾಕಿ 'ತೊಗೋ! ಅಂಗಳ ಕಸಬಳಿದು ದನಗಳ ಕಾಲಾಗಿನ ಕಸಾ ತೆಗಿ' ಅಂತ ಬೋರಿಗಿಯನ್ನು ಮುಂದೆ ಒಗೆದಳು. ಬಾಲ್ಯಾವಸ್ಥೆಯಲ್ಲಿ ಮಾತೃಹೀನರಾಗಿ ಸೋದರ ಮಾವಂದಿರಲ್ಲಿ ಕಷ್ಟಪಟ್ಟು ಇಲ್ಲಿಗೆ ಬಂದರೂ ಪ್ರಾರಬ್ಧ ಕಾಡುವದು ತಪ್ಪಲಿಲ್ಲ. ಆಗ ಈ ಸುಕುಮಾರನಿಗೆ ಆದ ದುಃಖವೆಷ್ಟೆಂಬುದು ಊಹಿಸುವದು ಸಾಧ್ಯವಿಲ್ಲ. ಮರುದಿವಸ ಕುಂ|| ಸೌ|| ಭಾಗೀರಥಿಬಾಯಿಯ ಅನುಮತಿಯಿಂದ ಅವರ ಪುತ್ರನೊಬ್ಬನನ್ನು ದತ್ತು ತೆಗೆದುಕೊಂಡು ಇವರನ್ನು ಹೊರಗೆ ಹಾಕಬೇಕೆಂತ ಯೋಚನೆ ಇತ್ತು. ಕದಾಚಿದ್ ಇದ್ದರೆ ಪರಿಚಾರಕ ವೃತ್ತಿ ಮಾಡುತ್ತಾ ಇರಲಿ ಅಂತ ನಿರ್ಧರಿಸಿ ಅದರ ಯತ್ನ ನಡೆಸಿದಳು. ಪರಮಾತ್ಮನು **"ಕಪಟ ನಾಟಕ ಸೂತ್ರಧಾರಿ"** ಯಾದುದರಿಂದ ಭಾಗೀರಥಿಬಾಯಿಯ ಮೂರನೇ ಹುಡುಗನಿಗೆ ವಿಷಮಜ್ವರ ಪ್ರಾಪ್ತವಾಯಿತು. ಇದರಿಂದ

ಮನೆಯವರಿಗೆಲ್ಲ ಅಸಮಾಧಾನವುಂಟಾಗಿ ಆ ಹುಡುಗನ ಹತ್ತಿರವೇ ಕುಳಿತು ಬಿಡುತ್ತಿದ್ದರು. ಆದ್ದರಿಂದ ನಿತ್ಯದ ಕೆಲಸಗಳಲ್ಲದೆ ಅವರ ಮನೆಯಲ್ಲಿಯೂ ನೀರು, ಬಟ್ಟೆ, ಅಡಿಗೆ ಮಾಡುವ ಪ್ರಸಂಗವು ಶ್ರೀನಿವಾಸನಿಗೆ ಒದಗಿತು. ಇಷ್ಟೇ ಅಲ್ಲಾ, ಆ ಹುಡುಗನ ಮಲಮೂತ್ರಾದಿಗಳನ್ನು ತೆಗೆಯುವ ಕೆಲಸವನ್ನು ಸಹ ನಿಯಮಿಸಿದರು. ಆ ಹುಡುಗನಿಗೆ ದಿನೇದಿನೇ ಜಾಡ್ಯವು ಹೆಚ್ಚುತ್ತ ನಡೆಯಿತು. ವೈದ್ಯರ ಮೇಲೆ ವೈದ್ಯರು, ಯಂತ್ರಮಂತ್ರದವರ ಸಾಲುಗಳ ಮೇಲೆ ಸಾಲುಗಳು, ಅನೇಕ ದೇವರುಗಳ ಪ್ರಾರ್ಥನೆ ಮಾಡುವಗು ತಥಾ ಮುಡುಪುಗಳನ್ನು ಕಟ್ಟಿಡುವುದು, ಇತ್ಯಾದಿ ಗಲಾಟೆ ನಡೆಯಿತು. ಹೀಗಿರುವಾಗ ಶ್ರೀನಿವಾಸನು ಈ ರೋಗಗ್ರಸ್ತನಾದ ಹುಡುಗನಿಗೆ ಜಾಗ್ರತ ಗುಣವಾಗಲೆಂದು ಕೋಮಲಾಂತಃಕರಣದಿಂದ ದೇವರನ್ನು ಪ್ರಾರ್ಥಿಸಿದ ಕೂಡಲೇ, "ಒಂದು ನವಿಲು ಬಂದು ತನ್ನ ಚುಂಚು ಪುಟದಿಂದ ಹುಳವನ್ನು ಕುಕ್ಕಿ ಕೊಂದಂತೆ ಜಾಗೃತ ಸ್ವಪ್ನವಾಗಲು ಲೌಕಿಕ ಜ್ಞಾನವರಿಯದ ಈ ಶ್ರೀನಿವಾಸನು, ನನಗೆ ಈ ರೀತಿ ಸ್ವಪ್ನವಾಯಿತು, ಆದ್ದರಿಂದ ಆ ಹುಡುಗನು ಬದುಕುವದಿಲ್ಲೆಂದು ಸರ್ವರಲ್ಲಿ ತಿಳಿಸಿದನು." ಈ ಮಾತು ಕೇಳಿದೊಡನೆಯೇ ಕಠಿಣ ಚಿತ್ತರಾದ ರಾಧಾಬಾಯಿಯು ಸಿಟ್ಟಿಗೆದ್ದು ಮನಸಾರೆ ಇವರನ್ನು ಬಡಿದಳು. ಮುಂದೆ ಅಲ್ಪಾವಧಿಯಲ್ಲಿ ಆ ಹುಡುಗನು ಗತಪ್ರಾಣನಾದನು. ಆಮೇಲೆ ರಾಧಾಬಾಯಿಯು ಈ ಶ್ರೀನಿವಾಸನನ್ನು ದ್ವೇಷಿಯನ್ನು ನೋಡಿದಂತೆ ನೋಡಹತ್ತಿದಳು. ಇವರಿಗೆ ವಿದ್ಯಾಸಹ ಬರಬಾರದೆಂಬ ದುಷ್ಟ ಹೇತುವಿನಿಂದ ಸ್ವಲ್ಪವಾದರೂ ಅವಕಾಶ ಕೊಡದೆ ಭತ್ತ, ಅಕ್ಕಿ ದವಸ ಧಾನ್ಯಗಳನ್ನು ಕುಟ್ಟಲಿಕ್ಕೂ ಮತ್ತು ಬೀಸಲಿಕ್ಕೂ ಹಚ್ಚುತ್ತಿದ್ದರು. ಆದಾಗ್ಯೂ ಈ ಹೆಚ್ಚಿನ ಕೆಲಸಗಳನ್ನು ಸಹ ಅತೀ ಜಾಗ್ರತೆಯಿಂದ ಮುಗಿಸಿ ವಿದ್ಯಾಭ್ಯಾಸಕ್ಕೆ ತೆರಳುತ್ತಿದ್ದನು. ವಿದ್ಯಾಭ್ಯಾಸವು ಭರದಿಂದ ಸಾಗಹತ್ತಿತು. ಈ ಸಂದರ್ಭದಲ್ಲಿ ಜನಕರಾದ ಸ್ವಾಮಿರಾಯಾಚಾರ್ಯರು ಹೂವಿನ ಹಡಗಲಿಯಲ್ಲಿ ಸ್ವರ್ಗಸ್ಥರಾದರೆಂದು ಸುದ್ದಿ ಬಂತು. ಅಲ್ಲಿಗೆ ಹೋಗಬೇಕೆಂದು ಯತ್ನಿಸಿದರು. ಕಲ್ಲೆದೆಯವರಾದ ರಾಧಾಬಾಯಿಯು, ಗುಂಡಾಚಾರ್ಯರು ಹೋಗಗೊಡಲಿಲ್ಲ. ಈ ವ್ಯಸನವನ್ನು ಸಹಿಸಿಕೊಂಡು ವಿದ್ಯಾರ್ಜನೆ ಮಾಡುತ್ತಿದ್ದರು. ಗುಂಡಾಚಾರ್ಯರ ಮನೆಯಲ್ಲಿ ಇವರಿಗಾಗುವ ತೊಂದರೆ ತಿಳಿದ ವಿದ್ಯಾಗುರುಗಳಾದ ವೇದವ್ಯಾಸಾಚಾರ್ಯರು ಇವರ ಗುಣಕ್ಕೆ ಮೆಚ್ಚಿ ಪ್ರೀತಿಯಿಂದ ಏನಾದರೂ ತಿನ್ನಲಿಕ್ಕೆ ಕೊಡುತ್ತಿದ್ದರು.

೩. ಉಪದೇಶಕರು ಆಶ್ಚರ್ಯಗೊಂಡರು.

ಒಂದು ದಿನ ಇವರು ವಿದ್ಯಾಭ್ಯಾಸ ಮಾಡುತ್ತ ಕುಳಿತಾಗ ಓರ್ವ ಸಾಮುದ್ರಿಕ ಪಂಡಿತನು ಅಕಸ್ಮಾತ್ ಬಂದು, ಅಲ್ಲಿದ್ದವರ ಹಸ್ತವನ್ನು ನೋಡುತ್ತಾ ನೋಡುತ್ತಾ ಇವರ (ಈ ಚರಿತ್ರ ನಾಯಕರ) ಹಸ್ತವನ್ನು ಸಹ ನೋಡಿ ವಿಸ್ಮಯಗೊಂಡು "ಈ ಹುಡುಗನ ಅದೃಷ್ಟವೇ ವಿಲಕ್ಷಣವಾದದ್ದು. ಕೊನೆಯವರೆಗೂ ಕಷ್ಟಪರಂಪರೆಗಳನ್ನು ಅನುಭವಿಸುವನು. ಯಾವ ಆಪ್ತೇಷ್ಟ, ಧನಧಾನ್ಯಗಳಿಂದ, ಪೋಷಿತನಾಗದೆ **ಕೇವಲ ವಾಯುದೇವರ ಅನುಗ್ರಹದಿಂದ ಪೋಷಿತನಾಗುವನು. "ಕಿಂ ಬಹುನಾ" ಪ್ರಾಣದೇವರೇ ಮೂರ್ತಿಮಂತರಾಗಿದ್ದು**

ನುಡಿದದ್ದು ಹುಸಿಹೋಗಗೊಡದೆ ನಡೆಸುವರು. ಅಸಾಧ್ಯ ಕಾರ್ಯಗಳಾದರೂ ಸಾಧ್ಯ ಮಾಡಿಕೊಡುವರು. ಮೇಘಾವಳಿಗಳನ್ನು ಗಾಳಿ ಓಡಿಸುವಂತೆ, ವಿಘ್ನಗಳನ್ನು ಪರಿಹರಿಸುವರು. ಕದಾಚಿತ್ ದುಃಸ್ವಭಾವದಿಂದ ಯಾರಾದರೂ ಯಾವ ಬಗೆಯಿಂದಲಾದರೂ ಇವರು ಮಾಡುವ ಮಹತ್ಕಾರ್ಯಗಳಿಗೆ ವಿಘ್ನ ಮಾಡಬೇಕೆಂದು ಬಹುಪ್ರಯಾಸದಿಂದ ಪ್ರಯತ್ನ ಮಾಡಿದರೂ "ಒಂದು ಸಿಂಹವು ಗಜಗಳ ಸಮೂಹವನ್ನು ಓಡಿಸುವಂತೆ ವಿಘ್ನಕಾರಿಗಳನ್ನು ಪಲಾಯನ ಮಾಡಿಸಿ ಆ ಸೇತುಹಿಮಾಚಲ ಪರ್ಯಂತ ಇವರ ಕೀರ್ತಿ ಹಬ್ಬಿಸುವರು. ಹೆಚ್ಚಿಗೆ ಹೇಳುವದೇನು? ವೈದಿಕ, ಲೌಕಿಕ, ಪಂಡಿತ, ಪಾಮರರುಗಳಿಂದ ಮಹನೀಯರೆಂದೆನಿಸುವರು. ಹಯ, ಪಲ್ಲಕ್ಕಿ ಮೊದಲಾದ ವಾಹನಗಳಿಂದ ಮೆರೆಯುವರು. ಇದಕ್ಕೂ ಹೆಚ್ಚಿಗೆ ವಿವರಿಸಲು ಸಾಧ್ಯವಿಲ್ಲ" ಅಂತಾ ಹೇಳಿದರು. ಆಗ ಗುರುಗಳಾದ ವೇದವ್ಯಾಸಾಚಾರ್ಯರು ಆನಂದಭಾಷ್ಪಗಳುದರಿಸುತ್ತ ಗದ್ಗದ ಸ್ವರದಿಂದ ಈ ವೈಭವವು ನಮ್ಮಿಂದ ನೋಡಿ ಆನಂದಪಡುವದಾದಿತೇ? ಎಂದು ಕೇಳಲು ಆ ವಿಷಯ 'ಈಗ ನಾನು ಹೇಳಲಾರೆ' ಅಂತ ಪಂಡಿತನು ಉತ್ತರಿಸಿದನು. ನಂತರ ಆ ಪಂಡಿತನಿಗೆ ಸಂತೋಷದಿಂದ ವೇದವ್ಯಾಸಾಚಾರ್ಯರು ಯೋಗ್ಯ ಮರ್ಯಾದೆ ಮಾಡಿದರು. ಈ ವಿಷಯವು ಗುಂಡಾಚಾರ್ಯರಿಗೆ ತಿಳಿಯುವದರಿಂದ ತದಾರಭ್ಯ ಈ ಶ್ರೀನಿವಾಸನಲ್ಲಿ ಕಿಂಚಿತ್ ಪ್ರೀತಿವುಂಟಾಯಿತು. ಆ ಸಾಮುದ್ರಿಕ ಪಂಡಿತರ ಮಾತುಗಳು ಜ್ಞಾಪಕಕ್ಕೆ ಬಂದಾಗಲೆಲ್ಲಾ ವೇದವ್ಯಾಸಾಚಾರ್ಯರಿಗೆ ಆನಂದವು ಉಕ್ಕುತ್ತಿತ್ತು. ಈ ಮಾತುಗಳು ಯಥಾರ್ಥವಾಗುವ ನಿದರ್ಶನ ರೂಪವಾಗಿ ನಾಲ್ಕಾರು ವರ್ಷಗಳಲ್ಲಿಯೇ ಮಣಿಮಂಜರಿ–ಮಧ್ವವಿಜಯ–ರುಕ್ಮಿಣೀಶವಿಜಯ –ಮಾಘ–ನೈಷಧೇತ್ಯಾದಿ ಕಾವ್ಯಗಳು, ತರ್ಕ ಸಂಗ್ರಹ ಇತ್ಯಾದಿ ಕೆಲವು ನ್ಯಾಯ ಶಾಸ್ತ್ರಗ್ರಂಥಗಳು, ಮಧ್ವ ಸಿದ್ಧಾಂತಗಳಲ್ಲಿಯ ಪ್ರಕರಣಗಳು, ಉಪನಿಷತ್ತುಗಳು ಹಾಗು ಕೆಲವು ಭಾಗ ತತ್ವಪ್ರಕಾಶಿಕಾ ಮುಗಿದವು. ಇಷ್ಟರಲ್ಲಿ ಈ ವಿದ್ಯಾಗುರುಗಳ ಅವಸಾನಕಾಲ ಸಮೀಪಿಸಿತು. ಆಗ ಇನ್ನುಮೇಲೆ **'ನೀನು ವಿದ್ಯಾರ್ಜನೆ ಸಲುವಾಗಿ ಅನ್ಯತ್ರ ಹೋಗಬೇಡ'** ನಮ್ಮ ಮರಣ ಮೂಲಕ ನಿಮ್ಮ ತಂದೆಯವರಿಗೆ (ಗುಂಡಾಚಾರ್ಯರಿಗೆ) ವ್ಯಸನವುಂಟಾಗುವದು. ಇದರಲ್ಲಿ ನೀನು ಮನೆಬಿಟ್ಟು ಹೋದರೆ ಅವರಿಗೆ ಸಮಾಧಾನವಾಗುವದಿಲ್ಲ. ಆದ್ದರಿಂದ ಉಳಿದ ಗ್ರಂಥ ತತ್ವಪ್ರಕಾಶಿಕಾ ನಿಮ್ಮ ತಂದೆಗಳಲ್ಲಿ ಓದಿ ಮುಗಿಸಿಬಿಡು ಅಂತಾಹೇಳಿ ಪರಂಧಾಮಕ್ಕೆ ನಡೆದರು. ಗುರುಗಳು ಹೇಳಿದಂತೆ ತಂದೆಯವರಲ್ಲಿ ಉಳಿದ ತತ್ವಪ್ರಕಾಶಿಕಾ ಗ್ರಂಥವನ್ನು ಅವಕಾಶವಾದಾಗ ಓದಿ ಮುಗಿಸಿದರು. ವೇದವ್ಯಾಸಾಚಾರ್ಯರ ಮರಣದಿಂದ ವ್ಯಸನಾಕ್ರಾಂತರಾದ ಗುಂಡಾಚಾರ್ಯರು ಕ್ಷೀಣವಾಗ ಹತ್ತಿದರು. ಇದನ್ನು ನೋಡಿ ಲಂಬೂ ಸುಬ್ಬಣ್ಣನವರು ಇವರಿಗೆ (ಈ ಚರಿತ್ರ ನಾಯಕರು) ಜಾಗ್ರತ ಲಗ್ನ ಮಾಡಿಸಿ ಬಿಡುವದು (ಯೋಗ್ಯವೆಂದು) ಒಳ್ಳೆಯದೆಂದು ಯೋಚಿಸಿ ಪೂರ್ವದಲ್ಲಿ ಗೊತ್ತು ಆದಂತೆ ಫೇರಿಕಾರ್ ವೆಂಕೋಬರಾಯರ ಮಗಳಾದ ಕುಂ|| ಸೌ|| ಲಕ್ಷ್ಮೀಬಾಯಿಯನ್ನು ಕೊಡಿಸಿ ಲಗ್ನ ಮಾಡಿಬಿಟ್ಟರು. ಒಂದೇ ಒಂದು ವರ್ಷದಲ್ಲಿ ಗುಂಡಾಚಾರ್ಯರು ಸಹ ಪರಲೋಕಕ್ಕೆ ಪ್ರಯಾಣ ಮಾಡಿದರು.

ಇನ್ನೂ ವಿದ್ಯಾರ್ಜನೆ ಮಾಡುವ ಇಚ್ಛಾದಿಂದ ಹುಬ್ಬಳ್ಳಿಯಲ್ಲಿರುವ ವಾಯಿ ಅಣ್ಣಾಚಾರ್ಯರೆಂಬ ಪಂಡಿತರಲ್ಲಿ ಓದಲಿಕ್ಕೆಂದು ಆರಂಭ ಮಾಡಿದರು. ಮೂರು ನಾಲ್ಕು ದಿನಗಳಲ್ಲಿ ಅವರ ಶೀಲ ಸ್ವಭಾವಗಳನ್ನು ನೋಡಿ ಅವರನ್ನು ಕುರಿತು 'ತಾವು ಸರ್ವದಾ ಬಡ್ಡಿ ಬಾಕಿಗಳ ವ್ಯವಹಾರದಲ್ಲಿಯೇ ಮಗ್ನರಾಗಿ ನಶ್ವರವಾದ ದ್ರವ್ಯಾದಿ ಪದಾರ್ಥಗಳೇ ಸಂರಕ್ಷಿಸುವವೆಂದು ದಾರ್ಢ್ಯವುಳ್ಳವರಾಗಿ' ಪರಮಾತ್ಮನಿಂದಲೇ ಸಂರಕ್ಷಿತರಾಗುವ ವಿಷಯದಲ್ಲಿ ಅನುಮಾನ ಹೊಂದಿ ವಿಷಯಾಸಕ್ತರಾದ ನೀವು ನನ್ನ ಹೃತ್ತಾಪವನ್ನು ಹ್ಯಾಂಗ ಕಳೀತೀರಿ!' ಅಂತ ಕೇಳಲಾಗಿ ಅವರು ನಿನ್ನ ಹೃತ್ತಾಪವೆಂಥದೆಂದು ಪ್ರಶ್ನಿಸಿದರು. ವಿಷಯಗಳಲ್ಲಿ ಹೇಯತಾವುಂಟಾಗಿ 'ಪರಮಾತ್ಮನ ಅತ್ಯರ್ಥ ಪ್ರಸಾದ ಹ್ಯಾಂಗಾದೀತೆಂಬುದೇ ನನ್ನ ಹೃತ್ತಾಪವು' ಅಂತ ಉತ್ತರ ಕೊಟ್ಟರು. ಈ ವಿಷಯ ನಮ್ಮಿಂದ ಸಾಧ್ಯವಿಲ್ಲ, ನಿನಗೆ ಇಷ್ಟವಿದ್ದಲ್ಲಿ (ಅನ್ಯತ್ರ) ಹೋಗಬಹುದು. ತಮ್ಮಾ! ನೀನು ಚಿಕ್ಕವನು. ನೀನು ಇಚ್ಛಿಸುವ ಅತ್ಯರ್ಥ ಪ್ರಸಾದವಾಗಬೇಕಾದರೆ ಎಷ್ಟೋ ಜನ್ಮಗಳಲ್ಲಿ ಶಾಸ್ತ್ರ ಶ್ರವಣ, ಮನನಾದಿಗಳನ್ನು ಮಾಡುತ್ತ ಹೋಗಬೇಕಾಗುವದು. ಆದರೆ, ಇದೇ ಜನ್ಮದಲ್ಲಿ ಆಗಬೇಕೆಂಬೋ ನಿನ್ನ ಮಹತ್ವಾಕಾಂಕ್ಷೆಯು ಸಿದ್ಧಿಸಲಾರದು ಮತ್ತು ಆ ವ್ಯವಹಾರವು ಅಸುಲಭವೆಂದರು. "ಯಾವ ಜಡಜೀವರು ಅಸ್ವತಂತ್ರರು ಮತ್ತು ಪರಮಾತ್ಮಗೆ ಪ್ರತಿಬಿಂಬರೆಂದು ತಿಳಿದು ಜೀವರುಗಳಲ್ಲಿ ನಿರ್ಮಾತ್ಸರ್ಯ ಹೊಂದಿ ಶಮದಮಾದಿ ಗುಣಸಂಪನ್ನರಾಗಿ, ಸರ್ವ ಕರ್ತೃತ್ವ, ಭೋಕ್ತೃತ್ವ ಪರಮಾತ್ಮನಲ್ಲಿ ಸಮನ್ವಯ ಮಾಡಿ, ಸರ್ವಸ್ಮಾತ್ಪ್ರಿಯತ್ವೇನ ಯದೃಚ್ಛಾ ಲಾಭ ಸಂತುಷ್ಟರಾಗಿ ಇರುವದು ಬಿಟ್ಟು ಪಾಮರರಂತೆ ಪಂಡಿತರು ಸಹ ಸಂಸಾರದಲ್ಲಿ ಮಗ್ನರಾದರೆ, ಕಸ್ತೂರಿಯನ್ನು ಪಲ್ಯೆ ಕಾಯಿಗಾಗಿ ಉಪಯೋಗಿಸಿಕೊಂಡಂತೆ ಸರ್ವಜ್ಞರ ಶಾಸ್ತ್ರೋಪಯೋಗ ಮಾಡಿಕೊಂಡಂತಾಗುವದು. ಅಜ್ಞಾನಾವಸ್ಥೆಯಲ್ಲಿ ಬಳಲುತ್ತಿರುವ ಸಜ್ಜನರು ಉದ್ಧೃತರಾಗಲೆಂದು ದಯಾಂತಃಕರಣವುಳ್ಳವರಾಗಿ ಸರ್ವಜ್ಞರಾದ ಶ್ರೀಮದಾಚಾರ್ಯರು ಈ ಮಹಾಶಾಸ್ತ್ರವನ್ನು ರಚಿಸಿದರು. ಆದರೆ, ರೋಧನಾದಿ ಚಿಕಿತ್ಸೆಗಳ ಬಿಟ್ಟು ರಸಾಯನ ಸೇವನವು ಹೇಗೆ ವ್ಯರ್ಥವೋ ತದ್ವತ್ ಶಮದಮಾದಿರಹಿತರಾಗಿ ಈ ಶಾಸ್ತ್ರವನ್ನು ಅಧ್ಯಯನ ಮಾಡಿದರೆ ಅಧ್ಯೇತೃಗಳಿಗೆ ಅಂತಃಕರಣ ಶುದ್ಧಿಯು ಈಷಣತ್ರಯಗಳಲ್ಲಿ ಮಮತಾತ್ಯಾಗ ಬುದ್ಧಿಯು, ಪರಮಾತ್ಮನಿಗೆ ಪ್ರತಿಮಾ ಪ್ರಾಯರಾದ (ಪ್ರತಿಬಿಂಬರಾದ) ಜೀವರಲ್ಲಿ ನಿರ್ಮಾತ್ಸರ್ಯವು, ತನ್ನ ಹಾಗೂ ಸರ್ವ ಜಗತ್ಪಾರತಂತ್ರ್ಯ ಸ್ವರೂಪ ಜ್ಞಾನವು ಮತ್ತು ಶ್ರೀಶನಲ್ಲಿ 'ಸರ್ವಸ್ಮಾತ್ ಪ್ರಿಯತ್ವವು' ಉಂಟಾಗದೆ ತ್ರಿದೋಷಯುಕ್ತ ರೋಗಿಯು ಕೇವಲ ರಸಾಯನ ಸೇವನೆ ಮಾಡಿದರೆ ಇತರ ಉಪದ್ರವಗಳಿಗೆ ಕಾರಣವಾಗುವಂತೆ ರಾಗದ್ವೇಷಾದಿಗಳಿಗೆ ಕಾರಣೀಭೂತವಾಗುವದೆಂದು" ಅಂದದ್ದಕ್ಕೆ ಆ ಪಂಡಿತರಿಗೆ ಸಿಟ್ಟುಬಂದು, "ಓದುವದಕ್ಕೆ ಇಚ್ಛೆ ಇದ್ದರೆ ಹೆಚ್ಚು ವಿಚಾರ ಮಾಡದೆ ಪುಸ್ತಕ ಮುಂದಿಟ್ಟುಕೊಂಡು ಕೂಡು, ಅದರಲ್ಲಿದ್ದುದು ತಿಳಿದಷ್ಟು ಹೇಳುವೆವು, ಸುಮ್ಮನೆ ಕೇಳು. ಇಲ್ಲವಾದರೆ ನಿನ್ನ ಮನಸ್ಸಿಗೆ ಬಂದಲ್ಲಿ ಪ್ರಯಾಣ ಮಾಡು" ಅಂತ ಸ್ಪಷ್ಟವಾಗಿ ನುಡಿದರು.

೪. ತಪ್ತಮುದ್ರೆ ಪ್ರಾಜ್ಞಮತ ತಿಳಿಸಿತು.

ಮರುದಿವಸ ಅಲ್ಲಿಂದ ಪ್ರಯಾಣ ಮಾಡಿ ಸೋದೆ, ಗೋಕರ್ಣ, ಉಡಿಪಿ, ಸುಬ್ರಹ್ಮಣ್ಯಾದಿ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಮುಂದೆ ಮಳೆಯಾಳ ಪ್ರದೇಶದಲ್ಲಿ ಸಂಚರಿಸುತ್ತ ಅನಂತಶಯನ, ನವಪಾಷಾಣ, ರಾಮೇಶ್ವರ, ಧನುಷ್ಕೋಟಿ, ಕನ್ಯಾಕುಮಾರಿ ಕ್ಷೇತ್ರಗಳನ್ನು ನೋಡಿಕೊಂಡು, ಮಧುರಾ, ಶ್ರೀರಂಗ ಕ್ಷೇತ್ರದ ಮಾರ್ಗವಾಗಿ ಕಾವೇರಿ ತೀರದ ಈರೋಡ, ಭವಾನಿಗೆ ಬರಲು ಅಲ್ಲಿ ಒಂದು ಮಠದಲ್ಲಿ ವೃದ್ಧರಾದ 'ಸುಧಿನಿಧಿತೀರ್ಥರು' ಎಂಬ ಒಬ್ಬ ಸನ್ಯಾಸಿಗಳಿದ್ದರು. ಅವರ ದರ್ಶನ ಮಾಡಿಕೊಂಡ ಕೂಡಲೆ, "ಯಾವ ಸ್ಥಳ? ಎತ್ತಕಡೆಯಿಂದ ಬಂದೆ? ಎಲ್ಲಿಗೆ ಹೋಗುತ್ತೀ?" ಎಂದು ಪ್ರಶ್ನೆ ಮಾಡಿದರು. ಇವರು ತಾವು ಬಂದ ವೃತ್ತಾಂತವನ್ನೆಲ್ಲ ತಿಳಿಸಲು, "ನೀನು ಮಳಯಾಳ ದೇಶದಲ್ಲಿ ಸಂಚರಿಸಿದ ಕಾರಣ ಕ್ಷೌರ, ಪಂಚಗವ್ಯ, ತಪ್ತಮುದ್ರಾ ತೆಗೆದುಕೊಂಡರೆ (ಪ್ರಾಯಃಶ್ಚಿತ್ತ ಮಾಡಿಕೊಂಡರೆ) ಮಠದಲ್ಲಿ ಬರಬೇಕು" ಎಂದು ಆಜ್ಞೆ ಮಾಡಿದರು. ಸ್ವಾಮಿ ನಾನು ಮಳಯಾಳದಲ್ಲಿ ಸಂಚರಿಸಿದರೂ ತ್ಯುಮಿತ್ತಕ್ಕೊಳಗಾಗಿಲ್ಲ. ಆದರೆ ಪ್ರದೇಶ ಸ್ಪರ್ಶಮಾತ್ರ. ಪ್ರಾಯಃಶ್ಚಿತ್ತವಿದ್ದರೆ ಒಡಂಬಡುತ್ತೇನೆನಲು, ಅದೇನೇ ಇರಲಿ ಪ್ರಾಯಃಶ್ಚಿತ್ತ ಮಾಡಿಕೊಳ್ಳುವದೇ ಪ್ರಶಸ್ತವೆಂದು ಆಜ್ಞಾಪಿಸಿದರು. ಸ್ವಾಮಿ! "ನಾನು ಉತ್ತರಾಧಿಮಠದ ಶಿಷ್ಯನೆಂದ ಮೇಲೆ ತಮ್ಮಲ್ಲಿ ತಪ್ತಮುದ್ರಾ ಸ್ವೀಕರಿಸುವುದು ಹೇಗೆ? ಮತ್ತು ತಮ್ಮ ಮಠಕ್ಕೆ ತಪ್ತಮುದ್ರಾ ಕೊಡುವ ಅಧಿಕಾರವುಂಟೆ?" ಅಂತಾ ಕೇಳಲು ಮಗುವೇ! ನೀನಾಡುವ ಮಾತು ಶಾಸ್ತ್ರವಿಹಿತವಲ್ಲ. ಏಕೆಂದರೆ ಶಾಸ್ತ್ರದಲ್ಲಿ ತಂದೆ, ಅಣ್ಣ, ಕಕ್ಕ, ಸೋದರಮಾವ, ಪುರೋಹಿತ, ಮಾವ, ಪತಿ (ಸ್ತ್ರೀಯರಿಗೆ) ಇತ್ಯಾದಿ ತನ್ನಕ್ಕಿಂತ ಜ್ಯೇಷ್ಠರೆನಿಸಿದವರಲ್ಲಿ ತನಗೆ ಮಾನ್ಯರಾದವರಲ್ಲಿ ಉಪಾಕರ್ಮ, ಪಿತೃಯಜ್ಞ, ಮಾತೃಯಜ್ಞ, ಚಾತುರ್ಮಾಸ್ಯ ಆದ್ಯಂತ ಏಕಾದಶಿಗಳಲ್ಲಿ ತಥಾ ಪ್ರಾಯಃಶ್ಚಿತ್ತ ಧರ್ಮಗಳನ್ನಾಚರಿಸುವ ಕಾಲವಿಶೇಷಗಳಲ್ಲಿ ಪಂಚಗವ್ಯಾದಿಗಳಂತೆ ತಪ್ತಮುದ್ರಾ ಸ್ವೀಕರಿಸಬೇಕೆಂದು ಹೇಳಲ್ಪಟ್ಟಿದೆಯೆಂದು ಹೇಳಿದರು. ಹೀಗಿದ್ದರೆ ಒಂದು ಮಠದ ಶಿಷ್ಯರು ಮತ್ತೊಂದು ಮಠದಯತಿಗಳಿಂದ ತಪ್ತಮುದ್ರಾವನ್ನು ಸ್ವೀಕರಿಸಬಾರದೆಂಬ ಸಂಪ್ರದಾಯವು ಯಾವ ಕಾಲದಿಂದ ಏತಕ್ಕಾಗಿ ಬಂದಿದೆ? ಎಂದು ಪ್ರಶ್ನಿಸಲು, ಆ ಸಂಪ್ರದಾಯ, ಶ್ರೀ ಮದಾನಂದತೀರ್ಥರಿಂದ ಬಂದದ್ದಲ್ಲ, ಇತ್ತೀಚೆಗೆ ನಾವು (ಮಠಾಧಿಪತಿಗಳು) ದ್ರವ್ಯ, ಪ್ರತಿಷ್ಠಾದಿಗಳ ಲೋಭದಿಂದ ಈ ರೀತಿ ಕಟ್ಟಳೆ ಮಾಡಿಕೊಂಡಿದ್ದೇವೆ. ಆದರೆ, ನಮ್ಮ ನಮ್ಮಲ್ಲಿ ವೈಷಮ್ಯ ಹೆಚ್ಚಾದಾಗ ಈ ಕಟ್ಟಳೆ ಅತಿಕ್ರಮಿಸಿ ನಡೆದಿದ್ದೇವೆ. ಇದಕ್ಕೆ ಉದಾಹರಣೆಗಳು- "ಶ್ರೀಮದಾಚಾರ್ಯರ ಸಂಪ್ರದಾಯಾವಲಂಬಿಗಳಾದ ಎಲ್ಲ ಮಠಗಳಿಕ್ಕಿಂತಲೂ ಉತ್ತರಾಧಿಮಠ, ಸುಮತೀಂದ್ರರ ಮಠ (ರಾಯರಮಠ) ವ್ಯಾಸರಾಯರ ಮಠಗಳಲ್ಲಿ ಈರ್ಷ್ಯಾಸೂಯೆಗಳನ್ನು ಹೆಚ್ಚು ಕಾಣಬಹುದು. ಶ್ರೀಪೂರ್ಣಪ್ರಜ್ಞ ಮತಾವಲಂಬಿಯಾದವರು ಹಾಗೂ ಆಗುವವರು ತನಗೆ ಮಾನ್ಯರೆನಿಸಿದ ಯತಿ, ವನಸ್ಥ, ಗೃಹಸ್ಥ, ಬ್ರಹ್ಮಚಾರಿಗಳಿಂದ ತಪ್ತಮುದ್ರಾ [illegible]ಕರಿಸಬಹುದೆಂದು ಶೃತಿ, ಸ್ಮೃತಿ, ಪುರಾಣ

ಆಧಾರವಿದೆ ಎಂದು ಹೇಳಿದರು. ಹೀಗಿದ್ದರೆ, ಶಾಸ್ತ್ರಜ್ಞಾನವಿದ್ದವರೂ ಸಹ ಇಲ್ಲದವರಂತೆ ಏಕೆ ಅಂಧಾನುಕರಣ ಮಾಡುತ್ತಲಿದ್ದಾರೆ? ಅಂತಾ ಕೇಳಲು, ಅದಕ್ಕೆ ನಮ್ಮ ಮುತ್ಸದ್ದಿತನವೇ (Policy) ಕಾರಣ. ಶಾಸ್ತ್ರಜ್ಞಾನವಿದ್ದವರು ಇದರ ಮರ್ಮವನ್ನು ಬಯಲಿಗಿಡಬಾರದೆಂಬುದಕ್ಕಾಗಿ ಅವರನ್ನು ದ್ರವ್ಯದಿಂದಲೂ, ಮೊದಲು ತೀರ್ಥ, ಮಂಗಳಾರತಿ, ಅಲಂಕಾರ, ಮೇಲ್ಪಂಕ್ತಿ ಮೊದಲಾದ ಮರ್ಯಾದೆಗಳಿಂದ ಸಂತುಷ್ಟರನ್ನಾಗಿ ಮಾಡಿ ನಾವು ಅಂದಂತೆ ನಟಿಸಲು ಹಚ್ಚುವೆವು. ಕದಾಪಿ ಯಾರಾದರೂ ಈ ಮರ್ಮವನ್ನು ತಿಳಿದು ತಥ್ಯಾಂಶವನ್ನು ಪ್ರತಿಪಾದಿಸತೊಡಗಿದರೆ ಅವರನ್ನು ಸಮಾಜದಲ್ಲಿ ಅನೇಕ ವಿಧ ತೊಂದರೆಗೊಳಿಸಿ ನಮ್ಮ ಅಧೀನದಲ್ಲಿ ಬರಮಾಡಿಕೊಳ್ಳುವ ಹ್ಯಾಸ ಪಡುವೆವು ಎಂದು ಹೇಳಿದರು. "ಸ್ವಾಮಿ! ಹಾಗಾದರೆ, **ಶಾಸ್ತ್ರಾತ್ ರೂಢಿಃ ಬಲೀಯಸೀ**" ಆದ್ದರಿಂದ ಸಂಪ್ರದಾಯಕ್ಕೆ ಭಂಗತರಬಹುದೇ? ಅಂತಾ ಪ್ರಶ್ನಿಸಲು 'ಮಗುವೇ! ನಿಜ, ಆದರೆ ಯಾವ ವಿಷಯದಲ್ಲಿ ಶಾಸ್ತ್ರವಚನಗಳು ಸಂದಿಗ್ಧವಾಗುವವೋ ಅಲ್ಲಿ ಮಾತ್ರ ಸಂಪ್ರದಾಯವನ್ನು ಪ್ರಧಾನವಾಗಿಟ್ಟುಕೊಳ್ಳಬೇಕು. ಈ ತಪ್ತಮುದ್ರಾ ವಿಷಯದಲ್ಲಿ ಶೃತಿ, ಸ್ಮೃತಿ-ಪುರಾಣಾಧಾರಗಳು ಸ್ಪಷ್ಟವಾಗಿರುವದರಿಂದ ಸಂಪ್ರದಾಯಕ್ಕೆ ಪ್ರಾಶಸ್ತ್ಯ ಕೊಡಬಾರದು ಮತ್ತು ನಮಗೆ (ಯತಿಗಳಿಗೆ) ಹೋಮಾಧಿಕಾರವಿಲ್ಲದ್ದರಿಂದ 'ಸುದರ್ಶನ' ಹೋಮಮಾಡಿ ತಪ್ತಮುದ್ರಾ ಕೊಡುವ ಅಧಿಕಾರವಾದರೂ ಎಲ್ಲಿ ಬರಬೇಕು? ನೀವಾಗಿ (ಗೃಹಸ್ಥರು) 'ಸುದರ್ಶನ' ಹೋಮಮಾಡಿ ಮುದ್ರೆಗಳನ್ನು ಕಾಯಿಸಿ, ಆಶ್ರಮ ಜ್ಯೇಷ್ಠರೆಂಬ ಭಾವನೆಯಿಂದ ಮುಂದಿಟ್ಟು ಹಾಕಿಸಿಕೊಳ್ಳುವದೇ ಹೊರತು ಮತ್ತೇನು ವಿಶೇಷವಿಲ್ಲ ಅಂತ ತಿಳಿಸಿ, ಶಾಸ್ತ್ರಾಧಾರ ತೋರಿಸಿ, ಈ ಸಂಪ್ರದಾಯವನ್ನು ಮಠತ್ರಯಗಳು ಅತಿಕ್ರಮಿಸಿದ ಉದಾಹರಣೆಗಳನ್ನು ತೋರಿಸಲು ತಪ್ತಮುದ್ರಾ ಸ್ವೀಕರಿಸಲೊಪ್ಪಿದರು. ಇವರ ಸಂಗಡ- ನದಿಗೆ ಒಬ್ಬ ಪುರೋಹಿತನನ್ನು ಕಳಿಸಿದರು. ಆಜ್ಞೆಯಂತೆ ಕ್ಷೌರಾದಿ ಧರ್ಮಕರ್ಮಗಳನ್ನು ಆಚರಿಸಿ, ಆಹ್ನಿಕಾದಿಗಳನ್ನು ತೀರಿಸಿಕೊಂಡು, "**ತೀರ್ಥಪ್ರಬಂಧ**" ಪಾರಾಯಣ ಮಾಡುತ್ತ ಮಠ ಪ್ರವೇಶ ಮಾಡಿ ಆ ಯತಿಗಳಿಂದ ತಪ್ತಮುದ್ರಾ ಸ್ವೀಕರಿಸಿದರು. ಮುಂದೆ ಕೆಲವು ದಿನವಿದ್ದು ಎಡಬಲ ಸೇವಾದಿಗಳನ್ನು ಮಾಡಿ ಆ ಸ್ವಾಮಿಗಳ ಮನಃಸಂತೋಷ ಪಡಿಸಿದರು. ಇವರ ಗುಣಶೀಲತೆಗಳಿಗೆ ಲುಬ್ಧರಾದ ಶ್ರೀಗಳವರು ಇವರಿಗೆ "**ಸನ್ಯಾಸಾಶ್ರಮ**" ಕೊಡಲು ನಿಶ್ಚೈಸಿ ತಮ್ಮ ಮಠದ ವಿಷಯಗಳನ್ನು ತಿಳಿಸಿ, "ನೀನು ವಿರಕ್ತನಾಗಿ ಸನ್ಯಾಸಕ್ಕೆ ಯೋಗ್ಯನಾದ್ದರಿಂದ ನಿನಗೆ ಆಶ್ರಮ ಕೊಡುವ ಇಚ್ಛಾ ನಮಗುಂಟಾಗಿದೆ, ಸ್ವೀಕಾರ ಮಾಡೆನಲು" "ಐಹಿಕ ಸಂಪತ್ತಿನಿಂದ ಪೂರ್ಣರಾಗಿ ಪುತ್ರರಾಹಿತ್ಯ ಮೂಲಕ ನನ್ನನ್ನು ಪುತ್ರತ್ವೇನ ಸ್ವೀಕಾರ ಮಾಡಿದ್ದಾರೆ. ನನಗೆ ಲಗ್ನವೂ ಆಗಿದೆ. ತಾಯಿಯೂ ಇದ್ದಾಳೆ. ಹೀಗಿರುವಲ್ಲಿ ನಾನು ಸನ್ಯಾಸ ತೆಗೆದುಕೊಂಡರೆ ಹೇಗೆ ಯೋಗ್ಯವಾದೀತು?" ಎಂದು ಹೇಳಿದರು. ಬಲಾತ್ಕಾರದಿಂದಾದರೂ ಯತ್ಯಾಶ್ರಮವನ್ನು ಕೊಟ್ಟುಬಿಡಬೇಕೆಂದು ಯೋಚಿಸಿದ್ದನ್ನು ತಿಳಿದು ಆ ರಾತ್ರಿ ಯಾರಿಗೂ ತಿಳಿಸದೆಯೇ ಆ ಸ್ಥಳದಿಂದ ಹೊರಟು ಮೈಸೂರು, ಬೆಂಗಳೂರು ಮಾರ್ಗವಾಗಿ ಆದವಾನಿಗೆ ಬಂದರು.

೫. ಶುಭೋದಯಸಾಧನದ ಆದೇಶ ದೊರಕಿತು.

ಗುಂಡಾಚಾರ್ಯರ ಮರಣದ ಮೂಲಕ ಸ್ವಲ್ಪವಾದರೂ ನಿಯಂತ್ರಣವಿಲ್ಲದಿರುವದರಿಂದ ರಾಧಾಬಾಯಿಯ ಉದ್ಧಟತನ ಮಿತಿಮೀರಿತು. ಇದರಿಂದ ದಿನೇ ದಿನೇ ಕಲಹ, ಮನಸ್ತಾಪ ಹೆಚ್ಚಾಯಿತು. ಈ ಸಂದರ್ಭದಲ್ಲಿ "ಈ ಮನೆಗೆ ನೀನೇ ಯಜಮಾನನಾಗಿದ್ದೀಯ, ರಾಧಾಬಾಯಿಗೆ ಸ್ವಲ್ಪ ಜೀವನಾರ್ಥ (ಪೋಷಣೆಗೆ) ಆಸ್ತಿಕೊಟ್ಟು ಯಾವತ್ತು ನೀನೇ ಸ್ವಾಧೀನ ಮಾಡಿಕೋ" ಅಂತ ಅನೇಕರು ಉಪದೇಶ ಮಾಡಿದಾಗ್ಯೂ, "ಆ ಸಂಪತ್ತು ನನ್ನದಲ್ಲ, ಅವರದೇ. ಅವರಾಗಿ ಪ್ರೀತಿಯಿಂದ ಕೊಟ್ಟರೆ ಕೊಡಲಿ, ಇಲ್ಲವಾದರೆ ಬಿಡಲಿ. ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಂಡು ಅವರನ್ನು ಹೊರಗೆ ಹಾಕಿದರೆ ಅವರಿಗಾಗುವ ದುಃಖವು ಅತೀತ. ಆದ್ದರಿಂದ ಆ ಸಂಪತ್ತು ಅವರಿಗೇ ಬಿಟ್ಟು ನಾನೇ ಹೋದರೆ, ಅಷ್ಟು ದುಃಖವು ನನಗಾಗಲಾರದು. ಮತ್ತು ಅವರಿಗೆ ಮನಶ್ಶಾಂತಿಯಾದರೂ ಆದೀತು. ಮತ್ತು ಪ್ರಥಮದಿಂದ ಸಂಪತ್ತಿನಲ್ಲೇ ನಂಬಿಕೆವುಳ್ಳವರಾದ್ದರಿಂದ ಅದನ್ನು ಅನುಭವಿಸಲಿ" ಅಂತಾ ಹಿತಚಿಂತಕರೆಂದೆನಿಸಿಕೊಂಡವರಿಗೆ ಈ ರೀತಿ ಉತ್ತರ ಕೊಡುತ್ತಿದ್ದರು. ಒಂದು ದಿನಾ ತಾಯಿಗೂ ಇವರಿಗೂ ಕಲಹ ಹೆಚ್ಚಿತು.

ಆದಿನ "ಈ ಸಂಪತ್ತು ನಶ್ವರವಾದದ್ದು, ಪರಮಾತ್ಮನೇ ಸೃಷ್ಟಿ, ಸ್ಥಿತಿ, ಲಯ ಕಾರಣನು, ಅವನ ಅನುಗ್ರಹದಿಂದಲೇ ಈ ಚೇತನಾತ್ಮಕ ಜಗತ್ತು ರೂಪ, ನಾಮ, ಕ್ರಿಯೆ ಹೊಂದುವದು. ಆತನು ಸ್ವತಂತ್ರನು, ಪೂರ್ಣನೂ, ಸರ್ವಶಕ್ತನೂ, ಅಂತರ್ಬಹಿರ್ವ್ಯಾಪ್ತನೂ; ತನ್ನ ಇಚ್ಛೆಯ ಪ್ರಕಾರ ಕಾಲಕರ್ಮ ಅವಸ್ಥಾದಿಗಳನ್ನನುಸರಿಸಿ, ಯೋಗ್ಯತಾಭಿವ್ಯಕ್ತಿ ಮಾಡುವವನಾಗಿ ಹೃದಯ ಗುಹೆಯಲ್ಲಿ ಬಿಂಬನಾಗಿ, ಪರಮಾಪ್ತ ಶಿಖಾಮಣಿಯಾಗಿರುವವನನ್ನು ಬಿಟ್ಟು ನಶ್ವರವಾದ ದೇಹ ಗೇಹಾದಿಗಳಲ್ಲಿ ಅಭಿಮಾನ ಹೊಂದಿ ಪರಮಾತ್ಮನು ಪ್ರಸನ್ನನಾಗುವ ಮಾರ್ಗ ಅನ್ವೇಷಣೆ ಮಾಡದೆ ಆಶಾಬದ್ಧರಾಗಿ ಸಂಸಾರದಲ್ಲಿ ಮಗ್ನರಾಗುವದು ಅನುಚಿತವು" ಎಂದು ಆಲೋಚಿಸಿ **"ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ"** ಎಂಬ ವಾಕ್ಯದ ಸತ್ವಪರೀಕ್ಷೆ ಮಾಡಲೆಣಿಸಿ ಹಂಪೆಗೆ (ವಿಜಯನಗರ) ತೆರಳಿದರು.

೬. ಗುರು ಅನ್ವೇಷಣೆಯೇ ಗುರಿಯಾಯಿತು.
(ತೀರ್ಥಕ್ಷೇತ್ರ ಪರ್ಯಟನ ಪರಮಾರ್ಥಸಾಧನ)

ಶ್ರೀ ಪಂಪಾಕ್ಷೇತ್ರಸ್ಥ ಯಂತ್ರೋದ್ಧಾರಕ ಪ್ರಾಣದೇವರಲ್ಲಿ ಅನಶನ ವ್ರತದಿಂದ ಒಂದು ಮಂಡಲ (ನಾಲ್ವತ್ತು ದಿನಗಳು) ಸೇವೆ ಮಾಡಲು **"ಕಚೇರಿಗೆ ಬಾ ಕುದುರೆ ಕೊಡುತ್ತೇವೆ"** ಎಂದು ಸ್ವಪ್ನವಾಯಿತು. ಈ ಸ್ವಪ್ನದ ಅರ್ಥವೇನೆಂದು ಆಲೋಚಿಸಿ **'ಕಚೇರಿ'**ಯೆಂದರೆ, ನನ್ನ ಸನ್ನಿಧಾನವಿರುವ **ಕ್ಷೇತ್ರ-ತೀರ್ಥಾದಿಗಳು** ತಥಾ ಅಪರೋಕ್ಷಜ್ಞಾನಿಗಳು. ಇವರನ್ನು ಸೇವಿಸುವದು **'ಕಚೇರಿಗೆ ಬಾ'** ಎಂಬ ಅರ್ಥಕ್ಕೆ ಸರಿಹೋಗುತ್ತದೆ. **'ಕುದುರೆ'**ಯಂದರೆ ಇಷ್ಟಸ್ಥಾನವ ನೈದಿಸುವ ಸಾಧನವು. ಇಷ್ಟವೆಂದರೆ ಸ್ವಸ್ವರೂಪಾನಂದಾವಿರ್ಭಾವ ರೂಪಮುಕ್ತಿಯು. ಇದಕ್ಕೆ ಬೇಕಾಗಿರುವದು "ಸಮ್ಯಕ್ ಜ್ಞಾನವು" ಅಂತಾ ತಿಳಿದುಕೊಂಡು ಸುಜ್ಞಾನಿಗಳ ಅನ್ವೇಷಣಾರ್ಥ ತೀರ್ಥ

ಯಾತ್ರಾದಿಗಳಿಗೆ ತೆರಳುವದಾಗಿ ನಿಶ್ಚಯ ಮಾಡಿದರು. ಆಗ ವಿಶೇಷ ಬೆಲೆಬಾಳುವ ಉಂಗುರಗಳು, ಕಂಠದಲ್ಲಿ ಗೋಪು, ಮುತ್ತಿನಸರ, ಟೊಂಕದಲ್ಲಿ ಬಂಗಾರದ ಉಡುದಾರ, ಬೆಳ್ಳಿತಂಬಿಗೆ, ಥಾಲಿ, ಇತ್ಯಾದಿ ದೇವತಾರ್ಚನೋಪಯುಕ್ತ ಸಾಮಾನುಗಳು ಮತ್ತು ಶಾಲು, ಶಕಲಾತಿ ಮತ್ತು ಶ್ರೇಷ್ಠ ಹಾಸಿಗೆ ಮುಂದಿದ್ದವು. ಇವುಗಳನ್ನು ಬಿಟ್ಟು ಹೋಗಬೇಕೋ? ಬಿಟ್ಟು ಹೋಗುವದಾದರೆ ಯಾರಲ್ಲಿ ಬಿಡಬೇಕು? ತೊಗೊಂಡು ಹೋಗುವದಾದರೆ ಸಂರಕ್ಷಣೆ ಮಾಡುವದರಲ್ಲಿಯೇ ಲಕ್ಷ್ಯವಿಡಬೇಕು. ಕಳೆದರಂತೂ ವಿಶೇಷ ದುಃಖ ಪಡಬೇಕು. ಆದ್ದರಿಂದ ಈ ಪದಾರ್ಥಗಳನ್ನು ಹಿಂದಿಟ್ಟುಕೊಂಡು ಹೋಗುವುದು ಸರಿಯಲ್ಲ. ಪಾಕ್ಷಕ ನಾವು ಬರುವವರೆಗೂ ಈ ಪದಾರ್ಥಗಳು ನಿಮ್ಮಲ್ಲಿ ಇರಲಿ ಎಂದು ಯಾರಲ್ಲಾದರೂ ಒಪ್ಪಿಸಿಹೋದರೆ, ಅವನು ಮೋಸ ಮಾಡುವನೇನೋ ಅಂತಾ ಸರ್ವದಾ ಅತ್ತಕಡೆ ಮನಸ್ಸು ಹರಿಯುವುದು. ಮತ್ತು ಈ ಪದಾರ್ಥಗಳನ್ನಿಟ್ಟುಕೊಂಡವನಿಗೆ ಲೋಭಾದಿಗಳ ಮೂಲಕ ಮೋಸ ಮಾಡಬೇಕೆಂಬ ದುರ್ಬುದ್ಧಿ ಹುಟ್ಟಿದರೂ ಹುಟ್ಟಬಹುದು. ಇದರಿಂದ ಉಭಯನಷ್ಟಕ್ಕೆ ಕಾರಣವಾಗಬಹುದು. ಆದ್ದರಿಂದ ಈ ಪದಾರ್ಥದಿಂದ ಸಂಸಾರವೇ ಬೆನ್ನು ಹತ್ತುವದು. ಇಚ್ಛಾಮಾತ್ರದಿಂದ ಬ್ರಹ್ಮಾಂಡದೊಳಗಿನ ಪದಾರ್ಥಗಳನ್ನು ಉರುಳಿ ಉರುಳಿ ಬರುವಂತೆ ಮಾಡುವ ಶಕ್ತರಾದಾಗ್ಯೂ ಪರಮಾತ್ಮನ ವ್ಯತಿರಿಕ್ತ ಅನ್ಯಪದಾರ್ಥಗಳನ್ನು ತುಚ್ಛೀಕರಿಸಿದ ವೈರಾಗ್ಯಶಿಖಾಮಣಿಗಳು ವಾಯುದೇವರು. ಈ ನನ್ನ ಪ್ರಯಾಣವಾದರೂ ಅವರು ಪ್ರೀತರಾಗುವ ನಿಮಿತ್ತವೇ. ಅವರ ಆಜ್ಞಾಮೇರೆಗೆ ಸಿದ್ಧನಾಗಿರುವುದರಿಂದ ಕಿಂಚಿತ್ತಾದರೂ ಅವರ ಗುಣವನ್ನಾಶ್ರಯಿಸಬೇಕಲ್ಲವೇ? ಲೋಕದೊಳು ಈದೃಶ ಗುಣಾಶ್ರಯವು ಒಂದೇ ಸ್ವಭಾವದವರಲ್ಲಿ ಕಂಡುಬರುತ್ತದೆ. ಆದ್ದರಿಂದ ನಾನು ಈ ಪದಾರ್ಥಗಳನ್ನೆಲ್ಲ ತ್ಯಾಗಮಾಡಿ ಪ್ರಯಾಣ ಮಾಡುವುದೇ ಯೋಗ್ಯ"ವೆಂದು ನಿಶ್ಚಯಿಸಿ, ಆ ಪದಾರ್ಥಗಳನ್ನು ಯೋಗ್ಯರಿಗೆ ವಿನಿಯೋಗ ಮಾಡಿ, ಕೌಶಿಕ, ಕಮಂಡಲು, ಮೃಗಾಸನ, (ಬೆಳ್ಳಿ ತಂಬಿಗೆಯನ್ನು ಕೊಟ್ಟು ಕುಂಬಳಕಾಯಿ ಸೊಂಟ ಇಸಗೊಂಡು) ಮತ್ತು ಎರಡು ಮೊಳ ಉದ್ದ, ಒಂದು ಮೊಳ ಅಗಲದ ಧಾವಳಿ ತುಂಡು, ಚಿಕ್ಕ ಶಾಲಿಗ್ರಾಮ, ಶಂಖ, ಪ್ರಾಣಪ್ರತೀಕ, ಘಂಟೆ ಸ್ವೀಕರಿಸಿದರು. ಗೋಪಿಚಂದನ ಮುದ್ರೆಗಳನ್ನು ಜಟದಲ್ಲಿ ಧಾರಣೆ ಮಾಡಿಕೊಂಡು ಪ್ರಯಾಣ ನಿರ್ಧಾರ ಮಾಡಿದರು. ಮಾರ್ಗದಲ್ಲಿ ಕ್ಷುತ್ಪಿಪಾಸಾದಿಗಳಾದರೆ ಏನು ಮಾಡಬೇಕು ಅಂತ ಮನಸ್ಸಿನ ಅಂತರಂಗಕ್ಕೆ ಅನಿಸಲು ಭೂಚರ, ಖೇಚರ, ಜಲಚರ, ವನಚರ, ಅನಂತಪ್ರಾಣಿಗಳಿಗೆ ಆಹಾರ ಕಲ್ಪಿಸಿದ ಸ್ವಾಮಿ ಎನಗೆ ಮಾತ್ರ ಈ ಸೃಷ್ಟಿಯಲ್ಲಿ ಆಹಾರ ಕಲ್ಪಿಸಿಲ್ಲವೇ? ವನಗಳಲ್ಲಿಯ ಫಲ, ಜಲ, ಪರ್ಣಗಳನ್ನು ಸೇವಿಸುವಲ್ಲಿ ಯಾವ ಉಪಾಧಿಯು ಇರುವುದಿಲ್ಲ. ಇದರ ಮೇಲೆ "**ಭಿಕ್ಷಾಂದೇಹಿ**" ಅಂತ ಮನೆಯ ಮುಂದು ನಿಂತು ಕೇಳಿದರೆ ಯಾರಾದರೂ ಭಿಕ್ಷೆ ಹಾಕುವರು ಎಂದು ಮನಸ್ಸಿಗೆ ಸಮಾಧಾನ ಹೇಳಿದರು. ಭಿಕ್ಷೆಯಿಂದ ಬಂದ ಕಾಳು ಅಥವಾ ಹಿಟ್ಟನ್ನು ಪಕ್ವಮಾಡಿಕೊಳ್ಳುವ ಪಾತ್ರೆ, ಸಾಮಾನುಗಳಿಗೆ ಹ್ಯಾಗೆ ಮಾಡಬೇಕೆಂಬ ವಿಚಾರಕ್ಕೆ ಕೆಲವು ಜಿಹ್ವಾ ಚಾಪಲ್ಯಕ್ಕಾಗಿ "**ಕೌಪೀನ ಸಂರಕ್ಷಣಾರ್ಥಮಯಂ ಘಟಾಟೋಪಃ**" ಎಂಬ ನ್ಯಾಯವನ್ನನುಸರಿಸುವದು. ಅದರಿಂದ ಬಂದಕಾಳನ್ನು, ಹಿಟ್ಟನ್ನು ನೀರಿನಲ್ಲಿ ತೋಯಿಸಿಯಾದರೂ ತಿಂದರಾಯಿತು. ನಿದ್ರೆಗೆ ಹೇಗೆ

ಹಾಕಿಕೊಂಡು ನಿದ್ರೆ ಮಾಡಹತ್ತಿದರು. ಮತ್ತೆ ಸ್ವಲ್ಪಹೊತ್ತಿಗೆ ಅದೇ ಹುಡುಗ ಬಂದು ಪುನಃ ಮೊದಲಿನಂತೆ ಎಬ್ಬಿಸಿದರೂ ಏಳಲಿಲ್ಲ. ಸ್ವಲ್ಪ ಹೊತ್ತು ಬಿಟ್ಟು ಇನ್ನೊಮ್ಮೆ ಪೂರ್ವೋಕ್ತ ರೀತ್ಯಾ ಮುಸುಕು ಸರಿಸಿ ಹೇಳಿದಾಗ "ಮೀ ಉಠಣಾರ ನಾಹೀ ತುಲ್ಹಾ ಕಾಯ ಕರಣ್ಯಾಚಿ ಆಹೇ ತೇ ಕರ್, ಉಗೀಚ್ ಮಲಾ ತ್ರಾಸ್ ದೇವೂ ನಕೋ" (ನಾನು ಏಳುವದಿಲ್ಲ, ನೀನು ಏನು ಮಾಡ ತಕ್ಕದ್ದಿದೆಯೋ ಅದನ್ನು ಮಾಡು, ಸುಮ್ಮನೆ ನನಗೆ ಶ್ರಮಕೊಡಬೇಡಾ) ಅಂತಾ ಝಬರಿಸಿ ಹಾಗೇ ಮಲಗಿದರು. ಮುಂದೆ ಅಲ್ಪಾವಧಿಯಲ್ಲಿಯೇ ಬೆಳ್ಳಗಾಗ(ಬೆಳಗಾಗ) ಲಾರಂಭಿಸಿತು. ಮುಸುಕು ತೆಗೆದು ನೋಡಲು ವಿಶೇಷ ಪ್ರಕಾಶ ಕಾಣಿಸಿತು. ಆಗ್ಗೆ ಎಚ್ಚತ್ತು ನೋಡಲು ಮನೆಗೆ ಬೆಂಕಿ ಹತ್ತಿತ್ತು. ಹೊಗೆಯು ತುಂಬಿದ್ದರಿಂದ ದ್ವಾರವು ಸರಿಕಾಣದಾಗಿತ್ತು. ಈ ಸಮಯದಲ್ಲಿ ಮತ್ತೊಬ್ಬ ಹುಡುಗನು ಬಂದು "ಮಾಮಾ, ತುಮ್ಹೀ ಇಥೇ ಕಾ ಉಭೇ ಆಹೇ ಬಾಹೇರ ಜಾಣ್ಯಾಚೀ ರಸ್ತಾಮೀ ದಾಖವಿತೋಯ್" (ಮಾಮಾ, ನೀವು ಇಲ್ಲಿ ಏಕೆ ನಿಂತೀರಿ, ಹೋಗುವ ದಾರಿ ನಾನು ತೋರಿಸುತ್ತೇನೆ ಬನ್ನಿ) ಎಂದು ಕೈಹಿಡಿದು ಹೊರತಂದುಬಿಟ್ಟನು. ಉತ್ತರ ಕ್ಷಣದಲ್ಲಿಯೇ ಆ ಮನೆಯು ಬಿದ್ದುಹೋಯಿತು. ಆಗ ನೆರೆದ ಜನರು, ಇವರಾರು? ಬ್ರಹ್ಮರಾಕ್ಷಸ ವಾಸವಾಗಿರುವ ಮನೆಯಲ್ಲಿ ಯಾಕೆ (ಇದ್ದೀರಿ.) ಹೋಗಿದ್ದರು? ಸ್ವಲ್ಪದರಲ್ಲಿಯೇ ವಿಪತ್ತು ತಪ್ಪಿತು. ದೇವರು ಕಾಪಾಡಿದರು. ಇಲ್ಲದಿದ್ದರೆ ಪತ್ತೆ ಸಹ ಹತ್ತುತ್ತಿದ್ದಿಲ್ಲ ಅಂತ ತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದು ಕೇಳಿದ ಮೇಲೆ ಮೊದಲು ಆ ಹುಡುಗನು ಹೇಳಿದ್ದು ತಾವು ಅವನಿಗೆ ಉತ್ತರ ಕೊಟ್ಟದ್ದು ಎಲ್ಲಾ ಸ್ಫೂರ್ತಿಗೆ ಬಂದು "**ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ**" ಎಂಬುದು ಈಗೊಮ್ಮೆ ನಿದರ್ಶನಕ್ಕೆ ಬಂತು ಎಂದು ಪರಮಾತ್ಮನ ದೀನರಕ್ಷಣೆಯ ಗುಣಗಾನ ಮಾಡಿದರು.

೨. ಪಾಕ ಕೌತುಕ ತಂದಿತು.

ಅಲ್ಲಿಂದ ಮುಂದಕ್ಕೆ **ತ್ರಯಂಬಕ** ಕ್ಷೇತ್ರಕ್ಕೆ ಹೋದರು. ಅಲ್ಲಿ ಕೆಲವು ದಿನಗಳಿರುವಾಗ ಒಂದು ದಿನ ಒಬ್ಬ ಶ್ರೀಮಂತನು ಆ ಕ್ಷೇತ್ರಸ್ಥ ಸರ್ವಬ್ರಾಹ್ಮಣರಿಗೂ ಅನ್ನಸಂತರ್ಪಣೆ ಮಾಡಿಸುವ ಸಂಕಲ್ಪದಿಂದ ಸಕಲ ಸಂಭಾರಗಳೊಡನೆ ಅಡಿಗೆಯವನ ಸಹಿತ ಬಂದನು. ಮರುದಿವಸ ಅಡುಗೆಯವನು ಕಾಣದೆ ಸಮಾರಾಧನೆಯು ನಿಲ್ಲುವ ಪ್ರಸಂಗ ಬಂತು. ಇದರಿಂದ ಆ ಗೃಹಸ್ಥನು ಮತ್ತು ಆ ಊರೊಳಗಿನ ಬ್ರಾಹ್ಮಣರೆಲ್ಲರೂ ಖೇದ ಪಡಹತ್ತಿದರು. ಈ ವಿಷಯವು ಇವರಿಗೆ (ಈ ಚರಿತ್ರ ನಾಯಕರಿಗೆ) ತಿಳಿಯಲು ಕೂಡಲೇ ಸ್ಥಳಾಂತರಕ್ಕೆ ಹೋಗಿ ತಮ್ಮ ಬಾವಾಜಿ ವೇಷವನ್ನು ಬಿಟ್ಟು ಬ್ರಾಹ್ಮಣ ಪಾಚಕನಂತೆ, "ತುಮ್ಹೀ ಕಾಯ ವಿಚಾರ ಕರಿತ್ ಆಹೆ" (ನೀವು ಏನೂ ವಿಚಾರ ಮಾಡುತ್ತಲಿದ್ದೀರಿ) ಅಂತಾ ಪ್ರಶ್ನೆ ಮಾಡಲು ಅವರು ತಮ್ಮ ಆಲೋಚನೆ ವಿಷಯವನ್ನು ತಿಳಿಸಿದರು. "ಬರ್ ಮೀ ಸ್ವಯಂಪಾಕ ಕರ್ತೋ" (ಒಳ್ಳೇದು ನಾನು ಅಡಿಗಿ ಮಾಡುತ್ತೇನೆ.) ಅಂದು "ಕಾಯ್ ಕಾಯ್ ಸ್ವಯಂಪಾಕ ಕರಾಯಿಚೆ ಆಹೆ ಕಿತಿಕರಾಯಿಚೆ-ಆಹೆ" (ಏನೇನು ಅಡಿಗಿ ಮಾಡತಕ್ಕದ್ದು ಮತ್ತು ಎಷ್ಟು ಮಾಡತಕ್ಕದ್ದು ಅದೆ) ಅಂದರು "ಹಜಾರ್ ಬ್ರಾಹ್ಮಣಾಲಾ ಕಢೀಭಾತ್, ವರಣ, ಅಮಟಿ, ಬಟಾಟಿಭಾಜಿ, ಖೀರ್, ಲಾಡೂ ಆಣಿ

ಕೇಲೇತರ್ ಭಜಿ (ಸಾವಿರ ಜನ ಬ್ರಾಹ್ಮಣರಿಗೆ ಪಳದ್ಯಾ ಅನ್ನ, ತೊಪ್ಪಿ, ಅಮಠೀ, ಆಲೂಗಡ್ಡೆ ಪಲ್ಯ, ಪಾಯಸ, ಲಡ್ಡು, ಮತ್ತು ಮಾಡಿದರೆ ಬುರುಬುರಿ)" ಅಂತ ಹೇಳಿದನು. "ಬರಮೀ, ವ್ಹಡೇ ಕರತೋ ಮಾಝೀ ಹಾತಾ ಖಾಲೀ ಏಕ ಮಾನುಷ್ ದಿಲೇತರ್ ಅಕ್ರಾವಾಜತಾಲೇವಿಣ್ಯಾ ಸುಮಾರಸ್ ಸಿದ್ಧಕರತೋ, ಪಾಣಿ ಆಣಿ ಭಾಂಡೀ ಆಜ್ ರಾತ್ರಿ ತಯಾರ್‌ಠೇವಾ, ಮೀ ಪಹಾಟೆ ಚಾರ ವಾಜ್ಲ್ಯಾನಂತರ್ ಸ್ವಯಂಪಾಕ ಸುರುಕರ್‌ತೋ" (ಒಳ್ಳೇದು ನಾನು ಇಷ್ಟು ಮಾಡುತ್ತೇನೆ, ಆದರೆ ನನ್ನ ಕೈಕೆಳಗೆ ಒಬ್ಬ ಮನುಷ್ಯನನ್ನು ಕೊಟ್ಟರೆ ಹನ್ನೊಂದು ಹೊಡೆಯುವ ಸುಮಾರಕ್ಕೆ ಸಿದ್ಧ ಮಾಡುತ್ತೇನೆ. ಪಾತ್ರೆ ಮತ್ತು ನೀರು ಈ ದಿನ ರಾತ್ರಿ ಸಿದ್ಧ ಇಡಿರಿ. ನಾನು ಬೆಳಗು ಮುಂಜಾನೆ ೪ ಘಂಟೆ ಹೊಡೆದ ಮೇಲೆ ಅಡಿಗೆ ಪ್ರಾರಂಭ ಮಾಡುತ್ತೇನೆ) ಅಂತಾ ಅಂದರು. "ಬರ ಮಹಾರಾಜ್ ತುಮ್ಹಾಲಾ ದ್ಯಾಯಚೀ ಬೊಲಾವೆ" (ಒಳ್ಳೇದು ಮಹಾರಾಜರೇ! ನಿಮಗೆ ಏನು ಕೊಡಬೇಕು ಹೇಳಿರಿ) ಅಂತಾ ವಿಚಾರಿಸಲು "ತುಮ್ಹಿ ದಿಲೆತೋ ಮೀ ಘೇತೋ" (ನೀವು ಕೊಟ್ಟದ್ದು ನಾನು ತೆಗೆದುಕೊಳ್ಳುತ್ತೇನೆ) ಅನ್ನಲು, "ನಹೀ ಮಹಾರಾಜ್ ಮಾಗಾ" (ಇಲ್ಲ ಮಹಾರಾಜರೇ ಕೇಳಿರಿ (ಬೇಡಿರಿ)) ಅಂತ ಪುನಃ ಗೃಹಸ್ಥನು ಕೇಳಲು "ಬರ್ ಪಂಚವೀಸ ರೂಪ್ಯೆ ದ್ಯಾ" (ಒಳ್ಳೇದು ಇಪ್ಪತ್ತೈದು ರೂಪಾಯಿ ಕೊಡಿರಿ.) ಅಂತಾ ಕೇಳಿದರು. "ನಹೀ ಮಹಾರಾಜ್ ವೀಸ ರೂಪ್ಯೆ ಘ್ಯಾ" (ಇಲ್ಲ ಮಹಾರಾಜರೇ ೨೦ ರೂ. ತೆಗೊಳ್ಳಿರಿ) ಅಂದನು. "ನ ಹೀ ಶ್ರಮ ಬಘೂನ್ ದ್ಯಾ" (ಇಲ್ಲ, ಶ್ರಮನೋಡಿ ಕೊಡಿರಿ) ಅಂತಾ ಹೇಳಿದರು. "ಬರ್ ತಾಕರ ಸ್ವಯಂಪಾಕ್ ಕರೂನ್ ಅಕ್ರಾವಾಸ್ತಾ ಪಾನ್ ಘಾಲಣ್ಯಾಚಿ ತಯಾರೀಕರಾ" (ಒಳ್ಳೇದು ಜಾಗ್ರತಿ ಅಡುಗೆ ಮಾಡಿ ೧೧ ಘಂಟೆಗೆ ಎಲೆಹಾಕುವಂತೆ ಸಿದ್ಧಪಡಿಸಿರಿ) ಅಂತ ಹೇಳಿದನು. "ಬರ್" (ಒಳ್ಳೇದು) ಅಂತಾ ಒಪ್ಪಿಕೊಂಡು ಆ ಪ್ರಕಾರ ಬೆಳಗು ಮುಂಜಾನೆ ೪ ಘಂಟೆಗೆ ಅಡಿಗೆ ಪ್ರಾರಂಭ ಮಾಡಿ ಪೂರ್ವೋಕ್ತ ಪದಾರ್ಥಗಳನ್ನೆಲ್ಲವನ್ನು ಸಿದ್ಧಪಡಿಸಿ "ಮೀ ತ್ರ್ಯಂಬಕೇಶ್ವರ ಚೇ ದರ್ಶನ ಘೇವ್ಹೂನ್ ಏತೋ" (ನಾನು ತ್ರ್ಯಂಬಕೇಶ್ವರನ ದರ್ಶನ ತೆಗೆದುಕೊಂಡು ಬರುತ್ತೇನೆ.) ಅಂತಾ ಆ ಗೃಹಸ್ಥನಿಗೆ ಸಂಬಂಧಪಟ್ಟ ಒಬ್ಬನಲ್ಲಿ ತಿಳಿಸಿ ಹೊರಟು ಹೋದರು. ಆಮೇಲೆ ತಮ್ಮ ಪೂರ್ವದ ಬಾವಾಜಿ ವೇಷವನ್ನು ಧಾರಣ ಮಾಡಿಕೊಂಡರು. ಇತ್ತ ಭೋಜನಕ್ಕೆ ಕೂಡುವ ಸಮಯದಲ್ಲಿ ಇವರನ್ನು ಹುಡುಕುತ್ತಿರಲು "ತ್ರ್ಯಂಬಕೇಶ್ವರ ದರ್ಶನಾಲಾ ಗೇಲಾ ಆಹೇ ಅತ್ತಾಯೇಯಿಲ್" (ತ್ರ್ಯಂಬಕೇಶ್ವರ ದರ್ಶನಕ್ಕೆ ಹೋಗಿದ್ದಾರೆ ಈಗ ಬಂದಾರು) ಅಂತ ಯಾರ ಮುಂದೆ ಇವರು ಹೇಳಿ ಹೋಗಿದ್ದರೋ ಆತನು ಯಜಮಾನನ ಮುಂದೆ ತಿಳಿಸಿದನು. ಆಮೇಲೆ ಅಲ್ಲಿಗೆ ಒಬ್ಬ ಬ್ರಾಹ್ಮಣನನ್ನು ಕಳುಹಿಸಿ ಹುಡುಕಿಸಿದಾಗ್ಯೂ ಸಿಗಲಿಲ್ಲ. ಮುಂದೆ ಸರ್ವರೂ ಭೋಜನಕ್ಕೆ ಕುಳಿತುಕೊಂಡರು. ೨ನೇ ಪಂಕ್ತಿಗೂ ಬರಲಿಲ್ಲ. ಆದ್ದರಿಂದ ಆ ಗೃಹಸ್ಥನು ವಿಶೇಷವಾಗಿ ಹುಡುಕಿಸಿದನು, ಆದಾಗ್ಯೂ ಸಿಗಲಿಲ್ಲ. "ಮಹಾರಾಜ ಹೆಂಚಾ ಭಕ್ತಿಲಾ ಪ್ರಸನ್ನ ಹೋವ್ಹೂನ್ ತ್ರ್ಯಂಬಕೇಶ್ವರಚ್ಯಾ ಪರಿವಾರ ಪೈಕೀ ಏಕ್‌ಟ್ಯಾಲಾ ಪಾಠವೀಲಾ ಅಸೇಲ್, ನಾಹೀತರ ಏವಢೇ ಸ್ವಯಂಪಾಕ ಅಸಾ ಸ್ವಾದಿಷ್ಟ ಕರೂನ್ ತ್ಯಾಚಾ ಸಂಭಾವನಾ ಸಹ ನ ಘೇತಾ ಅದೃಶ್ಯ ಝಾಲಾ ಮ್ಹಣಜೆ ತುಮ್ಹೀ ಥೋರಾ

ಪುಣ್ಯವಾನ್ ಆಹೋ" (ಮಹಾರಾಜ್! ನಿಮ್ಮ ಭಕ್ತಿಗೆ ಪ್ರಸನ್ನನಾಗಿ ತ್ರ್ಯಂಬಕೇಶ್ವರನೇ ತನ್ನ ಆಳನ್ನು ಕಳುಹಿಸಿರಬಹುದು ಇಲ್ಲವಾದರೆ ಇಷ್ಟು ಅಡಿಗೆ ಈ ರೀತಿಯ ದಯೆಯಿಂದ ಮಾಡಿ ತನ್ನ ಸಂಭಾವನೆ ಸಹ ತೆಗೆದುಕೊಳ್ಳದೆ ಅದೃಶ್ಯನಾದನೆಂದಮೇಲೆ ನೀವು ದೊಡ್ಡ ಪುಣ್ಯವಂತರಿದ್ದೀರಿ) ಅಂತ ಆಗೃಹಸ್ಥನನ್ನು ಪ್ರಶಂಸೆ ಮಾಡಿದರು. ಮತ್ತು ಇದು ಸರ್ವರಿಗೂ ಕೌತುಕವಾಗಿ ತೋರಿತು.

೩. ಯಂತ್ರ ಮೋಹಬಡಿಸಿದ ತಂತ್ರವಾಯಿತು.

ಕೆಲದಿನಗಳ ನಂತರ ಅದೇ ಕ್ಷೇತ್ರದ ಒಂದು ಮನೆಯಲ್ಲಿ ಪತಿ ಪತ್ನಿಯರು ಸಹ ಯೌವನೋಪೇತರಾಗಿಯೂ, ಉಪಭೋಗಕ್ಕೆ ಕೊರತೆಯಿಲ್ಲದವರಾಗಿಯೂ ಇದ್ದರು. ಅದೇ ಊರಿಗೆ ಒಬ್ಬ ಗೃಹಸ್ಥನು ಪ್ರಾಥಮಿಕ ಶಾಲಾ ಮಾಸ್ತರನಾಗಿ ಬಂದನು. ಅವನು ವೃದ್ಧನೂ, ಕುರೂಪಿಯೂ ಹಾಗು ದರಿದ್ರನೂ ಆಗಿದ್ದನು. ದುಷ್ಕರ್ಮವಶಾತ್ ಈ ಸ್ತ್ರೀಯಳಿಗೂ ಅವನಿಗೂ ಪ್ರೇಮ ಸಂಬಂಧ ಉಂಟಾಯಿತು. ಕೆಲವು ದಿನಗಳಲ್ಲಿ ಈ ವಿಷಯವು ಈ ಸ್ತ್ರೀಯಳ ಪತಿಗೆ ತಿಳಿದಿದ್ದರಿಂದ ತನ್ನ ಪತ್ನಿಯನ್ನು ವಿಶೇಷ ಹೊಡೆದನು. ಆಮೇಲೆ, ಈಕೆಯು ಪತಿಯಲ್ಲಿ ಅತೀ ವಿನಯ ತೋರಿಸುತ್ತಾ ಪತಿ ಸೇವಾದಲ್ಲಿ ನ್ಯೂನತೆ ತೋರದಂತೆ ಮಾಡುತ್ತಿದ್ದಳು. ಇದರಿಂದ ಪತಿಗೆ ಈಕೆಯ ವಿಷಯದಲ್ಲಿ ಶಿಕ್ಷಾ ಮಾಡಿದ್ದೇ ತಪ್ಪೆಂದೆನಿಸಲಾರಂಭವಾಯಿತು. ಆದರೆ, ಈಕೆಯು ತನ್ನ ದುಷ್ಕೃತ್ಯಕ್ಕೆ ವ್ಯತ್ಯಯಬಾರದಂತೆ ಬಹು ಜಾಗ್ರತೆಯಿಂದ ಮನೋರಥವನ್ನು ಪೂರ್ಣ ಮಾಡಿಕೊಳ್ಳುತ್ತಿದ್ದಳು. ದುಷ್ಕೃತ್ಯಗಳೆಲ್ಲವೂ ಎಂದಿಗೂ ಅಡಗುವದಿಲ್ಲವೆಂಬ ಈ ನಿಯಮಕ್ಕೆ ಅನುಸರಿಸಿ ಇದು ಮತ್ತೊಮ್ಮೆ ಪತಿಯ ದೃಗ್ಗೋಚರವಾಯಿತು. ಈ ಸಾರೆ ಈಕೆಯನ್ನು ಪ್ರಾಣ ಹೋಗುವಷ್ಟು ಬಡಿದನು. ಈ ಬಡಿತದಿಂದ ನಾಲ್ಕಾರು ದಿನಗಳು ಆಕೆಗೆ ಎಚ್ಚರಿಕೆ ಸಹ ಬಾರದಂತಾಯಿತು. ಆಮೇಲೆಯಾದರೂ ಪತಿಯಲ್ಲಿ ಅನುರಾಗಳಾಗಿ ವರ್ತನೆಯಲ್ಲಿ ವ್ಯತ್ಯಾಸ ಮಾಡಲಿಲ್ಲ, ಮತ್ತು ತನ್ನ ದುಷ್ಕೃತ್ಯವನ್ನು ಬಿಡಲಿಲ್ಲ. ಹೀಗೆ ಕೆಲ ಕಾಲ ಗತಿಸಿತು. ಅನಂತರ ಒಂದು ದಿನ ಇವರು (ಈ ಚರಿತ್ರ ನಾಯಕರು) ತ್ರ್ಯಂಬಕೇಶ್ವರನ ಗುಡಿಯಲ್ಲಿ ಕುಳಿತಿರಲು ಈ ಸ್ತ್ರೀಯು ಬಂದು, ನಮಸ್ಕಾರ ಮಾಡಿ, "ಮಹಾರಾಜ್ ತುಮ್ಹೀ ಮಹಾಯೋಗಿ ಸಾರಖೇ ದಿಸತ ಆಹೇ, ಮಾಝಿ ಏಕ ವಿನಂತಿ ಆಹೆ, ಸಾವಧಾನನೇ ಐಕೂನ್ ತ್ಯಾಲಾ ಕಾಯ ಕರಾಯಚೆ ತೇ ಕರೂನ್ ಮಾಝ್ಯಾ ಮನಃ ಶಾಂತಿ ಕರಾವಿ" (ಮಹಾರಾಜರೇ! ನೀವು ದೊಡ್ಡ ಯೋಗಿಯಂತೆ ಕಾಣುತ್ತೀರಿ, ನನ್ನದೊಂದು ವಿನಂತಿ ಅದೆ, ಸಾವಧಾನದಿಂದ ಕೇಳಿ ಅದಕ್ಕೆ ಏನು ಮಾಡತಕ್ಕದ್ದು ಆದನ್ನು ಮಾಡಿ ಮನಸ್ಸಿಗೆ ನೆಮ್ಮದಿಯನ್ನು ಉಂಟುಮಾಡಿರಿ.) ಎಂದು ನುಡಿದು ನಿಂತುಕೊಂಡಳು. "ಬರ್ ತುಝಿ ಕಾಯ ವಿನಂತಿ ಆಹೆ" (ಒಳ್ಳೆಯದು ನಿನ್ನ ವಿನಂತಿ ಏನಿದೆ) ಅಂತಾ ಕೇಳಿದರು. "ಪರಮೇಶ್ವರಾಚೇ ಕೃಪಾನೆ ಮಾಲಾ ಕೋಣತ್ಯಾಹಿ ಸಂಪತ್ತೀಲಾ ಕಾಯ ಕಮೀ ನಾಹೀ, ಪರಂತು ಮಾಝಾ ಪತಿ ಮಲಾ ಫಾರ್ ಮಾರತೋ. ತಸ ಮಾರವು ನಯೇ ಏವಢೆ ತುಮ್ಹೀ ಅನುಗ್ರಹ ಕರಾ" (ಪರಮೇಶ್ವರನ ಕೃಪೆಯಿಂದ ನನಗೆ ಯಾವ ಸಂಪತ್ತಿಗೂ ಏನೂ ಕಮ್ಮಿ ಇಲ್ಲ. ಆದರೆ ನನ್ನ ಪತಿ ನನ್ನನ್ನು ವಿಶೇಷ ಬಡಿಯುತ್ತಾನೆ.

ಆ ರೀತಿ ಬಡೆಯಬಾರದು. ಇಷ್ಟೇ ನೀವು ಅನುಗ್ರಹ ಮಾಡಿರಿ) ಅಂತಾ ಕೇಳಿಕೊಂಡಳು. "ಬರ್ ಏವಢೇ ಮಾರಣ್ಯಾಲ ಕಾರಣ ಕಾಯ್" (ಒಳ್ಳೇದು ಇಷ್ಟು ಬಡಿಯಲಿಕ್ಕೆ ಕಾರಣವೇನು?) ಅಂತಾ ಪ್ರಶ್ನೆ ಮಾಡಿದರು. ಲಜ್ಜಾ ವಿಶಿಷ್ಟಳಾಗಿ ತಲೆ ಬಗ್ಗಿಸಿ ಸ್ವಲ್ಪ ಹೊತ್ತು ನಿಂತುಕೊಂಡು ನಂತರ ತನ್ನ ಯಾವದ್ ವೃತ್ತಾಂತವನ್ನು ತಿಳಿಸಿದಳು. ಇವರು ಆಶ್ಚರ್ಯಚಕಿತರಾಗಿ, "ಪರಮೇಶ್ವರ ಹೀ ತುಮ್ಹಾಲಾ ಐಹಿಕ ಸಂಪತ್ತಿ ಕೋಣತ್ಯಾಹೀ ಕಮಿ ಕೆಲಾನಾಹೀ, ತುಮಚಾಪತಿ ಹೀ ಚಾಂಗಲಾ ಆಹೆ, ಆಣಿ ಪತಿಪೇಕ್ಷಾ ಸಹಸ್ರ ಪಟ್ಟಿನೇ ಹಾಗುಣಾನೇ ವಿದ್ಯಾ ಸಾಂಪತ್ತಿಕ ಸ್ಥಿತಿನೇ, ಸೌಂದರ್ಯಾನೇ ನೀಚ ಆಹೆ, ಅಸ್ ಅಸೂನ್‌ಹೀ ತೂ ತೋ ಮಾಣ್‌ಸಾವರ ಕಾ ಮುಗ್ಧಝಾಲಿ" (ಪರಮೇಶ್ವರನು, ನಿನಗೆ ಯಾವ ಐಹಿಕ ಸಂಪತ್ತು ಯಾವದಕ್ಕೂ ಕಡಿಮೆ ಮಾಡಿಲ್ಲ, ನಿನ್ನ ಪತಿಯು ನೆಟ್ಟಗಿದ್ದಾನೆ. ಮತ್ತು ಪತಿಗಿಂತಲೂ ಸಹಸ್ರಪಟ್ಟು ಗುಣದಿಂದಲೂ, ವಿದ್ಯಾದಿಂದಲೂ, ಸಾಂಪತ್ತಿಕ ಸ್ಥಿತಿಯಲ್ಲಿಯೂ, ಸೌಂದರ್ಯದಲ್ಲಿಯೂ ಬೇರೆಯವನು ನೀಚನಿದ್ದಾನೆ. ಹೀಗಿದ್ದಾಗ್ಯೂ ನೀನು ಅವನಿಗೆ ಯಾಕೆ ಮೋಹ ಪರವಶಳಾಗಿದ್ದಿ?) ಅಂತ ಪ್ರಶ್ನೆ ಮಾಡಲು "ಮಹಾರಾಜ, ತುಮ್ಚಚೀ ಮ್ಹಣಣೇ ಬರೋಬರ ಆಹೇ, ಪರಂತೂ ತೋ ಮಲಾ ಮನ್ಮಥ ಸಾರಖಾ ದಿಸತೋ, ತ್ಯಾಲಾ ಮೀ ಕಾಯಕರೂ?" (ಮಹಾರಾಜರೇ! ನಿಮ್ಮ ಅನ್ನೋಣವು ಸರಿಯಾಗಿದೆ. ಆದರೆ ಅವನು ನನಗೆ ಮನ್ಮಥನಂತೆ ತೋರುತ್ತಾನೆ. ಅದಕ್ಕೆ ನಾನೇನು ಮಾಡಲಿ) ಅಂತಾ ಅಂದಳು. "ಬರ್, ಈಶ್ವರಾಚೆ ಬಂಧಕ ಶಕ್ತಿಲಾ ತುಮ್ಹೀಕಾಯ ಕರಣಾರ್, ಅಸ್ತು ಮೀ ಏಕ ತಾಯಿತ್ ಕರೂನ್ ದೇತೋ ತ್ಯಾಚಾ ಪ್ರಭಾವನೇ ತುಮಚ ಪತಿ ತುಲಾ ಮಾರಣಾರ ನಾಹೀ" (ಒಳ್ಳೇದು, ಈಶ್ವರನ ಬಂಧಕ ಶಕ್ತಿಗೆ ನೀನೇನು ಮಾಡುವಿ. ಇರಲಿ, ನಾನು ಒಂದು ಯಂತ್ರಮಾಡಿ ಕೊಡುತ್ತೇನೆ. ಅದರ ಪ್ರಭಾವದಿಂದ ನಿನ್ನ ಪತಿ ನಿನ್ನನ್ನು ಬಡಿಯುದಂತೆ ಆಗುವನು) ಅಂತ ಹೇಳಿದರು. ಇದಕ್ಕೆ ಬಹು (ಸಂತೋಷವುಳ್ಳವಳಾಗಿ) ಸಂತುಷ್ಟಳಾಗಿ, "ಯೋಗಿ ಮಹಾರಾಜ, ತುಮ್ಹೀ ಏವಢೇ ಉಪಕಾರಕರಾ, ಅತ್ತಾಹೇ ತುಮಚ ಪಾದಲಾ ಅರ್ಪಣ ಕರತೇ, ನಂತರ ಪುನಃ ತುಮ್ಹಾಲಾ ಏಕ ಶಂಭರ ರೂಪಾಯ್ ದೇತೋ" (ಯೋಗಿ ಮಹಾರಾಜರೇ, ತಾವು ಇಷ್ಟೊಂದು ಉಪಕಾರ ಮಾಡಿರಿ, ಈಗ ಇದನ್ನು ತಮ ಪಾದಕ್ಕೆ ಅರ್ಪಣೆ ಮಾಡುತ್ತೇನೆ. ಆಮೇಲೆ ನಿಮಗೆ ಒಂದು ನೂರು ರೂಪಾಯಿ ಕೋಡುತ್ತೇನೆ.) ಅಂದು ತನ್ನಲ್ಲಿದ್ದ ಒಂದು ಉಂಗುರವನ್ನು ಮುಂದಿಟ್ಟು ನಮಸ್ಕಾರ ಮಾಡಿದಳು. "ಹೇ ಘೇವ್ವಾನ್ ಮೀ ಕಾಯಕರೂ? ಮಲಾ ತುಮ್ಹೀ ಕಾಯ ದೇಣ್ಯಾನಕಾ. ಮಲಾಕಾಯ ದ್ಯಾಯಚೆ ಸಂಕಲ್ಪ ಕೇಲೆ ತೇ ಬ್ರಾಹ್ಮಣ ಸಂತರ್ಪಣ ಕರೂನ್ ಟಾಕಾ." (ಇದನ್ನು ತೆಗೆದುಕೊಂಡು ನಾನೇನೂ ಮಾಡಲಿ, ನನಗೆ ನೀನು ಏನು ಕೊಡುವದು ಬೇಡಾ. ನನಗೆ ಕೊಡಲು ಸಂಕಲ್ಪಿಸಿದ ದ್ರವ್ಯದಿಂದ ಬ್ರಾಹ್ಮಣ ಸಂತರ್ಪಣೆ ಮಾಡಿಸು.) ಅಂತ ಹೇಳಿ ಮುಂದಿಟ್ಟ ಉಂಗುರವನ್ನು ತಿರುಗಿ ಕೊಟ್ಟರು. ಹೇಳಿದಂತೆ ಮರುದಿವಸ ಯಂತ್ರ ಮಾಡಿಕೊಟ್ಟರು. ತತ್ ಪ್ರಭಾವದಿಂದ ಕ್ಷಿಪ್ರವಲ್ಲಿಯೇ ಆ ಶಾಲಾ ಮಾಸ್ತರನು ಆ ಊರಲ್ಲಿ ಇರಲಾರದಂತಾಗಿ, ಹೇಳದೆ ಕೇಳದ ಎಲ್ಲಿಯೋ ಹೊರಟು ಹೋದನು. ತದನಂತರ ಆ

ದಾಂಪತ್ಯದಲ್ಲಿ ಪರಸ್ಪರ ಪ್ರೇಮ ಬೆಳೆದು ಆನಂದದಿಂದ ಇರಹತ್ತಿದರು. ಮುಂದೆ ಸಂತಾನವೂ ಆಯಿತು. ಈ ವಿಷಯವು ಪರಮಾತ್ಮನ ಬಂಧಕ ಶಕ್ತಿಯ ಕೌತುಕವನ್ನು ದ್ಯೋತನ ಮಾಡಿದ್ದಾಗಿ, "ಸ್ವಾಮಿ! ನಿನ್ನ ಬಂಧಕ ಪಾಶದಿಂದ ರುದ್ರಾದಿ ದೇವತೆಗಳೂ ಸಹ ತಪ್ಪಿಸಿಕೊಳ್ಳಲಾರರು. ಅಂದಮೇಲೆ ನರರ ಪಾಡೇನು? ಹೇ ಸ್ವಾಮಿ! ನೀನು ಸರ್ವ ಚೇತನಾಚೇತನಗಳಲ್ಲಿದ್ದು ಅವುಗಳಿಗೆ ರೂಪ, ನಾಮ, ಕ್ರಿಯಾದಿಗಳುಂಟು ಮಾಡಿ (ಚೇತನಕ್ಕೆ) 'ಏನಂ ಬಂಧಯಾಮಿ' ಅಂತ ಸಂಕಲ್ಪ ಮಾಡಿದ ಮಾತ್ರ ಅನೇಕ ಸುಕರ್ಮ- ದುಷ್ಕರ್ಮಗಳ ಮಾಡಿ, ನಾನಾ ಯೋನಿಗಳಲ್ಲಿ ತಿರುಗಿ ಸುಖ ದುಃಖಗಳನನುಭವಿಸಿ, ನಿನ್ನ ಮಹಿಮಾ ತಿಳಿಯದಲೆ ಪಾಮರರಂತೆ ಪಂಡಿತರೂ ಸಹ ಬಳಲುತ್ತಾರೆ. ಕೆಲಕಾಲ ನಂತರ "ಏನಂ ಮೋಚಯಾಮಿ" ಅಂತ ಸಂಕಲ್ಪ ಮಾಡಲು ಯಾವ ರೂಪ ನಾಮ ಕ್ರಿಯೆಗಳು ಬಂಧನಕ್ಕೆ ಕಾರಣಾಗಿದ್ದವೋ, ಆ ರೂಪ ನಾಮ ಕ್ರಿಯೆಗಳೇ ಜ್ಞಾನಕಾರಿಗಳಾಗಿ ಪರಿಣಮಿಸಿ ಮುಕ್ತಿಗೆ ಕಾರಣವಾಗುವವೆಂದು ಪರಮಾತ್ಮನ ಗುಣಧ್ಯಾನ ಮಾಡಿದರು.

೪. ಭೋಗಾನುರಾಗತ್ಯಾಗವೇ ಯೋಗ.

ತ್ರ್ಯಯಂಬಕ ಕ್ಷೇತ್ರದಿಂದ ನಾಶಿಕಕ್ಕೆ ತಿರುಗಿ ಬಂದು ಮುಂದೆ ಪ್ರಯಾಣ ಮಾಡುತ್ತಿರುವಾಗ ಮಾರ್ಗದಲ್ಲಿ **ಸಂಗೋರಾಮಗೋವಿಂದ**ನೆಂಬ ಬಾಗಲಕೋಟೆ ಗೃಹಸ್ಥನು ಹೆಂಡತಿಯ ದುರಾಚಾರವನ್ನು ನೋಡಿ ಸಹನ ಮಾಡಲಾಗದೇ ಮನೆ ಬಿಟ್ಟು ಪ್ರಯಾಣ ಮಾಡಿದ್ದನು. ಈ ಗೃಹಸ್ಥನು ಇವರನ್ನು ಮಾರ್ಗದಲ್ಲಿ ಕೂಡಿದನು. ಇವನು ಅಫು (ಅಫೀಮು) ತಿನ್ನುತ್ತಿದ್ದರಿಂದ ಯೋಗ್ಯ ಆಹಾರ ಪಾನವೂ ಅವನಿಗೆ ಬೇಕಾಗುತ್ತಿತ್ತು. ಇದಕ್ಕೆ ಬೇಕಾಗುವ ಪಾತ್ರ ಪದಾರ್ಥಗಳು, ಹಾಸಿಗೆ ಬಟ್ಟೆಗಳನ್ನು ಇಟ್ಟುಕೊಂಡು ಅವುಗಳನ್ನು ಹೊರಲಾರದೆ ಹೊತ್ತುಕೊಂಡು ಬರುತ್ತಿದ್ದನು. ಅವನು ಹೊರುವ ಕ್ರಮವನ್ನು ಕಂಡು ಈ ಪದಾರ್ಥಗಳನ್ನೆಲ್ಲಾ ತ್ಯಾಗ ಮಾಡಿ ವಿರಕ್ತನಾಗೆಂದು ಉಪದೇಶ ಮಾಡಿದಾಗ್ಯೂ, ಅವನಿಗೆ ರುಚಿಸುತ್ತಿದ್ದಿಲ್ಲ. ಯಾಕಂದರೆ (ಈ ಚರಿತ್ರ ನಾಯಕರು) ಭಿಕ್ಷಾದಿಂದ ತಂದ ಕಾಳು ಅಥವಾ ಹಿಟ್ಟನ್ನು ಪಕ್ವ ಮಾಡದಲೆ ಭಕ್ಷಿಸುತ್ತಿದ್ದರು. ಅವನು ಅನ್ನ, ಚಪಾತಿ, (ಗೋಧಿ ಭಕ್ಕರಿ) ಮಸಾಲೀಹಾಕಿದ ಹುಳಿ, ಪಲ್ಯ, ಕಾಯಿ, ಹಾಲು, ಮೊಸರು ಇತ್ಯಾದಿ ಮನಬಂದಂತೆ ರುಚಿ ರುಚಿ ಅಡಿಗೆ ಮಾಡಿಕೊಂಡು ತಿನ್ನುತ್ತಿದ್ದನು. ಈ ರೀತಿ ರುಚಿಯಾದ ಆಹಾರ ಪಾನಗಳನ್ನು ಬಿಟ್ಟು ದೇಹದಂಡನೆ ಮಾಡುವವದಕ್ಕಿಂತಲೂ ಪಾತ್ರೆ ಪದಾರ್ಥಗಳನ್ನು ಹೊರುವದೇ ಅವನಿಗೆ ಸುಖರೂಪವಾಗಿ ತೋರುತ್ತಿತ್ತು. ತಾನು ಭೋಜನ ಮಾಡುವಾಗ ಇವರನ್ನು ಕರೆಯುತ್ತಿದ್ದನು. "ಈ ರುಚಿಗೆ ಮರುಳಾದರೆ ಎಂದಾದರೊಂದು ದಿನ ಮಹಾ ಸಂಕಟಕ್ಕೊಳಗಾಗಬೇಕಾಗುವದು. ಯಾಕಂದರೆ, ಈ ಪದಾರ್ಥಗಳ ಸಂಗ್ರಾಹಾರ್ಥ ನಾನಾವಿಧವೇಷ ತಾಳಿ ಯಾರನ್ನಾದರೂ ಆಶ್ರಯಿಸಬೇಕು. ಆಮೇಲೆ ಅವರ ಮನೋಗತ ತಿಳಿದುಕೊಂಡು ಅದನ್ನು ಪೂರ್ಣಗೊಳಿಸುವ ಸಾಮರ್ಥ್ಯ ನಮಗಿಲ್ಲದಿದ್ದರೂ ಸುಳ್ಳು ಹೇಳಿ ಮೋಸಗೊಳಿಸಿಯಾದರೂ ದುಡ್ಡು ಸೆಳೆಯಬೇಕು. ಈ ಕೃತಿಯಿಂದ ಪರಲೋಕ ಗತಿಗೆ ಹಾನಿ

ಬರುವದು" ಅಂತಾ ಹೇಳಿದಾಗ್ಯೂ ಕೂಡ ಬೋರಲು ಇಟ್ಟು ನೀರು ಹಾಕಿದಂತಾಗುತ್ತಿತ್ತು. ನೀವರು ಒಮ್ಮೆ ಅನುಭವಕ್ಕೆ ತಂದು ಕೊಟ್ಟರೆ ಆಗ್ಗೆ ನೀನೇ ಬಿಡುತ್ತೀ" ಅಂತಾ ಹೇಳಿ ಘುಮ್ಮನಾದರು.

೯. ಸುಜನಸಂಗ ಸಂಗೋರಾಮನನ್ನು ಬದುಕಿಸಿತು.

ಒಂದು ದಿನ **ಕುರದಿ** ಎಂಬ ಗ್ರಾಮಕ್ಕೆ ಬಂದರು. ಅಲ್ಲಿ ಕರಾಡ ಜನರ ವಸತಿ ವಿಶೇಷವಿತ್ತು. ಆ ಜನರಲ್ಲಿ ದುರ್ಗಾಷ್ಟಮೀ ದಿನ (ಸಾಧಿಸಿದರೆ) ನರಬಲಿ ಕೊಡುವ ಸಂಪ್ರದಾಯವಿತ್ತು. ಇದಕ್ಕಾಗಿ ಆ ಜನರು ಪದ್ಧತಿಯನ್ನರಿಯದ ಪರಸ್ಥಳೀಕರನ್ನು (ಕಟುಕನು ಕುರಿಯನ್ನು ಆದರದಿಂದ ಸಾಕುವಂತೆ) ಅತ್ಯಾದರದಿಂದ ಹುಡುಕಿ, ದೊರೆತವರನ್ನು ವರುಷಗಟ್ಟಲೇ ಮನೆಯಲ್ಲಿ ಇಟ್ಟುಕೊಂಡು ಆ ದಿನ ಬಲಿ ಕೊಡುತ್ತಿದ್ದರು. ಈ ರೀತಿ ಬಲಿ ಕೊಡುವದರಿಂದ ದುರ್ಗಾ ದೇವಿಯು ಪ್ರೀತಳಾಗಿ ವಿಪುಲ ಸಂಪತ್ತನ್ನು ಪ್ರದಾನ ಮಾಡುವಳೆಂಬ ಭಾವನೆ ಅವರಲ್ಲಿ ನೆಲೆಗೊಂಡಿತ್ತು. ಆದ್ದರಿಂದಲೇ ಈ ಕಾರ್ಯದುದ್ದೇಶಕ್ಕಾಗಿ. ವಿಶ್ವಪ್ರಯತ್ನ ಮಾಡುತ್ತಿದ್ದರು. ಆಕಸ್ಮಾತ್ ದೊರೆತರೆ ಅವನಿಗೆ ಎಲ್ಲಾ ವಿಧದಿಂದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ತಮ್ಮ ಉದ್ದಿಷ್ಟ ವಿಷಯವು ಅವನಿಗೆ ತಿಳಿಯದಂತೆ ವಿಶೇಷ ಲಕ್ಷ್ಯ ಇಡುತ್ತಿದ್ದರು. ಆದಾಗ್ಯೂ ಎಷ್ಟೋಸಲ ಈ ಗುಟ್ಟು ರಟ್ಟಾಗಿ ದೊರೆತವನು ಓಡಿಹೋಗುತ್ತಿದ್ದನು. ಆಗ ಅವರು ಭಗ್ನ ಮನೋರಥಿಗಳಾಗುತ್ತಿದ್ದರು. ಆದಾಗ್ಯೂ ಪುನಃ ಪ್ರಯತ್ನ ಮಾಡುವದು ಬಿಡುತ್ತಿದ್ದಿಲ್ಲ. ಇವರಿಬ್ಬರೂ (ಸಂಗೋರಾಮ ಮತ್ತು ಈ ಚರಿತ್ರ ನಾಯಕರು) ಆ ಗ್ರಾಮಕ್ಕೆ ಬಂದಾಗ ನವರಾತ್ರಿ ದಿನಗಳಿದ್ದವು. ಆ ಊರಿನ ಪ್ರತಿಯೊಂದು ಮನಿಯಲ್ಲಿ ಸಂಭ್ರಮದಿಂದ ಹಬ್ಬ ನಡೆದಿತ್ತು. ಇವರು ಬೇರೆ ಬೇರೆ ಬೀದಿಗೆ ಒಬ್ಬರಾಗಿ ಭಿಕ್ಷಾಕ್ಕೆ ಹೊರಟಿದ್ದರು. ಈ ಸಂಗೋರಾಮನು ಭಿಕ್ಷಾಕ್ಕೆ ಬಂದಿರುವ ಒಂದು ಮನೆಯ ಯಜಮಾನನು ಇವನನ್ನು ಅತ್ಯಾದರದಿಂದ ಆವ್ಹಾನಿಸಿ, ಇವನ ಹೆಗಲ ಮೇಲೆ ಇದ್ದ ಹಸಿಬಿ (ಬೇಲ) ಯನ್ನು ಇಳಿಸಿ ತೆಗೆದುಕೊಂಡು ಮನೆಯೊಳಗೆ ಕರೆದು (ಕೊಂಡು) ಕುಳ್ಳಿರಿಸಿ, "ಈ ನವರಾತ್ರಿ ಹಬ್ಬ ಮುಗಿಯುವವರೆಗೂ ನಮ್ಮಲ್ಲಿಯೇ ವಾಸಮಾಡಿರಿ. ಎಲ್ಲಿಗೂ (ಭಿಕ್ಷಾಕ್ಕೂ ಸಹ) ಹೊರಗೆ ಹೋಗುವದು ಅನವಶ್ಯಕ. ನಿಮ್ಮ ಸಾಮಾನುಗಳನ್ನು ಈ ಖೋಲಿಯಲ್ಲಿ ಇಟ್ಟುಕೊಂಡು ಸ್ವಸ್ಥ ವಾಸ ಮಾಡಿರಿ" ಅಂತಾ ಹೇಳಿ, ಮೇಲುಪ್ಪರಿಗೆಗೆ ಕರೆದುಕೊಂಡು ಹೋಗಿ ಶೀಘ್ರ ಕೈಕಾಲುಗಳನ್ನು ತೊಳೆದುಕೊಳ್ಳಲು ಬಿಸಿ ನೀರು ತರಿಸಿಕೊಟ್ಟು, ದ್ರಾಕ್ಷಿ, ಬಾದಾಮಿ, ಕೇಸರಿ ಮೊದಲಾದವುಗಳನ್ನು ಹಾಕಿದ ಸುರಸೋಪೇತ ಹಾಲು, ಉಂಡಿ ಮೊದಲಾದ ಫಲಾಹಾರವನ್ನು ಹಾಗೂ ತಾಂಬೂಲಾದಿಗಳನ್ನು ಕೊಟ್ಟು, ಒಂದು ಮಂಚದ ಮೇಲೆ ಹಾಸಿಗೆ ಹಾಸಿಕೊಟ್ಟು ವಿಶ್ರಮಿಸಿಕೊಳ್ಳಿರಿ, ಭೋಜನ ಸಮಯದಲ್ಲಿ ಎಬ್ಬಿಸುತ್ತೇನೆ" ಅಂತಾ ಹೇಳಿ ಬಾಗಿಲು ಮುಚ್ಚಿ ಹೊರಗಿನವರ ಭೇಟಿ ಇವನಿಗೆ ಆಗದಂತೆ ವ್ಯವಸ್ಥಾ ಮಾಡಿದನು. ಅಡಿಗೆ ಆದನಂತರ ಬಂದು ಎಬ್ಬಿಸಿ ಮೃಷ್ಟಾನ್ನ ಭೋಜನ ಮಾಡಿಸಿ ಪುನಃ ಖೋಲಿಗೆ ಕರೆದುಕೊಂಡು ಬಂದು

ತಾಂಬೂಲಾದಿಗಳನ್ನು ಕೊಟ್ಟು ನವಯೌವನೋಪೇತಳೂ, ರೂಪವತಿಯೂ ಆದ ತನ್ನ ಮಗಳನ್ನು ಕರೆದು, ಇವನ ಅಪೇಕ್ಷಿತವೆಲ್ಲವನ್ನು ಪೂರ್ಣಗೊಳಿಸುವಂತೆಯೂ ಹೊರಗಿನ ಸುದ್ದಿಯು ಏನೂ ತಿಳಿಯದಂತೆ ವ್ಯವಸ್ಥಾ ಮಾಡುವಂತೆಯೂ ಕಟ್ಟಪ್ಪಣೆ ಮಾಡಿದನು. ಈ ರೀತಿಯಾಗಿ ಮೂರು, ನಾಲ್ಕು ದಿನಗಳು ಗತಿಸಿದವು. ಒಂದು ದಿನ ಆ ಹುಡಿಗಿಯು ಇವನಿಗೆ (ಸಂಗೋರಾಮನಿಗೆ) ಎಣ್ಣೆಯನ್ನು ಹಚ್ಚುತ್ತಿರುವಾಗ ಅಂತಃಕರಣ ಕರಗಿ ಕಣ್ಣುಗಳಿಂದ ಬೆಚ್ಚನೆ ನೀರು ಇವನ ಮೈಮೇಲೆ ಬಿದ್ದಿತು. ಥಟ್ಟನೇ ತಲೆ ಎತ್ತಿ ನೋಡಲು ಆ ಹುಡುಗಿ ಸೆರಗಿನಿಂದ ಕಣ್ಣುಗಳನ್ನು ಒರಸಿಕೊಳ್ಳುವದನ್ನು ನೋಡಿ ಬೆರಗಾಗಿ ವ್ಯಸನದ ಕಾರಣವನ್ನು ಬಹು ಪರಿಯಿಂದ ವಿಚಾರಿಸಲು, 'ನಾಳೆ ದುರ್ಗಾಷ್ಟಮೀ ನಿನ್ನನ್ನು ಬಲಿ ಕೊಡುವರು' ಅಂತಾ ಸ್ಪಷ್ಟ ತಿಳಿಸಿದಳು. ಆಗ ಅವನಿಗೆ ಸಿಡಿಲು ಬಡಿದಂತಾಗಿ ದಿಗ್ಭ್ರಮೆ ಹೊಂದಿ ವಿಪತ್ತು ತಪ್ಪಿಸಿಕೊಳ್ಳುವ ದಾರಿ ತೋರಿಸೆಂದು ಅವಳನ್ನು ಅಂಗಲಾಚಿ ಬೇಡಿಕೊಂಡನು. ಆಗ ಅವಳು 'ಈ ಪಾಯಖಾನೆಗೋಡೆಯನ್ನು ಹತ್ತಿ ಜಿಗಿದು ಓಡಿಹೋಗು. ಹಗಲು, ರಾತ್ರಿ ಎನ್ನದೆ ಬಲು ದೂರ ಓಡಿಹೋಗು' ಅಂತ ಹೇಳಿದಳು. ಆ ಗೋಡೆಯನ್ನು ಹತ್ತುವದು ಹೇಗೆ ಅಂತಾ ಕೇಳಲು ಆ ಲಲನೆಯು ಒಂದು ತಂಬಿಗೆ ನೀರು ತಂದು ಕೊಟ್ಟು ಅವನ ಸಂಗಡ ತಾನೂ ಪಾಯಿಖಾನೆ (ಹತ್ತುವದಕ್ಕೆ ಸಹಾಯ ಮಾಡಿ) ಯೊಳಗೆ ಬಂದು, ತನ್ನ ಹೆಗಲಮೇಲೆ ನಿಲ್ಲಿಸಿಕೊಂಡು ಗೋಡೆಯನ್ನು ಹತ್ತುವದಕ್ಕೆ ಸಹಾಯ ಮಾಡಿ, ಮೇಲಕ್ಕೆ ಹತ್ತಿ ಅತ್ತ ಕಡೆಗೆ ಹಾರಿದ ಮೇಲೆ ತಾನು ಹೊರಗೆ ಬಂದು, ಬಾಗಿಲುಯಿಕ್ಕಿ ಕಾಯುವವಳಂತೆ ನಟಿಸಿ ಸ್ವಲ್ಪ ವೇಳೆ ಆದನಂತರ ತನ್ನ ತಂದೆಯಲ್ಲಿ, 'ಬಹಳ ಹೊತ್ತಾಯಿತು, ಪಾಯಿಖಾನೆ ಒಳಗೆ ಹೋದ ಗೃಹಸ್ಥನು ಹೊರಗೆ ಬಂದಿಲ್ಲ' ಅಂತ ತಿಳಿಸಿದಳು. ಕೂಡಲೇ ಆ ಯಜಮಾನನು ಧಾವಿಸಿ ಬಂದು ಪಾಯಖಾನೆಯನ್ನು ತೆಗೆದು ನೋಡಿ ತಂಬಿಗೆ ಮಾತ್ರ ಇದ್ದದ್ದು ಕಂಡು ಸಿಕ್ಕಿದ್ದ ಬೇಟೆ ಓಡಿ ಹೋಯಿತೆಂದು ಪರಿತಪಿಸಿ ಬಲು ಪರಿಹುಡುಕಿದಾಗ್ಯೂ ಸಿಗಲಿಲ್ಲ. ಆತನಿಗೆ ಈ ಗುಟ್ಟು ತನ್ನ ಮಗಳ ಮೂಲಕ ತಿಳಿದಿರಬಹುದೆಂದೆಣಿಸಿ ಅವಳನ್ನು ದಂಡಿಸಿದನು. ಆದರೂ ಮಾಡುವದೇನು? ತಾನೆಣಿಸಿದ್ದೆಲ್ಲಾ ಕೆಟ್ಟು ಹೋಯಿತು ಎಂದು ಹತಾಶನಾದನು.

೬. ದುರ್ವ್ಯಸನ ದೂರಾಯಿತು.

ಇತ್ತ ಜತೆಗಾರನು ಎಲ್ಲಿ ಹೋದನೆಂದು ತಿಳಿಯದೆ ಯೋಚನೆ ಉಂಟಾಗಲು, 'ಸ್ವಗ್ರಾಮ ಸ್ವಜನರೆಂಬ ಅಭಿಮಾನಕ್ಕೆ ಕಾರಣೀಭೂತರು ಸಂಸಾರ ಹೇತುವೆಂದನಿಸಿ, ತ್ಯಾಗಮಾಡಿ ಬಂದವನಿಗೆ ಈ ಮಧ್ಯೆ ಜೊತೆಯಾಗಿ ಬಂದವನ ವಿಷಯ ಯೋಚಿಸುವುದೇ ಅನವಶ್ಯಕ. ಈಶನ ಸಂಕಲ್ಪಾನುಸಾರ ಅವರವರ ಕರ್ಮಾನುಬಂಧಕ್ಕನುಸರಿಸಿ ಚೇತನಾಚೇತನಗಳ ಸಂಯೋಗ ವಿಯೋಗಗಳು ಉಂಟಾಗುವವು. ಇದಕ್ಕಾಗಿ ಯೋಚಿಸಿ ಹರ್ಷ ಶೋಕಾದಿಗಳಿಗೆ ಒಳಪಡಬಾರದು' ಅಂತಾ ಸಮಾಧಾನ ಮಾಡಿಕೊಂಡು ಮುಂದೆ ಪ್ರಯಾಣ ಬೆಳೆಸಿದರು. ಹೀಗೆ ಒಂದು ವಾರ ಗತಿಸಿದ ಬಳಿಕ ಪುನಃ ಜತೆ ಕಲಿತು ಕರಡಿ ಗ್ರಾಮದಲ್ಲಾದ ವೃತ್ತಾಂತವನ್ನೆಲ್ಲವನ್ನು ಸಂಗೋರಾಮನು ತಿಳಿಸಿದನು. 'ನೋಡಿದೆಯಾ? ಈ ದುರಭ್ಯಾಸದ

ಪರಿಣಾಮ? ಇನ್ನಾದರೂ ಬುದ್ಧಿ ತಂದುಕೊಂಡು ಈ ಪದಾರ್ಥಗಳನ್ನೆಲ್ಲ ತ್ಯಾಗ ಮಾಡಿ ನನ್ನಂತೆಯೇ ಇದ್ದರೆ ಯಾವ ಬಾಧಕವೂ ಬರಲಾರದು' ಅಂತಾ ಹಿತೋಪದೇಶ ಮಾಡಿದರು. 'ಇದು ನನ್ನಿಂದ ಬಿಡುವದು ಸಾಧ್ಯವಿಲ್ಲ, ನನಗೂ ಬಿಡಬೇಕೆನಿಸುತ್ತದೆ. ಆದರೂ ಬಿಡುವದಾಗದು. ಪಾಕ್ಷಿತ ನಿಮಗೂ ಚಟ (ವ್ಯಸನ) ಉಂಟಾದರೆ ನಿಮಗಾದರೂ ಬಿಡುವದಾಗದು ಅಂತಾ ಅಂದನು. ಒಳ್ಳೆಯದು ಹಾಂಗಾದರೆ ಎಷ್ಟು ದಿನ ಅಫು (ಅಫೀಮು) ಸೇವನಾ ಮಾಡಿದರೆ ಚಟವುಂಟಾಗುತ್ತದೆ. ಆ ರೀತಿ ಚಟವುಂಟಾದ ಮೇಲೆ ನಾನೂ ಬಿಟ್ಟರೇ ನೀನು ಬಿಡುವಿಯಾ? ಅಂತಾ ಕೇಳಿದರು. ಹಾಂಗಾದರೆ ಅವಶ್ಯ ಬಿಡುತ್ತೇನೆ ಅಂತಾ ಅಂದನು. ಹಾಗಾದರೆ ಉಭಯರೂ ಪ್ರತಿಜ್ಞೆ ಮಾಡೋಣ. 'ನಾನೂ ನಿನ್ನಂತೆ ಕೆಲವು ದಿನಗಳು ಅಫೀಮು ಸೇವನೆ ಮಾಡಿ ಈಗ ಚಟವುಂಟಾಗಿದೆ ಅಂತ ನೀನೂ ನಿಶ್ಚಯ ಮಾಡಿ ಹೇಳಿದ ಮೇಲೂ ಕೆಲವು ದಿನಗಳು ಸೇವಿಸಿ ನಂತರ ಏಕಾಏಕಿ ನಾನು ಬಿಟ್ಟರೆ ನೀನೂ ಬಿಡಬೇಕು. ಮತ್ತು ಈ ಪಾತ್ರ ಪದಾರ್ಥಗಳನ್ನೆಲ್ಲ ತ್ಯಾಗ ಮಾಡಬೇಕು. ನಿನ್ನಂತೆ ನನ್ನಿಂದಲೂ ಅಫೀಮು ಬಿಡುವದಾಗದಿದ್ದರೆ ಈ ನಿನ್ನ ಗಂಟುಗಳನ್ನೆಲ್ಲ (ಭಾರವನ್ನೆಲ್ಲ) ನಾನು ಹೊರುತ್ತೇನೆ' ಅಂತಾ ಪ್ರತಿಜ್ಞೆ ಮಾಡಿ ಆ ದಿನದಿಂದ ತಾವೂ ಕೂಡಾ ಅಫು ತಿನ್ನಲು ಪ್ರಾರಂಭಿಸಿದರು. ಎಂಟು ದಿನಗಳ ನಂತರ ಇನ್ನು ಮೇಲೆ ನಿಮ್ಮಿಂದಲೂ ಅಫು ಬಿಡಲಾಗದು ಅಂತಾ ಹೇಳಿದ ಮೇಲೂ ಕೆಲವು ದಿನಾ ದಿನೇ ದಿನೇ ಹೆಚ್ಚು ಪ್ರಮಾಣದಿಂದ ತಿನ್ನಹತ್ತಿದರು. ಈ ರೀತಿ ೨/೩ ತಿಂಗಳೂ ದಿನಾಲು ಒಂದು ತೊಲೆಯವರೆಗೂ ತಿಂದು, ಒಂದು ದಿನಾ ಬಿಡು ಬಿಡು ಅಂತಾ ನನಗೆ ಹೇಳುತ್ತಿದ್ದಿರಿ. ಈಗ ನೀವು ಅಫೀಮು ಬಿಡಿರಿ ನೋಡೋಣ ಅಂತ ಸಂಗೋರಾಮನು ಅಂದನು. ಕೂಡಲೇ ತಾವು ಬಿಟ್ಟು ಅವನಿಗೂ ಬಿಡಲು ಬಲತ್ಕಾರ (ಜುಲುಮೆ) ಮಾಡಿದರು. ಆ ದಿನ ಅವನು ಕೂಡಾ ಅಫೀಮು ಸೇವನೆ ಮಾಡಲಿಲ್ಲ. ಆದ್ದರಿಂದ ಅವನು ಸುಂಗ (ಮುಗ್ಧ) ನಾಗಿ ಏನೂ ತೋಚದಂತಾದನು. ಮತ್ತು ಅವನಿಂದ ನಿಗ್ರಹಿಸುವುದಾಗದೆ ಪುನಃ ಸೇವಿಸಲಾರಂಭಿಸಿದನು. ಈ ರೀತಿ ೩/೪ ದಿನಗಳಾದ ಮೇಲೆ ಇವನಿಗೆ ಯೋಗ್ಯ ಪ್ರಾಯಶ್ಚಿತ್ತ ಮಾಡಿಸಬೇಕೆಂದೆಣಿಸಿ, ಈ ದಿನ ನೀನು ಭಿಕ್ಷಾಕ್ಕೆ ಹೋಗು, ಭಿಕ್ಷಾಕ್ಕೆ ಹೋಗಿ ಬರುವಷ್ಟರಲ್ಲಿ ಉತ್ತಮ ಅಡಗೆ ಮಾಡಿರುತ್ತೇನೆ. ನನಗೆ ಈ ದಿನಾ ಊಟ ಮಾಡಬೇಕೆಂಬ ಅಪೇಕ್ಷೆ ಆಗಿದೆ ಅಂತಾ ಅಂದಕೂಡಲೇ ಹರ್ಷದಿಂದ 'ಏನು ಅಡಿಗೆ ಮಾಡುವಿರಿ' ಅಂತಾ ಕೇಳಿದನು. ಅದಕ್ಕೆ ಅವನಿಗೆ ತಕ್ಕಂತೆ ತುಪ್ಪದಲ್ಲಿ ಪೂರಿ ಕರೆದು, ಮಳಲಿದ ಹಾಲಿನಲ್ಲಿ ಅದ್ದಿ, ಮೇಲೆ ಸಕ್ಕರ ಉದುರಿಸುತ್ತೇನೆ. ಮತ್ತು ಮಸಾಲೆ ಹುಳಿ, ಬಟಾಟೆ ಪಲ್ಯಾ, ಕೊಬ್ಬರಿ ಚಟ್ನೀ ಮಾಡುತ್ತೇನೆ ಎನ್ನಲು ಬಹು ಸಂಭ್ರಮದಿಂದ ಭಿಕ್ಷಾಕ್ಕೆ ತೆರಳಿದನು. ಅವನು ದೂರ ಹೋದ ಮೇಲೆ (ಕಣ್ಣು ಮರೆಯಾದ ಮೇಲೆ) ಅವನ ಪಾತ್ರ ಪದಾರ್ಥಗಳನೆಲ್ಲ ಒಂದು ಭಾವಿಯಲ್ಲಿ ಹಾಕಿ, ಹಾಸಿಗೆ ಬಟ್ಟೆಗಳ ಪೈಕಿ ಮೂರು ಮೊಳ ಉದ್ದ ಒಂದು ಮೊಳ ಅಗಲ ಧಾಬಳಿ ಮಾತ್ರ ಉಳಿಸಿ, ಉಳಿದ ಬಟ್ಟೆಗಳಿಗೆ ಬೆಂಕಿಯನ್ನು ಹಚ್ಚಿಬಿಟ್ಟರು. 'ನಾನು ಹೋಗಿ ಬರುವಷ್ಟರಲ್ಲಿ ದಿವ್ಯ ಅಡಿಗೆ ಮಾಡಿರುತ್ತಾರೆ. ಸ್ವಲ್ಪ ಹೆಚ್ಚು ಹೊತ್ತಾದರೂ ಚಿಂತೆಯಿಲ್ಲಾ. ಹೆಚ್ಚು ಪದಾರ್ಥಗಳನ್ನು ಸಂಗ್ರಹಿಸಿಕೊಂಡು ಬಿಸಿಲಿನಿಂದ ಶಾಂತನಾಗಿ ಬಂದು, ಸರ್ವವೂ

ತುಚ್ಛೀಕರಿಸಿ, ಯಾದೃಚ್ಛಿಕವಾಗಿ ಬಂದ ದ್ವಂದ್ವಗಳನ್ನು ಪರಮಾತ್ಮನಿಂದ ಬಂದ ಮಹಾಪ್ರಸಾದವೆಂದು ಪರಮಾನಂದದಿಂದ ಅನುಭವಿಸುವ ನಾನು ಚಿಕಿತ್ಸಾದಿಗಳ ಸಲುವಾಗಿ ಯತ್ನಿಸುವವನಲ್ಲ. ಹಾಗೆ ಯತ್ನಿಸಿದರೆ ಒದಗುವ ಸುಖದುಃಖಾದಿಗಳಿಗೆ ಚೇತನಾ ಚೇತನ ಪದಾರ್ಥಗಳೇ ಮುಖ್ಯ ಕಾರಣವೆಂದಂತಾಗುವದು. ಈ ಮಾತಿಗೆ ಆ ಅಧಿಕಾರಿಯು 'ಹಾಂಗಾದರೆ ಜಗದ್ವ್ಯಾಪಾರಗಳು ಅನುಪಯುಕ್ತವಾದಂತಾಗುವವು' ಅಂತ ಅಂದನು. 'ನೀನಾಡುವದು ನಿಜ. ಆದರೆ ಪರಮಾತ್ಮನ ಕ್ರಿಯೆಗಳು ದ್ವಂದ್ವವಾಗಿರುವದರಿಂದ ಅಜ್ಞಾನಿಯು ಈ ಪದಾರ್ಥಗಳೇ ಮುಖ್ಯ ಕಾರಣವೆಂತಲೂ, ಜ್ಞಾನಿಯು ಪರಮಾತ್ಮನೇ ಮುಖ್ಯ ಕಾರಣನಾಗಿ ತನ್ನ ಸಂಕಲ್ಪಾನುಸಾರ ಈ ಪದಾರ್ಥಗಳ ಮುಖಮಾಡಿ ದೇಹಧಾರಿಗಳಾದ ಜೀವರಿಗೆ ದ್ವಂದ್ವಗಳ ಕಲ್ಪಿಸುವನೆಂದರಿತು ಆತನ ಮಹಿಮೆಯನ್ನು ಕೊಂಡಾಡುವುದೇ ಹೊರ್ತು ದ್ವಂದ್ವಾದಿಗಳಿಗೆ ಬಗ್ಗಿ ಹರ್ಷಶೋಕಾದಿಗಳಿಗೆ ವಶರಾಗಿ ಧಾವಿಸುವದಲ್ಲ" ಅಂತಾ ಹೇಳಿದರು. ಹಾಗಾದರೆ, 'ಈಗ ನಿಮಗೆ ನಾನು ಚಿಕಿತ್ಸಾ ಮಾಡದೆ ಬಿಟ್ಟಿದ್ದರೆ ಯಾರು ರಕ್ಷಿಸುತ್ತಿದ್ದರು? ಮತ್ತು ಔಷಧೋಪಚಾರವು ಅಮುಖ್ಯವಾಗಿದ್ದರೆ ಚಿಕಿತ್ಸಾ ಮಾಡಿದಾಗ್ಯೂ ಪ್ರಯೋಜನ ಉಂಟಾಗಬಾರದಿತ್ತು. ಮತ್ತು ಚಿಕಿತ್ಸಾ ಮಾಡಿದ್ದು ಪ್ರಯೋಜನಕಾರಿಯಾಗಿರುವದರಿಂದ ಈ ನಿಮ್ಮ ವೇದಾಂತವು ಶುಷ್ಕವೆಂದು ಕಂಡುಬರುತ್ತದೆ' ಅಂತಾ ಅಂದನು. ಸರಿ ಪರಮಾತ್ಮನು ರಕ್ಷಿಸುವುದು ಎರಡು ವಿಧ. ಒಂದು ಸಾಕ್ಷಾತ್, ಮತ್ತೊಂದು ಪರೋಕ್ಷತಃ. ಪೂರ್ವದಲ್ಲಿ ಹಿರಣ್ಯಾಕ್ಷಾದಿ ದೈತ್ಯರಿಂದ ಜಗತ್ತಿಗೆ ಉಂಟಾದ ತಾಪಗಳನ್ನು ಸಾಕ್ಷಾತ್ ಪರಿಹರಿಸಿದನು. ಇನ್ನಿತರ ಉಪದ್ರವಗಳನ್ನು ಚೇತನಾ ಚೇತನ ಪದಾರ್ಥಗಳಲ್ಲಿ ಅಂತರ್ಯಾಮಿತ್ವೇನ ಇದ್ದು ಪರಿಹರಿಸಿದನು. ಆ ಪದಾರ್ಥಗಳಿಗೆ ಸತ್ತಾಪ್ರದಾಯಕ ನಾದರೆ ಆ ಪದಾರ್ಥಗಳಿಂದ ಉಪಯೋಗವಾಗುತ್ತದೆ. ಇಲ್ಲವಾದರೆ ಎಲ್ಲಾ ಪ್ರಯತ್ನಗಳು ವ್ಯರ್ಥವಾಗುತ್ತವೆ. ಕೇವಲ ಪದಾರ್ಥಗಳೇ ಕಾರಣವಾದರೆ ಜಗತ್ತಿನಲ್ಲಿ ಸರ್ವರೂ ದುಃಖಕ್ಕೆ ಕಾರಣವಾದ ಮರಣಾದಿಗಳಿಂದ ದೂರವಾಗುತ್ತಿದ್ದರು. ಮತ್ತು ನನ್ನ ಉದಾಹರಣೆ ತೆಗೆದುಕೊಂಡು ನೋಡಿದರೆ, ಪರಮಾತ್ಮನೇ ಮುಖ್ಯ ಕಾರಣನೆಂದು ಗೊತ್ತಾಗುತ್ತದೆ. ಹೇಗೆಂದರೆ "ನಾನು ಯಾರು? ಯಾವ ದೇಶವು? ನನಗೂ ನಿನ್ನ ಭೃತ್ಯಗೂ ಏನೂ ಸಂಬಂಧವಿದೆ? ಆದರೆ ನನಗೆ ಬಂದ ವಿಪತ್ತಿನಿಂದ ರಕ್ಷಿಸುವದಕ್ಕಾಗಿ ನಿನ್ನ ಭೃತ್ಯನಲ್ಲಿ ಪರಮಾತ್ಮನೇ ರಕ್ಷಿಸುವದಕ್ಕೋಸ್ಕರ ಧಾವಿಸಿ ಬಂದು, ನಿನ್ನಲ್ಲಿ ಮನೋನಿಯಾಮಕನಾಗಿ ದಯೆಯೆಂಬ ಗುಣಾಭಿವ್ಯಕ್ತಮಾಡಿ, ಬುದ್ಧಿಯಲ್ಲಿ ಇಂಥ ಚಿಕಿತ್ಸೆ ಮಾಡುವದೆಂಬ ಜ್ಞಾನಪ್ರದಾತೃನಾಗಿ ಮತ್ತು ಔಷಧದಲ್ಲಿ ಸತ್ತಾಪ್ರದಾನ ಮಾಡಿದ್ದರಿಂದಲೇ ನಾನು ರಕ್ಷಿತನಾದೆ. ಇದರಲ್ಲಿ ಯಾವುದಾದರೊಂದು ವ್ಯತ್ಯಾಸವಾಗಿದ್ದರೆ ಎಲ್ಲವೂ ವ್ಯರ್ಥವಾಗುತ್ತಿತ್ತು" ಅಂತಾ ಹೇಳಿದರು. 'ಈ ಮಾತು ನಾನು ಒಪ್ಪುವುದಿಲ್ಲ, ಯಾಕೆಂದರೆ ಯಾವತ್ತೂ ಕೆಲಸವನ್ನು ನಾವೇ ಮಾಡುತ್ತಿದ್ದು, ಅದರಲ್ಲಿ ಯೋಗ್ಯ ಚಿಕಿತ್ಸೆಯು ಫಲಕಾರಿ ಯಾಗುವದು. ಇದು ಅನುಭವಸಿದ್ಧವಾದರೂ, ಇದನ್ನು ಬಿಟ್ಟು ಸುಮ್ಮ ಸುಮ್ಮನೇ ಪರಮಾತ್ಮ ಅಂತ ಕಲ್ಪಿಸಿಕೊಂಡು ಅನೇಕ ತರ್ಕ ವಿತರ್ಕಗಳನ್ನು ಮಾಡುತ್ತ ಕೂಡುವದು ಆಲಸಿಗಳಿಗೆ ಸಾಧಕವಾದ ವಿಷಯವೆಂದು ಹೇಳಬಹುದು' ಅಂತಾ ಆ ಅಧಿಕಾರಿ ಅಂದನು. 'ಒಳ್ಳೇದು,

ಪರಮಾತ್ಮ ಎನ್ನುವದು ಅನುಪಯುಕ್ತವೆಂದು ಹೇಳುವ ಚಾರ್ವಾಕ(ನಾಸ್ತಿಕ)ರುಗಳಿಗೂ ಪ್ರಸಂಗ ಬಂದಾಗ ಸ್ವಾಭಾವಿಕ ಧರ್ಮ (Nature) ಎಂಬುದೊಂದನ್ನು ಒಡಂಬಡಲೇಬೇಕಾಗುವದು. ಯಾಕೆಂದರೆ, ಎಲ್ಲಾ ಕ್ರಿಯೆಗಳು, ಗುಣಗಳು ನಮ್ಮಿಂದಲೇ ಉಂಟಾಗುವದಾದರೆ ಅಕಸ್ಮಾತ್ ಕೂಡಾ ನಮ್ಮ ಕರಚರಣಾದ್ಯವಯವಗಳು ನಮ್ಮ ಅಧೀನ ತಪ್ಪುವ ಪ್ರಸಕ್ತಿಯೇ ಇರಬಾರದು. ಮತ್ತು ಇಚ್ಛಾಕ್ಕೆ ವಿರುದ್ಧವಾಗಿ ಅಪಜಯ ನಷ್ಟಾದಿಗಳು ಉಂಟಾಗಬಾರದು. ಇವುಗಳ ಪ್ರಾಪ್ತಿ ಸಲುವಾಗಿ ನಮ್ಮ ಯತ್ನವಿಲ್ಲದಿದ್ದರೂ ಯಾದೃಚ್ಛಿಕವಾಗಿ ಒದಗುವವು. **'ಕಿಂಬಹುನಾ'** ಒಮ್ಮೊಮ್ಮೆ ತಪ್ಪಿಸಿಕೊಳ್ಳುವದಕ್ಕೂ, ಪರಿಹರಿಸಿಕೊಳ್ಳುವದಕ್ಕೂ ಸಾಧ್ಯವಾಗದಂತಾಗುವವು. ಎಂಥಹ ಮೂಢನಾದರೂ ದುಃಖಾಪೇಕ್ಷೆ ಮಾಡುವದಿಲ್ಲವಷ್ಟೆ, ಆದರೂ ಘಟಿಸುವವು. ಈ ರೀತಿ ಘಟನೆ ಮಾಡಿಕೊಡುವನೊಬ್ಬನು ನಮಗಿಂತಲೂ ಪ್ರಬಲ ವಸ್ತು ಇರಲೇಬೇಕು. ಆ ವಸ್ತುವನ್ನೇ ಪರಮಾತ್ಮನೆಂದು ಹೇಳುತ್ತೇನೆ.' ಅಂತಾ ಅನೇಕ ವಿಧ ಯುಕ್ತಿ ಪ್ರತ್ಯುಕ್ತಿಗಳಿಂದ ಪರಮಾತ್ಮನೊಬ್ಬನು ಸ್ವತಂತ್ರನಾಗಿಯೂ, ಸರ್ವೋತ್ತಮನಾಗಿಯೂ, ಸರ್ವಕರ್ತೃನಾಗಿಯೂ, ಭೋಕ್ತೃನಾಗಿಯೂ, ಅಂತರ್ಬಹಿ ವ್ಯಾಪ್ತನಾಗಿಯೂ ಇದ್ದು ಜೀವರುಗಳ ಇಚ್ಛಾಕ್ಕೆ ಪ್ರಚೋದನ ಕೊಟ್ಟು ಯೋಗ್ಯಕಾಲ, ಕರ್ಮ, ಅವಸ್ಥಾದಿಗಳನ್ನು ಮುಂದೆ ಮಾಡಿ ಅನೇಕ ಸು-ದುಷ್ಕರ್ಮಗಳನ್ನು ಮಾಡಿಸಿ. ನಂತರ ಸುಖದು:ಖಾಖ್ಯ ಕರ್ಮಫಲಗಳನ್ನುಣಿಸುವನು' ಅಂತ ಉತ್ತರ ಕೊಟ್ಟರು. ಈ ರೀತಿಯ ಸಂವಾದದಲ್ಲಿ ಇವರಲ್ಲಿ ಭಕ್ತಿಯುಂಟಾಗಿ ಇವರನ್ನು ತನ್ನಲ್ಲಿರುವದಾಗಿ ಪ್ರಾರ್ಥಿಸಿದನು. ನಾವು ಒಂದು ಸ್ಥಲದಲ್ಲಿ ವಿಶೇಷ ಇರಬಾರದು. ಇದ್ದರೆ **"ಸಂಗಾತ್ ಸಂಜಾಯತೇ ಕಾಮಃ"** ಎಂಬ ಗೀತೋಕ್ತಿಯಂತೆ ಪರಸ್ಪರ ರಾಗದ್ವೇಷಾದಿಗಳಿಗೆ ಕಾರಣವಾಗಿ ಪಾರಮಾರ್ಥಿಕ ಗತಿ ಹಾನಿಯಾಗುವದು ಅಂತ ಹೇಳಿ ಅಲ್ಲಿಂದ ಪ್ರಯಾಣ ಮಾಡಿ ಖಾಂಡವಾರಣ್ಯವಲ್ಲಿ ಸಂಚರಿಸುತ್ತ **ಇಂದೂರ**, **ಧಾರಾನಗರ** ಮಾರ್ಗವಾಗಿ **ಚಿಕ್ಕ ಉದಯಪೂರ**ಕ್ಕೆ ಬರುವಷ್ಟರಲ್ಲಿ ಸರ್ಪದಂಶದ ಘಾಯವು ಹೆಚ್ಚಾಗಿ ಪ್ರಯಾಣ ಮಾಡಲು ಪ್ರತಿಬಂಧಕವಾಯಿತು.

೮. ತುಳಸೀದಾಸ ದನ್ಯನಾದ.

ಈ ಮೂಲಕ ಅಲ್ಲಿಂದ ಒಂದು ಧರ್ಮಶಾಲೆಯಲ್ಲಿ ನರಳುತ್ತ ಮಲಗಿರಲು ತತ್ಸಮೀಪದಲ್ಲಿ ಕಿರಾಣಿ ಮತ್ತು ಮಿಠಾಯಿ ಅಂಗಡಿ ಇಟ್ಟುಕೊಂಡಿದ್ದ **ತುಲಸೀದಾಸ**ನೆಂಬ ವರ್ತಕ ಬಂದು ನೋಡಿ ಇವರಿಗೆ ಹಾಲು, ಹಣ್ಣುಗಳನ್ನು ತಂದುಕೊಟ್ಟು ಉಪಚರಿಸಿ, ಒಬ್ಬ ವೈದ್ಯನನ್ನು ಕರೆದುಕೊಂಡು ಬಂದು ಚಿಕಿತ್ಸಾ ಮಾಡ ಹೇಳಿದನು. ಆ ವೈದ್ಯನು ಮರುದಿನ ಮಲಾಮಪಟ್ಟಿ ಹಾಕಿ ಹೋಗಿ, ಮರುದಿವಸ ಬಂದು ಆ ಪಟ್ಟಿಯನ್ನು ಬಿಚ್ಚಿದ ಕೂಡಲೇ ಮೀನಗಂಡದ ಯಾವತ್ತೂ ಮಾಂಸ ಕೊಳೆತಿದ್ದರಿಂದ ಅದೆಲ್ಲವೂ ತನ್ನಷ್ಟಕ್ಕೆ ತಾನೇ ಕಳಚಿಬಿದ್ದು ಅಸ್ಥಿ ಮಾತ್ರ ಉಳಿಯಿತು. ಈ ದೊಡ್ಡ ವ್ರಣ (ಘಾಯ)ವನ್ನು ನೋಡಿ ಆ ವೈದ್ಯನು ತನ್ನಿಂದ ಅಸಾಧ್ಯವೆಂದು ಹೇಳಿ ಹೋದವನು ಎಷ್ಟು ಕರೆಯಸಿದಾಗ್ಯೂ ಬರಲಿಲ್ಲ. ಇವರಿಗೆ ಚಲನಾದಿಗಳಿಗೆ

ಅವಕಾಶವಿಲ್ಲದಂತಾಯಿತು. ಈ ಅವಸ್ಥೆಯನ್ನು ನೋಡಿ ಆ ತುಳಸೀದಾಸನು ಅಂತಃಕರಣಪೂರ್ವಕ ಇವರನ್ನು ಉಪಚರಿಸುತ್ತಿದನು. ಈ ಘಾಯಕ್ಕೆ 'ತುಲಸೀ-ಮೃತ್ತಿಕಾ' ಹಚ್ಚಿ ಕಟ್ಟುವದಾಗಿ ಹೇಳಿದ್ದರಿಂದ ಆ ವರ್ತಕನು ಅದರಂತೆ ಮಾಡಿದನು. ಈ ರೀತಿ ಒಂದು ಸಪ್ತಕ ಮಾಡಲು ಆ ಘಾಯವು ಮಾಯುವ ಲಕ್ಷಣವು ಕಂಡು ಬಂದಿತು. ಆದಾಗ್ಯೂ ಪೂರಾ ಘಾಯವು ಮಾಯುವದಕ್ಕೆ ೩/೪ ತಿಂಗಳು ಹಿಡಿಯಿತು. ಇಷ್ಟು ದಿನಗಳು ಪೋಷಣೆ ಮಾಡುತ್ತ, ಇವರಿಂದ ಅನೇಕ ತತ್ತ್ವ ಶ್ರವಣ ಮಾಡುತ್ತ ತನ್ನ ವ್ಯಾಪಾರದ ಕಡೆಗೆ ವಿಶೇಷ ಲಕ್ಷ್ಯ ಕೊಡದಿದ್ದಾಗ್ಯೂ ವಿಪುಲವಾಗಿ ಲಾಭ ಬಂದು ಶ್ರೀಮಂತನೆಂದೆನಿಸಿದನು. ಈ ರೀತಿ ಸಂಪತ್‌ಪ್ರಾಪ್ತಿಗೆ ಈ ಮಹನೀಯರ ಸೇವಾ ಪ್ರಭಾವವೆಂದು ಆ ತುಲಸೀದಾಸನು ಇವರನ್ನು ತನ್ನಲ್ಲಿಯೇ ಇರುವದಾಗಿ ಅನೇಕ ವಿಧದಿಂದ ಅಂಗಲಾಚಿ ಬೇಡಿಕೊಂಡನು. "ತಮ್ಮಾ, ನಾನು ಯಾರಲ್ಲಿಯೂ ಇರತಕ್ಕವನಲ್ಲ, ನನ್ನಿಂದ ಇತರರನ್ನು ಸ್ನೇಹ, ದ್ವೇಷ ಪಾಶಗಳಿಂದ ಬದ್ಧರನ್ನಾಗಿ ಮಾಡುವದಿಲ್ಲ. ಅಥವಾ ಇತರರಿಂದ ನಾನು ಬದ್ಧನಾಗುವದಿಲ್ಲ. ಯಾದೃಚ್ಛಿಕವಾಗಿ ಬಂದದ್ದನ್ನು ಅನುಭವಿಸುತ್ತಿರುವೆ. ಪರಮಾತ್ಮನು ನಮ್ಮ ಹೃದಯ ಗುಹಾಲಯದಲ್ಲಿಯೂ, ಬ್ರಹ್ಮಾಂಡದೊಳಹೊರಗೂ ವ್ಯಾಪ್ತನಾಗಿ, ಚೇತನಾಚೇತನಾತ್ಮಕವಾಗಿರುವ ಜಗತ್ತನ್ನು ತನ್ನ ಇಚ್ಛಾದಿಂದ ನಿಯಂತ್ರಿಸುತ್ತ ಚಲನವಲನವುಳ್ಳದ್ದಾಗಿ ಮಾಡುವನು" ಅಂತ ಹೇಳಿ ಅಲ್ಲಿಂದ **ಬರೋಡಾ** ಮಾರ್ಗವನ್ನು ಹಿಡಿದರು. ಮುಂದೆರಡು ಮೂರು ದಿವಸ ಪ್ರಯಾಣ ಮಾಡಿದ ಮೇಲೆ ಆ ಸಂಗೋರಾಮನು (ಹಿಂದಕ್ಕೆ ತಪ್ಪಿಸಿಕೊಂಡವನು) ಪುನಃ ಕೂಡಿಕೊಂಡನು. ಈ ಉಭಯರು ಕಲೆತು **ಸೂರತ ಪಟ್ಟಣದ** ಸೌಂದರ್ಯವನ್ನು ನೋಡುವ ಅಪೇಕ್ಷಾದಿಂದ ಅಲ್ಲಿಗೆ ಬಂದು ಒಂದು ಸಪ್ತಕಯಿದ್ದು, ಅಲ್ಲಿಂದ ಪ್ರಯಾಣ ಮಾಡಿ **ಬರೋಡಾಕ್ಕೆ** ಹೋದರು.

೯. ಗೋಪಾಲ ಭೂಪಾಲನಾದ. (ವಾಚಮರ್ಥೋಽನುಧಾವತಿ)

ಪೀಲಾಜಿರಾವ ಗಾಯಕವಾಡ ವಂಶಜನಾದ ಕಾಶೀರಾಯನ ಮಗನಾದ 'ಗೋಪಾಲ'ನೆಂಬ ಹದಿನಾಲ್ಕು ವರ್ಷದ ಹುಡುಗನೊಬ್ಬನು ಅಕಸ್ಮಾತ್ ಇವರಿದ್ದ ಸ್ಥಳಕ್ಕೆ ಬಂದನು. ಆ ಹುಡುಗನನ್ನು ನೋಡಿ, "ಈ ಹುಡುಗನಿಗೆ ರಾಜ್ಯ ಲಾಭವಾಗುವಂತಿದೆ." ಅಂದರು. ಈ ಬಡ ಹುಡುಗನಿಗೆ ರಾಜ್ಯ ಲಾಭವೇ? ಅಂತಾ ಸಂಗೋರಾಮ ಕೇಳಿದನು. ಅವನಿಗೆ ಕನ್ನಡ ಭಾಷಾ ಬಾರದಿದ್ದರಿಂದ "ತುಮ್ಹೀ ಕಾಯ್ ಬೋಲ್ಲಾ?" (ನೀವೇನನ್ನುತ್ತೀರಿ) ಅಂತಾ ಕೇಳಿದ. "ತುಲಾ ರಾಜ್ಯ ಪ್ರಾಪ್ತ ಹೋಣ್ಯಾಚಿ ಯೋಗ ಆಹೆ ಮ್ಹಣೂನ್ ಮಹಾರಾಜ ಬೋಲಲೆ." (ನಿನಗೆ ರಾಜ್ಯ ಪ್ರಾಪ್ತಿ ಆಗತಕ್ಕ ಯೋಗವಿದೆ ಅಂತಾ ಮಹಾರಾಜರಂದರು) ಅಂತ ಸಂಗೋರಾಮ ಅಂದನು. "ಯೋಗಿ ಮಹಾರಾಜ!, ಹೀ ಗೋಷ್ಟಮಲಾ ಆಶ್ಚರ್ಯ ವಾಟತೇ." (ಯೋಗಿ ಮಹಾರಾಜರೇ, ಈ ಮಾತು ನನಗೆ ಆಶ್ಚರ್ಯ ತೋರುತ್ತದೆ) ಅಂತ ಅಂದನು. "ಆಶ್ಚರ್ಯ ವಾಟಣ್ಯಾಲಾ ಕಾಯಮಹತ್ವ ಆಹೇ." (ಆಶ್ಚರ್ಯ ತೋರಲು ಏನೂ ಮಹತ್ವ ಆದ) ಅನ್ನುತ್ತ ನರಹರಿತೀರ್ಥರಿಗೆ ರಾಜ್ಯ ಪ್ರಾಪ್ತವಾದದ್ದನ್ನು ಹೇಳಿ ಶ್ರೀಶನಲ್ಲಿ ಅಘಟಿತಘಟನಾ

ಶಕ್ತಿ ಉಂಟು. ಹಾಗುಂದರೆ, 'ಅಸ್ಪೃಜ್ಯಾವಸ್ಥೆಯಲ್ಲಿ ಕ್ರಿಯಾಶೂನ್ಯರಾಗಿ ಬಾಹ್ಯರೂಪ ನಾಮಗಳಿಲ್ಲದೆ ಸುಪ್ತಾವಸ್ಥೆಯಲ್ಲಿ ಬಿದ್ದ ಜೀವರನ್ನು ಸೃಷ್ಟಿಮಾಡಿ, (ದಿವ್ಯ ದೇಹಗಳ ಕೊಟ್ಟು) ಇದಕ್ಕೆ ಸಹಾಯ ಭೂತವಾಗಿ ವಿಲಕ್ಷಣವಾದ ಅನೇಕ ಜಡ ಪದಾರ್ಥಗಳನ್ನು ನಿರ್ಮಿಸಿ ಅದರಲ್ಲಿ ತನ್ನ ಅಗಾಧಗುಣಗಳ ಲೇಶಭಾಗ ಒಂದೊಂದರಲ್ಲಿಟ್ಟು, ರೂಪ, ರಸ, ಗಂಧಾದಿಗಳಿಂದ ಶೋಭಿಸುವಂತೆ ಮಾಡಿ, ಸ್ವಪ್ರಯೋಜನೆಯಿಲ್ಲದೆ ಕೇವಲ ಸೃಷ್ಟರಾದ ಜೀವರುಗಳ ಉಪಭೋಗಾರ್ಥ ನಿಯಮಿಸಿರುವನು. ಆದರೆ, ಯಾವಾಗ ಯಾವ ರೀತಿ ಜಡಚೇತನಗಳ ಸಂಬಂಧ ಉಂಟಾಗಬೇಕೆಂದು ತಾನು (ಪರಮಾತ್ಮ) ಇಚ್ಛಿಸುವನೋ ಅದರಂತೆ ಆಗುವದು. ಇದರಲ್ಲಿ ಕೆಲವು **ಅಪ್ರಯತ್ನ** (ಯಾದೃಚ್ಛಿಕದಿಂದಲೂ), ಕೆಲವು ಯತ್ನದಿಂದಲೂ ಸಂಬಂಧ ಉಂಟಾಗುವವು. ನಮ್ಮ ಪ್ರಯತ್ನ ಮುಖ್ಯ ಎಂಬ ಆಶಯ ಸಂಬಂಧ ಉಂಟಾದವುಗಳಲ್ಲಿ ನಮ್ಮ ಕರ್ತೃತ್ವ ಭ್ರಾಂತಿ ಹೊಂದಿ ಶ್ರೀಶನ ಮಹಾಮಹಿಮೆಯನ್ನು ತಿಳಿದುಕೊಳ್ಳಲಾಗುವದಿಲ್ಲ' ಅಂತ ಹೇಳಿದರು. ಆದರೆ, ಇವನಿಗೆ ರಾಜ್ಯ ಲಾಭವಾಗುವದೆಂದು ಯಾವ ಆಧಾರದಿಂದ ಹೇಳುತ್ತೀರಿ? ಅಂತ ಸಂಗೋರಾಮನು ಕೇಳಿದನು. ನಾನು ಯಾವ ಬಾಹ್ಯಾಧಾರಗಳ ನೋಡಿ ಹೇಳಲಿಲ್ಲ. ನನ್ನ ಅಂತರ್ಯಾಮಿ ಪ್ರೇರಿಸಿದ್ದರಿಂದ ಹೇಳಿದ್ದಲ್ಲದೆ ಬೇರೆ ಇಲ್ಲ ಅಂತಾ ಅಂದರು. ಆ ಮೇಲೆ ಸಂಗೋರಾಮನು ಆ ಗೋಪಾಲನನ್ನು ಕುರಿತು, "ತುಲಾ ರಾಜ್ಯ ಪ್ರಾಪ್ತಝಾಲೇತಕ ತೂ ಕಸಾ ರಾಹಣಾರ್" (ನಿನಗೆ ರಾಜ್ಯ ಪ್ರಾಪ್ತವಾದರೆ ನೀನು ಹ್ಯಾಂಗೆ ಇರುತ್ತೀ ಅಂತಾ ಪ್ರಶ್ನೆ ಮಾಡಿದನು.) "ಮೀ ಸಾಧೀ ರಾಹೂನ್ ಸಾಧು ಸತ್ಪುರುಷಾಂಚೆ ಸೇವಾ ಕರೀತ ರಾಹಿನ್, ಆಣಿ ಹ್ಯಾಮಹಾರಾಜಾನಾ ಮಾಝ್ಯಾಗುರುಸಮಝೂನ್ ಮಾಝ್ಯಾ ಕಡೆ ಠೇವೂನ್ ಘೇಯಿನ್" ("ನಾನು ಸಾದಾ (Simple) ಇದ್ದು ಸಾಧು ಸತ್ಪುರುಷರ ಸೇವಾ ಮಾಡುತ್ತ ಇರುವೆನು, ಮತ್ತು ಈ ಮಹಾರಾಜರನ್ನು ನನ್ನ ಗುರುಗಳೆಂದು ಭಾವಿಸಿ ನನ್ನಲ್ಲಿಯೇ ಇಟ್ಟುಕೊಂಡುಬಿಡುವೆನು ಅಂತ ಉತ್ತರ ಕೊಟ್ಟನು.) ಈ ಮಾತಿನಿಂದ ಸಂಗೋರಾಮನಿಗೆ ಆನಂದವಾಯಿತು.

ಇವರು (ಚರಿತ್ರೆ ನಾಯಕರು) ಮಾತ್ರ ನಾನು ಯಾರಲ್ಲಿಯಾದರೂ ಇರುವವನೇ ಅಂತ ಮನಸ್ಸಿನಲ್ಲಿ ಅಂದುಕೊಂಡು ಮುಸಿಮುಸಿ ನಕ್ಕರು. ಈ ಸಂದರ್ಭದಲ್ಲಿ ಬರೋಡಾ ಮಹಾರಾಜನಾದ ಮಲ್ಹಾರರಾಯನ ದುರ್ವರ್ತನೆಯ ಮೂಲಕ ಬ್ರಿಟಿಶ್ ಸರಕಾರದವರು ಪದಚ್ಯುತನನ್ನಾಗಿ ಮಾಡಿ ಹೋಳಕರ ಸಂಸ್ಥಾನದಲ್ಲಿ ದಿವಾನರಾಗಿದ್ದ ಸರ್ ಟೀ. ಮಾಧವರಾಯನನ್ನು ಇಲ್ಲಿಯ (ಬರೋಡಾ) ದಿವಾನರನ್ನಾಗಿ ನಿಯಮಿಸಿ ಸಿಂಹಾಸನಕ್ಕೆ ಅರ್ಹನಾದ ಗಾಯಕವಾಡ ಮನೆತನದ ಒಬ್ಬ ಹುಡುಗನನ್ನು ಈ ಮಲ್ಹಾರರಾಯನ ಅತ್ತಿಗೆಯಾದ ಜಮುನಾಬಾಯಿಗೆ ದತ್ತುಕ ಮಾಡುವದೆಂದು ಗೊತ್ತಮಾಡಿ, ಆ ವಂಶದ ನಾಲ್ಕು ಹುಡುಗರ ಪೈಕಿ ಈ ಗೋಪಾಲನೇ ಸರ್ವ ರೀತಿಯಿಂದ ಯೋಗ್ಯನಾದವನೆಂದು ತಿಳಿದು, ಈ ಹುಡುಗನನ್ನು ಬ್ರಿಟಿಶ್ ಸರಕಾರದವರು ಅಂಗೀಕರಿಸಿ, ಜಮುನಾಬಾಯಿಯ ದತ್ತುಕ ಪುತ್ರನಾಗಿ ಮಾಡುವದಾಗಿ ನಿರ್ಣಯವಾಗಲು, ಆಗ ಇವನಿಗೋಸ್ಕರ ರಾಜಭಟರು ಅನ್ವೇಷಣೆ ಮಾಡುತ್ತ ಇವರಿದ್ದ ಸ್ಥಳಕ್ಕೆ ಬಂದು ನೋಡಿ, ಇವನು ಅಲ್ಲಿದ್ದದ್ದನ್ನು ಮೇಲಾಧಿಕಾರಿಗಳಿಗೆ ತಿಳಿಸಿದರು. ತಕ್ಷಣದಲ್ಲಿಯೇ

ರಾಜ ವೈಭವದಿಂದ ದಿವಾನ ಮಾಧವರಾಯರು ಮತ್ತು ರೆಸಿಡೆಂಟರು ಬಂದು ಈ ಗೋಪಾಲನಿಗೆ ಹಸ್ತಾಂದೋಲನ ಕೊಟ್ಟು, ಅವನ ಮೂಲ ವಸ್ತ್ರಗಳನ್ನು ಬಿಡಿಸಿ (ಈ ವಸ್ತ್ರಗಳನ್ನು ಸರ್ ಟಿ. ಮಾಧವರಾಯರು ಒಂದು ಪೆಟ್ಟಿಗೆಯಲ್ಲಿ ಭದ್ರವಾಗಿ (Seal) ಮಾಡಿಟ್ಟಿದ್ದು ಇನ್ನೂ ಅವರ ಮನೆಯಲ್ಲಿ ಇರುವದಾಗಿ ವಾರ್ತೆ ಇದೆ.) ರಾಜ ಯೋಗ್ಯ ವಸ್ತ್ರಾಭರಣಗಳಿಂದ ಅಲಂಕಾರ ಮಾಡಿ, ರತ್ನ ಖಚಿತ ಕುರ್ಚಿಯ ಮೇಲೆ ಕುಳ್ಳಿರಿಸಿ, ರಾಜಯೋಗ್ಯವಾದ ವಂದನೆಗಳನ್ನರ್ಪಿಸಿದರು. ಆಗ ಗೋಪಾಲನಿಗೆ ಆನಂದವು ಮಿತಿಮೀರಿ ಆನಂದ ಭಾಷ್ಪಗಳುದುರುತ್ತಿದವು. ರಥದಲ್ಲಿ ಗೋಪಾಲನನ್ನು ಕೂಡಿಸಿದರು. ಉಚ್ಚ ಸ್ವರದಿಂದ ಗುರುಮಹಾರಾಜ ಗುರುಮಹಾರಾಜರೇ ಬರಬೇಕು ಅಂತ ಕರೆದನು. ಇವರನ್ನು ತನ್ನ ಜೊತೆಯಲ್ಲಿ ಕೂಡಿಸಿಕೊಳ್ಳುವ ಇಚ್ಛಾದಿಂದ ಗದ್ಗದ ಕಂಠದಿಂದ ಕರೆದನು. ಆಗ ದಿವಾನರು "ತುಮ್ಚಾ ಬರೋಬರ್ ಕೋಣ ಬಸೂನಯೇ, ತುಮಚೀ ಇಚ್ಛಾ ಅಸಲೇತರ ದುಸರ್ಯಾರಥಾತ್ ಘೇವೂನ್ ಜಾವಾ." (ನಿಮ್ಮ ಸರಿ ಯಾರೂ ಕೂಡತಕ್ಕದ್ದಲ್ಲ. ನಿಮ್ಮ ಇಚ್ಛಾ ಇದ್ದರೆ, ಎರಡನೇ ರಥದಲ್ಲಿ ಕರೆದುಕೊಂಡು ಹೋಗುವದು.) ಅಂತ ದಿವಾನರೆಂದರು. "ತಸಚ್ ಕರಾ." (ಹಾಂಗೇ ಮಾಡಿರಿ) ಅಂತ ಗೋಪಾಲನು ಹೇಳಿದನು. ಕೂಡಲೇ ಬೇರೆ ರಥವನ್ನು ತರಿಸಿ ಇವರನ್ನು ಸಂಗೋರಾಮನ ಸಮೇತ ವೈಭವದಿಂದ ಅರಮನೆಗೆ ಕರೆದುಕೊಂಡು ಹೋದನು. ಆ ನಂತರ ವೆಂಕಟದಾಸರೆಂಬ ಮಹನೀಯರನ್ನು ಅಲ್ಲಿ ಕಂಡರು. (ವಾಚಕರ ಅವಗಾಹನೆಗಾಗಿ ಸ್ವಲ್ಪ ಪರಿಚಯ ಮಾಡಿಕೊಡುವೆವು.)

೧೦. ವೆಂಕೂಬಾಯಿ ವೆಂಕಟದಾಸಾರಾದರು

ತಾಮ್ರಪರ್ಣಿ ನದೀ ತೀರದ ತಿರುವಿನಲ್ಲಿ (ತಿರುನವ್ವೇಲಿ)ಯಲ್ಲಿ ಇದ್ದ ಒಬ್ಬ ಆಚಾರ್ಯರು ತಮಗೆ ಮಕ್ಕಳಿಲ್ಲದ್ದರಿಂದ ಸಂತಾನಾಪೇಕ್ಷಿಗಳಾಗಿ ಆ ದಂಪತಿಗಳು ತಿರುಪತಿಗೆ ಬಂದು 'ಗಂಡು ಹುಟ್ಟಿದರೆ ನಿನ್ನ ದಾಸನನ್ನಾಗಿ ಮಾಡುವೆವು. ಹೆಣ್ಣು ಹುಟ್ಟಿದರೆ ನಿನಗೇ ಲಗ್ನ ಮಾಡಿಕೊಡುವೆವು' ಎಂಬುದಾಗಿ ಪ್ರಾರ್ಥನಾ ಮಾಡಿಕೊಂಡು ಒಂದು ವರುಷ 'ಪಯೋವ್ರತ'ದಿಂದ ಸೇವಾ ಮಾಡಿದರು. ತತ್‌ಪ್ರಭಾವದಿಂದ ಹೆಣ್ಣು ಕೂಸು ಹುಟ್ಟಿತು. ಈ ಕೂಸಿಗೆ '**ವೆಂಕೋಬಾಯಿ**' ಎಂದು ಹೆಸರಿಟ್ಟರು. ಅನಂತರ ತಮ್ಮ ಗ್ರಾಮಕ್ಕೆ ಹೋಗಿ ಆನಂದದಿಂದ ಇರಲು ಆ ಹುಡುಗಿಯು ೮ ವರ್ಷ ವಯಸ್ಸಿನವಳಾದಳು. ಆಗಿನ ಕಾಲನಿಯಮಕ್ಕನುಸರಿಸಿ ಲಗ್ನ ಮಾಡುವ ಇಚ್ಛಾದಿಂದ ವರಾನ್ವೇಷಣಪರರಾಗಲು, "ಹೆಣ್ಣು ಹುಟ್ಟಿದರೆ, ನಿನಗೆ ಲಗ್ನ ಮಾಡಿಕೊಡುವೆವು" ಅಂತ ಪ್ರಾರ್ಥನಾ ಮಾಡಿಕೊಂಡಿದ್ದೀರಿ, ಆ ಪ್ರಕಾರ ನನಗೆ ಲಗ್ನ ಮಾಡಿಕೊಡಿರಿ" ಅಂತ ಆಗಾಗ ಸ್ವಪ್ನದಲ್ಲಿ ಶ್ರೀ ವೆಂಕಟೇಶ್ವರನು ಆ ಬ್ರಾಹ್ಮಣರಿಗೆ ಹೇಳುತ್ತಿದ್ದನು. ಆದರೆ ಅಶರೀರವಾದ ಅಥವಾ ಶಿಲಾ ಪ್ರತಿಮಾದಂತೆ ಕಾಣುತ್ತಿರುವ ಈ ವೆಂಕಟೇಶನಿಗೆ ಹ್ಯಾಂಗೆ ಲಗ್ನಮಾಡಿಕೊಡಬೇಕೆನ್ನುವುದು ತೋಚದೆ ಯೋಚಿಸುತ್ತಾ ಯೋಗ್ಯ ವರಾನ್ವೇಷಣಾ ಪರರಾದರು. ಆಗ ಯೋಗ್ಯ ವರಾ ದೊರೆಯದೆ ಬೇಸತ್ತು ಒಬ್ಬ ಹುಡುಗನನ್ನು ನೋಡಿ ಲಗ್ನ ಮಾಡಿಕೊಡುವದು

ನಿಶ್ಚಯ ಮಾಡಿದರು. ಆಗ ವೆಂಕಟೇಶನು ಸ್ವಪ್ನಮುಖೇನ ಪೂರ್ವದಂತೆ ತಿಳಿಸಿದನು. ಆದಾಗ್ಯೂ ಕೇಳದ್ದರಿಂದ ಲಗ್ನಕ್ಕಾಗಿ ಬರುವಷ್ಟರಲ್ಲಿ ಆ ಹುಡುಗನಿಗೆ ವಿಷಮಜ್ವರ ಪ್ರಾಪ್ತವಾಗಿ ಮರಣ ಹೊಂದಿದನು. ತದನಂತರ ಮತ್ತೊಂದು ವರಾ ಗೊತ್ತು ಮಾಡಲು ಆ ಹುಡುಗನಿಗೂ ಸನ್ನಿಪಾತಕ ಜ್ವರಾ ಉಂಟಾಗಿ ಸತ್ತು ಹೋದನು. ಈ ರೀತಿ ಆಗೋಣದರಿಂದ ಈ ಹುಡುಗಿಯನ್ನು, "ಯಾರು ಮಾಡಿಕೊಳ್ಳುವೆನ್ನುವರೋ ಅವರು ಸಾಯುತ್ತಾರೆ" ಎಂದು ಜನರಲ್ಲಿ ಸುದ್ದಿ ಹರಡಿತು. ಆಮೇಲೆ ಈ ಕನ್ಯಾವನ್ನು ಯಾರೂ ಲಗ್ನಮಾಡಿಕೊಳ್ಳಲು ಒಪ್ಪದಾದರು. ಇಷ್ಟೆಂಬುವಾಗ್ಗೆ ೧೨ ವರ್ಷದ ವಯಸ್ಕಳಾದಳು. ಈಕೆಯ ಲಗ್ನ ವಿಷಯದಲ್ಲಿ ಮುಂದೋರದೆ ತಿರುಪತಿಗೆ ಬಂದು, ಸ್ವಾಮಿ! ನಿನಗೆ ಹ್ಯಾಂಗೆ ಲಗ್ನ ಮಾಡಿಕೊಡೋಣವೆಂಬುದನ್ನು ತಿಳಿಸಿದರೆ ಅದರಂತೆ ಮಾಡಿಕೊಡುವೆವೆಂಬುದಾಗಿ ಪ್ರಾರ್ಥನೆ ಮಾಡಿಕೊಂಡರು. ಆಗ ಒಬ್ಬ ಹುಡುಗನ ಮೇಲೆ ಶ್ರೀ ವೆಂಕಟೇಶನು ಆವಿಷ್ಟನಾಗಿ "ಈಕೆಯು ನನ್ನ ಪತ್ನಿ, ಈಕೆಯನ್ನು ವಿಧ್ಯುಕ್ತ ರೀತ್ಯಾ ಧ್ವಜಸ್ತಂಭಕ್ಕೆ ಲಗ್ನಮಾಡಿ ಕೊಡಿರೆಂದು ಹೇಳಿದನು." ತತ್‌ಪ್ರಕಾರ ಲಗ್ನಮಾಡಿ ನಂತರ ತಮ್ಮ ಗ್ರಾಮಕ್ಕೆ ತೆರಳಿದರು. ಆಮೇಲೆ ಕಾಲ ಧರ್ಮಕ್ಕನುಸರಿಸಿ ಋತುಮತಿಯಾದಳು. ಮರ್ತ್ಯಲೋಕ ಧರ್ಮಕ್ಕೆ (ಗರ್ಭಾದಾನ) ಮುಂದೋರದೆ ಪುನಃ ತಿರುಪತಿಗೆ ಬರಲು, "ಈಕೆಯನ್ನು ಹಿಂದಿಟ್ಟುಕೊಂಡು ಸಕಲ ವೇದಾಂತ ಗ್ರಂಥಗಳುಪದೇಶ ಮಾಡುತ್ತಾ ತೀರ್ಥ ಕ್ಷೇತ್ರಾಟನ ಮಾಡಿರೆಂದು" ಆಜ್ಞಾಪಿಸಿದನು. ತದಾರಭ್ಯ ಅವರನ್ನು 'ವೆಂಕಟದಾಸರೆ'ಂದು ಕರೆಯಲಾರಂಭಿಸಿದರು. ಆಜ್ಞಾಪ್ರಕಾರ ಸಂಚರಿಸುತ್ತಿರಲು ೫/೬ ವರ್ಷದಲ್ಲಿ ತಾಯಿಯು, ಮುಂದೆ ಮೂರು ವರ್ಷದಲ್ಲಿ ತಂದೆಯು ಪರಲೋಕವನ್ನೈದರು. ಈ ವೆಂಕಟದಾಸರ ಸ್ವರೂಪ ಯೋಗ್ಯತೆಯು ದೊಡ್ಡದಿದ್ದುದರಿಂದ ಶಮದಮಾದಿ ಗುಣಸಂಪನ್ನರಾಗಿ, ಜ್ಞಾನ ಭಕ್ತಿ ವೈರಾಗ್ಯಗಳಿಗೆ ಆಶ್ರಯಭೂತರಾಗಿ ಶ್ರೀಶನ ಸಂಕಲ್ಪಾನುಸಾರ ಜಗತ್ತಿನ ಕೆಲವು ಯೋಗ್ಯ ಜೀವರುಗಳ ಮುಕ್ತಿಗೆ ಮಾರ್ಗದರ್ಶಿಗಳಾಗಿ, ಆಗಾಗ ಅಗಾಧವಾದ ಆತ್ಯಾಶ್ಚರ್ಯಕರವಾದ ತಮ್ಮ ಮಹಿಮೆಯನ್ನು ಪ್ರಕಟಿಸುತ್ತಿದ್ದರು. ಅವರಿಗೆ ಬರೋಡಾ, ಇಂದೂರು, ಗ್ವಾಲ್ಹೇರ ಮೊದಲಾದ ಹಿಂದೂ ಮಹಾರಾಜರು, ರಾಣಿಯರು, ಎಷ್ಟೋ ಶ್ರೀಮಂತರು, ಬಡಜನರು ಅವರ ಶಿಷ್ಯರಾಗಿ, ಅವರ ಆಜ್ಞಾಬದ್ಧರಾಗಿ ಅವರನ್ನು ಸೇವಿಸುತ್ತಿದ್ದರು. ಆದಾಗ್ಯೂ ಅವರುಗಳು ಮಾಡುವ ಸೇವೆಗಳಿಂದ ಸಂತುಷ್ಟರಾಗಿ ಸ್ನೇಹಪಾಶದಿಂದ ಬದ್ಧರಾಗದೆ ಆತ್ಮಸಂಸ್ಥ ಮನಸ್ಕರಾಗಿ (ಪರಮಾತ್ಮನ ಧ್ಯಾನಪರರಾಗಿ) ಇರುತ್ತಿದ್ದರು ಮತ್ತು ಸೇವಾಸಕ್ತರ ಯೋಗ್ಯತಾನುಗುಣವಾಗಿ ತತ್ವಗಳನ್ನು ಬೋಧಿಸುತ್ತಲೂ, ಆಗಾಗ ಭಜನೆಯನ್ನು ಮಾಡುತ್ತಲೂ, ಮಾಡಿಸುತ್ತಲೂ ಕಾವಿ ಬಟ್ಟೆಯನ್ನು (ಕಪನಿಯನ್ನು) ಅಥವಾ ಧಾಬಳಿಯನ್ನು ಧರಿಸಿ ಹಣೆಯ ಮೇಲೆ ದೊಡ್ಡದಾಗಿ ಊರ್ಧ್ವಪುಂಡ್ರವನ್ನು ಧಾರಣ ಮಾಡಿ ಸಂಚರಿಸುತ್ತಿದ್ದರು. ಆಗಾಗ ವ್ಯಕ್ತಪಡಿಸಿದ ಅನೇಕ ಮಹಿಮೆಗಳಲ್ಲಿ ೩/೪ ಇವರು (ಈ ಚರಿತ್ರ ನಾಯಕರು) ನೋಡಿದ್ದನ್ನು ಇಲ್ಲಿ ವಿವರಿಸಲ್ಪಡುತ್ತಿದೆ.

೧೧. ವೆಂಕಟದಾಸರ ಅಮಾನುಷ ವೈಭವ.

ಒಂದು ದಿನಾ ತಮ್ಮ ಪತಿಯಾದ ಕೃಷ್ಣಗೆ (ವೆಂಕಟೇಶನಿಗೆ) ಭೋಜನ ಮಾಡಿಸುವೆನೆಂದು ಹೇಳಿ ಒಂದು ಸಹಸ್ರ ಭೋಜನಕ್ಕೆ ಸರಿಹೋಗುವಷ್ಟು ಪಂಚಭಕ್ಷ್ಯ ಪರಮಾನ್ನಾದಿಗಳನ್ನು ಮಾಡಿಸಿ, ಅಡುಗೆ ಆದ ನಂತರ ಅದರ ಸುತ್ತಲೂ ಪರದೆಯನ್ನು ಕಟ್ಟಿಸಿ, ತಾವು ಹೊರಗೆ ನಿಂತುಗೊಂಡು ವಿವಿಧ ರಾಗಗಳಿಂದ ದ್ವಾದಶ ಸ್ತೋತ್ರವನ್ನು ಪಠಣ ಮಾಡುತ್ತ, ಮಂಗಳಾರ್ತಿಯನ್ನು ಮಾಡಿ ಪರದೆಯನ್ನು ತೆಗಿಸಿ ನೋಡಲಾಗಿ ಒಳಗೆ ಇಟ್ಟಿದ್ದ ಯಾವದ್ ಭೋಜನ ಪದಾರ್ಥಗಳು ಇಲ್ಲದಂತಾಗಿದ್ದವು. ಇನ್ನೊಂದು ದಿನ, ಎಲಾ ಶ್ರೀನಿವಾಸ! (ಈ ಚರಿತ್ರ ನಾಯಕರು), ನಾವು ಶ್ರೀಪತಿಯ ನಿಯತ ಪತ್ನಿಯರಾದ ಜಾಂಬುವತೀ ಎಂಬುದು ನಿನಗೆ ನಿಶ್ಚಯ ಮಾಡಿಕೊಡುತ್ತೇವೆ ನೋಡು ಎಂದು ಒಬ್ಬ ಕ್ಷೌರಿಕನನ್ನು ಕರೆಸಿ ಕ್ಷೌರವನ್ನು ಮಾಡಿಸಿಕೊಂಡು ಸ್ನಾನವನ್ನು ಮಾಡಿ ಆಹ್ನೀಕ (ಧ್ಯಾನ)ವನ್ನು ಮುಗಿಸಿಕೊಂಡು ಏಳುವಷ್ಟರಲ್ಲಿ ಪೂರ್ವದಂತೆ ತಲೆ ತುಂಬಾ ಕೂದಲು ಬೆಳೆದಿದ್ದವು. ಮತ್ತೊಂದು ದಿನ "ಡಾಕೂರ" ಎಂಬ ಕ್ಷೇತ್ರವಾಸಿಯಾದ ಭಜನಾಬಾಯಿ ಎಂಬ ಶಿಷ್ಯಳಿಗೆ ಒಂದು ದೊಡ್ಡಕಲ್ಲು ಮತ್ತು ಒಂದು ಸಣ್ಣಕಲ್ಲು ತೆಗೆದುಕೊಟ್ಟು ಅದರಲ್ಲಿ ದೊಡ್ಡದು ಆಕಳೆಂತಲೂ, ಚಿಕ್ಕದು ಕರುವೆಂತಲೂ ಹೇಳಿ, 'ನಿಜವಾದ ಆಕಳು ಕರುವನ್ನು ಪೋಷಣೆ ಮಾಡುವಂತೆ ಮಾಡುತ್ತಿರು. ಯಾವಾಗ ಇವುಗಳಿಂದ 'ಅಂಬಾ' ಶಬ್ದವನ್ನು ಕೇಳುವಿಯೋ ಆಗ ನಿನಗೆ ಅಪರೋಕ್ಷ ಜ್ಞಾನವಾಗುವದು' ಅಂತ ಹೇಳಿಕೊಟ್ಟರು. ಆ ಭಜನಾಬಾಯಿಯು ಮಹದಾಜ್ಞೆಯಿಂದ ಭಕ್ತಿಪೂರ್ವಕ ಆ ಎರಡೂ ಕಲ್ಲುಗಳನ್ನು ತನ್ನ ಊರಿಗೆ ತೆಗೆದುಕೊಂಡು ಹೋಗಿ, ಆಜ್ಞಾದಂತೆ ಆ ಕಲ್ಲುಗಳ ಮುಂದೆ ಹುಲ್ಲು ಹಾಕುವದು, ನೀರು ಇಡುವದು ಇತ್ಯಾದಿ (ಹುಡುಗರು ಆಟದಂತೆ) ಕಾರ್ಯ ಮಾಡುತ್ತಿದ್ದಳು. ಒಂದು ದಿನ ರಾತ್ರಿ ಅಕಸ್ಮಾತ್ 'ಅಂಬಾ'ರವವು ಕೇಳಿಸಿತು. ಗುರುಗಳು ಹೇಳಿದ ಪ್ರಕಾರ ಜ್ಞಾನೋದಯವೂ ಆಯಿತು. ಇತ್ಯಾದಿ ಮಹಾಮಹಿಮೆಗಳನ್ನು ಕೇಳಿದೆ ಹಾಗು ನೋಡಿದೆ. ವಿಜ್ಞಾನಿಗಳ ಅನ್ವೇಷಣಾರ್ಥವೇ ಹೊರಟಿದ್ದು, ದೈವಯೋಗದಿಂದ ಲಭ್ಯರಾದ ಈ ಮಹಿಮೋಪೇತರಿಂದ ನನ್ನ ಹೃತ್ತಾಪ ಶಮನವಾಗಿ ಇಷ್ಟಾರ್ಥ ನೆರವೇರಲು ಅಡ್ಡಿಯಿಲ್ಲವೆಂದು ಕೊಂಡು ಅವರನ್ನು (ವೆಂಕಟದಾಸರನ್ನು) ಕುರಿತು, ನಾನು ಅತ್ಯರ್ಥ ಪ್ರಸಾದಾರ್ಥಿಯಾಗಿ ಸ್ವಯೋಗ್ಯ ಗುರುಗಳ ಪ್ರಾಪ್ತಿಗಾಗಿ ಅವರ (ವಿಜ್ಞಾನಿಗಳ) ಅನ್ವೇಷಣಾರ್ಥವೇ ಹೊರಟಿದ್ದೇನೆ. ದೈವ ಯೋಗದಿಂದ ತಾವು ನನಗೆ ಲಭ್ಯವಾಗಿದ್ದೀರಿ. ನನ್ನ ಹೃತ್ತಾಪ ಶಮನ ಮಾಡುವ ಸಾಮರ್ಥ್ಯವೂ ತಮಗಿದೆ. ಪರಮಾನುಗ್ರಹ ಮಾಡಬೇಕೆಂದು, ಗಟ್ಟಿಯಾಗಿ ಅವರ ಪಾದಗಳನ್ನು ಹಿಡಿದುಕೊಂಡು ಅಭಯವನ್ನೀಯುವವರೆಗೆ ಬಿಡುವದಿಲ್ಲೆಂದರು. ಅವರಾದರೂ ಕೃಪಾಸಮುದ್ರರಾದುದರಿಂದ ಅಭಯವನ್ನೀಯುತ್ತ 'ಮಗೂ! ನಾವು ನಿನಗೆ ಗುರುಗಳಾಗುವ ಹಾಂಗಿಲ್ಲ. ನಿನಗೆ ಗುರುಗಳಾಗುವವರು ಪ್ರತ್ಯೇಕ ಇದ್ದಾರೆ. ಅವರಿಂದ ನಿನ್ನ ಮನೋಭೀಷ್ಟ ಸಿದ್ಧಿಯಾಗುವದು' ಅಂತ ಹೇಳಿ ಎಬ್ಬಿಸಿ ಪುತ್ರತ್ವೇನ ಪ್ರೀತಿ ಮಾಡುವವರಾದರು. ಮುಂದೆ ಈ ಉಭಯರು ಅಹಮ್ಮದಾಬಾದ, ರಾಜಕೋಟ, ಜಾಮನಗರ ಮಾರ್ಗವಾಗಿ ದ್ವಾರಕಾಕ್ಕೆ ಹೋದರು. ಅಲ್ಲಿ

ಸಮುದ್ರ ತೀರದಲ್ಲಿಯ ನಿರ್ಜನ ಪ್ರದೇಶವಾದ ಒಂದು ಮನೆಯಲ್ಲಿ ಇಳಿದುಕೊಂಡು ಆ ದಿನ ಸಂಧ್ಯಾ ಆಹ್ನೀಕಾದಿಗಳನ್ನು ತೀರಿಸಿಕೊಂಡು ಬೆಳದಿಂಗಳಲ್ಲಿ ಮಾಳಿಗೆಯ ಮೇಲೆ ಕುಳಿತುಕೊಂಡು ಧ್ಯಾನಾಸಕ್ತರಾಗಿರಲು ಸುಮಾರು ರಾತ್ರಿ ೧ ಘಂಟೆಯಲ್ಲಿ ಒಂದು ದೊಡ್ಡ ಶರೀರವು ಮಾಳಿಗೆಯ ಮೇಲೆ ಬರುವದು ದೃಗ್ಗೋಚರವಾಗಿ ಸಮೀಪಕ್ಕೆ ಬಂದು ಇವರನ್ನು (ಈ ಚರಿತ್ರ ನಾಯಕರನ್ನು) ಎತ್ತಿಕೊಂಡು ಹೋಗುವಂತೆ ಮೇಲಕ್ಕೆತ್ತಿತು. ಆಗ "ಜೈ ನರಸಿಂಗಾ" ಎಂದು ಗಟ್ಟಿಯಾಗಿ ಕೂಗಲು ಈ ಧ್ವನಿಯಿಂದ ಧ್ಯಾನಾಸಕ್ತರಾಗಿದ್ದ ವೆಂಕಟದಾಸರು ಎಚ್ಚತ್ತು, ಕಟಾಕ್ಷ ಹಾಕಿದ್ದರಿಂದ ಆ ದೊಡ್ಡ ಶರೀರವು ಇವರನ್ನು ಬಿಟ್ಟು ಓಡಿಹೋಯಿತು. ಮುಂದೆ ಅರ್ಧ ಗಂಟೆಯ ಮೇಲೆ, "ನೋಡಿದೆಯಾ ನಿನ್ನನ್ನು ಎತ್ತಿಕೊಂಡು ಹೋಗಲು ಬಂದಿದ್ದ ಬ್ರಹ್ಮರಾಕ್ಷಸವು ತನ್ನ ಪರಿವಾರದೊಡನೆ ಹೊರಗೆ ನಿಂತುಕೊಂಡು ಈ ಸ್ಥಳ ತಮಗೆ ತಪ್ಪಿಹೋಯಿತೆಂದು ಅಳುತ್ತಿರುವದು" ಅಂತಾ ಅವುಗಳು ಅಳುತ್ತಿರುವದನ್ನು ತೋರಿಸಿದರು. ಹಾಗಾದರೆ ನಾವು ಈ ಸ್ಥಳವನ್ನು ಬಿಟ್ಟುಹೋಗೋಣವೆಂದರು. 'ಇದ್ದರೇನಾಯಿತು? ಒಂದು ವಾರದವರೆಗೂ ಅವುಗಳು ಎಲ್ಲಿಗಾದರೂ ಹೋಗಲಿ, ನಾವು ಇಲ್ಲಿಂದ ಹೋದ ಮೇಲೆ ಅವುಗಳು ಪುನಃ ಬರಲಿ. ಊರಲ್ಲಿ ನಮಗೆ ನಿರ್ಜನ ಪ್ರದೇಶ ಸಿಕ್ಕುವದಿಲ್ಲ. ಈಗ ನಿನಗೆ ಗಾಬರಿಯಾಗಬಹುದು. ಆದ್ದರಿಂದ ಈ ರೀತಿ ಅನ್ನುತ್ತಿ. ಇನ್ನು ಮೇಲೆ ನಾವು ಇಲ್ಲಿರುವರೆಗೂ ಅವುಗಳು ಈ ಸ್ಥಳ ಸಮೀಪಕ್ಕೆ ಸಹ ಬಾರದಂತೆ ಕಟ್ಟಪ್ಪಣೆ ಮಾಡಿದ್ದೇವೆ. ಗಾಬರಿಯಾಗುವ ಕಾರಣವಿಲ್ಲ' ಎಂದು ಧೈರ್ಯ ಪ್ರದಾನ ಮಾಡಿದರು. ಆಮೇಲೆ ಒಂದು ವಾರದ ನಂತರ ಗೋಪಿಕಾ ಸರೋವರ, ಬೇಟ ದ್ವಾರಕಾ ನೋಡಿಕೊಂಡು ಸುಧಾಮಪುರಿ, ಪೋರಬಂದರು, ಜುನಾಗಡದ ಗಿರಿನಾರ ಪರ್ವತದ ಪ್ರಭಾಸ ಕ್ಷೇತ್ರ, ವೇರಾವಳವರೆಗೂ ಜೊತೆಯಾಗಿದ್ದು ಆ ಮೇಲೆ ವೆಂಕಟದಾಸರು ಮಾತ್ರ ಹೋದ ದಾರಿಯಿಂದ ಹಿಂತೆರಳಿದರು.

೧೨. ಅದ್ವೈತಸಿದ್ಧಿ ಕೇಳಿದರೂ ದ್ವೈತಮತಿ ಮಾಸಲಿಲ್ಲ.

ನಂತರ ಶ್ರೀಮುತ್ತಿಗಿ ಆಚಾರ್ಯರು ಕಚ್ಛ ಭೋಜ, ಕರಾಚಿ, ಸಿಂಧ್ ಹೈದ್ರಾಬಾದ ಮೊದಲಾದ ಸಿಂಧ್‌ಪಂಜಾಬ ಪ್ರದೇಶಗಳಲ್ಲಿ ಸಂಚರಿಸುತ್ತ ಸಪ್ತ ಮಹಾನದಿಗಳಲ್ಲಿ ಗಣ್ಯವಾದ ಸಿಂಧೂ ನದಿಯಲ್ಲಿ ಸ್ನಾನಾಹ್ನಿಕ ತಥಾ ವಿಧ್ಯುಕ್ತ ಪೈತೃಕ ಕಾರ್ಯಗಳನ್ನು ಮಾಡುವವರಾಗಿ ಆ ಪ್ರದೇಶದ ಸಾರವತ್ತಾದ ಭೂ ಪ್ರದೇಶವನ್ನು, ಪಟ್ಟಣಗಳನ್ನು, ಅಲ್ಲಿಯ ಜನರ ಗುಣಶೀಲಗಳನ್ನು ನೋಡಿ ಪರಮಾತ್ಮನ ವೈಚಿತ್ರ್ಯವನ್ನು ಧ್ಯಾನ ವಿಷಯವಾಗಿ ಮಾಡುತ್ತ ಭಾವನಗರ ಮಾರ್ಗವಾಗಿ ಪುನಃ ಅಹಮ್ಮದಾಬಾದಕ್ಕೆ ಬಂದು ಅಲ್ಲಿಂದ ಸಿದ್ಧಪೂರ (ಮಾತೃಗಯಾ)ಕ್ಕೆ ಹೋದರು. ಅಲ್ಲಿ 'ಕಪಿಲನಾಮಕ' ಪರಮಾತ್ಮನು ದೇವಹೂತಿಗೆ ಉಪದೇಶ ಮಾಡಿದ ಮೇಲೆ ಜಲರೂಪ ತಾಳಿದ ಸರೋವರದಲ್ಲಿಯೂ, ಕಪಿಲ ಸರೋವರದಲ್ಲಿಯೂ, ಸ್ನಾನಾಹ್ನಿಕಾದಿಗಳನ್ನು ತೀರಿಸಿಕೊಂಡು ಕಪಿಲ ನಾಮಕ ಪರಮಾತ್ಮನ ಸಂದರ್ಶನ ತೆಗೆದುಕೊಂಡು "ತಮ್ಮ ಅನ್ನತಾಯಿಗೋಸ್ಕರ" ಪಿಂಡಪ್ರದಾನವನ್ನು ಮಾಡಿ, ಮರುದಿನ ಸರಸ್ವತೀ ನದಿಗೆ ಬಂದು

ಅಲ್ಲಿಯೂ ಸ್ನಾನಾಹ್ನಿಕ ಮುಗಿಸಿ (ಈ ಸರಸ್ವತೀ ನದಿಯು ಇಲ್ಲಿಂದ ೧೦ ಮೈಲಿನೊಳಗೆ ಗುಪ್ತಗಾಮಿನಿಯಾಗುವದು. ಅಲ್ಲಿಂದ ಗುಪ್ತಗಾಮಿನಿಯಾಗಿಯೇ ಶ್ರೀ ಕ್ಷೇತ್ರ ಪ್ರಯಾಗದಲ್ಲಿ ಗಂಗಾ ಯಮುನಾನದೀ ಸಂಗಮ ಹೊಂದುವದೆಂದು; ಈ ನಿಮಿತ್ತ "**ತ್ರಿವೇಣಿ ಸಂಗಮ**"ವೆಂದು ಪ್ರಖ್ಯಾತವಾಗಿದೆ) ಸಿದ್ಧೇಶ್ವರನ ದರ್ಶನ ಮಾಡಿಕೊಂಡು ಅಬೂ ಪರ್ವತದ ಮಾರ್ಗವಾಗಿ ಅಜಮೀರ "ಪುಷ್ಕರತೀರ್ಥ"ಕ್ಕೆ ಹೋದರು. (ಇದು ಗಜೇಂದ್ರನಿಗೆ ಮೋಕ್ಷವಾದ ಸ್ಥಳ) ಅಲ್ಲಿ ಒಬ್ಬ ಯೋಗಿಯನ್ನು ಕಂಡರು. ಆ ಯೋಗಿಯೂ ಸಾಂಸಾರಿಕರಿಂದ ದೂರನಾಗಿರಬೇಕೆಂದು ಅರಣ್ಯದಲ್ಲಿ ವಾಸವಾಗಿದ್ದನು. ಆತನು ತನ್ನ ಮನಸಿಗೆ ಬಂದಾಗ ಪುಷ್ಕರ ತೀರ್ಥಕ್ಕೆ ಬಂದು ಅಲ್ಲಿರತಕ್ಕ ಮೊಸಳೆಗಳಲ್ಲೊಂದನ್ನು ಹಿಡಿದು ಅದರ ಮೇಲೆ ಕುಳಿತು ನಡೆಸುತ್ತಲೂ, ಇನ್ನೊಂದರ ಮೇಲೆ ಜಿಗಿಯುತ್ತಲೂ, ಮತ್ತೊಂದರ ಮೇಲೆ ಕುಣಿಯುತ್ತಲೂ ಇತ್ಯಾದಿ ಆಟಗಳನ್ನಾಡಿ ಸಾಕಾದ ಮೇಲೆ ತನ್ನ ಸ್ಥಳಕ್ಕೆ ಹೋಗುತ್ತಿದ್ದನು. ಈ ಯೋಗಿಯ ಚರ್ಯೆಗಳನ್ನು ನೋಡಿ ಆಶ್ಚರ್ಯದಿಂದ ಇಂತಹ ಮಹಾಶಕ್ತಿಗೆ ಕಾರಣವನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆಯಿಂದ ಅವನನ್ನು ಹಿಂಬಾಲಿಸಿದರು. ಇವರನ್ನು ನೋಡಿ, ನೀನು ಯಾರು? ಏತಕ್ಕಿಲ್ಲಿಗೆ ಬಂದೆ? ಇಲ್ಲಿ ಕ್ರೂರ ಮೃಗಗಳ ಬಾಧವಿಶೇಷವೆಂದು ಹೆದರಿಸಿದನು. 'ನಿನಗೆ ಇಲ್ಲದ ಬಾಧೆ ನನಗೆ ಮಾತ್ರವಿರುವುದೇ' ಅಂತ ಕೇಳಿದರು. ನಾನು ಬಹುಕಾಲದಿಂದ ಅವುಗಳ ಗುಂಪಿನಲ್ಲಿ ಸೇರಿರುವದರಿಂದ ತಮ್ಮಂತೆ ಒಂದು ಪ್ರಾಣಿಯೆಂದು ತಿಳಿದುಕೊಂಡಿವೆಯೆಂದು ಹೇಳುತ್ತ, ಇವರು ತನ್ನಲ್ಲಿಗೆ ಬರಬಾರದೆಂದು ಅನೇಕ ಉಪಾಯಗಳಿಂದ ಬೆದರಿಸಿದನು. ಇಂಥ ಗೊಡ್ಡು ಬೆದರಿಕೆಗೆ ಬೆದರುವರೇ ಇವರು! 'ನೀನು ಜಗತ್ತು ಬ್ರಹ್ಮಮಯವೆಂದು ತಿಳಿದಿದ್ದಿ. ನಾನೂ ಕೂಡಾ ಜಗತ್ತು ಬ್ರಹ್ಮಮಯವೆಂದು ತಿಳಿದಿದ್ದೇನೆ' (ಈ ಮಯಶಬ್ದವು ಒಬ್ಬರಲ್ಲಿ ತಾದಾತ್ಮ್ಯಾರ್ಥವೂ ಇನ್ನೊಬ್ಬರಲ್ಲಿ ಪ್ರಾಚುರ್ಯಾರ್ಥವೂ. ಈ ರೀತಿ ಅಭಿಪ್ರಾಯವು ಭಿನ್ನಾರ್ಥವಾಗಿ) ಅಂತ ಹೇಳಲು ಆ ಮಾತನ್ನು ಕೇಳಿ ಯೋಗಿಗೆ ಇವರಲ್ಲಿ ಆತ್ಮೀಯತೆ ಉಂಟಾಗಿ ತಾನಿರುವ ಸ್ಥಳಕ್ಕೆ ಕರೆದುಕೊಂಡು ಹೋಗಿ ನೀರು ಕಾಯಿಸಲು ಹೇಳಿದನು. ಆ ಕಾಯ್ದ ನೀರಿನಲ್ಲಿ ಸ್ವಲ್ಪ ಬಿಳಿಯಾದ ಪುಡಿಯನ್ನು ತಂದು ಹಾಕಿದನು. ಅದು (ಪೀರ) ಪಾಯಸದಂತಾಯಿತು. ಅದನ್ನು ತಿನ್ನುವದಾಗಿ ತಿಳಿಸಿದನು. ಅದು ಪಾಯಸದಂತೆ ರುಚಿಯಾಗಿತ್ತಲ್ಲದೆ, ಒಂದು ವಾರದವರೆಗೂ ಮಲಮೂತ್ರಾದಿಗಳ. ಕ್ಷುತ್ಪಿಪಾಸಾದಿಗಳ ಬಾಧೆಯಿಲ್ಲದೆ ತೃಪ್ತಿಕರವಾಗಿತ್ತು. ಆ ಎಂಟು ದಿನಗಳಲ್ಲಿ ತನ್ನ ಉಪಾಸನಾ ವಿಧಿಗಳನ್ನೆಲ್ಲಾ ತಿಳಿಸಿದನು. ಈ ಉಪಾಸನೆಗಳು ಅದ್ವೈತಪರವಾಗಿದ್ದರೂ ಕೇಳಿ, ಪರಮಾತ್ಮನ ಮಾಯೆ ಎಂಥದು! ತಾನು ಗುಣಪೂರ್ಣನಾದಾಗ್ಯೂ ನಿರ್ಗುಣನೆಂತಲೂ, ಅನಂತ ರೂಪಿಯಾದರೂ ನಿರಾಕಾರಿ ಎಂತಲೂ, ಸೃಷ್ಟ್ಯಾದಿ ಕ್ರಿಯೆಗಳುಳ್ಳವನಾದಾಗ್ಯೂ ನಿಷ್ಕ್ರಿಯನೆಂತಲೂ, ಸ್ವತಂತ್ರನಾದರೂ ಮಾಯಾಬದ್ಧನೆಂತಲೂ, ಸದಸದ್ವಿಲಕ್ಷಣನಾದರೂ ಶೂನ್ಯನೆಂತಲೂ; ಜಗತ್ತು ವ್ಯಾವಹಾರಿಕ ಸತ್ಯವಾಗಿ ಭಿನ್ನವಾಗಿ ತೋರುವದೇ ಹೊರತು ವಸ್ತುತಃ ಮಿಥ್ಯಾಭೂತ, ಈ ಉಪಾಧಿ ನಷ್ಟವಾದರೆ ಬ್ರಹ್ಮೈಕ್ಯವೆಂತಲೂ, ಬೇರೆ ಕೆಲವರಿಂದ ಆಪ್ತಕಾಮನಾದಾಗ್ಯೂ ನಮ್ಮ

ಪೂಜಾದಿಗಳಿಂದಲೇ ತೃಪ್ತಿಹೊಂದಿರುವನೆಂತಲೂ, ರಾಜ ಭೃತ್ಯನ್ಯಾಯೇನ ಉಪಾಸ್ಯನಾಗಿಯೂ, ಇದಕ್ಕೆ ಪುಷ್ಟೀಕರಣಾರ್ಥ ಅಷ್ಟಸಿದ್ಧಿಗಳನ್ನು ಕೊಟ್ಟು, ತಾನು ತಿಳಿದುಕೊಂಡದ್ದೇ ಸನ್ಮಾರ್ಗವೆಂದು ದಾರ್ಢ್ಯ ಕೊಟ್ಟು, ಪ್ರಾಂತಕ್ಕೆ ಯೋಗ್ಯತಾಭಿವ್ಯಕ್ತಿ ಉಪಾಸನಾನುಗುಣ್ಯ ಫಲಪ್ರದಾನ ಮಾಡುವನು. ಅಂಥ ಪರಮಾತ್ಮನ ಅಂಚಿತ್ಯಾದ್ಭುತ ಶಕ್ತಿಯನ್ನು ಚಿಂತನೆ ಮಾಡಿ ಮುಂದೆ ಅಲ್ಲಿಂದ ಪ್ರಯಾಣ ಮಾಡಿದರು.

೧೩. ಕಾಶೀ ಉಪಾಯದರ್ಶೀ ಆಯಿತು.
(ಪಿಂಡಪ್ರಧಾನ ಶೌಂಡಚಿಂತನೆಯನ್ನು ಅಖಂಡವಾಗಿಸಿತು)

ಆಗ್ರಾ, ಮಥುರಾ, ಗೋಕುಲ, ವೃಂದಾವನಕ್ಕೆ ಹೋದರು. ಅಲ್ಲಿ, 'ಪರಮಾತ್ಮನು ಶ್ರೀ ಕೃಷ್ಣತ್ವೇನ ಅವತಾರ ಮಾಡಿ ಆಯಾ ಸ್ಥಳಗಳಲ್ಲಿ ಮಾಡಿದ ಲೀಲೆಗಳನ್ನು ಸ್ಮರಿಸುತ್ತ' ಪ್ರತಿ ಜೀವರುಗಳಲ್ಲಿ ಇಂಥ ಗುಣಕ್ರಿಯಾಗಳು ಆಗಾಗ ತನ್ನ ಇಚ್ಛೆಯ ಪ್ರಕಾರ ಪರಮಾತ್ಮ ಅಭಿವ್ಯಕ್ತ ಮಾಡುವವನಾದಾಗ್ಯೂ ಅಜ್ಞಾನ ಮೂಲಕ ಪರಮಾತ್ಮನ ಗುಣಕ್ರಿಯಾಗಳನ್ನು ತಿಳಿಯದೆ ನಾವೇ ಕರ್ತೃಗಳು, ಭೋಕ್ತೃಗಳು ಎಂದು ಆರೋಪಿಸಿಕೊಂಡು ಹರ್ಷ ಶೋಕಾದಿಗಳನ್ನು ಹೊಂದುವೆವು. ಮತ್ತು ಯೋಗ್ಯರಾದ ಜೀವರುಗಳಿಗೆ ತನ್ನ ಮಹಾತ್ಮ್ಯಜ್ಞಾನವಾಗಿ ಆನಂದೋನ್ನಾಹವಾಗಲೋಸುಗ ದುಷ್ಟ ನಿಗ್ರಹ, ಶಿಷ್ಟ ಪರಿಪಾಲನಾದೆಶೆಯಿಂದಲೂ ಆಗಾಗ ಅವತಾರ ಮಾಡಿ ತನ್ನ ಲೀಲಾಗಳನ್ನು ಪ್ರದರ್ಶಿಸುವನು' ಅಂತ ಅನುಸಂಧಾನ ಮಾಡುತ್ತ ಕೆಲಕಾಲ ವಾಸಮಾಡಿ ನಂತರ ಹಸ್ತಿನಾಪುರ (ದೆಲ್ಲಿ), ಕಾನಪೂರ ಮಾರ್ಗವಾಗಿ ಪ್ರಯಾಗ (ಅಲಹಾಬಾದ) ಕ್ಷೇತ್ರಕ್ಕೆ ಬಂದರು. ತ್ರಿವೇಣಿ ಸಂಗಮದಲ್ಲಿ ಸ್ನಾನಾಹ್ನಿಕಾದಿಗಳನ್ನು ತೀರಿಸಿಕೊಂಡು ಇಡಾ, ಪಿಂಗಳ, ಸುಷುಮ್ನಾಖ್ಯ ನಾಡಿಗಳಲ್ಲಿಯ ಭಗವತ್ ವ್ಯಾಪಾರಗಳ ಚಿಂತನೆ ಮಾಡಿ, ತಥಾವಿಧ್ಯುಕ್ತ ಪೈತೃಕ ಕರ್ಮಗಳನ್ನಾಚರಿಸಿ ಈ ಭಾಗೀರಥಿ ತೀರದಲ್ಲಿ ವಾಸಮಾಡಿಕೊಂಡಿದ್ದ ಬಯರಾಗಿಗಳಲ್ಲೊಬ್ಬರಲ್ಲಿ ಕೆಲಕಾಲ ಶ್ರಮಿಸಲು ಅವರಲ್ಲಿ ಬ್ರಹ್ಮ ನಿಷ್ಠತ್ವವು ಕಾಣದಾಗಲು, ಅವರನ್ನು ಬಿಟ್ಟು ಇನ್ನೊಬ್ಬರನ್ನು ಮತ್ತೊಬ್ಬರನ್ನು ಹೀಗೆ ತನಗೆ ತಕ್ಕವರನ್ನು ಸ್ವಯಂವರದಲ್ಲಿ ಕನ್ಯೆಯು ಶೋಧಿಸುವಂತೆ ಶೋಧಿಸಿದರೂ, ತನಗೆ ಬೇಕಾದ ಗುಣಗಳನ್ನು ಕಾಣದೆ ಮುಂದೆ ಕಾಶೀ, (ಬನಾರಸ) ಕ್ಷೇತ್ರಕ್ಕೆ ಬಂದರು. ಅದು ವರುಣಾ, ಅಸೀ ನದಿಗಳ ಗಂಗಾ ಸಂಗಮದ ಮಧ್ಯ ಕ್ಷೇತ್ರ ನಿಮಿತ್ತ ವಾರಣಾಸೀ ಎಂದು ಕರೆಸಿಕೊಂಡು; ಮಣಿಕರ್ಣಿಕಾ, ಹರಿಶ್ಚಂದ್ರ ಘಾಟ್‌ಗಳಿಂದ ಮಹಾಸ್ಮಶಾನವೆಂದು ಖ್ಯಾತಿ ಪಡೆದು, ವಿಶ್ವೇಶ್ವರ, ಕಾಲಭೈರವ, ಬಿಂದು ಮಾಧವ ಮೊದಲಾದ ಪುರಾತನ ಗುಡಿ ಗೋಪುರಗಳಿಂದ ಶೋಭಿತವಾಗಿದೆ. ಪುರೋಹಿತ ವೃತ್ತಿಯಿಂದ (ಯಾತ್ರಿಕರನ್ನು ತಮ್ಮಲ್ಲಿ ಇಳಿಸಿಕೊಂಡು ಪಿತೃ ಕಾರ್ಯವನ್ನು ಮಾಡಿಸುವ ವೃತ್ತಿ) ಗಂಗಾಪುತ್ರರೆನಿಸಿಕೊಂಡು ಶ್ರೀಮಂತರಾಗಿ ಗಂಗಾ ತೀರದಲ್ಲಿ ದೊಡ್ಡ ದೊಡ್ಡ ಮೇಲುಪ್ಪರಿಗೆಯ ಭವನಗಳಿಂದ ಅಲಂಕೃತವಾದ ಕ್ಷೇತ್ರದಲ್ಲಿ ಅನೇಕರು ಇದ್ದಾರೆ. ಕಾಷಾಯ ವಸ್ತ್ರಗಳನ್ನು ಧರಿಸಿ ದಂಡಧಾರಿಗಳಾಗಿ ಹಾವಿಗೆಯನ್ನು ಮೆಟ್ಟುವದರಿಂದ ಕಡಕಡ ಶಬ್ದಗಳಿಂದ ಉಷಃಕಾಲದಲ್ಲಿ ಕೆಲವರು ಭಾಗೀರಥೀ ಸ್ನಾನಕ್ಕೆ ಹೋಗುತ್ತಿರುವದನ್ನು, ಕೆಲವರು ಸ್ನಾನ ಮಾಡಿಕೊಂಡು ತಮ್ಮ

ತಮ್ಮ ಕುಟೀರಕ್ಕೆ ಮರಳಿ ಬರುವದನ್ನು ಮತ್ತು ಕೆಲವರು ಕೌಪೀನ, ಕಮಂಡಲ ಮಾತ್ರ ಧರಿಸಿ ಮೈಯೆಲ್ಲಾ ಬೂದಿ ಬಳಿದುಕೊಂಡು ಗಂಗಾ ತೀರದಲ್ಲಿ ಪಂಚಾಗ್ನಿಗಳ ಮಧ್ಯ ಕುಳಿತುಕೊಂಡು ಪ್ರಾಣಾಯಾಮಾದಿಗಳನ್ನು ಮಾಡುತ್ತಿರುವದನ್ನು ಕಂಡು, ಇಲ್ಲಿಯಾದರೂ ತಮ್ಮ ಇಷ್ಟಾರ್ಥಸಿದ್ಧಿಯಾಗಬಹುದೆಂದು ಹಿಗ್ಗಿ ತಾವು ಕೂಡಾ ಉಷಃಕಾಲದಲ್ಲಿ ಸ್ನಾನಾಹ್ನಿಕಾದಿಗಳನ್ನು ತೀರಿಸಿಕೊಂಡು ಒಬ್ಬೊಬ್ಬರನ್ನು ಪರೀಕ್ಷಿಸಲು, ಬಹುಸಂಖ್ಯಾಕರು ಕಪಟಿಗಳಾಗಿ, ಕೆಲವರು ಕೇವಲ ಯೋಗ ಸಿದ್ಧಿಗೋಸ್ಕರ ಹವ್ಯಾಸ ಪಡುತ್ತಿರುವದನ್ನು ಕಂಡರು. ಇಲ್ಲಿಯೂ ತಮ್ಮ ಇಷ್ಟಸಿದ್ಧಿಯಾಗದ್ದರಿಂದ ಖಿನ್ನರಾಗಿ, ಇನ್ನೆಲ್ಲಿಗೆ ಹೋದರೂ ಪ್ರಯೋಜನವಿಲ್ಲ. ಇಲ್ಲಿಯೇ ಕೆಲಕಾಲವಿದ್ದು ಬಾಹ್ಯ ಕಶ್ಮಲವನ್ನು ಕಳೆಯುವಂತೆ ಅಂತಃ ಕಶ್ಮಲವನ್ನು ಸಹ ಕಳೆಯಲು ಶಕ್ತಳಾದ ವಿಷ್ಣುಪಾದಾಬ್ಜ ಸಂಭೂತಳಾದ ಭಾಗೀರಥಿ ಸ್ನಾನಾದಿಗಳಿಗೋಸ್ಕರ ಮತ್ತು ಮನೋನಿಯಾಮಕರಾಗಿ ವರದಾತೃಗಳಲ್ಲಿ ಅಗ್ರೇಸರರೆಂದೆನಿಸಿದ ವಿಶ್ವೇಶ್ವರ (ರುದ್ರ)ರನ್ನು ಕುರಿತು ತಪಸ್ಸು ಮಾಡುವದೆಂದು ನಿಶ್ಚಯಿಸಿ, ಜನಸಂದಣಿಯಿಲ್ಲದ ಮತ್ತು ಯಾದವಾರ್ಯರಿಗೂ ಹಾಗೂ ವಿಜಯದಾಸರಿಗೂ ಪ್ರತ್ಯಕ್ಷ ದರ್ಶನವಿತ್ತು ಅನುಗ್ರಹಿಸಿದ ವೇದವ್ಯಾಸರ ಆಶ್ರಮವೆಂದೆನಿಸಿದ ವ್ಯಾಸಕಾಶೀಯಲ್ಲಿ ತಪವನ್ನಾಚರಿಸಲು "ನಿನ್ನ ಇಷ್ಟಸಿದ್ಧಿಯು ಸಮಯುವಿದಲ್ಲವೆಂಬುದಾಗಿ ಸ್ವಪ್ನವಾಯಿತು." 'ಸ್ವಾಮೀ, ನಾನು ನಿಮ್ಮನ್ನು ಐಹಿಕ ಸಂಪತ್ತುಗಳಲ್ಲಿ ಯಾವದೊಂದನ್ನು ಕೂಡಾ ಬೇಡಲು ಬಂದವನಲ್ಲ. ಸ್ವಯೋಗ್ಯ ಪುರುಷಾರ್ಥದ ಮಾರ್ಗದರ್ಶಿಗಳನ್ನು ತೋರಿಸೆಂದು ಕೇಳಬಂದಿದ್ದೇನೆ. ಅನುಗ್ರಹ ಮಾಡಿ ಅಂಥ ಮಹನೀಯರನ್ನು ತೋರಿಸಿ' ಅಂತಾ ಮೊರೆಹೋಗಲು, ಒಂದು ಅಶ್ವತ್ಥ ಕಟ್ಟೆಯನ್ನು ತೋರಿಸಿ, ಅಲ್ಲಿ ಹೋಗು ಅಂತಾ ಸ್ವಪ್ನವಾಯಿತು. ಹೀಗಾಗುವದರಿಂದ ಅಶ್ವತ್ಥ ವೃಕ್ಷದ ಕೆಳಗೆ ಯಾರಾದರೂ ಮಹನೀಯರು ತಪಸ್ಸು ಮಾಡುತ್ತಾ ಕುಳಿತಿರಬಹುದು. ಅದನ್ನು ಕಂಡುಹಿಡಿಯಬೇಕೆಂದು ಪ್ರಯಾಣ ಮಾಡುವ ನಿಶ್ಚಯದಿಂದ ಕಾಶೀ ಕ್ಷೇತ್ರದಲ್ಲಿ ಮಾಡುವ ಪಿತೃಕಾರ್ಯಗಳನ್ನು ಮುಗಿಸಿದ ಮೇಲೆ ಗಯಾ ಕ್ಷೇತ್ರಕ್ಕೆ ಹೊರಟರು. ಅಲ್ಲಿಯೂ ವಿಧ್ಯುಕ್ತ ರೀತ್ಯಾ ಪೈತೃಕ ಕಾರ್ಯಗಳನ್ನು ಮುಗಿಸಿದ ಮೇಲೆ ನಾವು ಮಾಡಿದ ಈ ಸ್ಥೂಲಕರ್ಮಗಳಿಂದ ಪಿತೃಗಳಿಗೆ ತೃಪ್ತಿಯಾಗುವ ಬಗೆ ಹೇಗೆಂಬುದನ್ನು ಆಲೋಚಿಸಲು ಆ ದಿನ ರಾತ್ರಿ ಸ್ವಪ್ನದಲ್ಲಿ ಒಂದು ದೊಡ್ಡ ಸಭಾ ನೆರೆದಿತ್ತು. ಆ ಸಭೆಗೆ ತಮ್ಮ ಉಭಯ ಪಿತೃಗಳನ್ನು (ಜನಕ ಮತ್ತು ಪಾಲಕ) ಕರಿಸಿ ಉಡುಗರೆ ಆಹೇರು ಮಾಡಿದಂತೆ ಸ್ವಪ್ನವಾಯಿತು. ಇದರಿಂದ ಒಂದು ರೀತಿ ಸಮಾಧಾನವಾದರೂ ತೃಪ್ತಿಯಾಗುವ ಬಗೆಯನ್ನರಿತುಕೊಳ್ಳುವ ಯೋಚನೆ ಮಾಡುತ್ತಿರಲು ಪ್ರತ್ಯಕ್ಷಾಪ್ರತ್ಯಕ್ಷದಿಂದಲೂ ಮನೋನಿಯಾಮಕ ದೇವತೆಗಳು ಉಪದೇಶ ಮಾಡಲು ಶಕ್ತರಾದುದರಿಂದ ಥಟ್ಟನೆ ಉತ್ತರ ದೊರೆಯಿತು. ಅದಾವುದೆಂದರೆ ನಾವು ತಿಂದ ಆಹಾರದ ಪರಿಣಾಮ ಕ್ರಿಯೆಗಳು ನಮಗೆ ಗೋಚರಿಸುವದಿಲ್ಲವಷ್ಟೆ? ಅತೀ ಸೂಕ್ಷ್ಮರಾದ ನಮಗೆ (ಜೀವರಿಗೆ) ಈ ಭೌತಿಕಾನ್ನದ ಒಂದು ಅಗಳು ಮೇರುಪರ್ವತ ಪ್ರಾಯ, ಒಂದು ಹನಿ ನೀರು ಸಾಗರೋಪಮ. ಇಂತಹದನ್ನು ನಮಗೆ ಅತ್ಯಂತ ಭಿನ್ನವಾದ ಸ್ಥೂಲ ಶರೀರದ ಒಂದು ಸ್ಥಾನದಲ್ಲಿ (ಕುಕ್ಷಿಯಲ್ಲಿ) ಹಾಕಿ ನಾವು

(ಜೀವರು) ಭೋಜನ ಮಾಡಿದೆವು ಅಂತಾ ತಿಳಿದುಕೊಳ್ಳುತ್ತೇವೆ. ಚೇತನರಾದ ನಮಗೆ ಭೌತಿಕಾನ್ನ ಸಂಬಂಧವೇ ಇಲ್ಲ. ಆದರೂ ನಮಗೆ (ಚೇತನಕ್ಕೆ) ತೃಪ್ತಿ ಉಂಟಾಗುವದು. ಈ ತೃಪ್ತಿಯನ್ನುಂಟು ಮಾಡುವ ಅನ್ನಕೋಶಗತ ಅನಿರುದ್ಧ ನಾಮಕ ಪರಮಾತ್ಮನು ಭೋಜ್ಯ ಪದಾರ್ಥಗಳಲ್ಲಿರುವ ರಸಗಳ ಆತ್ಮ, ದೇವ, ದಾನವ, ಜೀವ, ಜಡ, ರಸಗಳ ವಿಭಾಗ ಮಾಡಿ, ಜ್ಞಾನಮಯವಾಗಿಯೂ, ವ್ಯಾಪ್ತನಾಗಿಯೂ, ಆನಂದಮಯನಾಗಿಯೂ ಇರುವ ಅನಿರುದ್ಧ ನಾರಾಯಣ ಅವರವರಿಗೆ ತೃಪ್ತಿಪಡಿಸುವರು. ಇದು ಜ್ಞಾನಿ ಪ್ರತ್ಯಕ್ಷವು. ನಾವು ಜ್ಞಾನಪೂರ್ವಕ ಮಾಡುವ ಕರ್ಮಫಲಗಳನ್ನು ಸ್ವೀಕಾರಮಾಡಿ, ಪಿತೃದೇವತೆಗಳ ದ್ವಾರಾ ನಮ್ಮ ಪಿತೃಗಳಿಗೆ ಕೊಟ್ಟು ಆನಂದ ಪ್ರದಾನ ಮಾಡುವರು. ಈ ವಿಷಯಗಳನ್ನರಿತ ಜ್ಞಾನಿಗಳು ಕೆಲವೊಮ್ಮೆ ಬಾಹ್ಯಕರ್ಮಗಳನ್ನು ಆಚರಿಸದಿದ್ದರೂ (ಜ್ಞಾನಬಲದಿಂದ) ಚಿಂತನೆ (ಅನುಸಂಧಾನ) ಮಾಡಿ ಫಲವನ್ನು ಸಂಪಾದಿಸುವರು. ಆದಾಗ್ಯೂ, ಬಾಲಕನ ಸಲುವಾಗಿ ಉಪಾಧ್ಯಾಯನೂ ಅಕ್ಷರವನ್ನು ತಿದ್ದುವಂತೆ, ಅಜ್ಞಾನಾವಸ್ಥೆಯಲ್ಲಿರುವರು ಶಾಸ್ತ್ರೋಕ್ತ ಸತ್ಕರ್ಮಗಳನ್ನಾಚರಿಸಿ, ಜ್ಞಾನಾವಸ್ಥೆಗೆ ಬರಲೋಸುಗ ಆದರ್ಶ ರೂಪವಾಗಿ ತಾವು (ಜ್ಞಾನಿಗಳು) ಸ್ಥೂಲಕರ್ಮಗಳನ್ನಾಚರಿಸುವರು. ಅಂಥ ಜ್ಞಾನಿಗಳು ಹಾಗೂ ಅಜ್ಞಾನಿಗಳು ಆಚರಿಸುವ ಕರ್ಮಪ್ರಭೇದವನ್ನು ತಿಳಿದು ಸಮಾಧಾನ ಹೊಂದಿದರು.

೧೪. ಷಟ್‌ಪ್ರಯಾಗಸೇವನ ಷಡ್‌ವೈರಿನಿಗ್ರಹಸಾಧನ.

ತದನಂತರ ಪುನಃ ಕಾಶೀ, ಲಖನೌ, ಮಾರ್ಗವಾಗಿ ಅಯೋಧ್ಯಾಕ್ಕೆ ಬಂದು 'ಸರಯೂ' ನದಿಯಲ್ಲಿ ಸ್ನಾನಾಹ್ನಿಕಗಳನ್ನು ಮುಗಿಸಿ, ಇಲ್ಲಿಯೂ ಶಾಸ್ತ್ರೋಕ್ತ ಪೈತೃಕ ಕರ್ಮಗಳ ಮಾಡಿ ಪರಮಾತ್ಮನು ಶ್ರೀರಾಮಚಂದ್ರತ್ವೇನ ಅವತಾರ ಮಾಡಿ ಪವಿತ್ರೀಕರಿಸಿದ ಸ್ಥಳ ವಿಶೇಷಗಳನ್ನು ಸಂದರ್ಶಿಸಿ, ಸ್ವಲ್ಪ ದಿನಗಳಿದ್ದು ಮುಂದೆ ಬ್ರಹ್ಮಾವರ್ತ ಹರಿದ್ವಾರಕ್ಕೆ ಹೋಗಿ ಅಲ್ಲಿ ಕೂಡಾ ಪಿತೃಗಳಿಗೆ ಹವಿರ್ದಾನ ಮಾಡಿದರು. ಅನಂತರ ಬದರಿಕಾಶ್ರಮಕ್ಕೆ ಹೊರಟರು. ಮಾರ್ಗದಲ್ಲಿ ಹಿಮಾಚಲ ಹಾಗೂ ಗಂಗಾ ಪ್ರವಾಹದ ನೈಸರ್ಗಿಕ ಶೋಭಾಗಳನ್ನು ನೋಡಿ ಪೂರ್ವೋಕ್ತ ರೀತ್ಯಾ ಅಧ್ಯಾತ್ಮಪರ ಅನುಸಂಧಾನ ಮಾಡುತ್ತ ಪರಮಾತ್ಮನ ಅಸಂಖ್ಯಾತದ್ಭುತ ಶಕ್ತಿಯನ್ನು ಕೊಂಡಾಡುತ್ತ ಶೀತೋಷ್ಣಾದಿಗಳ ಸಹನ ಮಾಡುತ್ತ ದುರ್ಗಮವಾದ ಮಾರ್ಗವನ್ನು ಕ್ರಮಣ ಮಾಡಿದರು. ಇದುವರೆಗೂ ಅನೇಕ ತೀರ್ಥಕ್ಷೇತ್ರಗಳಲ್ಲಿ ಸಂಚರಿಸಿದ್ದಕ್ಕೂ ಇದಕ್ಕೂ ವಿಲಕ್ಷಣವಾಗಿತ್ತು. ಈ ಪ್ರಾಂತವು ವಿಷಯೋಪಭೋಗದ ಸಲಕರಣೆಗಳಿಗೆ ಅನಾನುಕೂಲವಿದ್ದು, ತಪಸ್ಸಿಗನುಕೂಲವಿತ್ತು, (ಯೋಗ್ಯವಾಗಿತ್ತು). ಅಲ್ಲಿ ಅನೇಕ ಸಾಧುಗಳು ವಾಸ ಮಾಡಿಕೊಂಡಿದ್ದರು. ಅವರುಗಳಲ್ಲಿ ಅನೇಕರು ಪ್ರಾಯಃ ಕಂದ ಮೂಲಾದಿಗಳಿಂದ ಉಪಜೀವಿಸುತ್ತಿದ್ದರು. ಆ ಪ್ರದೇಶವು ಇವರಿಗೆ (ಈ ಚರಿತ್ರೆ ನಾಯಕರಿಗೆ) ವಿಶೇಷ ಆನಂದವನ್ನುಂಟುಮಾಡಿತು. ಪೂರ್ವದಲ್ಲಿ ಮರುತ ಮಹಾರಾಜನು ೧೪ ಮೈಲು ದೂರದಲ್ಲಿರುವ ಸ್ಥಳದಲ್ಲಿ ಯಜ್ಞವನ್ನು ಮಾಡಿದ್ದನು. ಆ ಯಜ್ಞವು ಅಗಾಧವಾದದ್ದು. ಆ ಯಜ್ಞವನ್ನು ಮುಗಿಸಿ ಹೋದಮೇಲೆ ಅವಶಿಷ್ಟ ಪದಾರ್ಥಗಳನ್ನು ತಂದುಕೊಂಡು ಧರ್ಮರಾಜನು "ರಾಜಸೂಯಯಾಗ"ವನ್ನು

ಮಾಡಿದನೆಂಬ ಪುರಾಣ ಪ್ರಸಿದ್ಧಿಯಿದೆ. ಆ ಸ್ಥಳವನ್ನು "ಹೃಷಿಕೇಶ" ಕ್ಷೇತ್ರವೆಂದು ಕರೆಯುತ್ತಾರೆ. ಅಲ್ಲಿಯ ರಮಣೀಯತೆಯನ್ನು ನೋಡಿ ಮುತ್ತಿಗಿ ಆಚಾರ್ಯರಿಗೂ ಕೂಡಾ ಒಮ್ಮೆ ಇಲ್ಲಿ ಯಜ್ಞ ಮಾಡಬೇಕೆಂದೆನಿಸಿತು. ಮುಂದೆ ಮೂರು ಮೈಲಿನಲ್ಲಿ 'ಲಕ್ಷ್ಮಣ ಝೂಲಾ' ಎಂಬ ಕ್ಷೇತ್ರವಿದೆ. ಅಲ್ಲಿ ಸುಮಾರು ಒಂದು ಫರ್ಲಾಂಗು ಗಂಗಾ ಪ್ರವಾಹವನ್ನು ದಾಟಬೇಕಾಗುವದು. ದಾಟಲನುವಾದ ಹರಗೋಲು, ನಾವೆ, (Boat) ಸೇತುವೆ (Bridge) ಯಾವ ಸಾಧನವೂ ಇರಲಿಲ್ಲ. ಆದರೆ, ಈಚೆಯ ದಂಡೆಯಿಂದ ಆಚೆಯ ದಂಡೆಯವರೆಗೂ ಹಗ್ಗದಿಂದ ನಿರ್ಮಿಸಿದಂಥ ತೊಟ್ಟಿಲುಗಳಂತಿರುವ ಸಾಧನವಿತ್ತು. ಇದರ ಸಹಾಯದಿಂದ ನದಿಯನ್ನು ದಾಟಬೇಕಾಗುತ್ತಿತ್ತು. ಆದರೆ ಪ್ರಥಮ ತೊಟ್ಟಿಲಲ್ಲಿ ನಿಂತು ತೂಗಿಕೊಂಡು ಎರಡನೇ ತೊಟ್ಟಿಲನ್ನು (Cradle ನಲ್ಲಿಯಂತೆ) ಹಿಡಿದುಕೊಳ್ಳಬೇಕು. ಇದರಂತೆ ಮೂರನೇ, ನಾಲ್ಕನೇ, ಇತ್ಯಾದಿ ತೊಟ್ಟಿಲುಗಳ ಕ್ರಮೇಣ ನದಿ ದಾಟಬೇಕಾಗುತ್ತಿತ್ತು. ಈ ಸಾಧನವು ತೊಟ್ಟಿಲದಂತೆ ಇದ್ದದರಿಂದ 'ಝೂಲಾ' ಎಂಬ ಹೆಸರು ಬಂದಿದೆ. ಝೂಲಾ ಎಂಬ ಹಿಂದೀ ಭಾಷೆಯ ಪದಕ್ಕೆ ತೊಟ್ಟಿಲು ಎಂದರ್ಥ. (ಈಗ ಉಭಯ ದಂಡೆಯಲ್ಲಿ ಎರಡೆರಡು ಸ್ತಂಭಗಳನ್ನು ಕಟ್ಟಿ ಬಲವಾದ ಕಬ್ಬಿಣದ ಸಲಾಕೆಗಳಿಂದ ಬಿಗ್ಗಿಸಿ ಸೇತುವೆಯನ್ನು (Suspension Bridge) ಕಟ್ಟಿದ್ದಾರೆ.) ಈ ರೀತಿ ನದೀ ದಾಟಿ, 'ದೇವ ಪ್ರಯಾಗ', ಅಲ್ಲಿಂದ 'ಕಾಂಚನ ಗಂಗಾ' ಶಿಖರದಲ್ಲಿ ಉದ್ಭವಿಸಿದ 'ಗಂಗೋತ್ರಿ'ಯನ್ನು ನೋಡಿಕೊಂಡು ಹಿಂತಿರುಗಿ ಪುನಃ ದೇವ ಪ್ರಯಾಗಕ್ಕೆ ಬಂದರು. (ಈ ಮಾರ್ಗವು ಕಷ್ಟತರವಾದದ್ದು ಸಾಮಾನ್ಯರಿಂದ ಸಾಧ್ಯವಿಲ್ಲ.) ಮುಂದೆ 'ರುದ್ರ ಪ್ರಯಾಗ' (ಈ ರುದ್ರ ಪ್ರಯಾಗದಿಂದ ಕೇದಾರಕ್ಕೆ ಮಾರ್ಗವಿದೆ. ಅಲ್ಲಿಗೆ ವೈಷ್ಣವರು ಹೋಗುವದು ಶಾಸ್ತ್ರೀಯ ನಿಷೇಧವಿರುವದರಿಂದ ಇವರು ಹೋಗಲಿಲ್ಲ.) 'ಕರ್ಣ ಪ್ರಯಾಗ', 'ನಂದ ಪ್ರಯೋಗ', 'ವಿಷ್ಣು ಪ್ರಯಾಗ'ಕ್ಕೆ ಹೋದರು. (ಪ್ರಯಾಗವೆಂದರೆ ಎರಡು ನದಿಗಳ ಸಂಗಮವೆಂದರ್ಥ) ಈ ಪ್ರಯಾಗಗಳಲ್ಲಿ ಭಾಗೀರಥಿಯು ಬೇರೆ ಬೇರೆ ಪ್ರದೇಶದಲ್ಲಿ ಉಗಮಿಸಿ, ಬೇರೆ ಬೇರೆ ಹೆಸರಿನಿಂದ ಐದು ಸರಳುಗಳಾಗಿ ಪ್ರವಹಿಸಿಕೊಂಡಿರುವಳು) ಈ ಸಂಗಮ ಸ್ಥಳಗಳಲ್ಲಿಯೂ, ವಿಧ್ಯುಕ್ತ ಪೈತೃಕ ಕರ್ಮಗಳಾಚರಿಸಿದರು. ಈ 'ವಿಷ್ಣು ಪ್ರಯಾಗ'ದಿಂದ ಬದರಿಕಾಶ್ರಮವು ಸುಮಾರು ೨೦ ಮೈಲು ಇರುವದು. ಅಲ್ಲಿಂದ ಹಿಮ (ಬರ್ಫ) ದಿಂದ ಆಚ್ಛಾದಿತವಾಗಿ ಸ್ಫಟಿಕದಂತೆ ಶೋಭಿಸುವ 'ಗೌರಿಶಂಕರ' ಶಿಖರವು ಕಾಣುವದು ಮತ್ತು ಆ ಶಿಖರದಿಂದ ಬರುವ ಗಾಳಿಯಿಂದ ಉಂಟಾಗುವ ಶೀತಲವು ಮನುಷ್ಯನ ಸಹನಕ್ಕೆ ಮೀರಿರುವದು. ಎಷ್ಟೋ ಜನರು 'ವಿಷ್ಣು ಪ್ರಯಾಗ'ದಲ್ಲಿ ಸ್ನಾನ ಸಹ ಮಾಡದೆ ಮುಂದಕ್ಕೆ ತೆರಳುವರು. ಆದರೆ ಇವರು ದೇಹಾಭಿಮಾನ ತ್ಯಾಗಮಾಡಿ ಶೀತೋಷ್ಣಾದಿಗಳ ಸಹನ ಮಾಡುವವರಲ್ಲೇ ದೀಕ್ಷಾವುಳ್ಳವರಾದುದರಿಂದ ಆ ಅಂಜಿಕೆಯಿಂದ ಸ್ನಾನ ಮಾಡದೆ ಬಿಡಲಿಲ್ಲ. ಆದರೆ ಸ್ನಾನದಿಂದುಂಟಾದ ಶೀತಲವು ರಕ್ತಾಭಿಸರಣಕ್ಕೆ ಪ್ರತಿಬಂಧಕವಾಗಿ ಮಾರ್ಗ ನಡೆಯಲಾಗದೆ ಬಿಸಿಲು ಬರುವವರೆಗೂ ಅಲ್ಲಿಯೇ ಕುಳಿತುಬಿಡಬೇಕಾಗುತ್ತಿತ್ತು. ಆ ಪ್ರದೇಶವು ಗಗನ ಚುಂಬಿತ ಎರಡು ಪರ್ವತ ಶಿಖರಗಳ ಮಧ್ಯದಲ್ಲಿರುವ ಕೊಳ, ಆದ್ದರಿಂದ ಮಧ್ಯಾನ್ಹದವರೆಗೂ

ಸೂರ್ಯರಶ್ಮಿ ಬೀಳದೆ, ಆ ಮೇಲೆ ಬಿದ್ದದ್ದರಿಂದ ಮೈ ಬೆಚ್ಚಗಾಗಿ ಮೆಲ್ಲ ಮೆಲ್ಲನೆ ನಡೆಯಲು ಬಂದಿತು.

೧೫. ಯಾತ್ರೆಯಿಂದ ಗಾತ್ರ–ಗೋತ್ರ ಪವಿತ್ರವಾದವು.

ಆ ದಾರಿಯ ಮಧ್ಯ ಮಧ್ಯ ಹಿಮದ ಮೇಲೆ ನಡೆಯುತ್ತಾ ಶ್ರೀಕ್ಷೇತ್ರ 'ಬದರಿಕಾಶ್ರಮ'ವನ್ನು ತಲುಪಿದರು. ಅಲ್ಲಿಯ ಶೈತ್ಯವನ್ನು ಕೇಳುವದೇನು? ಸರ್ವದಾ ಕಂಬಳಿಯ ನಿಲುವಂಗಿ, ಟೊಪ್ಪಿಗಿ ಧರಿಸಲಾರದೆ ಇರಲು ಶಕ್ಯವಿಲ್ಲ. ಹೀಗಿದ್ದರೂ ಇವರು ಮಾತ್ರ ತಮ್ಮ ಆಚರಣೆಯಲ್ಲಿ ವ್ಯತ್ಯಾಸ ಮಾಡುತ್ತಿದ್ದಿಲ್ಲ. ನಿತ್ಯದಂತೆ ಉಷಃಕಾಲ ಸ್ನಾನಕ್ಕೆ ಪ್ರತಿಬಂಧಕ ಬರುವದೇನೋ ಅಂತ ಯೋಚನೆಯಾಗಿತ್ತು. ಆದರೆ 'ಬದರೀ ನಾರಾಯಣ' ದೇವರ ಗುಡಿಯ ಮುಂಭಾಗದಲ್ಲಿ ಬಿಸಿ ನೀರಿನ ಝುರಿಯೊಂದ (Hot spring)ನ್ನು ಕಂಡರು. ಮತ್ತು ಈ ಎರಡೂ ಝುರಿಗಳು ಒಂದು ಕುಂಡದಲ್ಲಿ ಬೆರೆತು ಒಂದು ಸಮಶೀತೋಷ್ಣವಾಗಿರುವುದು ಕಂಡುಬಂತು. ಅದನ್ನು ನೋಡಿ 'ಆಹಾ! ಪರಮಾತ್ಮನು ಎಂಥ ದಯಾಳು! ಮತ್ತು ಆಪತ್‌ಬಾಂಧವನು'. ಜೀವರುಗಳ ಯೋಗ ಕ್ಷೇಮಕ್ಕಾಗಿಯೂ ಹಾಗೂ ಯೋಗ್ಯ ಚೇತನಕ್ಕೆ ಅಚಿಂತ್ಯಾದ್ಭುತ ಶಕ್ತಿಯನ್ನು ತಿಳಿಸುವ ಸಲುವಾಗಿಯೂ ಒಂದೊಂದು ಕಡೆಯಲ್ಲಿ ವಿಲಕ್ಷಣ ಶಕ್ತಿಯನ್ನು ಅಭಿವ್ಯಕ್ತ ಮಾಡಿರುವನು. ಹೀಗಿದ್ದಾಗ್ಯೂ ಆತನನ್ನು ದುರ್ಲಕ್ಷಿಸಿ ಕೇವಲ ವಿಷಯೋಪಭೋಗದಲ್ಲಿ ಪತಂಗದ ಹುಳದಂತೆ ದೀಪದಲ್ಲಿ ಬಿದ್ದು (ಸಂಸಾರದಲ್ಲಿ) ನಾಶಹೊಂದುವೆವಲ್ಲಾ' ಅಂತ ಅಂದುಕೊಂಡು, ನಿತ್ಯದಂತೆ ಉಷಃಕಾಲದಲ್ಲಿ ಸ್ನಾನಮಾಡಿ ಯಥಾಪ್ರಕಾರ ತಮ್ಮ ಅಹ್ನೀಕಾದಿಗಳನ್ನು ತೀರಿಸಿಕೊಂಡು 'ಬದರೀನಾರಾಯಣ'ನ ಸಂದರ್ಶನ ತೆಗೆದುಕೊಂಡು ತತ್ಸಮೀಪದಲ್ಲಿರುವ **'ಬ್ರಹ್ಮಶಿಲಾ'** (ಬ್ರಹ್ಮ ಕಪಾಲಶಿಲಾ)ದಲ್ಲಿ ಪಿಂಡಪ್ರದಾನ ಮಾಡಿ 'ಪಿತೃಋಣ'ದಿಂದ ಮುಕ್ತರಾದರು. ಈ ಕ್ಷೇತ್ರದಲ್ಲಿಯ ಚಳಿಯ ಮೂಲಕ ಮೂರು ದಿನಗಳಿಗಿಂತಲೂ ಹೆಚ್ಚು ವಾಸ ಮಾಡಲ ಸಾಧ್ಯವಾದರೂ ಒಂದು ಮಂಡಲ ವಾಸಮಾಡಿ, ವಸುಧಾರಾ ಮಾನಸ ಸರೋವರಗಳನ್ನು ನೋಡಿಕೊಂಡು ಬಂದರು. ಆಮೇಲೆ ಹಿಂತಿರುಗಿದ ನಂತರ ಆ ಮಾರ್ಗವಾಗಿ ಸಿಮ್ಲಾ, ಶ್ರೀನಗರ ಮೊದಲಾದ ಕಾಶ್ಮೀರ ಪ್ರಾಂತಕ್ಕೆ ನಡೆದರು. ಆ ಪ್ರದೇಶದ ನೈಸರ್ಗಿಕ ಸೌಂದರ್ಯವೆಷ್ಟೆಂಬುದು ಪ್ರತ್ಯೇಕ ನಾವು ವರ್ಣಿಸಬೇಕಾಗಿಲ್ಲ. ಅದನ್ನು ಸ್ವಲ್ಪದರಲ್ಲಿ ವಿವರಿಸುವದಾದರೆ **ಭೂಸ್ವರ್ಗ**ವೆಂದರೆ ಸಾಕು. ಆ ಪ್ರದೇಶದ ಕೇವಲ ನಿಸರ್ಗ ರಮಣೀಯತೆಯನ್ನು ವರ್ಣಿಸುವದು ಕುಮತಿಗಳ ಕಾಕುಕವಿತೆಯಂತಾಗುವದು. ವಿಷಯೋಪಭೋಗದ ದೃಷ್ಟಿಗಳು ಪರಮಾತ್ಮನ ಸೃಷ್ಟ್ಯಾದಿಗಳ ಗುಣಗಳನ್ನು ಕೊಂಡಾಡುವದರಲ್ಲಿ ಕಾರಣವಾಯಿತು. ಮುಂದೆ ಹಾಗೇ ತೆರಳಿ ಪಂಜಾಬ ಪ್ರಾಂತದಲ್ಲಿ, ಲಾಹೋರ, ರಾವಳಪಿಂಡಿ, ಪೇಶಾವರ ಸ್ಥಳಗಳನ್ನು ನೋಡಿ ಮುಲ್ತಾನ, ಸಕ್ಕರಜೋಧಪುರ, ಬಿಕಾನೇರ ಮಾರ್ಗವಾಗಿ ಕುರುಕ್ಷೇತ್ರ ಮೈದಾನವನ್ನು ತಲುಪಿದರು. ಆ ಮೈದಾನದಲ್ಲಿ ಭಾರತ ಯುದ್ಧದ ಕುರುಹುಗಳು ಎಂದು ಹೇಳುತ್ತಿರುವ ಸ್ಥಳಗಳನ್ನು ನೋಡಿ, 'ದೈವಸಂಕಲ್ಪವು ಎಂಥದು! ವರ್ಣಾಶ್ರಮೋಚಿತ ಧರ್ಮಗಳು ಲುಪ್ತವಾಗಿ ಅನ್ಯಾಯವೇ ಪ್ರಬಲಿಸಿರುವ ಇಂಥ ಕಾಲದಲ್ಲಿ ಆ ಭಾರತ ವೀರಕ್ಷತ್ರಿಯ

ರಾಜನೊಬ್ಬನಾದರೂ ಇರಬಾರದಿತ್ತೆ! ಇದ್ದಿದ್ದರೆ ಇಷ್ಟು ಕಷ್ಟಕ್ಕೆ ಅವಕಾಶವಾಗುತ್ತಿತ್ತೆ!' ಎಂದು ಮರುಗಿದರು. 'ಆದರೆ ಮಾಡುವದೇನು? ಕಾಲನಿಯಾಮಕನ ಸಂಕಲ್ಪವನ್ನು ಯಾರೂ ಮಾರ್ಪಡಿಸಲಾರರಷ್ಟೆ! ಆ ಕಾಲದ ವೀರಾಧಿ ವೀರನಾದ **ಅರ್ಜುನನು ಈಗಿದ್ದರೂ ಕೂಡಾ ಕಾಲನಿಯಾಮಕನ ಸಂಕಲ್ಪ ಚಕ್ರದ ಬಲಿಗೆ ಸಿಕ್ಕು ಅಧರ್ಮ ಅನ್ಯಾಯಗಳನ್ನು ನೋಡುತ್ತಾ "ಕಾಲಾಯ ತಸ್ಮೈ ನಮಃ"** ಎಂದು ಸುಮ್ಮನೆ ಇದ್ದು ಗತ್ಯಂತರ ಇಲ್ಲವಲ್ಲಾ ಅನ್ನಬಹುದಾಗಿತ್ತು' ಅಂತ ಸಮಾಧಾನ ಮಾಡಿಕೊಂಡು ಮೈದಾನದಲ್ಲಿ ಸಂಚರಿಸಿ ಪುನಃ ಹರಿದ್ವಾರ ಮಾರ್ಗವಾಗಿ ನೇಪಾಳ ಪ್ರಾಂತದ ನೇಪಾಲ ಗಂಜ, ಧವಳಗಿರಿ, ಮುಕ್ತಿನಾಥ ಮುಖೇನ ಗಂಡಿಕೀ ನದಿ ತಲುಪಿದರು. ಆ ನದಿಯಲ್ಲಿ ಸಾಲಿಗ್ರಾಮಗಳು ಉತ್ಪತ್ತಿಯಾಗುವ ಸ್ಥಲ ವಿಶೇಷದಲ್ಲಿ ಸ್ನಾನಾಹ್ನಿಕಾದಿಗಳನ್ನು ಮಾಡಿಕೊಂಡು ಆಹಾ! **"ಈ ನದಿಯ ಮಹಿಮಾ ಎಷ್ಟೆಂದು ವರ್ಣಿಸಬೇಕು."** ಎಂದು **ಸಾಲಿಗ್ರಾಮಕ್ಕಭಿಷೇಕಮಾಡಿ ತೀರ್ಥವನ್ನು ತೆಗೆದುಕೊಂಡರೆ ಅನೇಕ ಜನ್ಮಾರ್ಜಿತ ಪಾಪ ಸಂಚಯ ನಾಶವಾಗುವುದಲ್ಲದೇ ಈ ಜನ್ಮಕ್ಕೂ, ಮುಂದೆ ಬರುವ ಅನೇಕ ಜನ್ಮಗಳಿಗೂ, ಪುಣ್ಯರಾಶಿಯನ್ನು ಸಂಗ್ರಹಿಸಬಹುದೆಂದು ಶಾಸ್ತ್ರಾಧಾರವಿದೆ.** ಅಂದಮೇಲೆ ಅನೇಕಾನೇಕ ಸಾಲಿಗ್ರಾಮಗಳ ಉತ್ಪತ್ತಿಗೆ ಕಾರಣವಾದ ಈ ಗಂಡಕೀ ನದಿಯ ಮಹಿಮೆ ಅಗಾಧವಾದದ್ದು, ತಾನು (ಪರಮಾತ್ಮನು) ಸೃಷ್ಟಿಸಿದ ಬ್ರಹ್ಮಾಂಡದೊಳಗಿನ ಸಕಲ ಅಚೇತನಗಳಲ್ಲೊಂದಾದ ಈ ಶಿಲಾದಲ್ಲಿ ಇಷ್ಟೊಂದು ಮಹಿಮೆಯ-ವಿಭೂತಿಯೆಂಬ ರೂಪವಿಶೇಷದಿಂದ ಪರಮಾತ್ಮನು ಅಭಿವ್ಯಕ್ತನಾಗಿರುವದರಿಂದ ಈ ಪದಾರ್ಥಕ್ಕೆ ವಿಶೇಷ ಮಾಹತ್ಮ್ಯ ಉಂಟಾಗಿದೆ. ಹಾಂಗಾದರೆ, ಅಚೇತನಾಪೇಕ್ಷೆಯಾ ಚೇತನನಲ್ಲಿ ಶ್ರೀಶನ ಸನ್ನಿಧಾನ ವಿಶೇಷವಿರುವದೆಂದು ಉಪನಿಷದಾದಿಗಳಲ್ಲಿ ಪ್ರತಿಪಾದಿಸಲ್ಪಡುವದು. ಅಂದಮೇಲೆ ಚೇತನರಿಂದ ಜಡಗಳಿಗೆ ಪಾವಿತ್ರ್ಯವುಂಟಾಗುವದನ್ನು ಬಿಟ್ಟು ಜಡಗಳಿಂದ ಚೇತನರಿಗೆ ಪಾವಿತ್ರ್ಯ ಉಂಟಾಗುವದೆಂದರೆ ಆಶ್ಚರ್ಯವೇ ಸರಿ. **"ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ । ತೇ ಪುನಂತ್ಯುರುಕಾಲೇನ ॥ ದರ್ಶನಾದೇವ ಸಾಧವಃ"** ಅಂತ ಭಾಗವತದಲ್ಲಿ ಹೇಳಿದ್ದಾರೆ ನಿಜ. ಆದರೆ ಇದರಲ್ಲೊಂದು ವಿಶೇಷವಿರುವದಾಗಿ ತೋರುತ್ತದೆ. ಅದಾವುದೆಂದರೆ "ದರ್ಶನಾದೇವ ಸಾಧವಃ" ಎಂದು ಹೇಳಿರುವದರಿಂದ ಸಾಧುತ್ವದಲ್ಲಿ ವಿಶೇಷವಿದೆ. ಸಾಧುತ್ವವು ಯಾವ ಪ್ರಾಣಿಗೂ ಕಾಯೇನ, ವಾಚಾ, ಮನಸಾ ಹಿಂಸಾಕ್ಕೆ ಕಾರಣನಾಗದಂತೆ ಚರಿಸುವುದು. ಈಷಣಾತ್ರಯಗಳಲ್ಲಿ ಮಮತಾರಹಿತನಾಗಿರುವದು. ತನ್ನ ಏಕಾದಶೇಂದ್ರಿಯಗಳನ್ನು ನಿಗ್ರಹಿಸಿ, ತನ್ನಲ್ಲಿಯೂ ಪ್ರತಿ ಪ್ರಾಣಿಗಳಲ್ಲಿಯೂ, ಜಡಗಳಲ್ಲಿಯೂ, ಶ್ರೀಶನ ಗುಣಕ್ರಿಯೆಗಳನ್ನು ಚಿಂತನೆ ಮಾಡುತ್ತ ದಯೆ–ಕ್ಷಮೆಗಳಿಂದ ಪರಿಪ್ಲುತನಾಗಿರುವಿಕೆಗೆ ಸಾಧುತ್ವವೆನ್ನಬೇಕು. ಇಂಥ ಸಾಧುತ್ವವುಳ್ಳ ಸಾಧುಗಳು ಜಗತ್ತಿನಲ್ಲಿ ಅತಿ ವಿರಳ. ಇಂಥ ಸಾಧುಗಳು ದುರ್ಲಭರಾಗಿರುವದರಿಂದ ಶಾಸ್ತ್ರಕರ್ತೃಗಳು ಅಚೇತನವಾದ ತೀರ್ಥಕ್ಷೇತ್ರಾದಿಗಳಿಗೆ ಪ್ರಾಶಸ್ತ್ಯ ಕೊಟ್ಟಿದ್ದಾರೆಂದು ಸಮಾಧಾನ ಮಾಡಿಕೊಂಡು ಮುಂದೆ ಲಲಿತಪಟ್ಟಣ, ಜನಕಪುರ, ದರ್ಭಾಂಗ, ಪಾಟ್ನಾ, ಬರಹನ್‌ಪೂರ ಮಾರ್ಗವಾಗಿ ಕಲ್ಕತ್ತ ಸೇರಿದರು. ಆಮೇಲೆ ಬ್ರಹ್ಮದೇಶವನ್ನು ನೋಡುವಗೋಸ್ಕರ ಢಾಕಾ,

ಚಿತಗಂಗಾ, ಇಸ್ಲಾಮಬಾದ, ಅರಾಕಾ ಇತ್ಯಾದಿ ಪಟ್ಟಣಗಳನ್ನು ನೋಡುತ್ತ "ಇರಾವತಿ" ನದಿ ತೀರವನ್ನು ಹಿಡಿದು ರಂಗೂನವರೆಗೂ ಹೋಗಿ ಹಿಂತಿರುಗಿ ಪುನಃ ಕಲ್ಕತ್ತಾಕ್ಕೆ ಬಂದರು. ಅಲ್ಲಿ ಕೆಲಕಾಲ ವಾಸಮಾಡಿ ಸಮೀಪದಲ್ಲಿ "ಭಾಗೀರಥಿ"ಯು ಸಹಸ್ರಮುಖದಿಂದ ಸಮುದ್ರ ಪ್ರವೇಶಿಸುವ ಸ್ಥಲದಲ್ಲಿಯೂ ಇದ್ದರು. ಇನ್ನು ಮುಂದೆ ದಕ್ಷಿಣಾಭಿಮುಖವಾಗಿ ತೆರಳುವವರಾದ್ದರಿಂದ ಈ ಭಾಗೀರಥಿಯು ದೂರಾಗುವಳೆಂದು ಬಹುಕಾಲದ ಸ್ನೇಹಿತರು ಆಗಲುವಾಗ ಅವರುಗಳ ಮನಸ್ಸು ತತ್ತರಿಸುವಂತೆ ಇವರು ತತ್ತರಿಸಲು **ಆ ದಿನ ರಾತ್ರಿ, ನೀನು ಸ್ಮರಣೆ ಮಾಡಿದಾಗ ಬರುವೆನೆಂಬುದಾಗಿ ಒಬ್ಬ ಸುಂದರ ಸ್ತ್ರೀಯಳು ಸ್ವಪ್ನದಲ್ಲಿ ಹೇಳಿದಂತಾಗಲು**, ಆಹಾ! ದೇವತೆಗಳು ಎಂಥಾ ದಯಾಳುಗಳು, ಅವರು ಯಾರಲ್ಲಿ ಅನುಗ್ರಹಿಸಿಬೇಕೆಂದು ಇಚ್ಛಿಸುವರೋ ಅವರಲ್ಲಿ ನಿರ್ವ್ಯಾಜ ಅನುಗ್ರಹಿಸುವರು ಅಂತಾ ಅಂದುಕೊಂಡು ಪ್ರಯಾಣ ಮಾಡಿ 'ಓರಿಸ್ಸಾ' ಪ್ರಾಂತ ಮಾರ್ಗವಾಗಿ 'ಚತುರ್ಧಾಮ' ಯಾತ್ರೆಗಳಲ್ಲೊಂದಾದ ಜಗನ್ನಾಥಪುರಿಗೆ ಬಂದರು. ಅಲ್ಲಿಯೂ ವಿಧ್ಯುಕ್ತ ದೇವ ಪಿತೃಕಾರ್ಯಗಳನ್ನು ಭಗವದರ್ಪಣ ಬುದ್ಧಿಯಿಂದ ಆಚರಿಸಿ ಪರಮಾತ್ಮನ ಸನ್ನಿಧಾನದಲ್ಲಿ ಕೆಲಕಾಲ ವಾಸಮಾಡುವರಾದರು. ಆ ಕ್ಷೇತ್ರದ ಗುಡಿಯ ಪರಿಚಾರಕರು ನಾಪಿತರು. (ಹಜಾಮರು) ಈ ವಿಲಕ್ಷಣವಾದ ಸಂಪ್ರದಾಯವು ಪ್ರಥಮದಲ್ಲಿ ಇವರ ಮನಸ್ಸಂಕೋಚವನ್ನುಂಟು ಮಾಡಿತು. ವಿಮರ್ಶನ ಮಾಡಲು "ಸಚ್ಛೂದ್ರೌಗೋಪನಾಪಿತಾ" ಎಂಬ ಭಾಗವತದ ವಚನ ಜ್ಞಾಪಕಕ್ಕೆ ಬಂದು ಮನಸ್ಸಮಾಧಾನವಾಯಿತು. ನಾಲ್ಕು ವರ್ಣಗಳ ಆಚಾರ (ಆಹಾರ, ವಿಹಾರ) ವಿಚಾರಗಳು ಸರ್ವತಃ ಒಂದುಗೂಡಿದರೂ ಒಂದೊಂದು ಪ್ರದೇಶದಲ್ಲಿ ವ್ಯವಹಾರವು ಬೇರೆ ಬೇರೆಯಾಗಿದೆ. ಇವುಗಳ ವ್ಯವಸ್ಥಾಪಕಾರದ ಋಷಿಗಳು ದೇಶಕಾಲಗಳನ್ನು ಅನುಸರಿಸಿ ಧರ್ಮ ಶಾಸ್ತ್ರದ ನಿಬಂಧನಾ ಮಾಡಿರುವರು. ಆದ್ದರಿಂದಲೇ ಇತರ ದೇಶಗಳಿಗಿಂತಲೂ ಈ ಭರತಖಂಡದ ಆಚಾರಗಳು ವಿವಿಧಗಳಾಗಿವೆ (ಇದರಂತೆ ಆಶ್ರಮ ಧರ್ಮಗಳು ಮಾತ್ರ ವಿವಿಧಗಳಾಗಿಲ್ಲ). ಇನ್ನು ವಾಚಕರ ಲಕ್ಷ್ಯದಲ್ಲಿರಲಿ. ಇದನ್ನರಿಯದೆ ಒಂದು ಪ್ರದೇಶದ ಆಚಾರವನ್ನು ಮತ್ತೊಂದು ಪ್ರದೇಶದವರು ನಿಂದಿಸುವದಾಗಲಿ, ಅವಹೇಳನ ಮಾಡುವದಾಗಲಿ ಯುಕ್ತವಲ್ಲ ಮತ್ತು ಹಿತಕರವೂ ಅಲ್ಲ. ಅಲ್ಲಿಂದ ಗಂಜಾಮ, ಗೋಪಾಲಪುರ, ಕಳಿಂಗ ಪಟ್ಟಣ, ವಿಶಾಖ ಪಟ್ಟಣ, ಕಾಶೀನಾಥ, ರಾಜಮಹೇಂದ್ರಿಗೆ ಬಂದರು. ಅಲ್ಲಿಯ "ಗೋದಾವರಿ" ನದಿಯ ವಿಸ್ತಾರವನ್ನು ನೋಡಿ ಆಶ್ಚರ್ಯಚಕಿತರಾದರು. ಅಲ್ಲಿಂದ "ಧವಳಗಿರಿ" (ವಿಜಯವಾಡಾ) ಬೆಜವಾಡಕ್ಕೆ ಬಂದು ಅಲ್ಲಿಯೂ ಕೃಷ್ಣಾ ನದಿಯ ವಿಸ್ತೀರ್ಣ ಆಶ್ಚರ್ಯವನ್ನುಂಟುಮಾಡಿತು. ಆ ಮೇಲೆ "ಮಂಗಳಗಿರಿ"ಗೆ ಬಂದು "ಪಾನಕ ನರಸಿಂಹ" ದೇವರನ್ನು ಸಂದರ್ಶಿಸಿ, ಅರ್ಧ ಪಾನಕವನ್ನು ಸ್ವೀಕರಿಸಿ ಅರ್ಧ ಬಿಡುವದು ಮತ್ತು ನೊಣ ಇರುವೆಗಳಿಲ್ಲದಿರುವದು ನೋಡಿ ಶ್ರೀಶನ ಅದ್ಭುತ ಮಹಿಮೆಯನ್ನು ಕೊಂಡಾಡಿದರು. ಅನಂತರ "ಭದ್ರಾಚಲಕ್ಕೆ" ಬಂದರು. ಅಲ್ಲಿ ರಾಮದಾಸನಿಂದ (ಗೋಪಣ್ಣ) ನಿರ್ಮಿತವಾದ ಗುಡಿಯನ್ನು ನೋಡಿ ಮತ್ತು ಆತನಲ್ಲಿ ಪರಮಾತ್ಮನು ತೋರಿಸಿದ ಅನುಗ್ರಹ ವಿಷಯಕ ಇತಿಹಾಸವನ್ನು ಕೇಳಿ ಶ್ರೀಮದಾಚಾರ್ಯರ

ಗ್ರಂಥ ಜಲಧಿಮೀನಾಗಿರುವವರಿಗೂ ಈ ರೀತಿ ದೃಢಭಕುತಿ ಬರುವದಿಲ್ಲವಲ್ಲ. ಹೀಂಗಾಗಲು ಕಾರಣವೇನೆಂದು ಯೋಚಿಸಲು ತತ್ವ ನಿಶ್ಚಯವಿಲ್ಲದಿರುವಿಕೆಯೇ ಕಾರಣ. ತತ್ವ ನಿಶ್ಚಯವಾಗಬೇಕಾದರೆ ಮುಖ್ಯವಾಗಿ ವೈರಾಗ್ಯಬೇಕು. ಅದಕ್ಕೆ ಪ್ರಥಮದಲ್ಲಿ ಆತ್ಮಾತ್ಮೀಯ ಮೋಹ ತ್ಯಜಿಸಬೇಕು. ಪಾಂಡಿತ್ಯಾದಿ ಮದಗಳಿಗೆ ಒಳಪಡಬಾರದು. ಕಾಮಾದಿ ವರ್ಗಗಳನ್ನು ಜಯಿಸಬೇಕು. ಅನನ್ಯ ಗತಿತ್ವೇನ ಪರಮಾತ್ಮನನ್ನೇ ಮೊರೆ ಹೋಗಬೇಕು. ಈ ರೀತಿ ಇದ್ದವರಿಗೇನೇ ಸಚ್ಛಾಸ್ತ್ರ ಶ್ರವಣ, ಮನನಾದಿಗಳಿಂದ ಯಥಾರ್ಥ ಜ್ಞಾನಭಕ್ತಿಗಳು ಜನಿಸುವವು. ಮತ್ತು ಅತ್ಯರ್ಥ ಪ್ರಸಾದವನ್ನುಂಟು ಮಾಡುವವು. ಮೇಲ್ಕಂಡ ಸಹಕಾರಿಗಳಿಂದ ವಿರಹಿತವಾದ ಸಚ್ಛಾಸ್ತ್ರ ಪ್ರವಚನ (ಅಧ್ಯಯನ)ದಿಂದುಂಟಾಗುವ ಜ್ಞಾನವು ಮತ್ಸ್ಯಗಳಿಗೆ ಜಲಗತ ಚಂದ್ರಬಿಂಬ (ಯಥಾರ್ಥ ಚಂದ್ರ)ನೆಂಬ ಜ್ಞಾನಸದೃಶವಾಗಿರುವದೆಂದುಕೊಂಡರು. ಮುಂದೆ ನೆಲ್ಲೂರು, ಗೂಡೂರು, ಮದ್ರಾಸ ಮಾರ್ಗವಾಗಿ "ಕಂಚೀ" ಕ್ಷೇತ್ರಕ್ಕೆ ಬಂದರು. ಅದು ಶಿವ ಕಂಚಿ'ಯೆಂತಲೂ, ವಿಷ್ಣು ಕಂಚಿಯೆಂತಲೂ ಎರಡು ವಿಧವಾಗಿದೆ. ಅಲ್ಲಿಯೂ ಪಿತೃಗಳಿಗೆ ಹವಿರ್ದಾನ ಮಾಡುವ ವಿಧಿಗನುಸರಿಸಿ ಆ ಕಾರ್ಯವನ್ನು ನೆರವೇರಿಸಿದರು. ಅಲ್ಲಿಯವರೆಗೆ ನೋಡಿದ ಗುಡಿಗೋಪುರಗಳಿಗೂ ಈ ದಕ್ಷಿಣದಲ್ಲಿರುವ ಗುಡಿಗೋಪುರಗಳಿಗೂ ವೈಲಕ್ಷಣ್ಯವಿದೆ. ಇದರಂತೆ ಆಚಾರ, ವಿಚಾರ, ಆಹಾರ ಪಾನಗಳು, ಉಡುಗೆ ತೊಡುಗೆಗಳು, ಜನರ ಭಾಷಾ ಸ್ವಭಾವಗಳು ಬೇರೆ ಬೇರೆಯಾಗಿವೆ. ಇದನ್ನು ನೋಡಿ ಪರಮಾತ್ಮನ ಸೃಷ್ಟಿ ಸ್ಥಿತಿಲಯಾದಿ ವೈಲಕ್ಷಣ್ಯಗುಣಾನುಸಂಧಾನ ಮಾಡಿದರು. ಮತ್ತು ತಿರ್ಯಗ್ಯೋನಿಜ ಪ್ರಾಣಿಯಾದ ಹಲ್ಲಿಯನ್ನು ಪರಮಾತ್ಮನು ಉದ್ಧಾರ ಮಾಡಿದ ಕಥೆ ಕೇಳಿ ಬೆರಗಾಗಿ, ಯಾವಚ್ಚೇತನರಲ್ಲಿ ಶ್ರೇಷ್ಠರೆಂದೆನಿಸಿದ ಮಾನವರು ಏತಕ್ಕೆ ಜಾಗೃತಿ-ಉದ್ಧೃತ ರಾಗುವದಿಲ್ಲ! ಇವರಲ್ಲಿಯ ಅಭಿಮಾನ, ಅಹಂಕಾರಗಳೇ ಉದ್ಧೃತಿಗೆ ಪ್ರತಿಬಂಧಕವಾಗಿವೆ. ಆದ್ದರಿಂದ, ಅಂಥ ಅಹಂಕಾರಾದಿಗಳಿಂದ ದೂರವಾಗಿರಬೇಕೆಂದು ತಿಳಿದುಕೊಂಡರು.

೧೬. ಸಾಕುತಾಯಿ ಸಾಕೆಂದಳು.

ಅಲ್ಲಿಂದ ಪ್ರಯಾಣ ಮಾಡುವಾಗ ದೇಶಕಾಲಾದಿಭೇದದಿಂದ ಜ್ವರವು ಬರಹತ್ತಿತು. ಆದಾಗ್ಯೂ ಹಾಗೇ ಪ್ರಯಾಣ ಮಾಡುತ್ತ ಚಂಗಲ್ಪಟ್ಟ, ಪಕ್ಷಿ ತೀರ್ಥಕ್ಕೆ ಬರುವಷ್ಟರಲ್ಲಿ ಜಾಡ್ಯವು ಹೆಚ್ಚಿತು. ಆದರೂ ತಮ್ಮ ನಿತ್ಯ ನೈಮಿತ್ತಿಕ ಅಹ್ನೀಕಾದಿಗಳನ್ನು ಬಿಡದೆ ಆಯಾ ದೇಶಕಾಲೋಚಿತ ಕರ್ಮಾನುಷ್ಠಾನ ಮಾಡುತ್ತ ನಡೆಯುತ್ತಿದ್ದರು. ಈ 'ಪಕ್ಷಿ ತೀರ್ಥ'ದಲ್ಲಿಯೂ ಮಾಡಬೇಕಾದ ಪಿತೃ ಕಾರ್ಯಗಳನ್ನು ಮುಗಿಸಿದರು. ಅಲ್ಲಿ ಮಧ್ಯಾಹ್ನ ಸಮಯಕ್ಕೆ 'ಪಕ್ಷಿ'ದ್ವಯಗಳು ಬಂದು ತಮ್ಮ ಹವಿಸ್ಸು ಸ್ವೀಕಾರ ಮಾಡಿಕೊಂಡು ಹೋಗುವದು ಇವರನ್ನಾಶ್ಚರ್ಯಗೊಳಿಸಿತು. ಆಮೇಲೆ ಕುಂಭಕೋಣಕ್ಕೆ ಬರಲು ಅಲ್ಲಿ ಕಾವೇರಿ ನದಿ ಸ್ನಾನ ಪಾನಾದಿಗಳಿಂದ ಜ್ವರವು ನಿಂತಿತು. ಆದಾಗ್ಯೂ ಯಾವ ಆಹಾರವು ಬೇಡವಾಗಿ ಎಣ್ಣೆಯನ್ನು ಕುಡಿಯುವ ಉತ್ಕಟ ಇಚ್ಛೆಯುಂಟಾಯಿತು. ಅದನ್ನು ಕುಡಿಯಲಾರಂಭಿಸಿದರು. ಇದರಿಂದ 'ಕಾಮಣಿ' (Jaundice) ಆಗಿ ಮೈಯಲ್ಲಿ ಬಾವು ಬಂತು. ಆದರೂ ಉಪಚಾರದ ಸಲುವಾಗಿ ಧಾವಿಸದೆ ತಮ್ಮ

ಮಾರ್ಗವನ್ನೇ ಕ್ರಮಣ ಮಾಡಿ ತಂಜಾವೂರ, ತಿರುಚಿನಾಪಳ್ಳಿ ಕ್ರಮದಿಂದ ಶ್ರೀರಂಗ ಕ್ಷೇತ್ರಕ್ಕೆ ಬಂದರು. ಅಲ್ಲಿ ಶ್ರೀರಂಗನಾಥನನ್ನು ಸಂದರ್ಶಿಸಿ ಆ ಗುಡಿಯ ಸಪ್ತಾವರಣಗಳನ್ನು, ಬ್ರಹ್ಮಾಂಡ ಪಿಂಡಾಂಡಗಳ ಸಪ್ತಾವರಣಗಳಿಗೆ ಸಮನ್ವಯ ಮಾಡುತ್ತ ಅಲ್ಲಿಯ ಕಾವೇರಿ ನದಿಯನ್ನು ವಿರಜಾನದಿತ್ವೇನ ಚಿಂತನ ಮಾಡಿದರು. ಅಲ್ಲಿಂದ ಮಧುರಾಕ್ಕೆ ಬಂದಾಗ "ಮೀನಾಕ್ಷಿಯ" ಅತ್ಯದ್ಭುತ ಗೋಪುರಗಳು ಸಾನಂದಾಶ್ಚರ್ಯವನ್ನುಂಟುಮಾಡಿದವು. ಹೀಗೆ ಆ ಭಾಗದಲ್ಲಿರುವ ದರ್ಭಶಯನ, ನವಪಾಷಾಣಾದಿ ಕ್ಷೇತ್ರಗಳನ್ನು ನೋಡಿ ಭರತ ವರ್ಷದ ದಕ್ಷಿಣ ಸೀಮಾ ಎನಿಸಿದ "**ರಾಮೇಶ್ವರ**"ವನ್ನು ತಲುಪಿದರು. ಆ ಕ್ಷೇತ್ರವು ಭರತ ವರ್ಷದ ಕ್ಷೇತ್ರಗಳಲ್ಲಿ ಅಗ್ರಸ್ಥಾನವನ್ನು ಪಡೆದಂತೆ ಗುಡಿಯ ವಿಸ್ತೀರ್ಣವಾದರೂ ಅಗ್ರಸ್ಥಾನವನ್ನೇ ಪಡೆದಿದೆ. ಅಲ್ಲಿ ಪುನಃ ಸಂಗೋರಾಮನು ಕೂಡಿದನು. ಅಲ್ಲಿಯೂ ಮಾಡಬೇಕಾದ ದೇವ, ಪಿತೃ ಕಾರ್ಯಗಳನ್ನು ಮಾಡಿ ಕೆಲ ಕಾಲ ವಾಸಮಾಡುವವರಾದರು. ಆ ಕ್ಷೇತ್ರದಲ್ಲಿ ಎರಡು, ಮೂರು ಸಮುದ್ರಗಳ ಸಂಗಮವು ಪೂರ್ವದಲ್ಲಿ ನೋಡಿದ ನದಿ, ಸಂಗಮಗಳಿಗಿಂತಲೂ ವಿಲಕ್ಷಣವಾಗಿತ್ತು. ಇದರ ತರಂಗಗಳ ಬಡಿತವು ಪರ್ವತಗಳನ್ನು ಕದಲಿಸುವಂಥವುಗಳಾಗಿದ್ದವು. ಅದನ್ನು ನೋಡಿ ವಿಷಯ ತರಂಗಗಳು ಯೋಗಿಯ ಮನಸ್ಸನ್ನೂ ಚಲಿಸುವಂತೆ ಮಾಡುವವು. ಅದಕ್ಕೆ ಶ್ರೀರಾಮಚಂದ್ರನು ಸಮುದ್ರದ ದರ್ಪವನ್ನು ಅಡಗಿಸಿ ಸೇತುವೆಯನ್ನು ಕಟ್ಟಿ ದಶಶಿರನನ್ನು ಭಂಗ ಮಾಡಿ ನಿಷ್ಕಳಂಕ ಸೀತೆಯನ್ನು ಸ್ವೀಕರಿಸಿದಂತೆ, ವಿಷಯ ತರಂಗಗಳಿಂದ ಚಲಿಸಿದಂತೆ ಮನಃಸ್ಥೈರ್ಯ ಪ್ರದಾನ ಮಾಡಿ ವೈರಾಗ್ಯರೂಪಿ ಸೇತುವೆಯಿಂದ ದಶೇಂದ್ರಿಯಗಳನ್ನು ಜಯಿಸಿ ನಿಷ್ಕಳಂಕ ಭಕ್ತಿಯುಳ್ಳ ಜೀವನನ್ನು ಪರಮಾತ್ಮನು ಉದ್ಧರಿಸುವನೆಂದು ಚಿಂತನೆ ಮಾಡಿದರು. ಈ ಧನಷ್ಕೋಟಿ ಕ್ಷೇತ್ರದಿಂದ ಹೊರಟು ಕನ್ಯಾಕುಮಾರೀ ಕ್ಷೇತ್ರಕ್ಕೆ ಬಂದರು. ಅಲ್ಲಿಯ ಉಸುಕಿನ ಕಣಗಳು ಧಾನ್ಯದಂತೆ ಇರುವದನ್ನು ನೋಡಿ ಆಶ್ಚರ್ಯಚಕಿತರಾದರು. ತದನಂತರ ಉಭಯರು ಕೂಡಿ ಅನಂತಶಯನ (ತ್ರಿವೇಂದ್ರಮ್) ಮಧುರಾ, ಈರೋಡ, ಶೇಲಂ, ಚಿತ್ತೂರ, ಘಟಿಕಾಚಲಾದಿ ದಕ್ಷಿಣ ಪ್ರಾಂತದ ಕ್ಷೇತ್ರಗಳನ್ನು ಸೇವಿಸಿ, ಶ್ರೀ ತಿರುಪತಿ ಕ್ಷೇತ್ರ ಪರ್ವತಾರೋಹಣ ಮಾಡುತ್ತ ಮಧ್ಯದಲ್ಲಿ ಸ್ವಲ್ಪ ವಿಶ್ರಾಂತಿಗಾಗಿ ಸೋಪಾನದ ಮೇಲೆ ಕುಳಿತಿರಲು ಆದವಾನಿಯ ತಾನಾಜಿ ರಂಗರಾಯನೆಂಬ ಗೃಹಸ್ಥನು ಪರ್ವತಾರೋಹಣ ಮಾಡುತ್ತಿರುವದನ್ನು ಗುರ್ತಿಸಿ, ಈ ಗೃಹಸ್ಥನು ನಮ್ಮೂರಿನವನು ಅಂತಾ ಸಂಗೋರಾಮನ ಮುಂದೆ ತಿಳಿಸಿ ತೋರಿಸಿದರು. ಅವನು ರಂಗರಾಯರಲ್ಲಿಗೆ ಹೋಗಿ, ನಿಮ್ಮೂರು ಯಾವದು? ನಿಮ್ಮೂರಿನವರು ಯಾರಾದರೂ ದೇಶಾಂತರಕ್ಕೆ ಹೋಗಿದ್ದಾರೆಯೇ? ಅಂತ ಪ್ರಶ್ನೆ ಮಾಡಲು, 'ನಮ್ಮ ಸ್ಥಳ ಆದವಾನಿ, ನಮ್ಮೂರಿನ ಮುತ್ತಿಗಿ ಶ್ರೀನಿವಾಸಾಚಾರ್ಯರೆಂಬುವರು ದೇಶಾಂತರ ಹೋಗಿದ್ದಾರೆ. ಅವರು ಹೋಗಿ ೭/೮ ವರ್ಷಗಳಾದವು. ಅವರು ಎಲ್ಲಿರುವರು ಸಹಾ ತಿಳಿದಿಲ್ಲ. ಆದರೆ ಅವರು ಜೀವಂತಯಿದ್ದ ಬಗ್ಗೆ ಆಗಾಗ ಅವರ ತಾಯಿಗೆ ಪತ್ರ ಬರುತ್ತವಂತೆ' ಅಂತಾ ಹೇಳಿದರು. ಆಗ ಸಂಗೋರಾಮನು, ಆ ಬಾವಾಜಿ ವೇಷಧಾರಿಗಳೇ ನಿಮ್ಮ ಮುತ್ತಿಗಿ ಆಚಾರ್ಯರು ಅಂತಾ ತೋರಿಸಿದನು. ತತ್ಕಾಲ ರಂಗರಾಯನು ದಿಙ್ಮೂಢನಾಗಿ ಕಣ್ಣೀರು ಸುರಿಸುತ್ತ, ಮಹಾಸ್ವಾಮೀ! ನಮಸ್ಕಾರವೆಂದು

ಸಾಷ್ಟಾಂಗ ನಮಸ್ಕಾರ ಮಾಡಿದನು. ಆಗಿವರು (ಈ ಚರಿತ್ರ ನಾಯಕರು) ತಮ್ಮನ್ನು ಗುರ್ತಿಸಬಾರದೆಂದು "ತುಮ್ ಕೌನ ಹೈ, ಚಲೇಜಾವ್" (ನೀನು ಯಾರು? ಹೊರಟುಹೋಗು) ಅಂತ ಹಿಂದೀ ಭಾಷೆಯಿಂದ ಝುಬರಿಸಿದರು. ಆಗ ಆತನು ಗಾಬರಿಯಾಗಿ ಹಿಂದಕ್ಕೆ ಸರಿದನು ಈ ರೀತಿ ಏತಕ್ಕೆ ಬೆದರಿಸುವಿರಿ, ನಿಜ ಸ್ಥಿತಿ ವ್ಯಕ್ತಪಡಿಸಿ, ಆ ಗೃಹಸ್ಥನನ್ನು ಸಂತೋಷಪಡಿಸಿರಿ, ಅಂತಾ ಸಂಗೋರಾಮನು ಕನ್ನಡ ಭಾಷೆಯಿಂದಲೇ ನುಡಿದನು. ಅವರಿಗಾದರೂ ಆನಂದೋದ್ರೇಕವಾಗಿ ರಂಗರಾಯರನ್ನು ತಮ್ಮ ಹತ್ತಿರ ಕೂಡಿಸಿಕೊಂಡು ಸರ್ವರ ಯೋಗಕ್ಷೇಮವನ್ನು ವಿಚಾರಿಸಿ ನಂತರ ಆ ಮೂರು ಮಂದಿಕೂಡಿ ಬೆಟ್ಟವನ್ನು ಹತ್ತಿದರು. ಅಲ್ಲಿಂದ ಮುತ್ತಿಗಿ ರಾಧಾಬಾಯಿ (ಆದವಾನಿ)ಗೆ ರಂಗರಾಯನು ತಾರು (ತಂತಿ) ಮಾಡಿದನು. ಕಠೋರತೆಯಿಂದ ಮನೆಯಲ್ಲಿ ಅನೇಕ ರೀತಿ ಕಷ್ಟಪಡಿಸಿ, ದುರ್ಭಾಷೆಗಳನ್ನಾಡಿ, ಸಾತ್ವಿಕನಾದ ಪ್ರಬುದ್ಧ ಮಗನನ್ನು ದೇಶಾಂತರ ಪಾಲು ಮಾಡಿದ "ಆತ್ಮಘಾತಕೀ" ಎಂದು ಜನರು ನಿಂದಿಸುವದರಿಂದ, ಸೊಸೆಯು ಪ್ರಬುದ್ಧಾವಸ್ಥೆಗೆ ಬಂದ ಮೂಲಕ ಬೀಗರೂ ತಥಾ ಆಪ್ತೇಷ್ಟರು ಆಡುವ ನಿಷ್ಠುರ ವಚನಗಳಿಂದಲೂ ಮನೆಯಲ್ಲಿ ಸರಿಯಾದ ವ್ಯವಸ್ಥಾಪಕರಿಲ್ಲದೆ ಸಾಂಪತ್ತಿಕ ವ್ಯವಹಾರಗಳು ಅಸ್ತವ್ಯಸ್ತವಾಗಿದ್ದರಿಂದ ಅನೇಕ ಕಷ್ಟ-ನಿಷ್ಠುರಗಳನ್ನು ಅನುಭವಿಸಿ ತ್ರಸ್ತಳಾಗಿ, 'ಮಗನು ಯಾವಾಗ ಬಂದಾನು?' ಅಂತಾ ಚಾತಕಪಕ್ಷಿಯಂತೆ ಎದುರು ನೋಡುತ್ತಿದ್ದ ರಾಧಾಬಾಯಿಯು ತಂತಿ ನೋಡಿದ ಕೂಡಲೇ ಆನಂದಾಂದೋಲನದಲ್ಲಿ ವಿಹರಿಸಿದಳು. ಆಗ ಆಕೆಯ ಮನಸ್ಸು (ಆ ಕಾಲದಲ್ಲಿ ವಿಮಾನವಿದ್ದಿದ್ದರೆ ಅದರಲ್ಲಿಯೇ ಪ್ರಯಾಣ ಮಾಡಿ ತೀವ್ರ ಮಗನನ್ನು ನೋಡುತ್ತಿದ್ದಳು) ಮಹಾವೇಗದಿಂದ ಧಾವಿಸಿ ಮಗನಲ್ಲಿ ಲೀನವಾಯಿತು. ನಿರುಪಾಯದಿಂದ ಸಾಯಂಕಾಲದವರೆಗೂ ವೇಳೆ ಕಳೆದು ರೈಲಿನಿಂದ ಮರುದಿವಸ ಮುಂಜಾನೆ ಒಂಭತ್ತು ಗಂಟೆಯೊಳಗಾಗಿ ತಿರುಪತಿ ದೇವಸ್ಥಾನ ಸೇರಿದಳು. ಆ ಗುಡಿಯ ಎರಡನೇ ಪ್ರಾಕಾರವಾದ ವ್ಯಾಸರಾಯರ ಪ್ರಾಕಾರದಲ್ಲಿ ವೇಷಧಾರಿ ಗೌತಮ ಋಷಿಯಂತೆ ಶೋಭಿಸುವ ಮಗನನ್ನು ನೋಡಿ ಬಿಕ್ಕಿ ಬಿಕ್ಕಿ ಅತ್ತಳು. ಈ ದುಷ್ಟ ಪಾಪಿಯ ಅಪರಾಧಗಳನ್ನು ಮನ್ನಿಸೆಂದು ಸಾಷ್ಟಾಂಗ ನಮಸ್ಕಾರ ಮಾಡಿ ಕ್ಷಮೆಯನ್ನು ಯಾಚಿಸಿದಳು. ಕೂಡಲೇ ತಾಯೀ! ನೀನು ನನಗೆ ನಮಸ್ಕಾರ ಮಾಡಬಹುದೇ? ಸನ್ಯಸ್ತನಾದರೂ ತಾಯಿಗೆ ನಮಸ್ಕಾರ ಮಾಡಬೇಕಲ್ಲವೇ? ನೀನು ನನ್ನಲ್ಲಿ ಮಾಡಿದ ಅಪರಾಧವೇನು ? ನಿನ್ನನುಗ್ರಹದಿಂದಲೇ ಪರಮಾತ್ಮನ ಸೃಷ್ಟಿಸ್ಥಿತಿಲಯಾದಿ ಗುಣವೈಚಿತ್ರ್ಯಗಳ ನೋಡೋ ಭಾಗ್ಯ ದೊರೆಯಿತು. ಮತ್ತು **"ಸ ರಕ್ಷತಾ ರಕ್ಷಿತಿ ಯೋ ಹಿ ಗರ್ಭೇ"** ಎಂಬ ವಾಕ್ಯದ ಸತ್ವಪರೀಕ್ಷೆಯಾಯಿತು. "ತಾಯಿಯೇ ಶಾಂತಳಾಗು" ಎಂದು ಇವರು ಸಹ ಪ್ರತಿ ಸಾಷ್ಟಾಂಗ ನಮಸ್ಕಾರ ಮಾಡಿದರು. ಆಗ ಆಕೆಯು ಆನಂದೊದ್ರೇಕದಿಂದ ಮಗನನ್ನು ಅಪ್ಪಿಕೊಂಡು, ಈ ದೃಶ್ಯವು 'ಭರತರಾಮರ ಸಮಾಗಮದಂತೆ' ಪ್ರೇಕ್ಷಕರಿಗೆ ಅನಿಸಿತು. ಆ ಮೇಲೆ ತನ್ನಲ್ಲಿದ್ದ ಬೀಗದ ಕೈ ಕುಚ್ಚನ್ನು ಮುಂದೆ ಒಗೆದು, 'ಈ ವೇಷ ನನ್ನಿಂದ ನೋಡಲಾಗದು. ವಿಸರ್ಜನ ಮಾಡು' ಅಂತಾ ಕಣ್ಣೀರು ಸುರಿಸುತ್ತ ನುಡಿದಳು. "ಮಹದಾಜ್ಞಾ" ಎಂದು 'ತಾಯೀ! ಈ ಬೀಗದ ಕೈ ಕುಚ್ಚನ್ನು ತೆಗೆದುಕೊಂಡು ಏನು ಮಾಡಲಿ, ಅಂತಾ ತಿರುಗಿ

ಕೊಟ್ಟರು. ಅಪ್ಪಾ, ನಿನ್ನ ಮನಸ್ಸಿಗೆ ಬಂದಂತೆ ಮಾಡು ಎಂದು ಪುನಃ ಕೈ ಕುಚ್ಚನ್ನು ಕೊಟ್ಟಳು. ಅಮ್ಮಾ, ನಶ್ವರವಾದ ದ್ರವ್ಯಾದಿ ಪದಾರ್ಥಗಳು ಪರಮಾತ್ಮನ ಮಹಾತ್ಮ್ಯಜ್ಞಾನ ಪ್ರತಿಬಂಧಕಗಳೆಂದು ನನಗೆ ನಿಶ್ಚಯ ಜ್ಞಾನ ಇರುವದರಿಂದ ನಾನು ಮಾಡುವದು ನಿಮಗೆ ಸಮ್ಮತವಾಗದೆ ಪುನಃ ಪೂರ್ವದಂತೆ ವೈಮನಸ್ಸಿಗೆ ಕಾರಣವಾಗಬಾರದು. ಆದ್ದರಿಂದ ಇದನ್ನು ತಾವೇ ಇಟ್ಟುಕೊಂಡು ಅನುಭವಿಸಿರಿ. ತಮ್ಮ ಆಜ್ಞಾ ಪ್ರಕಾರ ಮನೆಗೆ ಬಂದು ಸೇವಕ ವೃತ್ತಿಯಿಂದಲೇ ಇರುವೆನು. ಹೀಗೆ ಅಂದದ್ದಕ್ಕೆ ಆಕೆಗೆ ಮತ್ತಷ್ಟು ದುಃಖೋದ್ರೇಕವಾಗಿ ಘಟ್ಟಿಯಾಗಿ ಅಳುತ್ತ 'ಪೂರ್ವದಲ್ಲಿ ನಿನಗೆ ನಾನಂದದ್ದು, ಮಾಡಿದ್ದು ಮರೆತುಬಿಡು. ಈ ಮನೆಗೆ ನೀನೇ ಯಜಮಾನನು, ಸ್ವತಂತ್ರನು, ನಿನ್ನ ಇಚ್ಛಾಕ್ಕೆ ಬಂದಂತೆ ಮಾಡು. ನನ್ನ ಜೀವಮಾನ ಪರ್ಯಂತ ಒಪ್ಪತ್ತು ಅನ್ನ ಬಟ್ಟೆ ಕೊಟ್ಟು ಸಂರಕ್ಷಣೆ ಮಾಡು. ಇದು ಮೀರಿ ಭಗವದಿಚ್ಛಾನುಸಾರ ಸರ್ವ ಸಂಪತ್ತು ವಿನಿಯೋಗವಾಗಿ ನೀನು ಭಿಕ್ಷಾಕ್ಕೆ ಹೊರಟರೆ ನಾನೂ ನಿನ್ನ ಹಿಂದೆ ಭಿಕ್ಷಾಕ್ಕೆ ಬರುವೆನು. ಇದಕ್ಕೂ ಹೆಚ್ಚಿಗೇನು ಹೇಳಲಿ' ಅಂತ ನುಡಿದು, ಬೀಗದ ಕೈಯನ್ನು ನಾನು ತೆಗೆದುಕೊಳ್ಳುವದಿಲ್ಲವೆಂದು ಸತ್ಯಾಗ್ರಹ ಮಾಡಿದಳು.

ಈಷಣತ್ರಯಗಳ ಸಂಗವು ಜ್ಞಾನ ಪ್ರತಿಬಂಧಕವೆಂದು ತ್ಯಜಿಸಿ ದ್ವಂದ್ವಗಳ ಸಹಿಸಿ ಶ್ರೀಶನ ಮಹಿಮೆಗಳನ್ನು ತಿಳಿಯುತ್ತ, ಸ್ಮರಿಸುತ್ತ ಸ್ವೇಚ್ಛಾನುಸಾರವಾಗಿ ಸಂಚರಿಸುತ್ತಿರುವ ನನಗೆ ಈಷಣಗಳ ಮಧ್ಯೆ ಇದ್ದು, ಕಮಲ ಪತ್ರದಂತೆ (ದ್ವಂದ್ವಗಳ ಬಗ್ಗೆ) ನಿರ್ಲಿಪ್ತನಾಗಿ ಇದ್ದು ನನ್ನ ಮಹಿಮಾ ತಿಳಿದುಕೋ, ಇಲ್ಲವಾದರೆ ಈಷಣಗಳಿಗೆ ಭೀತನಾಗಿ ದೂರಯಿದ್ದಂತಾಗುವದು. ಇದರಿಂದ ಪ್ರಸಂಗವಶಾತ್ ಜಡಭರತನಂತೆ ಚ್ಯುತನಾಗುವ ಪ್ರಸಂಗ ಬಂದೀತೆಂದು ತಾಯಿಯ ಮುಖೇನ ಶ್ರೀಶನು ತಿಳಿಸುವಂತೆ ಕಾಣುತ್ತದೆ. ಹೇ ಸ್ವಾಮೀ! ದುರವಗಾಹ್ಯವಾದ ಈ ತಾಯಿಯ ಮನಸ್ಸು ಈ ರೀತಿ ಸೌಮ್ಯಕ್ಕೆ ಬಂದದ್ದು ನಿನ್ನ ವಿಚಿತ್ರ ಲೀಲೆಯಲ್ಲದೆ ಮತ್ತೇನು! ಆದರೆ 'ಏನಂ ಬಂಧಯಾಮಿ' ಎಂಬ ಸಂಕಲ್ಪದಿಂದ ಸಂಸಾರದಲ್ಲಿರಿಸದೆ 'ಏನಂ ಮೋಚಯಾಮಿ' ಎಂಬ ಸಂಕಲ್ಪದಿಂದ ಮಹದನರ್ಥಸಮೂಹ ಮಧ್ಯೆ ಇರಿಸಿದರೂ ಜಯಿಸಬಲ್ಲೆ, ಕೃಪಾದೃಷ್ಟಿಯಿಂದ ಅನುಗ್ರಹಿಸೆಂದು ಪ್ರಾರ್ಥನಾ ಮಾಡಿಕೊಂಡು ಬೀಗದ ಕೈ ಸ್ವೀಕರಿಸಿ ದೀಕ್ಷಾವಿಸರ್ಜನ ಮಾಡಿದರು.

ಮಗನು ಬಹುದೇಶಗಳ ಸಂಚರಿಸಿ ಬಂದವನಾದ್ದರಿಂದ 'ಬ್ರಹ್ಮೋತ್ಸವವನ್ನು', ಕರೆದ ಮಾತ್ರ ಬರಲೊಪ್ಪಿದ್ದರಿಂದ 'ಆಮಂತ್ರಣೋತ್ಸವವನ್ನು' ಸಂಸಾರದಶಾನುಭವಿಸಲು ಒಪ್ಪಿದವನಾದ್ದರಿಂದ 'ಕಲ್ಯಾಣೋತ್ಸವವನ್ನು' ಮಾಡಿಸಿ ಸಂತೋಷದಿಂದ ಸ್ವಗ್ರಾಮಕ್ಕೆ (ಆದವಾನಿಗೆ) ಬಂದು ಸೇರಿದರು.

॥ ಇತಿ ದ್ವಿತೀಯೋಧ್ಯಾಯಃ ॥

III. ಅಥ ತೃತೀಯೋಧ್ಯಾಯಃ

೧. ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ
(ಮಾತೆಯ ಮನದಾಸೆ ಪೂರೈಸಿತು)

ಈ ಚರಿತ್ರ ನಾಯಕರು ಸತತ ಏಳು ವರ್ಷಗಳವರೆಗೆ ಅವಧೂತ ಚರ್ಯೆಯಿಂದ ಭಾರತ ವರ್ಷದ ಚತುಃಸೀಮಾಗಳಲ್ಲಿಯ ಯಾವತ್ ತೀರ್ಥಕ್ಷೇತ್ರಾದಿಗಳನ್ನು ಸಂಚರಿಸಿ, ತಾಯಿಯೊಡನೆ ಸ್ವಗ್ರಾಮ (ಆದವಾನಿ) ಪ್ರವೇಶ ಮಾಡುವಾಗ ಮಹಾಜನ ಸಮುದಾಯವು ಇವರಿಗೆ ಯೋಗ್ಯ ಸ್ವಾಗತವನ್ನಿತ್ತಿತು. ಅವರುಗಳಲ್ಲಿ ಅನೇಕರು ಇವರ ಪರ್ಯಟನ ವಿವರಗಳನ್ನು ಕೇಳಿ ಜ್ಞಾನಭಕ್ತಿ ವೈರಾಗ್ಯದ ಲಕ್ಷಣಗಳನ್ನು, ಕೆಲವರು ಸ್ಥೈರ್ಯಾದಿ ಗುಣಗಳನ್ನು, ಕೆಲವರು ಭಗವದನುಗ್ರಹ ಕೌತುಕವನ್ನು ಶ್ಲಾಘನ ಮಾಡಿದರು. ಈ ರಾಧಾಬಾಯಿಯನ್ನು ಅನುಕರಣ ಮಾಡೋಣಾದರಿಂದ ಫೇರಿಕಾರ್ ಭಾಗೀರಥಿಬಾಯಿಯೂ (ಅತ್ತೆ) ಈ ಸಂಚಾರಕ್ಕೆ ಕಾರಣೀಭೂತಳೆಂದು ಹೇಳಲು ಅಡ್ಡಿಯಿಲ್ಲ. ಈ ಅವಧಿಯಲ್ಲಿ ಫೇರಿಕಾರ್ ವೆಂಕೋಬರಾಯರು (ಮಾವಂದಿರು) ಸ್ವರ್ಗಸ್ಥರಾಗಿದ್ದರು. ಪತಿಯ ವಿಯೋಗ ಮೂಲಕ ಸಾಂಸಾರಿಕ ಕಷ್ಟನಷ್ಟಗಳಿಂದ ತ್ರಸ್ತಳಾಗಿದ್ದುದರಿಂದ ರಾಧಾಬಾಯಿಯಂತೆ, ಈ ಭಾಗೀರಥಿ ಬಾಯಿಯಾದರೂ ತನ್ನ ಮನೆಯ ಸ್ವಾಮಿತ್ವವನ್ನು ಇವರಿಗೆ ಒಪ್ಪಿಸಿಕೊಟ್ಟಳು. ಮನೆಯ ಸ್ವಾಮಿತ್ವವನ್ನು ವಹಿಸಿಕೊಡುವಾಗ ತಾಯಿಗೆ ಯಾವ ಮಾತು ಹೇಳಿದ್ದರೋ ಈಕೆಗಾದರೂ ಅದರಂತೆ ಹೇಳಿದಾಗ್ಯೂ ಆಗಲೂ, ಈಗಲೂ ನಿನ್ನ ತಾಯಿಯನ್ನು ಅನುಕರಣ ಮಾಡಿದ್ದೇನೆ ಎಂದು ಒಂದು ಮಾತಿನಲ್ಲಿ ಜಾಣತನದಿಂದ ತನ್ನ ಹಾರ್ದವನ್ನು ವ್ಯಕ್ತಪಡಿಸಿದಳು. ಮಗಳು ಪ್ರಬುದ್ಧಳಾಗಿದ್ದರಿಂದ ರಾಧಾಬಾಯಿಯ ಸಲಹೆಯಂತೆ ಇವರ ಅನುಮತಿ ಪಡೆದು ಒಂದು ದಿನ 'ಗರ್ಭಾಧಾನ' ಸುಮುಹೂರ್ತವನ್ನು ನೆರವೇರಿಸಿದಳು. ಇವರು ಸಂಸಾರ ದೆಶೆಯಲ್ಲಿದ್ದರೂ, ಪರಮಾತ್ಮನ ಅತ್ಯರ್ಥ ಪ್ರಸಾದದ ಧ್ಯೇಯವು ಇವರನ್ನು ಪದ್ಮಪತ್ರಾಂಬುದೋಪಾದಿಯಲ್ಲಿ ಅಲಿಪ್ತರನ್ನಾಗಿಟ್ಟಿತ್ತು. ಆದುದರಿಂದ ಧನಿಕರ ಪದ್ಧತಿಯಲ್ಲಿ ವಿಶೇಷ ಜುಗುಪ್ಸೆ ಉಂಟಾಗಿ ದ್ರವ್ಯಸಂಪಾದನ ಕಾರ್ಯಗಳನ್ನು ಬಿಟ್ಟು, ವ್ಯಯದಲ್ಲಿ (ದಾನ, ಧರ್ಮಗಳಲ್ಲಿ) ತಾತ್ಪರ್ಯವುಳ್ಳವರಾಗಿ ಸದ್ಧರ್ಮಗಳಾಚರಿಸುವದರಲ್ಲಿಯೂ, ಬೋಧಿಸುವದರಲ್ಲಿಯೂ ಪರಿಣಾಮ ಹೊಂದಿತು. ಈ ಮೂಲಕ ತಮ್ಮ ಸಂಚಾರ ಕ್ರಮವನ್ನು ಮತ್ತು ಅಲ್ಲಲ್ಲಿ ತಮ್ಮ ಅನುಭವಕ್ಕೆ ಬಂದ ಭಗವನ್ಮಹಿಮೆಯನ್ನು ಪ್ರತಿಪಾದಿಸಹತ್ತಿದರು. ಈ ರೀತಿ ಪ್ರತಿನಿತ್ಯವೂ ಅವಕಾಶ ದೊರೆತ ಹಾಂಗೆಲ್ಲಾ ಕೇಳುವದರಿಂದ ತಾಯಿಗೆ (ರಾಧಾಬಾಯಿ) ವೈರಾಗ್ಯವುಂಟಾಗಿ ಆ ಮಹಾಯಾತ್ರಾ (ತೀರ್ಥಯಾತ್ರೆ) ಮಾಡಬೇಕೆಂಬ ಲವಲವಿಕೆ ತನಗೂ ಉಂಟಾಗಿದೆ ಎಂದು ಮಗನಲ್ಲಿ (ಇವರಲ್ಲಿ) ತಿಳಿಸಲು 'ರೋಗಿ ಬಯಸಿದ್ದು ಹಾಲನ್ನು',

'ವೈದ್ಯ ಹೇಳಿದ್ದು ಹಾಲನ್ನು' ಅನ್ನುವಂತೆ ತೀರ್ಥಕ್ಷೇತ್ರಾದಿಗಳಿಗೆ ಹೊರಡಲು ಕೂಡಲೇ ಪ್ರಯಾಣ ಸನ್ನಾಹ ಮಾಡಿದರು. ಆ ವೃದ್ಧರಾದ ತಾಯಿ, ಅತ್ತೆಯವರು, ಚಿಕ್ಕವರಾದ ಹೆಂಡತಿ ಹಾಗೂ ಇಬ್ಬರೂ ಭಾವ ಮೈದುನಂದಿರು (ಹೆಂಡತಿಯ ತಮ್ಮಂದಿರು) ಒಟ್ಟಿಗೆ ನಡೆಯುವದಸಾಧ್ಯವೆಂದು ಎರಡು ದೊಡ್ಡ ಕುದುರೆಗಳನ್ನು ಖರೀದಿ ಮಾಡಿದರು. ಇವುಗಳೊಲ್ಲಂದರ ಮೇಲೆ ತಕ್ಕಮಟ್ಟಿಗೆ ಪಾತ್ರೆ ಪದಾರ್ಥ ಸಹಿತ ತಾಯಿಯು, ಮತ್ತೊಂದರ ಮೇಲೆ ಕೆಲವು ಹಾಸಿಗೆ ಬಟ್ಟೆಗಳೊಡನೆ ಅತ್ತೆ ಮತ್ತು ಆಕೆಯ ಮಕ್ಕಳಲ್ಲಿ ಯಾರಾದಗೂ ಪರ್ಯಾಯದ (ಪಾಳಿಯ) ಮೇಲೆ ಕೂತುಗೊಂಡು ಪ್ರಯಾಣ ಮಾಡುವದಾಗಿ ನಿರ್ಧರಿಸಿ; ತಾವು, ತಾಯೀ, ಅತ್ತೆ, ಹೆಂಡತಿ, ರಾಘವೇಂದ್ರ ಶ್ರೀನಿವಾಸರೆಂಬ ಭಾವ ಮೈದುನಂದಿರು ಮತ್ತು ಅಡಿಗೆ ನೀರಿನ ಸಲುವಾಗಿ ಲಕ್ಷ್ಮೀಬಾಯಿಯೆಂಬ ಅನಾಥ ಸ್ತ್ರೀಯರು ಹೀಗೆ ಏಳು ಮಂದಿ ಪ್ರಯಾಣ ಕೈಕೊಂಡರು. ನಶ್ವರವಾದ ಸಂಪತ್ತಿನಲ್ಲಿ ಹೇಯತಾ ಬುದ್ಧಿ, ಪರಮಾತ್ಮನೇ ರಕ್ಷಿಸತಕ್ಕವನೆಂಬ ದಾರ್ಢ್ಯಮೂಲಕ ಈ ಸಂಪತ್ತಿನಲ್ಲಿ ಯೋಗ್ಯ ವಿನಿಯೋಗದ ದೃಷ್ಟಿ ಪ್ರಧಾನವಾಗಿ ಇರೋಣದರಿಂದ ಉಷಃಕಾಲದಲ್ಲಿ ಸ್ನಾನಾಹ್ನಿಕ ತೀರಿಸಿಕೊಂಡು ಅರುಣೋದಯ ಸುಮಾರಕ್ಕೆ ಹೊರಟು ಎರಡು, ಮೂರು ಗಂಟೆ ನಡೆದು ಯಾವ ಗ್ರಾಮ ಬಂದರೂ ಆ ಗ್ರಾಮದಲ್ಲಿಳಿದುಕೊಂಡು ಆ ಗ್ರಾಮದ ಸರ್ವ ಬ್ರಾಹ್ಮಣರ ಭೋಜನ ಮಾಡಿಸಿ, ಆ ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಈ ಕ್ರಮದಿಂದ ಪ್ರಯಾಣ ಮಾಡುತ್ತಿದ್ದರು. ಈ ರೀತಿ ದ್ರವ್ಯ ಮನಬಂದಂತೆ ಧರ್ಮದಲ್ಲಿ ವ್ಯಯ ಮಾಡುತ್ತ 'ನಾಶಿಕ ಕ್ಷೇತ್ರ' ಸಮೀಪಕ್ಕೆ ಬಂದರು. ಮಾರ್ಗದಲ್ಲಿ ಕುದುರೆ ಬೆದರೋಣರಿಂದ ತಾಯಿಯು ಬಿದ್ದಳು. ಇದರಿಂದ ತಲೆಗೆ ಬಲವಾದ ಪೆಟ್ಟು ಹತ್ತಿತ್ತು. ಈ ಮೂಲಕ 'ನಾಶಿಕ'ದಲ್ಲಿ ಚಿಕಿತ್ಸಾ ಸಲುವಾಗಿ ಕೆಲವು ದಿನಗಳು ನಿಲ್ಲಬೇಕಾಯಿತು. ಗಾಯವು ಮಾಯದಾಗಿ ಬುದ್ಧಿವಿಕಾರವಾಗಿ ಸ್ತಬ್ಧತಾವುಂಟಾಯಿತು. ಇದರಿಂದ ಯಾವ ಇಂದ್ರಿಯಗಳು ಸರಿಯಾಗಿ ಕಾರ್ಯಕ್ಷಮಾ ಹೊಂದದೆ ಒತ್ತಟ್ಟಿಗೆ ಸುಮ್ಮನೆ ಕುಳಿತುಬಿಡುತ್ತಿದ್ದಳು. ಯಾರಾದರೂ ಎಬ್ಬಿಸಿದರೆ ಏಳಬೇಕು, ಮಲಗಿಸಿದರೆ ಮಲಗಬೇಕು, ಭೋಜನ ಮಾಡಿಸಿದರೆ ಮಾಡಬೇಕು. ಸಾಕು ಬೇಕೆಂದಾಗಲಿ, ಇಂಥಹದು ಬೇಕೆಂದಾಗಲಿ ಹೇಳಲು ಸಹ ಬರುತ್ತಿದ್ದಿಲ್ಲಾ. (ತಿಳಿಯುತ್ತಿದ್ದಿಲ್ಲಾ.) ಈ ರೀತಿ ಆಗೋಣದರಿಂದ ದಿನೇ ದಿನೇ ಅಶಕ್ತತೆಯು ಹೆಚ್ಚುತ್ತಾ ನಡೆಯಿತು. ಜ್ವರವೂ ಬರಹತ್ತಿತು. ಆದರೆ ಯಾವ ಮಾತಿಗೂ ಸರಿಯಾಗಿ ಉತ್ತರ ಕೊಡದದಿದ್ದರೂ "ಕಾಶಿಗೆ ಹೋಗೋಣ" ಎಂಬ ಮಾತು ಮಾತ್ರ ಒಂದೇ ಸವನೇ (ಯಾವಾಗಲೂ) ಅನ್ನುತ್ತಿದ್ದರು. ಇದರಿಂದ 'ಕಾಶೀ' ಕ್ಷೇತ್ರದ ವಾಸನಾ ವಿಶೇಷವಿದೆಯೆಂದು ತಿಳಿದು, ಆ ರೀತಿ ಪ್ರಯಾಣ ಅಸಾಧ್ಯವೆಂದು ರೈಲುಹತ್ತಿ ಅಬ್ಜಲಪುರಕ್ಕೆ ಬಂದರು. ಅಲ್ಲಿ ನರ್ಮದಾ ನದಿಯಲ್ಲಿ ಮಾಡಬೇಕಾದ ದೇವ, ಪಿತೃಕಾರ್ಯಗಳನ್ನು ತೀರಿಸಿಕೊಂಡು ಪ್ರಯಾಗ ಕ್ಷೇತ್ರಕ್ಕೆ (ಅಲಹಾಬಾದ) ಬಂದರು. ಅಲ್ಲಿ ತ್ರಿವೇಣಿ ಸಂಗಮದಲ್ಲಿ ಮಾಡಬೇಕಾದ ವೇಣಿದಾನ, ಪಿತೃಯಜ್ಞಗಳನ್ನು ಮುಗಿಸಿದರು. ಮಾರ್ಗದ ಖರ್ಚಿಗಾಗಿ ತಂದಿದ್ದ ದ್ರವ್ಯವು ವಿಶೇಷ ಖರ್ಚು ಆಗಿ ಸ್ವಲ್ಪವೇ ಉಳಿದುದರಿಂದ ಮನೆಯಲ್ಲಿ (ಆದವಾನಿಯಲ್ಲಿ) ಭೂ ಸ್ಥಾಪನಾ ಮಾಡಿಟ್ಟು ಬಂದಿದ್ದ ದ್ರವ್ಯವನ್ನು ತರಲೋಸುಗ ತಾವೊಬ್ಬರೇ ಆದವಾನಿಗೆ

ಬಂದು ಬೇಕಾದಷ್ಟು ದ್ರವ್ಯವನ್ನು ತೆಗೆದುಕೊಂಡು ಪ್ರಯಾಗಕ್ಕೆ ಹೊರಟರು. ರೈಲಿನ ಮೂಲಕ ಹೊರಡುವಾಗ ಮಾರ್ಗದಲ್ಲಿ ಒಂದೆರಡು ಘಂಟೆ ಅವಕಾಶ ದೊರೆತಾಗ ಸ್ನಾನಾಹ್ನೀಕ ತೀವ್ರ ಮುಗಿಸಿಕೊಂಡು ಮುಂದೆ ಪ್ರಯಾಣ ಮಾಡುತ್ತಿದ್ದರು. ಈ ರೀತಿ ಪ್ರಯಾಣ ಮಾಡುತ್ತ ಅಬ್ಜಲಪುರಕ್ಕೆ ಬರಲು ಅಲ್ಲಿ ನಾಲ್ಕಾರು ಗಂಟೆಯ ಅವಧಿಯು ಇದ್ದುದರಿಂದ ಸ್ನಾನಾಹ್ನೀಕ ತೀರಿಸಿಕೊಂಡು ತಮ್ಮ ಗೋಣಿಪಾಕೀಟಿಗೆ ಅವಿತುಗೊಂಡು ಮೂರನೇ ವರ್ಗದ ಪ್ರತೀಕ್ಷಾಸ್ಥಳದಲ್ಲಿ ಕುಳಿತಿರಲು, ಒಂದು ಸಪ್ತಕ ಅವಿಶ್ರಾಂತ ಪ್ರಯಾಣದಿಂದ ಶ್ರಮವಾಗಿದ್ದ ಮೂಲಕ ಕುಳಿತಲ್ಲಿಯೇ ಬಹು ತೀವ್ರ ನಿದ್ರಾಹತ್ತಿತು. ಈ ನಿದ್ರೆಯು ಅಲ್ಪ ಕಾಲವಾಗಿರದೆ ೮-೧೦ ತಾಸುಗಳು ಕಳೆದವು. ಈ ನಿದ್ರಾಭರದಲ್ಲಿ ಹೊರಳುತ್ತ ಹೊರಳುತ್ತ ಹೋಗುತ್ತ ತಮ್ಮ ಗೋಣಿಪಾಕೀಟಿಗೂ ತಮಗೂ ನಾಲ್ಕಾರು ಗಜದಷ್ಟು ಅಂತರವಾಯಿತು. ಆ ಮೇಲೆ ಎಚ್ಚರವಾಯಿತು. ನಿದ್ದೆ ಕಣ್ಣಿನಲ್ಲಿಯೇ ನಾಲ್ಕೂ ಕಡೆಗೆ ನೋಡಿದರು. ತಾವು ಕುಳಿತಿದ್ದಸ್ಥಳಕ್ಕೂ ಈಗಿನ ಸ್ಥಳಕ್ಕೂ ವಿಶೇಷ ವ್ಯತ್ಯಾಸ ಕಂಡುಬಂತು. ಆ ಸ್ಥಳದಲ್ಲಿ ಪ್ರಯಾಣಿಕರ ಗಲಾಟೆ ವಿಶೇಷವಿತ್ತು. ತೀಕೀಟು ಕೊಳ್ಳುವ ಕಿಟಕಿ ಸಮೀಪದಲ್ಲಿ ಒಬ್ಬರನ್ನೊಬ್ಬರು ನೂಕಾಡುತ್ತಿರುವದು ನೋಡಿದರು. ತಮ್ಮ ಪಾಕೀಟು ತಮ್ಮ ಹತ್ತರ ಇಲ್ಲದ್ದು ಕಂಡು ಗಾಬರಿಯಾದರೂ ಕುಳಿತಲ್ಲಿಯೇ ಕಣ್ಣುಗಳನ್ನು ಚನ್ನಾಗಿ ಒರೆಸಿಕೊಂಡು ನೋಡಿದರು. ಪಾಕೀಟು ಕಾಣಲಿಲ್ಲ. ಅಂತ್ಯಾವಸ್ಥಾದಲ್ಲಿದ್ದ ತಾಯಿಯೊಡನೆ (ಕನ್ನಡ ಭಾಷಾ ವ್ಯತಿರಿಕ್ತ ಅನ್ಯಭಾಷಾ ಸಹ ಬಾರದ) ಒಂದೂ ಅರಿಯದ ಹೆಂಗಸರನ್ನು, ಹುಡುಗರನ್ನು, ಪರದೇಶದಲ್ಲಿ ಬಿಟ್ಟು ದ್ರವ್ಯ ತರಲೋಸೂಗ ಬಂದ ನಾನು ಈಗ ದುಡ್ಡು ಕಳೆದುಕೊಂಡೆ. ಇನ್ನು ಮುಂದೆ ಏನು ಮಾಡಬೇಕು? ಈಗ ಪುನಃ ಆದವಾನಿಗೆ ಹೋಗಿ ದ್ರವ್ಯ ತರುವ ಬಗೆಯಾದರೂ ಹ್ಯಾಂಗೆ? ಈ ಹಾಳು ನಿದ್ರಾ ಇವತ್ತು ಹತ್ತುವದರ ಬದಲು ಪ್ರಯಾಗಕ್ಕೆ ಹೋದಮೇಲೆ ಹತ್ತಬಾರದಿತ್ತೆ? ಈಗಿನ ದ್ರವ್ಯ ಹೋಯಿತೆಂಬ ಖೇದವಿಲ್ಲದಿದ್ದರೂ ಮುಂದೆ ಹ್ಯಾಂಗೆ ಮಾಡಬೇಕೆಂಬ ಸಮಸ್ಯೆಯು ಎದುರು ನಿಂತಿತು. ಈ ರೀತಿ ಪರಿತಪಿಸುತ್ತಿರಲು ಜನಗಳು ಸರಿದಾಡುವದರಿಂದ ತಮ್ಮ ಗೋಣಿ ಪಾಕೀಟು ನಾಲ್ಕಾರು ಗಜ ದೂರದಲ್ಲಿ ಕಣ್ಣಿಗೆ ಬಿತ್ತು. ಅದರ ಹತ್ತಿರ ಒಬ್ಬ **ತ್ರಿನಾಮಧಾರಿ ಶೇಠನು** ಕುಳಿತಿದ್ದನು. ಅದನ್ನು ನೋಡಿ, ಆ ಪಾಕೀಟು ನನ್ನದಂತೆ ಕಾಣಬರುತ್ತದೆ. ಆದರೆ, ಅದು ನನ್ನ ಹತ್ತಿರ ಇರದೆ ಅಷ್ಟು ದೂರ ಇರಲು ಕಾರಣವೇನು? ನನ್ನಂಥ ಪಾಕೀಟು ಆ ಶೇಠನದು ಇದ್ದರೂ ಇರಬಹುದು, ಅಂತಾ ಅಂದುಕೊಂಡಾಗ್ಯೂ ಮನಸ್ಸು ಸಮಾಧಾನವಾಗದೆ ಏನೇ ಆಗಲಿ ಅದರ ಹತ್ತಿರ ಹೋಗಿ ನೋಡೋಣ ಅಂತ ಅನಿಸಿತು. 'ಛೇ! ಹೀಂಗೆ ಕಲ್ಪಿಸಿಕೊಂಡು ಆ ಪಾಕೀಟನ್ನು ಹಿಡಿದರೆ ಮಾಲೀಕನು (ಯಜಮಾನನು) ಸುಮ್ಮನಿರುವನೇ! ಆಮೇಲೆ ಒಂದಕ್ಕೊಂದು ಅನರ್ಥಕ್ಕೆ ಕಾರಣವಾದರೆ ಹೇಗೆ ಅಂತ ಹೆದರಿದರು. ಆದರೂ ಮನಸ್ಸು ಧಾವಿಸುತ್ತಿರುವದರಿಂದ ನೊಂದರೆ ಚಿಂತೆಯಿಲ್ಲ, ಸಂದೇಹ ಪರಿಹಾರವಾಗಲಿ' ಅಂತಾ ಸರಿಯುತ್ತ ಸರಿಯುತ್ತ ಆ ಪಾಕೀಟ ಸಮೀಪಕ್ಕೆ ಹೋಗಿ ಅದರ ಮಗ್ಗಲಲ್ಲಿ ಕುಳಿತರು. ಸ್ವಲ್ಪ ಹೊತ್ತು ಹಾಗೆ ಕೂತರು. ಆ ಶೇಠನು ಇತ್ತ ಕಡೆಗೆ ಸಹ ನೋಡದೆ ಹಾಗೇ ಕುಳಿತಿದ್ದನು.



ಶ್ರೀ ಮುತ್ತಿಗಿ
ಮನೆತನ ಆರಾಧ್ಯ
ಶ್ರೀ ವ್ಯಾಸರಾಜ ಗುರು
ಪ್ರತಿಷ್ಠಿತ ಶ್ರೀಮುಖ್ಯ
ಪ್ರಾಣದೇವರು
(ಹೂವಿನಹಡಗಲಿ)

ಶ್ರೀ ವ್ಯಾಸರಾಜಗುರು
ಪ್ರತಿಷ್ಠಿತ ಶ್ರೀಮುಖ್ಯ
ಪ್ರಾಣದೇವರು ರಣಮಂಡಲ
(ಆದೋನಿ)

ಶ್ರೀ ವ್ಯಾಸರಾಜ ಪ್ರತಿಷ್ಠಿತ
ಶ್ರೀ ಮಂಗರಾಯ
ಮುಖ್ಯಪ್ರಾಣ ಸನ್ನಿದಿ
(ಆದೋನಿ)

ಶ್ರೀಮುಖ್ಯ ಪ್ರಾಣ
ದೇವರು
ಗೋವಿನದಿನ್ನಿ

ಶ್ರೀಗಳವರು (ಶ್ರೀಮುತ್ತಿಗಿ ಆಚಾರ್ಯರು)
ಪೂರ್ವಾಶ್ರಮದಲ್ಲಿ ಸೇವಿಸಿದ
ಶ್ರೀ ಜಂಬುಬಂಡಿ ವಾದಿರಾಜಾಚಾರ್ಯರು



ಶ್ರೀಮುತ್ತಿಗಿ ಆಚಾರ್ಯರ
ಗುರುಗಳು ಹತ್ತಿ ಬೆಳಗಲ್
ಶ್ರೀನರಸಿಂಹಾಚಾರ್ಯರು



ಶ್ರೀ ಮುತ್ತಿಗಿ
ಶ್ರೀನಿವಾಸಾಚಾರ್ಯರ
(ಶ್ರೀಗಳವರ ಪೂರ್ವಾಶ್ರಮ)



ಶ್ರೀ 108
ಶ್ರೀ ರಘುಪ್ರೇಮತೀರ್ಥರು.

ಶ್ರೀಗಳವರಿಂದ ಪ್ರತಿಷ್ಠಿತ
ದಶಾವತಾರಯುಕ್ತ ಶ್ರೀಬದರಿನಾರಾಯಣ
ದೇವರು (ಆನಂದವನ, ಜಠರ)



ಶ್ರೀಭೀಮಸೇನ ದೇವರು
(ಆನಂದವನ, ಜಠರ)

ಶ್ರೀ ಮಹರುದ್ರದೇವರು
(ಆನಂದವನ, ಜಠರ)

ಶ್ರೀಗಳವರು ಇಚ್ಛೆಪ
ವೃದಾವನಕ್ಕೆ ತರಿಸಿಟ್ಟುಕೊ ಲಾ
(ಆನಂದವನ, ಜಠ

ಆಮೇಲೆ ಆ ಪಾಕೀಟನ್ನು ಸ್ಪರ್ಶ ಮಾಡಿ ಅದರಲ್ಲಿ ತಾವಿಟ್ಟಿದ್ದ ದ್ರವ್ಯವನ್ನು ಗುರ್ತಿಸಿದರು. ಈ ರೀತಿ ಮಾಡಿದಾಗ್ಯೂ ಆ ಶೇಠನಾಗಲಿ ಇತರರಾಗಲಿ ಆಕ್ಷೇಪಣೆ ಮಾಡಲಿಲ್ಲ. ಆಗ ಇದು ತಮ್ಮದೇ ಅಂತಾ ನಿಶ್ಚಯ ಮಾಡಿಕೊಂಡರು. ಅದನ್ನು ತೆಗೆದುಕೊಂಡು ತಮ್ಮ ಮುಂದಿಟ್ಟುಕೊಂಡು ಬೇಗ ತೆಗೆದು ನೋಡಿದರು. ಆ ಸಂದರ್ಭದಲ್ಲಿ ಆ ಶೇಠನು ಎದ್ದು ಎಲ್ಲಿಯೋ ಹೋದನು. ತಿರುಗಿ ಕಾಣಲಿಲ್ಲ. ಇದನ್ನು ನೋಡಿ ಆಶ್ಚರ್ಯಚಕಿತರಾದರು. "ಹೇ ಸ್ವಾಮಿ! ನೀನು ನನಗೋಸ್ಕರ ಈ ರೀತಿ ವೇಷ ತಾಳಿದೆಯಾ, ನೀನು ಎಂಥ ದಯಾಳು, **"ಸರಕ್ಷಿತಾರಕ್ಷತಿಯೋಽಹಿ "ಗರ್ಭೇ"** ಎಂಬುದನ್ನು ಪದೇ ಪದೇ ನಿದರ್ಶನಕ್ಕೆ ತಂದುಕೊಡುತ್ತಿ 'ನೀನು ಯಾರನ್ನು ಭಕ್ತರೆಂದು ಅಂಗೀಕಾರ ಮಾಡುತ್ತೀಯೋ ಅವರ ಯೋಗ ಕ್ಷೇಮಕ್ಕಾಗಿ ಯಾವ ಕೆಲಸವನ್ನಾದರೂ ಮಾಡುವಿ. ಬಲಿ ಚಕ್ರವರ್ತಿಯ ಬಾಗಿಲನ್ನು ಕಾಯುತ್ತಿಲ್ಲವೇ! ಪಾಂಡವರಲ್ಲಿ ಎಂಜಲ ತೆಗೆಯಲಿಲ್ಲವೇ! ಕುದುರೆಗಳನ್ನು ಒರೆಸುತ್ತ ಸಾರಥ್ಯವನ್ನು ಸಹ ಮಾಡಲಿಲ್ಲವೇ! ಇಂಥಹ ಗುಣಗಳು ನಿನ್ನಲ್ಲಿರುವದರಿಂದಲೇ ನಿನಗೆ **ಭಕ್ತ ಪರಾಧೀನನೆಂಬ** ಬಿರುದು ಬಂದಿದೆ ಎಂಬುದಾಗಿ ಅನೇಕ ರೀತ್ಯಾ ಪರಮಾತ್ಮನನ್ನು ಕೊಂಡಾಡಿದರು. ಅಲಹಾಬಾದಕ್ಕೆ ಹೋಗತಕ್ಕ ರೈಲು ಸಮಯ ಒದಗಿದ್ದರಿಂದ ಪಾಕೀಟು ತೆಗೆದುಕೊಂಡು ಪ್ರಯಾಗಕ್ಕೆ ಬಂದು ಸೇರಿದರು. ತಾಯಿಯ ಅಶಕ್ತತೆಯು (ಜಾಡ್ಯವು) ದಿನೇ ದಿನೇ ಹೆಚ್ಚುತ್ತ ನಡೆಯಿತು. ಅವರ ಮನಸ್ಸಿನಲ್ಲಿ ಕಾಶೀ ಕ್ಷೇತ್ರದ ವಾಸನಾ ಪ್ರಬಲವಾಗಿತ್ತು. ಈ ರೀತಿ ಅಂತ್ಯಾವಸ್ಥೆಯಲ್ಲಿ ಪ್ರಕೃತಿಯನ್ನು ರೈಲಿನಲ್ಲಿ ಬಿಡುವುದಿಲ್ಲೆಂದು ರೈಲ್ವೆ ಅಧಿಕಾರಿಗಳು ಅಂದದ್ದರಿಂದ ಭಾಗೀರಥಿ ಪ್ರವಾಹದಲ್ಲಿಯೇ ಪ್ರಯಾಣ ಮಾಡುವದೆಂದು ನಿಶ್ಚಯಿಸಿ ಎರಡು ನಾವೆಗಳನ್ನು (Two Boats) ಬಾಡಿಗೆ ಮಾಡಿಕೊಂಡರು. ಅವುಗಳಲ್ಲೊಂದರಲ್ಲಿ ಪ್ರಾಣಹೋದ ಕೂಡಲೇ ಅಂತ್ಯ ವಿಧಿಗೆ ಬೇಕಾಗುವ ಸಾಮಗ್ರಿಗಳು ತಥಾ ಪುರೋಹಿತರು, ಮತ್ತೊಂದರಲ್ಲಿ ತಾವು ತಮ್ಮ ಪರಿವಾರ. ಈ ರೀತಿ ಗಂಗಾ ಪ್ರವಾಹದಲ್ಲಿಯೇ ಹಗಲು ರಾತ್ರಿ ಪ್ರಯಾಣ ಮಾಡಿದರು. ಬೇಕಾದ ಕೂಡಲೇ ನಾವೆಗಳನ್ನು ಒಂದು ತೀರದಲ್ಲಿ ನಿಲ್ಲಿಸಿ ಸ್ನಾನ ಆಹ್ನಿಕಾದಿಗಳನ್ನು ಮುಗಿಸಿಕೊಂಡು ಪ್ರಯಾಣ ಮಾಡುತ್ತಿದ್ದರು. ಆದರೆ ಇವರು ಮಾತ್ರ ತಾಯಿಯ ಪ್ರಾಣೋತ್ಕ್ರಮಣ ಯಾವಾಗ ಆಗುವದೋ ಎಂದು ಸಂಶಯದಿಂದ ಫಲಹಾರ ಮಾಡುತ್ತಿದ್ದರು. ಉಳಿದವರು ಭೋಜನ ಮಾಡುತ್ತಿದ್ದರು. ಈ ರೀತಿ ಪ್ರಯಾಣ ಮಾಡಿ ಎಂಟನೇ ದಿನ ಪ್ರಾತಃಕಾಲ ಕಾಶೀ ಕ್ಷೇತ್ರವನ್ನು ತಲುಪಿದರು. ಸರ್ವರೂ ನಾವೆದಿಂದ ಇಳಿದು ತಾಯಿಯನ್ನು ಕುರಿತು "ಅಮ್ಮಾ ಕಾಶೀ ಬಂತು, ನಾವೆದಿಂದ ಇಳಿಯುತ್ತೀಯಾ? ಅಂತಾ ಅಂದಕೂಡಲೇ ಏಕಾಏಕಿ ಪ್ರಕೃತಿಯಲ್ಲಿ ಬದಲಾವಣೆಯಾಗಿ ಜಾಗ್ರತೆಯಿಂದ 'ಕಾಶೀ ಬಂತೇ!' ಬಹಳ ಒಳ್ಳೇದಾಯಿತು ಎಂದು ನುಡಿದು ನಾವೆದಿಂದ ಇಳಿದಳು. ಹನುಮಾನ್ ಘಾಟದಲ್ಲಿ ಬೋಣಾಪೆ ತಮ್ಮ ಸ್ವಾಧ್ಯಾಯದಲ್ಲಿ ಇಳಿದುಕೊಂಡರು. "ಈ ದಿನ ವಿಧ್ಯುಕ್ತ ಪ್ರಕಾರ ಕ್ಷೌರ, ಉಪವಾಸ ಮುಗಿಸಿ ನಾಳೆ ನಮ್ಮ ಪಾ (ಗಂಗಾಪೂಜಾದಿಗಳ) ನಿಮಿತ್ತ ಶ್ರಾದ್ಧಮಾಡಿ ಆಚೆ ನಾಡದು ಗಂಗಾರಾಧನೆ ಮಾಡಿದರು. ಬಂದು ಹೋಗುವವರಾಯಿತು. ಆಮೇಲೆ ದೇವರು ಮಾಡಿಸಿದಂತೆ ಆಗಲಿ" ಅಂತ ತಾಯಿಯು ಹೇಳಿದಳು. ಈ ರೀತಿ

ಹುಷಾರಾದದ್ದು ಸರ್ವರಿಗೂ ಆಶ್ಚರ್ಯ ತೋರಿತು. 'ಒಳ್ಳೇದು, ಹಾಗೇ ಮಾಡೋಣ' ಅಂತ ಒಪ್ಪಿಕೊಂಡಿದ್ದಕ್ಕೆ ತಾಯಿಯು ಹಸನ್ಮುಖಿಯಾದಳು. ಆ ರಾತ್ರಿ ಒಮ್ಮಿಂದೊಮ್ಮೆಲೆ ಪ್ರಕೃತಿಯಲ್ಲಿ ವ್ಯತ್ಯಾಸವಾಯಿತು. ಇದರಿಂದ ಅಂತ್ಯಕಾಲ ಸಮೀಪಿಸಿತೆಂದು ತಿಳಿದು 'ನಿನಗೆ ಏನಾದರೂ ವಾಸನಾ ಇದ್ದ ಪಕ್ಷದಲ್ಲಿ ಸಂಕೋಚವಿಲ್ಲದೇ ಸ್ಪಷ್ಟವಾಗಿ ತಿಳಿಸು. ಸಾಧ್ಯವಿದ್ದುದನ್ನು ಮಾಡಲಿಕ್ಕಾಗುವದು' ಅಂತ ಕೇಳಿದರು. ಹೆಚ್ಚಿನ ವಾಸನಾ ಯಾವದೂ ಇಲ್ಲ. 'ಅಂತ್ಯವಿಧಿ ಮತ್ತು ಸಾಂವತ್ಸರಿಕವೂ ಇಲ್ಲೇ ಆಗತಕ್ಕದ್ದು. ಮತ್ತು ಆಗ ಒಬ್ಬ ಹುಡುಗನಿಗೆ ಉಪನಯನ ಮಾಡಿ ಆ ಪುಣ್ಯ ನನಗೆ ಪ್ರದಾನ ಮಾಡು, ಅಂತ ಹೇಳಿದಳು. ಮಹದಾಜ್ಞೆ ಅಂದು ನುಮಸ್ಕಾರ ಮಾಡಿದರು. ಉತ್ತರ ಕ್ಷಣದಲ್ಲಿ ನಾರಾಯಣ ಸ್ಮರಣೆ ಪೂರ್ವಕ ಬೆಳುಗು ಮುಂಜಾನೆ ದೇಹತ್ಯಾಗ ಮಾಡಿದಳು. ಹರಿಶ್ಚಂದ್ರ ಘಾಟದಲ್ಲಿ ದಹನವಿಧಿ ಮುಗಿಸಿ ಉತ್ತರ ಕ್ರಿಯಾದಿಗಳು (ನಿತ್ಯವಿಧಿ ಪೂರ್ವಕ) ಮುಗಿಸಿ ಉಳಿದವರಿಂದ ಕೂಡಿ ಆದವಾನಿ (ಯಾದವಗಿರಿ)ಗೆ ಬಂದರು.

ದ್ರವ್ಯಾದಿ ಪದಾರ್ಥಗಳು ಪರಮಾರ್ಥಿಕ ಜ್ಞಾನ ಪ್ರತಿಬಂಧಕವೆಂತಲೂ, ಪರಮಾತ್ಮನ ಮಹಿಮಾದಿಂದಲೇ ದೇಹಧಾರಣಾದಿ ವ್ಯಾಪಾರಗಳು ನಡೆಯುವವು ಎಂಬ ದೀಕ್ಷಾವುಳ್ಳವರೂ ಆದ ಇವರು ಈ ಯಾತ್ರಾ ನಿಮಿತ್ತ ಮಾಡಿ ಪಿತ್ರಾರ್ಜಿತ ಎರಡು ಲಕ್ಷ ರೂಪಾಯಿಗಳನ್ನು ವ್ಯಯ ಮಾಡಿದರು. ಆಮೇಲೆ ಮೃತ್ಯುತಿಥಿ, ದರ್ಶಗಳಲ್ಲಿ ಗರುಡ ಪುರಾಣೋಕ್ತ ರೀತ್ಯಾ ...ದೂ ಬಿಡದೆ ಸಕಲ ದಾನ ಧರ್ಮ ಮಾಡಿ ಪುನಃ ಸಕುಟುಂಬರಾಗಿ (ತಾಯಿ ವಿನಃ) ಮ... ...ಖ ಹೊರಟಷ್ಟು ಮಂದಿ ಕಾಶೀ ಕ್ಷೇತ್ರಕ್ಕೆ ಬಂದು ವಚನವಿತ್ತ ಪ್ರಕಾರ ಸಾಂವತ್ಸರಿಕವನ್ನು ಹಾಗೂ ...ಇವ ಮೈದುನನಾದ ರಾಘವೇಂದ್ರನೆಂಬ ಒಬ್ಬ ಹುಡುಗನ ಉಪನಯನವನ್ನೂ ಮುಗಿಸಿಕೊಂಡು ಸರ್ವರೂ ಗಯಾ, ಅಯೋಧ್ಯಾ, ಹರಿದ್ವಾರ, ಬದರೀಕಾಶ್ರಮ, ಕುರುಕ್ಷೇತ್ರ, ಮಥುರಾ, ಗೋಕುಲ, ವೃಂದಾವನ, ಪುಷ್ಕರ ಕ್ಷೇತ್ರಾದಿಗಳನ್ನು ಸೇವಿಸಿ, ಮಾತೃಗಯಾ, ...ಶಿಕ ಮುಗಿಸಿಕೊಂಡು ಆದವಾನಿಗೆ ಬಂದು ಸೇರಿದರು.

೨. ಸಾಲಪಡೆದವರು ಸಂತಸಗೊಂಡರು.

ಕೆಲವು ದಿನಗಳಾದ ನಂತರ ಪೂರ್ವೋಕ್ತ ಜನಗಳ ಜೊತೆ ದಕ್ಷಿಣ ಪ್ರದೇಶದ ತೀರ್ಥಕ್ಷೇತ್ರ ಯಾತ್ರಾ ಮಾಡಿಕೊಂಡು ಮನೆಗೆ ಬರುವಷ್ಟರಲ್ಲಿ ಅಂದಾಜು ೨ ಧಡೇದ ಮೇಲೆ ಬಂಗಾರ (ಸುಮಾರು ೬೦೦ ತೊಲಿ) ವ್ಯಯಮಾಡಿದರು. ಮುಂದಾದರೂ ಸದ್ವ್ಯಯ ದೃಷ್ಟಿಯಿಂದಲೇ ಗುರುವಾರ, ಶನಿವಾರ, ದಶಮೀ, ದ್ವಾದಶೀ, ಪೌರ್ಣಿಮಾ, ಅಮಾವಾಸ್ಯೆ, ಪರ್ವಕಾಲ, ಪುಣ್ಯತಿಥಿ, ಮಹನೀಯರ ಆರಾಧನಾ ನಿಮಿತ್ತ ಬ್ರಾಹ್ಮಣರ ಭೋಜನ ದಕ್ಷಿಣಾದಿಪ್ರದಾನ, ಅನ್ನ ಛತ್ರದುತೆ ನಿರ್ವಿವಾದ ಪರಸ್ಥಳೀಕರಿಗೆ ಅನ್ನದಾನ ಮಾಡೋಣ, ದೇಶಾವರ ಕೊಡೋಣ, ಪುರಾಣ ಮಂಗಳ ಮಾಡಿಸೋಣ, ಧರ್ಮಾರ್ಥ (ಉಚಿತ) ಉಪನಯನ ಲಗ್ನಾದಿಗಳನ್ನು ಮಾಡಿಸೋಣ ಮುಂತಾದ ನಿಮಿತ್ತದಿಂದ ಮಾಡುವ ದ್ರವ್ಯದ ವ್ಯಯಕ್ಕೆ, ಬರುವ ಆದಾಯವು (ಇವರಿಗೆ ಬರುವ ಹೊಲ ಮನಿಯ ಆದಾಯವು ಸುಮಾರು ಐದು ಸಾವಿರ ಮತ್ತು ಬಡ್ಡಿ

ಬಾಬ್ತುಗಳಿಂದ ಬರುವ ಆದಾಯ ಅಂದಾಜು ೩-೩॥ ಸಾವಿರ ರೂ.ಗಳು) ಸಾಲದಾಗೆ, ಋಣಿಗಳನ್ನು (ಸಾಲ ತೆಗೆದುಕೊಂಡವರನ್ನು) ಕರೆಸಿ, 'ಅಸಲು ಈಗ ಕೊಟ್ಟರೆ ಪೂರಾ ಬಡ್ಡಿ ಬಿಡುತ್ತೇವೆ' ಅಂತಾ ಹೇಳಲಾಗಿ ಕೆಲವರು ಒಪ್ಪಿಕೊಂಡು ತಂದುಕೊಡಹತ್ತಿದರು. ಮತ್ತು ಕೆಲವರು ಸದ್ಯಕ್ಕೆ ಅಷ್ಟು ದ್ರವ್ಯ ಏಕದಾ ಅನುಕೂಲವಾಗಲಾರದು ಅಂತಾ ಹೇಳಿದರು. ಅಂಥವರಿಗೆ, 'ನಿಮ್ಮಲ್ಲಿ ಈಗ ಅನುಕೂಲವಿದ್ದಷ್ಟು ನಿರ್ವಂಚನೆಯಿಂದ ತಂದುಕೊಡಿರಿ, ಉಳಿದದ್ದು ಬಿಟ್ಟುಬಿಡುತ್ತೇನೆ' ಅಂತಾ ಹೇಳಿದರು. ಆ ಜನರು ತಂದುಕೊಟ್ಟಷ್ಟು ದ್ರವ್ಯವನ್ನು ತೆಗೆದುಕೊಂಡು ಅವರುಗಳಿಂದ ಬರೆದು ಕೊಡಲ್ಪಟ್ಟಿದ್ದ ಪತ್ರಗಳನ್ನು ಹರಿದುಕೊಟ್ಟರು. ಇನ್ನೂ ಕೆಲವರು 'ಸ್ವಾಮಿ! ಈ ನಮ್ಮ ಸಾಲ ನಿಮ್ಮ ತಂದೆಗಳ ಕಾಲದಿಂದಲೂ ಇದೆ. ಅದರ ನಿಮಿತ್ತ ಈವರೆಗೂ ಬಡ್ಡಿ ಕೊಟ್ಟು ತ್ರಸ್ತರಾಗಿದ್ದೇವೆ. ನಾವು ಕೊಟ್ಟ ಬಡ್ಡಿಯು ಅಸಲಿನಕ್ಕಿಂತಲೂ ೩-೪ರಷ್ಟು (ಮೂರು-ನಾಲ್ಕರಷ್ಟು) ಹೆಚ್ಚಾಗಿದೆ. ಇನ್ನು ಮುಂದೆ ಅಸಲಿನಲ್ಲಿ ಮಾತ್ರ ಕಂತುಗಳ ಪ್ರಕಾರ ಮುಟ್ಟಿಸುತ್ತೇವೆ' ಎಂದು ಕೇಳಿಕೊಂಡರು. ಮತ್ತೆ ಕೆಲವರು 'ನಿಮ್ಮ ಹಿರಿಯರ ಕಾಲದಲ್ಲಿ ನಮ್ಮ ಹೊಲ, ಮನಿ ಮಾರಿಕೊಟ್ಟ್ಯಾಗ್ಯೂ ಇನ್ನೂ ಸಾಲ ಉಳಿದಿದೆ. ತಾವು "ಧರ್ಮ ಪ್ರಭುಗಳು" ನಮ್ಮನ್ನು ಕೃಪಾದೃಷ್ಟಿಯಿಂದ ನೋಡಿ ಈಗ ನಾವು ನಿರ್ವಂಚನೆಯಿಂದ ತಂದುಕೊಟ್ಟಷ್ಟು ತೆಗೆದುಕೊಂಡು ನಮ್ಮನ್ನು ಋಣದಿಂದ ಮುಕ್ತರನ್ನಾಗಿ ಮಾಡಿರಿ' ಅಂತಾ ಕೇಳಿಕೊಂಡರು ತಂದು ಕೊಟ್ಟ ದ್ರವ್ಯವನ್ನು ತೆಗೆದುಕೊಂಡು ಉಳಿದದ್ದು ಬಿಟ್ಟು ಪತ್ರವನ್ನು ಹರಿದುಕೊಟ್ಟರು. ಇನ್ನುಳಿದವರ ಸ್ಥಿತಿಗಳ ನೋಡಿ ತಾವಾಗಿಯೇ ಸಾಲವನ್ನು (ರದ್ದು ಮಾಡಿ) ಬಿಟ್ಟು ಪತ್ರವನ್ನು ಹರಿದುಕೊಟ್ಟರು. ಇದರಂತೆ ಲಗ್ನಾದಿ ಕಾರ್ಯಗಳ ದೆಶೆಯಿಂದ ಬ್ರಾಹ್ಮಣರು, ಬ್ರಾಹ್ಮಣೇತರರು ತೆಗೆದುಕೊಂಡಿದ್ದ ಸಾಲಗಾರರೇತರನ್ನು ಕರೆಸಿ 'ನಿಮ್ಮನ್ನು ಸಾಲದಿಂದ ಮುಕ್ತರನ್ನಾಗಿ ಮಾಡಿದ್ದೇವೆ' ಎಂದು ಹೇಳಿ ಪತ್ರಗಳನ್ನು ಹರಿದುಕೊಟ್ಟರು. ಆ ವರ್ಷ ಬಂದ ದ್ರವ್ಯದಿಂದ ಸಕುಟುಂಬರಾಗಿ ದ್ವಾರಕಾ ಮಾರ್ಗವಾಗಿ 'ಕಾಶೀ' ಯಾತ್ರಾಕ್ಕೆ ಹೋದರು. ಅಲ್ಲಿ ನಾಲ್ಕು ತಿಂಗಳ ವಾಸ ಮಾಡಿದರು. ಅಲ್ಲಿಂದ ಗಯಾ, ಕಲಕತ್ತಾ, ವಡ್ಡಿ ಜಗನ್ನಾಥಪುರಿ ಮಾರ್ಗವಾಗಿ ಸ್ವಗ್ರಾಮ (ಆದೋನಿ) ಗೆ ಬಂದು ಸೇರಿದರು. ಆ ಮುಂದಿನ ವರುಷ ಉಡುಪಿ, ಸುಬ್ರಹ್ಮಣ್ಯ ಮಾರ್ಗವಾಗಿ ರಾಮೇಶ್ವರಾದಿ ದಕ್ಷಿಣ ಯಾತ್ರಾವನ್ನು ಸಕುಟುಂಬರಾಗಿ ಮುಗಿಸಿದರು. ಈಗ ಕೇವಲ ಭೂಮಿ (ಜಮೀನು) ಗಳಿಂದ ಬರುವ ಆದಾಯವು ಸಾಲದಾಗಿ ಸಾಲ (ಋಣ) ಮಾಡಹತ್ತಿದರು. ಈ ಋಣವನ್ನು ತೀರಿಸಲೋಸುಗ ಆಗಾಗ ಭೂಮಿ ಮಾರಲ್ಪಡಹತ್ತಿದವು. ಈ ಕ್ರಮದಿಂದ ಬಹು ಭೂಮಿ ಮಾರಲಾಯಿತು.

೩. ಧನದಾನ ಮನಕೊಪ್ಪಿತು.
(ಕೋಸಿಗಿ ಆಚಾರ್ಯರ ಹಿರಿದಾಸೆ ಪೂರ್ಣವಾಯಿತು)

ಯಥಾ ಪ್ರಕಾರ ಸಂಸಾರ ಶಕಟವು ಈ ರೀತಿಯಾಗಿ ಸಾಗುತ್ತಿರಲು ಒಂದು ದಿನ ಶ್ರೀ ಮಂತ್ರಾಲಯ ಗುರುರಾಜರ ಪರಮಾನುಗ್ರಹವನ್ನು ಸಂಪಾದಿಸಿದ್ದ ಶ್ರೀ ಸ್ವಾಮಿರಾಯಾಚಾರ್ಯ ಕೋಸಿಗಿ ಎಂಬುವರು (ಶ್ರೀಗುರುಜಗನ್ನಾಥದಾಸರು) ಬಂದು 'ಗುಡಿಯನ್ನು ಕಟ್ಟಿಸಿ ರಾಯರ

(ಶ್ರೀ ರಾಘವೇಂದ್ರ ತೀರ್ಥರ) ವೃಂದಾವನವನ್ನು ಸ್ಥಾಪಿಸಿ ನಿರಂತರ ರಾಯರ ಸೇವಾ ನಡೆಸುತ್ತಾ ಕಾಲಕ್ರಮಣ ಮಾಡಬೇಕೆಂದು ನನಗೆ ಇಚ್ಛಾ ಅದೆ. ಇದಕ್ಕೆ ತಾವು ಸಹಾಯ ಮಾಡಿದರ ಅನುಕೂಲವಾಗುತ್ತದೆ. ನಾವು ಕೂಡಾ ನಮ್ಮ ಶಿಷ್ಯ ವರ್ಗದಲ್ಲಿ ಸಂಚಾರ ಮಾಡಿ ದೊರೆತಷ್ಟು ದ್ರವ್ಯ ತರುತ್ತೇವೆ' ಅಂತಾ ಹೇಳಿದರು. 'ಒಳ್ಳೆಯದು, ದ್ರವ್ಯ ಎಷ್ಟು ಬೇಕು?' ಅಂತಾ ವಿಚಾರಿಸಿದರು. ಸುಮಾರು (ಅಂದಾಜು) ೮ ಸಾವಿರ ರೂ.ಗಳು ಬೇಕಾಗಬಹುದು ಅಂತ ಕೋಸಿಗಿ ಆಚಾರ್ಯರು ಹೇಳಿದರು. ಒಳ್ಳೆಯದು ಇಷ್ಟು ದ್ರವ್ಯ ನಾನು ಕೊಡುತ್ತೇನೆ. ನೀವು ಅನ್ಯತ್ರ ಯಾಚನಾ ಮಾಡುವದು ಅನವಶ್ಯಕ ಅಂತ ಅಂದದ್ದಕ್ಕೆ ಪರಮ ಸಂತೋಷದಿಂದ **"ಉತ್ಪದ್ಯಂತೇ ವಿಲೀಯಂತೇ ದರಿದ್ರಾಣಾಂ ಮನೋರಥಾಃ"** ಎಂಬಂತೆ ಇಂತಹ ಮಹತ್ಕಾರ್ಯ ನಸ್ನಿಂದ ಹ್ಯಾಂಗ ಆಗಬೇಕು? ದೇಶಾವರ ಕ್ರಮದಿಂದ ಬರುವ ದ್ರವ್ಯವಾದರೂ ಎಷ್ಟು? ಅದರಿಂದ ನಿರ್ವಾಹವಾಗುವದಾದರೂ ಹ್ಯಾಗೆ? ಇತ್ಯಾದಿ ಸಂಶಯ ಪರಂಪರೆಗಳಿಂದ ಬಹುಕಾಲ ಮನಸ್ಸಿನಲ್ಲಿಯೇ ಕೊರಗುತ್ತಿದ್ದೆ. ತಮ್ಮಲ್ಲಿಯ ಧರ್ಮ ಬುದ್ಧಿಯ ಕೀರ್ತಿ ಕೇಳಿ ಲ್ಲಿ ಪ್ರಸ್ತಾಪ ಮಾಡಿದೆ. ತಾವು ಎರಡನೇ ಮಾತಾಡದೆ, ಸರ್ವಥಾ ನಿರ್ವಾಹ ಮಾಡುವದಾಗಿ ಅಭಯ ೯.ತ್ತಿರಿ. **"ಈ ರೀತಿ ತ್ಯಾಗಬುದ್ಧಿ ಇರೋಣದರಿಂದ ತಮ್ಮನ್ನು ಕರ್ಣನ ತಮ್ಮನೆಂದು ಹೇಳಲು ಅಡ್ಡಿಯಿಲ್ಲಾ"** ಇತ್ಯಾದಿ ಸಮಯೋಚಿತ ಶಬ್ದಗಳಿಂದ ಶ್ಲಾಘನ ಮಾಡಿದರು. ಈ ಮಠವನ್ನು (ಮಂತ್ರಾಲಯ ರೋಡ) ರೇಲ್ವೆ ಸ್ಟೇಶನ್‌ದಿಂದ ಪಶ್ಚಿಮ ದಿಕ್ಕಿನಲ್ಲಿ **'ತುಂಬಿಗನೂರ'** ಎಂಬ ತುಂಗಭದ್ರಾ ನದೀ ತೀರದ ಗ್ರಾಮದಲ್ಲಿ ಕಟ್ಟಿಸುವದಾಗಿ ಗೊತ್ತು ಮಾಡಿದರು. ಆಗ ತತ್ಕಾಲ ೧ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಉಭಯರೂ ಅಲ್ಲಿಗೆ ಹೋಗಿ, ತಮಗೆ ಬೇಕಾದಷ್ಟು ಭೂಮಿಯನ್ನು ಖರೀದಿ ಮಾಡಿ ಪಾಯಾ (ಬುನಾದಿ, *Foundation*) ಯಲು ಪ್ರಾರಂಭ ಮಾಡಿಸಿ, ನೀವು ಇಲ್ಲಿ ಇದ್ದುಕೊಂಡು 'ಗುಡಿ ಕಟ್ಟಿಸುವ ಕೆಲಸ ಮಾಡಿರಿ', ನಾನು ಆದವಾನಿಯಲ್ಲಿ ಇದ್ದುಕೊಂಡೇ ಬೇಕಾದಷ್ಟು ದ್ರವ್ಯವನ್ನು ಕಳಿಸುತ್ತಾ ಹೋಗುತ್ತೇನೆಂದು ಹೇಳಿ ಇವರು ಮಾತ್ರ ಆದವಾನಿಗೆ ಬಂದು ರೂಪಾಯಿಗಳನ್ನು ಕಳಿಸುತ್ತಾ ಹೋದರು. ಈ ಮಧ್ಯೆ ಕೋಸಿಗಿ ಆಚಾರ್ಯರು ಬಂದು ಆದ ಕೆಲಸವೆಷ್ಟೆಂಬುದನ್ನು ತಿಳಿಸಿ ಆ ಮಠದಲ್ಲಿ ತಮ್ಮುಭಯರಿಗೂ (ಸಕುಟುಂಬವಾಗಿ) ವಾಸಮಾಡುವ ಸಲುವಾಗಿಯೂ ಪರಸ್ಥಳೀಕರಿಗೆ ಅಥವಾ ಸೇವಾ ನಿಮಿತ್ತ ಪರಸ್ಥಳದಿಂದ ಬಂದ ಜನಗಳ ವಸತಿಗಾಗಿಯೂ ಪ್ರತ್ಯೇಕ ಪ್ರತ್ಯೇಕ ಸ್ಥಳ (ಖೋಲಿ, ಪಡಸಾಲಿ, ಅಡಿಗೆ, ನೀರಿನ ಮನೆ)ಗಳ ಏರ್ಪಾಟು ಮಾಡುವ ನಿರ್ಣಯ ಕೈಕೊಂಡು ಒಮ್ಮೆಲೆ ೫ ಸಾವಿರ ರೂಪಾಯಿಗಳನ್ನು ತೆಗೆದುಕೊಂಡರು. ಅಲ್ಲಿಯ ಗುಡಿಕಟ್ಟುವ ಕೆಲಸವು ಭರದಿಂದ ಸಾಗಹತ್ತಿತು. ಈ ರೀತಿ ಒಂದು ವರ್ಷದಲ್ಲಿಯೇ ಮಠ, ಧರ್ಮಶಾಲೆ, ಮನೆ ಕಟ್ಟೋಣಾಗಿ ರಥವನ್ನು ತಯಾರು ಮಾಡಿಸಿ ಶ್ರೀ ಶ್ರೀ ರಾಘವೇಂದ್ರ ಶ್ರೀಪಾದಂಗಳವರ ವೃಂದಾವನ ಪ್ರತಿಷ್ಠಾಪನಾ ಮಾಡಿ ಆರಾಧನೆಯಲ್ಲಿ ಅಲಂಕಾರ, ರಥೋತ್ಸವ, ಬ್ರಾಹ್ಮಣ ಸಂತರ್ಪಣಾದಿಗಳನ್ನು ಮಾಡಿದರು. ಇಷ್ಟು ಕಾರ್ಯಗಳು ಆಗಲಿಕ್ಕೆ ತಮ್ಮ ಅವಶಿಷ್ಟ (ಉಳಿದಿದ್ದ) ಬಂಗಾರ, ಬೆಳ್ಳಿ ಸಾಮಾನುಗಳು (ಈ ಬೆಳ್ಳಿ ಸಾಮಾನುಗಳೆಷ್ಟಿದ್ದವೆಂದರೆ ಎರಡು ಕುದುರೆ,

(ಶ್ರೀ ರಾಘವೇಂದ್ರ ತೀರ್ಥರ) ವೃಂದಾವನವನ್ನು ಸ್ಥಾಪಿಸಿ ನಿರಂತರ ರಾಯರ ಸೇವಾ ನಡೆಸುತ್ತಾ ಕಾಲಕ್ರಮಣ ಮಾಡಬೇಕೆಂದು ನನಗೆ ಇಚ್ಛಾ ಅದೆ. ಇದಕ್ಕೆ ತಾವು ಸಹಾಯ ಮಾಡಿದರೆ ಅನುಕೂಲವಾಗುತ್ತದೆ. ನಾವು ಕೂಡಾ ನಮ್ಮ ಶಿಷ್ಯ ವರ್ಗದಲ್ಲಿ ಸಂಚಾರ ಮಾಡಿ ದೊರೆತಷ್ಟು ದ್ರವ್ಯ ತರುತ್ತೇವೆ' ಅಂತಾ ಹೇಳಿದರು. 'ಒಳ್ಳೆಯದು, ದ್ರವ್ಯ ಎಷ್ಟು ಬೇಕು?' ಅಂತಾ ವಿಚಾರಿಸಿದರು. ಸುಮಾರು (ಅಂದಾಜು) ೮ ಸಾವಿರ ರೂ.ಗಳು ಬೇಕಾಗಬಹುದು ಅಂತ ಕೋಸಿಗಿ ಆಚಾರ್ಯರು ಹೇಳಿದರು. ಒಳ್ಳೆಯದು ಇಷ್ಟು ದ್ರವ್ಯ ನಾನು ಕೊಡುತ್ತೇನೆ. ನೀವು ಅನ್ಯತ್ರ ಯಾಚನಾ ಮಾಡುವದು ಅನವಶ್ಯಕ ಅಂತ ಅಂದದ್ದಕ್ಕೆ ಪರಮ ಸಂತೋಷದಿಂದ **"ಉತ್ಪದ್ಯಂತೇ ವಿಲೀಯಂತೇ ದರಿದ್ರಾಣಾಂ ಮನೋರಥಾಃ"** ಎಂಬಂತೆ ಇಂತಹ ಮಹತ್ಕಾರ್ಯ ನನ್ನಿಂದ ಹ್ಯಾಂಗ ಆಗಬೇಕು? ದೇಶಾವರ ಕ್ರಮದಿಂದ ಬರುವ ದ್ರವ್ಯವಾದರೂ ಎಷ್ಟು? ಅದರಿಂದ ನಿರ್ವಾಹವಾಗುವದಾದರೂ ಹ್ಯಾಗೆ? ಇತ್ಯಾದಿ ಸಂಶಯ ಪರಂಪರೆಗಳಿಂದ ಬಹುಕಾಲ ಮನಸ್ಸಿನಲ್ಲಿಯೇ ಕೊರಗುತ್ತಿದ್ದೆ. ತಮ್ಮಲ್ಲಿಯ ಧರ್ಮ ಬುದ್ಧಿಯ ಕೀರ್ತಿ ಕೇಳಿ ತಮ್ಮಲ್ಲಿ ಪ್ರಸ್ತಾಪ ಮಾಡಿದೆ. ತಾವು ಎರಡನೇ ಮಾತಾಡದೆ, ಸರ್ವವೂ ನಿರ್ವಾಹ ಮಾಡುವದಾಗಿ ಅಭಯವಿತ್ತಿರಿ. **"ಈ ರೀತಿ ತ್ಯಾಗಬುದ್ಧಿ ಇರೋಣದರಿಂದ ತಮ್ಮನ್ನು ಕರ್ಣನ ತಮ್ಮನೆಂದು ಹೇಳಲು ಅಡ್ಡಿಯಿಲ್ಲಾ"** ಇತ್ಯಾದಿ ಸಮಯೋಚಿತ ಶಬ್ದಗಳಿಂದ ಶ್ಲಾಘನ ಮಾಡಿದರು. ಈ ಮಠವನ್ನು (ಮಂತ್ರಾಲಯ ರೋಡ) ರೇಲ್ವೆ ಸ್ಟೇಶನ್‌ದಿಂದ ಪಶ್ಚಿಮ ದಿಕ್ಕಿನಲ್ಲಿ **'ತುಂಬಿಗನೂರ'** ಎಂಬ ತುಂಗಭದ್ರಾ ನದೀ ತೀರದ ಗ್ರಾಮದಲ್ಲಿ ಕಟ್ಟಿಸುವದಾಗಿ ಗೊತ್ತು ಮಾಡಿದರು. ಆಗ ತತ್ಕಾಲ ೧ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಉಭಯರೂ ಅಲ್ಲಿಗೆ ಹೋಗಿ, ತಮಗೆ ಬೇಕಾದಷ್ಟು ಭೂಮಿಯನ್ನು ಖರೀದಿ ಮಾಡಿ ಪಾಯಾ (ಬುನಾದಿ, *Foundation*) ಅಗೆಯಲು ಪ್ರಾರಂಭ ಮಾಡಿಸಿ, ನೀವು ಇಲ್ಲಿ ಇದ್ದುಕೊಂಡು 'ಗುಡಿ ಕಟ್ಟಿಸುವ ಕೆಲಸ ಮಾಡಿರಿ', ನಾನು ಆದವಾನಿಯಲ್ಲಿ ಇದ್ದುಕೊಂಡೇ ಬೇಕಾದಷ್ಟು ದ್ರವ್ಯವನ್ನು ಕಳಿಸುತ್ತಾ ಹೋಗುತ್ತೇನೆಂದು ಹೇಳಿ ಇವರು ಮಾತ್ರ ಆದವಾನಿಗೆ ಬಂದು ರೂಪಾಯಿಗಳನ್ನು ಕಳಿಸುತ್ತಾ ಹೋದರು. ಈ ಮಧ್ಯೆ ಕೋಸಿಗಿ ಆಚಾರ್ಯರು ಬಂದು ಆದ ಕೆಲಸವೆಷ್ಟೆಂಬುದನ್ನು ತಿಳಿಸಿ ಆ ಮಠದಲ್ಲಿ ತಮ್ಮುಭಯರಿಗೂ (ಸಕುಟುಂಬವಾಗಿ) ವಾಸಮಾಡುವ ಸಲುವಾಗಿಯೂ ಪರಸ್ಥಳೀಕರಿಗೆ ಅಥವಾ ಸೇವಾ ನಿಮಿತ್ತ ಪರಸ್ಥಳದಿಂದ ಬಂದ ಜನಗಳ ವಸತಿಗಾಗಿಯೂ ಪ್ರತ್ಯೇಕ ಪ್ರತ್ಯೇಕ ಸ್ಥಳ (ಖೋಲಿ, ಪಡಸಾಲಿ, ಅಡಿಗೆ, ನೀರಿನ ಮನೆ)ಗಳ ಏರ್ಪಾಟು ಮಾಡುವ ನಿರ್ಣಯ ಕೈಕೊಂಡು ಒಮ್ಮೆಲೆ ೫ ಸಾವಿರ ರೂಪಾಯಿಗಳನ್ನು ತೆಗೆದುಕೊಂಡರು. ಅಲ್ಲಿಯ ಗುಡಿಕಟ್ಟುವ ಕೆಲಸವು ಭರದಿಂದ ಸಾಗಹತ್ತಿತು. ಈ ರೀತಿ ಒಂದು ವರ್ಷದಲ್ಲಿಯೇ ಮಠ, ಧರ್ಮಶಾಲೆ, ಮನೆ ಕಟ್ಟೋಣಾಗಿ ರಥವನ್ನು ತಯಾರು ಮಾಡಿಸಿ ಶ್ರೀ ಶ್ರೀ ರಾಘವೇಂದ್ರ ಶ್ರೀಪಾದಂಗಳವರ ವೃಂದಾವನ ಪ್ರತಿಷ್ಠಾಪನಾ ಮಾಡಿ ಆರಾಧನೆಯಲ್ಲಿ ಅಲಂಕಾರ, ರಥೋತ್ಸವ, ಬ್ರಾಹ್ಮಣ ಸಂತರ್ಪಣಾದಿಗಳನ್ನು ಮಾಡಿದರು. ಇಷ್ಟು ಕಾರ್ಯಗಳು ಆಗಲಿಕ್ಕೆ ತಮ್ಮ ಅವಶಿಷ್ಟ (ಉಳಿದಿದ್ದ) ಬಂಗಾರ, ಬೆಳ್ಳಿ ಸಾಮಾನುಗಳು (ಈ ಬೆಳ್ಳಿ ಸಾಮಾನುಗಳೆಷ್ಟಿದ್ದವೆಂದರೆ ಎರಡು ಕುದುರೆ,

ಎತ್ತುಗಳಿಗೆ ಅಲಂಕಾರ ಮಾಡುವ ಆಭರಣ ರೂಪವಾಗಿಯೂ, ತಥಾ ತಂಬಿಗಿ, ಥಾಲಿ, ಬಟ್ಟಲು, ತಟ್ಟೆ, ತಾಂಬೂಲ ತಟ್ಟೆಗಳು, ಗುಲಾಬದಾಸಿ, ಪಾನದಾನ ಇತ್ಯಾದಿ ಅಸಂಖ್ಯಾತ ಪದಾರ್ಥಗಳು) ಅಂದಾಜು ಐದುಮಣ ಮೇಲ್ಪಟ್ಟು ವ್ಯಯವಾಗಿ ಮೇಲೆ ಎರಡೂವರೆ ಸಾವಿರ ಸಾಲವಾಯಿತು. ಇದನ್ನು ತೀರಿಸಲು ಅನೇಕ ಜಮೀನು ಮಾರಲಾಯಿತು. ಅಂತೂ ಒಟ್ಟಿಗೆ ಆ ಮಠದ ಸಲುವಾಗಿ ಸುಮಾರು ೨೫ ಸಾವಿರ ರೂಪಾಯಿಗಳು ಖರ್ಚಾದವು. ಈ ಉಭಯರೂ ಅನ್ಯೋನ್ಯವಾಗಿ ನಾಲ್ಕು ವರ್ಷಗಳನ್ನು ಅಲ್ಲಿ ಕಳೆದರು.

೪. ಸಮೀರದೇವ ಸಾಧಕ ಗುರುವನ್ನು ಕರುಣಿಸಿದ.

ವಿಜಯದಾಸರ ಶಿಷ್ಯರಲ್ಲೊಬ್ಬರಾದ ಹುಂಡೇಕಾರ ಶ್ರೀನಿವಾಸರಾಯರ ಪ್ರಾರ್ಥನಾನುಗುಣವಾಗಿ ಪಂಗನಾಮ ತಿಮ್ಮಣ್ಣನವರ ಉದ್ಧಾರಾರ್ಥ ಶ್ರೀ ವಿಜಯದಾಸರು (ಯಾದವಗಿರಿ) ಆದವಾನಿಯಲ್ಲಿ ಒಂದು ಪ್ರಾಣ ಪ್ರತೀಕವನ್ನು ಸ್ಥಾಪನಾ ಮಾಡಿ ವಾಸ ಮಾಡಿಕೊಂಡಿದ್ದರು. ಹನ್ನೆರಡು ವರುಷಗಳ ನಂತರ ಕೃತಾರ್ಥರಾದ ಮೇಲೆ ಒಬ್ಬ ಬ್ರಾಹ್ಮಣನಿಗೆ ಆ ಮನೆಯನ್ನು ದಾನಮಾಡಿದರು. ಆ ಬ್ರಾಹ್ಮಣ ವಂಶಸ್ಥರಾದ ರಾಯಚೂರಿನಲ್ಲಿದ್ದ ಆದವಾನಿಯ ಕೊಪ್ಪರೇಶಾಚಾರ್ಯ ಎಂಬುವರು ಆ (ವಿಜಯದಾಸರ) ಮನೆಯನ್ನು ಒಬ್ಬ ಒಕ್ಕಲಿಗನಿಗೆ ಮಾರಿದ್ದರು. ಅದರಲ್ಲಿ ಪ್ರಾಣ ಪ್ರತೀಕವಿದ್ದ ಭಾಗವನ್ನು ಅವನಿಂದ ತೆಗೆದುಕೊಂಡು ಮಂಟಪವನ್ನು ಹಾಕಿಸಿದ್ದರು. ಈ ಗುಡಿಯನ್ನೇ ವಿಜಯರಾಯರ ಗುಡಿ ಎನ್ನುತ್ತಾರೆ. ಹೀಗೆ ಕೆಲವು ಕಾಲ ಗತಿಸಿದ ಬಳಿಕ ಮಳಖೇಡ ಕ್ಷೇತ್ರಕ್ಕೆ ಶ್ರೀಮದ್ ಜಯತೀರ್ಥರ ಆರಾಧನೆಗೆ ಹೋಗಿರಲು ಅಲ್ಲಿಗೆ ಕೊಡಂಗಲ್ ವೆಂಕೋಬಾಚಾರ್ಯ, (ಶ್ರೀಮದಾಚಾರ್ಯ ಅಕ್ಷೋಭ್ಯ ತೀರ್ಥ ಮಠದ **ಶ್ರೀ ಶ್ರೀ ರಘುಕಾಂತತೀರ್ಥಾಖ್ಯರು**) ದರ್ಶಂಪಲ್ಲಿ ಶೇಷಾಚಾರ್ಯ ಮೊದಲಾದ ಪ್ರಭೃತಿಗಳು ಬಂದಿದ್ದರು. ಇವರು ಶ್ರೌತಭಾಗದಲ್ಲಿ (ಯಜ್ಞ ಯಾಗಾದಿಗಳನ್ನು ಮಾಡಿಸುವಲ್ಲಿ) ನಿಪುಣರು; ಅವರು ಪ್ರೋತ್ಸಾಹವಿತ್ತಿದ್ದರಿಂದ ಆಧಾನ (ಸೋಮ ಯಾಗಪೂರ್ವಕ) ಅಗ್ನಿಹೋತ್ರವನ್ನು ಮಾಡಬೇಕೆಂದು ಅಪೇಕ್ಷಿಪಟ್ಟು ತತ್ಸಮೀಪದಲ್ಲಿರುವ "ತಾಂಡೂರ" ಎಂಬ ಗ್ರಾಮದಲ್ಲಿ ಯಜ್ಞ ಮಾಡುವದು ನಿಶ್ಚಯ ಮಾಡಲಾಯಿತು. ಅಲ್ಲಿಯ ಅಸೂಯಾಪರರಾದ ಕೆಲವು ಆಚಾರ್ಯರು, ಕೆಲವು ಸರಕಾರೀ ಉದ್ಯೋಗಸ್ಥರು ಇವರ ಶ್ರೇಯಸ್ಸನ್ನು ಸಹಿಸದೆ ವಿಘ್ನಕಾರಿಗಳಾದರು. ಆ ಪ್ರದೇಶದ ಮುಖಂಡರಾದ ತೋಲಮಾವಡಿ ಶಿವಣ್ಣಾ, ಅಂತಣ್ಣನೆಂಬ ಲಿಂಗಾಯತ ಮತ್ತು ಬ್ರಾಹ್ಮಣ ಗೃಹಸ್ಥರು ಈ ಯಾಗಕ್ಕೆ ಸಹಾಯಕಾರಿಗಳಾಗಿ ಯಜ್ಞವನ್ನು ವಿಜೃಂಭಣೆಯಿಂದ ಸಾಂಗಗೊಳಿಸಿದರು. ಆಗ ವಿಘ್ನಕಾರಿಗಳು ಶರಣು ಬಂದರು. ಆಮೇಲೆ ಕೆಲವು ದಿನಗಳು ಅಗ್ನಿಹೋತ್ರ ಸಹ ಆ ಪ್ರಾಂತದಲ್ಲಿ ಸಂಚರಿಸಿ ತಪಸ್ಸಿಗೆ ಅನುಕೂಲವಾದ ಏಕಾಂತಸ್ಥಾನವಾದ 'ತುಂಬಿಗನೂರ' ಮಠಕ್ಕೆ ಬಂದು ಸೇರಿದರು. ಕೆಲವು ದಿನಗಳ ನಂತರ "ಶ್ರೀನಿವಾಸನೆಂಬ" (ಚಿಕ್ಕ ಭಾವ ಮೈದುನನು) ಅಲ್ಲಿ ಮೃತನಾದನು. ಅಲ್ಲಿಂದ ಆದವಾನಿಗೆ ಬಂದರು. ದಿನೇ ದಿನೇ ಖರ್ಚು ಹೆಚ್ಚು ಮಾಡುತ್ತ ಹೋಗೋಣದರಿಂದ ಸಾಲವಾಗ ಹತ್ತಿತು. ಈ ಸಾಲವನ್ನು ತೀರಿಸಲೋಸುಗ ಜಮೀನುಗಳನ್ನು ಮಾರಲಾಯಿತು. ಇಷ್ಟೆನ್ನುವಾಗ್ಗೆ ದಶಾಂಶ

ಆಸ್ತಿ ಮಾತ್ರ ಉಳಿಯಿತು. ೯೦% ಆಸ್ತಿ ವೆಚ್ಚವಾಯಿತು. ಈ ರೀತಿ ಆಗೋಣದರಿಂದ ತಾಪತ್ರಯ ತಲೆದೋರಿ ಇಷ್ಟಾದರೂ ಸ್ವಯೋಗ್ಯ ಗುರುಗಳು ಅದ್ಯಾಪಿ ದೊರೆಯದಿದ್ದರಿಂದ ಮನಸ್ಸಿನಲ್ಲಿ ಕೊರಗುತ್ತಾ ಬಹುವರಿಯಿಂದ ಪರಮಾತ್ಮನನ್ನು ಪ್ರಾರ್ಥಿಸಲು **"ಪ್ರಾಣ ಪ್ರಿಯತಮಂ ಶ್ವಃ ಪಶ್ಯಸಿ"** ಅಂತಾ ಸ್ವಪ್ನವಾಯಿತು. ಥಟ್ಟನೆ ಎಚ್ಚರವಾಗಿ ಯೋಚಿಸಿದಾಗ್ಯೂ ಅರ್ಥವು ಸ್ಪಷ್ಟವಾಗದೆ ಪುನಃ ಪ್ರಾರ್ಥಿಸಲು **''ಪ್ರಾಣಂ ಮತ್ಪ್ರಿಯತಮಂ ಯಃಪಶ್ಯತಿತಮೇವಾಭಿಗಚ್ಛ''** ಅಂತಾ ಆಗಲೇ ಸ್ವಪ್ನವಾಯಿತು. ಈ ರೀತಿಯಾದಾಗ್ಯೂ ಪ್ರಾಣ ದೇವರಿಗೂ, ಪರಮಾತ್ಮನಿಗೂ ಅತಿಶಯ ಪ್ರೀತಿಯವರಾರು? ಎಂಬುದು ಸ್ಪಷ್ಟವಾಗದೆ ಪರಿತಪಿಸಹತ್ತಿದರು. ಈ ಅಗ್ನಿಹೋತ್ರದ ಮೂಲಕ ಪ್ರತಿ ಪ್ರತಿಪದಾ ಇಷ್ಟಿಗಾಗಿ (ಹೋಮ ವಿಶೇಷ) ನಾಲ್ಕು ಮಂದಿ ಋತ್ವಿಕರು ಪರಸ್ಥಲದಿಂದ ಬರೋಣ, ಅವರಿಗೆ ಮಾರ್ಗದ ಖರ್ಚು ಮತ್ತು ಸಂಭಾವನೆ ವಗೈರೆ ಕೊಡೋಣ ಇತ್ಯಾದಿ ಹೆಚ್ಚಿನ ಖರ್ಚಿಗೆ ಅನಾನುಕೂಲವಾಗ ಹತ್ತಿತು. ಈ ನಿಮಿತ್ತ ಸಂಚಾರ ಮಾಡಬೇಕೆಂದೆನಿಸಿ, ಆ ಸಮಯಕ್ಕೆ **ಗದ್ವಾಲ** (ತೆಲಂಗಾಣಾ ಪ್ರಾಂತದ ಪ್ರಸಿದ್ಧ ಸಂಸ್ಥಾನ. ಇದು ನಿಜಾಮ ರಾಜ್ಯದ ಅಂತರ್ಭಾಗ. ೧೯೫೦ನೇ ಇಸ್ವಿಯಲ್ಲಿ ಸರ್ಕಾರದಿಂದ ರದ್ದುಗೊಳಿಸಲಾಯಿತು.) ಸಭೆಯು ಸಮೀಪಿಸಿದ್ದರಿಂದ ದಕ್ಷಿಣಾರ್ಥಿಗಳಾಗಿ ಅಲ್ಲಿಗೆ ಹೋದರು. ಅಲ್ಲಿ **ಸುರಪುರದ ಯಳಮೇಲಿ ವಿಠ್ಠಲಾಚಾರ್ಯರಲ್ಲಿ** ಇಳಿದುಕೊಂಡರು. ಅವರು ಇವರನ್ನು ಆದರದಿಂದ ಸ್ವಾಗತಿಸಿದರು. ಆ ದಿನ ರಾತ್ರಿ **"ಇಲ್ಲಿಗೇನು ಕಾರಣ ಬಂದೆ ನಡೆ"** ಅಂತಾ ಒಂದು ಕೋತಿಯು ಸ್ವಪ್ನದಲ್ಲಿ ಝುಬರಿಸಿದಂತಾಯಿತು. ಮರುದಿವಸ ನನಗೆ 'ಈ ರೀತಿ ಸ್ವಪ್ನವಾದದ್ದರಿಂದ ಈಗಲೇ ತಿರುಗಿ ಹೋಗುತ್ತೇನೆ, ಅಪ್ಪಣೆ ಕೊಡಬೇಕು' ಅಂತಾ ಕೇಳಿಕೊಂಡರು. ನೀವು ಅಷ್ಟು ದೂರದಿಂದ ಬಂದಿದ್ದೀರಿ. ಆ ಕಾಲದಲ್ಲಿ ಗದ್ವಾಲಿಗೆ ರೈಲು ಇಲ್ಲದ್ದರಿಂದ ಸುಮಾರು ೪೦-೫೦ ಮೈಲು ರಾಯಚೂರಿನಿಂದ ದಾರಿ ಹೋಗಬೇಕಾಗುತ್ತಿತ್ತು. ಶ್ರಮಕ್ಕೆ ಕಿಂಚಿತ್ತಾದರೂ ಫಲ ಬೇಡವೇ? 'ನಾಳೆ ಸಾಯಂಕಾಲ ದಕ್ಷಿಣೆ ಆರಂಭವಾಗುವದು ನಿಮ್ಮ ತಂದೆಗಳಾದ ಶ್ರೀ ಗುಂಡಾಚಾರ್ಯರಿಗೆ ಉತ್ತಮ ಸಂಭಾವನಾ ಜಾಸ್ತಿ (ನೇಮಕ) ಅದೆ. ಅದನ್ನೇ ನಿಮಗೆ ಪ್ರಥಮದಲ್ಲಿಯೇ ಕೊಡಿಸುತ್ತೇವೆ. ನಂತರ ಪ್ರಯಾಣ ಮಾಡಬಹುದು' ಅಂತಾ ಸಮಾಧಾನ ಹೇಳಿ ಪ್ರಯಾಣ ಸಂಕ್ಷೇಪ ಮಾಡಿಸಿದರು. ಆ ರಾತ್ರಿಯು ಮತ್ತೆ ಅದೇ ರೀತಿ ಮಂಗವು ಬಂದು, "ಹೇಳಿದರೆ ಕೇಳುವದಿಲ್ಲವೇ? **ಅಂದು ಬೆತ್ತದಿಂದ ಒಂದು ಪೆಟ್ಟು ಹಾಕಿದಂತಾಯಿತು"** ತತ್ಕಾಲ ಎಚ್ಚರವಾಗಿ 'ಬಂದದ್ದು ಅಪರಾಧವಾಗಿದೆ. ಕ್ಷಮಾ ಮಾಡಬೇಕು. ಬೆಳಗಾದ ಕೂಡಲೇ ಹೊರಡುತ್ತೇನೆ'ಂದು ಪ್ರಾಣದೇವರನ್ನು ಪ್ರಾರ್ಥನಾ ಮಾಡಿಕೊಂಡು ಪುನಃ ಮಲಗಿಕೊಳ್ಳದೆ ಕುಳಿತುಕೊಂಡಿದ್ದು, ಬೆಳಗಾದ ಕೂಡಲೇ ಯಳಮೇಲಿ ಆಚಾರ್ಯರನ್ನು ಕಂಡು "ಊರಿಗೆ ಹೊರಡುತ್ತೇನೆ" ಎಂದು ನಮಸ್ಕಾರ ಮಾಡಲು, ಈ ಸಾಯಂಕಾಲವೇ ದಕ್ಷಿಣೆ ಕೊಡುವದು ಆರಂಭವಿದ್ದು ಈಗ ಪ್ರಯಾಣ ಮಾಡಬಹುದೇ? ಅಂತಾ ಆತುರದಿಂದ ಕೇಳಲು, ರಾತ್ರಿ ಆದ ವಿಷಯವನ್ನು ಹೇಳಿ ಬೆನ್ನು ತೋರಿಸಲು, **ಬೆತ್ತದ ಬಡಿತದಿಂದ ಬಾರು ಮೂಡಿದ್ದು ಕಂಡು ಬೆರಗಾಗಿ** ಕಣ್ಣೀರು ಸುರಿಸುತ್ತಾ

ಗದ್ಗದ ಸ್ವರದಿಂದ "ಅನೇಕ ಸಲ ಸುಧಾದಿ ಶಾಸ್ತ್ರಗಳ ಪ್ರವಚನ ಮಾಡಲಾದರೂ ಈ ರೀತಿ ವಾಯುದೇವರು ಆಜ್ಞಾಮಾಡುವದು ಕಂಡಿಲ್ಲ, ಮತ್ತು ಪತಿಯು ಪತ್ನಿಯನ್ನು ಅಧೀನದಲ್ಲಿಟ್ಟುಕೊಳ್ಳುವಂತೆ, ನಡೆನುಡಿಗಳು ತಮ್ಮ ಅಧೀನದಲ್ಲಿರುವ ಕುರುಹನ್ನು ನಾವು ಅರಿಯೆವು. ನಮ್ಮ ಜನ್ಮ ವ್ಯರ್ಥವೇ ಸರಿ. ಆದರೆ ಈ ಜನ್ಮದಲ್ಲಿ ಸಚ್ಛಾಸ್ತ್ರ ಪ್ರವಚನಾಧಿಕಾರವು ಕೊಟ್ಟಿದ್ದಕ್ಕೆ ಸಂತೋಷಪಡಬೇಕು. ಶ್ರೀ ವಾಯುದೇವರ ಅನುಗ್ರಹ ಕಾಲವಾದರೂ ಎಂದಿಗಿರುವದೋ ಅವರ ಇಚ್ಛಾಕ್ಕೆ ಬಂದಾಗ ಅಂಗೀಕಾರ ಮಾಡಲಿ. **"ಯಮೇವೈಷವೃಣುತೇ ತೇನ ಲಭ್ಯಃ"** ಎಂದು, ಆಗಲೇ ತಾವೇ ಇವರಿಗೆ ದಕ್ಷಿಣಾ ಕೊಟ್ಟು ಕಳುಹಿಸಿದರು.

೫. ಸುಧಾಧ್ಯಯನ ಸಾಧನಾಮೃತಪಾನ.

ಇವರು ಆದವಾನಿಗೆ ಬರುವಷ್ಟರಲ್ಲಿ, ಹತ್ತಿ ಬೆಳಗಲ್ ಗ್ರಾಮಸ್ಥ **ಅರಳೀಕಟ್ಟಿ (ನರಸಿಂಹ) ಆಚಾರ್ಯರು** ತಮ್ಮ ಮಕ್ಕಳಾದ ಕೊಪ್ಪರೇಶಾಚಾರ್ಯರನ್ನು ಕಳಿಸಿ, ತಮ್ಮಲ್ಲಿ ಕರೆದುಕೊಂಡು ಬರುವದಾಗಿ ಆಜ್ಞಾಮಾಡಿದ್ದ ಮೂಲಕ ಅವರು ಆದವಾನಿಯಲ್ಲಿ ಇವರನ್ನು ಎದುರು ನೋಡುತ್ತಿದ್ದರು. ಇವರು ಬಂದಾಕ್ಷಣವೇ "ಪ್ರಾಣದೇವರ ಆಜ್ಞಾಮೇರೆಗೆ, ನಮ್ಮ ತಂದೆಗಳಾದ ಅರಳೀಕಟ್ಟಿ ಆಚಾರ್ಯರು ತಮ್ಮನ್ನು ಕರೆದುಕೊಂಡು ಬರುವದಾಗಿ ಹೇಳಿದ್ದಾರೆ. ಹೊರಡಬೇಕು." ಅಂತ ಹೇಳಿದ ಕೂಡಲೇ "ಹಿಂದಕ್ಕೆ ವ್ಯಾಸ ಕಾಶಿಯಲ್ಲಿ ಆದ ಸ್ವಪ್ನ ಸೂಚನೆಯು ನನ್ನ ಇಷ್ಟಸಿದ್ಧಿಯ ಸಮಯವಿದಲ್ಲವೆಂಬುದಾಗಿ ಸ್ವಪ್ನಸೂಚನೆಯಾಯಿತು. ಅಶ್ವತ್ಥ ಕಟ್ಟೆಯನ್ನು ತೋರಿಸಿ ಅಲ್ಲಿ ಹೋಗು ಅಂತಾ ಸ್ವಪ್ನವಾಯಿತು. ಸ್ಫೂರ್ತಿಗೆ ಬಂದು ಆನಂದೋದ್ರೇಕವಾಗಿ ಕರೆಯಲು ಬಂದ ಕೊಪ್ಪರೇಶಾಚಾರ್ಯರನ್ನು **"ಆಲಿಂಗನಾ ಮಾಡಿಕೊಂಡು"** ಇಂದು ನನ್ನ ಜನ್ಮ ಸಾರ್ಥಕವಾಯಿತು" ಎಂದು **ಶ್ರೀನಿವಾಸನನ್ನು ಕಂಡ ಶುಕಮುನಿಗಳಂತೆ ನಟಿಸಿದರು.** ಕೆಲಹೊತ್ತು ಈ ರೀತಿ ಆನಂದದಲ್ಲಿ ಲೋಲಾಡಿ ಗುರುಗಳ ದರ್ಶನ ತೆಗೆದುಕೊಂಡ ಅನಂತರವೇ ಭೋಜನ ಮಾಡುವದೆಂದು ಸಂಕಲ್ಪಿಸಿ ಕೋಪ್ಪರೇಶಾಚಾರ್ಯರಿಗೆ ಅತ್ಯಾದರದಿಂದ ಸೌಷ್ಟವ ಭೋಜನ ಮಾಡಿಸಿ, ಆ ಮಧ್ಯಾಹ್ನವೇ ಪ್ರಯಾಣಮಾಡಿ ಸಾಯಂಕಾಲ ಹತ್ತಿ ಬೆಳಗಲ್ ಸೇರಿದರು. ಕೂಡಲೇ ಪಾದ ಪ್ರಕ್ಷಾಲನಗಳ ಮಾಡಿಕೊಂಡು ವಾಯು ದೇವರ ಗುಡಿಯಲ್ಲಿ ಕುಳಿತಿದ್ದ ಗುರುಗಳನ್ನು ಕಂಡು ಸಾಷ್ಟಾಂಗ ನಮಸ್ಕಾರ ಪ್ರಣಾಮ ಮಾಡಿ ಕೈ ಜೋಡಿಸಿ ನಿಲ್ಲುವಷ್ಟರಲ್ಲಿ ಗುಡಿಯೊಳಗಿಂದ ಆರ್ಭಟಿಸಿ ಬಂದು ತಲೆಯಿಂದ ಬೆನ್ನಿನವರೆಗೂ ಕೈ ಸವರುತ್ತಾ **"ಈಗ ಬರುವದಾಯಿತೇ"** ಅನ್ನುತ್ತ ಅವರು ಆನಂದ ಭಾಷ್ಪಗಳ ಉದುರಿಸುತ್ತ ಯೋಗ ಕ್ಷೇಮವನ್ನು ವಿಚಾರ ಮಾಡಿದರು. ಈ ದೃಶ್ಯವು ಬಹುಕಾಲ ತಾಯಿ ಮಕ್ಕಳು ಆಗಲಿ ಅಕಸ್ಮಾತ್ ಕೂಡಿದಂತೆ ಪ್ರೇಕ್ಷಕರಿಗೆ ಕಂಡುಬಂತು. ಮರುದಿವಸ ಅನುಸಂಧಾನ ಪೂರ್ವಕ ಮಾಡಿದ ಪರ್ಯಟನ ವಿವರವನ್ನು ಕೇಳಿ ಆನಂದಭರಿತರಾಗಿ, ಭಗವನ್ ಮಹಾತ್ಮ್ಯಾನುಸಂಧಾನಪೂರ್ವಕ ಆ ಸೇತು ಹಿಮಾಚಲ ಪರ್ಯಂತ ಅನೇಕ ತೀರ್ಥ ಕ್ಷೇತ್ರಾದಿ ಹಾಗೂ ಜ್ಞಾನಿಗಳ (ಸಂಗಡ) ಸಂದರ್ಶನ ಪೂರ್ವಕ ಮಾಡಿದ ತೀರ್ಥಯಾತ್ರಾ ವಿವರವನ್ನು ಕೇಳಿ ಆನಂದದಿಂದ ಈ ಅನುಸಂಧಾನ

ಕ್ರಮಗಳನ್ನು ನಿನಗೆ ಯಾರು ಹೇಳಿಕೊಟ್ಟರು ಅಂತ ಪ್ರಶ್ನಿಸಿ ಪುನಃ ತಾವೇ (ಅರಳಿಕಟ್ಟಿ ಆಚಾರ್ಯರೇ) ಯಾವಜ್ಜೀವರು ಯೋಗ್ಯತಾನುಗುಣಮುಕ್ತಿ ಸಾಧಕ ಜ್ಞಾನಪಾತ್ರರು. ಈ ಜ್ಞಾನ ಸ್ವರೂಪ ಭೂತವಾದರೂ ಅಂತರಾತ್ಮನು "ಏನಂ ಮೋಚಯಾಮಿ" ಅಂತ ಸಂಕಲ್ಪಿಸಿದೊಡನೆಯೇ ಯೌವನಾಸ್ಥೆಯಂತೆ ಆ ಜ್ಞಾನವು ಅಭಿವ್ಯಕ್ತಿ ಹೊಂದುತ್ತದೆ. ಮತ್ತು ಬಹುಜನ್ಮದ ಸಂಸ್ಕಾರ ಉಳ್ಳುವರಾದಾಗ್ಯೂ ಜ್ಞಾನಾಭಿವ್ಯಕ್ತಿಗೆ ಪರಮಾತ್ಮನ ಇಚ್ಛೆಯೇ ಮುಖ್ಯ ಕಾರಣ ಅಂತಾ ಹೇಳಿ ಶ್ಲಾಘನಾ ಮಾಡಿದರು. ಆ ದಿವಸ ಮಧ್ಯಾನ್ಹ ಶಾಸ್ತ್ರಮರ್ಯಾದೆಗನುಸರಿಸಿ ಶಾಂತಿ ಹಾಕಿದರು. ಒಂದು ಸಪ್ತಕಾದ ಮೇಲೆ ಸ್ವಗ್ರಾಮಕ್ಕೆ ಬಂದು ಸ್ವಲ್ಪ ದಿನಗಳಲ್ಲಿಯೇ ಸಕುಟುಂಬರಾಗಿ ಹತ್ತಿಬೆಳಗಲ್ಲಿಗೆ ಹೋದರು. ಹಿಂದಕ್ಕೆ ಇವರು **ವೇದವ್ಯಾಸಚಾರ್ಯ, ಗುಂಡಾಚಾರ್ಯರಲ್ಲಿ** ಸುಧಾ ವ್ಯತಿರಿಕ್ತ ಮಧ್ವ ಸಿದ್ಧಾಂತ ಗ್ರಂಥಗಳನ್ನು ಓದಿದ್ದು ವಾಚಕರಿಗೆ ಜ್ಞಾಪಕವಿರಲಿಕ್ಕೆ ಸಾಕು. ಈಗ ಶ್ರೀಮನ್ನ್ಯಾಯ ಸುಧಾವನ್ನೇ ಈ ಗುರುಗಳಲ್ಲಿ ಓದುವದೆಂದು ನಿಶ್ಚಯವಾಯಿತು. ಆಗ ಇನ್ನಿತರ ಶಿಷ್ಯರುಗಳ ಪೈಕಿ ಐದಾರು ಶಿಷ್ಯರು ಸಹ ಇವರ ಜೊತೆಯಲ್ಲಿ ಸುಧಾ ಪಾಠಕ್ಕೆ ಸಿದ್ಧರಾದರು. ಆಗ ಗುರುಗಳಂದದ್ದೇನೆಂದರೆ, "ನಾವು ಈ ಸುಧಾ ಗ್ರಂಥವನ್ನು ಕೇವಲ ಶ್ಲೋಕಾರ್ಥಗಳನ್ನೇ (ಪಂಕ್ತ್ಯರ್ಥವನ್ನೇ) ಹೇಳುತ್ತ ಕ್ವಚಿತ್ ಸಂದರ್ಭಗಳಲ್ಲಿ ವಿಶೇಷಾರ್ಥವನ್ನು ತಿಳಿಸುತ್ತ ಆದಷ್ಟು ತೀವ್ರ ಗ್ರಂಥವನ್ನು ಮುಗಿಸುವ ತಾತ್ಪರ್ಯದಿಂದಲೇ ಹೇಳ ಹೋಗುವೆವು. ಇಷ್ಟರಿಂದಲೇ ತುಷ್ಟರಾಗುವವರೇ ಪಾಠಕ್ಕೆ ಸಿದ್ಧರಾಗಬೇಕು. ಕೇವಲ ಪರ ಮತ ಖಂಡನದಲ್ಲಿಯೇ ತಾತ್ಪರ್ಯ ಉಳ್ಳವರು (ಪಂಡಿತರೆಂದು ಖ್ಯಾತಿ ಪಡೆಯುವದರಲ್ಲಿ) ಅನ್ಯತ್ರ ಹೋಗಬಹುದು. ನಮಗೆ ಆ ಪದ್ಧತಿಯನ್ನು ಅನುಸರಿಸಲು ಅವಕಾಶವೂ ಇಲ್ಲ, ಇಷ್ಟವೂ ಇಲ್ಲ" ಅಂತ ಅಂದರು. ಪರಮತನಿರಸನ ಪೂರ್ವಕ ಸ್ವಮತ ಸ್ಥಾಪನೆಯೇ ಶ್ರೀಮದಾಚಾರ್ಯರ ಧ್ಯೇಯವಿತ್ತೆಂಬುದು ಅವರ ಗ್ರಂಥಗಳಿಂದಲೇ ಕಂಡು ಬರುವದಲ್ಲಾ ಅಂತ ಒಬ್ಬ ಶಿಷ್ಯರು ನುಡಿದರು. 'ನಿಜ, **ಆದರೆ ಕಾಲ ಪ್ರವಾಹದಲ್ಲಿ ಸಿಕ್ಕು ಕುಮತಾವಲಂಬಿಗಳಾದ ಸಜ್ಜನರನ್ನು ಉದ್ಧರಿಸ ಲೋಸುಗ ಭಗವದಾಜ್ಞಾನುಸಾರ ದೇವತೆಗಳ ಪ್ರಾರ್ಥನಾನುಗುಣವಾಗಿ ಶ್ರೀವಾಯು ದೇವರು (ಶ್ರೀಮದಾಚಾರ್ಯರು) ಅವತರಿಸಿದರೇ ಹೊರ್ತು ಕೇವಲ ಪರಮತಗಳನ್ನೇ ನಾಶಗೊಳಿಸುವ (ತಿರಸ್ಕರಿಸುವದೇ) ಧ್ಯೇಯದಿಂದ ಅವತರಿಸಲಿಲ್ಲ. ಇದು ಭಗವಂತನ ಸಂಕಲ್ಪವೂ ಅಲ್ಲ. ಯಾಕೆಂದರೆ ಜೀವರು ಸ್ವರೂಪತಃತ್ರಿವಿಧರು ಮತ್ತು ತರತಮ ವಿಶಿಷ್ಟರು. ಅವರವರ ಸಾಧನಮಾರ್ಗಗಳು (ಫಲ ಪ್ರತ್ಯೇಕ ಪ್ರತ್ಯೇಕವಾಗಿರೋಣದರಿಂದ) ಪ್ರತ್ಯೇಕ ಪ್ರತ್ಯೇಕವಾಗಿಯೇ ಇವೆ. ಆದ್ದರಿಂದ ಶ್ರೀ ಮದಾಚಾರ್ಯರ ಧ್ಯೇಯವು ಸ್ವಮತ ಪ್ರತಿಪಾದನಾ ತಾತ್ಪರ್ಯ ಇತ್ತು. ತನ್ನ ಮಗನನ್ನು ಅನ್ಯ ಹುಡುಗನ ಸಹವಾಸದಿಂದ ಪರಾವೃತ್ತನನ್ನಾಗಿ ಮಾಡಲು ತಾಯಿ ಇತರ ಹುಡುಗರನ್ನು ದೂಷಣೆ ಮಾಡುವಳೇ ಹೊರ್ತು ಅನ್ಯ ಹುಡುಗರ ನಿಂದೆಯಲ್ಲಿ ತಾತ್ಪರ್ಯವುಳ್ಳವಲ್ಲ. ಮತ್ತು ರಾಜ್ಯ ರಕ್ಷಣ, ಪೋಷಣಗಳಿಗಾಗಿ ಲಷ್ಕರಿ (ಮಿಲಿಟರಿ) ಖಾತೆ, ಕಂದಾಯ (ರೆವ್ಹಿನ್ಯೂ) ಖಾತೆ ಇರುವಂತೆ ಪರಮತ ಖಂಡನ ಒಂದು, ಸ್ವಮತ ಪ್ರತಿಪಾದನೆ ಮತ್ತೊಂದು.**

ಸ್ವಮತ ಪ್ರತಿಪಾದನಾದಲ್ಲಿ ಕೇವಲ ಮುಕ್ತಿಗೆ ಬೇಕಾಗುವ ಮಾರ್ಗವೇ ದೊರೆಯುವದು. ಇದು ಸಾಧನ, ಫಲಾಧ್ಯಾಯಗಳಲ್ಲಿ ವಿಶೇಷವಾಗಿ ಕಾಣಬಹುದು' ಅಂತಾ ಹೇಳಿದರು. ಹಾಂಗಾದರೆ ಟೀಕಾಚಾರ್ಯರು ಇತ್ಯಾದಿ ಮಹಾ ಪ್ರಭೃತಿಗಳು ಪರಮತ ಖಂಡನವನ್ನೇ ಮುಖ್ಯ ಕಾರ್ಯವನ್ನಾಗಿ ಮಾಡಿದ್ದಾರಲ್ಲಾ! ಅಂತ ಅಂದರು. 'ಪರಿಸ್ಥಿತಿಗನುಸರಿಸಿ, ಅವರು ಹಾಗೆ ಮಾಡಬೇಕಾಯಿತು. ಈಗಲಾದರೂ ಅಂತಹ ಸ್ಥಿತಿ ಉಂಟಾಗಿ ಪರಮತ ಖಂಡನ ಮಾಡದ ಹೊರ್ತು ಗತ್ಯಂತರವಿಲ್ಲವೆಂತಾದರೆ ಆ ರೀತಿ ಮಾಡಬೇಕು. ರಾಜ್ಯಾಂಗಕ್ಕೆ ಸೇರುವ ಪ್ರತಿಯೊಬ್ಬನನ್ನು ಪರಿಸ್ಥಿತಿ ಮತ್ತು ಲಾಯಖಿ (ಯೋಗ್ಯತಾ)ಕ್ಕನುಸರಿಸಿ ಆಯಾ ಖಾತೆಗೆ ಸೇರಿಸುವಂತೆ ಶಿಷ್ಯಯೋಗ್ಯತಾನುಸರಿಸಿಯೂ, ಪರಿಸ್ಥಿತಿಗನುಸರಿಸಿಯೂ ಗುರುಗಳಾದವರು ಶಿಷ್ಯರಿಗೆ ವಿದ್ಯಾಪ್ರದಾನ ಮಾಡಬೇಕು' ಅಂತಾ ಅರಳೀಕಟ್ಟಿ ಆಚಾರ್ಯರೆಂದರು. ಈ ಮಾತಿಗೆ ಈ ಚರಿತ್ರನಾಯಕರಾದ ಮುತ್ತಿಗಿ ಆಚಾರ್ಯರು 'ವಿಚಕ್ಷಣಳಾದ ತಾಯಿಯು ಕೂಸಿಗೆ ಯಾವ ಕಾಲದಲ್ಲಿ ಯಾವ ಆಹಾರವನ್ನು ಎಷ್ಟು ಉಣಿಸುವದು ಯೋಗ್ಯವೋ ಅದನ್ನು ತಿಳಿದು ಆ ರೀತಿ ಆಹಾರ ಪಾನಾದಿಗಳನ್ನು ಕೊಟ್ಟು ಸಂಗೋಪನಾ ಮಾಡುವದರಿಂದ ಕೂಸಿಗೆ ಯಾವ ರೋಗವು ಗ್ರಸ್ತವಾಗದೆ ಹೇಗೆ ಸರಿಯಾಗಿ ಅಭಿವೃದ್ಧಿ ಹೊಂದುವದೋ, ತದ್ವತ್ ಭಗವದಿಚ್ಛಾದಿಂದ ನಮ್ಮ ಯೋಗ್ಯತಾನುಸರಿಸಿ ಪ್ರದಾನ ಮಾಡುವ ವಿದ್ಯೆಯೇ ನಮಗೆ ಸಾಧಕ. ಇಲ್ಲವಾದರೆ ಮೂರ್ಖಳಾದ ತಾಯಿಯು ಕೂಸು ತಿನ್ನೋಣ ಮಾತ್ರದಿಂದಲೇ ಅಭಿವೃದ್ಧಿ ಹೊಂದುವದೆಂದು ತಿಳಿದು ಯಾವ ಕಾಲಕ್ಕೆ ಯಾವ ಪದಾರ್ಥ ಎಷ್ಟು ತಿನಿಸಬೇಕೆಂಬ ನಿಯಮವಿಲ್ಲದೆ ತಿನಿಸುತ್ತ ಹೋಗಿ ಪ್ರಬಲ ಜಾಡ್ಯೋತ್ಪತ್ತಿಗೆ ಕಾರಣಾಗುವಳು' ಅಂತ ಹೇಳಿದ್ದಕ್ಕೆ ಗುರುಗಳು ಸಂತುಷ್ಟರಾಗಿ ಹಸನ್ಮುಖದಿಂದ ಪಾಠವನ್ನಾರಂಭಿಸಿದರು. ಓದುವಾಗ ಮಧ್ಯೆ ಮಧ್ಯೆ ಪ್ರಶ್ನೆ ಮಾಡುವರಲ್ಲಿ ಇತರರಿಗೂ ಇವರಿಗೂ ವ್ಯತ್ಯಾಸವಿರುತ್ತಿತ್ತು. ಅದಾವದೆಂದರೆ, ಉಪಾಸನಾಭಾಗ ಬಂದಲ್ಲಿ ವಿಸ್ತಾರವಾಗಿ ತಿಳಿದುಕೊಳ್ಳುವದಕ್ಕಾಗಿ ಪ್ರಶ್ನೆ ಮಾಡುತ್ತಿದ್ದರು. ಈ ರೀತಿಯಲ್ಲಿ ಓದುತ್ತ ಆರು ತಿಂಗಳಲ್ಲಿ ಪಾಠ ಮುಗಿಸಿದರು. ಈ ಅವಧಿಯಲ್ಲಿ ಗುರುಗಳ ಶೀಲ ಸ್ವಭಾವಗಳನ್ನು ಚೆನ್ನಾಗಿ ಅರಿತುಕೊಂಡು ಅವರು ಸಂತೋಷಪಡುವ ರೀತಿಯಲ್ಲಿ ಶುಶ್ರೂಷಾ ಮಾಡುತ್ತಿದ್ದರಲ್ಲದೆ ತಮ್ಮ ಶೀಲ ಸ್ವಭಾವವನ್ನು ತಿದ್ದಿಕೊಂಡರು. ಗುರುಗಳ ಪ್ರಸನ್ನತೆ ದೊರಕಿಸುವದಕ್ಕೆ ಬಹುಕಾಲ ಶ್ರಮಪಡುತ್ತಿದ್ದ ಶಿಷ್ಯರಿಗಿಂತಲೂ ಇವರು ಸೇವಾ ಚಾತುರ್ಯದಿಂದ ಗುರು ಪ್ರಸಾದವನ್ನು ಶೀಘ್ರವಾಗಿ ಪಡೆದರು. ಆರು ತಿಂಗಳ ಗುರುಕುಲ ವಾಸವು ಇವರಿಗೆ ಸುಖರೂಪವೆನಿಸಿದರೂ **"ಕಷ್ಟಾತ್ ಕಷ್ಟತರಂ ಮನ್ಯೇ ಪರಗೃಹವಾಸಂ ಪರಾನ್ನಂ ಚ"** ಎಂಬ ನ್ಯಾಯವನ್ನು ಅನುಸರಿಸಿ ಆಗರ್ಭ ಶ್ರೀಮಂತಿಕೆಯನ್ನು ಅನುಭವಿಸಿದ ಹೆಂಡತಿ ಮತ್ತು ಭಾವ ಮೈದುನಂದಿರಿಗೆ (ಬೀಗರಿಗೆ) ಕಷ್ಟರೂಪವಾಗಿತ್ತು. ಮತ್ತು ಈ ಹುಡುಗನ (ರಾಘವೇಂದ್ರನ) ವಿದ್ಯಾರ್ಜನೆಗೆ ಅವಕಾಶವಾಗದಂತಾಯಿತು. ಆದಾಗ್ಯೂ ಪತಿ ಭಕ್ತ ಪರಾಯಣಳಾದ ಕುಂ॥ ಸೌ॥ ಲಕ್ಷ್ಮೀಬಾಯಿಯು (ಈ ಕಥಾ ನಾಯಕಿ) ಯಾವ ಮಾತಾಡದೆ ಪತಿಯನ್ನೇ (ಇವರನ್ನೇ) ಅನುಕರಣ ಮಾಡುತ್ತಿದ್ದಳು. ಹೀಗಿರುತ್ತಿರಲು ಒಂದು ದಿನ "ತಮ್ಮ ಪ್ರತಿಬಿಂಬಳಾದ ನಾನು

ತಾವು ಅನುಭವಿಸುವದರಲ್ಲಿ ಸಹಭಾಗಿನಿಯಾಗಿರುವದು ಧರ್ಮ. ಆದರೆ ಈ ನನ್ನ ತಮ್ಮನನ್ನು ನಾವು ಹೋದ ಹೋದಲ್ಲಿ ಕರೆದುಕೊಂಡು ಹೋಗುತ್ತ ನಡೆದರೆ ಅವನ ವಿದ್ಯಾರ್ಜನೆಗೆ ಬಾಧಾ ಬಂದು ಅವನನ್ನು ಕೆಡಿಸಿದರೆಂಬ ಅಪಕೀರ್ತಿಗೆ ಕಾರಣವಾಗುವದು ಮತ್ತು ಅವನಾದರೂ ಮುಂದೆ ತನಗೆ ವಿದ್ಯಾ ಕಲಿಸದೆ ಕೆಡಿಸಿದೆರೆಂದು ನೊಂದುಕೊಳ್ಳಲೂಬಹುದು. ಆದ್ದರಿಂದ ಈ ಹುಡುಗನ ವಿದ್ಯಾ ದೆಸೆಯಿಂದ ಏನಾದರೂ ವ್ಯವಸ್ಥೆ ಮಾಡಿದರೆ ಒಳ್ಳೇದು" ಅಂತ ಹೇಳಲು ಈ ಹಿತೋಕ್ತಿಯು ಸಮರ್ಪಕವೆನಿಸಿ ಗುರುಗಳಿಂದ ಅಪ್ಪಣೆ ಪಡೆದು ಆದವಾನಿಗೆ ಬಂದು ಆ ಹುಡುಗನಿಗೆ ಪ್ರಾಥಮಿಕ ಶಾಲಾದಲ್ಲಿ ವಿದ್ಯಾರ್ಜನೆಯ ವ್ಯವಸ್ಥಾ ಮಾಡಿ ಪುನಃ ಹತ್ತಿಬೆಳಗಲ್ಲಿಗೆ ಹೋದರು.

೬. ಅರಳೀಕಟ್ಟೆ ಆಚಾರ್ಯರಲ್ಲಿ ಹರಿವಾಯುಗಳ ಪ್ರಸನ್ನತೆ.

ಕಥಾ ಸಂದರ್ಭಕ್ಕನುಸರಿಸಿ ಈ ಅರಳೀಕಟ್ಟೆ ಆಚಾರ್ಯರ ವಿಷಯವನ್ನು ವಾಚಕ ಮಹಾಶಯರಿಗೆ ಪರಿಚಯ ಮಾಡಿಕೊಡುವೆವು. ಈ ಅರಳೀಕಟ್ಟೆ ನರಸಿಂಹಾಚಾರ್ಯರು 'ಗದ್ವಾಲಿ' (ಹಿಂದಕ್ಕೆ ಇದು ನಿಜಾಮ್ ರಾಜ್ಯದಲ್ಲಿನ ಒಂದು ಸಂಸ್ಥಾನವೆಂಬುದು ವಾಚಕರಿಗೆ ತಿಳಿದೇ ಇದೆ.) ಎಂಬ ಸಂಸ್ಥಾನದ ಆಸ್ಥಾನ ಪಂಡಿತರು, ತಥಾ ವಿಜ್ಞಾನಿಗಳೂ ಆದ ಧೂಮಾಚಾರ್ಯರ ವಂಶದ ೩ನೇ ತಲೆಮಾರಿನವರು. ಈ ಧೂಮಾಚಾರ್ಯರ ತಂದೆಗಳಾದ ಪಾಂಡುರಂಗ ಕೇಶಾವಾಚಾರ್ಯರ ತಂದೆ ಅಪ್ಪಣಾಚಾರ್ಯರಿಗೆ (೧) ಪಾಂಡುರಂಗ ಕೇಶವಾಚಾರ್ಯ (೨) ಧೂಮಾಚಾರ್ಯ (೩) ನರಸಿಂಹಾಚಾರ್ಯ (೪) ಶೇಷಾಚಾರ್ಯ (೫) ರಾಘವೇಂದ್ರ ರಾಮಾಚಾರ್ಯ (೬) ಬೆಲ್ಲಾಚಾರ್ಯ (೭) ಅಪ್ಪಣ್ಣಾಚಾರ್ಯ ಏಳು ಜನರು ಸತ್ಪುತ್ರರು (ಸಪ್ತ ಋಷಿ). ಇವರು ಅಪರೋಕ್ಷ ಜ್ಞಾನಿಗಳೆಂದು ಪ್ರಸಿದ್ಧಿ ಉಂಟು. ಆ ವಂಶದ ಕೊನೆಯವರಾದ ಅಪ್ಪಣ್ಣಾಚಾರ್ಯರ ಶಿಷ್ಯರಾದ ಇವರು (ಅರಳೀಕಟ್ಟೆ ಆಚಾರ್ಯರು) ಲೋಕಕ್ಕೆ ಆಶ್ಚರ್ಯಕರವಾಗಿರುವ ಕರ್ಣನಂತೆ ಸರ್ವಸ್ವದಾನ ಮಾಡಿದರು. ಮತ್ತು ನಿದ್ರಾಶನಾದಿಗಳ ಬಿಟ್ಟು ದಿವ್ಯ ಸಾಧನ ಮಾಡಿ ಶ್ರೀ ಹರಿವಾಯು ಗುರುಗಳ ಅನುಗ್ರಹ ಸಂಪಾದಿಸಿದರು. ಇವರಲ್ಲಿಯ ಶ್ರೀ ಹರಿವಾಯು ಗುರುಗಳ ಅನುಗ್ರಹ ಕುರುಹುಗಳು ಯಾವವೆಂದರೆ:- (೧) ವಾಯು ದೇವರು ಸರ್ವರಿಗೂ ಕಂಡುಬರುವಂತೆ ಮಹಾಮರ್ಕಟ ರೂಪದಿಂದ ಮೂರ್ತಿಮಂತರಾಗಿ ನಾಲ್ಕು ತಿಂಗಳು ಪ್ರತಿ ನಿತ್ಯವೂ ಕ್ಲುಪ್ತಕಾಲಕ್ಕೆ ಬಂದು ಇವರಿಂದ ಸೇವಾ ಸ್ವೀಕರಿಸುವದು (೨) ಒಮ್ಮೆ ವಿಶೇಷ ಮಳೆಯ ಮೂಲಕ ಕಟ್ಟಿಗೆಯು ದೊರೆಯದಿರುವ ಕಾರಣ ಪರಿತಪಿಸುತ್ತಿರಲು ಶ್ರೀಹರಿಯು ತಾನೇ ಒಣಗಿದ ಕಟ್ಟಿಗೆಯ ಹೊರೆಯನ್ನು ತಂದುಹಾಕಿ ಮಾತನಾಡಿದ ಪ್ರಕಾರ ಒಳಗಿನಿಂದ ದುಡ್ಡು ತಂದು ಕೊಡುವಷ್ಟರಲ್ಲಿ ಅದೃಶ್ಯನಾಗಿದ್ದನು. (೩) ಯಾರೋ ಒಬ್ಬ ಯತಿಗಳು ಪಲ್ಲಕ್ಕಿಯಲ್ಲಿ ತಮ್ಮ ಮಠದ ಪರಿವಾರ ಸಮೇತ ರಾತ್ರಿ ಬಂದು ಈ ಆಚಾರ್ಯರ ಮನೆಗೆ ಹೋದಂತೆ ಅನೇಕ ಜನಗಳಿಗೆ ಕಂಡು ಬಂತು. ಮರುದಿವಸ ಪ್ರಾತಃಕಾಲ ಊರೊಳಗಿನ ಬ್ರಾಹ್ಮಣರು ಆ ಯತಿಗಳ ದರ್ಶನಾರ್ಥ ಈ ಅರಳೀಕಟ್ಟೆ

ಆಚಾರ್ಯರ ಮನೆಗೆ ಬರಲು ಯಾರೂ ಇದ್ದಿಲ್ಲಾ. ಮತ್ತು ಅವರ ಮನೆಯ ಸವಳು (ಉಪ್ಪು ನೀರು) ನೀರು ಕೆಲವು ಕಾಲ ಮಧುರವಾಗಿಯೂ ಪರಿಮಳೋಪೇತವಾಗಿಯೂ ಇತ್ತು. ಈ ರೀತಿ ಅಗಾಧವಾದ ಅನೇಕ ಮಹಿಮಾವುಳ್ಳವರಾಗಿ ಅರವತ್ತು ಮಂದಿ (ಲೌಕಿಕ, ವೈದಿಕ) ಧುರೀಣ ಶಿಷ್ಯರುಗಳಿಂದ ಸೇವಿತರಾಗಿ ಸತತ ಇಪ್ಪತ್ತೈದು ವರ್ಷಗಳು ಗ್ರಾಮ ಸೀಮೋಲ್ಲಂಘನ ಮಾಡದೆ ದೇವಸ್ಥಾನದಲ್ಲಿಯೇ ಇದ್ದುಕೊಂಡು ವಿರಾಜಿಸಿದರು.

೭. ಗೋಪಾಳವೃತ್ತಿ ಅಪಾಯವಿದೂರ.

ಅತ್ಯರ್ಥ ಪ್ರಸಾದಕ್ಕೆ ಕಾರಣವಾಗಬೇಕಾದರೆ ಗುರುಗಳೆಂಥವರಿರಬೇಕು? ಶಿಷ್ಯ ಇನ್ಯಾವ ರೀತಿ ಇರಬೇಕು? ಪ್ರವಚನ ಲಕ್ಷಣವೇನು? ಅಂದರೆ ಗುರುಗಳಾದ ತಾವು ಪೂರ್ವಾರಣಿತ್ವೇನ, ಶಿಷ್ಯನನ್ನು ಉತ್ತರಾರಣಿತ್ವೇನ ತಿಳಿದು ಚೇತನಾ ಚೇತನಗಳಲ್ಲಿಯ ಭಗವದ್ಗುಣ ಕ್ರಿಯೆಗಳ ತಿಳಿಯುವ ಬೃಹದ್‌ಜ್ಞಾನಿಗಳಾಗಿರಬೇಕು. **"ನಾಯಮಾತ್ಮಾ ಪ್ರವಚನೇನ ಲಭ್ಯಃ"** ಪ್ರವಚನ ಎಂದರೆ ಕೇವಲ ಶಬ್ದಾಡಂಬರವಲ್ಲವಾದ್ದರಿಂದ ಗುರುಗಳು ಕೇವಲ ಶಬ್ದ ಪಾಂಡಿತ್ಯ ಉಳ್ಳವರಾಗಿದ್ದರೆ ಸಾಲದು. ಮತ್ತು ಅವರು ದ್ರವ್ಯ ಪ್ರತಿಷ್ಠಾದಿಗಳಲ್ಲಿ ಕಾಮನಾವುಳ್ಳವರಾಗಿರದೆ ಮದ–ಮತ್ಸರಾದಿಗಳನ್ನು ತ್ಯಜಿಸಿ, ಶಾಸ್ತ್ರ ರಹಸ್ಯವನ್ನು ಯಥಾರ್ಥವಾಗಿ ತಿಳಿದುಕೊಂಡು ಅದರಂತೆ ಅನುಷ್ಠಾನ ಮಾಡಿ ತತ್ವ ನಿಶ್ಚಯ ಉಳ್ಳವರಾಗಿ ತಮಗಿಂತ ಶಿಷ್ಯರನ್ನು ಅಧೀನತ್ವೇನ ಭಾವಿಸಿ, ಅವರವರ ಯೋಗ್ಯತಾವಸ್ಥಾದಿಗಳನ್ನರಿತು, ಪ್ರಸನ್ನ ಚಿತ್ತದಿಂದ ಅವರವರಿಗೆ ಯೋಗ್ಯ ಮಾರ್ಗ ಪ್ರದರ್ಶನ ಮಾಡಲು ಸಮರ್ಥರಿರಬೇಕು. ಶಿಷ್ಯನಾದವನು ವಿವಿಧ ಸಾಂಸಾರಿಕ ದುಃಖ ದರ್ಶನದಿಂದ ಜಾತವೈರಾಗ್ಯನಾಗಿ, ಶಮದಮಾದಿ ಗುಣಯುಕ್ತನಾಗಿ, ಕೇವಲ ಭಗವತ್ಪ್ರಸಾದಾರ್ಥಿಯಾಗಿರಬೇಕು. ಮೇಲೆ ವಿವರಿಸಿದೋಪಾದಿಯಲ್ಲಿಯ ಗುರುಗಳ ಪ್ರವಚನವೇ ಶಿಷ್ಯರಾದವರಿಗೆ ಮನೋ ನೈರ್ಮಲ್ಯಕ್ಕೆ ಕಾರಣವಾಗಿ ಜ್ಞಾನ, ಭಕ್ತಿ, ವೈರಾಗ್ಯಾದಿಗಳು ಹೆಚ್ಚಲು ಕಾರಣವಾಗುವದು. ಏತದ್ವಿಪರೀತವಾದ ಪ್ರವಚನವು ಜ್ಞಾನ, ಭಕ್ತಿ, ವೈರಾಗ್ಯಾದಿಗಳನ್ನು ಹುಟ್ಟಿಸದೆ ಕಾಮ, ಕ್ರೋಧ, ಮದ, ಮತ್ಸರಾದಿ ದೋಷಗಳನ್ನು ಹೆಚ್ಚಿಸಲು ಕಾರಣವಾಗುವದು. **"ಗುರು ಪ್ರಸಾದೋ ಬಲವಾನ್" – "ನ ತಸ್ಮಾತ್ ಬಲವತ್ತರಮ್"** ಎಂದಿರುವದರಿಂದ ಅಂಥಹ ಗುರುಪ್ರಸಾದವನ್ನು ಪಡೆದ ಇವರಿಗೆ ಇಷ್ಟಸಿದ್ಧಿಯು ಅತ್ಯರ್ಥ ಪ್ರಸಾದವು ಕರತಲಾಮಲಕದಂತೆಯೇ ಸರಿ. ಅರಳೀಕಟ್ಟಿ ಆಚಾರ್ಯರ ಶಿಷ್ಯರ ಪೈಕಿ ಕೆಲವರು ಅಕ್ಕಿಯನ್ನು, ಕೆಲವರು ಬೇಳೆಯನ್ನು ಮತ್ತು ಕೆಲವರು ಇತರ ಪದಾರ್ಥಗಳನ್ನು ಪೂರೈಸುತ್ತಿದ್ದರಲ್ಲದೇ ಉಳಿದವರು ತಮ್ಮ ತಮ್ಮ ಶಕ್ತ್ಯನುಸಾರ ಪ್ರತಿ ತಿಂಗಳಲ್ಲಿ ದ್ರವ್ಯರೂಪದಿಂದ ಸೇವಾ ಮಾಡುತ್ತಿದ್ದರು. ಈ ರೀತಿ ಬಹುಕಾಲ ನಡೆದಿದ್ದರೂ ಈ ಚರಿತ್ರೆ ನಾಯಕರಾದ ಶ್ರೀನಿವಾಸಾಚಾರ್ಯರು ಈ ಗುರುಗಳಲ್ಲಿ ಬಂದಾಗ ಕ್ಷಾಮ ಪ್ರಯುಕ್ತ ಮೇಲ್ಕಾಣಿಸಿದಂತೆ ಶಿಷ್ಯರುಗಳಿಂದ ಅಕ್ಕಿ, ಆಹಾರ ಮೊದಲಾದ ಪದಾರ್ಥಗಳು ಬಾರದಂತಾದವು. 'ಈಗ ನಿನ್ನಿಂದಲೇ ಸರ್ವ ಸೇವಾ ಆಗಬೇಕಾಗಿದೆ. ಇದರಿಂದ ಶ್ರೀಹರಿ ವಾಯು ಗುರುಗಳು ಪ್ರೀತರಾಗಿ ಅಗಾಧ ಸಾಧನೆ ಮಾಡಿಸುವರು. ಆದ್ದರಿಂದ ಶುದ್ಧ ವೃತ್ತಿ (ಗೋಪಾಳ) ಮಾಡಿ ಇಲ್ಲಿಯ

ಖರ್ಚು ನಿರ್ವಾಹ ಮಾಡುವಂತೆ ಒಂದು ತಂಬಗಿ ಮುಂದಿಟ್ಟು ಆಜ್ಞಾಮಾಡಿದರು'. ತಾವತ್ಪರ್ಯಂತ ಶ್ರೀಮಂತನೆಂದೆನಿಸಿದ ನಾನು ಅಪರಿಚಿತ ಸ್ಥಲದಲ್ಲಿ ಹ್ಯಾಂಗೆ ಭಿಕ್ಷಾ ಬೇಡಬೇಕು, ಅಂತ ಅಂತರಂಗದಲ್ಲಿ ಸೂಕ್ಷ್ಮವಾಗಿ ಅಭಿಮಾನವಿತ್ತು. ಈಗ **"ಗುರೋರಾಜ್ಞಾಂ ನ ಲಂಘಯೇತ್"** ಅಂತ ಅಂದುಕೊಂಡು **"ಯಸ್ಯಾನುಗ್ರಹಮಿಚ್ಛಾಮಿ ತಸ್ಯವಿತ್ತಂ ಹರಾಮ್ಯಹಂ"** ಎಂಬ ವಚನಾನುಸಾರವಾಗಿ ಶ್ರೀಶನು ನನ್ನ ಬಾಹ್ಯವಿತ್ತದಂತೆ (ಸಂಪತ್ತಿನಂತೆ) ಅಹಂಕಾರ, ಮಮಕಾರ ರೂಪವಾದ ಅಭಿಮಾನವೆಂಬುವ ಆಂತರ ವಿತ್ತವನ್ನು (ಜ್ಞಾನವನ್ನು) ಕಳೆಯಲುದ್ಯುಕ್ತನಾಗಿರುವನೆಂದು ಮನಸ್ಸಿನಲ್ಲಿ ಸಂಭ್ರಮಗೊಂಡು, ಆ ದಿನ ಹತ್ತಿಬೆಳಗಲ್ಲದಲ್ಲಿ ಶುದ್ಧ ವೃತ್ತಿ (ಗೋಪಾಳಕ್ಕೆ)ಗೆ ಆರಂಭ ಮಾಡಿದರು. ಆ ಮೇಲೆ ಆ ಊರು ಹಾಗೂ ಸಮೀಪ ಗ್ರಾಮಗಳಲ್ಲಿ ವಾರಕ್ಕೆ ಒಂದು ದಿನದಂತೆ ಸಂತೆಯ ದಿವಸ ಹೋಗಿ ವ್ಯಾಪಾರಸ್ಥರಿಂದಲೂ ಭಿಕ್ಷ ತೆಗೆದುಕೊಂಡು ಬರುತ್ತಿದ್ದರು. ಈಗ ಇವರ ಭಿಕ್ಷಾಟನವು ವಾಯುದೇವರ ಇಚ್ಛೆಕ್ಕೆ ಬಂದದ್ದರಿಂದ ಭೀಮಸೇನ ದೇವರ ಭಿಕ್ಷಾದಂತೆ ಸಾಕಾಗುವಷ್ಟು ಪದಾರ್ಥಗಳು ನಿರಾಯಾಸದಿಂದ ದೊರೆಯುತ್ತಿದ್ದವು. ನಂತರ ಶಿಷ್ಯರುಗಳಿಂದ ಪ್ರತಿ ತಿಂಗಳಲ್ಲಿ ಬರುವ ಕ್ಲುಪ್ತದ್ರವ್ಯವು ಕಡಿಮೆ ಬರುಹತ್ತಿತು. ಇದನ್ನು ಪೂರ್ತಿಗೊಳಿಸಲೋಸುಗ ಆದವಾನಿ, ಆಲೂರ, ಬಳ್ಳಾರಿಯ ಅಧಿಕಾರ ವರ್ಗ ಜನರಲ್ಲಿ ಅಲ್ಪ ಚಂದಾ ರೂಪವಾಗಿ ಪ್ರತಿ ತಿಂಗಳಲ್ಲಿ ವಸೂಲು ಮಾಡಿ ತಂದು ಒಂದು ಸಂವತ್ಸರ ಯಾವತ್ತೂ ನಿತ್ಯ ನೈಮಿತ್ತಿಕ ಖರ್ಚು ನಿರ್ವಹಿಸಿದರು. ಅಕಸ್ಮಾತ್ ಒಂದು ದಿನ ಗುರುಗಳು ಉಗ್ರಾಣ ಪ್ರವೇಶ ಮಾಡಿ ಯಾವತ್ತು ಪದಾರ್ಥಗಳು ತುಂಬಿರುವದನ್ನು ಕಂಡು ಬಹು ಸಂತುಷ್ಟರಾಗಿ, ದೂರ್ವಾಸರಿಗೆ ದ್ರೌಪತಿಯು ಕೌಪೀನಾರ್ಥ ತನ್ನ ಶೀರೆಯ ಸೆರಗನ್ನು ಹರಿದು ಕೊಟ್ಟುದಕ್ಕೆ ಅಕ್ಷಯಾಂಬರವಾಗಲೆಂದು ಹರಿಸಿದಂತೆ ಮುಂದೆ ನಿನಗೆ ಭಗವಂತನು ಅಕ್ಷಯ ಪದಾರ್ಥಗಳನ್ನು ಕೊಡಲಿ ಎಂದು ಆಶೀರ್ವಾದ ಮಾಡಿದರು.

೮. ಗುರುತರಸೇವೆ ಗುರುಪ್ರೀತಿಗೆ ಕಾರಣ.
(ಉಪವಾಸ ಉಪಾಯ ಸಾಧಿಸಿತು)

ಆಮೇಲೆ, ಒಂದು ದಿನ ತಮ್ಮ ಮುಖ್ಯ ಶಿಷ್ಯರೆಂದೆನಿಸಿದ ಬಾಡದ ವೆಂಕಟ ನರಸಿಂಹಾ ಚಾರ್ಯ (ಇವರು ಬಿಲ್ವಪತ್ರೀ ಆಚಾರ್ಯರೆಂದು ಪ್ರಸಿದ್ಧರು), ಪುಟ್ಟಾಚಾರ್ಯ, ಸುಂಕದ ಶ್ರೀನಿವಾಸಾಚಾರ್ಯ ಹಾಗೂ ಈ ಮುತ್ತಿಗಿ ಆಚಾರ್ಯ, ಈ ನಾಲ್ಕು ಮಂದಿ ಶಿಷ್ಯರನ್ನೂ ಕರೆದು ಭಾಗವತ್ ಪ್ರಸಾದಾರ್ಥ ಗುರು ಪ್ರಸಾದ ಪಡೆಯಬೇಕೆಂದು ಹವಣಿಸುವವರು, "ಈಗ ನಾವು ಹೇಳುವ ಕ್ರಮದಿಂದ ಸೇವಾ ಮಾಡಲು ಸಿದ್ಧರಾಗಿರಿ. ಅದೇನೆಂದರೆ ಒಂಬತ್ತು ದಿನಗಳು (೯) ಅನಶನವ್ರತದಿಂದ ಪ್ರಾತರಾರಭ್ಯ ರಾತ್ರಿ ಪರ್ಯಂತರ ಸರ್ವ ಸೇವಾ ಮಾಡಬೇಕು. ಸರ್ವ ಸೇವಾ ಅಂದರೆ ಅಂಗಳ ಕಸಮೊದಲುಗೊಂಡು ಮನೆಯಲ್ಲಿಯ ಕಸ ತೆಗೆಯುವುದು, ಅಂಗಳ ಥಳಿಹಾಕಿ ಮನೆಸಾರಿಸಿ ಹೊಸ್ತಿಲಿಗೆ ಕೆಮ್ಮಣ್ಣು ಹಚ್ಚಿ ರಂಗುವಲ್ಲಿ ಹಾಕುವುದು, ಆಕಳ ಕಾಲಾಗಿನ ಕಸ ತೆಗೆಯುವದು. ಆಕಳ ಹಿಂಡುವದು, ಉಪಸಾರಿಣೆ (ಉಪಕರಣಗಳು) ಮುಸರೆ

ಪಾತ್ರೆಗಳ ತೊಳೆಯುವುದು, ತುಳಸೀ ಪುಷ್ಪಗಳ ತರುವುದು, ನೀರು ತರುವುದು, ಬಟ್ಟೆಗಳ ಒಗೆದು ಒಣಹಾಕುವುದು, ಪಾಠಕ್ಕೆ ಬರುವುದು, ಅಡಿಗೆ ಮಾಡುವದು, ನಮ್ಮ ದೇವತಾರ್ಚನಕ್ಕೆ ಸರಿಯಾಗಿ ಅಗ್ರೋದಕ ತರುವುದು, ಗಂಧಾಕ್ಷತಿ ಸಿದ್ಧಪಡಿಸುವದು, ಎಡ, ಬಲ ಸೇವಾ ಮಾಡುವುದು, ಭೋಜನಕ್ಕೆ ಕೂಡುವವರಿಗೆ ಬಡಿಸುವದು, ಎಂಜಲ ತೆಗೆಯುವದು, ಮುಸರೆ ತೊಳೆಯುವದು, ಪಾತ್ರೆಗಳನ್ನು ಸ್ವಚ್ಛ ಇಡುವದು, ಭಾಗವತ ಪುರಾಣ ಹೇಳುವುದು, ಸಾಯಂಕಾಲದಲ್ಲಿಯೂ ಫಳಾರದವರಿಗೆ ಫಳಾರ, ಊಟದವರಿಗೆ ಅಡಿಗೆ ಸಿದ್ಧಪಡಿಸಿ, ಬಡಿಸಿ ಎಂಜಲ ತೆಗೆದು, ಸಾರಿಸಿ, ಮುಸುರೆ ತೊಳೆದು ಪಾತ್ರೆಗಳ ಸ್ವಚ್ಛ ಇಟ್ಟು ಕರೆದರೆ ಪಾದ ಸಂಹನನ ಮಾಡುತ್ತ ಅನಿಮಿಷ ಜಾಗರವನ್ನು ಬೇಸರದೆ, ಆಲಸ್ಯ ಮಾಡದೆ, ಯಾರಿಗೂ ತೊಂದರೆ ಎಂದೆನಿಸದೆ ಸೇವಾ ಮಾಡುತ್ತ ಜಾಗರೂಕರಾಗಿರಬೇಕು. ಇದರಲ್ಲಿ ಒಂದು ದಿನ ವ್ಯತ್ಯಾಸವಾದರೂ ತಾವತ್ಪರ್ಯಂತರ ಮಾಡಿದ ಸೇವಾ ವ್ಯರ್ಥವಾಗುವುದು" ಎಂದು ವಿವರಿಸಲು 'ಇಷ್ಟು ಸೇವಾ ಹ್ಯಾಂಗಾದರೂ ಮಾಡಬಹುದು. ಆದರೆ ಅನಶನ ವ್ರತದಿಂದ ಮಾಡುವುದು ಸಾಧ್ಯವಿಲ್ಲ' ಅಂತ ಬಿಲ್ವಪತ್ರೀ ಆಚಾರ್ಯರೆಂದರು. (ಈ ಆಚಾರ್ಯರು ಪ್ರತಿದಿನವೂ ಬಿಲ್ವಪತ್ರೀ, ಮೊಸರು, ಹಾಲು ಸೇವನ ಮಾಡುತ್ತಿದ್ದರಾದ್ದರಿಂದ ಇವರಿಗೆ ಬಿಲ್ವಪತ್ರೀ ಆಚಾರ್ಯರೆಂದು ಪ್ರಸಿದ್ಧಿಯಾಯಿತು.) ಅನಶನ ವ್ರತ ಮಾಡಿದರೂ ಮಾಡಬಹುದು, ಇಷ್ಟು ಸೇವಾ ಅಸಾಧ್ಯವೆಂದು ಪುಟ್ಟಾಚಾರ್ಯರು ನುಡಿದರು. 'ಅನಶನ ವ್ರತದಿಂದ ಇಷ್ಟು ಸೇವಾ ಆಲಸ್ಯ ಮಾಡದೆ ಯಾರಿಂದಲೂ ಸಾಧ್ಯವಿಲ್ಲ. ಬೇಕಾದರೆ ಅನ್ನಬಿಟ್ಟು ಅವಲಕ್ಕಿ ಇತ್ಯಾದಿ ಘಟ್ಟಿ ಪದಾರ್ಥ ಫಳಾರ ತಿಂದು ರಾತ್ರಿ ಎರಡು ಪ್ರಹರವಾದರೂ ನಿದ್ರಾಕ್ಕೆ ಅವಕಾಶ ಕೊಟ್ಟರೆ ಸ್ವಲ್ಪ ಹೆಚ್ಚು ಕಡಿಮೆ ಸೇವಾ ಮಾಡಿದರೂ ಮಾಡಬಹುದು' ಅಂತ ಸುಂಕದ ಶ್ರೀನಿವಾಸಾಚಾರ್ಯರು ಗೊಣಗುಟ್ಟಿದರು. "ನೀವೇನನ್ನುತ್ತೀರಿ ಶ್ರೀನಿವಾಸಾಚಾರ್ಯರೇ?" ಎಂದು ಈ ಚರಿತ್ರನಾಯಕರ ಮುಖವನ್ನು ನೋಡಲು, "ಅನುಗ್ರಹ ಮಾಡಿ ಆಜ್ಞಾ ಮಾಡಿದರೆ ಮಾಡುತ್ತೇನೆ" ಅಂತ ಸಾಷ್ಟಾಂಗ ಪ್ರಣಾಮ ಮಾಡಿದರು. "ತಥಾಸ್ತು" ಮಾಡು. "ಶ್ರೀ ಹರಿವಾಯುಗಳ ಅನುಗ್ರಹ ಬಲದಿಂದ ನಿನ್ನ ಸರ್ವೇಂದ್ರಿಯ ನಿಯಾಮಕರು ಸರ್ವಾನುಕೂಲರಾಗಲಿ" ಅಂತ ಪ್ರಸನ್ನ ಮುಖದಿಂದ ನುಡಿದರು. ಆ ಪ್ರಕಾರ ಮರುದಿವಸ ಪ್ರಾತಃಕಾಲದಿಂದ ಸೇವಾಸಕ್ತರಾದರು. ರಾತ್ರಿ ಪಾದಸಂಹನನ ಕಾಲದಲ್ಲಿ ತಾವಾಗಿಯೇ ಒಂದು ಸಣ್ಣ ಬಟ್ಟಲಲ್ಲಿ ಪಾನಕ ಮಾತ್ರ ತಂದುಕೊಟ್ಟು ತೆಗೆದುಕೊಳ್ಳಲು ಹೇಳಿದರೆ "ಮಹದಾಜ್ಞಾ" ಅಂತ ಸ್ವೀಕಾರ ಮಾಡಿದರು. ಈ ರೀತಿ ಸೇವಾ ಒಂಭತ್ತು ದಿನಗಳಾದ ಬಳಿಕ ಗುರುಗಳು ಬಹು ಸಂತುಷ್ಟರಾಗಿ **"ಭಲಾ ಭೂಪಾ ಹೌದೋ"** ಈ ರೀತಿ ಸೇವಾ ಮಾಡಿದ್ದಕ್ಕೆ ವರ ಏನು ಬೇಕು? ಕೇಳು ಕೊಡುತ್ತೇವೆ ಅಂತ ಬೆನ್ನು ಚಪ್ಪರಿಸಿದರು. "ಬ್ರಹ್ಮಾಂಡದೊಳಗಿರುವ ಯಾವ ಪದಾರ್ಥಗಳನ್ನು ಬೇಡುವುದಿಲ್ಲ. ನಾನು ಬೇಡುವುದೆಂದರೆ ಭಗವಂತನ ಅತ್ಯರ್ಥ ಪ್ರಸಾದ; ಅದು ಲಭ್ಯವಾಗುವ ರೀತಿಯಲ್ಲಿ ಅನುಗ್ರಹ ಮಾಡಬೇಕು" ಅಂತ ಕೇಳಿಕೊಂಡರು. ಆಗ ಗುರುಗಳಿಗೆ ಆನಂದೋದ್ರೇಕವಾಗಿ **"ಶ್ರೀ ಹರಿವಾಯು ಗುರುಗಳು** ನಿನ್ನಲ್ಲಿ ಮೂರ್ತಿಮಂತರಾಗಿ ಇದ್ದು ನೀನು

ಇಚ್ಛಿಸುವದೆಲ್ಲವನ್ನು ಪೂರೈಸುವರು. ನುಡಿದದ್ದು ಹುಸಿಹೋಗಗೊಡದೇ ನಡೆಸುವರು. ಶಾಪಾನುಗ್ರಹ ಶಕ್ತಿ ಕೊಡುವರು. ಆ ಸೇತು ಹಿಮಾಚಲ ಪರ್ಯಂತ ನಿನ್ನ ಸಮಾನಾಧಿಕರಿಲ್ಲವೆಂದು (ಔದಾರ್ಯಾದಿ ಗುಣಗಳಲ್ಲಿ) ಕೀರ್ತಿ ಹಬ್ಬುಸುವರು. ನಿನ್ನ ಆಚರಣೆ ಸಜ್ಜನರಿಗೆ ಸಮ್ಮತವಾಗಿಯೂ, ಮಾರ್ಗದರ್ಶಕವಾಗಿಯೂ, ದುರ್ಜನರಿಗೆ ಕ್ಷೋಭದಾಯಕವಾಗಿಯೂ, ಲೋಕಕ್ಕೆ ಹಿತಕರವಾಗಿಯೂ ತಥಾ ಆದರ್ಶಪ್ರಾಯವಾಗಿಯೂ ಆಗುವದು. ನಿನ್ನ ನಡೆನುಡಿಗಳು ವೇದಾರ್ಥಗರ್ಭಿತವಾಗಿಯೂ, ಸರ್ವತೋಮುಖ ಯಜ್ಞದಂತೆ ಪರಿಣಮಿಸಲಿ. ಮಹಾಜ್ಞಾನಿಯಾಗು, ವಿರಕ್ತ ಶಿಖಾಮಣಿಯಾಗು, ಐಹಿಕ ಸಂಪತ್ತು ನಿನಗೆ ಬೇಡವಾಗಿದ್ದರೂ ತಾನಾಗಿಯೇ ರಥ ಹಯಪಲ್ಲಕ್ಕಿ ಮೊದಲಾದ ವೈಭವಗಳಿಂದ ಮೆರೆಯುವಂಥವನಾಗು," 'ತಥಾಸ್ತು' ಅಂತ ಶಿರಸ್ಸಿನ ಮೇಲೆ ತಮ್ಮ ಅಮೃತ ಹಸ್ತವನ್ನಿಟ್ಟು ಆಶೀರ್ವಾದ ಮಾಡಿದರು. ಈ ರೀತಿ ಗುರುಪ್ರಸಾದವನ್ನು ಹೊಂದಿ ಸ್ವಲ್ಪ ದಿನಗಳಲ್ಲಿ ಗುರುಗಳಿಂದ ಅಪ್ಪಣೆ ಪಡೆದು ಆದವಾನಿಯ ವಿಜಯರಾಯರ ಗುಡಿಗೆ ಬಂದು ಸೇರಿದರು. ತದನಂತರ ಇವರು ತುಂಬಿಗನೂರಿಗೆ ಹೋದರು. ಅಲ್ಲಿ ಕೋಸಿಗಿ ಸ್ವಾಮಿರಾಯಾಚಾರ್ಯ ರೊಡಗೂಡಿ ಅನ್ಯೋನ್ಯರಾಗಿ ಕೆಲವು ಕಾಲ ಇದ್ದು ತಿರುಗಿ ಈ ಚರಿತ್ರನಾಯಕರಾದ ಮುತ್ತಿಗಿ ಶ್ರೀನಿವಾಸಾಚಾರ್ಯರು ಆದವಾನಿಗೆ ಬಂದು ಸೇರಿದರು.

೯. ಬಡತನ ಸಾಧನಸಾಧನ.

ಇಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದ ಭಾವಮೈದುನನಾದ ರಾಘವೇಂದ್ರನಿಗೆ ಟಪಾಲ (ಅಂಚೆ) ಖಾತೆಯ ನೌಕರಿ ಆಯಿತು. ಆದಾಗ್ಯೂ ನಿತ್ಯ ಸಂಸಾರ ಖರ್ಚಿಗೆ ಸಾಲದಂತಾಗುತ್ತಿತ್ತು. ನಂತರ ಪುನಃ ಬೆಳಗಲ್ಲಿಗೆ ಹೋದರು. ಅಲ್ಲಿ ಈ ಅರಳೀಕಟ್ಟಿ ಆಚಾರ್ಯರ ಶಿಷ್ಯರು ಕೂಡಿ, ಇವರು ಗುರುಗಳ ಸೇವಾಕ್ಕೆ ಯೋಗ್ಯರಾಗಿದ್ದಾರೆ ಮತ್ತು ತಾಪತ್ರಯ ಮೂಲಕ ಶ್ರಮ ಪಡುತ್ತಲಿದ್ದಾರೆ, ಅನುಕಂಪದಿಂದ ತಕ್ಕಮಟ್ಟಿಗಾದರೂ ಸಂಸಾರ ಖರ್ಚಿಗೆ ಅನುಕೂಲವಾಗುವಂತೆ ಸ್ವಲ್ಪ ಜಮೀನು, ಮನೆಯನ್ನು ಮಾಡಿಕೊಟ್ಟು ಹತ್ತಿ ಬೆಳಗಲ್‌ದಲ್ಲಿ ಇದ್ದುಕೊಂಡು ಆಚಾರ್ಯರ (ಗುರುಗಳ) ಸೇವಾ ಮಾಡುತ್ತ ಇರಲಿಕ್ಕೆ ವ್ಯವಸ್ಥಾ ಮಾಡುವ ಯೋಜನೆಯಿಂದ ಆಚಾರ್ಯರಲ್ಲಿ (ಗುರುಗಳಲ್ಲಿ) ಪ್ರಸ್ತಾಪಿಸಲು, 'ನೀವುಗಳು ಮಾಡಿದ ಯೋಚನೆ ಯೋಗ್ಯವಿದೆ. ಇದಕ್ಕೆ ಶ್ರೀನಿವಾಸ ಆಚಾರ್ಯರ ಸಮ್ಮತಿ ಪಡೆದು ಈ ಕೆಲಸ ಮಾಡಿರಿ' ಅಂತ ಹಾಸ್ಯಮುಖದಿಂದ ಹೇಳಿದರು. ಅದರಂತೆ ಇವರನ್ನೂ (ಮುತ್ತಿಗಿ ಆಚಾರ್ಯರನ್ನು) ಆ ಜನರು ವಿಚಾರಿಸಲು, ಗುರುಗಳ ಸಮ್ಮುಖದಲ್ಲಿ "ನಹಿ ವಂಧ್ಯಾ ವಿಜಾನಾತಿ ಗುರ್ವೀಂಪ್ರಸವವೇದನಾಂ" "ಅಯಥಾ ರ್ಥೋಽಯಂ ಪ್ರಯಾಸಃ" ಅಂದು ಸುಮ್ಮನಾದರು. ಆಗ ಗುರುಗಳು ತಲೆದೂಗಿ, ಕೇಳಿದಿರಾ "ಅವರಾಡಿದ ಮೌಲ್ಯದ ಮಾತು!. ಅವರೇನು ಜಮೀನು ಮನೆ ಕಾಣದಿದ್ದವರಲ್ಲ. ನೀವು ಕೊಡಬೇಕೆಂದು ಮಾಡಿದ ಆಸ್ತಿಯ ಎಷ್ಟೋ ಪಟ್ಟು ಇದ್ದದ್ದನ್ನು ತೃಣೀಕರಿಸಿ ಭಗವದರ್ಪಣ ಬುದ್ಧಿಯಿಂದ ಮನಃಪೂರ್ವಕ ವ್ಯಯ ಮಾಡಿ ಪ್ರಶಾಂತ ಚಿತ್ತದಿಂದಿದ್ದು ಕೇವಲ ಭಗವತ್

ಪ್ರಸಾದಾರ್ಥಿಗಳಾಗಿದ್ದಾರೆ. ಇಂತಹವರ ದೆಸೆಯಿಂದ ಈ ರೀತಿ ನೀವು ಹವ್ಯಾಸ ಪಡುವುದು ಮೂರ್ಖತನವೇ ಸರಿ. ಅವರ ಯೋಗಕ್ಷೇಮಕ್ಕಾಗಿ ಶ್ರೀಹರಿವಾಯುಗಳು ಕಂಕಣಬದ್ಧರಾಗಿದ್ದಾರೆ. ಆದ್ದರಿಂದ, ಅವರ ಯೋಗಕ್ಷೇಮದ ವಿಷಯದಲ್ಲಿ ಯಾರೂ ಯೋಚಿಸುವ ಕಾರಣವಿಲ್ಲ" ಎಂದರು. ನಂತರ ಕೆಲವು ದಿನಗಳ ಮೇಲೆ ಆದವಾನಿಗೆ ಬಂದು ವಿಜಯರಾಯರ ಗುಡಿಯಲ್ಲಿರುತ್ತಿರಲು ಸ್ವಲ್ಪ ದಿನದಲ್ಲಿ ಸಾಧನ ಉಪಕ್ರಮವಾಯಿತು. ಈ ಸಾಧನ ವಿಷಯವನ್ನು ಸಾಕಲ್ಯೇನ ಪ್ರಕಟಿಸಬಾರದೆಂದು ನಿಯಮವಿರುವದರಿಂದ ಅತಿ ಸಂಕ್ಷೇಪದಿಂದ ಉಲ್ಲೇಖಿಸುವೆನು.

೧೦. ತುಂಗಸಾಧನ ರಂಗನೊಲುಮೆ ಸಾಧಿಸಿತು.
(ಅಪರೋಕ್ಷೀಕೃತಶ್ರೀಶರಾದರು)

ತದಾರಂಭದಲ್ಲಿ ವಾಯುದೇವರ ಆಜ್ಞೆಯ ಮೇರೆಗೆ ಶ್ರೀ ರಂಗನಾಥ ದೇವರ ದರ್ಶನ ತೆಗೆದುಕೊಂಡು ಕಲ್ಯಾಣ ತೀರ್ಥದಲ್ಲಿಯ ಶ್ರೀ ಕುಠಾರರಾಮಲಿಂಗೇಶ್ವರನಲ್ಲಿ ಒಂದು ತಿಂಗಳು, ರಣಮಂಡಲದಲ್ಲಿ ೪೦ ದಿನಗಳಿದ್ದು ತಪಸ್ಸು ಮಾಡಿ ಮಂಗರಾಯನ ಸನ್ನಿಧಿಗೆ ಬಂದರು. (ಈ ೩ ಸ್ಥಳಗಳು ಆದವಾನಿಯ ಪರ್ವತದ ಆದಿ ಮಧ್ಯಾಂತರದಲ್ಲಿವೆ.) ಅಲ್ಲಿ ಅವಶಿಷ್ಟ ಸರ್ವಸ್ವದಾನ ಮಾಡುವದಾಗಿ ವಾಯುದೇವರ ಆಜ್ಞೆಯಾಯಿತು. 'ಸ್ವಾಮಿ! ನಾನು ಒಬ್ಬನೇ ಅಲ್ಲ, ಹೆಂಡತಿ ಮತ್ತು ಭಾವಮೈದುನ (ಬೀಗನೂ ಇದ್ದಾನೆ); ನನ್ನಂತೆ ಅವರುಗಳು ಇರಲು ಸಾಧ್ಯವೇ? ತಮ್ಮ ಆಜ್ಞಾಪ್ರಕಾರ ಅವಶಿಷ್ಟವಾದ ಯಾವದಾಸ್ತಿಯನ್ನೂ ಭಾವಮೈದುನನಿಗೆ ಸ್ವಾಧೀನಪಡಿಸಿ ಅದರಿಂದ ಅವರುಗಳನ್ನು ಉಪಜೀವಿಸುವಂತೆ ಹೇಳಿ, ಅದರಿಂದ ನಾನು ಅಲಿಪ್ತನಾಗುವೆನು' ಅಂತ ಪ್ರಾರ್ಥನ ಮಾಡಿದರು. ಹಾಂಗೊ? "ಜಗತ್‌ಸೃಷ್ಟಿ, ಸ್ಥಿತಿ, ಲಯಾದಿಗಳಿಗೆ ಪರಮಾತ್ಮನೇ ಮುಖ್ಯ ಕಾರಣನೆಂಬ ಜ್ಞಾನ ನಿನಗೆ ಕೊಟ್ಟು **"ಸರಕ್ಷಿತಾ ರಕ್ಷತಿ ಯೋಹಿಂಗರ್ಭೇ"** ಎಂಬುದನ್ನು ಪದೋಪದಿ ನಿದರ್ಶನಕ್ಕೆ ತಂದುಕೊಟ್ಟಿದ್ದೇವೆ. ಅಂದ ಮೇಲೆ ಅವರುಗಳ ಉಪಜೀವನ ವಿಷಯದಲ್ಲಿ ಅನುಮಾನವೇಕೆ? ಶ್ರೀಶನು ತನ್ನ ಸಂಕಲ್ಪಾನುಸಾರ ಜಗತ್ತಿನ ಸ್ವಷ್ಟ್ಯಾದ್ಯಷ್ಟ ಕಾರ್ಯಗಳನ್ನು ನಿಯಮೇನ ನಡೆಸುತ್ತಿರುವನು. ಇದಕ್ಕಾಗಿ ನೀನು ಯೋಚಿಸುವ ಕಾರಣವಿಲ್ಲ. ಇಂತಹ ಸಂಶಯ ಪರಂಪರಾಗಳು ಅರ್ಜುನನನ್ನೂ ಭಾದಿಸಿದ್ದು, ಅದನ್ನು ಹೋಗಲಾಡಿಸುವದಕ್ಕಾಗಿಯೇ ಗಿತೋಪದೇಶವಾದದ್ದು "ಅಂತ ಹೇಳಲು ಆಗ ಮೋಹ ನಷ್ಟವಾದಂತೆ, ಈಗಲೂ ಮೋಹ ನಷ್ಟವಾಗಿ (ಅವಶಿಷ್ಟ ಯಾವದಾಸ್ತಿಯನ್ನು) ಸರ್ವಸ್ವ ದಾನ ಮಾಡಿದರು. ತಾಯಿಯಾದ ರಾಧಾಬಾಯಿ ಕಡೆಯಿಂದ ಇವರ ಕಡೆಗೆ ಬಂದ ಆಸ್ತಿ ಎಷ್ಟಿತ್ತೆಂಬುದು ವಾಚಕರ ಅನುಮಾನ ಪರಿಹಾರಾರ್ಥ ಇಲ್ಲಿ ಹೇಳಲಾಗುವುದು. ಆದವಾನಿಯಲ್ಲಿ ಅತಿ ದೊಡ್ಡ ಮನೆಗಳು ಎರಡು, ಮೇಲುಪ್ಪರಿಗೆ ಮನೆಗಳು ಎರಡು ಮತ್ತು ಸಾಧಾರಣ ಮನೆಗಳು ನಾಲ್ಕು, ಒಟ್ಟು ಎಂಟು ಮನೆಗಳು. ಅಂದಾಜು ಸಾವಿರ ಎಕರೆ ಮೇಲೆ ಖುಷ್ಕೀ (Dry land) ಜಮೀನು. ಇನ್ನೂರು ಎಕರೆಯ ಮೇಲೆ ತರೀ ಜಮೀನು (Wet land) ಇದ್ದು ಸುಮಾರು ಒಂದು ಮಣ ಬಂಗಾರ, ಅದರಲ್ಲಿ ವಜ್ರ ವೈಢೂರ್ಯರಾದಿ

ನವರತ್ನ ಖಚಿತವಾದ ಆಭರಣಗಳು ಮತ್ತು ಅನೇಕ ವಿಧ ಬೆಳ್ಳಿಯ ಪಾತ್ರೆ ಪದಾರ್ಥಗಳಿದ್ದು ನಗದು ಎರಡು ಲಕ್ಷ ರೂಪಾಯಿಗಳಿದ್ದವು. ಇದಲ್ಲದೆ ಬಡ್ಡಿಗಾಗಿ ಕೊಟ್ಟ ಪತ್ರರೂಪಾ ದ್ರವ್ಯ (Bonds) ವಗೈರೆ ಇತ್ತು. ಇಷ್ಟು ಆಸ್ತಿಯನ್ನೂ ತ್ಯಾಗಮಾಡಿ ಕೇವಲ ಕೌಪೀನ, ಕಮಂಡಲ ಧರಿಸಿ ಪಾದಚಾರಿಗಳಾಗಿ ಭರತ ಭೂಮಿ ಎಲ್ಲವನ್ನೂ ಸಂಚರಿಸಿ ಬಂದು ಗೃಹಸ್ಥಾಶ್ರಮಿಗಳಿಗುಚಿತವಾದ ಧರ್ಮ ಕರ್ಮಗಳನ್ನಾಚರಿಸುತ್ತ ಕೇವಲ ಭಗವತ್ ಪ್ರಸಾದಾಕಾಂಕ್ಷೆಗಾಗಿ ಗುರುಕುಲವಾಸ ಮಾಡಿ ದೇಹಗೇಹಾದಿಗಳಲ್ಲಿ ಅಭಿಮಾನ ಪರಿತ್ಯಾಗ ಮಾಡಿದ ಇವರು ವೈರಾಗ್ಯದ ಶಿಖರವನ್ನು ಮುಟ್ಟಿದವರೆಂದು ಏನು ಹೇಳಬೇಕು! ಅಸ್ತು. ವಾಯುದೇವರ ಆಜ್ಞಾ ಮೇರೆಗೆ ಸರ್ವಸ್ವ ದಾನ ಮಾಡುವದಾಗಿ ತನ್ನಿಯಮಕ್ಕನುಸರಿಸಿ ಪಿತ್ರಾರ್ಜಿತದಲ್ಲಿ ಒಂದು, ಸ್ವಾರ್ಜಿತದಲ್ಲಿ ಒಂದು, ಆಪದ್ಧನದಲ್ಲಿ ಒಂದು, ಸ್ತ್ರೀಧನದಲ್ಲಿ ಒಂದು ಈ ರೀತಿ ನಾಲ್ಕು ಪದಾರ್ಥಗಳನ್ನು ಇಡುವದಿತ್ತು. ಈ ನಿಮಿತ್ತವಾಗಿ ವಿಶೇಷ ಬೆಲೆ ಬಾಳುವ ವಜ್ರ ವೈಢೂರ್ಯಾದಿ ಪದಾರ್ಥಗಳಿಟ್ಟರೇನು! ಇಲ್ಲ, ಇಟ್ಟಿದ್ದೇನೆಂದರೆ:- ಪಿತ್ರಾರ್ಜಿತದಲ್ಲಿ ಒಂದು **ಸಾಣಿ ಕಲ್ಲು**, ಸ್ತ್ರೀಧನದಲ್ಲಿ ಒಂದು **ಬೀಸುವ ಕಲ್ಲು**, ಸ್ವಾರ್ಥದಲ್ಲಿ ಒಂದು **ಕಬ್ಬಿಣ ಹಂಚು**, ಆಪದ್ಧನದಲ್ಲಿ ಒಂದು **ಹಿತ್ತಾಳೆ ತಂಬಿಗೆಯು** ಹೊರ್ತು ಬೇರೆ ಯಾವ ವಸ್ತುವನ್ನಿಟ್ಟುಕೊಳ್ಳದೆ ಸರ್ವವನ್ನೂ ದಾನ ಮಾಡಿಬಿಟ್ಟರು. ಈ ಸಂದರ್ಭದಲ್ಲಿ ಇವರ ಪತ್ನಿ ಸಹ ಈ ಸರ್ವಸ್ವ ದಾನಕ್ಕೆ ಸಿದ್ಧರಾಗಿ ಧರಿಸಿದ ಮಾಂಗಲ್ಯ, ಉಟ್ಟ ಸೀರೆ, ತೊಟ್ಟ ಕುಪ್ಪಸ ವಿನಾ ಸರ್ವ ಆಭರಣಗಳನ್ನೂ ತೆಗೆದು ಮುಂದಿಟ್ಟು ನಮಸ್ಕಾರ ಮಾಡಿದಳು. ಸ್ವಾಭಾವಿಕವಾಗಿ ಸ್ತ್ರೀಯರು ಅಲಂಕಾರ ಪ್ರಿಯರಷ್ಟೆ, ಆದಾಗ್ಯೂ ವಿರಕ್ತರಾದ ಪತಿಯನ್ನೇ ಅನುಕರಣ ಮಾಡಿದ್ದಕ್ಕೆ ಪತಿಭಕ್ತಿ ಪರಾಯಣದಲ್ಲಿ ಎಷ್ಟು ಹೇಳಿದರೂ ಅಲ್ಪವೇ ಸರಿ! ನಂತರ ಮಂಗರಾಯನ ಸನ್ನಿಧಾನದಿಂದ ವಿಜಯರಾಯರ ಗುಡಿಗೆ ಬಂದರು. ಇನ್ನು ಮೇಲೆ ನಮ್ಮ ಚರ್ಯವು ವಿಲಕ್ಷಣವಾಗುವದರಿಂದ 'ನೀನು ಪ್ರತ್ಯೇಕ ವಾಸಮಾಡು' ಅಂತ ಭಾವಮೈದುನನಾದ ಫೇರಿಕಾರ ರಾಘವೇಂದ್ರನಿಗೆ ಹೇಳಿ ಪ್ರತ್ಯೇಕಿಸಿದರು. ಆಗ ಇವರ ದಿನ ಚರ್ಯ ಹ್ಯಾಂಗಂದರೆ, ಅರುಣೋದಯಕ್ಕೆ ಬಾವಿಯಲ್ಲಿ ಸ್ನಾನಮಾಡಿ (ಉಟ್ಟಿದ್ದ ವಿನಾ ಬೇರೆ ಬಟ್ಟೆ ಇಲ್ಲದ್ದರಿಂದ) ಒದ್ದೆಯಿಂದಲೇ ಆಹ್ನೀಕವನ್ನು ತೀರಿಸಿಕೊಂಡು ಐದು ಮನೆಗಳಿಗೆ ಮಾತ್ರ ಗೋಪಾಳಕ್ಕೆ ಹೋಗುತ್ತಿದ್ದರು. (ಈ ಗೋಪಾಳವಾದರೂ ಕೇವಲ ಅಕ್ಕಿ ದೊರೆಯಬೇಕೆಂಬ ದೃಷ್ಟಿಯಲ್ಲಿದೆ ವಾಯುದೇವರ ಅಜ್ಞಾನುಸಾರಿಯಾದ್ದರಿಂದ ಪ್ರತಿಯೊಂದು ಮನೆಯಲ್ಲಿಯೂ ಶುಕಾಚಾರ್ಯರಂತೆ ಏಕಧಾರಾ ಗೋದೋಹನ ಕಾಲ ಮಾತ್ರ (ಕ್ಷಣಕಾಲ) ನಿಲ್ಲುತ್ತಿದ್ದರು. ಅಷ್ಟರಲ್ಲಿ ಒಂದು ಮುಷ್ಟಿ ಅಕ್ಕಿ ಮಾತ್ರ ತಂದು ಹಾಕಿದರೆ ಹಾಕಿಸಿಕೊಳ್ಳುತ್ತಿದ್ದರು. ಹೆಚ್ಚಿಗೆ ಹಾಕಲು ಬಂದರೆ ಹಾಕಿಸಿಕೊಳ್ಳುತ್ತಿದ್ದಿಲ್ಲ. ಯಾಕೆಂದರೆ ಹೆಚ್ಚು ಕಾಲ ನಿಲ್ಲುವುದಾಗಲಿ, ಹೆಚ್ಚು ಪದಾರ್ಥ ಸ್ವೀಕರಿಸುವದಾಗಲಿ ಶುದ್ಧವೃತ್ತಿಯ ನಿಯಮಕ್ಕೆ ವಿರುದ್ಧವಾದದ್ದು. ಆ ೫ ಮನೆಗಳಲ್ಲಿ ೫ ಮುಷ್ಟಿ ಕಾಳು ಬರಲಿ ಅಥವಾ ಕಡಿಮೆ ಬರಲಿ, ಬಂದ ಅಕ್ಕಿಯನ್ನು ಅಂಗಡಿಗೆ ಕೊಟ್ಟು (ಅದರ ಬೆಲೆ ತಕ್ಕಷ್ಟು) ಅದರ ಬದಲಿ ಜೋಳ, ಉಪ್ಪು, ಹುಣಸಿ ಹಣ್ಣು, ಮೆಣಸಿನಕಾಯಿ ತಂದು, ತಮ್ಮ ಪತ್ನಿಯಲ್ಲಿ ಕೊಡುತ್ತಿದ್ದರು. ಅವರು ಈ ಜೋಳವನ್ನು ಬೀಸಿ ಭಕ್ಕರಿ (ರೊಟ್ಟಿ)

ಮಾಡಿ ಚಟ್ನಿಯನ್ನೂ ಅರೆದಿಡುತ್ತಿದ್ದರು. ಮಧ್ಯಾಹ್ನ ಪೂಜೆ ಮುಗಿಸಿ, ಏನು ಆಜ್ಞಾ ಆಗುವುದು ಅಂತ ಪ್ರಾಣದೇವರನ್ನು ಪ್ರಾರ್ಥಿಸಿದ ಕೂಡಲೇ, 'ಈ ದಿನ ಉಪವಾಸ' ಅಂತ ಅಶರೀರವಾಣಿ ಕೇಳಿಸುತ್ತಿತ್ತು. ಈ ರೀತಿಯಾದರೆ ಆ ದಿನ ಶುದ್ಧ ಉಪವಾಸ ಮಾಡಬೇಕು. ಅವರ ಹೆಂಡತಿ ಮಾತ್ರ ಆ ಭಕ್ಕರಿಯನ್ನು ತಿಂದು ಅಶ್ವತ್ಥ ವೃಕ್ಷದಡಿಯಲ್ಲಿಯೇ ಕುಳಿತಿರಬೇಕು. ಇವರು ಮಾತ್ರ ಪ್ರಾಣದೇವರ ಸನ್ನಿಧಾನದಲ್ಲಿಯೇ ಸರ್ವದಾ ಕುಳಿತುಕೊಂಡಿರಬೇಕು. ಮರುದಿನವಾದರೂ ಪೂರ್ವೋಕ್ತದಂತೆ ಪ್ರಾರ್ಥಿಸಿದರೆ "ಈ ದಿನ ಪಾರಣೆ" ಅಂತ ಆಜ್ಞಾವಾದರೆ ಮಾಡಿದ್ದ ಭಕ್ಕರಿಯಲ್ಲಿ ಅರ್ಧ ಭಕ್ಕರಿಯನ್ನು ಇವರು ಸ್ವೀಕರಿಸುತ್ತಿದ್ದರು. ಈ ರೀತಿ ಒಂದು ಮಂಡಲ ಸೇವಾ ಆದನಂತರ ಪುನಃ ಮಂಗರಾಯನ ಸನ್ನಿಧಿಗೆ ಹೋಗುವುದಾಗಿ ಆಜ್ಞಾ ಆಯಿತು. ಅಲ್ಲಿಯೂ ಮಧ್ಯಾಹ್ನದಲ್ಲಿ ಪ್ರಾಣದೇವರನ್ನು ಕುರಿತು "ಏನಾಜ್ಞಾ" ಅಂತ ಪ್ರಾರ್ಥಿಸಿದರೆ ವಾಯುದೇವರು ಒಂದು ಮುಷ್ಟಿ ಮಾತ್ರ ದೃಗ್ಗೋಚರಿಸಿ, 'ಇಷ್ಟು ಅವಲಕ್ಕಿ ತೊಗೋ' ಅಂತ ಆಜ್ಞಾ ಆಯಿತು. ಈ ರೀತಿ ಸತತ ೪ ತಿಂಗಳ ಸೇವೆಯಾಯಿತು. (ಇವರಿಗೆ ಬೇಕಾಗುವ ಒಂದು ಮುಷ್ಟಿ ಅವಲಕ್ಕಿಯನ್ನು ಪೂರೈಸುವುದಾಗಿ ತಾನಾಜಿ ರಂಗರಾಯರಿಗೆ ಸ್ವಪ್ನವಾಯಿತು. ಆದ್ದರಿಂದ ಅವರು ಪ್ರತಿನಿತ್ಯವೂ ತಂದುಕೊಡುತ್ತಿದ್ದರು) ಪುನಃ ವಿಜಯರಾಯರ ಗುಡಿಗೆ ಬಂದರು. ಇಲ್ಲಿ ಪ್ರತಿಪದಾರಭ್ಯ ಚತುರ್ಥೀ ಪರ್ಯಂತರ ೪ ದಿನಗಳು ವಾಯುದೇವರ ಆಜ್ಞಾ ಪ್ರಕಾರ (ಭೀಷ್ಮ ಪಂಚಕದಂತೆ) ಶುದ್ಧ ಉಪವಾಸ ಮತ್ತು ಪಂಚಮೀ (೫ನೇ ದಿವಸ) ನಲ್ಲಿ ಕಾಯಿಯಷ್ಟು ಕಲ್ಲು ಸಕ್ಕರೆ ಪಾರಣೆ, ಇದರಂತೆ ಷಷ್ಠಿ ಮೊದಲುಗೊಂಡು ನವಮಿವರೆಗೂ ಪೂರ್ವೋಕ್ತದಂತೆ ಶುದ್ಧ ಉಪವಾಸ, ದಶಮೀ (ಕಲ್ಲುಸಕ್ಕರಿ) ಪಾರಣೆ ಇದರಂತೆ ಏಕಾದಶೀ ದಿನಾರಭ್ಯ ೪ ದಿನ ಉಪವಾಸ, ಪೌರ್ಣಿಮಾ ಪೂರ್ವೋಕ್ತ ರೀತ್ಯಾ ಕಲ್ಲು ಸಕ್ಕರಿ ಪಾರಣೆ, ಈ ರೀತಿಯಲ್ಲಿ ನಾಲ್ಕು ತಿಂಗಳು ಸೇವಾ (ಸಾಧನ)ವಾಯಿತು. ಈ ಸಂದರ್ಭದಲ್ಲಿ ಇವರ ಭಾವಮೈದುನ (ಬೀಗನಾದ ರಾಘವೇಂದ್ರನು) ಆಗಾಗ ತನ್ನ ಅಕ್ಕ ಭಾವಂದಿರನ್ನು ನೋಡಿಕೊಂಡು ಹೋಗುತ್ತಿದ್ದನು. ಆದರೆ ಇವರ ತಪಸ್ಸು ಅವನಿಗೆ ಭಯಂಕರವಾಗಿ ತೋರಿ ತನ್ನ ಅಕ್ಕನಿಗೆ "ಈ ರೀತಿ ಉಪವಾಸಗಳು ಮಾಡುತ್ತಿದ್ದರೆ ನೀನು ಸುಮ್ಮನಿರಬಹುದೇ? ಇದ್ದ ಐಶ್ವರ್ಯ (ಆಸ್ತಿ) ಎಲ್ಲವನ್ನೂ ಕಳದಾಗ್ಯೂ ಪತಿಯೇ ಪರಗತಿಯಂದು ಅವರ ಇಷ್ಟ ಪ್ರಕಾರ ನಡೆದುಕೊಂಡಾಗ್ಯೂ, ಅಷ್ಟಕ್ಕೆ ಸುಮ್ಮನಿರದೆ ಉಪವಾಸಗಳ ಮಾಡಿ ದೇಹ ತ್ಯಾಗ ಮಾಡಲು ಸಂಕಲ್ಪಿಸಿದಂತೆ ತೋರುತ್ತದೆ. ಮುಂದೆ ನಿನ್ನ ಗತಿ ಏನು? ಇನ್ನಾದರೂ ನೀನು ಹಟಹಿಡಿದು ಉಪವಾಸಕ್ಕೆ ಪ್ರತಿಬಂಧಕಳಾಗು" ಅಂತ ಉಪದೇಶ ಮಾಡಿದನು. ಈ ಮಾತು ಸಮರ್ಪಕ ತೋರಿ, ಎಂದೂ ಪ್ರತಿ ಮಾತನಾಡದ ಸತಿಯು ಆ ದಿನ "ನೀವು ಈ ರೀತಿ ಉಪವಾಸ ಮಾಡಿದರೆ ನಾನು ಬಾವಿಯಲ್ಲಿ ಹಾರಿಕೊಳ್ಳುತ್ತೇನೆ" ಅಂತ ಬಹು ಹಟ ಹಿಡಿದಳು "ಶ್ರೇಯಾಂಸಿ ಬಹು ವಿಘ್ನಾನಿ" ಎಂಬಂತಾಯಿತಲ್ಲ ಅಂತ ವಾಯುದೇವರನ್ನು ಪ್ರಾರ್ಥಿಸಲು "ತಪೋ ವಿಘ್ನಕಾರಿಯಾದ ಈ ರಾಘವೇಂದ್ರನ ದೇಹವನ್ನು ತೆಗೆದು, ಶೇಷಾಯುಷ್ಯನ್ನು ಕೂಡಿಸಿ ಮುಂದಿನ ಜನ್ಮಕ್ಕೆ ಪ್ರಾರಬ್ಧ ಭೋಗಗಳ ಅನುಭವಿಸಲು ನಿನ್ನಲ್ಲಿಯೇ ತರುವೆವು" ಎಂಬುದಾಗಿ ವಾಯು

ದೇವರು ಹೇಳಿದರು. ತದನುಗುಣವಾಗಿ ಈ ರಾಘವೇಂದ್ರನಿಗೆ ಏಕಾ-ಏಕಿ ತಲೆ ಶೂಲಿನ ನಿಮಿತ್ತವಾಗಿ ಮರಣ ಹೊಂದಿದನು. ತದನಂತರ ಮೇಲ್ಕಂಡಂತೆ ಒಂದು ತಿಂಗಳ ಉಪವಾಸ ಪೂರ್ಣವಾದ ಮೇಲೆ ಪ್ರಾಣ ಪ್ರಸಾದವಾಯಿತು. ಆ ಮೇಲೆ ಮತ್ತೆ ಮಂಗರಾಯನ ಸನ್ನಿಧಿಗೆ ಹೋಗುವದಾಗಿ ಆಜ್ಞಾವಾಯಿತು. ಈ ಮೇರೆಗೆ ಅಲ್ಲಿಗೆ ಹೋಗಲು ಅಲ್ಲಿ ಸತತ ೪೦ ದಿನಗಳು ಶುದ್ಧವಾದ ಉಪವಾಸ ಹಾಂಗೂ ಅನಿಮಿಷ-ಜಾಗರ ಈ ರೀತಿ ಸೇವಾ ನಡೆಯಿತು. ಕೊನೆಯು ದಿವಸ ಯಾವ ಇಂದ್ರಿಯಗಳಲ್ಲಿಯೂ ಕಿಂಚಿದಪಿ ಶಕ್ತಿಯಿಲ್ಲದಂತಾಗಿ ಶ್ವಾಸೋಚ್ಛ್ವಾಸವು ಸಹ ನಡೆಯುವುದು ತಿಳಿಯದಂತಾಗಿ, ಜೀವರು ಸರ್ವದಾ ಅಸ್ವತಂತ್ರರು ಎಂಬುವುದು ಸಿದ್ಧವಾಯಿತು. ಸರ್ವೇಂದ್ರಿಯಗಳಲ್ಲಿ ಪೂರ್ಣಸ್ಮೃತಿ ಇದ್ದರೂ ಯಾವ ಇಂದ್ರಿಯಗಳ ಚಲನವಲನಗಳಿಗೆ ಆಸ್ಪದ ಇಲ್ಲದಾಗಲು ಇವರ ಭಾರ್ಯಳಾದ ಲಕ್ಷ್ಮಿಬಾಯಿಗೆ ಪ್ರಾಣೋತ್ಕ್ರಮಣವಾಗಿದೆಂಬುದಾಗಿ ತೋರಿ ಅಳಲಾರಂಭಿಸಿದಳು. ಆದರೆ, 'ಜೀವಂತನಾಗಿ ಇದ್ದೇನೆ, ದುಃಖ ಪಡುವದನಾವಶ್ಯಕ, ಎಂದು ತಿಳಿಸುವದಕ್ಕೋಸ್ಕರವಾದರೂ ಯಾವುದಾದರೊಂದು ಅವಯವವನ್ನು ತಳಿಸುವಂತೆ ಮಾಡುವ ಇಚ್ಛೆ ಉಂಟಾದರೂ ಯಾವ ಅವಯುವದಲ್ಲೂ ಶಕ್ತಿ ಇಲ್ಲದ್ದರಿಂದ (ಭಾರ್‍ಯಳು ದುಃಖ ಪಡುವದು ತಿಳಿದರೂ ಕೂಡ) "ಹೇ! ಸ್ವಾಮೀ! ಜೀವರು ಸರ್ವದಾ ಅಸ್ವತಂತ್ರರೆಂಬುದು ತತ್ವ, ಬಿಂಬ ಚಲಿಸಿದರೆ ಮಾತ್ರ ಪ್ರತಿಬಿಂಬ ಚಲಿಸುವುದು ಎಂಬುದನ್ನು ಈಗ ನನಗೆ ಸಿದ್ಧಮಾಡಿಕೊಟ್ಟೆಯಾ! ಅತ್ಯಲ್ಪರಾದ ನಮ್ಮಗಳಿಗೆ (ಜೀವರಿಗೆ) ಈ ಸ್ಥೂಲದೇಹ ಕೊಟ್ಟು ನವುಗಾಗಿ ಕಟ್ಟಿಟ್ಟ ಸುಖ ದುಃಖ ಫಲಗಳನುಭವಿಸಲೋಸುಗ ಇಂದ್ರಿಯಗಳ ಯೋಜನಾ ಮಾಡಿ, ಅವುಗಳಿಗೆ ವಿಷಯಗಳ ಕಲ್ಪಿಸಿ ಆಯಾ ವಿಷಯೇಂದ್ರಿಯಗಳ ಸನ್ನಿಕರ್ಷಣ ಮಾಡಿಸಿ **"ಅಹಂಕರ್ತಾ ಭೋಕ್ತಾ"** ಎಂತಲೂ, ಅವುಗಳು ಭೋಗ್ಯವಸ್ತುಗಳೆಂದು ಮೋಹಿಸಿ, ಕ್ಷಣಶಃದ್ರವಿಸಿ ನಿನ್ನ ಮರೆತೆವಲ್ಲ. ಅಶಕ್ತತೆಯಿಂದ ಜೀವರುಗಳಿಗೆ ಸಹಿಸಲಶಕ್ಯವಾದ ಈ ಶರೀರವು ಅನ್ನಪಾನಾದಿಗಳನ್ನು ಸೇವಿಸುತ್ತಿರುವಾಗ ಯಾವ ರೀತಿಯಲ್ಲಿ ನಮ್ಮ (ಜೀವರು) ಅಧೀನವಿತ್ತೋ ಈಗ ಯಾಕೆ ಇರಬಾರದು? ಆ ಶಕ್ತಿಗೆ ಅನ್ನಪಾನಾದಿಗಳೇ ಕಾರಣವೆಂದರೆ ಅದು ಸರಿದೋರದು. ಯಾಕೆಂದರೆ ಅನ್ನಪಾನಾದಿಗಳೇ ಶಕ್ತಿದಾಯಕಗಳೆಂದರೆ ಯಡಬಿಡದೇ ಅನ್ನಪಾನಾದಿಗಳನ್ನು ಸ್ವೀಕರಿಸಿದರೆ ಶಕ್ತಿಯು ಹೆಚ್ಚುತ್ತಾ ಹೋಗುವುದಿಲ್ಲ. ಕಿಂಬಹುನಾ, ರೋಗಾದ್ಯುಪದ್ರವಗಳಿಗೆ ಕಾರಣವಾಗಿ ಇದ್ದ ಶಕ್ತಿಯು ಕುಂಠಿತವಾಗುವುದು. ಮತ್ತು ಅನ್ನಪಾನಾದಿಗಳೇ ಶಕ್ತಿದಾಯಕಗಳಾದರೆ ಮರಣ ಪ್ರಸಕ್ತಿಯೇ ಕೊಡುವುದಿಲ್ಲ. ಮತ್ತು ಮೃತದೇಹದಲ್ಲಿ ಯಾವ ರೀತಿಯಿಂದಲಾದರೂ ಅನ್ನಪಾನಾದಿಗಳ ಪ್ರವೇಶ ಮಾಡಿಸಿ ಶಕ್ತಿ ತಂದುಕೊಟ್ಟು ಚಲನವಲನಾದಿಗಳಿಗೆ ಅವಕಾಶ ಮಾಡಬಹುದಾಗಿತ್ತು. ಇದಕ್ಕೆ ಮಾರ್ಗವಿಲ್ಲವೆಂದ ಮೇಲೆ ಕೇವಲ ಅನ್ನಪಾನಾದಿಗಳೇ ಶಕ್ತಿದಾಯಿಗಳಲ್ಲ. ನಾವು (ಜೀವರು) ದೇಹದಲ್ಲಿರುವವರೆಗೂ ಇಂದ್ರಿಯಗಳಿಗೆ ಚಲನವಲನ ಉಂಟಾದರೆ ಈ ನನ್ನ ಅವಸ್ಥಾದಿಂದ ಎಂಬ ಆ ಭ್ರಾಂತಿಯು ನೀರಸವಾದದ್ದು. ಆದರೆ ನೀನು ಪುರುಷ ರೂಪದಿಂದ ಇದ್ದು, ಶಕ್ತಿ ಪ್ರದಾನ ಮಾಡಿದರೇನೆ ಎಲ್ಲವೂ ಸರಿ. ಇಲ್ಲವಾದರೆ

ಎಲ್ಲವು ವ್ಯತ್ಯಾಸವೇ ಸರಿ. ಆದಾಗ್ಯೂ ಮತ್ತೊಂದು ಸಂಶಯ ಭಾದಿಸುವದೇನೆಂದರೆ, ನಾನು ಆಹಾರಪಾನಾದಿಗಳ ಸೇವಿಸುವಾಗ ಈ ಇಂದ್ರಿಯಗಳು ನನ್ನ ಅಧೀನವಿದ್ದಂತೆ ಈಗ ಯಾತಕ್ಕೆ ಇರಬಾರದು? ಯಾಕೆಂದರೆ ನೀನು ಸರ್ವೇಂದ್ರಿಯ ನಿಯಾಮಕ, ದೇವ-ದೈತ್ಯರಿಂದೊಡಗೂಡಿ ಬಿಂಬನಾಗಿ ಹೃದಯಗುಹಾದಲ್ಲಿದ್ದು, ಆಯಾ ತತ್ವೇಶರಿಗೆ ಶಕ್ತಿಪ್ರದಾಯಕನಾಗಿ ಇಂದ್ರಿಯಗಳ ಚಲನವಲನ ಮಾಡಿಸುವ ಸ್ವಾಮಿ. ಈಗಲೂ ಏಕ ಪ್ರಕಾರವಾಗಿ ಇದ್ಯಾಗ್ಯೂ ನನ್ನ ಅವಸ್ಥಾ ಹಿಂಗ್ಯಾಕಾಗಬೇಕು! ಈ ಸಂಶಯಗಳು ಪರಿಹಾರವಾಗಬೇಕಾದರೆ ನಿನ್ನ ಪ್ರಸಾದವೇ ಬೇಕು. ಆ ನಿನ್ನ ಪ್ರಸಾದವಾದರೇನೆ ಹೃದಯ ಗ್ರಂಥಿಬಿಟ್ಟು ಸರ್ವ ಸಂಶಯಗಳು ಹರಿದು ಹೋಗುವವು. ಹೇ ಸ್ವಾಮಿ! ನೀನು ಯಾರನ್ನು ಭಕ್ತತ್ವೇನ ಅಂಗೀಕಾರ ಮಾಡುವೆಯೋ ಅವನಿಗೆ ಅವನ ಯೋಗ್ಯತಾನುಸಾರ ಸಾಕ್ಷಾತ್ಕಾರನಾಗಿ ಸರ್ವೇಂದ್ರಿಗಳಲ್ಲಿಯೂ ಶಕ್ತಿಪ್ರದಾನ ಮಾಡಿ ಸ್ವರೂಪ ಬಾಹ್ಯ ಇಂದ್ರಿಯಗಳಲ್ಲಿ ನೀನು ಯಾವ ರೀತಿ ರಮಿಸುವೆಯೋ ಅದನ್ನು ತೋರಿಸುವಿ (ಪ್ರಕಟಸುವಿ). ಹೇ ಅನಿಮಿತ್ತ ಬಂಧೋ! ಕರುಣಾ ಸಿಂಧೋ! ಪರಮ ಕೃಪಾಮಾಡು" ಎಂಬುದಾಗಿ ಅನೇಕ ರೀತಿಯಿಂದ ಪರಮಾತ್ಮನನ್ನು ಮನಸಾಧ್ಯಾನಿಸುತ್ತಿರಲು ಪ್ರಸವ ವೇದನೆಯನ್ನು ತಾಳಲಾರದೆ ಮೂರ್ಛಾವಸ್ಥೆಯನ್ನು ಹೊಂದುವ ಸ್ತ್ರೀಯಳು, ತನ್ನ ಕೂಸಿನ ಮುಖವನ್ನು ನೋಡಿದ ಕೂಡಲೇ ಇತಃಪೂರ್ವ ಉಂಟಾಗಿದ್ದ ವೇದನೆಯಿಂದ ಪಟ್ಟ ದುಃಖವೆಲ್ಲವನ್ನು ಮರೆತು ಪರಮಾನಂದ ಸಾಗರದಲ್ಲಿಲೋಲಾಡುವಂತೆ ಇವರು ಲೋಲಾಡಿದರು. ಕುಂಠಿತವಾದ ಸರ್ವೇಂದ್ರಿಯಗಳು ಧ್ರುವರಾಯನಿಗಾದಂತೆ ಪುನರುಜ್ಜೀವಿತವಾಗಿ, ವಾಯು ಲಕ್ಷ್ಮೀ ಸಮೇತ ಪರಮಾತ್ಮನ ಅಂತರಬಾಹ್ಯ ರೂಪಗಳನ್ನೂ ಕೂಡಲೇ ಯಜನಮಾಡಿದವು. ಆಗ ವಾಯುದೇವರು, 'ವರ ಏನು ಬೇಕು ಕೇಳು' ಅಂತ ಕೇಳಲು; ತಮ್ಮ ಅನುಗ್ರಹ ಒಂದೇ ಸಾಕು. ಸೃಷ್ಟವಾದ ಪದಾರ್ಥಗಳೊಂದು ನನಗೆ ಬೇಡ' ಅಂತ ವಿಜ್ಞಾಪಿಸಿಕೊಂಡರು. ಆದಾಗ್ಯೂ **"ಪ್ರಜಾವಾನ್ ಭವ ಕೀರ್ತಿಮಾನ್ ಭವ ಆಯುಷ್ಮಾನ್ ಭವ"** ಎಂದು ವರ ಹಸ್ತವನ್ನು ತಲೆಯ ಮೇಲೆ ಇಟ್ಟು ಆಶೀರ್ವಾದ ಮಾಡಲು, ಈಗ ಪ್ರತ್ಯಕ್ಷವಾದ ರೂಪಗಳು ಸ್ಥಿರವಾಗಿ ಗೋಚರಿಸಬೇಕೆಂದು ಕೇಳಿಕೊಂಡದ್ದರಿಂದ ಶ್ರೀ ಮಂಗರಾಯನ ಎಡ ಭುಜದ ಮೇಲ್ಭಾಗದಲ್ಲಿ 'ನರಸಿಂಹ, ವೆಂಕಟ, ವಿಠ್ಠಲ' ಈ ರೂಪತ್ರಯಗಳಿಂದ ಕೂಡಿದ ಒಂದು ರೂಪವು ಅದ್ಯಾಪಿ ಅಭಿವ್ಯಕ್ತವಾಗಿರುವದು. "ಸುಲಭನೋ ಹರಿ" ಎಂದು ದಾಸರಾಯರು ಹೇಳಿದಂತೆ, ಮೇಲೆ ವಿವರಿಸಿದ ಈ ಚರಿತ್ರ ನಾಯಕರ ಸಾಧನಾತಿಶಯಗಳ ಸಿಂಹಾವಲೋಕನ ಮಾಡಿದರೆ ಭಗವದತ್ಯರ್ಥ ಪ್ರಸಾದವು ಶಮದಮಾದಿ ಸಂಪದ್ವಿರಹಿತ ವಿವಿಧಾರ್ಥಪ್ರತಿಪಾದಕಪಾಠಪ್ರವಚನ ಮಾಡುವವರಿಂದಲೂ, ಡಾಂಭಿಕತನದಿಂದ ಪದ ಪದ್ಯಾದಿ ರೂಪಗಳಿಂದ ಭಜನೆ ಮುಂತಾದವುಗಳನ್ನು ಮಾಡುವದರಿಂದಲೂ, ಕಾಮಕ್ರೋಧಾದಿಗಳಿಂದ ಪೂರಿತರಾಗಿ ಕೃಛ್ರಚಾಂದ್ರಾಯಣಾದಿ ವ್ರತಗಳಿಂದ ದೇಹದಂಡನೆ ಮಾಡುವದರಿಂದಲೂ, ಅಹಂಕಾರ ಮಮಕಾರಗಳನ್ನು ತ್ಯಜಿಸದೆ ಜಪತಪಾನುಷ್ಠಾನ ಮಾಡುವದರಿಂದಲೂ, ಖ್ಯಾತಿ ಕಾಮಿಗಳಾಗಿ ಯಜ್ಞಯಾಗಾದಿ ಉಚ್ಚ ಕರ್ಮಗಳಾಚರಿಸು

ವವರಿಂದಲೂ, ನಾಟಕದಲ್ಲಿಯ ವೇಷಧಾರಿಗಳಂತೆ ವರ್ಣಾಶ್ರಮಗಳನ್ನಾ ಶ್ರಯಿಸುವವರಿಂದಲೂ ಲಭ್ಯವಾಗುವಂತಹದಲ್ಲ. ಆದರೆ, ಬ್ರಹ್ಮಾಂಡದಲ್ಲಿ ಸೃಷ್ಟವಾದ ಯಾವದ್ ವಸ್ತುಗಳೂ ನಾನು ಕನಸ್ಸಿನಲ್ಲಿ ಕಂಡಂತೆ ನಶ್ವರವಾದವುಗಳು ಮತ್ತು ಅವುಗಳು ನನಗೆ ಭೋಗ್ಯ ವಸ್ತುಗಳಲ್ಲ. ಪರಕೀಯ ಪದಾರ್ಥಗಳು ನಮ್ಮಲ್ಲಿ ಇದ್ದರೆ ಆ ವಸ್ತುಗಳ ಮೇಲಿನ ಕರ್ತೃತ್ವ, ಭೋಕ್ತೃತ್ವ, ಸ್ವಾಮಿತ್ವ ಮೊದಲಾದುದು ಹೇಗೆ ಇದ್ದರೂ ಇಲ್ಲದಂತೆಯೋ ಅದರಂತೆ ತಿಳಿದು ಸರ್ವ ವಿಷಯಗಳನ್ನು ತುಚ್ಛೀಕರಿಸಿ ಮನೋನೈರ್ಮಲ್ಯ ಹೊಂದಿ ಸತ್ ಸಂಪ್ರದಾಯಸ್ಥರಾಗಿಯೂ, ತತ್ವ ನಿಶ್ಚಯ ಉಳ್ಳವರಾಗಿಯೂ, ಸದಾ ಭಗವತ್ ಪ್ರಿಯವಾದ ಮನಸ್ಸುಳ್ಳವರಾಗಿಯೂ ಇರುವ ಗುರುಗಳಲ್ಲಿ ಹೋಗಿ ಪ್ರಾಣೈಃ, ಅರ್ಥೈಃ, ಧನೈರಪಿ ಸೇವಾ ಮಾಡಿ ಅವರನ್ನು ಪ್ರಸನ್ನೀಕರಿಸಿಕೊಂಡು ವೈಷಯಿಕ ಕಾಮನಾರಹಿತನಾಗಿ ವಾಯುದೇವರ ಆಜ್ಞಾನುಸಾರ ನಿದ್ರಾವಸನ ಭೂಷಣಾಗಳ ಪರಿತ್ಯಾಗ ಪೂರ್ವಕ ದೇಹದಂಡನಾದಿ ಸೇವಾ ಮಾಡುವವನಾಗಿ (ಹರವಿದ್ಧ ಮಣಿಗಳ ಪೋಣಿಸಿ ಮಾಲಾ ಮಾಡುವಂತೆ) ಗುರೂಪದಿಷ್ಟ ಮಾರ್ಗದಿಂದ ಬ್ರಹ್ಮಾಂಡ ಪಿಂಡಾಂಡ ಅಂತರ್ಬಹಿರ್ಗತ ಸರ್ವವಸ್ತುಗಳಲ್ಲಿ ವ್ಯಾಪ್ತನಾಗಿ ತದ್ವಿಕಾರ ಶೂನ್ಯನಾಗಿ, ಗುಣ, ರೂಪ ಕ್ರಿಯೆಗಳಿಂದ ವ್ಯಕ್ತನಾಗಿರುವ ಪರಮಾತ್ಮನ ಮಹಾ ಮಹಿಮೆಗಳನ್ನು ಧ್ಯಾನಿಸುತ್ತ, ಪಾಡುತ್ತ, ಪೊಗಳುತ್ತ, ಕೊಂಡಾಡುತ್ತ, ಹಿಗ್ಗುತ್ತ, ತೃಷಾರ್ತನು ನೀರಿನಲ್ಲಿ ಬೆರಳುಗಳನ್ನು ಅದ್ದಿ ಚೀಪಿದಂತೆ ಸ್ಪೃಷ್ಟವಾದ ವಿಷಯಗಳನ್ನು ಸೇವಿಸುತ್ತ, ಆಸ್ವಾದಿಸುತ್ತ, ತನಗೆ ಅತಿ ನೀಚವಾದ ದ್ರವ್ಯಾದಿಗಳ ಕುರಿತು ಧಾವಿಸದೆ "**ಸರಕ್ಷಿತಾ ರಕ್ಷತಿಯೋಹಿಗರ್ಭೇ**" ಎಂಬುದನ್ನೇ ನಿಶ್ಚಯಿಸಿಕೊಂಡವನಾಗಿ ಯಥಾರ್ಥವಾದ, ಶಾಸ್ತ್ರವಿಹಿತವಾದ ವರ್ಣಾಶ್ರಮೋಚಿತ ಧರ್ಮ ಕರ್ಮಗಳಾಚಾರಿಸುತ್ತ ಪರಮಾತ್ಮನ ಲೀಲಾಕ್ಕೆ (ವಿಹಾರಕ್ಕೆ) ಕಾರಣವಾದ ವಸ್ತುಗಳಲ್ಲಿ ನಾನೊಬ್ಬನೆಂದು ದೃಢ ನಿಶ್ಚಯದಿಂದ ಆತನ ವ್ಯತಿರಿಕ್ತ ಅನ್ಯವಸ್ತುಗಳಲ್ಲಿ ಕಿಂಚಿದಪಿ ಮನಸ್ಸಿಡದೇ ಅಹರ್ನಿಶಿಧ್ಯಾನಿಸುವವನಿಗೆ "**ಯಮೈವೈಷವೃಣುತೇ ತೇನಲಭ್ಯಃ**" ಎಂಬ ರೀತ್ಯಾ ಲಭ್ಯವಾಗುವ ವಿಷಯವನ್ನೂ ಆರ್ತರಾಗಿ, ಭಗವದತ್ಯರ್ಥ ಪ್ರಸಾದಾಕಾಂಕ್ಷಿಗಳಾಗಿ, ಶುದ್ಧ ವೈರಾಗ್ಯ ಜ್ಞಾನ, ಭಕ್ತಿಪೂರ್ವಕ ಸಾಧನಾನ್ವೇಷಣಾಗಳಿಗೆ ಕಿಂಚಿತ್ತಾದರೂ ಸಹಾಯವಾಗಲೆಂಬ ಸದಿಚ್ಛೆಯಿಂದ ನಿರ್ಮಲಾಂತಃಕರಣರಾದ ವಾಚಕರ ಅವಗಾಹನೆಗಾಗಿ ಈ ಚರಿತ್ರ ನಾಯಕರ ದಿವ್ಯ ಸಾಧನಾತಿಶಯ ವಿಷಯಗಳನ್ನು ಅತಿ ಸಂಕ್ಷೇಪದಿಂದ ವಿವರಿಸಲಾಗಿದೆ.

"ಇತಿ ತೃತೀಯೋಧ್ಯಾಯಃ ಸಂಪೂರ್ಣಃ"

IV. ಅಥ ಚತುರ್ಥೋಽಧ್ಯಾಯಃ

೧. ಗುರುಗಳ ಶ್ಲಾಘನ.

ಈ ರೀತಿ ಸಾಧನಾ ಮುಗಿದು ಭಗವದತ್ಯರ್ಥ ಪ್ರಸಾದದ ನಂತರ "**ಪ್ರತಿ ದಶವರ್ಷಂ ಅವಸ್ಥಾಂತರಂ ಕಲ್ಪಯಾವಃ**" "ಈವರೆಗೂ ನಿನ್ನಿಂದ ಭೋಜನ ಮಾಡಿದೆವು. ಇನ್ನು ಮುಂದೆ ನಾವು ಬಡಿಸುತ್ತೇವೆ. ನೀನು ಭೋಜನ ಮಾಡು" (ಸರ್ವಕರ್ಮಫಲಭೋಕ್ತಾ, ಸರ್ವ ಕರ್ಮಫಲಭೋಜಯಿತಾಽಯಂ ಅರ್ಥರೀತ್ಯಾ) ಅಂತ ಪ್ರಾಣದೇವರು ಹೇಳಿ, ಗುರುಗಳ ದರ್ಶನ ತೆಗೆದುಕೊಂಡು ಬಾ ಎಂಬುದಾಗಿ ಅಪ್ಪಣೆ ಮಾಡಿದರು. ಆ ಮೇರೆಗೆ ಹತ್ತಿ ಬೆಳಗಲ್ಲಿಗೆ ಹೋಗಿ ಗುಡಿಯೊಳಗೆ ಕುಳಿತಿದ್ದ ಗುರುಗಳಿಗೆ ಸಾಷ್ಟಾಂಗ ಪ್ರಣಾಮಮಾಡಿ ಕೈ ಜೋಡಿಸಿ ನಿಲ್ಲುವಷ್ಟರಲ್ಲಿ ಗುಡಿಯೊಳಗಿಂದ ಆರ್ಭಟಿಸಿ ಬಂದು ಆನಂದ ಪರವಶದಿಂದ ಗಾಢಾಲಿಂಗನ ಮಾಡಿಕೊಂಡು "ನೀನು ಮಾಡಿದ ಸಾಧನದಿಂದ ಸಂತುಷ್ಟರಾಗಿ ಶ್ರೀ ವಾಯುದೇವರು "ಏನು ವರಗಳ ಕೊಡಬೇಕು" ಎಂದು ನಮ್ಮನ್ನು ಕೇಳುತ್ತಲಿದ್ದಾರೆ. ಆದ್ದರಿಂದ ನಿನಗೆ ಬೇಕಾದ ವರಗಳನ್ನು ಕೇಳು ಅಂತ ನುಡಿಯಲು 'ಶ್ರೀ ರಾಮಚಂದ್ರ ದೇವರ ಸೇವಾ ಮಾಡಿದ್ದಕ್ಕೆ ತಾವು (ಪ್ರಾಣದೇವರು) ಯಾವ ವರಗಳನ್ನು ಕೇಳಿಕೊಂಡಿದ್ದರೋ ಅದರಂತೆ ಅವರ ಪಾದ ಸೇವಾ ವ್ಯತಿರಿಕ್ತ ಯಾವ ವರವ್ವಾ ನನಗೆ ಬೇಡಾ' ಅಂತ ಹೇಳಿದರು. ಈ ಮಾತು ಕೇಳಿ ಆನಂದಭರಿತರಾಗಿ 'ಒಳ್ಳೇದು ನೀನು ಕೇಳಿಕೊಂಡಂತೆ ಪಾದ ಸೇವಾವನ್ನೇ ದಯಪಾಲಿಸುವರು' ಅಂತ ಹೇಳಿದರು. ಮತ್ತು ಆ ರಾತ್ರಿ ವಾಯುದೇವರು ಸನ್ನಿಹಿತರಾಗಿದ್ದು ಸಕಲಕಾರ್ಯ ಜಯಪ್ರದ ಮಾಡಿಕೊಡುವರು. ಈ ಘೋರಕಾಲದಲ್ಲಿ ಈ ರೀತಿ ಸಾಧನಾತಿಶಯಗಳ ಮಾಡಿ ಭಗವತ್ಪ್ರಸಾದ ಪಡೆಯುವವರು ಅತಿ ವಿರಲ. ಅದ್ಯಾಪಿ ಸೃಷ್ಟರಾದ ಯಾವ ಜೀವರೂ ಸ್ವರೂಪ ಭೂತ ಜ್ಞಾನಾಭಿವ್ಯಕ್ತಿಗೆ ಅಧಿಕಾರಿಗಳು. ಆದರೆ, ಭೂಮಿಯ ಮೇಲೆ ಬಂದರೆ ಭೂಸ್ಪರ್ಶದಿಂದಲೂ, ಆಹಾರ ಪಾನಗಳಿಂದಲೂ, ದುಃಖ ಹೇತುವಾದ ಸಂಸಾರ ಲಂಪಟದಿಂದಲೂ, ವಿಷಯಾಸಕ್ತಿಯಿಂದಲೂ ಆವೃತರಾಗಿ ಸ್ವರೂಪ ಭೂತ ಜ್ಞಾನಕ್ಕೆ ಅಭಿವ್ಯಕ್ತಿ ಇಲ್ಲದಾಗಿ ಕೆಲವರು ಕುರುಡನು ಹಗ್ಗವನ್ನು ಹೊಸೆದಂತೆ ಸತ್ಕರ್ಮಗಳ ಮಾಡಿ ದಣಿಯುತ್ತಾರೆ. ಅಥವಾ ದುಷ್ಟಕರ್ಮಗಳಲ್ಲಿ ನಿರತರಾಗಿ ವ್ರಾತ್ಯರೆಂದೆನಿಸುತ್ತಾರೆ. ಅಥವಾ ಯಾವುದೋ ಒಂದು ಸನ್ಮಾರ್ಗಾವಲಂಬನ ಮಾಡಿ ಕಿಂಚಿತ್ ಸಾಧನ ಮಾಡಿಕೊಂಡು ತನ್ನಿಮಿತ್ತ ಕ್ವಚಿತ್ ಸಿದ್ಧಿಗಳ ಪಡೆದು ಆ ಮೂಲಕ ಮತ್ತರಾಗಿ ಭ್ರಷ್ಟರಾಗುತ್ತಾರೆ. ಆದರೆ, "ನಿನ್ನ ವಿಷಯ ನೋಡಿದರೆ ಪರಮ ಸಂತೋಷವಾಗುತ್ತದೆ. ನಮ್ಮ ಗುರು ಪೀಳಿಗೆಯಲ್ಲಿ ಗದ್ವಾಲಿ ಪಾಂಡುರಂಗ ಕೇಶವಾಚಾರ್ಯರಾರಾಭ್ಯ ಧೂಮಾಚಾರ್ಯರ ವಂಶಪರಂಪರೆಯಲ್ಲಿ ಅಪ್ಪಣ್ಣಾಚಾರ್ಯ (ನಮ್ಮ

ಗುರುಗಳ) ತನಕ ಸಪ್ತಶೀರ್ಷದವರಿಂದ ಶ್ರೀ ಹರಿವಾಯುಗಳು ಅಗಾಧ ಸಾಧನಮಾಡಿಸಿ ಅನುಗ್ರಹ ಮಾಡುತ್ತ ಬಂದಂತೆ ನಿನ್ನಲ್ಲಿಯೂ, ನಿನ್ನ ಶಿಷ್ಯರುಗಳಲ್ಲೊಬ್ಬರಲ್ಲಿಯೂ ಅನುಗ್ರಹ ಮಾಡುವವರೆಂದು ನಮ್ಮ ಗುರುವರ್ಯರು ಪದೇ ಪದೇ ನುಡಿಯುತ್ತಿದ್ದರು. ಅದು ಈಗ ನಿದರ್ಶನಕ್ಕೆ ಬಂತು" ಅಂತ ಯೋಗ್ಯ ವಚನಗಳಿಂದ ಶ್ಲಾಘನ ಮಾಡಿದರು.

೨. ವಿಧೇಯತೆ ವಿಷಮಜ್ವರ ದೂರಮಾಡಿತು.

ನಂತರ ಆದವಾನಿಗೆ ಬಂದು ಅತ್ಯಂತ ಶಿಥಿಲವಾಗಿದ್ದ ವಿಜಯರಾಯರ ಗುಡಿಯಲ್ಲಿ ಗೋಪಾಳ (ಶುದ್ಧ) ವೃತ್ತಿಯಿಂದಲೇ ಇರುತ್ತಿರಲು ಆದವಾನಿ ಸಬ್ ರಿಜಿಷ್ಟ್ರಾರ್ (Sub Registrar) ಹನುಮಂತರಾಯರ ತಮ್ಮನಿಗೆ ವಿಷಮ ಜ್ವರ ಬಂದಿರಲು ಇವರಲ್ಲಿ ಬಂದು ತೀರ್ಥವನ್ನು ತೆಗೆದುಕೊಂಡು ಹೋಗಿ ಪ್ರೋಕ್ಷಣ, ಪ್ರಾಶನಗಳ ಮಾಡಿಸುತ್ತ ಹೋಗಲು ಆ ಜಾಡ್ಯವು ಕಡಿಮೆ ಆಯಿತು. ಆಮೇಲೆ ಅವರು ಶಿಷ್ಯರಾದರು (ಉಪದೇಶ ಹೊಂದಿದರು). ತದಾರಭ್ಯ ಶಿಷ್ಯಸಂಪತ್ತಿಗಾರಂಭವಾಯಿತು. ನಂತರ 'ನಗದಿ ಗುರುರಾಜರು, ಮೆತುಕು ಗುರುರಾಜರಾವ್, ಯಳ್ಳರ್ತಿ ನಾರಾಯಣರಾವ್, ಕಂದೀ ವೆಂಕೋಬರಾವ್, ಪೋಸ್ಟ್ ಮಾಸ್ತರ ಅಣ್ಣಾಜಿರಾವು, ಮುಂಡರಗಿ ರಾಮಾಚಾರ್ಯ, ಸರಾಫ್ ಕೃಷ್ಣರಾವು' ಎಂಬುವರು ಶಿಷ್ಯರಾದರು. ಹೀಂಗಿರುತ್ತಿರಲು ಕೆಲವು ದಿನಗಳ ನಂತರ 'ರಾತನೇ ವೆಂಕೋಬಾಚಾರ್ಯ'ರೆಂಬ ಆದವಾನಿ ತಹಸೀಲ್ದಾರ್ (ಮಾಮಲೇದಾರ)ರಿಗೆ ವಿಶೇಷ ಜಾಡ್ಯವಾಗಿ ಮರಣೋನ್ಮುಖರಾಗಿರಲು, ಅವರ ಮನೆಯವರು ಬಂದು ಅಧಿಕಾರವಾಣಿಯಿಂದ (ತಾವು ತಹಸೀಲದಾರರೆಂಬ ಭಾವನೆಯಿಂದ) 'ತಾವು ವಾಯುದೇವರಿಗೆ ಪುನಶ್ಚರಣ ರೀತ್ಯಾ ಅಭಿಷೇಕ ಮಾಡಿ ಆ ತೀರ್ಥವನ್ನು ನಮ್ಮ ಮನೆಗೆ ತಂದು ಕೊಡಬೇಕು' ಎಂಬುದಾಗಿ ಹೇಳಿದರು. "ನಾನು ನಿಮ್ಮ ಅಧೀನನಲ್ಲ, ನೀವು ಅಧಿಕಾರಸ್ಥರಾದರೇನು? ನಿಮ್ಮಿಂದ ನಮಗೆ ಆಗಬೇಕಾದುದೇನೂ ಇಲ್ಲ ಮತ್ತು ಯಾವ ಅಪೇಕ್ಷೆಯೂ ನಮಗಿಲ್ಲ. ಆದ್ದರಿಂದ ನಾವು ಯಾರಿಗೋಸ್ಕರವಾದರೂ ವಿಪತ್ತು ಪರಿಹಾರವಾಗಲೆಂತಲಾಗಲಿ ಸಂಪತ್ತು ಹೆಚ್ಚುವಂತಾಗ ಲೆಂದಾಗಲಿ ಒಂದು ಆಚಮನ ಸಹ ಮಾಡುವವರಲ್ಲ. ಹೊರಟು ಹೋಗಿ" ಎಂದು ಹೇಳಿದರು. ಆಗವರು ಉದ್ವೇಗಿಗಳಾಗಿಯೂ, ಹತಾಶರಾಗಿಯೂ ಮನೆಗೆ ಹೋಗಿ ಆಯಾಸಪಡುತ್ತಿರುವ ವೆಂಕೋಬಾಚಾರ್ಯ (ತಹಸೀಲ್ದಾರರಲ್ಲಿ) ತಿಳಿಸಲು ಅಲ್ಲಿ ನೆರೆದ ಕೆಲವು ಜನರು ಹಾಗೂ ಸಬ್ ರಿಜಿಸ್ಟ್ರಾರ್ ಹನುಮಂತರಾಯರ ಮನೆಯವರು, 'ನೀವು ಅವರಲ್ಲಿಗೆ ಹೋಗಿ ನಿಮ್ಮ ಅಧಿಕಾರವಾಣಿಯಿಂದ ಇತರ ಆಚಾರ್ಯರುಗಳಿಗೆ ಹೇಳಿದಂತೆ ಹೇಳಿದರೆ, ಅವರು ಕೇಳಲಾರರು. ಅವರನ್ನು ಅನೇಕ ವಿಧ ಪ್ರಾರ್ಥಿಸಿದರೆ ಅವರಾಗಿಯೇ ಕೃಪಾದೃಷ್ಟಿಯಿಂದ ಕೊಡಲ್ಪಡುವ ಸಾಮಾನ್ಯ ನೀರಾದರೂ ತಂದು ಹಾಕಿರಿ. ಅದೇ ನಿಮಗೆ ತಾರಕವಾಗುವುದು' ಅಂತ ಹೇಳಿದರಿಂದ ಪುನಃ ಬಂದು ಬೇಡಿಕೊಂಡರು. ಆಗ ಕೃಪಾದೃಷ್ಟಿಯಿಂದ ನೋಡಿ ಜಲವನ್ನು ಕೊಟ್ಟು ಕಳಿಸಿದರು. ತತ್ಪ್ರಭಾವದಿಂದ ಒಂದು ಸಪ್ತಕದಲ್ಲಿ ಇವರಿದ್ದ ಸ್ಥಲದ (ವಿಜಯರಾಯರ ಗುಡಿಯ)ವರೆಗೂ ವೆಂಕೋಬಾಚಾರ್ಯರಿಗೆ ನಡೆಯಲು ಬರುವಂತಾಯಿತು.

ಆಮೇಲೆ ಈ ವೆಂಕೋಬಾಚಾರ್ಯರನ್ನೂ ಪ್ರತಿನಿತ್ಯವು ಬರುವುದಾಗಿಯೂ, ಬರುವಾಗ ಫಲ-ಪುಷ್ಪಾದಿಗಳು ಯಾವುದು ನಾವು ಹೇಳಿದ ಹೊರ್ತು ತರಕೂಡದಾಗಿಯೂ, ಬಂದಾಗ್ಯೂ ನಾವು ಒಳಗೆ ಬರಹೇಳುವವರೆಗೂ ಯಾವ ಮಾತನಾಡದೆ ಹೊರಗೆ ನಿರೀಕ್ಷಿಸುತ್ತ ಕುಳಿತಿರುವದಾಗಿಯೂ, ಕೊಟ್ಟಿದ್ದನ್ನೂ ತೆಗೆದುಕೊಂಡು ಹೇಳಿದ ಕ್ರಮವನ್ನು ಅನುಸರಿಸುವುದಾಗಿಯೂ ಭಕ್ಷಿಸಲೋಸುಗ ಕೊಟ್ಟ ಪದಾರ್ಥವನ್ನು (ಪಥ್ಯಾ ವಿಚಾರದಿಂದಾಗಲಿ) ಅನುಮಾನಿಸದೆ ಭುಂಜಿಸುವದಾಗಿಯೂ· ಒಂದು ಮಂಡಲ ನಂತರ ತಾವಾಗಿ ಯಾವಾಗ (ನೈವೇದ್ಯ ವಗ್ಯೆರೆ ಕೊಟ್ಟು) ಯಾವ ರೀತಿ ಸೇವಾ ಸಮಾಪ್ತಿ ಮಾಡುವದಾಗಿ ತಿಳಿಸುವೆವೋ, ಆವಾಗ ಆ ರೀತಿ ಸೇವಾ ಸಮಾಪ್ತಿ ಮಾಡತಕ್ಕದ್ದು, ಇದನ್ನು ಕೇಳಿ ಅಶಕ್ತ ವೆಂಕೋಬಾಚಾರ್ಯರು ಇವರ ವಿಸ್ಪೃಹತೆ ಬಗ್ಗೆ ಆಶ್ಚರ್ಯ ಹೊಂದಿ, ಹೇಳಿದಂತೆ ಸೇವಾ ಮಾಡಿ, ಆ ಮಹಾಜಾಡ್ಯದಿಂದ ಮು ಐದರು.

೩. ಪರಸಂತಾನ ಸ್ವಸಂತಾನವಾಯಿತು.

ಆ ಬಳಿಕ ಇವರ (ಈ ಚರಿತ್ರ ನಾಯಕರ) ಭಾರ್ಯಳಾದ ಕುಂ॥ ಸೌ॥ ಲಕ್ಷ್ಮೀಬಾಯಿ ಯವರು ಸಂತಾನಾಕಾಂಕ್ಷಿಗಳಾಗಿ ಅನುಗ್ರಹಿಸಲು ಪ್ರಾರ್ಥಿಸಿದರು. ನಮಗ್ಯಾಕೆ ಈ ಲಂಪಟ, ಈ ದೇಹವಿರುವವರೆಗೂ ಪರಮಾತ್ಮನು ಇಟ್ಟಂತೆ ಇದ್ದು, ಬಾ ಎಂದು ಕರದಾಗ ಹೋಗಲು ಸಿದ್ಧರಾಗಿ ಅನುಪಾಧಿಕ ಶುಕ್ಲ ವೃತ್ತಿಯಿಂದ ಸುಖವಾಗಿ ಜೀವಿಸೋಣ ಮತ್ತು ಈಗ ನಮಗೆ ಏನಾದರು ಆಸ್ತಿ ಇದೆಯೇ? ಯಾತಕ್ಕಾಗಿ ಉತ್ತರವಾರಸನು ಬೇಕೆಂದಪೇಕ್ಷಿಸಬೇಕು? **'ಅಪುತ್ರ ಸ್ಯಗತಿರ್ನಾಸ್ತಿ'**ಯೆಂಬ ವಚನಕ್ಕೆ ಅನುಸರಿಸಿಯಾದರೂ ಬೇಕೆನ್ನುವ ಕಾರಣವಿಲ್ಲ. ಯಾಕೆಂದರೆ, 'ಸ್ವಯೋಗ್ಯಗತಿಪ್ರದನಾದ ಶ್ರೀಹರಿ ನಮ್ಮನ್ನು ಭಕ್ತತ್ವೇನ ಅಂಗಿಕಾರ ಮಾಡಿ ಎಡಬಿಡದೆ ಕಣ್ಣಿಗೆ ರೆಪ್ಪೆಯಂತೆ ಕ್ಷಣ-ಕ್ಷಣ ಆನಂದಸಾಗರದಲ್ಲಿ ಲಾಲಿಸುತ್ತಿರಲು ಅಶ್ವತ್ಥಾಮನ ಮೂಲಕ ದ್ರೋಣಾಚಾರ್ಯರ ಅವಸ್ಥೆಯಂತೆ ಆಗುವುದು ನಮಗೆ ಬೇಡ' ಎಂದು ಬಲು ಪರಿ ಸಮಾಧಾನ ಹೇಳಿದಾಗ್ಯೂ ಕೇಳದೆ, ಒಂದೇ ಸಮನೆ ಹಟಹಿಡಿದು ಪೀಡಿಸುತ್ತಿರಲು, ತಾನಾಗಿಯೇ ಸಾಧ್ಯವಾಗದೆಂಬುದಾಗಲಿ ಅಥವಾ ಬೇಸತ್ತು ಮಧ್ಯದಲ್ಲಿ ವಿಚ್ಛಿತ್ತಿಯಾಗುವಂತಾಗಲಿ ಎಂದು ಅಂದುಕೊಂಡು ಕಠಿಣವಾದ ಪಯೋವ್ರತವನ್ನು ಒಂದು ಸಂವತ್ಸರ ಮಾಡುವುದಾಗಿ ಹೇಳಿದರು. ಪುತ್ರನಿಗೋಸ್ಕರ, ಉತ್ಕಟ ಇಚ್ಛಾ ಉಳ್ಳವರಾದ್ದರಿಂದ ಹೆಂಡತಿಯಾದ ಕುಂ॥ ಸೌ॥ ಲಕ್ಷ್ಮೀಬಾಯಿಯವರು ಆ ವ್ರತವನ್ನು ಮಾಡಲಾರಂಭಿಸಿ ಯಥೋಕ್ತವಾಗಿ ಮುಗಿಸಿದರು. ಆಮೇಲೆ ಅನಿವಾರ್ಯದಿಂದ ವಾಯುದೇವರನ್ನು ಇದಕ್ಕಾಗಿ ಪ್ರಾರ್ಥನಾ ಮಾಡಬೇಕಾಯಿತು. 'ಈ ಜನ್ಮದಲ್ಲಿ ಈ ಕ್ಷೇತ್ರದಲ್ಲಿ ಸಂತಾನವಾಗುವಂತಿಲ್ಲವೆಂದು' ವಾಯುದೇವರು ತಿಳಿಸಿದರು. ಹಾಂಗಾದರೆ ಅಬಲೆಯಾದವಳಿಗೆ ಆ ರೀತಿ ಪ್ರೇರಣಾಯಾಕೆ ಮಾಡಿದಿರಿ? ಮತ್ತು ಅಸ್ವತಂತ್ರನಾದ ನನ್ನಿಂದ ಆ ರೀತಿ ವ್ರತವನ್ನು ಯಾಕೆ ಹೇಳಿಸಿದಿರಿ? ಮತ್ತು ಆ ವ್ರತಕ್ಕೆ ಭಂಗತಾರದೆ ಯಾಕೆ ಕೊನೆಗಾಣಿಸಿದಿರಿ? ಯಥೋಕ್ತ ವ್ರತ ಪೂರ್ಣಗೊಳಿಸಿದರೂ ಫಲಾನುಭವಕ್ಕೆ ಬಾರದಿದ್ದರೆ ಶಾಸ್ತ್ರಕ್ಕೂ ಪ್ರಾಜ್ಞವಾದಕ್ಕೂ ವೈಯರ್ಥ ಬರುವದಷ್ಟೆ! ಅಥವಾ ಪ್ರಥಮದಲ್ಲಿಯೇ ಈ ರೀತಿ

ತಿಳಿಸಿದ್ದರೆ ವ್ರತ ಪ್ರಸಕ್ತಿಯೇ ಆಗುತ್ತಿರಲಿಲ್ಲ. ಮತ್ತು ನಿಮ್ಮ ಆಶೀರ್ವಾದ ಬಲವಿದ್ದದ್ದಕ್ಕೆ ನನ್ನ ಮಾತು ವ್ಯರ್ಥವಾಗಬಾರದು. ಭಕ್ತರಾದ ವಿಜಯದಾಸರಿಂದ ಯಾದೃಚ್ಛಿಕವಾಗಿ ಬಂದ ಒಂದು ಮಾತು ಹುಸಿಹೋಗಗೊಡದೆ ಸತ್ತವನನ್ನು ಬದುಕಿಸಿ ಕೊಟ್ಟ ಇತಿಹಾಸವಿದೆ. ಹಾಗೂ ಲೋಕದಲ್ಲಿ ಧರ್ಮಗಳೆಲ್ಲವೂ ನಿರ್ವೀರ್ಯಗಳೆಂಬ ಅಪಕೀರ್ತಿ ಬಂದು ಸರ್ವರೂ ಧರ್ಮಕ್ಕೆ ವಿಮುಖರಾಗುವರು. ಯದ್ಯಪಿ ಧರ್ಮಫಲ ಆಮುಷ್ಮಿಕವಾದರೂ ಉತ್ಪಾದನಾರ್ಥ ಐಹಿಕ ಫಲದಾಯಿಗಳಾಗಿಯೂ ಕಂಡುಬಂದಿವೆ. (ಮತ್ತು ಹಿಂದಕ್ಕೆ ಇವರ ಭಾವ-ಮೈದುನನಾದ ರಾಘವೇಂದ್ರನ ಮರಣ ಸಂದರ್ಭದಲ್ಲಿ ಆಡಿದ ಮಾತುಗಳು ತಮಗೆ ಮರೆತಿರಲಾರದು) ಆದ್ದರಿಂದ ಅನುಗ್ರಹ ಮಾಡಲೇಬೇಕೆಂದು ಪ್ರಾರ್ಥನಾ ಮಾಡಿದರು. ಹಾಗಾದರೆ ಈ ಕ್ಷೇತ್ರದಲ್ಲಿ ಸಂತಾನವಿಲ್ಲದರಿಂದ ಅನ್ಯತ್ರ ಜನಿಸಿದಾಗ್ಯೂ ನಿಮ್ಮುದರದಲ್ಲಿಯೇ ಜನಿಸಿದರೆ ಯಾವ ರೀತಿ ಪರಸ್ಪರ ಮಮತೆ ಉಂಟಾಗಬೇಕೋ ಆ ರೀತಿಯಾದರೆ ಸಮ್ಮತವಷ್ಟೆ! ಅಂತ ವಾಯುದೇವರು ಕೇಳಿದ್ದಕ್ಕೆ ಈ ದಂಪತಿಗಳು ಸಮ್ಮತ ಪಟ್ಟರು. ಹೂವಿನ ಹಡಗಲಿಯಲ್ಲಿ (ಮುತ್ತಿಗಿ ವೆಂಕೋಬಾಚಾರ್ಯರ ಮಗನಾದ) ನಿಮ್ಮ ಅಣ್ಣನಾದ ಗುರುರಾಜಾಚಾರ್ಯರ ತೃತೀಯ ಪುತ್ರನನ್ನು ಪುತ್ರತ್ವೇನ ಸ್ವೀಕರಿಸಿರಿ. ಆದರೆ ಹುಡುಗನಿಗೋಸ್ಕರ ಹವ್ಯಾಸ ಪಟ್ಟು ಯಾವ ಆಸ್ತಿ ಮಾಡಕೂಡದು. ಅವನನ್ನು 'ನಮ್ಮ ಪೂರ್ವ ವಚನ ಪ್ರಕಾರ ದೇಹಧಾರಣ ಮಾಡಿದ್ದೇವಾದ್ದರಿಂದ ಅವನ ಯೋಗ ಕ್ಷೇಮಗಳನ್ನು ನಾವೇ ವಹಿಸುತ್ತೇವೆ' ಎಂಬುದಾಗಿ ಅಭಯಪೂರ್ವಕ ಆಜ್ಞಾಮಾಡಿದ್ದರಿಂದ ಆ ಹುಡುಗನನ್ನು ತಂದುಗೊಳ್ಳುವದಕ್ಕೋಸ್ಕರ ಹೂವಿನ ಹಡಗಲಿಗೆ ಹೋದರು. ಆ ಮುತ್ತಿಗಿ ಗುರುರಾಜಾಚಾರ್ಯರು ಅತಿರಿಕ್ತರು. ಅಷ್ಟೊತ್ತಿಗೆ ಅವರಿಗೆ ಮೂರು ಹೆಣ್ಣುಮಕ್ಕಳನ್ನೊಳಗೊಂಡಂತೆ (ನರಸಮ್ಮ, ಕಮಲಮ್ಮ, ಸುಂದರಮ್ಮ) ಐದು ಮಕ್ಕಳಾಗಿದ್ದುದರಿಂದ ಆರನೇ ಕೂಸಿನಲ್ಲಿ ಬೇಸರ ಉಂಟಾಗಿರುವದರಿಂದ ಸರಿಯಾಗಿ ಪೋಷಣ ಸಹ ಮಾಡದೆ (ಕಾಲ ಕಾಲಕ್ಕೆ ಸ್ತನ್ಯಪಾನ ಮಾಡಿಸಿದೆ) ಉದಾಸೀನತೆಯಿಂದ ಒಂದು ತೊಟ್ಟಿಲಲ್ಲಿ ಹಾಕಿಬಿಟ್ಟಿದ್ದರು. (ಇದನ್ನೇ ಸ್ವೀಕರಿಸಲು ಪ್ರಾಣ ದೇವರು ತೋರಿಸಿದ್ದರಿಂದ) ಆ ಕೂಸನ್ನು ನೋಡಿ "ಈ ಕೂಸು ನಮಗೆ ಪುತ್ರತ್ವೇನ ಸ್ವೀಕರಿಸಲು ಕೊಡುವಿರಾ? ಎಂದು ಕೇಳಲು ಈ ಕೂಸನ್ನು ತೆಗೆದುಕೊಂಡೇನು ಮಾಡುವಿರಿ? ಇದು ಇಂದೋ ನಾಳೆಯೋ ಸಾಯುವಂತಿದೆ. ನಿಮಗೆ ಬೇಕಾದರೆ ಗಂಡು ಮಕ್ಕಳಲ್ಲಿ ಎರಡನೇಯವನಾದ 'ರಘುನಾಥನೆಂಬುವನು' ಚನ್ನಾಗಿದ್ದಾನೆ. ಅವನನ್ನು ತೆಗೆದುಕೊಂಡು ಹೋಗಿ ಸಂರಕ್ಷಣ ಮಾಡಿಕೊಳ್ಳಿರಿ" ಅಂತ ಗುರುರಾಜಾಚಾರ್ಯರು ಹಾಗೂ ಅವರ ಹೆಂಡತಿಯಾದ ಗಂಗಾಬಾಯಿಯವರು ತಥಾ ಆಪ್ತೇಷ್ಟರು ಹೇಳಿದರು. 'ನನಗೆ ಬೇರೆ ಯಾವ ಹುಡುಗನೂ ಬೇಕಾಗಿಲ್ಲ. ನಾವು ಕೇಳಿದ ಕೂಸನ್ನೇ ಕೊಡವುದಾದರೆ ಕೊಡಿ ಇಲ್ಲವಾದರೆ ಯಾವುದು ಬೇಡಾ' ಅಂತ ಅಂದಿದ್ದಕ್ಕೆ 'ಈ ಜೀವಂತ ಹೆಣವನ್ನು ತೆಗೆದುಕೊಂಡೇನು ಮಾಡುವಿರೋ ಮಾಡಿರಿ' ಅಂತ ಉದಾಸೀನತೆಯಿಂದ ತೆಗೆದುಕೊಟ್ಟರು. ಕೂಡಲೇ ಆ ಒಂಭತ್ತು ತಿಂಗಳ ಕೂಸನ್ನು ತೆಗೆದುಕೊಂಡು ಮರುದಿನವೇ ಆದವಾನಿಗೆ ಹೊರಟು ಬಂದು ಸಂರಕ್ಷಣ ಮಾಡಹತ್ತಿದರು.

೪. ಅಗ್ನಿಹೋತ್ರಸೇವೆಗೆ ಅಣಿಯಾದ.

ರಿಕ್ತರಾದ ಇವರು (ಈ ಚರಿತ್ರ ನಾಯಕರು) ದಿನಂಪ್ರತಿ ಹೋಗುವಂತೆ ಗೋಪಾಳಕ್ಕೆ ಹೋಗುತ್ತಿದ್ದರು. ಆ ಪ್ರಕಾರ ಗೋಪಾಳಕ್ಕೆ ಹೋದ ಸಮಯದಲ್ಲಿ ಇಲ್ಲಿಯ (ಅದವಾನಿಯ) ಭಾಗಿ ಗುಂಡಪ್ಪನೆಂಬ ವೈಶ್ಯನು ತನ್ನ ಅಕ್ಕನ ಪ್ರೇರಣೆಯಿಂದ "ನೀವು ಪೂರ್ವದಲ್ಲಿ ಅಗ್ನೀಹೋತ್ರ ಇಟ್ಟಿದ್ದಿರಿ, ಅದನ್ನು ಯಾಕೆ ಬಿಟ್ಟಿರಿ?" ಅಂತ ಕೇಳಿದನು. "ಮೊದಲು ನನಗೆ ಸಂಪತ್ತು ಇತ್ತು, ಅದರಿಂದ ಸಾಧ್ಯವಾಗಿತ್ತು, ನಂತರ ಶ್ರೀ ಹರಿರಾಯರುಗಳು ಆ ಸಂಪತ್ತನ್ನೂ ಹರಣ ಮಾಡಿದ್ದರಿಂದ ಅದು ಅಸಾಧ್ಯವಾಗಿ ಬಿಡಬೇಕಾಯಿತು" ಎಂದು ಹೇಳಿದರು. ಹಾಗಾದರೆ ಈಗ ಯಾರಾದರೂ ಅದಕ್ಕೆ ಅನುಕೂಲ ಮಾಡಿದರೆ ಪುನಃ ಇಡಬಹುದಲ್ಲವೇ? ಅಂತ ಪ್ರಶ್ನಿಸಿದನು. ಅದು ಸುಸೂತ್ರ ನಡೆಯಬೇಕಾದರೆ ನಾಲ್ಕು ಮಂದಿ ಗಂಡು ಮಕ್ಕಳಾಗಲಿ, ಲಕ್ಷ ಲಕ್ಷಾರ್ಥ ದ್ರವ್ಯವಾಗಲಿ ಇದ್ದವರಿಗೇನೇ ಸಾಧ್ಯವೆಂದು ಶಾಸ್ತ್ರ ಹೇಳುತ್ತದೆ. ಇದರಲ್ಲಿ ಯಾವುದೂ ನನ್ನಲ್ಲಿ ಇಲ್ಲದರಿಂದ ಅಗ್ನೀಹೋತ್ರ ಹ್ಯಾಂಗೆ ನಡೆದೀತು? ಮತ್ತು ಯಾರೇ ಆಗಲಿ ಅನುಕೂಲ ಮಾಡುವೆವೆಂದು ಹೇಳುವವರು ಆರಂಭಗಾಮಿಗಳಾಗಬಾರದು. ಯಾಕೆಂದರೆ ಸರ್ವದಾ ಮನಸ್ಸು ಏಕ ರೀತ್ಯಾ ಇದ್ದು ತ್ಯಾಗ ಬುದ್ಧಿ ಇರಲಾರದು. ತರಂಗದಿಂದ ನೌಕಾ ಹೊಯ್ದಾಡುವಂತೆ ಹೊಯ್ದಾಡುತ್ತಿರುತ್ತದೆ. ಯಾವದೋ ಒಂದು ಸಮಯದಲ್ಲಿ ಮನಸ್ಸು ಚಂಚಲವಾದ ಈಗಿದ್ದ ಧರ್ಮಾನುಕೂಲ ಮನಸ್ಸು ಆಗ ಇರಲಾರದು. ಅಂತಹ ಸಂದರ್ಭದಲ್ಲಿ ಉದಾಸೀನರಿಂದ ಏನಾದರು ಅಂದರೆ ತನ್ಮೂಲಕ ನಮಗೆ ಖೇದವಾಗಿ ಯಾವತ್ಪರ್ಯಂತರ ಮಾಡಿದ ಸೇವಾ ವ್ಯರ್ಥವಾಗುವಂತಾಗುತ್ತದೆ. ಆದ್ದರಿಂದ ಆ ಹವ್ಯಾಸವೇ ಬೇಡ." ಅಂತ ಉತ್ತರ ಕೊಟ್ಟರು. ಈ ಕಾಲದಲ್ಲಿ ಧರ್ಮಕ್ಕೆ ಅನುಕೂಲವಾಗುವವರೇ ಕಡಿಮೆ. ಹೀಗಿರಲು ಅನುಕೂಲ ಮಾಡುವೆವೆಂದರೆ ಬೇಡವೆನ್ನಬಹುದೆ? ಹೀಗಂದರೆ ಧರ್ಮಾನುಕೂಲಕರನ್ನೂ ವಿಮುಖರನ್ನಾಗಿ ಮಾಡುವಂತಾಗುವದಿಲ್ಲವೇ? ಆರಂಭಗಾಮಿಗಳಾದರೆ ಆಗಿನಂತೆ ಈಗಲೂ (ಅಗ್ನಿ ಹೋತ್ರ) ನಿಲ್ಲಿಸಿದರಾಯಿತು, ಅಂತ ನಮ್ರಭಾವದಿಂದ ನುಡಿದನು. 'ಹಾಂಗಾದರೆ ಈ ರೀತಿ ನಡೆಸುವವರಾದರೂ ಯಾರು? ಮತ್ತು ನಿರಂತರ ಬೇಕಾಗುವ ಪದಾರ್ಥಗಳಿಗಾಗಿ ಅವರನ್ನಾಶ್ರಯಿಸಿ, ಚಿತ್ತೈಸಿ ಅವರ ಮನೆಗೆ ಹೋಗಿ ಪದಾರ್ಥಗಳ ತಂದುಕೊಳ್ಳಲಾರೆವು. ಅವರಾಗಿ ನಮ್ಮಲ್ಲಿಗೆ ಸಕಾಲಕ್ಕೆ ಸಾಕಷ್ಟು ಪದಾರ್ಥಗಳ ಕಳಿಸಿಕೊಟ್ಟರೆ ನಡಂಬಡುತ್ತೇವೆ' ಅಂತ ಅಧಿಕಾರವಾಣಿಯಿಂದ ಅಂದರು. 'ಅವರು ಯಾರಾದರೇನು? ನೀವು ಯಾರ ಮನೆಗೂ ಹೋಗುವ ಕಾರಣವಿಲ್ಲ ಮತ್ತು ಆಶ್ರಯಿಸುವ ಕಾರಣವಿಲ್ಲ ಹಾಗೂ ಒಲಿಸುವ ಕಾರಣವೂ ಇಲ್ಲ. ಅವರೇ ನಿಮ್ಮ ಮನೆಯವರೆಗೂ ಬಂದು, ಒಂದು ತಿಂಗಳಿಗೆ ಸಾಲುವಷ್ಟು ಪದಾರ್ಥಗಳ ತಂದುಕೊಟ್ಟು, ವಾರಕ್ಕೆ ಒಮ್ಮೆ ಬೆಣ್ಣೆ-ತುಪ್ಪವನ್ನು, ಪ್ರತಿ ದಿವಸ ಹಾಲು-ಮೊಸರು, ಪಲ್ಯಾಕಾಯಿ ಮತ್ತು ದೇವತಾರ್ಚನಕ್ಕೆ ಹೂವು ವಗೈರೆ ಕಳಿಸುವರು. ಅಂದ ಮೇಲೆ ಸಮ್ಮತವಷ್ಟೆ' ಅಂತ ಮೃದುವಾಣಿಯಿಂದ ನುಡಿದನು. ಆದಾಗ್ಯೂ ಇದರಲ್ಲಿ ಒಂದು ಕಷ್ಟ ತೋರುತ್ತದೆ. ಅದೇನೆಂದರೆ 'ಒಂದು ತಿಂಗಳ ಇಷ್ಟು ಪದಾರ್ಥಗಳು ಬೇಕೆಂದು ಅಂದಾಜಿನ ಮೇಲೆ ಹೇಳಿದರೆ ಅದು

ಸರಿಹೋದರೂ ಹೋಗಬಹುದು ಹೆಚ್ಚಾದರೂ ಆಗಬಹುದು ಅಥವಾ ಕಡಿಮೆಯಾದರೂ ಆಗಬಹುದು. ಸರಿಹೋದರೆ ಬಾಧಕವಿಲ್ಲ, ಹೆಚ್ಚಾದರೆ ಬ್ರಾಹ್ಮಣರು ಆಶಾ ಖೋರರು ಅಂತ ಅನಿಸಬಹುದು. ಅಥವಾ ಕಡಿಮೆಯಾಗಿ ಪುನಃ ಕೇಳಲು ಹೋದರೆ, ನೀವೂ ಮೊದಲೇ ಏಕೇ ಕೇಳಬಾರದುಂತಾಗಲಿ, ಮಿತವ್ಯಯ ಮಾಡಲಿಲ್ಲಾಂತಾಗಲಿ ದೋಷಾರೋಪಣ ಮಾಡಬಹುದು. ಪ್ರತಿ ೧೪ ಅಥವಾ ೧೫ ದಿನಕ್ಕೊಮ್ಮೆ ನಾಲ್ಕು ಮಂದಿ ಋತ್ವೀಕರು ಪರಸ್ಥಲದಿಂದ ಬರಬೇಕಾಗುವದು. ಅವರ ಮಾರ್ಗದ ಖರ್ಚು ಮತ್ತು ಯೋಗ್ಯ ಸಂಭಾವನಾ ಕೊಡಬೇಕಾಗುವುದು. ಇತ್ಯಾದಿ ಅನೇಕ ಅವಾಂತರ ಖರ್ಚುಗಳು ಬರುವವು. ಇಷ್ಟು ಖರ್ಚುಗಳು ವಹಿಸಿ ಸಂತೋಷಪಡುವ ಸದ್ಗೃಹಸ್ಥನಾದರೂ ಯಾರು? ಅಂತ ಆಶ್ಚರ್ಯ ಮುಖದಿಂದ ಕೇಳಿದರು. ಇದಕ್ಕಾಗಿ ನಿಮಗೆ ಯಾಡಕಿ ಯಲ್ಲಯ್ಯನೆಂಬ ವೈಶ್ಯನ ಕಿರಾಣಿ ಅಂಗಡಿ ತೋರಿಸಿಬಿಡುತ್ತಾರೆ. ತಾವು ಆ ಅಂಗಡಿಗೆ ಬೇಕಾದ ಪದಾರ್ಥಗಳಿಗಾಗಿ ಬೇಕಾದಷ್ಟು ಹೇಳಿದರೆ ಮನೆಗೆ ಕಳಿಸುತ್ತಾನೆ. ಮತ್ತು ನಗದು ದುಡ್ಡು ಎಷ್ಟು ಬೇಕೆಂದು ಹೇಳಿ ಕಳಿಸಿದರೆ ಅಷ್ಟು ಕಳಿಸುತ್ತ ಬಟ್ಟೆ (ಅರವಿ)ಗಳು ಸಹ ಕೊಡುತ್ತಾನೆ. ತಾವು ಗೋಪಾಳಕ್ಕೆ ಸಹಾ ಹೋಗದೆ ಸ್ವಸ್ಥ ಚಿತ್ತದಿಂದ ಸತ್ಕರ್ಮಾನುಷ್ಠಾನ ಮಾಡುತ್ತಾ ವಾಸಮಾಡಿರಿ, ಅಂತ ದೀನವಾಣಿಯಿಂದ ಕೇಳಿಕೊಂಡು; ತತ್ಕಾಲ ಯಾಡಕಿ ಯಲ್ಲಯ್ಯನನ್ನೂ ಕರೆಸಿ "ಇವರು ಯಾವಾಗಲಾಗಲಿ ಹೇಳಿದಷ್ಟು ಆಹಾರ ಪದಾರ್ಥಗಳಾಗಲಿ, ಬಟ್ಟೆಗಳಾಗಲಿ ಮತ್ತೇ ಯಾವ ವಸ್ತುವಾಗಲಿ, ನಗದು ದ್ರವ್ಯವಾಗಲಿ ಇಂದಿನಾರಭ್ಯ ಒಂದು ಸಂವತ್ಸರದವರೆಗೂ ಪೂರೈಸಿ, ನಂತರ ಆದ ಲೆಖ್ಖವನ್ನು ನನಗೆ ತಂದು ತೋರಿಸಿರಿ; ಆದ ಲೆಖ್ಖದ ದ್ರವ್ಯವನ್ನು ನನ್ನಿಂದ ತೆಗೆದುಕೊಂಡು ಹೋಗಬೇಕು. ಆ ಲೆಖ್ಖದ ಲೇಶಾಂಶವೂ ಅವರಿಗೆ ತಿಳಿಸುವ ಕಾರಣವಿಲ್ಲ." ಅಂತ ಹೇಳಿ ಆ ಸಾಯಂಕಾಲವೇ ಪದಾರ್ಥಗಳು ಬರುವಂತೆ ಮಾಡಿದನು.

೫. ದ್ವೈತ–ಉಪದೇಶ ತಾರಕೋಪದೇಶ.

ಈ ರೀತಿ ಅಗ್ನೀಹೋತ್ರಾದಿ ಧರ್ಮಗಳನ್ನೊಳಗೊಂಡ ಸಂಸಾರ ಶಕಟವು ಸುಸೂತ್ರ ನಡೆಯುತ್ತಿರಲು ಇಲ್ಲಿ (ಆದವಾನಿ) ಹೆಣ್ಣು ಹುಡುಗಿಯರ ಪ್ರಾಥಮಿಕ ಶಾಲಾ ಮಾಸ್ತರನಾದ ಶೇಷಯ್ಯನೆಂಬ ಸ್ಮಾರ್ತಗೃಹಸ್ಥನು (ಅಗ್ನಿಹೋತ್ರದ) ಭಸ್ಮದ ಸಲುವಾಗಿ ಇವರಲ್ಲಿ ಆಗಾಗ ಬರುತ್ತಿದ್ದನು. ಈ ಗೃಹಸ್ಥನಿಗೆ (ಅದ್ವೈತ ಪದ್ಧತಿಯ) ಯೋಗಾಭ್ಯಾಸದಲ್ಲಿ ಅಭಿರುಚಿಯಿತ್ತು. ಅದರ ವಿಚಾರವನ್ನು ಇವರಿಂದ ತಿಳಿದುಕೊಳ್ಳುವ ಇಚ್ಛೆಯಿಂದ ಪ್ರಶ್ನೆ ಮಾಡಿದನು. ಆ ದಿನ ಸ್ವಲ್ಪ ಉತ್ತರ ಕೊಟ್ಟು "ಇನ್ನು ಮುಂದಿನ ವಿಷಯ ಕ್ರಮೇಣ ತಿಳಿಸುವೆವು" ಅಂತ ಹೇಳಿದ್ದಕ್ಕೆ ಸಂತುಷ್ಟನಾಗಿ ಮರುದಿವಸದಿಂದ ಪ್ರತಿನಿತ್ಯವೂ ಬಂದು ತತ್ವ ಶ್ರವಣ ಮಾಡಲಾರಂಭಿಸಿದನು. ಈ ಶೇಷಯ್ಯನಿಗೆ ಹೆಂಡತಿ ದಕ್ಕುತ್ತಿದ್ದಿಲ್ಲ. ಅಂದರೆ ಗರ್ಭಧಾರಣವಾದ ಕೂಡಲೇ ವಿಶೇಷ ಜಾಡ್ಯಪ್ರಾಪ್ತವಾಗಿ ಮರಣ ಹೊಂದುತ್ತಿದ್ದಳು. ಇದರಂತೆ ಇಬ್ಬರು ಹೆಂಡಂದಿರು ಸತ್ತರು. ಮೂರನೇ ಹೆಂಡತಿಗೂ ಪೂರ್ವದಂತೆ ಜಾಡ್ಯ ಉಂಟಾಗಲು ರುದ್ರಾಭಿಷೇಕ, ನವಗ್ರಹ ಜಪ, ಮಹಾ ಮೃತ್ಯುಂಜಯ ಜಪ ವಗೈರೆ ದೇವರ ಆರಾಧನೆ ಮಾಡಿಸಿದನು. 'ಈ ಜನ್ಮದಲ್ಲಿ ನಿನಗೆ

ಹೆಂಡತಿ ದಕ್ಕುವದಿಲ್ಲ' ಅಂತ ಸ್ವಪ್ನವಾಯಿತು. ಮುಂದೆ ಈ ಹೆಂಡತಿಯು ಸಹ ಸತ್ತಳು. ಈ ರೀತಿ ಆದದ್ದಕ್ಕೆ ಆ ಗೃಹಸ್ಥನು ನಿರುತ್ಸಾಹದಿಂದ ಕಾಲಕಳೆಯುತ್ತಿದ್ದನು. ಇವರಾದರು (ಈ ಚರಿತ್ರ ನಾಯಕರು) ಆತನ ಅಭಿರುಚಿಗೆ ಅನುಸರಿಸಿ ಯೋಗಾಭ್ಯಾಸದ ವಿಷಯವನ್ನು ತಥಾ ಅದ್ವೈತ ತತ್ವಗಳನ್ನು ಹೇಳುತ್ತಾ ಆತನ ಮನಸ್ಸಮಾಧಾನಗೊಳಿಸಿ ಕಳೆಸುತ್ತಿದ್ದರು. ಒಂದು ದಿನ ಶೇಷಯ್ಯ "ತಾವು ದ್ವೈತಮತ ಅನುಯಾಯಿಗಳಾಗಿದ್ದು, ಅದ್ವೈತ ತತ್ವವನ್ನೇ ಭೋದಿಸುತ್ತಿರಿ. ಅಂದಮೇಲೆ ತಾವು ಯಾವ ರೀತಿ ಉಪಾಸನಾ ಮಾಡುತ್ತಿರಿ?" ಅಂತ ಕೇಳಿದನು. "ಅಧಿಕಾರಿಗಳು ಯಾವ ಮಾರ್ಗಾವಲಂಬನಾಭಿರುಚಿಯುಳ್ಳವರಾಗಿರುವರೋ ಅವರಿಗೆ ತಕ್ಕಂತೆ ಭೋದಿಸುತ್ತೇನೆ." ಅಂತ ಉತ್ತರ ಕೊಟ್ಟರು. 'ಅದು ಇರಲಿ ತಮ್ಮ ವಿಚಾರವನ್ನು ಕೇಳುತ್ತಿರುವೆನು' ಅಂತ ಪುನಃ ಕೇಳಿದನು. 'ಪ್ರತಿ ಜೀವನ ಉಪಾಸನಾ ಪ್ರತ್ಯೇಕ ಪ್ರತ್ಯೇಕವಾಗಿ ಇರೋಣದಿಂದ ಅವರುಗಳಿಗೆ ತಕ್ಕಂತೆ ಹೇಳಬೇಕಾಗಿದೆ' ಅಂತ ಹೇಳಿದರು. 'ಪ್ರತಿ ಜೀವರ ಉಪಾಸನಾ ಪ್ರತ್ಯೇಕವಾಗಿದೆ ಎಂದ ಮೇಲೆ ದ್ವೈತವೇ ಆಯಿತಲ್ಲ!' ಅಂತ ಮುಗುಳು ನಗೆಯಿಂದ ನುಡಿದರು. "ಜೀವರು ತ್ರಿವಿಧರಾಗಿಯೂ, ತರತಮ ವಿಶಿಷ್ಟರಾಗಿಯೂ, ಬೇರೆ ಬೇರೆ ಫಲ ಅನುಭವಿಸುವವರಾಗಿಯೂ ಇರೋಣದರಿಂದ ಅದಕ್ಕೆ ತಕ್ಕ ಸಾಧನವೂ ಪ್ರತ್ಯೇಕವೆಂದೇ ನಿಶ್ಚಯ" ಅಂತ ಹಸನ್ಮುಖದಿಂದ ಉತ್ತರ ಕೊಟ್ಟರು. ಹಾಂಗಾದರೆ ಇದುವರೆಗೂ ತಾವು ಪ್ರತಿಪಾದನಾ ಮಾಡಿದ ಅದ್ವೈತ ತತ್ವಗಳು ಕೇವಲ ನನ್ನ ಮುಖದಾಕ್ಷಿಣ್ಯದಿಂದ ಹೇಳಿದ್ದು ಅಂತ ಸಿದ್ಧವಾಗುತ್ತದೆ ಎಂದು ಆಶ್ಚರ್ಯದಿಂದ ನುಡಿದನು. "ಜೀವರ ಯೋಗ್ಯತಾ ಅತೀಂದ್ರಿಯವಾದ್ದರಿಂದ ಈ ಜೀವರು ಇಂತಹ ಮಾರ್ಗಾವಲಂಬಿಗಳೇ ಎಂದು ನಿಶ್ಚಯ ಮಾಡಿ ಅದಕ್ಕನುಸರಿಸಿದ ತತ್ವಗಳು ಭೋದಿಸಲು ಸಾಧ್ಯವಿಲ್ಲ. ಪ್ರಯುಕ್ತ ಬಾಹ್ಯ ಚಿನ್ಹಗಳ ಮೇಲಿಂದ ಊಹಿಸಿ ಹೇಳಬೇಕಾಗುತ್ತದೆ. ಆದರೆ, ಒಬ್ಬ ಜೀವನು ತನ್ನ ಪೂರ್ವ ಕರ್ಮವಶಾತ್ ಹೊಂದಿದ ಜನ್ಮದ ಮೂಲಕ ಆ ಮತದ ತತ್ವವನ್ನವಲಂಬಿಸಿ ನಡೆಯುತ್ತಾನೆ. ಅವನ ಸ್ವರೂಪವು ಬೇರೆಯಾಗಿದ್ದರೆ ಈಗ ಅವಲಂಬಿಸಿದ ತತ್ವ ಮಾರ್ಗದಲ್ಲಿ ದಾರ್ಢ್ಯ ಉಂಟಾಗದೆ ಸಂಶಯಕ್ಕೆ ಕಾರಣವಾಗುತ್ತದೆ. ಈ ಸಂದರ್ಭದಲ್ಲಿ ದ್ವೈತಾದ್ವೈತ ಉಭಯ ತತ್ವಗಳನ್ನು ಶ್ರವಣ ಮಾಡಿ(ಸಿ)ದರೆ ಆಗ ಅವನು ತನ್ನ "ನೈಜಮಾರ್ಗದ ಕಡೆ ಹೊರಳಿ ಮತ್ತೊಂದು ಮಾರ್ಗದ ತತ್ವಶ್ರವಣ ಮಾಡಿದಾಗ್ಯೂ ಅದನ್ನು ತ್ಯಜಿಸುವಂತಹವನಾಗುತ್ತಾನೆ." ಅಂತ ಸಮಾಧಾನ ಹೇಳಿ ತದಾರಭ್ಯ ದ್ವೈತತತ್ವಗಳನ್ನು ಪ್ರತಿಪಾದನಾ ಮಾಡತೊಡಗಿದರು. ಆಮೇಲೆ ಸ್ವಲ್ಪ ದಿನಗಳಲ್ಲಿಯೇ ಆತನ ಪೂರ್ವಾಭಿಪ್ರಾಯ ಬದಲಾಗಿ, ದ್ವೈತತತ್ವವೇ ಯೋಗ್ಯವೆಂದು ನಿಶ್ಚಯವಾಗಿ ದ್ವೈತಮತಾವಲಂಬನ ಮಾಡಲು ದೀಕ್ಷಾ ಸ್ವೀಕರಿಸಿದನು. (ಅಂದರೆ ತಪ್ತಮುದ್ರಾ ಪೂರ್ವಕ ಮಂತ್ರೋಪದೇಶ ಹೊಂದಿ ಸಚ್ಛಾಸ್ತ್ರ ಶ್ರವಣ ಮಾಡಿದನು) ಆಮೇಲೆ ಆತನಿಗೆ ಲಗ್ನ ಮಾಡಿಕೊಳ್ಳುವುದಾಗಿ ಸೂಚಿಸಿದರು. ತನಗೆ ಆದ ಹಿಂದಿನ ಅನುಭವವನ್ನು ತಥಾ ರುದ್ರದೇವರ ಸೇವಾ ಮಾಡಿಸುವಾಗ ಆದ ಸ್ವಪ್ನವನ್ನೂ ಹೇಳಿಕೊಂಡು ಲಗ್ನ ವಿಷಯಕ ಜಿಗುಪ್ಸೆಯುಂಟಾದದ್ದನ್ನು ಅರಿಕೆ ಮಾಡಿಕೊಂಡನು. "**ಈಗ ನೀನೇ ಅದ್ವೈತ ತತ್ವವನ್ನು ಬಿಟ್ಟು ದ್ವೈತಮತಾವಲಂಬನ**

ಮಾಡಿರೋಣದರಿಂದ ಜನ್ಮಾಂತರವೆನಿಸಿತು. ಆದ್ದರಿಂದ ಲಗ್ನ ಮಾಡಿಕೊ" ಅಂತ ಅಭಯ ಕೊಟ್ಟರು. ಒಳ್ಳೇದು ಎಂದು ಅವರ ಯತ್ನ ನಡೆಸಿದನು. ಅಲ್ಪಕಾಲದಲ್ಲಿಯೇ ಕನ್ಯಾ ದೊರೆಯಿತು, ಲಗ್ನವೂ ಆಯಿತು. ಈ ಪತ್ನಿಯೂ ಗರ್ಭ ಧರಿಸಲು ಗಾಬರಿಯಾದನು. ಆದಾಗ್ಯೂ ಸುಖ ಪ್ರಸೂತವಾಗಿ ಆ ಗಂಡು ಕೂಸು, ಬಾಣಂತೀ ಸುರಕ್ಷಿತರಾಗಿದ್ದರು. ಆ ಕೂಸಿಗೆ "ವಿಜಯರಾಯ" ಎಂದು ಹೆಸರಿಡುವುದಾಗಿ ಸೂಚಿಸಿದ್ದರಿಂದ ನಾಮಕರಣೋತ್ಸವವನ್ನು ಮಾಡಿ ಇವರನ್ನು ವಿಜೃಂಭಣೆಯಿಂದ (ಗುರು) ಪೂಜಾ ಮಾಡಿದನು. ಮುಂದೆ ಮೂರು-ನಾಲ್ಕು ವರ್ಷಗಳ ಮೇಲೆ ಮತ್ತೊಂದು ಗಂಡು ಕೂಸು ಹುಟ್ಟಿತು. ಅದಕ್ಕೆ "ನಾರಾಯಣ"ನೆಂದು ನಾಮಕರಣ ಮಾಡಿದನು. ಈ ಪತ್ನೀ ಪುತ್ರರಿಂದ ಎಂಟು-ಹತ್ತು ವರ್ಷಗಳ ಕಾಲ ಕಳೆದು ತಾನು (ಶೇಷಯ್ಯನು) ಕಾಲವಶನಾದನು.

೬. 'ಏಧಮಾನದ್ವಿಟ್' ಅನುಭವಕ್ಕೆ ಬಂತು.

(ಪೂರ್ವ[illegible]ಗಿ ಗುಂಡಪ್ಪನು ನಿತ್ಯನೈಮಿತ್ತಿಕ ಯಾವತ್ತು ಖರ್ಚುಗಳನ್ನು ವಹಿಸಿದ್ದರಿಂದ ಮೂರು ವರ್ಷದ [illegible]ಭವದ ಮೇಲಿಂದ ಇವರ ಒಂದು ವರ್ಷದ ಖರ್ಚಿನ ಅಂದಾಜಿನ ಪ್ರಕಾರ ನಿರಾತಂಕವಾಗಿ ಸುಸೂತ್ರ ನಿತ್ಯನೈಮಿತ್ತಿಕ ಖರ್ಚುಗಳು ನಿರ್ವಹಿಸಲು ಆದಾಯವು ಬರುವಂತೆ ಜಮೀನು ಕೊಡುವ ಇಚ್ಛಾ ಉಳ್ಳವನಾಗಿ, ಇವರನ್ನು ಕುರಿತು, ಅಗ್ನಿಹೋತ್ರ ಹಾಗೂ ನಿತ್ಯನೈಮಿತ್ತಿಕ ಆಹ್ನೀಕಗಳು ಸುಸೂತ್ರ ನಡೆಯುವ ಸಲುವಾಗಿ, ಊಟ-ಉಡಿಗೆ ವಗ್ಯೆರೆ ನಿಮಿತ್ತ ಆಲೋಚನಾ ಮಾಡದಿರುವ ದೆಶೆಯಿಂದ ಒಂದು ವರ್ಷಕ್ಕೆ ಸಾಲುವಷ್ಟು ದ್ರವ್ಯ ಅನುಕೂಲವಾಗುವಂತೆ ಅದಕ್ಕೆ ತಕ್ಕಷ್ಟು ಜಮೀನು ತಮ್ಮ ಹೆಸರಿಗೆ ಕೊಡುವ ಸಂಕಲ್ಪ ಮಾಡಿದ್ದೇನೆ. ಅಪ್ಪಣೆಯಾದರೆ ನಾಳೆ ದಾನಪತ್ರ ಬರೆಸಿ ರಿಜಿಷ್ಟರ್ ಮಾಡಿಸುತ್ತೇನೆ, ಸ್ವೀಕರಿಸಬೇಕು' ಅಂತ ಕೇಳಿಕೊಂಡನು. 'ಇದು ನಿನ್ನ ದೃಷ್ಟಿಯಿಂದ ಯೋಗ್ಯವೇ ಸರಿ. ಆದರೆ ಇದು ಶ್ರೀ ಹರಿವಾಯುಗಳ ಚಿತ್ತಕ್ಕೆ ಬರಲಾರದು. ಯಾಕೆಂದರೆ ಭೂಮಿ ವಗ್ಯೆರೆ ಆಸ್ತಿಗಳ ಮಾಡಿಕೊಂಡು ತನ್ಮೂಲಕ ಉಪಜೀವನ ಸಾಗಿಸಿಕೊಂಡಿರಬೇಕಾಗಿದ್ದರೆ ನನ್ನ ಆಸ್ತಿಯನ್ನ್ಯಾಕೆ ಇಟ್ಟುಕೊಳ್ಳ ಬಾರದಾಗಿತ್ತು? ಈಗ ನೀನು ಮಾಡುತ್ತಿರುವ ಸೇವಾ ಹಾಗು ಯಾವತ್ತು ಖರ್ಚುಗಳ ವಹಿಸುವ ಸೇವಾ ಸ್ವೀಕಾರವಾದರೂ ಅಲ್ಪಾವಧಿಯಲ್ಲಿಯೇ ಸಂಕ್ಷೇಪ ಮಾಡಬೇಕಾಗುವಂತೆ ಕಾಣುತ್ತದೆ. ಯಾಕೆಂದರೆ ಈ ನಿನ್ನ ಸೇವಾ ಶ್ರೀ ಹರಿವಾಯುಗಳಿಗೆ ಸಾಕು ಆದಂತೆ ಕಾಣುತ್ತದೆ' ಅಂತ ಉತ್ತರ ಕೊಟ್ಟರು. ಬಹಿರ್ಮುಖನಾದ ಗುಂಡಪ್ಪನಿಗೆ ಈ ಮಾತು ಆಶ್ಚರ್ಯವನ್ನುಂಟು ಮಾಡಿತು. 'ಅನಾಯಾಸದಿಂದ ನಡೆಯತಕ್ಕ ಧರ್ಮಕ್ಕೆ ನಿಮ್ಮ ವಾಯುದೇವರು ಯಾಕೆ ಬೇಡವೆನ್ನುತ್ತಾರೆ?' ಅಂತ ಕೇಳಿದನು. "ವಾಯು ದೇವರು ಯಾರಿಗೂ ಯೋಗ್ಯತಾತಿಕ್ರಮಿಸಿದ ಪುಣ್ಯಕ್ಕೆ ಅವಕಾಶ ಕೊಡುವದಿಲ್ಲ. ಕದಾಚಿತ್ ಆ ರೀತಿ ಒದಗಿದ್ದರೆ ಅದನ್ನು ಗ್ರಾಸ ಮಾಡುತ್ತಾರೆ. (ಕಬಿಮ). ಆದ್ದರಿಂದ ಅಷ್ಟಕ್ಕೆ ಅವಕಾಶ ಕೊಡಬಾರದೆಂಬ ಅಭಿಪ್ರಾಯದಿಂದ ಸೂಕ್ಷ್ಮವಾಗಿ ನಿನಗೆ ತಿಳಿಸಿದ್ದೇನೆ" ಅಂದರು. ಹಾಂಗಾದರೆ ತಮ್ಮ ಚಿತ್ತ ಅಂತ ಸುಮ್ಮನಾದನು. ಆನಂತರ

ಮೂರು-ನಾಲ್ಕು ತಿಂಗಳಲ್ಲಿಯೇ ಈ ಗುಂಡಪ್ಪನ ಸೇವಾ (ಪದಾರ್ಥಗಳು) ಸ್ವೀಕರಿಸುವುದು ಉಪಕ್ರಮಿಸಬೇಕೆಂದು ಪ್ರಾಣ ದೇವರ ಆಜ್ಞಾವಾಯಿತು. ಈ ಮೇರೆಗೆ ಗುಂಡಪ್ಪನಿಗೆ ತಿಳಿಸ ಹೋಗಲು 'ಈ ಒಂದು ವರ್ಷ ಪೂರಾ ಆದರೂ ಸೇವಾ ಸ್ವೀಕಾರ ಮಾಡಿರಿ' ಅಂತ ಬಹು ಪರಿಯಿಂದ ಕೇಳಿಕೊಂಡದ್ದಕ್ಕೆ ದಾಕ್ಷಿಣ್ಯ (ಭಿಡೆ) ಮೀರಲಾರದೆ ಯಥಾ ಪ್ರಕಾರ ಸೇವಾ ಸ್ವೀಕಾರ ಮಾಡಿದರು. ಇದರಿಂದ ಪ್ರಾಣ ದೇವರು ಕುಪಿತರಾಗಿ "**೨೧ ದಿನ ಶಿಕ್ಷಾ ಮಾಡಿದ್ದೇನೆ. ಅನುಭವಿಸು**" ಅಂತ ಆಜ್ಞಾ ಮಾಡಿದರು. ಕೂಡಲೇ ಅರ್ಧಾಂಗ ವಾಯು (Paralysis) ಆಗಿ ಇಪ್ಪತ್ತೊಂದು ದಿನ ಚಲನಾದಿಗಳು ಬಾರದಂತಾಯಿತು. ಆದಾಗ್ಯೂ ಯಾವ ಔಷಧೋಪಚಾರಗಳೂ ಮಾಡಲಿಲ್ಲ. ಮಾಡದಿದ್ದರೂ ೨೨ನೇ ದಿನ ತನ್ನಷ್ಟಕ್ಕೆ ತಾನೇ ಆ ಜಾಡ್ಯವು ಪರಿಹಾರವಾಯಿತು. ಆ ದಿನವೇ ಅವಶಿಷ್ಟ ಪದಾರ್ಥಗಳನ್ನು ಗುಂಡಪ್ಪನ ಮನೆಗೆ ತಿರುಗಿ ಕಳಿಸಿದರು. 'ನಿಮಗೆ ಕೊಟ್ಟ ಪದಾರ್ಥವನ್ನು ನಾನು ಹ್ಯಾಂಗೆ ತಿರುಗಿ ತೆಗೆದುಕೊಳ್ಳಲಿ? ಮುಂದೆ ನಮ್ಮ ಪದಾರ್ಥ ತೆಗೆದುಕೊಳ್ಳವದನ್ನು ಬಿಟ್ಟರೂ ಈ ಪದಾರ್ಥವನ್ನಾದರೂ ಸ್ವೀಕರಿಸಿರಿ.' ಅಂತ ಬಹುಪರಿಯಿಂದ ಬೇಡಿಕೊಂಡನು. "ಪ್ರಾಣ ದೇವರು ಬೇಡವೆಂದ ಮೇಲೂ ದಾಕ್ಷಿಣ್ಯ (ಭಿಡೆ) ದಿಂದ ಸ್ವೀಕರಿಸಿದ್ದಕ್ಕೆ ಇಪ್ಪತ್ತೊಂದು ದಿನ ಶಿಕ್ಷಾ ಅನುಭವಿಸಿದೆ. ಮತ್ತೇ ಈ ಪದಾರ್ಥ ಸ್ವೀಕರಿಸಿದರೆ ಮತ್ತ್ಯಾವ ಶಿಕ್ಷಾ ಮತ್ತೆಷ್ಟು ದಿನ ಅನುಭವಿಸಬೇಕಾಗುವದೋ ಗೊತ್ತಿಲ್ಲ. ನಿನ್ನ ಪದಾರ್ಥ ನಿನಗೆ ಒಪ್ಪಿಸಿದ್ದೇನೆ" ಅಂತ ಅಂದರು. ಹಾಂಗಾದರೇ ಉಪಾಯವಿಲ್ಲ. ಆದರೆ, ಈ ಪದಾರ್ಥವನ್ನು ನಾನು ತಿರುಗಿ ತೆಗೆದುಕೊಳ್ಳಲಾರೆ. ತಾವೇ ಅದನ್ನು ಯಾರಿಗಾದರೂ ದಾನ ಮಾಡಿಬಿಡಿರಿ" ಅಂತ ಅಂದನು. 'ಪ್ರಾಣದೇವರ ಆಜ್ಞೆಯೆನ್ನುವುದು ಲಷ್ಕರೀ ಆಜ್ಞಾ (Military Order) ಇದ್ದಂತೆ. ಆದ್ದರಿಂದ ಹೇಳಿದಷ್ಟು ಕಾರ್ಯ ಮಾಡಲೇಬೇಕು. ಬೇಕಾದರೆ ಈ ಪದಾರ್ಥಗಳನ್ನು ನೀನೆ ಯಾರಿಗಾದರೂ ಕೊಡು, ಇಲ್ಲವೇ ಹೊರಗೆ ಚೆಲ್ಲು' ಅಂತ ಸ್ವಲ್ಪ ನಿಷ್ಠುರ ವಚನಗಳಿಂದ ಹೇಳಿ ಆ ಪದಾರ್ಥಗಳನ್ನು ಆತನ (ಗುಂಡಪ್ಪನ) ಮನೆಯ ಮುಂದೆ ಇಟ್ಟು ಬಂದರು. ಆತನು ಖಿನ್ನವಾಗಿ 'ನಿಮಗೆ ನಡೆಯುವಂತೆ ಎರಡನೇ ಬ್ರಾಹ್ಮಣರಿಗೆ ನಡೆಸಿದ್ದರೆ ನಾನು ಕೊಡುವ ಪದಾರ್ಥದಿಂದ ತೃಪ್ತರಾಗದೆ ಇನ್ನೂ ಹರಣ ಮಾಡುವ ದೃಷ್ಟಿಯುಳ್ಳವರಾಗಿ ಸದಾ ಪೀಡಿಸುತ್ತಿದ್ದರು. ಅಂತಹದರಲ್ಲಿ ಕೊಟ್ಟ ಪದಾರ್ಥವನ್ನೂ ಸಹ ತಿರುಗಿ ತಂದು ಕೊಡುತ್ತೀರಿ ಅಂದ ಮೇಲೆ ನಿಮ್ಮ ಪ್ರಾಣ ದೇವರ ಆಜ್ಞಾ ಎಂತಹದೋ! ನನಗೆ ತಿಳಿಯಲಾಗಿದೆ, ಎಂದು ಆ ಪದಾರ್ಥಗಳನ್ನು ಆಗಲೇ ಅನ್ಯರಿಗೆ ದಾನ ಮಾಡಿದನು. ಮತ್ತು ಮುಂದೆ ಯಾವ ಕಾಲಕ್ಕಾದರೂ ಈ ಶಿಷ್ಯನಿಂದ ಸೇವಾ ಸ್ವೀಕರಿಸುವುದಾಗಿ ಇಚ್ಛಾ ಬರುವುದೋ ಆಗಲಾದರೂ ದಯಮಾಡಿ ನನಗೆ ತಿಳಿಸಿ ನನ್ನ ಸೇವಾ ಸ್ವೀಕರಿಸುವದಾಗಿ ಅನುಗ್ರಹ ಮಾಡಿರಿ' ಅಂತ ಪ್ರಾರ್ಥನಾ ಮಾಡಿಕೊಂಡನು. ಆ ಮೇಲೆ ತಮ್ಮ ಗೋಪಾಳ ವೃತ್ತಿಯಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು ತನ್ಮೂಲಕ ಕಾಲ ಕ್ರಮಣ ಮಾಡುತ್ತಿರಲು ಇವರ ತಪಃ ಪ್ರಭಾವವು ಉದಯ ಭಾಸ್ಕರನ ಕಿರಣಗಳಂತೆ ವ್ಯಾಪಿಸಲಾರಂಭಿಸಿತು.

೭. ಅಪರೋಕ್ಷಜನಕವಾದದ್ದು ಭಕ್ತಿ

ಕರ್ನಾಟಕ ರಾಜ್ಯದ (ಆ ಹಿಂದಿನ ನಿಜಾಂ ರಾಜ್ಯದ) **ಕೊಪ್ಪಳ** ಸಮೀಪ ಕುಕನೂರು (ಹುಂತಲ ಕ್ಷೇತ್ರ ಚಂದ್ರಹಾಸ ರಾಜ್ಯ) ವಾಸಿ ಅಗ್ನಿಹೋತ್ರಿಗಳಾದ ಅಡವಿ ಆಚಾರ್ಯರೆಂಬವರು ರಾಯಚೂರಲ್ಲಿ '**ಸೌತ್ರಾಮಣಿ**' ಎಂಬ ಯಜ್ಞವನ್ನು ಮಾಡುವವರಾದರು. ಅಲ್ಲಿಗೆ ಸಮೀಪದಲ್ಲಿದ್ದ ಕೃಷ್ಣಾನದಿಯ ತೀರ **ಆತಕೂರಲ್ಲಿ** ಆ ಸಮಯದಲ್ಲಿ ಉತ್ತರಾದಿ ಮಠಾಧೀಶ ಶ್ರೀ ಸತ್ಯಧೀರತೀರ್ಥ ಶ್ರೀಪಾದಂಗಳವರು ಇರುತ್ತಿದ್ದರು. ಅಲ್ಲಿಂದ ಈ ಯಜ್ಞಕ್ಕೆ ಶ್ರೀಪಾದ ಪುತ್ರರಾದ ಸೇತೂರಾಮಚಾರ್ಯರು ಹಾಗು ಇನ್ನಿತರ ಅನೇಕ ದೇಶದ ವಿದ್ವಾಂಸರೂ ತಥಾ ದಾಸಕೂಟದವರೂ ಬಂದಿದ್ದರು. ಆ ಪ್ರೇಕ್ಷಕ ವರ್ಗದವರಲ್ಲಿ ಚಿಂತರವೇಲೀ ಶೇಷದಾಸರ (ಮೊದಲಕಲ್ ದಾಸರೆಂತಲೂ ಪ್ರಸಿದ್ಧರು) ಶಿಷ್ಯ ಪ್ರಶಿಷ್ಯ ವರ್ಗದವರೂ ಹಾಂಗೂ ಇವರೂ (ಈ ಚರಿತ್ರ ನಾಯಕರು) ಹೋಗಿದ್ದರು. ಈ ಸಂದರ್ಭದಲ್ಲಿ ಸಂಸ ತ ಪಂಡಿತರ ಒಂದು ಗುಂಪು, ದಾಸಕೂಟಸ್ಥರದೊಂದು ಗುಂಪು. ಹೀಗೆ ಅಲ್ಲಲ್ಲಿ ಗುಂಪು ಗುಂಪಾಗಿ ಕೂತುಕೊಂಡು ಶಾಸ್ತ್ರದ ಪ್ರಮೇಯ ವಿಷಯ ಚರ್ಚೆ ನಡೆಸುತ್ತಾ ಸತ್ಕಾಲ ಕ್ಷೇಪ ಮಾಡುತ್ತಿದ್ದರು. ಹೀಗಿರುವಾಗ ಒಂದು ದಿನ ಪಂಡಿತರ ಗುಂಪು ಒಂದು ಕಡೆ, ಅದರ ಸಮೀಪ ದಾಸಕೂಟಸ್ಥರ ಗುಂಪು ಮತ್ತೊಂದು ಕಡೆ ಕುಳಿತುಕೊಂಡು ವಿಷಯಗಳನ್ನು ಚರ್ಚಿಸುತ್ತಿರುವಾಗ **ಯಾವ ಸಾಧನ ಮಾಡುವದರಿಂದ ಅಪರೋಕ್ಷವಾಗುತ್ತದೆ?** ಎಂಬ ಪ್ರಶ್ನೆ ಬಂದಿತು. ಪರಮಾತ್ಮನು ಭಕ್ತೈಕ ಲಭ್ಯನಾದರಿಂದ ಕೇವಲ ಭಕ್ತಿಯನ್ನೇ ಮಾಡಬೇಕೆಂದು ಕೆಲವರು, ಪರಮಾತ್ಮನು ಜ್ಞಾನಗಮ್ಯನಾದ್ದರಿಂದ ಪಾಠ ಪ್ರವಚನವನ್ನೇ ಮಾಡತಕ್ಕದ್ದೆಂದು ಮತ್ತೆ ಕೆಲವರು, ಯೋಗ ಧಾರಣಾದ್ವಾರಾ (ಪಿಂಡಾಪಿಂಡ ಧ್ಯಾನ ಮಾಡಿದರೇನೇ) ಲಭ್ಯವಾಗುವದೆಂದು ಇನ್ನೊಬ್ಬರು, ಈ ರೀತಿ ಚರ್ಚೆ ನಡೆಯುತ್ತಿತ್ತು. ಕೇವಲ ಪ್ರವಚನವನ್ನೇ ಮುಖ್ಯ ಸಾಧನವೆಂಬುದಾಗಿ ಕೆಲವು ಪಂಡಿತರುಗಳ ಅಭಿಪ್ರಾಯವಾಗಿತ್ತು. ಇಷ್ಟರಲ್ಲಿ ದಾಸವರ್ಗದ ಒಬ್ಬರು ಎದ್ದುನಿಂತು 'ಪುರಂದರದಾಸರು, ಕನಕದಾಸರು, ವಿಜಯದಾಸರು ಇತ್ಯಾದಿ ಪ್ರಭೃತಿಗಳು ಸಂಸ ತ ವಿದ್ವಾಂಸರಾಗಿ ಪಾಠ ಪ್ರವಚನ ಮಾಡದಿದ್ದರೂ ಅಪರೋಕ್ಷ ಜ್ಞಾನಿಗಳಾಗಿದ್ದರು. ಪಾಠ ಪ್ರವಚನ ಮಾಡುವವರಿಗೆ ಅಪರೋಕ್ಷ ಜ್ಞಾನವಾಗುವ ಬದಲಾಗಿ ಅವರು ಪಾಂಡಿತ್ಯ ಮದಗಳಿಂದ ಮತ್ತರಾಗುತ್ತಾರೆ. ಆದ್ದರಿಂದ ಭಕ್ತಿ ಮಾರ್ಗವೇ ಶ್ರೇಷ್ಠವಾದದ್ದು' ಅಂತ ಅಂದದ್ದಕ್ಕೆ ಈ ಸೇತುರಾಮಾಚಾರ್ಯರಿಗೆ ಸಿಟ್ಟು ಬಂದು ದಾಸರುಗಳನ್ನು ನಿಂದಾ ಮಾಡತೊಡಗಿದರು. ಆ ಸಂದರ್ಭದಲ್ಲಿ 'ಚಿಂತರವೇಲಿ (ಮೊದಲಕಲ್ ದಾಸರು) ದಾಸರು ಹಾಗೂ ಹತ್ತಿ ಬೆಳಗಲ್ ಆರಳೀಕಟ್ಟಿ ಆಚಾರ್ಯರು ಸದ್ಯ ಅಪರೋಕ್ಷ ಜ್ಞಾನಿಗಳಾಗಿದ್ದಾರೆ. ಅವರು ಮಾಡಿದ ಸಾಧನ ವಿಷಯಗಳು ಕೇಳಿದರೆ ಅಗಾಧವೆನಿಸುತ್ತದೆ. ಅವರ ಶಿಷ್ಯರುಗಳ ಪೈಕಿ ಕೆಲವರು, ತತ್ರಾಪಿ ಆದವಾನಿಯ ಮುತ್ತಿಗಿ ಆಚಾರ್ಯರು ಬಂದಿದ್ದಾರೆ. ಅವರ ಮುಖದಿಂದ ಆ ವಿಷಯವನ್ನು ಕೇಳಿದರೆ ಗೊತ್ತಾಗುತ್ತದೆ' ಅಂತಾ ಒಬ್ಬರೆಂದದ್ದಕ್ಕೆ, "ಈ ದಾಸಕೂಟಸ್ಥರೆಲ್ಲರೂ, ತಾವು ಯಾವುದೋ ಒಂದು ದೇವಾಂಶರೆಂದುಕೊಂಡು ತಮ್ಮ ಶಿಷ್ಯರುಗಳಲ್ಲಿ ಹರಡಿ ಸತ್ಕರ್ಮಾನುಷ್ಠಾನ

ಮಾಡದಲೆ, ಮನಬಂದಂತೆ ಆಚರಿಸುತ್ತಾ ಧಾಂದಲೆ ಹಾಕುತ್ತಾರೆ. ಆದ್ದರಿಂದ ಅವರನ್ನು ಸರ್ವಥಾ ನಂಬತಕ್ಕದಲ್ಲ." ಇತ್ಯಾದಿ ಅನೇಕ ವಿಧ ನಿಂದಾ ಮಾಡುತ್ತಾ ಇವರ (ಈ ಚರಿತ್ರ ನಾಯಕರ) ಕಡೆ ಹೊರಳಿ ಇವರನ್ನು ಕರೆದು "ಪುರಂದರದಾಸರು ನಾರದನೆಂತಲು, ವಿಜಯದಾಸರು ಭೃಗು (ಮೂರ್ಖ) ಎಂತಲು, ಆದರೆ ನೀವು ಯಾವ ಅಂಶ ಮತ್ತು ನಿಮ್ಮ ಗುರು ಯಾವ ಅಂಶಸ್ಥರು" ಅಂತ ಕೇಳಿದರು. ಈ ರೀತಿ ಅಪಹಾಸ್ಯ ಮಾಡುವದರಿಂದ ಈ ಚರಿತ್ರ ನಾಯಕರಿಗೆ ಸಹನವಾಗದೆ "ಸರ್ವದಾ ಪಾಠ ಪ್ರವಚನ ಮಾಡುವ ಪಂಡಿತರೆಂದೆನಿಸಿದವರು, ತಮ್ಮ ತಮ್ಮ ಅಂಶ ಯಾವುದು ಎಂದು ತಿಳಿದುಕೊಂಡಿರುವುದನ್ನು ಪ್ರಥಮದಲ್ಲಿಯೇ ತಿಳಿಸಿ ಆಮೇಲೆ ನಮ್ಮ ಗುರುಗಳ ವಿಚಾರ ಮಾಡಿದರೆ ಬಂದೀತು" ಎಂದು ಇವರು ಉತ್ತರ ಕೊಟ್ಟಿದ್ದಕ್ಕೆ ಸೇತೂರಾಮಾಚಾರ್ಯರಿಗೆ ಮತ್ತಷ್ಟು ಸಿಟ್ಟು ಬಂತು. ಅಷ್ಟರಲ್ಲಿ ಆ ಪಂಡಿತರ ಪೈಕಿ ಒಬ್ಬರು ಕುಹಕ ಬುದ್ಧಿಯಿಂದ "ಸ್ವಾಮಿ! ಆ ಹತ್ತಿ ಬೆಳಗಲ್ ಆಚಾರ್ಯರು ಸರ್ವಸ್ವದಾನ ಮಾಡಿದ್ದಾರೆ. ಹಾಗೂ ನಿತ್ಯ ಉಪಾಸಕರು" ಅಂತ ಹೇಳಲು ಸೇತುರಾಮಾಚಾರ್ಯರು ಮತ್ತಿಷ್ಟು ಸಿಟ್ಟಿಗೆದ್ದು "ಸರ್ವಸ್ವದಾನ ಅಂತ ಹೇಳಿ ತಮಗೆ ಬೇಕಾದವರಿಗೆ ಪಾತ್ರೆ ಪದಾರ್ಥಗಳನ್ನೂ ಕೊಡುವುದು, ಆ ರಾತ್ರಿ ಅವರುಗಳು ಅವುಗಳನ್ನು ತಿರುಗಿ ತಂದುಕೊಡುವುದು ಇತ್ಯಾದಿ ಮೋಸದ ಆಟ ಆಡುತ್ತಾರೆ. ಮತ್ತು ರೋಗದ ಮೂಲಕ ಹಗಲು ಉಂಡರೆ ಆರೋಗ್ಯಕ್ಕೆ ಭಾದಕವೆಂದು ಉಪವಾಸ ಬಿದ್ದು, ರಾತ್ರಿ ಎಲ್ಲರೂ ಮಲಗಿದ ಮೇಲೆ ಮುಸುಕಿನಲ್ಲಿಯೇ ಮೊಸರನ್ನ ತಿನ್ನುತ್ತಾರೆ, ನಾನು ಈ ಕಳ್ಳ ವ್ಯಾಪಾರವೆಲ್ಲ ಬಲ್ಲೆನು" ಅಂತ ರಭಸದಿಂದ ನುಡಿದರು. ಇದರಿಂದ ಈ ಸೇತುರಾಮಾಚಾರ್ಯರಿಗೂ, ಮುತ್ತಿಗಿ ಆಚಾರ್ಯರಿಗೂ ವಾದ-ವಿವಾದಗಳಾದವು. ಈ ಅನಾಹುತದಿಂದ ತಪ್ಪಿಸಲು ಅಡವಿ ಆಚಾರ್ಯಾರು ಮುಂದಾದರು. ಆ ದಿನ ಸೇತುರಾಮಾಚಾರ್ಯರನ್ನು ಅತಕೂರಿಗೆ ಕಳಿಸಿಕೊಟ್ಟರು. ಈ ಕಲಹವೇ ಉಭಯರಿಗೆ ಮನಸ್ತಾಪಕ್ಕೆ ಕಾರಣವಾಯಿತು.

೮. ಪರಮಗುರುಗಳನ್ನು ಸೇವಿಸಿ ಪಾವನರಾದರು.

ಕೆಲವು ದಿನಗಳ ನಂತರ 'ಲಂಗೋಟಿ ಆಚಾರ್ಯಾ'ರೆಂದು ಪ್ರಸಿದ್ಧಿ ಹೊಂದಿದ ಜಮಖಂಡಿ ವಾದಿರಾಜಾಚಾರ್ಯರೆಂಬ ಮಹಾನುಭಾವರಿಗೆ ಅವಸಾನಕಾಲ ಸಮೀಪಿಸಿದ್ದರಿಂದ ಪಂಪಾ ಕ್ಷೇತ್ರಕ್ಕೆ ಒಳಪಟ್ಟ ಕಮಲಾಪುರದಲ್ಲಿ ವಾಸ ಮಾಡುತ್ತಿದ್ದರು. ಅವರಿಗೂ ಈ ಚರಿತ್ರ ನಾಯಕರಿಗೂ ಪರಿಚಯವಿದ್ದುದರಿಂದ ಜಮಖಂಡಿ ಆಚಾರ್ಯರ ಶುಶ್ರೂಷಕ್ಕೆ ಹತ್ತಿಬೆಳಗಲ್ ನರಸಿಂಹಾಚಾರ್ಯರು ಈ ಮುತ್ತಿಗಿ ಆಚಾರ್ಯರನ್ನು ಕಮಲಾಪುರಕ್ಕೆ ಕಳಿಸಿಕೊಟ್ಟರು. ಅವರು ಬರುವುದರ ಮೊದಲು ಈ ಜಮಖಂಡಿ ಆಚಾರ್ಯರಿಗೆ ದುಃಖ ಪ್ರಾರಬ್ಧ ಭೋಗವು ಒದಗಿದ್ದಕ್ಕಾಗಿ ಇವರಿಗೆ ಕಾಲುಗಳು ವಿಪರೀತವಾಗಿ ನೋಯುತ್ತಿದ್ದವು. ಈ ಬಾಧೆ ಸಹನಾತೀತವಾಗಿರುತ್ತಿತ್ತು. ಈ ಸಮಯದಲ್ಲಿ ಇವರ ಮಕ್ಕಳು ಹಾಗೂ ಶಿಷ್ಯರುಗಳು ಎಡಬಿಡದೆ ಸೇವೆ ಮಾಡುತ್ತಿದ್ದರು. ಇವರುಗಳಲ್ಲಿ ಪುಟ್ಟಾಚಾರ್ಯ, ಸುಂಕದ ಶ್ರೀನಿವಾಸಾಚಾರ್ಯರು ಮೊದಲಾದವರು ಇದ್ದರು. ಈ ಚರಿತ್ರ ನಾಯಕರು ಬಂದ ನಂತರ ಅವರುಗಳಿಗೆ ಸ್ವಲ್ಪ

ವಿರಾಮ ಸಿಕ್ಕಂತಾಯಿತು. ಈ ಚರಿತ್ರ ನಾಯಕರೇ ಎಲ್ಲಾ ಬಗೆಯ ಸೇವಾವನ್ನು ಮಾಡಹತ್ತಿದರು. ಈ ಜಮಖಂಡಿ ಆಚಾರ್ಯರು ಇವರನ್ನು ಕುರಿತು 'ಈ ಬಾಧೆ ಯಾವ ಜನ್ಮದ್ದೊ? ಏತಕ್ಕಾಗಿದೆಯೋ?' ಎಂದು ಕೇಳಿದರು. ಆಗ್ಗ ಈ ಚರಿತ್ರ ನಾಯಕರು ಉತ್ತರ ಕೊಡದೆ ಸುಮ್ಮನಿದ್ದರು. ಆ ರಾತ್ರಿ ಈ ಚರಿತ್ರ ನಾಯಕರು ತಮ್ಮ ಇಷ್ಟದೇವರಾದ ವಾಯುದೇವರನ್ನು ಪ್ರಾರ್ಥಿಸಲು ಸ್ವಪ್ನದಲ್ಲಿ 'ಹಿಂದಕ್ಕೆ ಇವನು ಭೀಮಶೇನನನ್ನು ತನ್ನ ಕಾಲುಗಳಿಂದ ಒದೆಯಲು ಬಂದಿದ್ದನು. ಆ ತಪ್ಪಿಗಾಗಿ ಈಗ ಶಿಕ್ಷೆಯನ್ನು ಅನುಭವಿಸಲಿ' ಎಂದು ಹೇಳಿದಂತಾಗಿ, ಮರುದಿವಸ ಈ ಚರಿತ್ರ ನಾಯಕರು ತಮಗೆ ರಾತ್ರಿ ಬಿದ್ದ ಸ್ವಪ್ನದ ವಿವರವನ್ನು ತಿಳಿಸಲು, "ಭಲೇ! ಶೂರ ಹಾದ್ಯೋ! ನೀನು ಹತ್ತಿಬೆಳಗಲ್ ಆಚಾರ್ಯರ ಶಿಷ್ಯನಾದುದಕ್ಕೆ ಸಾರ್ಥಕವಾಯಿತು. ದ್ವಾಪರದಲ್ಲಿ ದುರ್ಯೋಧನನ ಪಕ್ಷಪಾತದಿಂದ ನಾನು ಭೀಮಶೇನನನ್ನು ಒದೆಯಲು ಹೋದದ್ದು ನಿಜ. ಈಗ ನನಗೆ ಸ್ಮೃತಿಗೆ ಬಂತು. ವಾಯುದೇವರು ಆ ವಿಷಯವನ್ನು ಮರೆಯದಲೆ ಸಮಯೋಚಿತವಾಗಿ ಈ ಜನ್ಮದಲ್ಲಿ ಆ ಶಿಕ್ಷೆಯನ್ನು ಅನುಭವಿಸಲಿ ಎಂದು ಬಗೆದಿರುವರು. ಇಲ್ಲಿಗೆ ಸಾಕು ಈ ರೀತಿಯ ಬಾಧೆ. ಇನ್ನಾದರು ದಯತೋರಿ ಈ ಭೌತಿಕ ದೇಹವನ್ನು ಸುಡಲಿ" ಎಂದು ಮರುಗಿದರು. ಈ ಮುತ್ತಿಗಿ ಆಚಾರ್ಯರು ಅವರ ಪೂರ್ವಜನ್ಮದ ಸ್ಮರಣೆ ಸ್ಪಷ್ಟವಾಗಿ ಮಾಡಿಕೊಟ್ಟಿದ್ದರಿಂದ ಜಮಖಂಡಿ ಆಚಾರ್ಯರು ಕೆಲವು ದಿನಗಳ ನಂತರ ದೇಹ ತ್ಯಾಗ ಮಾಡಿದರು. ಇವರ ಭೌತಿಕ ದೇಹದ ಅಗ್ನಿ ಸಂಸ್ಕಾರಾದಿ ಕರ್ಮಗಳನ್ನು ಸಾಂಗೋಪಾಂಗವಾಗಿ ನೆರವೇರಿಸಿ ಹತ್ತಿಬೆಳಗಲ್ಲಿಗೆ ಬಂದು ಅಲ್ಲಿ ನಡೆದ ವಿಷಯವನ್ನು ತಮ್ಮ ಗುರುಗಳಿಗೆ ತಿಳಿಸಿದರು.

೯. ಗುರುಗಳ ವಿಲಕ್ಷಣ ಉಪವಾಸ ಹಾಗೂ ದೇಹತ್ಯಾಗ.

ಈ ಅರಳಿಕಟ್ಟಿ ನರಸಿಂಹಾಚಾರ್ಯರಿಗೆ ನಲವತ್ತು ದಿನಗಳು ಸತತ ಉಪವಾಸ ಮಾಡುವುದಾಗಿ ವಾಯುದೇವರು ಆಜ್ಞಾಪಿಸುತ್ತಿದ್ದರು. ಅದರಂತೆ ಈ ಆಚಾರ್ಯರು ಉಪವಾಸ ಮಾಡುತ್ತಿದ್ದರು. ಪ್ರತಿ ದಿವಸ ಎಲ್ಲರಂತೆ ತೀರ್ಥ ಗಂಧಾಕ್ಷತೆ ಧಾರಣಮಾಡಿ ಊಟಕ್ಕೆ ಕೂಡುತ್ತಿದ್ದರು. ಆದರೆ ಎಲೆಯಲ್ಲಿ ಯಾವ ಪದಾರ್ಥವನ್ನು ಹಾಕಿಸಿಗೊಳ್ಳದೆ ಶಿಷ್ಯರುಗಳ ಊಟ ಮುಗಿಯುವವರೆವಿಗೂ ಕುಳಿತು ಪ್ರತಿ ದಿವಸ ಉಪವಾಸ ಮಾಡುತ್ತಿದ್ದರು. ಬಡಿಸುವಾಗ ಅಕಸ್ಮಾತ್ ಇವರ ಎಲೆಯಲ್ಲಿ ಅಪ್ಪಿತಪ್ಪಿ ಯಾವ ಪದಾರ್ಥವನ್ನಾದರೂ ಹಾಕಿದರೆ ಅದನ್ನು ಭುಜಿಸಿ ಅಮೃತೋಪಿ ತೆಗೆದುಕೊಳ್ಳುತ್ತಿದ್ದರು. ಮತ್ತೆ ಮರುದಿವಸದಿಂದ ನಲವತ್ತು ದಿವಸದವರೆವಿಗೂ ಉಪವಾಸ ಪ್ರಾರಂಭವಾಗುತ್ತಿತ್ತು. ಈ ರೀತಿ ಉಪವಾಸ ಹಲವು ಸಲ ಭಂಗವಾಯಿತು. ಈ ಸಂದರ್ಭದಲ್ಲಿ ಮತ್ತೊಮ್ಮೆ ಸರ್ವಸ್ವ ದಾನ ಮಾಡುವುದಾಗಿ ಪ್ರಾಣ ದೇವರು ಆಜ್ಞಾಮಾಡಿದರು. 'ಸ್ವಾಮಿ! ಜಗತ್ತಿನಲ್ಲಿ ಶ್ರೇಷ್ಠರಾದ ಜೀವರುಗಳಿಗೆ ಉಪಭೋಗಾರ್ಥ ಅನೇಕ ಪ್ರಾಕೃತ ಪದಾರ್ಥಗಳು ಸೃಷ್ಟಿ ಮಾಡಲ್ಪಟ್ಟು ಆ ಪದಾರ್ಥಗಳಲ್ಲಿ ಪರಮಾತ್ಮನು ತನ್ನ ಅಗಾಧಗುಣವನ್ನು ಒಂದೊಂದರಲ್ಲಿಟ್ಟು ಜೀವರ ನೈಜವಾದ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳನ್ನು ವಿಷಯೋನ್ಮುಖವನ್ನಾಗಿ ಪ್ರಚೋದನಾ ಮಾಡಿ, ನಮ್ಮ ದೇಹದ ಇಂದ್ರಿಯಗಳ ಆಕರ್ಷಣ

ಮಾಡಿಸಿ, ಸ್ವರೂಪ ಭೂತಜ್ಞಾನಾದಿಗಳನ್ನು ಆಚ್ಛಾದನಾ ಮಾಡಿ, ಬಹಿರ್ಮುಖಿಗಳನ್ನಾಗಿ ಮಾಡದೆ ಇರಲು; ತಾವು ಮಾತ್ರ ನನ್ನಲ್ಲಿ ಬಹು ಅಂತಃಕರಣ ಮಾಡಿ **ದೀನಂ, ದೂನಂ, ಅನಾಥಂ, ಶರಣಾಗತಂ ಏನಮುಗ್ಧರ** ಅಂತ ಪರಮಾತ್ಮನಲ್ಲಿ ವಿಜ್ಞಾಪನ ಮಾಡೋಣದರಿಂದ ಆ ಭಗವಂತನು **'ಏನಂ ಮೋಚಯಾಮಿ'** ಅಂತ ಸಂಕಲ್ಪ ಮಾಡಿ ನನ್ನನ್ನು ವಿಷಯೋಪಭೋಗಗಳಿಂದ ಪರಾವೃತನನ್ನಾಗಿ ಮಾಡಿ, ಸರ್ವದಾ ತಮ್ಮ ಧ್ಯಾನದಲ್ಲಿರುವಂತೆ ಮಾಡಿ, ಈ ನನ್ನ ಪರಿವಾರವೆಂದೆನಿಸಿದವರಲ್ಲಿ ಈ ರೀತಿ ಮಾಡದೆ, ಅವರನ್ನು **'ಏನಂ ಬಂಧಯಾಮಿ'** ಅಂತ ಸಂಕಲ್ಪಿಸಿರೋಣದರಿಂದ ಅವರು ನನ್ನಂತೆ ನಿಸ್ಪೃಹ ವೃತ್ತಿಯಿಂದಿರಲು ಸಾಧ್ಯವಿಲ್ಲ. ಪ್ರಯುಕ್ತ ಈವರೆವಿಗೂ ಇದ್ದ ಆಸ್ತಿಯಲ್ಲಿ ನನ್ನ ಭೋಗಾರ್ಥ ಕಿಂಚಿದಪಿ ಇಟ್ಟುಗೊಳ್ಳದೆ ತಮಗೆ ಸಮರ್ಪಣ ಮಾಡುತ್ತ ಬಂದಂತೆ, ನನ್ನ ಜೀವಮಾನ ಪರ್ಯಂತ ಮಾಡುತ್ತೇನೆ ಹೊರತು, ಈ ಸಲ ಸರ್ವಸ್ವ ದಾನ ಮಾಡಲಾರೆ ಅಂತ ಹಟ ಮಾಡಿದರು. ಹಾಗಾದರೆ **'ಈ ನಿನ್ನ ದೇಹವನ್ನು ಸಮಯೋಚಿತ ತೆಗೆಯುತ್ತೇವೆ'** ಅಂತ ಶ್ರೀ ವಾಯುದೇವರು ಸೂಚನೆ ಕೊಟ್ಟರು. 'ಈ ದೇಹ ಎಂದಾದರೊಂದು ದಿನ ಹೋಗತಕ್ಕದ್ದೇ, ಮುಂದೆ ಹೋದರೇನು, ಈಗ ಹೋದರೇನು! ಈ ಜನ್ಮದಲ್ಲಿ ಸಾಧನಾರಭ್ಯ ಈವರೆವಿಗೂ ಹೊಟ್ಟೆ ತುಂಬ ಅನ್ನ, ಕಣ್ಣು ತುಂಬ ನಿದ್ರಾ ಕಂಡಿಲ್ಲ, ಇಂತಹ ದೇಹ ಬಿಡುವ ಅಂಜಿಕೆಯಿಂದ ಸರ್ವಸ್ವದಾನ ಮಾಡುವುದಿಲ್ಲ.' ಅಂತ ಆಚಾರ್ಯರು ಎದುರುತ್ತರ ಕೊಟ್ಟರು. ಇನ್ನು ಒಂದು ವಾರದಲ್ಲಿ ಸರ್ವಸ್ವದಾನ ಮಾಡದಿದ್ದರೆ ಈ ನಿನ್ನ ದೇಹ ತೆಗೆಯುವುದು ನಿಶ್ಚಿತ ಅಂತ ಪ್ರಾಣ ದೇವರು ಪುನಃ ಸ್ಪಷ್ಟಪಡಿಸಿದರು. (ಈ ಚರ್ಚೆಯ ವಿಷಯವನ್ನು ಅರಳಿಕಟ್ಟಿ ಆಚಾರ್ಯರು ತಮ್ಮ ಪರಮ ಶಿಷ್ಯರಾದ ಮುತ್ತಿಗಿ ಆಚಾರ್ಯರಲ್ಲಿ ಗುಟ್ಟಿನಲ್ಲಿ ನಿವೇದಿಸಿದ್ದರು) ಅದರಂತೆ 'ನಿಮ್ಮ ಗುರು ಪರಲೋಕ ಯಾತ್ರೆ ಮಾಡುವ ಸಮಯ ಒದಗಿದೆ. ನೀನು ದರ್ಶನಾರ್ಥವಾಗಿ ಹೋಗು' ಅಂತ ಈ ಚರಿತ್ರ ನಾಯಕರಿಗೆ ಸ್ವಪ್ನವಾಗಲು, ಇವರು ದರ್ಶನಾರ್ಥವಾಗಿ ಆದವಾನಿಯಿಂದ ಹತ್ತಿಬೆಳಗಲ್ಲಿಗೆ ಧಾವಿಸಿ ಬಂದರು. ಹೀಗೆ ಎಲ್ಲ ಶಿಷ್ಯ ಮಂಡಲಿಗೆ ಅತಿ ಶೀಘ್ರದಲ್ಲಿ ವಾರ್ತಾ ಮುಟ್ಟಿಸೋಣದರಿಂದ ಸಕಾಲಕ್ಕೆ ಕೆಲವರು ಬಂದರು. ಅವರ ಪೈಕಿ ಕಿರಣಿ ಪಾಂಡುರಂಗಾಚಾರ್ಯರೆಂಬ ಇನ್ನೊಬ್ಬ ಶಿಷ್ಯನಿಗೂ ಈ ರೀತಿ ಸ್ವಪ್ನವಾಗಲು ಅವರು ಗುರುದಕ್ಷಿಣಾ ಸಮೇತ ಬಂದರು. ಇಷ್ಟೊತ್ತಿಗೆ ಆಚಾರ್ಯರ ಉಪವಾಸ ೩೮ ದಿವಸ ನಿರ್ವಿಘ್ನವಾಗಿ ಸಾಗಿತ್ತು. ದೇಹ ಬಿಡುವುದಕ್ಕಿಂತ ಸರ್ವಸ್ವದಾನ ಮಾಡುವುದು ಉಚಿತವೆಂದು ಆಚಾರ್ಯರ ಪುತ್ರರಾದ ಕೊಪ್ಪರೇಶಾಚಾರ್ಯರು ತಮ್ಮ ತಂದೆಗೆ ವಿಜ್ಞಾಪಿಸಿಗೊಂಡರು. ಆದರೆ ಆ ಸಮಯ ಮೀರಿತ್ತು. '**(ಸರ್ವಃ ಸಂಸಾರಹೇತುಃ)** ಕಲಿ ಪ್ರಾಬಲ್ಯದಿಂದ ಸಜ್ಜನರು ಸಹ ದುಃಸ್ವಭಾವವನ್ನು ಹೊಂದುತ್ತಾರೆ. (ದುರ್ಯೋಧನನ ಪಕ್ಷ ವಹಿಸಿದ್ದ ಕರ್ಣನಂತೆ) ಮತ್ತು ದುರ್ಜನರು ದೊಡ್ಡ ದೊಡ್ಡ ಪದವಿಗಳನಾಕ್ರಮಿಸಿ ಸಜ್ಜನರ ವೇಷ ಧರಿಸಿ ಮೋಕ್ಷ ಮಾರ್ಗದರ್ಶನಗಳಾದ ಸದ್ಧರ್ಮಾಚರಿಸಿ ಇತರರನ್ನು ಆಕರ್ಷಿಸಿ ದುಷ್ಟಮಾರ್ಗ ಆಚರಿಸಲು ಬಲಾತ್ಕಾರಪಡಿಸಿ ಅಡ್ಡ ಮಾರ್ಗಕ್ಕೆ ಸೆಳೆಯುತ್ತಾರೆ. ಅಂಥವರ ಬಹಿರಂಗ ಆಡಂಬರದಿಂದ

ಮೋಹಿತರಾಗಿ ಅವರ ಜಾಲದಲ್ಲಿ ಸಿಲುಕದೆ ಎಚ್ಚತ್ತು ಸರ್ವದಾ ಶ್ರೀ ಹರಿವಾಯುಗಳ ಸಂಕಲ್ಪವನ್ನೇ ನೋಡುತ್ತ ಅದನ್ನನುಸರಿಸಿ, ಅವರ ಪ್ರೀತಿಗೆ ಪಾತ್ರರಾಗಿ, ಯಾವ ಕಾಲಕ್ಕೂ ಯಾವ ನಿಮಿತ್ತದಿಂದಲೂ ವಾಯುದೇವರಿಗೆ ಎಳ್ಳಷ್ಟೂ ವಿಮುಖರಾಗಬೇಡಿರಿ. **'ಹರೌರುಷ್ಟೇ ಗುರು ಸ್ತ್ರಾತಾ, ಗುರೌರುಷ್ಟೇ ನಕಶ್ಚನ'** ಹೆಚ್ಚೇನು ಹೇಳುವುದು, ಸರ್ವರು ಅಭಿಜ್ಞರಿದ್ದೀರಿ ಅನ್ನುತ್ತ ಶ್ರೀ ಮುತ್ತಿಗೀ ಆಚಾರ್ಯರ ಕಡೆ ದೃಷ್ಟಿ ಹೊರಳಿಸಿ ಈವರೆವಿಗೂ ಮಾಡಿದ ಗುರುಸೇವೆಗಿಂತ ಮಹತ್ತರವಾದದ್ದು ಇನ್ನು ಮುಂದೆ ಮಾಡತಕ್ಕ ಸೇವೆ, **"ಗುರು ಸದ್ಗುರು ಪುತ್ರಶ್ಚ ಯೋಗ್ಯಶ್ಚೇದ್ಗುರು ಪೌತ್ರಕಃ"** 'ಈ ನಮ್ಮ ಕೊಪ್ಪರೇಶಾಚಾರ್ಯ ಈವರೆವಿಗೂ ನಮ್ಮ ಸೇವಾದಲ್ಲಿಯೇ ನಿರತನಾಗಿ ಯಾವುದು ಅವಲಂಬನ ಮಾಡಲಿಲ್ಲ. ನಮ್ಮ ಮರಣದ ಮೂಲಕ ನಿಮ್ಮಗಳೆಲ್ಲರಕ್ಕಿಂತಲೂ ಅವನಿಗೆ ಹೆಚ್ಚು ದುಃಖವಾಗುವುದು ಸಹಜ. ಪ್ರಯುಕ್ತ ನೀವು ಒಂದು ವರುಷ ಇಲ್ಲಿಯೇ ಇದ್ದು ಸಾಂವತ್ಸರಿಕ ಆಗುವವರೆಗೂ ಎಲ್ಲಾ ಸಾಂಸಾರಿಕ ಭಾರವಹಿಸಿ ಅವನಿಗೆ ಸಮಾಧಾನ ಹೇಳಿರಿ' ಅಂತ ಈ ಮುತ್ತಿಗಿ ಆಚಾರ್ಯರಿಗೆ ಹೇಳಿದರು. ಈ ದಿನಕ್ಕೆ ೩೯ ದಿವಸ ಸರ್ವರ ಸಮಕ್ಷಮ ಉಪವಾಸ ಸೇವೆ ಮುಗಿಯಿತು. ೪೦ನೇ ದಿವಸ ಸರ್ವ ಶಿಷ್ಯ ಮಂಡಲಿ ಸಮಕ್ಷಮ ಪ್ರಾತಃಕಾಲ ಸೂರ್ಯೋದಯ ಸಮಯಕ್ಕೆ **ಶಾಲಿವಾಹನ ಶಕ ವಿಳಂಬನಾಮ ಸಂವತ್ಸರ ಆಷಾಢ ಶುಕ್ಲ ಸಪ್ತಮಿ ಭಾನುವಾರ ಸ್ವಲೋಕಕ್ಕೆ ತೆರಳಿದರು.** ಈ ಸುದ್ದಿಯು ನಾಲ್ಕು ದಿಕ್ಕಿಗೂ ಶೀಘ್ರವಾಗಿ ಹರಡಿ ಸುತ್ತಮುತ್ತಲಿನ ಗ್ರಾಮಗಳಿಂದ ಎಲ್ಲ ಜನರು ಅಂತ್ಯದರ್ಶನಾರ್ಥ ಬರುವುದರಿಂದ ದೇಹವನ್ನು ಸಂಸ್ಕಾರಾರ್ಥ ತೆಗೆದುಕೊಂಡು ಹೋಗಲು ಅವಕಾಶವಾಗದೆ ರಾತ್ರಿಯ ಎಂಟು ಗಂಟೆವರೆಗೂ ತಡವಾಯಿತು. ನಂತರ ಅವರ ದೇಹವನ್ನು ಸ್ಮಶಾನದಲ್ಲಿ ದಹನ ಮಾಡದಲೆ ಅವರ ಮುಖ್ಯ ಶಿಷ್ಯರಲ್ಲೊಬ್ಬರಾದ ಬಿಲ್ವಪತ್ರಿ ಆಚಾರ್ಯರ (ಬಾಡದ ವೆಂಕಟ ನರಸಿಂಹಚಾರ್ಯ) ಹೊಲದಲ್ಲಿ ದಹನ ಮಾಡುವುದೆಂದು ಗೊತ್ತು ಮಾಡಲಾಯಿತು. ಕೂಡಲೇ ನೆರೆದ ಜನರು, ತಮ್ಮಷ್ಟಕ್ಕೆ ತಾವೇ ತಮ್ಮ ಮನೆಯಲ್ಲಿದ್ದ ಶ್ರೀಗಂಧ, ತುಳಸಿಕಾಷ್ಟ, ಅಂಗಡಿಯಿಂದ ಕರ್ಪೂರ, ಊದಿನ ಕಡ್ಡಿಗಳಿಂದಲೇ ಚಿತವನ್ನು ಸಿದ್ಧಪಡಿಸಿ ಮನೆಯಿಂದ ಮೊದಲು ಮಾಡಿ ಆ ಸ್ಥಳದವರೆಗೂ ಸುಮಾರು ಎರಡು ಫರ್ಲಾಂಗು ದೀವಟಿಗಳು, (ಆ ಕಾಲದಲ್ಲಿ ವಿದ್ಯುದ್ದೀಪಗಳಿರಲಿಲ್ಲ.) ತಾಳ, ತಂಬೂರಿ, ಮೃದಂಗ, ಜಾಗಟೆ ಇತ್ಯಾದಿ ಭಜನೆ, ಮೇಳವಾದ್ಯಗಳಿಂದ ವೈಭವದೊಂದಿಗೆ ರಾತ್ರಿ ಹತ್ತು ಗಂಟೆ ಸುಮಾರಕ್ಕೆ ದಹನ ಸಂಸ್ಕಾರ ವಿಧಿ ಪ್ರಾರಂಭವಾಗಿ ಮುಂದೆ ಒಂದು ತಾಸಿನವರೆವಿಗೂ ಆ ಕಾರ್ಯವನ್ನು ಮುಗಿಸಿಗೊಂಡು, ಸ್ನಾನ ಮಾಡಿ, ರುದ್ರದೇವರ ದರ್ಶನ ತೆಗೆದುಕೊಂಡು ಸರ್ವರೂ ಮನೆ ಸೇರಿದರು.

೧೦. ದೇಹತ್ಯಾಗನಂತರವೂ ದರ್ಶನವಿತ್ತರು.

ಈ ಮಧ್ಯ ಆ ಗ್ರಾಮದ ಬಡಿಗಾರ ರುದ್ರಪ್ಪನೆಂಬ ಭಕ್ತನೊಬ್ಬನು ಗ್ರಾಮಾಂತರ ಹೋಗಿದ್ದನು. ಅವನು ಮೂರು ದಿನಗಳ ನಂತರ ರಾತ್ರಿ ಹನ್ನೆರಡರ ಸುಮಾರಕ್ಕೆ ಊರಿನಿಂದ ಮನೆಗೆ ಬಂದು ಮಲಗಿಬಿಟ್ಟನು. ಅರುಣೋದಯಕ್ಕೆ ಎದ್ದು ತನ್ನ ಹೊಲದ ಕಡೆ ನಡೆದನು. ಆ ಹೊಲವು ಆಚಾರ್ಯರ ದೇಹ ದಹನ ಮಾಡಿದ ಸ್ಥಳವನ್ನನುಸರಿಸಿಯೇ ಹೋಗುವ

ಮಾರ್ಗದಲ್ಲಿದ್ದುದರಿಂದ ಆ ಮಾರ್ಗವಾಗಿಯೇ ನಡೆದನು. ಇವನು ಊರಲ್ಲಿರದೆಯಿದ್ದುದರಿಂದ ಆಚಾರ್ಯರು ಯಾತ್ರಾ ಮಾಡಿದ ಸುದ್ದಿ ತಿಳಿದಿರಲಿಲ್ಲ. ಆದರೆ ತನ್ನ ಹೊಲದ ಮಾರ್ಗ ಹಿಡಿದು ಹೋಗುತ್ತಿರಲು **'ಇಲ್ಲಿ ನೆಗ್ಗಿನ ಮುಳ್ಳು ಬಹಳ ಇವೆ ಎಂದೂ ನೀವು ಹೊರಗೆ ಬಾರದಿದ್ದವರು ಇವತ್ತು ಬರಿಗಾಲಿನಿಂದ ಏಕೆ ಬಂದಿರಿ? ಅಂತ ಆಚಾರ್ಯರನ್ನು ನೋಡಿದಂತೆ ಪ್ರಶ್ನಿಸಿದನು. ಅದಕ್ಕೆ ಆಚಾರ್ಯರು 'ಹೌದು! ಕೆಲವು ದಿವಸ ನಾವು ಇಲ್ಲಿರಬೇಕಾಗಿದೆ'** ಅಂತ ಉತ್ತರ ಕೊಟ್ಟರಂತೆ. ಹಾಗಾದರೆ 'ತಾವು ಚಪ್ಪಲಿ ಹಾಕಿಕೊಳ್ಳುವರಲ್ಲ. ಅವಿಗೆ ಮಾಡಿ ತಂದು ಕೊಡಲೇನು?' ಅಂತ ಕೇಳಿದನು. 'ಹಾಗೆ ಮಾಡು' ಎಂದು ಆಚಾರ್ಯರು ಉತ್ತರ ಕೊಟ್ಟರು. ಕೂಡಲೆ ಪುನಃ ನಮಸ್ಕಾರ ಮಾಡಿ ತನ್ನ ಹೊಲಕ್ಕೆ ಹೊರಟು ಹೋದನು. ತಿರುಗಿ ಬರುವಾಗ ಅವರನ್ನು ಕಾಣಲಿಲ್ಲ. ತಮ್ಮ ಮನೆಗೆ ಅವರು ಹೋಗಿರಬಹುದೆಂದೆಣಿಸಿದನು. ಆ ಮೇಲೆ ಮಧ್ಯಾಹ್ನದಲ್ಲಿ ಭೋಜನಕ್ಕೆ ಕೂಡುವವನಾದನು. ಅವನ ಪದ್ಧತಿಯಂತೆ ತಟ್ಟೆಯಲ್ಲಿ ಅನ್ನಾದಿ ಪದಾರ್ಥಗಳನ್ನು ಅವನ ಹೆಂಡತಿ ಬಡಿಸಿದ ಮೇಲೆ ಅವನು ಈ ಆಚಾರ್ಯರ ಮನೆಗೆ ಬಂದು ನಮಸ್ಕಾರ ಮಾಡಿ ಹೋಗಿ ಭೋಜನ ಮಾಡುವ ಸಂಪ್ರದಾಯವಿತ್ತು. ಆ ಪ್ರಕಾರ ಆ ದಿನವೂ ಆಚಾರ್ಯರ ಮನೆಗೆ ಹೋಗಲು ಸಿದ್ಧನಾದನು. 'ಅಪ್ಪನವರು ಹೊರಟು ಹೋಗಿ ೨ ದಿನಗಳಾದವು. ಈಗ ಏತಕ್ಕೆ ಹೋಗುವಿ' ಅಂತ ಹೆಂಡತಿ ಅಂದಳು. 'ಛೀ! ಎಂಥ ಮಾತಾಡುವಿ, ನಿನಗೇನು ಹುಚ್ಚು ಹಿಡದಿದೆಯೇ?' ಅಂತ ಹೆಂಡತಿಯನ್ನು ಝುಬರಿಸಿಗೊಂಡನು. 'ಇಲ್ಲ, ಅಪ್ಪನವರು ಸತ್ತಿದ್ದು ನಿಜ. ನೀನು ಊರಲ್ಲಿ ಇರದಿದ್ದರಿಂದ ನಿನಗೆ ಗೊತ್ತಿಲ್ಲವೆಂದಳು.' ಅದಕ್ಕೆ ಮತ್ತೆ ಆತ ಹೆಚ್ಚು ಸಿಟ್ಟಾಗಿ ಹೆಂಡತಿಗೆ ಒಂದು ಪೆಟ್ಟು ಕೊಟ್ಟು, ಆಚಾರ್ಯರ ಮನೆಗೆ ಹೊರಟು ಹೋದನು. ಇಲ್ಲಿ ಎಲ್ಲ ಶಿಷ್ಯರು ದುಃಖಸಾಗರದಲ್ಲಿ ಮುಳಗಿದ್ದಿದು ಕಂಡು ಆಗ ಅವನಿಗೆ ತನ್ನ ಹೆಂಡತಿ ಹೇಳಿದ್ದು ನಿಜವೆಂದು ತೋರಿ 'ಶಿಷ್ಯನಾದ ನನಗೆ ಅಂತ್ಯ ದರ್ಶನವಾಯಿತೆಂದು ದರ್ಶನ ಕೊಟ್ಟ ಮಹಾಪ್ರಭು' ಅಂತ ಬಹುಪರಿ ಪ್ರಲಾಪಿಸಿದನು. ಮಹಿಮೆ ಕೇಳಿದ ಎಲ್ಲ ಶಿಷ್ಯರಿಗೂ ಅವರ ಭಕ್ತಪ್ರಿಯತ್ವದ ಬಗ್ಗೆ ಉದ್ರೇಕ ಉಂಟಾಗಿ, 'ಈತನಿಗೆ ದರ್ಶನವಿತ್ತಂತೆ ನಮಗೆಲ್ಲರಿಗೂ ಒಮ್ಮೆ ದರ್ಶನ ಕೊಡಿರಿ' ಅಂತ ಪ್ರಾರ್ಥನೆ ಮಾಡಿಕೊಂಡರು. ಅದಕ್ಕೆ 'ಪ್ರತಿಯೊಬ್ಬರು ಇದರಂತೆ ಕೇಳುತ್ತ ಹೋದರೆ ಎಷ್ಟು ಸಾರೆ ದರ್ಶನ ಕೊಡಬೇಕು? ಆದ್ದರಿಂದ, ಈ ಬಿಲ್ವಪತ್ರಿ ಆಚಾರ್ಯರ ಉಪಾಸ್ಯ **ಪ್ರಾಣ ಪ್ರತೀಕದ ಕೈಕೆಳಗೆ ನಾವು ಅಭಿವ್ಯಕ್ತರಾಗಿರುತ್ತೇವೆ'** ದರ್ಶನ ತೆಗೆದುಕೊಂಡು ತೃಪ್ತರಾಗಿರಿ' ಅಂತ ಪಾಂಡುರಂಗಾಚಾರ್ಯರ ಸ್ವಪ್ನದಲ್ಲಿ ಹೇಳಿದರು. ಮರುದಿನ ಬಿಲ್ವಪತ್ರಿ ಆಚಾರ್ಯರ ಪ್ರಾಣ ಪ್ರತೀಕದಲ್ಲಿ ನೋಡಲು ಸ್ವಯಂ ವ್ಯಕ್ತರಾಗಿದ್ದರು. ಈ ಸ್ವಯಂ ವ್ಯಕ್ತ ಪ್ರತಿಮಾವನ್ನು ಅದ್ಯಾಪಿ ನೋಡಬಹುದು. ಶ್ರೀಮಟ್ಟೀಕಾಚಾರ್ಯರ ನಂತರ ಈವರಿಗೂ ಎಷ್ಟೋ ಮಹನೀಯರಾಗಿ ಹೋದರು. ಆದಾಗ್ಯೂ ಈ ರೀತಿ ಸ್ವಯಂ ವ್ಯಕ್ತರಾದದ್ದು ಎಲ್ಲಿಯೂ ಕಂಡಿಲ್ಲ. ಇದೊಂದು ಅವರು ದೇವಾಂಶರೆಂಬುದಕ್ಕೆ ಸಾಕ್ಷಿಯಲ್ಲವೇ! ಆಮೇಲೆ ಆಚಾರ್ಯರ ಆಜ್ಞಾ ಪ್ರಕಾರ ಮುತ್ತಿಗಿ ಆಚಾರ್ಯರು ಒಂದು ವರ್ಷದವರೆವಿಗೂ ಹುತ್ತಿಬೆಳಗಲ್ಲಿನಲ್ಲಿದ್ದು

ಕೊಪ್ಪರೇಶಾಚಾರ್ಯರನ್ನು ಸಮಾಧಾನಪಡಿಸುತ್ತ ಅವರಿಗೆ ಸಾಂಸಾರಿಕ ತೊಂದರೆ ಆಗದಂತೆ ನೋಡಿಕೊಂಡು, ಅನಂತರ ಅವರ ಅಪ್ಪಣೆ ಪಡೆದುಕೊಂಡು ಆದವಾನಿಗೆ ಬಂದು ಸೇರಿದರು. **"ಗುರುರ್ಮದ್ಗುರುಪುತ್ರಸ್ಯ ಯೋಗ್ಯಶ್ಚೇದ್ಗುರುಪೌತ್ರಕಃ"** ಎಂಬ ಶಾಸ್ತ್ರವನ್ನನುಸರಿಸಿ ಸೇವಾ ಮಾಡಿದ್ದು ಗುರು ಭಕ್ತಿಯ ಶಿಖರಕ್ಕೆ ಕಲಶವಿಟ್ಟಂತಲ್ಲವೆ!

೧೧. ಭಾಗೀರಥಿ ಬಂದಳಾಗ.

ಆಮೇಲೆ ಪೂರ್ವದಂತೆ ಶುದ್ಧ ಗೋಪಾಳ ವೃತ್ತಿಯನ್ನು ಪ್ರಧಾನವಾಗಿಟ್ಟುಗೊಂಡು ತಮ್ಮ ಶಿಷ್ಯರಿಂದಲೂ ಯಾದೃಚ್ಛಿಕವಾಗಿ ಬರುವ ದ್ರವ್ಯದಿಂದಲೂ ಉಪಜೀವಿಸುತ್ತಿರಲು ಒಂದು ವರ್ಷ ಈ ಊರಲ್ಲಿ ಅಲ್ಪವೃಷ್ಟಿಯಾಗಿ ನೀರಿನ ಕ್ಷಾಮ ಒದಗಿತು. ಈ ಸಮಯದಲ್ಲಿ ಊರೊಳಗಿನ ಬಾವಿಯಲ್ಲಿ ನೀರಿಲ್ಲವೆ ಬತ್ತಿಹೋಗಿದ್ದರಿಂದ ಸ್ನಾನಪಾನಾದಿಗಳಿಗೆ ಅನಾನುಕೂಲವಾಯಿತು. ಈಗ ವಿಜಯರಾಯರ ಗುಡಿಯ ಸಮೀಪದಲ್ಲಿ ಸೌಳು (ಉಪ್ಪು) ನೀರಿನ ಬಾವಿ ಇರೋಣಾದರಿಂದ ಇನ್ನು ಸ್ವಲ್ಪ ಅಗಿಸಿದರೆ ಉಪ್ಪು ನೀರೆ ಬರಬಹುದು. ಹೀಗಾಗಿ ಅಡುಗಿಗೆ, ಪಾನಕ್ಕೆ ಅನಾನುಕೂಲವಾಗುವದು. ಆದ್ದರಿಂದ ಎರಡು ಫರ್ಲಾಂಗು ದೂರದಲ್ಲಿರುವ ಲಿಂಗಾಯತರ ಚೌಕಿಮಠವಿದೆ. ಇದರ ಸಮೀಪ ಒಂದು ಸಿಹಿ ನೀರಿನ ಭಾವಿ ಕೂಡಾ ನೀರಿಲ್ಲದೆ ಬತ್ತಿ ಹೋಗಿತ್ತು. ಮತ್ತು ಅದನ್ನು ಅಗಿಸಲು ಬಾರದಂತೆ ತಳದಲ್ಲಿ ಬಂಡೆಯಿತ್ತು. ಇದನ್ನು ಒಡೆಸಿದಾಗ್ಯೂ ಸಿಹಿನೀರು ಬೀಳುವ ಭರವಸೆ ಇದ್ದಿಲ್ಲ. ಆಗ ಈ ಚರಿತ್ರ ನಾಯಕರು ಭಾಗೀರಥಿಯನ್ನು ಕುರಿತು **"ನೀನು ಯಾವಾಗ ಕರೆದಾಗ ಬರುವೆನು"** ಎಂಬುದಾಗಿ ಹಿಂದಕ್ಕೆ ಕಲ್ಕತ್ತದಲ್ಲಿ ವಚನವಿತ್ತದ್ದನ್ನು ಈಗ ಸಫಲ ಮಾಡಿಕೊಡಬೇಕೆಂದು ಪ್ರಾರ್ಥಿಸಲು ರಾತ್ರಿ ಪೂರ್ವವತ್ ಓರ್ವ ಸ್ತ್ರೀಯು ಬಂದು **'ನಾನು ವಚನವಿತ್ತಂತೆ ಅವಶ್ಯ ನೀನು ಯಾವಾಗ ಎಲ್ಲಿ ಕರೆದರೂ ಬರುವೆನು'** ಅಂತ ಜಾಗೃತ ಸ್ವಪ್ನವಾಗಲು ಮರುದಿವಸ ಸ್ವಲ್ಪ ಪ್ರಯತ್ನದಿಂದಲೇ ಅಮೋಘ ನೀರು ಬಂದು ಇಡೀ ಊರಿಗೆ ಪೂರೈಸುವಂತಾಗಿ ಅನೇಕ ಜನರಿಗೆ ಪ್ರಯೋಜನವಾಯಿತು. ಇದರಿಂದ ಈ ಮಹನೀಯರು **ಗಂಗಾರಾಧಕರೆಂದು** ಪ್ರತಿಯೊಬ್ಬರಿಗೆ ಪ್ರೀತಿ ಪಾತ್ರರಾದರು.

೧೨. ಮಂತ್ರಾಲಯದಲ್ಲಿ ಶೇಷಗಿರಿರಾಯನಿಗೆ ಅನುಗ್ರಹ.

ಮುಂದೆ, ಕೆಲವು ದಿನಗಳಾದ ಮೇಲೆ ಮಂತ್ರಾಲಯಕ್ಕೆ ಹೋದರು. ಅಲ್ಲಿ ಗದಗ ಶೇಷಗಿರಿರಾಯನೆಂಬ ಧಾರವಾಡ ಗೃಹಸ್ಥನು ಸೇವೆ ಮಾಡುತ್ತಿದ್ದನು. ಆತನು ಧಾರವಾಡದಲ್ಲಿ ಪೋಲೀಸ್ ಖಾತೆಯಲ್ಲಿ ನೌಕರನಾಗಿದ್ದನು. ಆತನು ವಿರಕ್ತನಾಗಿ ಆ ನೌಕರಿಯನ್ನು ಪರಿತ್ಯಾಗ ಮಾಡಿ ಆಜನ್ಮ ಶ್ರೀ ರಾಘವೇಂದ್ರ ತೀರ್ಥರ ಶ್ರೀಪಾದಂಗಳವರ ಸನ್ನಿಧಿಯಲ್ಲಿ ಸೇವಾಕ್ಕೆಂದು ಕೇವಲ ಬ್ರಹ್ಮಚರ್ಯ ವ್ರತದಿಂದ ಕಾಲ ಕಳೆಯುತ್ತಿದ್ದನು. ಈ ಶೇಷಗಿರಿರಾಯನು ಗುರೂಪದೇಶಾಕಾಂಕ್ಷಿಯಾಗಿದ್ದನು. ಶ್ರೀ ರಾಘವೇಂದ್ರತೀರ್ಥಶ್ರೀಪಾದಂಗಳವರು ವೃಂದಾವನಾಸ್ಥರಾಗಿರೋಣದರಿಂದ ಸಾಕ್ಷಾತ್ ಉಪದೇಶಕ್ಕೆ ಆಸ್ಪದವಿಲ್ಲದ್ದರಿಂದ ಅಲ್ಲಿಗೆ

(ಮಂತ್ರಾಲಯಕ್ಕೆ) ಬರುವ ಪಂಡಿತರು ಮೊದಲಾದ ಅನೇಕ ಜನರಲ್ಲಿ ಯಾರಿಂದಲಾದರೂ ಉಪದೇಶ ಹೊಂದಿ, ಸ್ವಯೋಗ್ಯ ಗುರುಗಳನ್ನಾಗಿ ಮಾಡಿಕೊಳ್ಳುವುದೆಂದು ಮನಸ್ಸಿನಲ್ಲಿ ಚಿಂತನ ಮಾಡುತ್ತಿದ್ದನು. ಈ ಸಂದರ್ಭದಲ್ಲಿ ಇವರು (ಈ ಚರಿತ್ರನಾಯಕರು) ಅಲ್ಲಿಗೆ ಹೋದಾಗ ಇವರಲ್ಲಿ ಆಡಂಬರವಿಲ್ಲದಿರೋಣದರಿಂದ ಇವರ ವ್ಯಕ್ತಿತ್ವವು ವ್ಯಕ್ತವಾಗಲಿಲ್ಲ. ಆಗ ಇವರ ಆಚರಣೆಯು ಯಾವ ರೀತಿ ಇತ್ತೆಂದರೆ, ಪ್ರಾತಃಕಾಲ ಸ್ನಾನಾಹ್ನಿಕ ತೀರಿಸಿಗೊಂಡು ತಮ್ಮ ಪೂಜಾ ನೈವೇದ್ಯಾದಿಗಳನ್ನು ಮುಗಿಸಿ ಗುರುರಾಜರ ದರ್ಶನ ತೆಗೆದುಕೊಂಡು ಬಂದು ಭೋಜನ ಮಾಡಿದ ನಂತರ ನಿರ್ಜನವಾದ ಮೇಲೆ ಪುನಃ ಗುಡಿಗೆ ಹೋಗಿ ಪ್ರಾಣ ದೇವರ ಗುಡಿಯ ಮುಂದೆ ಭಾಗವತ ಪಾರಾಯಣ ಮಾಡುತ್ತ ಸಾಯಂಕಾಲದವರೆಗೆ ಗುಡಿಗೆ ಸೇವಕರು ಬರುವವರೆಗೂ ಇದ್ದು, ತದನಂತರ ನದಿಗೆ ಹೋಗಿ ಸಾಯಂಕಾಲ ಸ್ನಾನ ಮಾಡಿ ಸಂಧ್ಯಾವನ್ನು ಆಚರಿಸಿ, ರಾಯರ ದರ್ಶನ ತೆಗೆದುಕೊಂಡು ತಾವಿದ್ದ ಛತ್ರಕ್ಕೆ ಬಂದುಬಿಡುತ್ತಿದ್ದರು. ಗುಡಿಯಲ್ಲಿ ಮಂಗಳಾರತೆ ವಗೈರೆ ಮುಗಿದ ನಂತರ ಅರ್ಚಕರೇ ಮೊದಲಾದ ಸರ್ವರೂ ತಮ್ಮ ತಮ್ಮ ಮನೆಗಳಿಗೆ ಹೋದ ನಂತರ ಪುನಃ ಗುಡಿಗೆ ಬಂದು (ಈಗಿನಂತೆ ಬಾಗಿಲು ಹಾಕುತ್ತಿರಲಿಲ್ಲ.) ನಾಲ್ಕು ಸ್ತಂಭದ ಉನ್ನತ ಚಿಕ್ಕ ಮಂಟಪದಲ್ಲಿ ಅರುಣೋದಯ ಪರಿಯಂತರ ಧ್ಯಾನ ಮಾಡುತ್ತ ಕುಳಿತುಗೊಂಡು ಜನರು ಬರುವದಾರಂಭವಾದ ಕೂಡಲೆ ಮನೆಗೆ ಬರುತ್ತಿದ್ದರು. ಈ ರೀತಿ ಒಂದು ತಿಂಗಳ ಮೇಲೆಯಾದರೂ ಇವರ ಬಗ್ಗೆ ವಿಶೇಷ ಜ್ಞಾನ ಯಾರಿಗೂ ಉಂಟಾಗಿರಲಿಲ್ಲ. ಈ ಶೇಷಗಿರಿರಾಯನ ಮನಸ್ಸಿನ ವಿಚಾರಕ್ಕನುಸರಿಸಿ "ರಾತ್ರಿ ಏಕಾಕಿಗಳಾಗಿ ನಮ್ಮ ಸನ್ನಿಧಾನದಲ್ಲಿ ಯಾರಿರುತ್ತಾರೋ, ಅವರನ್ನು ಗುರುಗಳನ್ನಾಗಿ ಮಾಡಿಕೋ" ಎಂಬಂತೆ ಅವನಿಗೆ ಗುರುರಾಜರಿಂದ ಸ್ವಪ್ನಸೂಚನೆ ಯಾಗಲು ಆ ಗೃಹಸ್ಥನು ಆ ದಿನ ರಾತ್ರಿ ಬಂದು ಗುಡಿಯಲ್ಲಿ ನೋಡಲು, ಇವರು ಮಾತ್ರ ಧ್ಯಾನಪರರಾಗಿ ಕುಳಿತಿದ್ದನ್ನು ಕಂಡು ದೂರದಿಂದಲೇ ನಮಸ್ಕರಿಸಿ ಅಲ್ಲಿಯೇ ಆ ಶೇಷಗಿರಿರಾಯನು ಅವರು ಧ್ಯಾನದಿಂದ ಏಳುವವರೆಗೂ ಹಾಗೆಯೇ ನಿಂತಿದ್ದನು. ಇವರು ಧ್ಯಾನ ಮುಗಿಸಿಗೊಂಡು ತಮ್ಮ ಕುಟೀರಕ್ಕೆ ಹೋಗುವಾಗ ಬಂದು ಇವರ ಪಾದಗಳನ್ನು ಗಟ್ಟಿಯಾಗಿ ಹಿಡಿದು ಸಾಷ್ಟಾಂಗ ನಮಸ್ಕಾರ ಮಾಡಿದನು. ಈ ಚರಿತ್ರ ನಾಯಕರು "ನೀನುಯಾರಪ್ಪ" ಅಂತ ಪ್ರಶ್ನೆ ಮಾಡಿದರು. ಆಗ ಇವನು, ತಾನು ಮಂತ್ರಾಲಯಕ್ಕೆ ಬಂದ ವೃತ್ತಾಂತವನ್ನೆಲ್ಲವನ್ನು ಚಾಚೂ ತಪ್ಪದಂತೆ ನಿವೇದಿಸಿಗೊಂಡನು. 'ಸರಿ ಒಳ್ಳೆ ಕೆಲಸ ಮಾಡುತ್ತಿದ್ದಿ' ಅಂತ ಪ್ರಶಂಸಾ ಮಾಡುತ್ತ ನಿತ್ಯದಂತೆ ಸೇವಾದಿಗಳನ್ನು ಮಾಡಿಕೊಂಡು ಹೋಗು ಎಂದು ಹೇಳಿದರು. ಪುನಃ ಆ ರಾತ್ರಿ ಬಂದನು. ಇವರು ಯಥಾಪ್ರಕಾರ ಆ ಮಂಟಪ ದಲ್ಲಿ ಧ್ಯಾನಸ್ಥರಾಗಿದ್ದರು. ಆ ದಿನವೂ ಈ ಗೃಹಸ್ಥನು ಬಂದು ಯಥಾಪ್ರಕಾರ ದೂರದಲ್ಲಿ ನಿಂತು ಕೊಂಡಿದ್ದು, ಅರುಣೋದಯ ಸಮಯಕ್ಕೆ ಇವರು ಎದ್ದು ಹೋಗುವಾಗ ಬಂದು ನಮಸ್ಕಾರ ಮಾಡಿದನು. ಈ ದಿನ ಇವರು ಯಾವ ಮಾತನಾಡಲಿಲ್ಲ. ಇದರಂತೆ ಒಂದು ವಾರ ಗತಿಸಿತು. ಒಂದು ವಾರ ನಿದ್ರಾಕಾಣದ ಕಣ್ಣುಗಳು ಕೆಂಪಾಗಿದ್ದಾಗ್ಯೂ ಲೆಕ್ಕಿಸದೆ ತನ್ನ ವೇದನೆಯನ್ನು ಹೊರಗಡೆ ತೋರಿಗೊಡದೆ "ಗದ್ಗದ ಸ್ವರದಿಂದ ಇವರ ಕಾಲುಗಳನ್ನು ಹಿಡಿದು

ಕಣ್ಣೀರಿನಿಂದ ಅವರ ಪಾದಗಳನ್ನು ತೊಳೆದು ತನ್ನ ಸ್ವಪ್ನವನ್ನು ತಿಳಿಸುತ್ತ ಈ ಅಲ್ಪ ಸೇವಕನನ್ನು ಉದ್ಧರಿಸಬೇಕು" ಎಂದು ಪರಿಪರಿಯಾಗಿ ಬೇಡಿಕೊಂಡನು. 'ನಿನಗೆ ಹೇಳಿದಂತೆ ಶ್ರೀ ಗುರುರಾಜರು ನನಗೂ ಹೇಳಿದರೆ ನಾನು ಒಪ್ಪುತ್ತೇನೆ' ಅಂತ ಉತ್ತರ ಕೊಟ್ಟರು. ಅದಕ್ಕೆ ಆತನು ಪುನಃ ರಾಯರನ್ನು ಪ್ರಾರ್ಥಿಸುವುದರಿಂದ ಆ ದಿನ ಇವರಿಗೂ ಗುರುರಾಜರು ಸ್ವಪ್ನದಲ್ಲಿ, ಆ ಗೃಹಸ್ಥನಿಗೆ ಗುರೂಪದೇಶ ಕೊಡಲು ಸೂಚಿಸಿದರು. ಮರುದಿನ ಉಪದೇಶ ಕೊಟ್ಟರು. ತದಾರಭ್ಯ ಈ ಗೃಹಸ್ಥನು ಶಿಷ್ಯನಾಗಿ ಅನೇಕ ತತ್ತ್ವವಿಚಾರಗಳ ಶ್ರವಣ ಮಾಡಿದನು. ಈತನಿಗೆ ಮಂತ್ರೋಪದೇಶ ಮಾಡೋಣದರಿಂದ ಆಗ ಮಂತ್ರಾಲಯಕ್ಕೆ ಹೋದ ಕಾರ್ಯ ಮುಗಿದಂತಾಯಿತು. ಅಲ್ಲಿಂದ ಆದವಾನಿಗೆ ಬಂದು ಸೇರಿದರು. ಇದರಿಂದ ಇವರು ಶಿಷ್ಯ, ಭಕ್ತಾದಿಗಳನ್ನು ಉದ್ಧರಿಸುವುದಗೋಸ್ಕರವಾಗಿಯೇ ಈ ಧರೆಗೆ ಬಂದಂತಾಯಿತಲ್ಲವೆ! ಅಷ್ಟಲ್ಲದೆ ತಮ್ಮ ಸೇವಾದಿಂದ ಶ್ರೀ ಗುರುರಾಜರು ಸಂತೋಷಪಟ್ಟು ಶ್ರೀ ಅಪ್ಪಣ್ಣಾಚಾರ್ಯರಿಗೆ ದರ್ಶನವಿತ್ತಂತೆ ಇವರಿಗೂ ಪ್ರೇಮಪೂರಿತರಾಗಿ ದರ್ಶನ ಕೊಟ್ಟರು.

೧೩. ಆಸ್ತಿ ಶ್ರೀರಾಮದೇವರದ್ದೆಂದರು.

ಕೆಲಕಾಲಾನಂತರ ಆದವಾನಿಗೆ ಉತ್ತರಾದಿಮಠವು ದಿಗ್ವಿಜಯ ಮಾಡಿತು. ಆಗಿನ ಕಾಲದಲ್ಲಿ ಮೋಟಾರು ಇಲ್ಲದೆ ಮೇನೆ, ಬಂಡಿಗಳು, ಆನೆ, ಕುದುರೆ ಇತ್ಯಾದಿ ವೈಭವೋಪೇತ ನೂರಾರು ಜನ ಸಮೇತ ಸಂಚಾರ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಪ್ರಥಮ ದಿವಸದ ಭಿಕ್ಷಾ ಶ್ರೀಮಂತನಾದ ತಾನಾಜಿ ರಂಗರಾಯನ ಮನೆಯಲ್ಲಿ ಗೊತ್ತಾಗಿತ್ತು. ಆ ದಿನ ಎಲ್ಲ ಜನರಿಗೂ ಆಮಂತ್ರಣವಿತ್ತು. ಇವರಿಗೂ ಪ್ರತ್ಯೇಕವಾಗಿಯೇ ಆಮಂತ್ರಿಸಿದ್ದರು. ಇವರು ಹೋಗಿ ಆಗಿನ ಶ್ರೀಗಳವರಾದಶ್ರೀ**ಸತ್ಯಜ್ಞಾನ**ತೀರ್ಥರಿಗೆ ಪ್ರಣಾಮ ಮಾಡಿದರು. ಅಷ್ಟರಲ್ಲಿ ದಿವಾನರಾಗಿದ್ದ ಸೇತುರಾಮಾಚಾರ್ಯರು ಬಂದು (ಪೂರ್ವದಲ್ಲಿ ಕುಕನೂರು ಅಡವಿ ಆಚಾರ್ಯರು ಮಾಡುವ ಯಜ್ಞ ಕಾಲದಲ್ಲಿ ರಾಯಚೂರಲ್ಲಿ ಈ ದಿವಾನರಿಗೂ, ಈ ಚರಿತ್ರ ನಾಯಕರಿಗೂ ಆದ ಕಲಹವನ್ನು ವಾಚಕರು ಬಲ್ಲರಷ್ಟೆ. ಆ ಮೂಲಕ ಇವರಲ್ಲಿ ವೈಮನಸ್ಸು ವಿಕೋಪವಿತ್ತು.) ಎರಡನೇ ಮಾತಾಡದೆ, ಮೊದಲಿಗೆ ಉತ್ತರಾದಿಮಠದ ಬಗ್ಗೆ ಜಮೀನು ನಿಮ್ಮ ಸ್ವಾಧೀನವಾಗಿ ಉಳಿದಿದೆ. ಆ ಜಮೀನು ನಿಮಗೆ ಹೇಗೆ ಬಂತು ಎಂಬುದರ ಬಗ್ಗೆ ಏನಾದರೂ ಆಧಾರವಿದೆಯೇ? ಇದ್ದರೆ ಯಾವ ಆಧಾರ? ಅಂತ ರಭಸದಿಂದ ನಾಲ್ಕು ಜನರ ಮುಂದೆ ಈ ಚರಿತ್ರ ನಾಯಕರನ್ನು ವಿಚಾರಿಸಿದರು. "ನಿಜ, ಆ ಜಮೀನು ನನ್ನದಾಗಿದ್ದರೆ ಅದನ್ನು ದಾನ ಮಾಡುತ್ತಿದ್ದೆ, ತಾವು ಅಪ್ಪಣೆ ಕೊಡುವಂತೆ ಆ ಜಮೀನು ಮಠದ್ದಾದ್ದರಿಂದ ನಾನು ದಾನ ಹ್ಯಾಂಗೆ ಮಾಡಲಿ?" ಅಂತ ಉತ್ತರ ಕೊಟ್ಟರು. ಹಾಂಗಾದರೆ ಈವರಿಗೂ ಅದರ ಫಲ ಅನುಭವಿಸಬೇಕಾದ ಕಾರಣವೇನಿತ್ತು? ಅಂತ ಕೇಳಿದರು. "ಸ್ವಾಮಿ, ಆ ಜಮೀನು ನನ್ನ ಕಾಲದಲ್ಲಿ ಬಂದದ್ದಲ್ಲ. ಸುಮಾರು ಇನ್ನೂರು ವರ್ಷಗಳ ಪೂರ್ವದಲ್ಲಿದ್ದ ಸ್ವಾಮಿಗಳವರು ನಮ್ಮ ಮನೆತನದವರಿಗೆ ಅನುಗ್ರಹ ಪೂರ್ವಕ ಕೊಟ್ಟಿದ್ದಾರೆ. ಅದು ಆಗಿನಾರಭ್ಯ ಈವರೆಗೂ

ಒಬ್ಬ ಮನೆತನದವರೇ ನಾಲ್ಕಾರು ತಲೆಗಳಿಂದ ಸಾಗುವಳಿ ಮಾಡುತ್ತ ಬಂದಂತೆ ಸಾಗುವಳಿ ಪತ್ರಗಳಿವೆ. ಇದರ ಹೊರತು ಬೇರೆ ಯಾವ ಕಾಗದ-ಪತ್ರದ ಆಧಾರವಿಲ್ಲ" ಅಂತ ಹೇಳಿದರು. 'ಯಾವದಾಸ್ತಿ ದಾನ ಮಾಡಿದ ನೀವು ಈ ಜಮೀನು ಮಾತ್ರ ಯಾಕೆ ಇಟ್ಟುಕೊಂಡಿದ್ದೀರಿ? ಮಠದ ಸೊತ್ತು ಮಠಕ್ಕೆ ಕೊಟ್ಟುಬಿಡಿರಿ' ಅಂತ ಅಂದರು. "ಅವಶ್ಯವಾಗಲಿ, ಆದರೆ ಯಾವ ಮಹನೀಯರೋ ಯಾವ ಕಾರಣದಿಂದ ಅನುಗ್ರಹ ಪೂರ್ವಕ ಕೊಟ್ಟಿದ್ದಾರೋ ಅದನ್ನು ಶ್ವೇತಛತ್ರತ್ವೇನ ತಿಳಿದು ಇಟ್ಟುಕೊಂಡಿದ್ದೇನೆ. ಶ್ರೀ ಹರಿವಾಯುಗಳ ಇಚ್ಛಾಕ್ಕೆ ಬಂದರೆ ಇದನ್ನು ಸ್ವೀಕರಿಸಲಿ" ಅಂತ ಅಂದರು. ತಪ್ಪಿಸಿಕೊಳ್ಳುವುದಕ್ಕಾಗಿ ಶ್ರೀಹರಿ ವಾಯುಗಳ ಮೇಲೆ ಹಾಕುವಿರಿ, ಅದೆಲ್ಲ ಆಗದು, ಈಗಲೆ ಕೃಷ್ಣಾರ್ಪಣ ಪೂರ್ವಕ ನಮಸ್ಕಾರ ಹಾಕಿ ಆ ಜಮೀನು ಮಠಕ್ಕೆ ತಿರುಗಿಕೊಟ್ಟಂತೆ ರಿಜಿಸ್ಟರು ಮಾಡಿಕೊಡಿರಿ ಎಂದು ನುಡಿದರು. "ಸ್ವಾಮಿ ಆ ಜಮೀನು ನನ್ನದಲ್ಲ ಅಂದ ಮೇಲೆ ಅದನ್ನು ಕೃಷ್ಣಾರ್ಪಣ ಪೂರ್ವಕ ದಾನ ಕೊಡುವುದು ಹ್ಯಾಂಗೆ? ಅದಕ್ಕೆ ಈವರೆಗೂ ರಾಮಚಂದ್ರ ದೇವರ ಹೆಸರಿಗೆ ಪಟ್ಟಾಯಿದೆ. ಆ ಜಮೀನಿನ ವಿಷಯದಲ್ಲಿ ಸುಮಾರು ಇನ್ನೂರು ವರುಷಗಳ ಸಾಗುವಳಿ ಪತ್ರಗಳ ಆಧಾರ ಬಿಟ್ಟರೆ ಬೇರೆ ಯಾವ ಆಧಾರವಿಲ್ಲಂತ ವಿಜ್ಞಾಪನ ಮಾಡಿಕೊಂಡಿದ್ದೇನೆ. ಅಂದ ಮೇಲೆ ತಿರುಗಿಕೊಟ್ಟಂತೆ ರಿಜಿಷ್ಟರು ಮಾಡಿಕೊಡು ಎಂಬ ಮಾತು ಹ್ಯಾಂಗೆ ಕೂಡುತ್ತದೆ?" ಅಂತ ಕೇಳಿದರು. "ಆದರೇನಾಯಿತು. ಆ ಜಮೀನು ಮಠಕ್ಕೆ ಬಿಟ್ಟಂತೆ ರಿಜಿಷ್ಟರು ಮಾಡಿಕೊಡು" ಅಂತ ಮತ್ತೆ ಮತ್ತೆ ಪೀಡಿಸುವುದರಿಂದ ಇವರಿಗೆ ಸಹನೆ ಮೀರಿ, ಸಿಟ್ಟಿಗೊಂಡು "ನಾವೇನು ಹಿರಣ್ಯಾಕ್ಷನಂತೆ ಭೂಮಿಯನ್ನು ಸುತ್ತಿಗೊಂಡು ಬಚ್ಚಿಟ್ಟುಗೊಂಡಿಲ್ಲ. ಆ ಜಮೀನು ಆ ಅಡವಿಯಲ್ಲಿಯೇ ಇದೆ. ಶ್ರೀ ರಾಮಚಂದ್ರ ದೇವರ ಹೆಸರಿಗೆ ಪಟ್ಟಾ ಇದೆ. ತಾವು ಸರ್ವತಂತ್ರ ಸ್ವತಂತ್ರರು. ಅದರ ಮೇಲಿನ ಅಭಿಮಾನ ಪರಿತ್ಯಾಗ ಮಾಡಿದ್ದೇನೆ" ಅಂತ ಹೇಳಿದರು. "ಮತ್ತೆ ಮತ್ತೆ ರಿಜಿಸ್ಟರು ಮಾಡಿಕೊಡಿರಿ ಅಂತ ಅನ್ನುತ್ತಿದ್ದೀರಿ. ಆದರೆ ಪ್ರಥಮದಲ್ಲಿ ನನಗೆ ಕೊಟ್ಟಂತೆ ರಿಜಿಷ್ಟರು ಮಾಡಿಕೊಡಿರಿ. ನಂತರ ನಾನು ತಿರುಗಿ ಕೊಟ್ಟಂತೆ ರಿಜಿಸ್ಟರು ಮಾಡಿಸಿಕೊಡುತ್ತೇನೆ." ಅಂತ ಇವರು ಸ್ವಲ್ಪ ಗಟ್ಟಿ ಧ್ವನಿಯಿಂದ ಹೇಳಿದರು. ಈ ಕಪಟ ವಿದ್ಯ ಯಾರಲ್ಲಿ ತೋರಿಸುವಿರಿ? ಅಂತ ಶ್ರೀಪಾದವುತ್ರರು ಗದರಿಸಿದರು. "ಈ ಕಪಟ ವಿದ್ಯ ಹೇಳಿದ ಗುರುಗಳು ತಾವೇ" ಎಂದೆನಲು ಆ ಸೇತುರಾಮಾಚಾರ್ಯರಿಗೆ ಅತೀ ಸಿಟ್ಟು ಬಂದು ಈ ಚರಿತ್ರ ನಾಯಕರನ್ನು ಅತಿಯಾಗಿ ಬೈದರು. ಈ ವಿಷಯವನ್ನು ಕೇಳಿದ ತಾನಾಜಿ ರಂಗರಾಯನು ಇಲ್ಲಿ ನಡೆದ ಚರ್ಚೆಯನ್ನು ಸ್ವಲ್ಪದರಲ್ಲಿಯೆ ಶ್ರೀಗಳವರಿಗೆ ತಿಳಿಸಿದ ಕೂಡಲೆ ಶ್ರೀಗಳವರು ಧಾವಿಸಿ ಬಂದು, ತಮ್ಮ ದಿವಾನರನ್ನು ತಡೆದು ಈ ಚರಿತ್ರ ನಾಯಕರನ್ನು ಸಮಾಧಾನಪಡಿಸಿ ಆ ವಿಷಯವನ್ನು ಅಷ್ಟಕ್ಕೆ ನಿಲ್ಲಿಸಿದರು. ಮುಂದೆ ನಾಲ್ಕಾರು ದಿವಸವಿದ್ದು, ಮಠವು ಆದವಾನಿಯಿಂದ ದಕ್ಷಿಣ ಪ್ರಾಂತಕ್ಕೆ ಹೋಗಿ ಪುನಃ ಮೂರು ವರ್ಷಗಳ ನಂತರ ಮಠವು ಆದವಾನಿಗೆ ಬಂತು. ಈ ಮೂರು ವರ್ಷ ಅವಧಿಯಲ್ಲಿ ಮತ್ತೆ ರಾಯರಲ್ಲಿ ಸೇವಾಮಾಡಿ ಆದವಾನಿಗೆ ಬಂದ ನಂತರ ಇವರಲ್ಲಿ ಶಿಷ್ಯ ಮಂಡಲಿ ಹೆಚ್ಚಿತು.

ಅಥ ಚತುರ್ಥೋಧ್ಯಾಯಃ

೧೪. ಶ್ರೀಸತ್ಯಜ್ಞಾನತೀರ್ಥರಿಗೆ ವೈಭವದ ಭಿಕ್ಷಾಸಮರ್ಪಣೆ.

ಆಗಲೂ ಸ್ವತಃ ಶ್ರೀ ಸತ್ಯಜ್ಞಾನತೀರ್ಥರು ಈ ಮುತ್ತಿಗಿ ಆಚಾರ್ಯರನ್ನು ಕಂಡು ಆ ಜಮೀನಿನ ವಿಷಯವನ್ನು ಪರಿಷ್ಕಾರ ಮಾಡಿರಿ ಎಂದು ಕೇಳಿದರು. 'ಸ್ವಾಮಿ! ಆ ಜಮೀನಿನ ವಿಷಯ ಹೋದಸಲವೇ ಪರಿಷ್ಕಾರ ಮಾಡಿದ್ದೇನೆ, ಪುನಃ ಮಾಡತಕ್ಕದ್ದೇನಿದೆ? ಆಗ ಹೇಳಿದಂತೆ ಆ ಜಮೀನನ್ನು ಪರಿತ್ಯಾಗ ಮಾಡಿದ್ದೇನೆ' ಅಂತ ಈಗಲೂ ಹೇಳುತ್ತೇನೆ. ಹಾಂಗಾದರೆ, ಈ ಮೂರು ವರ್ಷದ ಗುತ್ತಿಗೆ ಹಣ ಸ್ವೀಕರಿಸಿದ್ದೀರಷ್ಟೆ? ಅಂತ ಶ್ರೀಗಳವರು ಕೇಳಿದರು. ಆ ರೈತನು ಪ್ರತಿ ವರ್ಷದಂತೆ ಈವರೆವಿಗೂ ಅರವತ್ತು ರೂಪಾಯಿಯಂತೆ ಮೂರು ವರ್ಷ ತಂದು ಕೊಟ್ಟಿದ್ದಾನೆ ಅಂತ ಹೇಳಿದರು. ಹಾಂಗಾದರೆ ಆಗಲೇ ಅಭಿಮಾನ ಪರಿತ್ಯಾಗ ಮಾಡಿದ್ದರೆ ಆ ಹಣವನ್ನು ಏತಕ್ಕೆ ತೆಗೆದುಕೊಂಡಿರಿ? ಅಂತ ಸ್ವಾಮಿಗಳು ಕೇಳಿದರು. ತಮ್ಮದಾಗಿಯೇ ನನ್ನಲ್ಲಿಟ್ಟುಕೊಂಡಿದ್ದೇನೆ ಅಂತ ಹೇಳಿದರು. ಹಾಂಗಾದರೆ, "ನಾಳೆ ನಿಮ್ಮಲ್ಲಿಗೆ ಭಿಕ್ಷಾಕ್ಕೆ ಬರುತ್ತೇವೆ, ಅದನ್ನು ಕೊಟ್ಟುಬಿಡಿರಿ" ಅಂತ ಅಂದರು. 'ಹಾಗೆ ಆಗಲಿ' ಅಂತ ಇವರು ಉತ್ತರ ಕೊಟ್ಟರು. ಆ ಪ್ರಕಾರ ವಿಜಯರಾಯರ ಗುಡಿಯಲ್ಲಿ ಭಿಕ್ಷಾ ನಿಶ್ಚಯವಾಯಿತು. ಮರುದಿವಸ ಪ್ರಾತಃಕಾಲ ಮಠವು ಅಲ್ಲಿಗೆ ಬಂತು. ಶ್ರೀಗಳವರು ಮಾತ್ರ ಊರೊಳಗಿನ ಪಾದ ಪೂಜಾದಿಗಳನ್ನು ತೀರಿಸಿಗೊಂಡು ಬರುವಷ್ಟರಲ್ಲಿ ಇತ್ತ ಅಡಿಗೆ ಮಾಡಲಾರಂಭಿಸಿತು. ಮತ್ತು ದೇವತಾರ್ಚನಕ್ಕೆ ಮಂಟಪ ಹಾಕಲಾಯಿತು. ಅಷ್ಟರಲ್ಲಿ ದಿವಾನ ಸೇತುರಾಮಾಚಾರ್ಯರು ಬಂದು "ಇದು ಗೃಹಸ್ಥಾಶ್ರಮಿಗಳು ಸ್ಥಾಪನಾ ಮಾಡಿದ ವಿಗ್ರಹ. ಯತಿಗಳು ದರ್ಶನ ತೆಗೆದುಕೊಳ್ಳಕೂಡದು, ಪ್ರಯುಕ್ತ ಆ ಗರ್ಭಗುಡಿಯ ಬಾಗಿಲು ಮುಚ್ಚಿ ಬೀಗ ಹಾಕು" ಅಂತ ಅಪ್ಪಣೆ ಮಾಡಿದರು. ಅದರಂತೆ ಮಾಡಲಾಯಿತು. ಮತ್ತು ಇವರನ್ನು ಕರೆದು, ಆ ಜಮೀನಿನ ವಿಷಯ ಪರಿಷ್ಕಾರವಾಗಿದೆ ಎಂದು ಸ್ವಾಮಿಗಳವರು ಹೇಳಿದ್ದಾರೆ. ಆ ಪ್ರಕಾರಕ್ಕೆ ರಿಜಿಸ್ಟರು ಮಾಡಿಸಿದ ಪತ್ರಿಕಾ ಎಲ್ಲಿ? ಅಂತ ಕೇಳಿದರು. 'ಸ್ವಾಮಿ, ರಿಜಿಸ್ಟರು ಪತ್ರಿಕಾ ಇಲ್ಲ. ಹೋದಸಲದಂತೆ ಈ ಸಲವೂ ಸ್ವಾಮಿಗಳವರಲ್ಲಿ ವಿಜ್ಞಾಪನ ಮಾಡಿಕೊಂಡೆ. ಅವರು ಅನುಗ್ರಹ ಮಾಡಿ ಈ ದಿನ ಭಿಕ್ಷಾಕ್ಕೆ ಒಪ್ಪಿ ಆ ಮಾತಿನಂತೆ ಯಾವತ್ಪರಿವಾರವನ್ನು ಶ್ರೀ ರಾಮಚಂದ್ರ ದೇವರ ಪೆಟ್ಟಿಗೆಯನ್ನು ಸಹ ಕಳಿಸಿದ್ದಾರೆ' ಅಂತ ಹೇಳಿದರು. 'ಈ ರೀತಿ ಮೋಸಕ್ಕೆ ಒಳಗಾಗುವವರಲ್ಲ ನಾವು. ರಿಜಿಸ್ಟರು ಪತ್ರ ಕೈಗೆ ಬಂದ ಮೇಲೆಯೇ ಪೂಜೆ ಆಗುವುದು. ಇಲ್ಲವಾದರೆ ಇಲ್ಲ' ಅಂತ ಸ್ಪಷ್ಟ ನುಡಿದರು. ಆ ಹೊತ್ತಿಗೆ ಹತ್ತು ಗಂಟೆ ಮೇಲೆ ಆಗಿತ್ತು. ಮುಕ್ಕಾಲು ಭಾಗ ಅಡಿಗೆಯೂ ಆಗಿತ್ತು. 'ದೇವತಾರ್ಚನಕ್ಕೆಂದು ಹಾಕಲಾಗಿದ್ದ ಮಂಟಪವನ್ನು ತೆಗೆದುಕೊಂಡು ಹೋಗು' ಅಂತ ಸೇವಕನಿಗೂ, ಮಾಡಿದ ಅಡಿಗೆಯನ್ನು ಕೆಡಿಸಿ ಹೊರಟು ಹೋಗಿರಿ' ಅಂತ ಅಡಿಗೆಯವರಿಗೂ ಹೇಳುವವರಾದರು. ಅತ್ತ ಸ್ವಾಮಿಗಳವರೇ ಸ್ವತಃ ಅಡಿಗೆ ಮಾಡಲಿಕ್ಕೆ ನಮಗೆ ಪದಾರ್ಥ ಹಾಕಲಿಕ್ಕೆ ಉಗ್ರಾಣಿಕನಿಗೆ, ಮಂಟಪ ಹಾಕುವಂತೆ ಎಡಬಲ ಸೇವಕನಿಗೆ ಆಜ್ಞಾಪಿಸಿದ್ದಾರೆ. ಅದರಂತೆ ನಾವು ಕೆಲಸ ನಡಿಸಿದ್ದೇವೆ. ಈಗ ನೀವು ಈ ರೀತಿ ಆಜ್ಞೆ ಮಾಡುವುದು ನಮಗೆ ಸರಿ ಬೀಳುವುದಿಲ್ಲ. ಎಲ್ಲಿಗೆ ಹೋದರೂ ನಿಮ್ಮದು ಜಗಳವೇ ಆಗಿಬಿಟ್ಟಿದೆ. ಅಕಸ್ಮಾತ್

ತಾವು ಶ್ರೀಗಳವರ ಪಟ್ಟಕ್ಕೆ ಬಂದರೆ ಶಿಷ್ಯ, ಭಕ್ತಾದಿಗಳ ಗೋಳು ಹೇಳತೀರದು ಎಂದು ಅವರ ಶಿಷ್ಯರುಗಳು ಜನರ ಮುಂದೆ ಮಾತಾಡಿದರು. ಇದರಿಂದ ಜನರಿಗೆ ಸಿಟ್ಟು ಬಂದು 'ದಿವಾನರೆ, ತಮಗೆ ಬೇಡವಾಗಿದ್ದರೆ ಇಲ್ಲಿಂದ ಹೊರಟು ಹೋಗಬಹುದು. ನಾವು ಇಲ್ಲಿ ಶ್ರೀರಾಮಚಂದ್ರ ದೇವರ ಪೂಜೆಯನ್ನು ನೆರವೇರಿಸುತ್ತೇವೆ' ಎಂದು ನಾಲ್ಕು ಐದು ಜನರು ಸೊಂಟಕಟ್ಟಿ ನಿಂತರು. ಇಲ್ಲಿಯ ವಿಷಯ ಶ್ರೀಗಳವರಿಗೆ ತಿಳಿದ ಕೂಡಲೆ ಶ್ರೀಗಳವರು ಕೆಲವು ಮನೆಯ ಪಾದ ಪೂಜೆ ಬಿಟ್ಟು ನೇರವಾಗಿ ಇಲ್ಲಿಗೆ ಬಂದರು. ಇಲ್ಲಿಯ ಅಂತಃಕಲಹವನ್ನು ನೋಡಿ ಶ್ರೀಗಳವರು ಎಲ್ಲರನ್ನು ಸಮಾಧಾನಪಡಿಸಿದರು. ದಿವಾನರನ್ನು ಕರೆದು 'ತಾವು ಈ ಜಮೀನಿನ ವಿಷಯಕ್ಕೆ ಇನ್ನು ಮುಂದೆ ತಲೆ ಹಾಕುವುದು ಬೇಡ. ನಾವು ಉಭಯರು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇದರಲ್ಲಿ ಯಾರೂ ಮಾತಾಡಬಾರದು. ಬೇಡವಾದವರು ಇಲ್ಲಿಂದ ಹೊರಡಬಹುದು. ನೀವು ದಿವಾನರಾಗಿದ್ದು ನಮ್ಮ ಮರ್ಯಾದೆಯನ್ನು ತೆಗೆಯುತ್ತಿದ್ದೀರಿ ಅಂತ' ದಿವಾನರಿಗೆ ಸಿಟ್ಟು ಮಾಡಿದರು. 'ಆ ಮುತ್ತಿಗಿ ಆಚಾರ್ಯ ಯಾರೆಂದು ತಿಳಿದಿದ್ದೀರಿ? ಹೋಗಿರಿ ಇಲ್ಲಿಂದ' ಎಂದು ಹೇಳುತ್ತ, ಏ ಗೋವಿಂದಾಚಾರ್ಯ! ಈ ದಿವಾನರನ್ನು ಆ ಕಡೆ ಕರೆದುಕೊಂಡು ಹೋಗಿರಿ ಎಂದು ಹೇಳಿದರು. ಇತ್ತ ಯಥಾಪ್ರಕಾರ ಶ್ರೀಗಳವರು ಸ್ನಾನ ಪೂಜಾದಿಗಳನ್ನು ತೀರಿಸಿ, ಒಂದು ಸಾವಿರ ಜನರಿಗೆಲ್ಲರಿಗೂ ತೀರ್ಥಕೊಟ್ಟರು. ಮೊದಲ ಪಂಕ್ತಿ ಭೋಜನವಾಯಿತು. ಆ ಸಮಯದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದರಿಂದ ಶ್ರೀಗಳವರಿಗೆ ಕೂಡಲು ಸ್ಥಳವಿಲ್ಲದಂತಾಯಿತು. ಎಲ್ಲಾ ಕಡೆ ಎಂಜಲ ಎಲೆ ಇದ್ದವು..ಆಗ ಶ್ರೀಗಳವರೇ ಸ್ವತಃ ಬೀಗ ಹಾಕಿದ ಗುಡಿಯ ಬಾಗಿಲನ್ನು ತೆಗೆಸಿದರು. ಏತಕ್ಕಾಗಿ ಈ ಗುಡಿ ಬಾಗಿಲು ಹಾಕಿದ್ದಾರೆ? ಎಂದು ಪ್ರಶ್ನಿಸಿದರು. 'ಇದು ವಿಜಯದಾಸರಿಂದ ಸ್ಥಾಪಿಸಲ್ಪಟ್ಟ ಪ್ರಾಣ ಪ್ರತೀಕದ ಗರ್ಭಗುಡಿ, ಇದು ಗೃಹಸ್ಥಾಶ್ರಮಿ ಸ್ಥಾಪಿಸಿದ್ದು, ಯತಿಗಳು ದರ್ಶನ ಮಾಡಬಾರದು. ಪ್ರಯುಕ್ತ ಬಾಗಿಲು ಮುಚ್ಚಿ ಬೀಗ ಹಾಕಬೇಕು ಅಂತ ದಿವಾನರು ಅಪ್ಪಣೆ ಮಾಡಿದ್ದರು. ಆದ್ದರಿಂದ ಬೀಗ ಹಾಕಲಾಗಿದೆ' ಅಂತ ವಿಜ್ಞಾಪಿಸಿಗೊಂಡರು. ಎಲ್ಲಿ ಹೋದರು ಇವರು ಕಲಾಪ ತೆಗೆದು, ಜನರನ್ನು ಕ್ಷೋಭಗೊಳಿಸುತ್ತಾರೆ. ಅವರ ಸ್ವಭಾವಕ್ಕೆ ಉಪಾಯವಿಲ್ಲ ವೆಂದರು. 'ಈಗ ನಾವು ಹೇಳುತ್ತೇವೆ, ಬಾಗಿಲು ತೆರೆಯಿರಿ. ಅಲ್ಲಿ ಕೂತುಕೊಳ್ಳುತ್ತೇವೆ' ಅಂತ ಅಪ್ಪಣೆ ಮಾಡಿದರು. 'ಮಹಾದಾಜ್ಞಾ' ಅಂದು ಬಾಗಿಲು ತೆರೆದರು. ಆಗ ಗರ್ಭಗುಡಿಯಲ್ಲಿ ಪ್ರವೇಶ ಮಾಡುವಾಗ ಅವರ ಶಾಟಿಯು ಕಾಲಿಗೆ ಸಿಕ್ಕು ಪ್ರಾಣದೇವರ ಪಾದಕ್ಕೆ ಹಣೆಹತ್ತುವಂತೆ ಉದ್ದಕ್ಕೆ ಬಿದ್ದುಬಿಟ್ಟರು. ಕೂಡಲೆ ಎದ್ದು 'ಈವರೆಗೂ ದರ್ಶನ ತೆಗೆದುಕೊಳ್ಳದ ಅಪರಾಧಕ್ಕೆ ಈ ಪ್ರಾಯಶ್ಚಿತವಾಯಿತು' ಎಂದು ಹತ್ತು ರೂಪಾಯಿಗಳನ್ನು ಇಟ್ಟು ಮಂಗಳಾರ್ತಿಯನ್ನು ತಾವೆ ಮಾಡಿದರು. ಆ ಸಾಯಂಕಾಲ ಆ ಜಮೀನು ಮಾಡತಕ್ಕ ರೈತನನ್ನು ಕರೆಸಿ 'ಇನ್ನು ಮೇಲೆ ನಮಗೆ ಕೊಡತಕ್ಕ ಸಾಗುವಳಿ ಹಣವನ್ನು ಮಠಕ್ಕೆ ಕೊಡು, ಪ್ರತಿ ವರ್ಷವು ಮಠವೇ ಬರಲಾರದು, ಅವರಿಂದ ಅಧಿಕಾರ ಹೊಂದಿ ಯಾರಾದರು ಬರುವರು. ಅವರಿಗೆ ಹಣ ಮುಟ್ಟಿಸಿ ರಸೀದಿ ತೆಗೆದುಕೊ' ಅಂತ ಶ್ರೀಗಳವರ ಸಮಕ್ಷಮ ಆ ರೈತನಿಗೆ ಹೇಳಿ, ಆ ವಿಷಯವನ್ನು ಅಲ್ಲಿಗೆ ಮುಗಿಸಿಬಿಟ್ಟರು.

೧೫. ಸೇವೆಯಿಂದ ಸುಬ್ಬರಾಯ ಸುಖಿಸಿದ.

ಮುಂಬಯಿ ಇಲಾಖೆಯ ರತ್ನಾಗಿರಿ ಜಿಲ್ಲೆಯ ಕಲೆಕ್ಟರ್ ಕಚೇರಿಯಲ್ಲಿ ತಹಸೀಲದಾರನಾಗಿದ್ದ 'ಸುಬ್ಬರಾವ್ರ ಕುಲಕರ್ಣಿ' ಎಂಬ ಧಾರವಾಡ ಜಿಲ್ಲೆಯ ಪಶುಪತಿಹಾಳ ಗ್ರಾಮಸ್ಥನ್ನು ಸಕುಟುಂಬನಾಗಿ ಮಂತ್ರಾಲಯಕ್ಕೆ ಸೇವಾ ಮಾಡಲಿಕ್ಕೆ ಬಂದನು. ಇವನು ತನ್ನ ದೇಹಾರೋಗ್ಯಕ್ಕೋಸ್ಕರ ಶ್ರೀ ರಾಘವೇಂದ್ರ ತೀರ್ಥರಲ್ಲಿ ಸೇವಾ ಮಾಡುತ್ತಿರುವಾಗ ಅವರಿಗೆ ಈ ಮುತ್ತಿಗಿ ಆಚಾರ್ಯರಲ್ಲಿ ಹೋಗು' ಅಂತ ಸ್ವಪ್ನವಾಯಿತು. ಮರುದಿನ ಗದಗ ಶೇಷಗಿರಿರಾಯರನ್ನು ಕಂಡು ರಾತ್ರಿ ಬಿದ್ದ ಸ್ವಪ್ನವನ್ನು ಹೇಳಿಕೊಂಡನು. ಆಗ ಆ ಶೇಷಗಿರಿರಾಯರು ತನಗೂ ಬಿದ್ದ ಸ್ವಪ್ನದ ವಿಷಯವನ್ನು ಈತನ ಮುಂದೆ ಹೇಳಿಕೊಂಡನು. ಈರ್ವರು ಸ್ವಪ್ನದ ಅರ್ಥವನ್ನು (**ಪಶು** ಎಂದರೆ **ಎತ್ತು**, **ಪತಿ** ಎಂದರೆ **ಒಡೆಯ**, **ಹಾಳ** ಎಂದರೆ **ಗ್ರಾಮ**) ಹೀಗೆ ಪಶುಪತಿಹಾಳ ಗ್ರಾಮಾಧಿಕಾರಿ ಎಂದು ಶೇಷಗಿರಿರಾಯನು ಈ ಸ್ವಪ್ನದ ಅರ್ಥವನ್ನು ಬಿಡಿಸಿ ಹೇಳಿದಾಗ ಆ ಸುಬ್ಬರಾಯನು ನಕ್ಕನು. ಈ ಉಭಯರ ಸ್ವಪ್ನವು ಏಕಾರ್ಥವಾಗಿರುವದರಿಂದ ಆದವಾನಿಗೆ ಹೋಗುವುದೆಂದು ಇಬ್ಬರು ಮಾತಾಡಿಕೊಂಡು, ಆ ದಿನ ರಾಯರಲ್ಲಿ ಹಸ್ತೋದಕವನ್ನು ತೀರಿಸಿ, ಉಭಯರು ಈ ಚರಿತ್ರ ನಾಯಕರನ್ನು ಕಾಣಲು ಆದವಾನಿಗೆ ಬಂದರು. ಮರುದಿನ ಸುಬ್ಬರಾಯನು ಶಾಂತಿ ಹಾಕಿ ಶಿಷ್ಯನಾದನು. ಇವರಲ್ಲಿ ಒಂದು ತಿಂಗಳು ಸೇವಾ ಮಾಡೋಣದರಿಂದ ವ್ಯಾಧಿಯೆಲ್ಲ ಪರಿಹಾರವಾಗಿ ಸುಖದಿಂದ ರತ್ನಾಗಿರಿಗೆ ಹೋಗಿ ತನ್ನ ಉದ್ಯೋಗದಲ್ಲಿ ಸೇರಿದನು. ಈತನು ಕ್ರಮೇಣ ತಹಶೀಲ್ದಾರ ಪದವಿಯಿಂದ ಡೆಪ್ಯೂಟಿ ಕೆಲಕ್ಟರ್‌ನಾಗಿ ಪೆನ್‌ಸೆನ್ ತೆಗೆದುಕೊಂಡು ಸ್ವಗ್ರಾಮದಲ್ಲಿ ಬಹುಕಾಲ ಹರಿವಾಯು ಗುರುಗಳ ಸೇವಾಮಾಡುತ್ತ ಸದಾಚಾರ ಶೀಲನಾಗಿ ಕಾಲಕಳೆಯುತ್ತ ಕಾಲವಶನಾದನು.

೧೬. ಅಮಿತವಿಕ್ರಮರಾಯ ಅಮಿತಾನಂದ ಪೊಂದಿದ.

ಕೆಲವು ಕಾಲದ ನಂತರ ಶೇಲಂ ಜಿಲ್ಲೆಯ ನಾಮಕಲ್ ಗ್ರಾಮವಾಸಿಯಾದ ಕಾವೇರಿ ತೀರದ ಜಹಗೀರದಾರ (ಮಿರಾದಾರ)ನಾದ '**ಅಮಿತ ವಿಕ್ರಮರಾಯ**'ನೆಂಬ ಗೃಹಸ್ಥನು ಮಂತ್ರಾಲಯದಲ್ಲಿ ಸೇವಾ ಮಾಡುತ್ತಿದ್ದನು. ಆಗ ಇವನಿಗೆ 'ಶ್ರೀ ಮುತ್ತಿಗಿ ಆಚಾರ್ಯರ ಬಳಿ (ಆದವಾನಿ)ಗೆ ಹೋಗು' ಎಂದು ಮಂತ್ರಾಲಯ ಪ್ರಭುಗಳು ಸ್ವಪ್ನದಲ್ಲಿ ತಿಳಿಸಿದ್ದರಿಂದ ಮರುದಿವಸ ಆ ಮಹನೀಯರನ್ನು ಹುಡಿಕಿಕೊಂಡು ಕೆಲವರನ್ನು ವಿಚಾರಿಸಿ ವಿಜಯರಾಯರ ಕಟ್ಟಿಗೆ ಬಂದು, 'ಶ್ರೀ ಮುತ್ತಿಗೆ ಆಚಾರ್ಯರು ಇದ್ದಾರೇನು?' ಎಂದು ಆ ಮುತ್ತಿಗಿ ಆಚಾರ್ಯರನ್ನೇ ವಿಚಾರಿಸಿದನು. ಆಗ ಆಚಾರ್ಯರು ಭುಜದ ಮೇಲೆ ಒಂದು ಬಿಂದಿಗಿ, ಕೈಯಲ್ಲಿ ಒಂದು ಬಿಂದಿಗಿಯನ್ನು ಹಿಡಿದುಕೊಂಡು ಎದುರಿಗೆ ಬಂದು 'ಆಚಾರ್ಯರು ಇಲ್ಲ, ಹೊರಗೆ ಹೋಗಿದ್ದಾರೆ' ಎಂದು ಉತ್ತರ ಕೊಟ್ಟರು. ಆಗ ಈ ಗೃಹಸ್ಥನು ಹೊರಗಿನ ಕಟ್ಟೆಯ ಮೇಲೆಯೇ ತನ್ನ ಗಂಟನ್ನು ಇಟ್ಟುಗೊಂಡು ಅವರ ಬರುವಿಕೆಯನ್ನು ನಿರೀಕ್ಷಿಸತೊಡಗಿದನು. ಆತನು ಯಥಾಪ್ರಕಾರ ಪುನಃ ಸ್ವಲ್ಪ ಹೊತ್ತಾದ ಮೇಲೆ ಆಚಾರ್ಯರನ್ನು ಮತ್ತೆ ಕೇಳಿದನು.

'ಅವರು ಗ್ರಾಮಾಂತರದಲ್ಲಿದ್ದಾರೆಂದು' ಉತ್ತರ ಕೊಟ್ಟರು. "ಅವರು ಯಾವಾಗ ಬರುತ್ತಾರೆ?" ಅಂತ ಕೇಳಿದನು. 'ಅವರ ತಮ್ಮ ಇಚ್ಛಾಕ್ಕೆ ಬಂದಾಗ ಬರುತ್ತಾರೆಂದು' ಹೇಳಿದರು. ಸರಿ ಎಂದು ಮತ್ತೆ ನಿರೀಕ್ಷಿಸುತ್ತ ಕುಳಿತನು. ಸುಮಾರು ಹತ್ತು ಗಂಟೆ ಆದನಂತರ ತಾವು ಸ್ನಾನ ಮಾಡಿ, ಈ ಗೃಹಸ್ಥನಿಗೂ ಸ್ನಾನ ಮಾಡಲು ಹೇಳಿದರು. 'ಮುತ್ತಿಗಿ ಆಚಾರ್ಯರ ದೆಸೆಯಿಂದಲೇ ಬಂದಿದ್ದೇನೆ, ಪ್ರಥಮದಲ್ಲಿ ಅವರ ದರ್ಶನ ತೆಗೆದುಕೊಂಡು ತದನಂತರ ಸ್ನಾನಾದಿಗಳನ್ನು ಮಾಡುವೆನು' ಎಂದು ಹಾಗೆ ಕುಳಿತನು. ಇವರು ತಮ್ಮ ದೇವತಾರ್ಚನ ಮುಗಿಸಿ ನೈವೇದ್ಯ ಸಮಯದಲ್ಲಿ ಪುನಃ ಆ ಗೃಹಸ್ಥನಿಗೆ ಸ್ನಾನ ಮಾಡಲು ಹೇಳಿದರು. ಆಗಲೂ ಕೇಳದೆ ಬಂದ ಕಾರ್ಯವಾಗಲಿಲ್ಲವೆಂದು ಖಿನ್ನನಾಗಿ ಗಂಟು ತೆಗೆದುಕೊಂಡು ಪುನಃ ಮಂತ್ರಾಲಯಕ್ಕೆ ಹೋದನು. ಇದರಂತೆ ಎರಡು ಮೂರು ದಿವಸ ಬಂದು ಕೇಳುವುದು ಮತ್ತೆ ಮಂತ್ರಾಲಯಕ್ಕೆ ಹೋಗುವುದು ನಡೆಯಿತು. ೩ನೇ ದಿವಸ ಬಹಳ ದುಃಖದಿಂದ ವ್ಯಸನಗೊಂಡು ರಾತ್ರಿ ಮಲಗುವ ಮುನ್ನ ಗುರು ರಾಜರನ್ನು ಹೀಗೆ ಪ್ರಾರ್ಥಿಸಿದನು "ತಾವು ಹೇಳಿದಂತೆ ಆದವಾನಿಗೆ ಹೋದೆ, ಆ ಮಹನೀಯರಾದ ಆಚಾರ್ಯರನ್ನು ಕಾಣುವ ಭಾಗ್ಯ ನನಗಾಗಲಿಲ್ಲವೆಂದು" ಕಣ್ಣು ತುಂಬ ನೀರು ತಂದುಕೊಂಡು ಹಾಗೆಯೇ ಮಲಗಿಬಿಟ್ಟನು. ಸ್ವಪ್ನದಲ್ಲಿ ಗುರುರಾಜರು "ನಾಳೆ ಹೋಗು, ಅವರು ಸಿಗುವರಲ್ಲದೆ, ನಿನ್ನ ಮನೋರಥವನ್ನು ನೆರವೇರಿಸುವರು" ಎಂದು ತಿಳಿಸಿದರು. ಅದರಂತೆ ಮರುದಿವಸ ಬಂದನು. ಆ ಸಮಯಕ್ಕೆ ವೆಂಕೋಬಾಚಾರ್ಯವೆಂಬಾತನು ಭೇಟಿ ಆಗಿ, ನಿಮ್ಮ ಊರು ಯಾವುದು? ಯಾತಕ್ಕಾಗಿ ಬಂದಿದ್ದೀರಿ? ಅಂತ ಕೇಳಲು, ಆ ಗೃಹಸ್ಥನು ತಾನು ಬಂದ ವೃತ್ತಾಂತವನ್ನೆಲ್ಲ ತಿಳಿಸಿದನು. ಈ ಮಾತಿಗೆ ವೆಂಕೋಬಾಚಾರ್ಯರು ಆಶ್ಚರ್ಯಚಕಿತರಾಗಿ, "ಈ ಮುತ್ತಿಗಿ ಆಚಾರ್ಯರ ಮನೆಯಲ್ಲಿ ಯಾರೂ ಪರಿಚಾರಕರು ಇಲ್ಲ. ಇರುವವರು ಒಬ್ಬರೆ ಆಚಾರ್ಯರು, ಅವರೇ ಆ ಮುತ್ತಿಗಿ ಆಚಾರ್ಯರು ಸ್ವಾಮಿ!" ಎನ್ನಲು, ಆಗ ಆ ಗೃಹಸ್ಥನು 'ಹಾಗಾದರೆ ನಾನು ವಿಚಾರಿಸಿದ ಆಜಾನುಬಾಹು ಮಹನೀಯರೇ ಆ ಮುತ್ತಿಗಿ ಆಚಾರ್ಯರು, ಅವರು ನನಗೆ ಸುಳ್ಳು ಹೇಳಿದ್ದಾರೆ, ನಾನು ನಿರಪರಾಧಿ, ನನಗೆ ತಿಳಿಯಲಿಲ್ಲ' ಅಂತ ಅನ್ನುವ ಮುನ್ನಾ ಒಳಗಿನಿಂದ ಆಚಾರ್ಯರು ಬಂದ ಕೂಡಲೆ ಆ ಗೃಹಸ್ಥನು ಅವರ ಕಾಲುಗಳನ್ನು ಗಟ್ಟಿಯಾಗಿ ಹಿಡಿದು, 'ಈ ಪಾಮರನನ್ನುದ್ಧರಿಸಬೇಕು' ಎಂದು ಪರಿಪರಿಯಾಗಿ ಬೇಡಿಕೊಂಡನು. 'ನಾವು ಅನ್ಯಥಾಜ್ಞಾನ ಮಾಡಿಕೊಟ್ಟು ನಿನಗೆ ಸುಳ್ಳು ಹೇಳಿ ಮೋಸ ಮಾಡಲಿಲ್ಲ, ಹರಿ ಚಿತ್ತ. ಈಗ ತಾವು ಏಳಿ, ನೈವೇದ್ಯ ಆಗಿದೆ. ಸ್ನಾನಾದಿಗಳನ್ನು ಮಾಡಿ ಭೋಜನಾನಂತರ ಎಲ್ಲ ಕೂಲಂಕಷವಾಗಿ ವಿಚಾರಿಸುವೆವು' ಅಂತ ಹೇಳಿದರು. ಅದರಂತೆ ಬಂದ ಗೃಹಸ್ಥನು ಸ್ನಾನಾದಿಗಳನ್ನು ಮುಗಿಸಿ ಊಟವನ್ನು ಮಾಡಿದನು. ನಂತರ ಅಂದದ್ದೇನೆಂದರೆ, "ಮುತ್ತಿಗಿ ಆಚಾರ್ಯರೆಂಬುವರು ಶ್ರೀ ರಾಘವೇಂದ್ರ ತೀರ್ಥರಿಗೆ ಪ್ರೀತಿಪಾತ್ರರೆಂದ ಮೇಲೆ ವೈಭವಶಾಲಿಗಳಾಗಿರುವರೆಂದು ನೀನು ಮನಸ್ಸಿನಲ್ಲಿ ಎಣಿಸಿರಲಿಲ್ಲವೆ! ಅದಕ್ಕಾಗಿ ಆ ಮಾತು ಹೇಳಿದೆವು. ಶ್ರೀ ಗುರುರಾಜರಿಗೆ ಪ್ರೀತನಾದವನು ಗ್ರಾಮಾಂತರದಲ್ಲಿದ್ದಾನೆ. ಅವನು ತನ್ನ ಇಚ್ಛಾಕ್ಕೆ ಬಂದಾಗ ಬರುತ್ತಾನೆ" ಅಂತ ಹೇಳಿದೆ. ಇದರಲ್ಲೇನು ಸುಳ್ಳು ಹೇಳಿದಂತಾಯಿತು?

ಅತ್ಯಲ್ಪರಾದ ನಮಗೆ (ಜೀವರುಗಳು) 'ಕ್ರಿಯಾಶೂನ್ಯರಾದ ನಮಗೆ ದಿವ್ಯ ದೇಹ ಕೊಟ್ಟು ಅದಕ್ಕೆ ರೂಪ, ನಾಮ ಕ್ರಿಯಾದಿಗಳುಂಟು ಮಾಡುವುದಕ್ಕೋಸ್ಕರ ಇಂದ್ರಿಯಾದಿಗಳಲ್ಲಿದ್ದು ಪ್ರಕಟವಾಗುವನಾದ್ದರಿಂದ ಶ್ರೀ ಗುರುರಾಜರಿಗೆ ಪ್ರೀತನಾದ ವೈಭವಶಾಲಿಯಾದ ಆ ಮುತ್ತಿಗಿ ಆಚಾರ್ಯನು ಆತನೇ. ಈ ರೂಪ, ನಾಮ, ಕ್ರಿಯಾಗುಣಗಳು ಆತನವೇ. ನಾನು ಆತನ ಪರಿಚಾರಿಕನಾದುದರಿಂದ ತನ್ನ ರೂಪನಾಮ ಗುಣಲೇಶವನ್ನು ನನ್ನಲ್ಲಿ ತನ್ನ ಇಚ್ಛಾದಿಂದಲೇ ಪ್ರಕಟ ಮಾಡಿದ್ದರಿಂದ ಜನರು ನನ್ನನ್ನು ಮುತ್ತಿಗಿ ಆಚಾರ್ಯನೆಂದು ಕರೆಯುತ್ತಾರೆ. ವಸ್ತುತಃ ಈ ರೂಪ, ನಾಮ, ಗುಣಾದಿ ವೈಭವಗಳು ಆತನದೆಂದೇ ನಿಶ್ಚಯವಾಗಿ ತಿಳಿದುಕೊಂಡಿರುವೆನಾದ್ದರಿಂದ ಆ ರೀತಿ ಹೇಳಿದೆ. ಇದರಲ್ಲಿ ಸುಳ್ಳು ಹೇಳಿ, ಏನು ಮೋಸ ಆ ಮಾಡಿದಂತಾಯಿತು? ಅಂತ ಅಂದರು. ಈ ಪ್ರಮೇಯವನ್ನು ಇವರು ಸಾಮಾನ್ಯವಾಗಿ ಅನುವಾದ ಮಾಡೋಣದರಿಂದ ಇವರಲ್ಲಿ ಅಭಿಮಾನಾದಿ ದೋಷಗಳು ಇಲ್ಲದಿರುವಿಕೆ, ಸರ್ವತ್ರ ಪರಮಾತ್ಮನ ಗುಣಗಳನ್ನು ಚಿಂತಿಸುತ್ತ ವ್ಯಾಪ್ತ್ಯೋಪಾಸನ ಮಾಡುತ್ತಾ ಇದ್ದಾರೆಂದರೆ ಏನು ಹೇಳಬೇಕು! ಈ ಅಮಿತ ವಿಕ್ರಮರಾಯನು ಮರುದಿನ ಶಾಂತಿ ಹಾಕಿ, ಶಿಷ್ಯನಾಗಿ ಕೆಲವು ದಿನಗಳಿದ್ದು, ಸ್ವಗ್ರಾಮಕ್ಕೆ ಪ್ರಯಾಣ ಮಾಡುವಾಗ ತಮ್ಮ ಗ್ರಾಮಕ್ಕೆ ಬರುವುದಾಗಿ ಪ್ರಾರ್ಥಿಸಿದನು. "ದೈವೇಚ್ಛೆಗೆ ಬಂದರೆ ಬರುತ್ತೇವೆ" ಅಂತ ಅಪ್ಪಣೆ ಕೊಟ್ಟರು.

೧೭. ಸೇಲಂ ಸುಬ್ಬರಾಯ ನಿಬ್ಬೆರಗಾದ.

ತದನಂತರ, ಒಂದು ವರ್ಷ ಕಳೆದ ಮೇಲೆ ಎಸ್. ಸುಬ್ಬರಾವು ಎಂ.ಎ. ಎಂಬ ಸೇಲಂ ಕಾಲೇಜ ಪ್ರಾಧ್ಯಾಪಕನು, ಮೈಸೂರು ಆಸ್ಥಾನದ ಪಂಡಿತರಾದ ಪೆರಿಯಕುಳಂ ರಾಮಚಂದ್ರಾಚಾರ್ಯರಲ್ಲಿ ಸುಧಾ, ಚಂದ್ರಿಕಾದಿ ಗ್ರಂಥಗಳ ವ್ಯಾಸಂಗ ಮಾಡಿ ಪಂಡಿತ ಶ್ರೇಣಿಗಣ್ಯನಾಗಿದ್ದನು. ಆ ಗೃಹಸ್ಥನು, 'ನಾಯಮಾತ್ಮಾ ಪ್ರವಚನೇನ ಲಭ್ಯಃ" ಅಂತ ಇದೆ; ಇದನ್ನು 'ಆಯಾಮಾತ್ಮಾ ಪ್ರವಚನೇನ ನ ಲಭ್ಯಃ' ಅಂತ ಅರ್ಥ ಮಾಡಿದರೆ ಪ್ರವಚನಾದಿ ಸಾಧನ ಸಂಪತ್ತುಗಳು ವ್ಯರ್ಥವೆಂದಂತಾಗುವುದು. ಆದರೆ "ಆಯಮಾತ್ಮಾ ಪ್ರವಚನೇನ ನ ಲಭ್ಯ ಇತಿ ನ ಲಭ್ಯಃ ಕಿಂತು ಲಭ್ಯ ಏವ" ಅಂತ ಅರ್ಥಮಾಡಿಕೊಂಡೇ ಈ ಉತ್ತರ ಮೀಮಾಂಸಾಶಾಸ್ತ್ರ ಪ್ರವಚನಾದಿಗಳನ್ನು ಮಾಡುತ್ತೇವೆ. ಆದರೆ, ಹೃದ್ಗುಹಾವಾಸಿಯಾದ ಪರಮಾತ್ಮನನ್ನು ಕಾಣುವ ಬಗೆ ತೋರಲಿಲ್ಲ. ಆದ್ದರಿಂದ, ಅಪರೋಕ್ಷಜ್ಞಾನಿಗಳಾದವರಿಂದಲೇ ಈ ಸಂಶಯ ಪರಿಹಾರವಾಗತಕ್ಕದ್ದು. ಕೇವಲ ಶಾಸ್ತ್ರ ವಿಮರ್ಶಕರಾದ ಪಂಡಿತರಿಂದ ಬಗೆಹರಿಯತಕ್ಕ ಮಾತಲ್ಲ. ಅಂತಹ ಮಹನೀಯರು ಈಗ ಪ್ರತ್ಯಕ್ಷದಲ್ಲಿ ಯಾರಿರುವರೋ ತಿಳಿಯದಾಗಿದೆ. ಸದ್ಯಕ್ಕೆ ವೃಂದಾವನಸ್ಥರಾದಾಗ್ಯೂ ಮಹಾಮಹಿಮೆಯನ್ನು ಪ್ರಕಟಿಸುತ್ತಿರುವ ಶ್ರೀ ಗುರುರಾಜರಲ್ಲಿ ಹೋಗಿ ಸೇವಾ ಮಾಡಿ ಅವರ ಅನುಗ್ರಹ ಪಡೆದು ಈ ಸಂಶಯದಿಂದ ಮುಕ್ತನಾಗಬೇಕೆಂದು ಆಲೋಚಿಸಿ, ಶ್ರೀ ಮಂತ್ರಾಲಯಕ್ಕೆ ಬಂದು ಸೇವಾ ಮಾಡಹತ್ತಿದನು, ಕ್ಷಿಪ್ರದಲ್ಲಿಯೇ ಸಂಶಯ ಪರಿಹಾರವಾಗುವದು ಅಂತಾ ಸ್ವಪ್ನವಾಯಿತು. ಇವನ್ನೆ ಪ್ರತೀಕ್ಷಿಸುತ್ತಿರಲು ಸ್ವಗ್ರಾಮದಲ್ಲಿ (ಶೇಲಂದಲ್ಲಿ) ಅಮಿತ ವಿಕ್ರಮರಾಯನಿಂದಲೂ ಇಲ್ಲಿ (ಮಂತ್ರಾಲಯದಲ್ಲಿ) ಗದಗಿನ

ಶೇಷಗಿರಿರಾಯನಿಂದಲೂ ಇವರ (ಮುತ್ತಿಗಿ ಆಚಾರ್ಯರ) ಮಹಾತ್ಮೆಯನ್ನು ಕೇಳಿದ್ದನು. ಆತನು ತನಗೆ ಸಂಶಯಕ್ಕೆ ಕಾರಣವಾದ ವಿಷಯವೂ ತಥಾ ಪಂಡಿತರಿಂದ ಸಾಮಾನ್ಯವಾಗಿ ಬಿಡಿಸಲ್ಪಡದಂಥ ಪ್ರಮೇಯಗಳನ್ನು ಪತ್ರಮುಖೇನ ಬರೆದು ಇವರನ್ನು (ಚರಿತ್ರ ನಾಯಕರನ್ನು) ಕೇಳಿದನು. ಅವುಗಳಿಗೆ ಸುಲಭ ಶೈಲಿಯಲ್ಲಿ ಪತ್ರದಿಂದಲೇ ಉತ್ತರ ಕೊಟ್ಟದ್ದನ್ನು ನೋಡಿ ಸಂತೋಷ ಪಟ್ಟು ದರ್ಶನಾಕಾಂಕ್ಷಿಯಾದನು. ತಾನು ಮಂತ್ರಾಲಯದಲ್ಲಿ ಸೇವಾ ಮಾಡುತ್ತಿರುವದರಿಂದ ಫಲ ಮಂತ್ರಾಕ್ಷತಾ ಗೂಪ ಅಪ್ಪಣೆಯಾಗುವವರೆಗೂ ಹೊರಡಬಾರದು. ಹಾಗೇ ಹೊರಟರೆ ಮಹದವಜ್ಞಾ ಮಾಡಿದಂತಾಗುವದೆಂದೆಣಿಸಿ ಹಾಗೆಯೇ ಮಾಡುತ್ತಿದ್ದನು. ಇತ್ತ ಇವರಿಗೆ (ಈ ಚರಿತ್ರ ನಾಯಕರಿಗೆ) ಶ್ರೀ ಗುರುರಾಜರು ಮಂತ್ರಾಲಯಕ್ಕೆ ಬರುವದಾಗಿ ಸೂಚಿಸಿದರು. ತದನುಸಾರ ಅಲ್ಲಿಗೆ ಹೋದರು. ಆ ಗದಗಿನ ಶೇಷಗಿರಿರಾಯನು ಈ ಉಭಯರಿಗೆ ಪರಸ್ಪರ ಪರಿಚಯ ಮಾಡಿಕೊಟ್ಟನು. ಇವರ ದರ್ಶನಾಪೇಕ್ಷಿಯಾದ ಆ ಎಂ.ಎ. ಸುಬ್ಬರಾಯನು ಸಾಷ್ಟಾಂಗ ನಮಸ್ಕಾರ ಮಾಡಿದನು. ಪ್ರತಿಯಾಗಿ ಯೋಗಕ್ಷೇಮವನ್ನು ವಿಚಾರಮಾಡಿ, ಪರಸ್ಪರ ಆನಂದಭರಿತರಾದರು. ಇವರು ತಮ್ಮ ಯಥಾಕ್ರಮಕ್ಕನುಸರಿಸಿ ರಾತ್ರಿ ನಿರ್ಜನವಾದ ಮೇಲೆ ಪ್ರಾಣ ದೇವರ ಗುಡಿಯ ಎಡಭಾಗದ ಮಂಟಪದಲ್ಲಿ ಕುಳಿತುಕೊಂಡರು. ಧ್ಯಾನಾಸಕ್ತರಾದ ಇವರ ಸಮೀಪ ಆ ಸುಬ್ಬಾರಾಯನು, ಶೇಷಗಿರಿರಾಯನೂ ಬಂದು ಸ್ವಲ್ಪ ದೂರದಲ್ಲಿ ನಿಂತುಕೊಂಡರು. ಅರುಣೋದಯದವರೆಗೂ ನಿರೀಕ್ಷಿಸಿದರು. ಎತ್ತ ಕಡೆಯೂ ಇವರ ದೃಷ್ಟಿ ಚಲನವಿಲ್ಲದಿರೋಣದರಿಂದ ಅವರುಗಳು ಬಂದು ನಿಂತುಗೊಂಡದ್ದು ಇವರಿಗೆ ತಿಳಿಯಲಿಲ್ಲ. ಮತ್ತು ಧ್ಯಾನಕ್ಕೆ ಧಕ್ಕೆ ತರಬಾರದೆಂದು ಆ ಉಭಯರಾದರೂ ಇವರ ಬಳಿಗೆ ಬಂದು ಎಚ್ಚರಗೊಳಿಸಲಿಲ್ಲ. ಇವರಾಗಿಯೇ ಎದ್ದಮೇಲೆ ಆ ಉಭಯರೂ ನಮಸ್ಕಾರ ಮಾಡಿ, ಇವರನ್ನು ಹಿಂಬಾಲಿಸಿದರು. ಸ್ವಲ್ಪ ಹೊತ್ತು ಕೆಲವು ಪ್ರಮೇಯಗಳನ್ನು ಹೇಳುತ್ತಾ ಆ ದಿನ ಅಲ್ಲಿಗೇ ಸಂಕ್ಷೇಪ ಮಾಡಿ, ಮರುದಿವಸದಿಂದ ವಿಶೇಷ ಅನುವಾದ ಮಾಡುತ್ತ ಹೋದರು. ಈ ರೀತಿ ಹಗಲು ರಾತ್ರಿ ಕೂಡಿಯೇ ಒಂದು ಸಪ್ತಕ ಅನುವಾದ ಮಾಡೋಣದರಿಂದ ಅನೇಕ ಮಟ್ಟಿಗೆ ಸಂಶಯ ದೂರಾದವು. ಇಷ್ಟರಲ್ಲಿಯೇ ಆ ಸುಬ್ಬರಾಯನಿಗೆ ಶ್ರೀ ಗುರುರಾಜರು ಅಪ್ಪಣೆಗೊಟ್ಟರು. ಆ ಸುಬ್ಬರಾಯ ಹಾಗೂ ಇವರೂ ಕೂಡಿ ಆದವಾನಿಗೆ ಬಂದರು. ಇಲ್ಲಿಯೂ ಬಹು ಪ್ರಮೇಯಗಳನ್ನು ಶ್ರವಣ ಮಾಡಿಸುವದಲ್ಲದೆ ತಾವು ಮಾಡಿದ ಸಾಧನ ಬಗೆಯನ್ನು ಹೇಳಿ ಎಷ್ಟು ಸಾಧನ ಮಾಡಿದಾಗ್ಯೂ (ಋತುಕಾಲಕ್ಕನುಸರಿಸಿ, ಆಯಾ ಫಲಪುಷ್ಪಗಳುದ್ಭವಿಸುವಂತೆ) ಪಕ್ವಕಾಲ ಬಂದಾಗ ಆ ಪರಮಾತ್ಮ ಅಭಿವ್ಯಕ್ತನಾಗುವನೆಂಬ ಪ್ರಮೇಯವನ್ನು ಮನವರಿಕೆ ಮಾಡಿಕೊಟ್ಟರು. ಇದರಿಂದ ಸಂತುಷ್ಟನಾಗಿ ಇವರಲ್ಲಿ 'ಶಾಂತಿ ಪಾಠ' ಗಾಕಿ ಶಿಷ್ಯನಾದನು. ಈತನು ತನ್ನ ಊರಿಗೆ ಹೋಗುವಾಗ ತಮ್ಮ ಗ್ರಾಮಕ್ಕೆ ಬರುವದಾಗಿ ಇವರನ್ನು ಪ್ರಾರ್ಥನಾ ಮಾಡಿಕೊಂಡನು. "ದೈವ ಸಂಕಲ್ಪವಿದ್ದರೆ ಬರುತ್ತೇವೆ" ಅಂತಾ ಉತ್ತರ ಕೊಟ್ಟರು. ಈ ಎಂ.ಎ. ಸುಬ್ಬರಾಯನು ಇವರಲ್ಲಿ (ಮುತ್ತಿಗಿ ಆಚಾರ್ಯರಲ್ಲಿ) ಶಿಷ್ಯನಾದದ್ದು ಕರ್ಣೋಪಕರ್ಣಗಳಿಂದ ಪೆರಿಯಕುಳಂ ರಾಮಚಂದ್ರಾರ್ಯರಿಗೆ (ವಿದ್ಯಾ ಗುರುಗಳಿಗೆ)

ತಿಳಿಯೋಣದರಿಂದ ಮತ್ಸರ ಉಂಟಾಗಿ "ನೀವು ಮಂತ್ರಾಲಯಕ್ಕೆ ಸೇವಾರ್ಥ ಹೋದವರು ತತ್ಸಮೀಪದಲ್ಲಿರುವ ಆದವಾನಿಯ ಮುತ್ತಿಗಿ ಆಚಾರ್ಯರಲ್ಲಿ ಮಂತ್ರೋಪದೇಶ ಹೊಂದಿದ್ದಾಗಿ ಕೇಳಿದ್ದೇವೆ. ನೀವು ಬಹು ಶೋಧಕರು, ಆದಾಗ್ಯೂ ಶಿಷ್ಯತ್ವವನ್ನು ವಹಿಸಲು ಕಂಡ ಗುಣಾತಿಶಯಗಳನ್ನು ತಿಳಿಸಿದರೆ ನಾವೂ ಸಂತೋಷ ಪಡುತ್ತೇವೆ" ಎಂಬುದಾಗಿ ಸುಬ್ಬರಾಯನಿಗೆ ಪತ್ರ ಬರೆದರು. ಅದಕ್ಕೆ ಆತನು "ಪ್ರತ್ಯಕ್ಷಗಮ್ಯ" ಎಂದು ಒಂದು ಮಾತಿನಲ್ಲಿ ಉತ್ತರ ಕೊಟ್ಟನು. ಆದರೆ ಆ ಪೆರಿಯಕುಳಂ ರಾಮಚಂದ್ರಾಚಾರ್ಯರಿಗೆ ಇಷ್ಟರಿಂದಲೇ ಸಮಾಧಾನವಾಗದಿದ್ದರೂ ಆಗ್ಗೆ ಸುಮ್ಮನಾಗಿ ಸಮಯವನ್ನು ನಿರೀಕ್ಷಿಸುತ್ತಿದ್ದರು.

೧೮. ಅನೇಕರು ಶಿಷ್ಯರಾದರು.

ಎಂ.ಎ. ಸುಬ್ಬರಾಯರು ಹಾಗೂ ಅಮಿತ ವಿಕ್ರಮರಾಯರ ಆಮಂತ್ರಣದ ಮೇರೆಗೆ ಮದ್ರಾಸಕ್ಕೆ ಸಕುಟುಂಬರಾಗಿ (ಈ ಚರಿತ್ರ ನಾಯಕರು) ಹೋದರು. ಅಲ್ಲಿ ಮುನಿಸಿಪಾಲಿಟಿ ಕಾರ್ಪೊರೇಶನ್ ಸೆಕ್ರೆಟರಿಗಳಾದ 'ದಾಸೋ ಕೃಷ್ಣರಾಯ'ರೆಂಬುವರು ಅಮಿತ ವಿಕ್ರಮರಾಯರ ಹಾಗೂ ಎಂ.ಎ. ಸುಬ್ಬರಾಯರ ಮಿತ್ರರೂ ಶಿಷ್ಯರೂ ಆಗಿದ್ದರು. ಅಲ್ಲಿ ಒಂದು ವಾರ ಇದ್ದು ನಂತರ ಸೇಲಂಗೆ ಹೋದರು. ಇವರ (ಈ ಚರಿತ್ರ ನಾಯಕರ) ಮಹಿಮೆಯನ್ನು ಕೇಳಿದ್ದರಿಂದ ಅಲ್ಲಿಯ ಕೆಲವು ಜನಗಳಿಗೆ ಇವರನ್ನು ನೋಡಬೇಕೆಂತಲೂ ಕುತೂಹಲವಿತ್ತು. ಆ ಪ್ರಕಾರ ಅಲ್ಲಿ ಒಂದು ಸಪ್ತಕವಿದ್ದು, ವರದರಾಜನೆಂಬ ಧನೋಪಕಾರಿ ಬ್ಯಾಂಕ್ ಗುಮಾಸ್ತನು ರಾಜಾರಘುನಾಥರಾಯನೆಂಬ ಶೇಲಂ ಮುನಿಸಿಪಾಲಿಟಿ ಮ್ಯಾನೇಜರನು, ವೆಂಕಟರಂಗಾಚಾರ್ಯನೆಂಬ ಕಲೆಕ್ಟರ್ ಆಫೀಸಿನ ಗುಮಾಸ್ತನು, ಎನ್.ಆರ್. ಶ್ರೀನಿವಾಸರಾಯನೆಂಬ ಸಭ್ಯ ಮ್ಯಾಜಿಸ್ಟ್ರೇಟನು, ಪಿ.ಕೆ. ಸುಬ್ಬರಾಯನೆಂಬ ಕಾಲೇಜದ ಪ್ರಥಮ ಸಹಾಯಕ ಪ್ರಾಧ್ಯಾಪಕನು ಉಪದೇಶ ಹೊಂದಿ ಶಿಷ್ಯರಾದರು. ಈ ಪಿ.ಕೆ. ಸುಬ್ಬರಾಯನು ಇಷ್ಟರಿಂದಲೇ ತೃಪ್ತನಾಗದೆ ವಿಶೇಷ ಸೇವಾ ಮಾಡಿ ಇವರ ಪೂರ್ಣಾನುಗ್ರಹ ಪಡೆದು ಸ್ವಯೋಗ್ಯ ಜ್ಞಾನ ಸಂಪಾದಿಸಬೇಕೆಂಬ ಲವಲವಿಕೆಯಿಂದ ಶೇಲಂ ಕಾಲೇಜದ ನೌಕರಿಗೆ ರಾಜೀನಾಮೆ ಕೊಟ್ಟು, ಆದವಾನಿ ಶಾಲಾಕ್ಕೆ ತನ್ನ ಅರ್ಜಿಯನ್ನು ಕಳುಹಿಸಿದನು. ಇತ್ತ ಇವರು ಅಮಿತ ವಿಕ್ರಮರಾಯ ಇರುವ 'ನಾಮಕಲ್' ಎಂಬ ಕ್ಷೇತ್ರಕ್ಕೆ ಹೋದರು. ಅಲ್ಲಿ ಊರ ಮಧ್ಯದಲ್ಲಿ ಸುಮಾರು ಸುತ್ತಳತೆ ೩ ಮೈಲು ಇರುವ ಒಂದೇ ಕಲ್ಲಿನ ಬೆಟ್ಟವಿದೆ. ಅದರ ಒಂದು ಪಾರ್ಶ್ವದಲ್ಲಿ ಶ್ರೀರಂಗನಾಥನೂ, ಮತ್ತೊಂದು ಕಡೆ ಶ್ರೀ ನರಸಿಂಹ ಮೂರ್ತಿಯೂ ಇರುವದು. ಈ ನರಸಿಂಹ ಇದ್ದ ಪಾರ್ಶ್ವದಲ್ಲಿ 'ಶ್ರೀನಾಮಗಿರಿ' ಎಂಬ ಶ್ರೀ ಲಕ್ಷ್ಮೀ ದೇವಿಯರ ರೂಪವೂ ಹಾಗೂ ಶ್ರೀ ನರಸಿಂಹ ದೇವರ (ಅಳೆದು ನೋಡಿದರೆ) ಪಾದಕ್ಕೂ ನೆಲದ ಮೇಲೆ ಬಯಲು ಗುಡಿಯಲ್ಲಿ ಇರುವ ಸುಮಾರು ೨೫ ಫೂಟು ಎತ್ತರವಿರುವ ವಾಯುದೇವರ (ಸಂಜೀವ ಮುಖ್ಯ ಪ್ರಾಣ ದೇವರ) ಮೂರ್ತಿ ಇದ್ದು ಅತಿ ಸುಂದರವಿರುವದು. ನೋಡುವವರಿಗೆ ಆಶ್ಚರ್ಯವನ್ನುಂಟು ಮಾಡುವದು ಮತ್ತು ಅಲ್ಲಿ ಶ್ರೀನಾಮಗಿರಿ ದೇವಿಯ ಮಹಾತ್ಮೆಯೂ ಪ್ರಬಲವಾಗಿರೋಣದರಿಂದ ಆ ಗ್ರಾಮಕ್ಕೆ 'ನಾಮಕಲ್' ಎಂಬ ಹೆಸರಿದೆ. ಈ ಪರ್ವತವು ಒಂದೇ ಕಲ್ಲಿನದಾಗಿರೋಣದರಿಂದ

ಇದಕ್ಕೆ **ಸಾಲಿಗ್ರಾಮ ಕ್ಷೇತ್ರ**ವೆಂದೂ ಹೆಸರೂ ಉಂಟು ಎಂದು ಅಲ್ಲಿಯ ಸ್ಥಳೀಕರು ಹೇಳುತ್ತಾರೆ. ಅಲ್ಲಿ ಅಮಿತ ವಿಕ್ರಮರಾಯನ ಭಾವ ಮೈದುನನಾದ ವೆಂಕಟನಾರಾಯಣನು ಶಿಷ್ಯನಾದನು. ಅಲ್ಲಿಂದ ತಮ್ಮ ಜಹಗೀರಿ ಗ್ರಾಮವಾದ (ಮಿತಾಗ್ರಾಮವಾದ) ಕಾವೇರಿಗೂ, ಶಿಂಗಳಾಂತಪುರಕ್ಕೂ ಕರೆದುಕೊಂಡು ಹೋದರು. ಅಲ್ಲಿಯೂ ಅಮಿತ ವಿಕ್ರಮರಾಯನ ತಮ್ಮ ವೆಂಕಟರಾವು ವಗೈರೆ ಆಪ್ತರು ಶಿಷ್ಯರಾದರು. ಅಲ್ಲಿಂದ ಪುನಃ ಶೇಲಂ ಮಾರ್ಗವಾಗಿ ಆದವಾನಿಗೆ ಹಿಂತಿರುಗಿ ಬಂದರು.

೧೯. ಸುಬ್ಬರಾಯ ಸಾಧನದ ಅಂತರಂಗ ಅರಿತ.

ಗುರುಕುಲವಾಸಾರ್ಥ ಆ ಪಿ.ಕೆ. ಸುಬ್ಬರಾಯನು ಆದವಾನಿ ಶಾಲಾಕ್ಕೆ ಅರ್ಜಿ ಮಾಡಿದ್ದಕ್ಕೆ ಮುನಸಿಪಾಲಿಟಿಯವರು ಒಡಂಬಟ್ಟು (ಮಂಜೂರು ಮಾಡಿ) ತಿಂಗಳೊಂದಕ್ಕೆ ೬೦ ರೂಪಾಯಿಯ ಸಂಬಳದ ಮೇಲೆ ನೇಮಿಸಿಕೊಳ್ಳುವೆವು ಎಂಬುದಾಗಿ ಉತ್ತರ ಕೊಟ್ಟರು. ಯದ್ಯಪಿ ಅಲ್ಲಿ (ಶೇಲಂದಲ್ಲಿ) ಒಂದು ನೂರಾ ಇಪ್ಪತ್ತು ರೂಪಾಯಿಯ ಸಂಬಳ ಇದ್ದಾಗ್ಯೂ ಆದವಾನಿಗೆ ಬರಬೇಕೆಂಬ ಕುತೂಹಲದಿಂದ ಅಲ್ಲಿ ರಾಜೀನಾಮೆ ಕೊಟ್ಟು ಆದವಾನಿಗೆ ಬಂದನು. ಆತನು ಇಲ್ಲಿ 'ಗುರು ಸೇವಾ' ಮಾಡಿದ ವಿಧಾನವೂ, ತತ್ತ್ವ ಶ್ರವಣ ಕ್ರಮವೂ ಓದುಗರನ್ನು ಮುಗ್ಧಗೊಳಿಸುತ್ತದೆ. ಅದೆಂತೆಂದರೆ, ಆತನು ಅಲ್ಲಿಗೆ ಬಂದ ನಂತರ (ಸಂಸ ತಾಭ್ಯಾಸ ಮಾಡುತ್ತ) ದೇವತಾರ್ಚನೋಪಯುಕ್ತ ಮಂತ್ರಗಳನ್ನು ಕಲಿತನು. ತನಗೆ ಗುರುಗಳ ಮನೆ ದೂರವಿರಬಾರದೆಂದು ಸಮೀಪದಲ್ಲಿ ಒಂದು ಮನೆ ಬಾಡಿಗೆಗೆ ತೆಗೆದುಕೊಂಡು ವಾಸ ಮಾಡುವವನಾದನು. ಆತನು ಅರುಣೋದಯಕ್ಕೆ ಸರಿಯಾಗಿ ಮುಖ ಪ್ರಕ್ಷಾಲನಾದಿಗಳನ್ನು ಮಾಡಿಕೊಂಡು ವಿಜಯರಾಯರ ಗುಡಿಗೆ (ಗುರುಗಳ ಸನ್ನಿಧಿಗೆ) ಬಂದು ಬಾಗಿಲು ತೆಗೆಯುವವರೆಗೂ ಕೈ ಜೋಡಿಸಿಕೊಂಡು ಹೊರಗೆ ನಿಂತಿರುತ್ತಿದ್ದನು. ಬಾಗಿಲು ತೆರೆದ ಕೂಡಲೇ ಒಳಗೆ ಬಂದು ಗುರುಗಳ ಹಾಸಿಗೆಯನ್ನು ಮಟ್ಟಸವಾಗಿ ಸುತ್ತಿ ಮೇಲಕ್ಕೆ ಇಟ್ಟು ಕಸಬಳೆದು, ಸಮೀಪದ ಬಾವಿಯಿಂದ ಉಪ್ಪು ನೀರು ಪೂರೈಸುವಷ್ಟು ತಂದು ಹಾಕಿ, ಗುರುಗಳು ಸ್ನಾನ ಮಾಡುವಾಗ ಬಿಟ್ಟಿದ್ದ ಧೋತರ ಬಟ್ಟೆಗಳ ಹಾಗೂ ಪಂಜಿ ವಗೈರೆ ತೆಗೆದುಕೊಂಡು ಹೋಗಿ ತನ್ನ ಶಾಲಾದಲ್ಲಿಯ ನಳದ ನೀರಿನಿಂದ ಬಟ್ಟೆಗಳನ್ನು ಒಗೆದುಕೊಂಡು, ತುಳಸೀ ಪುಷ್ಪಗಳನ್ನು ತೆಗೆದುಕೊಂಡು ಬಂದು ಗುರುಗಳ ಪೂಜೆಗೆ ಕೊಟ್ಟು ತನ್ನ ಮನೆಗೆ ಹೋಗಿ ಸ್ನಾನಾಹ್ನಿಕ ತೀರಿಸಿಕೊಂಡು ಶಾಲಾಕ್ಕೆ ಹೋಗಿ, ಮಧ್ಯಾಹ್ನ ಶಾಲಾದಿಂದ ಬಂದಕೂಡಲೇ ಪುನಃ ಸ್ನಾನ ಮಾಡಿ ತೀರ್ಥ ಪ್ರಸಾದವನ್ನು ತೆಗೆದುಕೊಂಡು ಹೋಗಿ ಭೋಜನ ಮಾಡಿಕೊಂಡು ಪುನಃ ಶಾಲಾಕ್ಕೆ ಹೋಗಿ, ಸಾಯಂಕಾಲ ೫ ಗಂಟೆಯ ಸುಮಾರಕ್ಕೆ ಬಂದು ಖರ್ಚಾಗಿದ್ದ ಉಪ್ಪು ನೀರು ಭರ್ತಿ ಮಾಡಿ ಮನೆಗೆ ಹೋಗಿ ಸುಮಾರು ಅರ್ಧ ಫರ್ಲಾಂಗ್ ದೂರವಿರುವ ನಳದ ಮಡಿ ನೀರು, ಮೈಲಿಗಿ ನೀರು ತಂದು ಹಾಕುತ್ತಿದ್ದನು. ಗುರುಗಳು ಸಕಾಲಕ್ಕೆ ಸಾಯಂಸಂಧ್ಯಾವಂದನ, ಪಂಚಭೇದ, ತಾರತಮ್ಯಗಳ ವಿವರಣೆ, ಮತ್ತು ಜೀವೇಶ ಸಂಬಂಧ, ಅಂದರೆ ಬಿಂಬ ಪ್ರತಿಬಿಂಬ ಭಾವದ ಲಕ್ಷಣ ಹಾಗೂ ಪರಮಾತ್ಮನ ಸ್ವತಂತ್ರತ್ವ, ಜೀವರ ಅಸ್ವತಂತ್ರತ್ವ ವಿಚಾರಗಳು; ಹಾಗು ದೇವ ದೈತ್ಯರ ಸಾಧನ

ಮಾರ್ಗಗಳು, ಅದರ ಫಲಗಳು; ಅದಿಭೂತ, ಅಧ್ಯಾತ್ಮ, ಅಧಿದೈವಿಕ ಸುಖದುಃಖಗಳಿಗೆ ಕಾರಣವಾದ ಕರ್ಮವಿಚಾರಗಳು ಅಂದರೆ **ಪ್ರಾರಬ್ಧ, ಸಂಚಿತ, ಆಗಾಮಿಗಳ ಭೋಕ್ತವ್ಯ ಅಂಶಗಳು**, ಜಗತ್ತಿನಲ್ಲಿ ನಡೆಯತಕ್ಕ ವ್ಯಾಪಾರಗಳಲ್ಲಿಯ ಭಗವಂತನ ವ್ಯಾಪ್ತತ್ವವು, ಆ ವ್ಯಾಪ್ತರೂಪಕ್ಕೂ ತನ್ನ ಬಿಂಬ ರೂಪಕ್ಕೂ ಐಕ್ಯ ಚಿಂತನೆಯು, ಶ್ರೀ ಪರಮಾತ್ಮನೇ ಸರ್ವಕರ್ತೃ, ಭೋಕ್ತೃನಾದಾಗ್ಯೂ ಪ್ರಕೃತಿ ಬಂಧ ಶೂನ್ಯತ್ವವು, ವೈಷಮ್ಯ, ನೈರ್ಘೃಣ್ಯಾದಿ ಸಕಲ ದೋಷ ದೂರತ್ವವು, ಸರ್ವ ಶಬ್ದ ವಾಚ್ಯತ್ವವು, ನಿಗಮೈಕ ವೇದ್ಯತ್ವವು, ಸದಸದ್ವಿಲಕ್ಷಣತ್ವವು, ಅಪ್ರಮೇಯನಾದಾಗ್ಯೂ ಉಪಾಸಕನ ಯೋಗ್ಯತಾನುಸರಿಸಿ ಪ್ರಕಟನಾಗುವ ಪ್ರಮೇಯ, ಜೀವರಿಗೆ (ಸಂಸಾರ) ಬಂಧಕ ಲಕ್ಷಣವು, ತನ್ನಿವಾರಣಾ ಮಾರ್ಗವು, "ಕಿಂ ಬಹೂನಾ" ಬಿಂಬಾಪರೋಕ್ಷೀಕರಿ ಸತಕ್ಕ ಯೋಗ, ಹೀಗೆ ಪ್ರತಿದಿನವು ಒಂದೊಂದಾಗಿ ಅನುವಾದ ಮಾಡುತ್ತಿದ್ದರು. ಈ ಒಂದೊಂದು ವಿಷಯವನ್ನೇ ತಿಂಗಳಗಟ್ಟಲೇ ಅನುವಾದ ಮಾಡಿ, ಆತನಿಗೆ (ಪಿ.ಕೆ. ಸುಬ್ಬರಾಯನಿಗೆ) ಬೋಧನವಾದ ಮೇಲೆ ಮತ್ತೊಂದು ವಿಷಯವನ್ನು ಅನುವಾದ ಮಾಡುತ್ತಿದ್ದರು. ಈ ರೀತಿ ಅನುವಾದ, ಪ್ರವಚನ ಪ್ರತಿ ದಿವಸ ನಾಲ್ಕೈದು ತಾಸು ನಡೆಯುತ್ತಿತ್ತು. ಈ ರೀತಿ ಮೊದಲನೇ ವರ್ಷ ನಡೆಯಿತು. ಆ ಮೇಲೆ ದ್ವೈತ ಸಿದ್ಧಾಂತದ ಪ್ರಾಶಸ್ತ್ಯ, ಅಂದರೆ ಚಾರ್ವಾಕಾದಿ ಇತರ ಮತಗಳಲ್ಲಿಯ ದೋಷಗಳು, ತಂತ್ರಸಾರೋಕ್ತ ವಿಚಾರ, ಅವುಗಳನ್ನು ಯಾವ ಸಮಯದಲ್ಲಿ ಯಾವ ರೀತಿ ಉಪಯೋಗ ಪಡಿಸಿಕೊಳ್ಳುವ ಉಪಾಯ ಮತ್ತು ಉಪನಿಷತ್ತು, ಹರಿಕಥಾಮೃತಸಾರ ಇತ್ಯಾದಿ ಗ್ರಂಥಸ್ಥ ಮುಖ್ಯ ಮುಖ್ಯ ಪ್ರಮೇಯಗಳು ಹಾಗೂ ತನು ಚತುಷ್ಟಯದಲ್ಲಿ ಶ್ರೀ ಹರಿವಾಯುಗಳ ವ್ಯಾಪಾರ, ಅದ್ವೈತತ್ರಯ ಅನುಸಂಧಾನ ಕ್ರಮ, ಜಾಗೃತಾವಸ್ಥಾ, ಸ್ವಪ್ನ, ಸುಷುಪ್ತಿಗಳಲ್ಲಿ 'ವಿಶ್ವಾದಿ ರೂಪ'ತ್ರಯ ವ್ಯಾಪಾರ ಚಿಂತನಾ ಇತ್ಯಾದಿ ಅನುಸಂಧಾನ ಕ್ರಮಗಳನ್ನು ಎರಡನೇ ವರುಷ ಅನುವಾದ ಮಾಡಿದರು. ನಂತರ ಭಾರತ, ಭಾಗವತ, ರಾಮಾಯಣ, ಕಥಾರೂಪ ಭಗವದ್ವ್ಯಾಪಾರಗಳನ್ನು ಆಧ್ಯಾತ್ಮ ರೀತ್ಯಾ (ತನ್ನ ದೇಹದಲ್ಲಿ ನಡೆಯತಕ್ಕ ವ್ಯಾಪಾರಗಳಲ್ಲಿ) ಚಿಂತನ ಮಾಡುವ ಕ್ರಮ, ಜ್ಞಾನೇಚ್ಛಾಕ್ರಿಯಾಗಳು, ಅನಿರುದ್ಧಾದಿ ಪಂಚರೂಪಗಳು ಹಾಗೂ ವ್ಯೂಹವರ್ಗಗಳಿಂದ ನಡೆಯತಕ್ಕ ಕ್ರಿಯೋಪಸಂಹಾರ ಕ್ರಮ ಮತ್ತು ಮೂಲೇಶ, ಪ್ರಾದೇಶ, ಅಗ್ರೇಶ ಇವರುಗಳ ನಿಮಿತ್ತ ಬುದ್ಧಿ - ಮನಾದಿ - ಇಂದ್ರಿಯಗಳ ವ್ಯಾಪಾರ, ನಾಡೀಗತ ಬೃಹತೀರೂಪಗಳ ಅನುಸಂಧಾನ ಕ್ರಮ, ಮತ್ತು ಯಾವ ತತ್ವಕ್ಕೆ ಯಾರು ಅಭಿಮಾನಿದೇವತೆ ಮತ್ತು ಯಾವ ನಿಯಾಮಕ ಭಗವದ್ರೂಪ, ದೇವತೆ ತನಗಿಂತಲೂ ಉತ್ತಮ, ಸಮಾನ, ಅಧಮ ಜೀವರ ದೇಹದಲ್ಲಿಯ ಇಂದ್ರಿಯಗಳಿಗೆ ಉಪಚಯ ಕೊಟ್ಟು ಮಾಡತಕ್ಕ ವ್ಯಾಪಾರ ಚಿಂತನ, ಸರ್ವಗುಣ ಕ್ರಿಯೋಪ ಸಂಹಾರ ತನ್ನ ಬಿಂಬನಲ್ಲಿ, ವ್ಯಾಪ್ತೋಪಾಸನಾ ಕ್ರಮ; ಕಾಲ, ಪರಮಾಣು, ತದ್ಗತ ಭಗವದ್ವ್ಯಾಪಾರ ಹಾಗೂ ಕರ್ಮ, ಅವುಗಳ ಭೇದದಿಂದ ಮಾಡುವ ಮನೋವಾಕ್ಕಾಯ ವಿಧಿ, ನಿಷೇಧಾಚರಣೆಗಳಿಂದ ಮುಕ್ತನಾಗುವ ಉಪಾಸನಾ ಕ್ರಮ, ಪಂಚಾಗ್ನಿಗಳಲ್ಲಿ ಶ್ರೀ ಹರಿವಾಯು ಭಾರತೀ ಇವರ ವ್ಯಾಪಾರ ಅನುಸಂಧಾನ ಪೂರ್ವಕ ಕಾರ್ಯದಲ್ಲಿ ಪ್ರವೃತ್ತಿ ಹೊಂದಿ ಮಹಾಫಲ ಭಾಗಿಯಾಗುವದು, ಉಪಾಸಕನ

ಯೋಗ್ಯತಾನುಗುಣವಾಗಿ ವ್ಯಾಪ್ತ್ಯೋಪಾಸನಾ ಮಾಡುತ್ತಾ ಸರ್ವಗುಣ ಕರ್ಮಗಳನ್ನು ಹೃದ್ಗತ ಬಿಂಬನಲ್ಲಿ ಸಮರ್ಪಿಸುವ ಕ್ರಮವನ್ನು ಮೂರನೇ ವರುಷದ ಪ್ರವಚನದಿಂದ ಆ ಪಿ.ಕೆ. ಸುಬ್ಬರಾಯನಿಗೆ ತಿಳಿಸಿದರು. ಈ ಪ್ರವಚನವಾಗುವವರೆಗೂ ಕೈ ಜೋಡಿಸಿಕೊಂಡು ನಿಂತುಕೊಂಡೇ ಶ್ರವಣ ಮಾಡುತ್ತಿದ್ದನು. ಅವರಾಗಿಯೇ (ಗುರುಗಳಾಗಿಯೇ) "ಈ ದಿನ ಇಷ್ಟೇ ಸಾಕು, ಮುಂದಿನ ವಿಷಯ ನಾಳೆಗೆ ಹೇಳುತ್ತೇವೆ" ಅಂತ ಅಪ್ಪಣೆ ಮಾಡಿ ತೀರ್ಥಕೊಟ್ಟ ಮೇಲೆ ಗುರುಗಳ ಹಾಸಿಗೆ ಹಾಸಿಟ್ಟು ತನ್ನ ಮನೆಗೆ ಹೋಗಿ ಅಪರಾತ್ರಿ ಆಗಿರದಿದ್ದರೆ ಭೋಜನ ಮಾಡಬೇಕು, ಇಲ್ಲವಾದರೆ ಹಾಗೇ ಮಲಗಬೇಕು. ಈ ರೀತಿ ದಿನಂಪ್ರತಿ ತಪ್ಪದೇ ಮಾಡುತ್ತಿದ್ದನು. ಮತ್ತು ತನಗೆ ಸಂಬಳ ಬಂದಕೂಡಲೇ ಅರವತ್ತು ರೂಪಾಯಿಗಳಿಗೆ ೪ ಸವರನ್ (ಆ ಕಾಲದಲ್ಲಿ ೧೫ ರೂಪಾಯಿಗಳಿಗೆ ೧ ಸವರನ್ ಬೆಲೆಯಿತ್ತು) ತೆಗೆದುಕೊಂಡು ಬಂದು ಎಲ್ಲವನ್ನು ಗುರುಗಳ ಮುಂದಿಟ್ಟು ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದನು. ಅದರ ಪೈಕಿ ಒಂದು ಸವರನ್ ತೆಗೆದುಕೊಂಡು ಮೂರನ್ನು ತಿರುಗಿ ಕೊಡುತ್ತಿದ್ದರು. ಈ ಪ್ರಕಾರ ಕೆಲವು ಕಾಲ ಮಾಡಿದರು. ಕೆಲವು ಕಾಲ ಎರಡು ಸವರನ್ ತೆಗೆದುಕೊಂಡು ಎರಡನ್ನು ತಿರುಗಿ ಕೊಟ್ಟರು. ಮತ್ತೆ ಕೆಲವು ಕಾಲ ಮೂರನ್ನು ತೆಗೆದುಕೊಂಡು ಒಂದನ್ನು ಮಾತ್ರ ತಿರುಗಿ ಕೊಟ್ಟರು. ಈ ರೀತಿ ಮಾಡಿದಾಗ್ಯೂ ಮನಸ್ಸಿನಲ್ಲಿ ಕಿಂಚಿತ್ ವಿಕಾರ ಹೊಂದದೆ ಸಂತೃಪ್ತನಾಗಿರುತ್ತಿದ್ದನು. ಈ ತನ್ನ ಚರ್ಯವು ತಾಯಿಗೂ, ಹೆಂಡತಿಗೂ ಸರಿಬಾರದೆ ವಿಶೇಷ ದ್ವೇಷ ಮಾಡುತ್ತಿದ್ದರು. ಆದಾಗ್ಯೂ ಅತ್ತಕಡೆಗೆ ಲಕ್ಷ್ಯ ಕೊಡದೇ ತನ್ನ ಕ್ರಮವನ್ನೇ ನಡೆಸಿಕೊಂಡು ಬರುತ್ತಾ ತತ್ವ ಶ್ರವಣ ಮಾಡೋದರಲ್ಲಿಯೇ ದೀಕ್ಷಾ ಉಳ್ಳವನಾಗಿದ್ದನು. ಹೀಗಿರೋಣದರಿಂದ ತತ್ವ ನಿಶ್ಚಯವುಳ್ಳವನಾಗಿ ದೃಢಮನಸ್ಕನಾಗಿದ್ದನು. ಈ ಪ್ರಕಾರ ಸತತ ೩ ವರ್ಷ ಸೇವಾ ಮಾಡಿದನು. ಆ ಮೇಲೆ ಒಂದು ದಿನ, "**ಈ ರೀತಿ ಸೇವಾ ಇಷ್ಟೇ ಸಾಕು,**" 'ಅತಿಕ್ರಮಿಸಿದರೆ ದೇವರು ಅದನ್ನು ಸೆಳೆದು ಬಿಡುತ್ತಾರೆ. ಅಷ್ಟಕ್ಕೆ ಅವಕಾಶ ಕೊಡಬಾರದು, ಆದ್ದರಿಂದ ಅನ್ಯತ್ರ ಹೊರಟುಹೋಗು. ಅಲ್ಲಿಗೆ ಹೋದಮೇಲೆ ಈಗಿನಂತೆ ನಿನ್ನ ಸಂಬಳವನ್ನು ನಮಗೆ ಕಳಸಬೇಡ. ನೀನಾದರೂ ಮೇಲಿಂದ ಮೇಲೆ ದರ್ಶನಾರ್ಥ ಬರಬೇಡ. ವಿಶೇಷ ಲವಲವಿಕೆಯಾದರೆ, ಪತ್ರ ಮುಖೇನ ಕೇಳಿಕೊಂಡು ನಮ್ಮಿಂದ ಬರುವದಾಗಿ ಉತ್ತರ ಬಂದರೆ ಬರಬೇಕು. ಮತ್ತು ನಾವು ಯಾವಾಗಲಾದರೂ ಎಷ್ಟು ದ್ರವ್ಯ ಕಳುಹಿಸಲು' ತಿಳಿಸುವೆವೋ ಆಗ ಮಾತ್ರ ಕಳುಹಿಸು' ಅಂತ ಆಜ್ಞಾ ಮಾಡಿದರು. ಈ ಆಜ್ಞೆಯನ್ನು ಶಿರಸಾವಹಿಸಿ ರಾಜಮಹೇಂದ್ರ ಸಮೀಪದ ನರಸಾಪುರ ಎಂಬ ಪಟ್ಟಣದ ಕಾಲೇಜಕ್ಕೆ ಅರ್ಜಿ ಕಳುಹಿಸಿದನು. ಕೂಡಲೇ ಒಂದು ನೂರಾ ಐವತ್ತು ರೂಪಾಯಿ ಸಂಬಳದ ಮೇಲೆ ಪ್ರಥಮ ಸಹಾಯಕ ಪ್ರಾಧ್ಯಾಪಕ ಸ್ಥಾನದಲ್ಲಿ ನೇಮಿಸಲ್ಪಟ್ಟದ್ದಾಗಿ ಉತ್ತರ ಬಂತು. ಗುರು ಪ್ರಸನ್ನತೆ ಪಡೆದು ತಾಯಿ, ಹೆಂಡತಿ, ಒಬ್ಬ ಮಗಳೊಡನೆ ನರಸಾಪುರಕ್ಕೆ ಹೋದನು. (ವಾಚಕರೇ! "ಪರಮಾತ್ಮನಲ್ಲಿ ಆತ್ಯಂತಿಕ ಭಕ್ತಿಯು ಮೌಢ್ಯವಾಗಿರದೆ ಯಥಾರ್ಥ ಮಹಾತ್ಮ್ಯಜ್ಞಾನಪೂರ್ವಕ ವೈರಾಗ್ಯ ಸಹಿತವಾಗಿರಬೇಕೆಂದು ಶಾಸ್ತ್ರವು ಹೇಳುತ್ತದೆ. ಮತ್ತು ಗುರುಭಕ್ತಿಯಾದರೂ "ಯಥಾ ದೇವೇ ತಥಾ ಗುರೌ" ಅಂತ ಸಾರುತ್ತದೆ.) ಈತನಲ್ಲಿಯ ಗುರು ಭಕ್ತಿಯು ಶಾಸ್ತ್ರಾನುಸಾರಿ ಇತ್ತಾದ್ದರಿಂದ

ಈತನು **"ಅನಿತ್ಯಮಲೋಕಮಿಮಂ ಪ್ರಾಪ್ಯ ಭಜಸ್ವಮಾಂ"** ಎಂತಲೂ **"ತತ್ಸರ್ವಂ ಗುರುವೇsರ್ಪಯೇತ"** ಎಂತಲೂ **"ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ"** ಎಂತಲೂ ಜಪಿಸುತ್ತಿದ್ದನು. ಈ ತರದ ಚಿಂತನವೇ ಅಚಲ ಭಕ್ತಿಗೆ ಸಾಧನ. ಪ್ರಥಮ ಸೋಪಾನವಾದ 'ಗುರು ಪ್ರಸಾದ'ಕ್ಕೆ ಯಾವ ಬಗೆಯ ಗುರು ಭಕ್ತಿ ಇರಬೇಕೆಂಬುದನ್ನು ಈ ಪಿ.ಕೆ. ಸುಬ್ಬರಾಯನು ಮಾಡಿದ ಗುರು ಭಕ್ತಿ ಇತಿಹಾಸದಿಂದ ದ್ಯೋತಕವಾಗುತ್ತದೆ.

೨೦. ಟಂಕಸಾಲಿ ಆಚಾರ್ಯರ ಆತಂಕ ಅಳಿಯಿತು.

ಅನಂತರ ಕೆಲವು ದಿನಗಳ ಮೇಲೆ ಮಂತ್ರಾಲಯಕ್ಕೆ ಬರುವದಾಗಿ ಇವರಿಗೆ (ಈ ಆಚಾರ್ಯರಿಗೆ) ಶ್ರೀ ಗುರುರಾಜರು ಆಜ್ಞಾ ಮಾಡಿದರು. ಆ ಮೇರೆಗೆ ಅಲ್ಲಿಗೆ ಹೋದರು. ಅಷ್ಟರಲ್ಲಿ ಸುರಪುರದ **ಯಳಮೇಲಿ ವಿಠ್ಠಲಾಚಾರ್ಯರಲ್ಲಿ** ಅಕ್ಷರಾಭ್ಯಾಸಾರಭ್ಯ ಸುಧಾದಿ ಗ್ರಂಥಗಳವರೆಗೂ ವ್ಯಾಸಂಗ ಮಾಡಿ, ಪಂಡಿತ ಶ್ರೇಣಿಗಣ್ಯರಾದ **ಯಾದಗಿರಿ ಟಂಕಸಾಲಿ ಶ್ರೀನಿವಾಸಾಚಾರ್ಯ ರೆಂಬುವರು** ಮಂತ್ರಾಲಯಕ್ಕೆ ಬಂದು ಸೇವಾ ಮಾಡುತ್ತಿದ್ದರು. ಅವರು ತಮ್ಮ ಗುರುಗಳಾದ ಯಳಮೇಲಿ ಆಚಾರ್ಯರನ್ನು ಕುರಿತು 'ನಾನು ತಮ್ಮಲ್ಲಿ ಇಷ್ಟು ಗ್ರಂಥಗಳ ವ್ಯಾಸಂಗ ಮಾಡಿದೆ. ಹೃದಿಸ್ಥಬಿಂಬವನ್ನು ಕಾಣುವ ಕುರುಹು ತೋರಲಿಲ್ಲ. ಪರಮಾತ್ಮನ ಮಾಹಾತ್ಮ್ಯಜ್ಞಾನಕ್ಕೆ ಸಾಕಾಗುವಷ್ಟು ಗ್ರಂಥಗಳು ಓದಲಾಯಿತು, ಶೋಧಿಸಲಾಯಿತು. ಶ್ರೀ ಮದಾನಂದತೀರ್ಥರ ಗ್ರಂಥಸ್ಥ ಜ್ಞಾನವೇ (ಶಾಸ್ತ್ರಜನ್ಯ ಜ್ಞಾನವೇ) ಅಪರೋಕ್ಷಸಾಧಕ ಮಾರ್ಗವೆಂದು ಸಿದ್ಧಾಂತವಿದ್ದರೂ ಅನುಭವಕ್ಕೆ ಬಾರದಿದ್ದರಿಂದ ಆ ಮಾತಿನಲ್ಲಿ ಸಂಶಯ ಉಂಟಾಗಿದೆ. ಇದು ಪರಿಹಾರವಾಗುವ ಮಾರ್ಗ ಯಾವದು' ಅಂತಾ ಪ್ರಶ್ನಿಸಿದರು. **"ಬಹೂನಾಂ ಜನ್ಮನಾಮಂತೇ"** ಅಂತಾ ಇರೋಣದರಿಂದ 'ಬಹು ಜನ್ಮಗಳಲ್ಲಿ ಶ್ರೀ ಮದಾಚಾರ್ಯರ ಗ್ರಂಥಗಳನ್ನೇ ಸೇವಿಸುತ್ತ ಹೋದಲ್ಲಿ, ಈ ಜನ್ಮಕ್ಕಿಂತಲೂ ಮುಂದಿನ ಜನ್ಮದಲ್ಲಿ, ಅದಕ್ಕೂ ಮುಂದಿನ ಜನ್ಮದಲ್ಲಿ ಕ್ರಮೇಣ ಭಕ್ತಿ–ಜ್ಞಾನ ವೈರಾಗ್ಯ ಇತ್ಯಾದಿಗಳು ಹೆಚ್ಚುತ್ತ ಭಕ್ತಿ ಪರಿಪಕ್ವವಾಗಿ ಅಪರೋಕ್ಷ ಜ್ಞಾನಕ್ಕೆ ಕಾರಣವಾಗುವದು' ಅಂತ ಉತ್ತರ ಕೊಟ್ಟರು. 'ಈ ಮಾತು ಸರಿ ಆದರೆ ಸೃಷ್ಟಿ ಆರಭ್ಯ ಈವರೆಗೂ **ಬಹು** ಎಂಬ ಶಬ್ದಾರ್ಥ ಎಷ್ಟೆಂದು ತಿಳಿಯಬೇಕು? (ಪ್ರಲ್ಹಾದ, ಧ್ರುವ ಮೊದಲಾದವರ ಜನ್ಮಗಳ ವಿಚಾರ ಮಾಡಿದರೆ ಅವರುಗಳಕ್ಕಿಂತಲೂ "ನಮ್ಮ ಜ್ಞಾನವೇ ಬಹುವಾಗಿ" ತೋರುತ್ತದೆ.) ಅಂದ ಮೇಲೆ ನಮ್ಮಕ್ಕಿಂತಲೂ ಕಡಿಮೆ ಜನ್ಮದವರಿಗೆ ಭಗವತ್ ಸಾಕ್ಷಾತ್ಕಾರವಾಗಿ, ತತೋಽಧಿಕ ಜನ್ಮವಾದವರಿಗೆ ಆಗಿಲ್ಲವೆಂದು ಹೇಳೋಣವು ಯುಕ್ತಿ ವಿರುದ್ಧವಾಗಿ ತೋರುತ್ತದೆ. ಇದಕ್ಕೆ ಗತಿ ಏನು?' ಅಂತಾ ಕೇಳಿದ್ದಕ್ಕೆ 'ಯಾರು ಪರಮಾತ್ಮನನ್ನು ಅಪರೋಕ್ಷೀಕರಿಸುತ್ತಾರೆಯೋ ಅವರಿಂದಲೇ ಈ ಸಂಶಯ ಪರಿಹಾರವಾಗಬೇಕು. ಈಗ ಸದ್ಯಕ್ಕೆ ನಮಗೆ ತೋರುವವರಲ್ಲಿ **ವೃಂದಾವನಸ್ಥರಾದಾಗ್ಯೂ ಪ್ರತ್ಯಕ್ಷವಿದ್ದು ಸೇವಕರ ಸೇವಾ ಸ್ವೀಕಾರ ಮಾಡಿ ತದನುಗುಣ ಫಲದಾತೃಗಳೆನಿಸಿದ ಶ್ರೀ ಮಂತ್ರಾಲಯ ಪ್ರಭುಗಳನ್ನೇ ಪ್ರಾರ್ಥನಾ ಮಾಡಬೇಕು. ಅವರೇ ದಯಾಂತಃಕರಣದಿಂದ ಆ ಮಾರ್ಗ ತೋರಿಸಬೇಕು.** ಇಲ್ಲವೆ ಶ್ರುತಿ ಸ್ಮೃತಿಗಳು ಹರಿಯಾಜ್ಞಾ

ಅಂತ ತಿಳಿದು, ಅದರಲ್ಲಿ ಹೇಳಿದಂತೆ ಅನುಷ್ಠಾನ ಮಾಡುತ್ತ ಹೋಗುವದೊಂದೇ ನಮ್ಮ ಕರ್ತವ್ಯ ಅಂತಾ ಹೇಳಿದರು. ಈ ಸಂದರ್ಭದಲ್ಲಿ ಈ ಚರಿತ್ರ ನಾಯಕರು ಶ್ರೀ ಗುರುರಾಜರ ಆಜ್ಞಾ ಮೇರೆಗೆ ಮಂತ್ರಾಲಯಕ್ಕೆ ಹೋಗಿದ್ದರಷ್ಟೆ! ಇವರು ಛತ್ರದಲ್ಲಿ ಇಳಿದುಕೊಂಡಿದ್ದು ತಮ್ಮ ಕ್ರಮ ಪ್ರಕಾರ (ಅಂದರೆ ಅಲ್ಲಿ ನಡೆಯತಕ್ಕ ಮಂಗಳಾರತಿ ವಗ್ಗೆರೆ ಜನ ಸಮ್ಮರ್ದ್ದಿ ಇರುವ ಸಂದರ್ಭ ಬಿಟ್ಟು) ರಾತ್ರಿ ೧೦ ಘಂಟೆಯ ಮೇಲೆ ನಿರ್ಜನವಾದ ನಂತರ ಕಲ್ಯಾಣ ಮಂಟಪದಲ್ಲಿ ಏಕಾಕಿಗಳಾಗಿ ಧ್ಯಾನಾಸಕ್ತರಾಗಿ ಇದ್ದು ಅರುಣೋದಯಾನಂತರ ತಮ್ಮ ಸ್ಥಾನವನ್ನು ಸೇರುತ್ತಿದ್ದರು. ಈ ಬಗೆಯಾಗಿ ಸ್ವಲ್ಪ ದಿನಗಳು ಕಳೆಯಲು, ಆ ಟಂಕಸಾಲಿ ಶ್ರೀನಿವಾಸಾಚಾರ್ಯರು ಇವರಿದ್ದಲ್ಲಿಗೆ ಬಂದು, ಒಂದು ಕಂಬಕ್ಕೆ ಆತುಕೊಂಡು ನಿಂತುಕೊಳ್ಳಲಾರಂಭಿಸಿದರು. ಈ ಉಭಯರಿಗೂ ಪರಸ್ಪರ ಪರಿಚಯವಿರಲಿಲ್ಲ. ಪ್ರಯುಕ್ತ ಒಬ್ಬರನ್ನೊಬ್ಬರು ಮಾತನಾಡಲಿಲ್ಲ. ಈ ರೀತಿ ಪ್ರತಿನಿತ್ಯ ಬಂದು ನಿಂತುಗೊಳ್ಳುವದನ್ನು ನೋಡಿ 'ನೀವು ಯಾರು? ಈ ರೀತಿ ಪ್ರತಿನಿತ್ಯ ನಿಲ್ಲುತ್ತಿರುವದು ಒಂದು ಸಪ್ತಕ ಸುಮಾರಾಯಿತು. ಏನು ಕಾರಣ ನಿಲ್ಲುತ್ತೀರಿ?' ಅಂತ ವಿಚಾರಿಸಿದರು. ಆಗ ಆ ಟಂಕಸಾಲಿ ಆಚಾರ್ಯರು ತಾವು ಬಂದ ವೃತ್ತಾಂತವನ್ನು ತಿಳಿಸಿದ್ದಲ್ಲದೆ 'ಶ್ರೀ ಗುರುರಾಜರು ಸೇವಾಮಾಡಿದ ಫಲವಾಗಿ ಆದವಾನಿಯಿಂದ ತಮ್ಮನ್ನು ಕರೆಯಿಸಿ ತೋರಿಸಿದ್ದಾರೆ. ಅವರಾಜ್ಞಾ ಮೇರೆಗೆ ತಮ್ಮಲ್ಲಿ ಬಂದು ಕಾಯುತ್ತಲಿದ್ದೇನೆ. ಈವರೆಗೆ ತಾವು ಮಾತು ಕೂಡಾ ಆಡಿಸದ ಪ್ರಯುಕ್ತ ನಾನು ಹಾಗೇ ನಿಲ್ಲಬೇಕಾಗಿ ಬಂತು' ಅಂತಾ ಹೇಳಿಕೊಂಡರು. 'ಶ್ರೀ ಗುರುರಾಜರು ನಿರ್ವ್ಯಾಜ ಅಂತಃಕರಣದಿಂದ ಯಾವಾಗಲಾದರೂ ನನ್ನನ್ನು ಆಗಾಗ ಕರೆಸಿಕೊಳ್ಳುತ್ತಿರುತ್ತಾರೆ. ಅದೇ ಪ್ರಕಾರ ಈಗಲೂ ಕರೆಯಿಸಿಗೊಂಡಿದ್ದಾರೆ. ಆದರೆ ಈವರೆಗೆ ಕರೆಸಿಕೊಂಡಿದ್ದರಲ್ಲಿ ಕ್ವಚಿತ್ ಬಾಹ್ಯ ಪ್ರಯೋಜಕಗಳಾಗಿಯೂ ಇವೆ. ಈಗ ಯಾವ ಪ್ರಯೋಜನಾರ್ಥ ಕರೆಸಿಗೊಂಡಿದ್ದಾರೋ ತಿಳಿದಿಲ್ಲ' ಅಂತಾ ಹೇಳಿದರು. **ಈಗ 'ತಮ್ಮನ್ನು ಕರೆಸಿಗೊಂಡಿದ್ದು ನನ್ನ ಸೇವಾನುಗುಣ್ಯವೇ ಹೊರತು ಬೇರೆ ಇರಲಿಕ್ಕಿಲ್ಲ. ಆದ್ದರಿಂದ ನನ್ನ ವಿಷಯಕ್ಕೆ ಸಮರ್ಪಕ ಉತ್ತರ ಕೊಟ್ಟು ಅನುಗ್ರಹ ಮಾಡಬೇಕು'** ಅಂತ ಅನ್ನುತ್ತ ಸಾಷ್ಟಾಂಗ ನಮಸ್ಕಾರ ಮಾಡಿದರು. 'ಏನು, ಶ್ರೀನಿವಾಸಾಚಾರ್ಯರೇ! ತಾವು ದೊಡ್ಡ ಪ್ರವಚನ ಆಚಾರ್ಯರಾದ ಯಳಮೇಲಿ ವಿಠ್ಠಲಾಚಾರ್ಯರ ಶಿಷ್ಯರಾಗಿದ್ದು, ತಾವು ಕೂಡಾ ಪಂಡಿತ ಶ್ರೇಣಿ ಗಣ್ಯರಾಗಿ ತಮ್ಮ ಪಾಂಡಿತ್ಯ ಬಲದಲ್ಲಿ **ಷೋಡಶಾಂಶ ಸಹ ಇಲ್ಲದ ನನ್ನಲ್ಲಿ ನೀವು ಈ ರೀತಿ ಗೌರವ ಮಾಡುವದು ಸರಿಯಲ್ಲ.** ನಿಮಗೆ ಬಂದ ಸಂಶಯಗಳು ಆ ನಿಮ್ಮ ಗುರುಗಳಾದ ಯಳಮೇಲಿ ಆಚಾರ್ಯರಿಂದ ಪರಿಹಾರವಾಗದ ಮೇಲೆ ಯಾರು ಪರಿಹಾರ ಮಾಡಲು ಶಕ್ತರು? ಮತ್ತು ಎಷ್ಟೋ ಸಂಶಯಗಳು ನನಗೂ ಇರುವವು. ಆ ಸಂಶಯಗಳಲ್ಲಿ ಮಹತ್ತರವಾದದ್ದು ಜೀವೇಶ್ವರ ಕರ್ತೃತ್ವ ವಿಷಯ. ಇದು ಶಾಸ್ತ್ರ ದೃಷ್ಟಿಯಲ್ಲಿ ಒಂದು ರೀತಿ ಇದ್ದರೆ, ಅನುಭವದಲ್ಲಿ ಬೇರೆ ರೀತಿಯಲ್ಲಿ ಇರೋಣದರಿಂದ ಅದನ್ನು ಎಷ್ಟು ವಿಮರ್ಶನ ಮಾಡಿದರೂ ಸಂಶಯ ಹೋಗುವ ಹಾಗೆ ಇಲ್ಲ. ಈ ಸಂಶಯ ಹೋಗಬೇಕಾದರೆ ಸಕ್ಕರೆಯ ರುಚಿ-ಸಿಹಿ ಎಂದು ಹೇಳಲು ಬರುವಂತೆ, ಸಿಹಿ ಎಂಬುದು

ಯಾವ ರೀತಿ ಎನ್ನುವದು ಅವರವರ ಅನುಭವದಲ್ಲಿ ಬರುವವರೆಗೂ ತಿಳಿಯು ಬರುವಂತಹದಲ್ಲವೆಂಬುದು ಹೇಗೋ ಅದರಂತೆ ಕರ್ತೃತ್ವವು ತಿಳಿಯಬರುವದಿಲ್ಲ. ಅದನ್ನು ಅನುಭವಕ್ಕೆ ತಂದುಕೊಳ್ಳಬೇಕಾದರೆ **ಆ ಮಹನೀಯರಾದ ಪ್ರಲ್ಹಾದರಾಯರು ಎಷ್ಟು ದಾರ್ಢ್ಯವನ್ನು ಹೊಂದಿದ್ದರೋ ಅಷ್ಟು ದಾರ್ಢ್ಯ ಹೊಂದಿ ಶ್ರೀ ಪರಮಾತ್ಮನನ್ನೇ ಮೊರೆಹೋಗಬೇಕು, ಇದರ ಹೊರತು ಬೇರೆ ಮಾರ್ಗವಿಲ್ಲ.** ತಾವು ಸರ್ವಶಾಸ್ತ್ರಗಳನ್ನು ಆಲೋಚನಾ ಮಾಡಿದ್ದೀರಿ. ಈ ವಿಷಯವಾಗಿ ತಮಗೆ ಬೇರೆ ಏನು ಹೇಳಬೇಕಾಗಿದೆ?' ಅಂತಾ ಔಪಚಾರಿಕವಾಗಿ ಎರಡು ಮಾತನಾಡಿ ಕುಳಿತುಕೊಳ್ಳಲು ಹೇಳಿದರು. ತದಾರಭ್ಯ ದಿನಂಪ್ರತಿ ವಿಷಯ ವಿಚಾರ ಮಾಡಲಾರಂಭಿಸಿದರು. ಈ ಪ್ರಕಾರ ಒಂದು ತಿಂಗಳು ವಿಚಾರ ಆದನಂತರ, ನನ್ನ ಎಷ್ಟೋ ಸಂಶಯಗಳು ಅನಾಯಾಸವಾಗಿ ಪರಿಹಾರವಾದವು. ಆದ್ದರಿಂದ ನನ್ನನ್ನು ಶಿಷ್ಯತ್ವೇನ ಪರಿಗ್ರಹಣ ಮಾಡಬೇಕೆಂದು ಟಂಕಸಾಲಿ ಆಚಾರ್ಯರು ಕೇಳಿಕೊಂಡರು. "ನೀವು ಸುಪ್ರಸಿದ್ಧ ಪ್ರವಚನಾಚಾರ್ಯರ ಶಿಷ್ಯರಾಗಿದ್ದು ಪುನಃ ಅನ್ಯತ್ರ ಶಾಂತಿ ಹಾಕುವ ಅವಶ್ಯಕತೆ ಇಲ್ಲ. ಮತ್ತು ಇದು ಸಮಂಜಸವೂ ಅಲ್ಲ" ಅಂತಾ ಅಂದರು. 'ಯೋಗ್ಯತಾ ಪರತ್ವೇನ ಬಾಧಕವಿಲ್ಲಾಂತ ಶಾಸ್ತ್ರದಲ್ಲಿ ಹೇಳಿದೆ. ಮತ್ತು ಈ ಮೊದಲು ಶೇಲಂ ಸುಬ್ಬಾರಾಯ ಎಂಬುವರು ಶಿಷ್ಯರಾಗಿಲ್ಲವೇ? ಅದರಂತೆ ನಾನು' ಅಂತಾ ನುಡಿದರು. 'ಆತನು ಗೃಹಸ್ಥನು' ಅಂತ ಉತ್ತರ ಕೊಟ್ಟರು. ಆಚಾರ್ಯರೆನಿಸುವವರು ದುರಭಿಮಾನಿಗಳೆಂತಲೋ ತಮ್ಮ ಅಭಿಪ್ರಾಯ ಎಂದು ನಗುತ್ತಾ ಕೇಳಿದರು. ಈ ಮಾತಿಗೆ ಸುಮ್ಮನಿದ್ದರು. 'ತಾವು ಈ ಮಾತಿಗೆ ಸುಮ್ಮನಿರೋಣದರಿಂದ ನನ್ನ ಮಾತು ಒಡಂಬಟ್ಟಂತಾಯಿತು. ಏನೇ ಇರಲಿ ಆಚಾರ್ಯರೆನಿಸುವವರು ದುರಭಿಮಾನಿಗಳು ಮತ್ತು ಪರಶ್ರೇಯಸ್ಸು ಸಹಿಷ್ಣುರಲ್ಲ. ಈ ದುರ್ಗುಣ ನನ್ನಲ್ಲಿಯೂ ಉಂಟು. ಆದರೆ, ಈವರೆಗೂ ಆದ ಸಂವಾದದಿಂದ ನನ್ನ ಮನಸ್ಸು ಲೋಹವನ್ನು ಕಾಯಿಸಿದಂತಾಗಿ ಮೃದುವಾಗಿರುವದರಿಂದ ಈಗಲೇ ಅದನ್ನು ಮಣಿಸಿದರೆ ಮಣಿಯುತ್ತದೆಂದು' ಸಾಷ್ಟಾಂಗ ಪ್ರಣಾಮ ಮಾಡುತ್ತಾ ಶಿಷ್ಯನನ್ನಾಗಿ ಮಾಡಿಕೊಳ್ಳಬೇಕೆಂದು ಪ್ರಾರ್ಥನಾ ಮಾಡಿದರು. ಮರುದಿವಸ ಶಾಂತಿ ಹಾಕಿ ಮಂತ್ರೋಪದೇಶವನ್ನು ಹೊಂದಿದರು. ಅನಂತರ ಸ್ವಲ್ಪ ದಿನಗಳು ಅಲ್ಲಿದ್ದು ಉಭಯರೂ ಕೂಡಿ ಆದವಾನಿಗೆ ಬಂದರು.

೨೧. ಕೇವಲ ಅಧ್ಯಯನ ಅಧ್ಯಾತ್ಮ ತಿಳಿಸದು.
(ಯಳಮೇಲಿ ಆಚಾರ್ಯರ ಆದರೋಕ್ತಿ)

ಈ ಸಂವಾದದಲ್ಲಿ ಸಂದರ್ಭಾನುಸರಿಸಿ ತಾವು ಮಾಡಿದ ಹಾಗೂ ತಮ್ಮ ಗುರುಗಳಾದ ಹತ್ತಿಬೆಳಗಲ್ ಅರಳೀಕಟ್ಟಿ ಆಚಾರ್ಯರು ಮಾಡಿದ ಸಾಧನ ವಿಶೇಷಗಳ ವಿವರಣೆ ಮಾಡಿದರು. ಅದರಲ್ಲಿ ಭಗವದಪರೋಕ್ಷಾಕಾಂಕ್ಷಿಯು ಯಾವ ರೀತಿ ಅಭಿಮಾನಾದಿ ದೋಷಗಳ ಪರಿತ್ಯಾಗಪೂರ್ವಕ ಅನನ್ಯ ಭಕ್ತಿಯಿಂದ ಸಾಧನ ಮಾಡಬೇಕೆನ್ನುವದು ಶಾಸ್ತ್ರದಿಂದ ತಿಳಿದಾಗ್ಯೂ, ಒಬ್ಬರು ಸಾಧನ ಮಾಡಿದ್ದು ನೋಡೋಣದರಿಂದ ಎಷ್ಟು ಸಂಶಯಗಳು ಪರಿಹಾರವಾಗುವವೋ ಅಷ್ಟು ಕೇವಲ ಶಾಸ್ತ್ರ ವಿಮರ್ಶನ ಮಾಡುವದರಿಂದ ಮಾತ್ರ ಪರಿಹಾರವಾಗುವದಿಲ್ಲ. ಆದರೆ

ಸಂಸಾರಬದ್ಧರಾದ ನಮ್ಮಗಳಿಗೆ ರಾಗ ದ್ವೇಷಗಳು ದೂರವಾಗಿ, ಇಷ್ಟು ರೀತಿಯಿಂದ ಸಾಧನ ಮಾಡಲು ಧೈರ್ಯವಿರಬೇಕಾದರೆ ಆ ಪರಮಾತ್ಮನೇ **ಏನಂ ಮೋಚಯಾಮಿ** ಅಂತ ಸಂಕಲ್ಪಿಸಿ ಸಾಧನ ಮಾಡಿಸಿದರೆನೇ ಆಗುತ್ತದೆ ಹೊರತು ಕೇವಲ ನಮ್ಮ ಯತ್ನದಿಂದ ಸಾಧಿಸಲಾರದು. ಆದಾಗ್ಯೂ ಪ್ರಯತ್ನ ಮಾಡಿ ನೋಡುವ ಇಚ್ಛಾ ಉಂಟಾಗಿದೆ. ಊರಿಗೆ ಹೋದಮೇಲೆ ನೋಡುತ್ತೇನೆ ಅಂತಾ ಹೇಳಿ, ಆದವಾನಿಯಿಂದ ಪ್ರಯಾಣ ಮಾಡಿ ಸುರಪುರಕ್ಕೆ ಹೋಗಿ, ಇತ್ತ ಆದ ವಿಷಯವನ್ನೆಲ್ಲ ಯಳಮೇಲಿ ಆಚಾರ್ಯರಲ್ಲಿ ತಿಳಿಸಿದರು. ಅವರಾದರೂ ಸಮಯೋಚಿತ ಶಬ್ದಗಳಿಂದ ಶ್ಲಾಘನಾಮಾಡಿ ಇದಕ್ಕೂ ಮೊದಲು ಇವರನ್ನು (ಈ ಮುತ್ತಿಗಿ ಆಚಾರ್ಯರನ್ನು) ಗದ್ವಾಲದಲ್ಲಿ ನೋಡಿದಾಗ, ಅವರಲ್ಲಿ ವಾಯು ದೇವರ ಸನ್ನಿಧಾನ ವಿಶೇಷ ಕುರುಹು ಕಂಡದ್ದಾಗಿಯೂ ಹೇಳಿ, **'ಈ ಘೋರ ಕಾಲದಲ್ಲಿ ಇಷ್ಟು ಸಾಧನಾತಿಶಯಗಳನ್ನು ಮಾಡಿದವರೆಂದರೆ ಅವರೊಬ್ಬರೇ!'** ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. "ನಾವುಗಳೆಲ್ಲ ಪರೋಕ್ಷ ಜ್ಞಾನಿಗಳು. ಶಾಸ್ತ್ರ ಮುಂದಿಟ್ಟುಕೊಂಡು ಕೂತಾಗ ಅಗಾಧವಾಗಿ ಹರಿ ಸರ್ವೋತ್ತಮತ್ವವನ್ನು ಜಗತ್ತಿನ ಪಾರತಂತ್ರ್ಯವನ್ನು ಪ್ರತಿಪಾದನಾ ಮಾಡುತ್ತೇವೆ, ಆ ಪುಸ್ತಕ ಮುಚ್ಚಿದ ಕೂಡಲೇ **ಸರ್ವಕತೃತ್ವ ಭೋಕ್ತೃತ್ವ** ಆರೋಪಿಸಿಗೊಂಡು ಪಾಮರರಂತೆ ದಾರಾಪುತ್ರಾದಿಗಳಲ್ಲಿಯೇ ಆಸಕ್ತರಾಗುತ್ತೇವೆ. ಇಷ್ಟು ತಿಳಿದಾಗ್ಯೂ ಹಾಂಗೇಕೆ ಆಗಬೇಕೆಂದರೆ ಇನ್ನೂ ನಮ್ಮಗಳಿಗೆ ಪಕ್ವಕಾಲ ಬಂದಿಲ್ಲಾಂತ ಹೇಳಬೇಕು. ನೀವು ಪ್ರಯತ್ನ ಮಾಡಿ ನೋಡಬೇಕೆಂದು ಮಾಡಿದ್ದು ಯುಕ್ತವೇ ಸರಿ. ಆದರೆ ನೀವು ಚಂಚಲ ಸ್ವಭಾವಿಗಳು. ಅಷ್ಟು (ಮುತ್ತಿಗಿ ಆಚಾರ್ಯರ ದಾರ್ಢ್ಯದಷ್ಟು) ನಿಮಗೆ ಬರಲಾರದು. **'ಕಿಂ ಬಹೂನಾ'** ಪಕ್ವಕಾಲ ಬಂದಾಗ ಗಿಡದಿಂದ ಫಲವು ಹ್ಯಾಂಗೆ (ಕೆಳಗೆ) ಕಳಚಿ ಬೀಳಬೇಕೋ ಅದರಂತೆ ಮನಸ್ಸಿನಲ್ಲಿ ಆರೂಢವಾದ ವಿಷಯಗಳು ಮನಸ್ಸಿನಿಂದ ದೂರವಾಗಬೇಕು. ಇದೆಲ್ಲ ಆ ಪರಮಾತ್ಮನ ಇಚ್ಛೆಗೆ ಬರಬೇಕು" ಅಂತಾ ಹೇಳಿ ಒಂದೆರಡು ದಿನಗಳು ನಿಲ್ಲಿಸಿಕೊಂಡು ಅಪ್ಪಣೆ ಕೊಟ್ಟರು. ಅಪ್ಪಣೆ ಪಡೆದುಕೊಂಡು ಆಟಂಕಸಾಲಿ ಶ್ರೀನಿವಾಸಾಚಾರ್ಯರು ಸ್ವಗೃಹಕ್ಕೆ (ಯಾದಗಿರಿಗೆ) ಬಂದು ಸೇರಿದರು.

೨೨. ಅನವರತ ಶ್ರವಣ ಆನಂದಕರಣ

ಈ ಟಂಕಸಾಲಿ ಶ್ರೀನಿವಾಸಾಚಾರ್ಯರ ನಿಮಿತ್ತ ಮಂತ್ರಾಲಯದಲ್ಲಿ ಇರುವ ಸಮಯದಲ್ಲಿ ಕೊಪ್ಪಳದ 'ಮುಧೋಳ ತಿರುಮಲರಾಯ'ನೆಂಬ ಶ್ರೀ ಚಿಂತರವೇಲಿ ಶೇಷದಾಸರ ಶಿಷ್ಯರಲ್ಲೊಬ್ಬರಾದ ಬಚೇನಿ ಶ್ರೀನಿವಾಸರಾಯರ ಶಿಷ್ಯನು ಸೇವಾ ಮಾಡುತ್ತಾ ಇದ್ದನು. ಈತನು ಗದಗ ಶೇಷಗಿರಿರಾಯನ ಮುಖಾಂತರ ಇವರ (ಈ ಚರಿತ್ರ ನಾಯಕರ) ಮಹಿಮಾ ಕೇಳಿದ್ದನಾದ್ದರಿಂದ ಆ ಗೃಹಸ್ಥನು ಇವರಲ್ಲಿ ಬಂದು ಟಂಕಸಾಲಿ ಆಚಾರ್ಯರಿಗೆ ಹೇಳುವ ಸಮಯದಲ್ಲಿ ತತ್ವ ಶ್ರವಣ ಮಾಡುತ್ತಿದ್ದನು. ಆ ಆಚಾರ್ಯರಿಗೆ ಹೇಳುವ ವಿಷಯಗಳು ಅತೀ ಪ್ರೌಢವಾಗಿದ್ದರಿಂದ ಈತನಿಗೆ ಪೂರ್ಣ ಬೋಧವಾಗುತ್ತಿರಲಿಲ್ಲ. ಆದಾಗ್ಯೂ ಶ್ರವಣ ಮಾಡಬೇಕೆಂಬ ಕುತೂಹಲದಿಂದ ಬರುತ್ತಿದ್ದನು. ಹೀಗೆ ಕೆಲವು ದಿನಗಳು ಗತಿಸಿದ ಬಳಿಕ

ಮಂತ್ರಾಲಯದಲ್ಲಿ ಸೇವಾ ಮುಗಿದ ಬಳಿಕ ತನ್ನ ಸ್ವಗ್ರಾಮಕ್ಕೆ ಹೋಗಿ, ಅಲ್ಲಿ ತನ್ನ ಆಪ್ತಮಿತ್ರರಾದ ಕೆಲವರಲ್ಲಿ ಇವರ ಮಹಿಮಾ ತಿಳಿಸೋಣದರಿಂದ ಅವರುಗಳು ಇವರನ್ನು ನೋಡಬೇಕೆಂಬ ಕುತೂಹಲವುಳ್ಳವರಾಗಿ ಕಿನ್ನಾಳ ಭೀಮಣ್ಣ ನಾಯಕ, **ಕಾಗಲಕರ ರಾಘವೇಂದ್ರರಾವು** ಕೂಡಿ ಆದವಾನಿಗೆ ಬಂದು ನಾಲ್ಕಾರು ದಿನಗಳಿದ್ದು, ನಮ್ಮ ಇನ್ನೂ ಕೆಲವು ಮಿತ್ರರು ತಮ್ಮಿಂದ ತತ್ವ ಶ್ರವಣಾಕಾಂಕ್ಷಿಗಳಾಗಿ ತಮ್ಮನ್ನು ಕರೆದುಕೊಂಡು ಬರುವದಾಗಿ ಹೇಳಿದ್ದಾರೆ. ಇನ್ನು ಒಂದೆರಡು ದಿನಗಳು ಪ್ರತೀಕ್ಷಿಸಿ ಅವರುಗಳು ಹತ್ತಿಪ್ಪತ್ತು ಮಂದಿ ಇಲ್ಲಿಗೆ ಬರುತ್ತಾರೆ. ಅಷ್ಟು ಜನರು ಬಂದರೆ ಇಲ್ಲಿ ಕೂತುಕೊಳ್ಳಲಿಕ್ಕೆ ಸಹ ಸ್ಥಲ ಸಾಲದು. ಆದ್ದರಿಂದ ತಾವೆ ಕೊಪ್ಪಳಕ್ಕೆ ಹೊರಡಬೇಕು. ಅಲ್ಲಿ ತಮಗೆ ಯಾವ ರೀತಿ ಸೌಕರ್ಯ ಬೇಕೋ ಆ ರೀತಿ ಕಲ್ಪಿಸಲಾಗುವುದು ಎಂದು ಅತ್ಯಾದರದಿಂದ ವಿಜ್ಞಾಪನಾ ಮಾಡಿಕೊಂಡರು. ಇವರಾದರೂ ಇಲ್ಲಿ ಸ್ಥಳ ಸಂಕೋಚ ನಿಮಿತ್ತ ಅವರುಗಳು ಇಲ್ಲಿ ಬರುವದಕ್ಕಿಂತಲೂ ನಾವೇ ಅಲ್ಲಿ ಹೋಗುವದು ಉತ್ತಮವೆಂದು ಕೊಪ್ಪಳಕ್ಕೆ ಹೋದರು. ಅಲ್ಲಿ ವಕೀಲ ಹಣಮಂತರಾಯರು, ಸುಳಾದಿ ವೆಂಕಟರಾಯರು, ಪೇಷ್ಕಾರ ವೆಂಕಟರಾಯರು, ಬನ್ನಗೋಳ ಭೀಮರಾಯರು, ಮುದ್ಲಾಪುರ ಶ್ರೀನಿವಾಸಯರಾಯರು, ಮುತ್ತಿಗಿ ವೇದವ್ಯಾಸಾಚಾರ್ಯರು, ಪೇಷ್ಕಾರ ನಾರಾಯಣರಾಯರು, ಮುಧೋಳ ತಿರುಮಲರಾವ ವಗೈರೆ ಪ್ರಭೃತಿಗಳು ಇವರ ಬರುವಿಕೆಯನ್ನು ಪ್ರತೀಕ್ಷಾ ಮಾಡುತ್ತಿದ್ದರು. ಇವರು ಬಂದ ಕೂಡಲೇ ಸರ್ವರೂ ಸಂಭ್ರಮದಿಂದ ಸ್ವಾಗತವನ್ನು ಮಾಡಿ ಇವರಿಗಾಗಿ ಒಂದು ಮನೆಯನ್ನು ಖಾಲಿ ಮಾಡಿಕೊಟ್ಟರು. ಅಂದಿನಾರಭ್ಯ ಪ್ರಾತಃಕಾಲದಿಂದ ಹತ್ತು ಗಂಟೆಯವರೆಗೂ, ಸಾಯಂಕಾಲ ಐದು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೂ, ಪುನಃ ರಾತ್ರಿ ೧೦ ಘಂಟೆಯಿಂದ ೧೨ ಘಂಟೆಯವರೆಗೂ ತತ್ವ ಶ್ರವಣ ಮಾಡಹತ್ತಿದರು. ಆ ಪ್ರಕಾರ ಒಂದು ವಾರ ಅನುವಾದ ಮಾಡಿದ್ದು ನೋಡಿ ವಕೀಲ ಹನುಮಂತರಾಯರು, ಈವರೆಗೂ ಆಚಾರ್ಯರಿಗೆ ನಾವು ಬಹು ಶ್ರಮಕೊಟ್ಟೆವು. ಇದು ನಮಗೆ ಅಲಂ ಬುದ್ಧಿಯನ್ನು ಹುಟ್ಟಿಸದೇ ಇದ್ದರೂ ನಮ್ಮಲ್ಲಿಯ ಸಂಶಯ, ಅಜ್ಞಾನ ಎಷ್ಟೋ ದೂರವಾದವು. ಆದರೆ ಈ ರೀತಿ ಪ್ರತಿದಿನಾ ಎಂಟು-ಹತ್ತು ತಾಸು ಅವಿಶ್ರಾಂತಿ ಅನುವಾದ ಯಾರಿಂದಲೂ ಸಾಧ್ಯವಿಲ್ಲ. ನಾವುಗಳು, (ವಕೀಲರು) ಕೋರ್ಟಿನಲ್ಲಿ ಒಮ್ಮೊಮ್ಮೆ ಎರಡು, ಮೂರು ತಾಸು ವಾದ (Hearings) ಮಾಡಿದರೆ ಆ ದಿನ ತಲೆಶೂಲಿಗೈದು ಆಯಾಸವಾಗುವದು. ಈ ಆಚಾರ್ಯರು ಮಾಡಿದ್ದು ನೋಡಿದರೆ ಅವರಿಗೆ ಕಿಂಚಿದಪಿ ಆಯಾಸವಾಗದೆ, **ಕಿಂ ಬಹುನಾ** ದಿನೇ ದಿನೇ ಉತ್ಸಾಹದಿಂದಲೇ ತೋರುತ್ತಾರೆ. ಆದರೆ, ಈಗ ಅವರಕ್ಕಿಂತಲೂ ನಮ್ಮಗಳಿಗೆ ಶ್ರಮ ತೋರಿರುವದರಿಂದ ನಾವೇ ವಿಶ್ರಾಂತಿಯನ್ನು ಅಪೇಕ್ಷಾ ಮಾಡಬೇಕಾಗಿದೆ. ಪ್ರಯುಕ್ತ ೨ ದಿನಗಳು ಕೇವಲ ದರ್ಶನ ಮಾತ್ರ ತೆಗೆದುಕೊಂಡು ಕೂಡಲೇ ನಮ್ಮ ನಮ್ಮ ಮನೆಗೆ ಹೋಗಬೇಕೆಂಬುದಾಗಿ ಹೇಳಿ, ಅದರಂತೆ ಮಾಡಿ, ಮತ್ತು ಮೂರನೇ ದಿನದಿಂದ ತತ್ವ ಶ್ರವಣ ಮಾಡಲಾರಂಭಿಸಿದರು. ಆಗಾಗ ಒಂದೆರಡು ದಿನ ವಿಶ್ರಾಂತಿ, ಮತ್ತೆ ಪೂರ್ಣ ಶ್ರವಣ ಹೀಗೆ ಒಂದು ತಿಂಗಳು ಶ್ರವಣ ಮಾಡಿದರು. ಮುತ್ತಿಗಿ ವೇದವ್ಯಾಸಾಚಾರ್ಯ, ಕಾಗಲಕರ

ರಾಘವೇಂದ್ರರಾವ, ಪೇಷ್ಕಾರ ನಾರಾಯಣರಾವ, ಭೀಮಣ್ಣ ನಾಯಕ ಶಿಷ್ಯರಾದರು. 'ಪ್ರತಿ ವರುಷ ಇದರಂತೆ ನಮ್ಮಲ್ಲಿ ಬಂದು ಅನುಗ್ರಹ ಮಾಡಬೇಕು' ಅಂತ ಆ ಜನರು ಕೇಳಿಕೊಂಡರು. ಆದರೆ "ನಾನು ಸ್ವತಂತ್ರನಲ್ಲ, ಯದ್ಯಪಿ ಯಾವ ಜಗತ್ತು ಪರತಂತ್ರವಾದಾಗ್ಯೂ ಎಷ್ಟೋ ಜನರು ತಾವು ಸ್ವತಂತ್ರರೆಂದು ಆರೋಪಿಸಿಗೊಂಡಿದ್ದಾರೆ. ಮತ್ತು ಕೆಲವರು ಸರ್ವತಂತ್ರ ಸ್ವತಂತ್ರರೆಂದು ಹೊಗಳಿಸಿಕೊಳ್ಳುತ್ತಾರೆ. ಅದರಂತೆ ಆರೋಪಿಸಿಕೊಳ್ಳಲಿಕ್ಕೂ, ಹೊಗಳಿಸಿಕೊಳ್ಳಲಿಕ್ಕೂ ಸಹ ನನಗೆ ಇಚ್ಛೆಯಿಲ್ಲ. ನನ್ನ ನಡೆ ನುಡಿಗಳೆಲ್ಲವೂ ಶ್ರೀ ಹರಿವಾಯುಗಳ ಅಧೀನವಿರೋಣದರಿಂದ ಅವರ ಅಪ್ಪಣೆಯಾದರೆ ಬರುತ್ತೇವೆ. ಮತ್ತು ಅವರು ಎಲ್ಲಿಯವರೆಗೆ ಇರಲು ಅವಕಾಶ ಕೊಡುವರೋ ಅಲ್ಲಿಯವರೆಗೆ ಇರುತ್ತೇವೆ. ಅವರು ಯಾವ ಕ್ಷಣದಲ್ಲಿ ಹೊರಡು ಎಂದು ಅನ್ನುವರೋ ತಕ್ಷಣ ಹೊರಡತಕ್ಕವನು. ಆ ಸಂದರ್ಭದಲ್ಲಿ ಮಾತ್ರ ನಮ್ಮನ್ನು ತಡೆಯಬೇಡಿರಿ" ಅಂತಾ ಹೇಳಿದರು. ಈ ಮಾತಿಗೆ ಆ ಜನರು ಒಪ್ಪಿಕೊಂಡು ಇವರನ್ನು ಆದವಾನಿಯವರೆಗೂ ಬೀಳ್ಕೊಡಲು ಭೀಮಣ್ಣ ನಾಯಕನು ಮತ್ತು ಕಾಗಲಕರ್ ರಾಘವೇಂದ್ರರಾಯರು ಬಂದರು.

೨೩. ಶ್ರೀ ಹರಿಸಂಕಲ್ಪ ಸತ್ಯ

ಮತ್ತೆ ಕೆಲವು ತಿಂಗಳ ನಂತರ ಮುತ್ತಿಗಿ ಆಚಾರ್ಯರು ಕೊಪ್ಪಳಕ್ಕೆ ಹೋದರು. ಆಗ ಸ್ವಲ್ಪ ದಿನಗಳು ಮಾತ್ರ ಕೊಪ್ಪಳದಲ್ಲಿ ಇದ್ದು, ನಂತರ ಭೀಮಣ್ಣ ನಾಯಕನು ತನ್ನ ಗ್ರಾಮವಾದ ಕಿನ್ನಾಳಕ್ಕೆ ಕರೆದುಕೊಂಡು ಹೋದನು. ಅಲ್ಲಿ ಹದಿನೈದು ದಿನಗಳಲ್ಲಿದ್ದು, ಮುಂದೆ ಯಲಬುರ್ಗಿ ವಗೈರೆ ಗ್ರಾಮಗಳಿಗೂ ಹೋಗಿ, ಕುಷ್ಟಗಿಗೂ ಕರಕೊಂಡು ಹೋಗುವ ವಿಚಾರವಿತ್ತು. ಅಷ್ಟರಲ್ಲಿ ಆ ಪ್ರಾಂತದ ಕೆಲವರು, ಇವರ ಮಹಾತ್ಮೆಯನ್ನು ಕೇಳಿ ಕರೆಯಲೋಸುಗ ಬಂದರು. ಇವರು (ಈ ಮುತ್ತಿಗಿ ಆಚಾರ್ಯರು) ಕಿನ್ನಾಳದಲ್ಲಿ ಇರುವವರೆಗೂ ಪ್ರತಿ ನಿತ್ಯ ಮುಂಜಾನೆ- ಸಾಯಂಕಾಲ (ಮಾದನೂರ) "ಶ್ರೀ ವಿಷ್ಣುತೀರ್ಥರ" (ಅಡಿವಿ ಸ್ವಾಮಿಗಳ) ವೃಂದಾವನ ದರ್ಶನ ತೆಗೆದುಕೊಂಡು ಬರುತ್ತಿದ್ದರು. ಆ ಜನರ ಪ್ರಾರ್ಥನಾ ಮೇರೆಗೆ ಯಲಬುರ್ಗಿ ಕಡೆ ಪ್ರಯಾಣ ಮಾಡಿದರು. ಅತ್ತ ನಾಲ್ಕಾರು ಗ್ರಾಮಗಳಿಗೂ ಹೋದರು. ಇನ್ನೂ ೮-೧೦ ಗ್ರಾಮಗಳಿಗೆ ಹೋಗಬೇಕಾಗಿತ್ತು, ಅಷ್ಟರಲ್ಲಿ ಆದವಾನಿಗೆ ಹೊರಡುವದಾಗಿ ಶ್ರೀಹರಿ ವಾಯುಗಳ ಆಜ್ಞಾ ಆಯಿತು. ಈ ವಿಷಯ ಆ ಜನಗಳಿಗೆ ಖೇದವನ್ನುಂಟು ಮಾಡಿತು. ಇವರ ಅಪ್ಪಣೆಯಂತೆ ಕೊಪ್ಪಳಕ್ಕೆ ಹೊರಡುವದೆಂದು ಹೇಳಿ, ತಮ್ಮ ಉದ್ದಿಷ್ಟ ಗ್ರಾಮದ ಕಡೆ ಬಂಡಿಯನ್ನು ನಡೆಸಿದರು. ಆದರೆ ಆ ಎತ್ತುಗಳು ಮಾರ್ಗವನ್ನು ಬಿಟ್ಟು ಕೊಪ್ಪಳ ಮಾರ್ಗದ ಕಡೆಗೆ ತಿರುಗಿದವು. ಹಿಂದೆ ಹಿಂಬಾಲಿಸಿದ ಎಂಟು-ಹತ್ತು ಜನರೂ ಸಾಕಷ್ಟು ಪ್ರಯತ್ನ ಮಾಡಿದರು. ಕೊಪ್ಪಳದ ದಾರಿ ಬಿಟ್ಟು ಬೇರೆ ಬೇರೆ ದಾರಿಗೆ ತಿರುಗಿಸಿ ಹೋಗಲು, ಏಕಾ-ಏಕಿ ಬಂಡಿಯು ಮುರಿಯಿತು! ಇದರಿಂದ ಸರ್ವರಿಗೂ ಸಖೇದಾಶ್ಚರ್ಯವಾಗಿ ಬೇರೆ ಗಾಡಿಯನ್ನು ತಂದು ಇವರಾಜ್ಞಾ ಪ್ರಕಾರ ಕೊಪ್ಪಳಕ್ಕೆ ಬಂದು ಆದವಾನಿಗೆ ತಂದು ಬಿಟ್ಟರು. (ಆ ಕಾಲದಲ್ಲಿ ಮೋಟಾರ ಇರಲಿಲ್ಲ).

೨೪. ಭಾಗಿ ಗುಂಡಪ್ಪ ಭಾಗ್ಯಪಡೆದ.

ಮುಂದೆ ಕೆಲ ಕಾಲದ ನಂತರ ತಮ್ಮ ಪುತ್ರನಾದ "ಸ್ವಾಮಿರಾಯನಿಗೆ" ಉಪನಯನ ಮಾಡುವ ವಿಚಾರ ನಡೆಯಿತು. ಈ ವಿಚಾರವನ್ನು ಕೇಳಿದ ಆ ಶಿಷ್ಯರು ಕೂಡಿ, ಈ ಉಪನಯನ ಉತ್ಸವವನ್ನು ಒಳ್ಳೆಯ ವಿಜೃಂಭಣೆಯಿಂದ ನಡೆಸಬೇಕಾಗಿ ಕೇಳಿಕೊಂಡರು. "ನಾವು ರಿಕ್ತರು", ಆ ರೀತಿ ವಿಜೃಂಭಣೆಯಿಂದ ನಡೆಸಬೇಕೆಂಬ ಅಭಿಲಾಷೆ ನಮಗಿಲ್ಲ. ಉಪನಯನಕ್ಕೆ ಒಂದು ಜನಿವಾರ, ಲಂಗೋಟಿ, ಪಾವು ಮಂತ್ರಾಕ್ಷತಾ, ಪುರೋಹಿತರು ಇಷ್ಟಾದರೆ ಸಾಕು. "ದೈವೇಚ್ಛೆಯಿಂದ ತಾನಾಗಿಯೇ ವಿಜೃಂಭಣೆಯಿಂದ ಉತ್ಸವ ನಡೆದರೆ ನಡೆಯಲಿ, ಅದಕ್ಕಾಗಿ ನಾವು ಪ್ರಯತ್ನ ಮಾಡುವ ಕಾರಣವಿಲ್ಲ" ಅಂತ ಶಿಷ್ಯರಿಗೆ ಹೇಳಿದರು. ಈ ವಾರ್ತೆ ಭಾಗಿ ಗುಂಡಪ್ಪನಿಗೆ ತಿಳಿದು ಆತನು ಬಂದು 'ಈ ಉಪನಯನದ ಪುಣ್ಯಕ್ಕಾದರೂ ಭಾಗಿದಾರನನ್ನಾಗಿ ಮಾಡಿರಿ' ಅಂತ ಕೇಳಿಕೊಂಡನು. 'ಒಳ್ಳೆದು' ಅಂತಾ ಅಂದರು. ಇದಕ್ಕೆ ಆತನು ಸಂತುಷ್ಟನಾಗಿ ಮೂರು ದಿನಗಳಿಗೆ ಆದವಾನಿಯ ಯಾವತ್ತೂ ಬ್ರಾಹ್ಮಣರಿಗೆ ಭೋಜನಕ್ಕೆ ಸಾಲುವಷ್ಟು ಪದಾರ್ಥಗಳನ್ನು ತಂದಿಟ್ಟು ನಮಸ್ಕಾರ ಹಾಕಿದನು. 'ಇಷ್ಟು ಪದಾರ್ಥ ಯಾಕೆ ತಂದೆಪ್ಪಾ, ಸ್ವಲ್ಪ ತಂದಿದ್ದರೆ ಅಷ್ಟರಲ್ಲಿಯೇ ತಕ್ಕಷ್ಟು ಮಾಡಿ ಬಿಡುತ್ತಿದ್ದೆವು. ಇಷ್ಟು ಪದಾರ್ಥ ತಂದುಕೊಡೋಣದರಿಂದ ವಿಸ್ತಾರ ಮಾಡಬೇಕಾಯಿತು. ಈವರಿಗೂ ನಾವು ಕೇವಲ ಗೋಪಾಳದಿಂದಲೇ ಜೀವಿಸುತ್ತ ರಿಕ್ತಾವಸ್ಥೆಯಿಂದಿದ್ದು ಈಗ ಏಕಾ-ಏಕಿ ಸಹಸ್ರಾರು ಜನರ ಭೋಜನಕ್ಕೆ ಪದಾರ್ಥ ಒದಗಿಸಿದರೆ, ಜನರು **ನನ್ನನ್ನು ಗಂಟುಗಳ್ಳನೆಂದಾರು!**' ಅಂತ ಹಾಸ್ಯಮುಖದಿಂದ ನುಡಿದರು. "ಹೌದು ಸ್ವಾಮೀ, ತಾವು ತಮ್ಮ ಗಂಟನ್ನು ಯಾರಿಗೂ ಕೊಡತಕ್ಕವರಲ್ಲ, ಮತ್ತು ತೋರಿಸತಕ್ಕವರೂ ಸಹ ಅಲ್ಲ, ಈ ವಿಷಯದಲ್ಲಿ ವೈಶ್ಯರಿಗಿಂತಲೂ ವೈಶ್ಯರಾಗಿದ್ದೀರಿ!!" ಅಂತಾ ಆತನೂ ಪರಿಹಾಸ ಮಾಡಿದನು. ಶ್ರೀ ಹರಿವಾಯುಗಳು ಇನ್ನುಮೇಲೆ (ಗಂಧದಂತೆ) ನಮ್ಮನ್ನು ಹರಡಿಸುವಂತೆ ಕಾಣಿಸುತ್ತದೆ. ಅವರ ಇಚ್ಛಾಕ್ಕೆ ಬಂದಂತಾಗಲಿ. ಶಾ.ಶ. ೧೮೫೩ ಪರಾಭವ ಸಂವತ್ಸರ, ಮಾಘ ಶುದ್ಧದಲ್ಲಿ ಉಪನಯನ ಮುಹೂರ್ತವನ್ನಿಟ್ಟರು. ಶಿಷ್ಯರುಗಳೆಲ್ಲರೂ ಬಂದು ತಮ್ಮ ಶಕ್ತ್ಯಾನುಸಾರ ದ್ರವ್ಯಾದಿ ಪದಾರ್ಥಗಳನ್ನು ಸಮರ್ಪಿಸಿದರು. ಈ ಉತ್ಸವವು ಎಂಟು-ಹತ್ತು ದಿನಗಳವರೆಗೆ ಒಳ್ಳೇ ವಿಜೃಂಭಣೆಯಿಂದ ನೆರವೇರಿತು.

೨೫. ವಾಯಿವರದಾಚಾರ್ಯರ ದ್ವಂದ್ವಭಾವ.

ಕೆಲಕಾಲಾನಂತರ ನ್ಯಾಯಶಾಸ್ತ್ರ ಪಂಡಿತರೂ, ಶ್ರೀ ಸತ್ಯಪರಾಕ್ರಮ ಸ್ವಾಮಿಗಳ ವಂಶಸ್ಥರೂ, ಹೈದ್ರಾಬಾದ ವಾಸಿಗರೂ ಆದ ವಾಯಿ ನಾರಾಯಣಾಚಾರ್ಯರ ಮಕ್ಕಳಾದ ವರದಾಚಾರ್ಯರೆಂಬುವರು ಒಬ್ಬ ಗೋಸಾಯಿಯ ಉಪದೇಶದಿಂದ ಆ ಮಾರ್ಗಾವಲಂಬನ ಮನಸ್ಕರಾಗಿ ಮನೆಯಲ್ಲಿ ಸರಿಯಾಗಿ ವರ್ತಿಸದೆ ಇರುತ್ತಿದ್ದರು. ಅವರನ್ನು ಸರಿಯಾದ ಮಾರ್ಗಕ್ಕೆ ತರಬೇಕೆಂದು ತಮ್ಮ (ವಾಯಿ ನಾರಾಯಣಾಚಾರ್ಯರು) ಪಾಂಡಿತ್ಯವೆಲ್ಲವನ್ನು ಉಪಯೋಗಿಸಿದಾಗ್ಯೂ ಪ್ರಯೋಜನವಾಗಿರಲಿಲ್ಲ. ಆ ಗೋಸಾಯಿಯ ಉಪದೇಶವು ಅದ್ವೈತೋಪಾಸನಾಕ್ಕೆ ಹೊಂದುವಂತಿತ್ತು. ಕಾಲಬಲದಿಂದಲೋ, ಸಹವಾಸ ಬಲದಿಂದಲೋ,

ಕರ್ಮ ವಿಚಾರದಿಂದಲೋ, ಅವಸ್ಥಾ ಪರಿಣಾಮದಿಂದಲೋ ಆ ಗೋಸಾಯಿ ಉಪದೇಶದಲ್ಲೇ ದಿನೇ ದಿನೇ ಅಭಿರುಚಿ ಹೆಚ್ಚುತ್ತ ಹೋಗಿ, ಆ ವೇಷವನ್ನು ಸಹ ಧಾರಣ ಮಾಡಿದರು. ತಂದೆಗಳಾದ ನಾರಾಯಣಾಚಾರ್ಯರು ತರ್ಕ (ನ್ಯಾಯ) ವೇದಾಂತ ಪಂಡಿತರಾದಾಗ್ಯೂ, ಈ ವರದಾಚಾರ್ಯರ (ಆ ಗೋಪಾಯಿ ಉಪದೇಶದ) ಮಾತುಗಳನ್ನು ಖಂಡಿಸಿ, ನಮ್ಮ ಮಧ್ವ ಸಿದ್ಧಾಂತದಲ್ಲಿ ಮನಸ್ಸನ್ನು ತಿರುಗಿಸಲು ಸಮರ್ಥರಾಗಲಿಲ್ಲ. ಈ ವರದಾಚಾರ್ಯರ ಸ್ವರೂಪವು ಯೋಗ್ಯವಿದ್ದ ಮೂಲಕ ಆ ಉಪದೇಶದ ಮಾತಿನಲ್ಲಿ ಒಮ್ಮೊಮ್ಮೆ ಸಂಶಯವೂ ಬರುತ್ತಿತ್ತು. ಇದರಿಂದ ತಮ್ಮ ಸಂಶಯ ಪರಿಹಾರಕರನ್ನು ಅನ್ವೇಷಣೆ ಮಾಡುವ ಇಚ್ಛಾ ಉಳ್ಳವರಾಗಿ, ಮಹನೀಯರೆಂದು ಖ್ಯಾತಿ ಪಡೆದವರಲ್ಲಿಗೆ ಹೋಗಿ ನಾಲ್ಕಾರು ದಿನಗಳಿದ್ದು, ಅಲ್ಲಿ ತಮಗೆ ಸಮಾಧಾನವಾಗದಿದ್ದರೆ ಇನ್ನೊಂದು ಕಡೆ, ಮತ್ತೊಂದು ಕಡೆ, ಹೀಗೆ ಅಲ್ಲಲ್ಲಿ ಅಲೆದಾಡುತ್ತ ಆದವಾನಿಗೆ ಬಂದರು. ಇವರಲ್ಲಿ (ಈ ಚರಿತ್ರ ನಾಯಕರಲ್ಲಿ)ಯೂ ಪ್ರಶ್ನೆಗಳನ್ನು ಮಾಡುವವರಾದರು. ಈ ಪ್ರಶ್ನೆಗಳಲ್ಲಿ ಮುಖ್ಯ ವಿಚಾರ ಯಾವದೆಂದರೆ, ಜೀವೇಶ್ವರರ ಭಾವ ಎಂತಹದು, ಇದು ಮೂಲಾಧಾರವಾಗಿ ಇತರ ಪ್ರಶ್ನೆಗಳು ಇದ್ದು, ಉತ್ತರವು ಶಾಬ್ದಿಕ ಖಂಡನ, ಮಂಡನಾದಿ ರೂಪವಾಗಿರದೆ ಅನುಭೂತವಾಗಿರಬೇಕು ಎಂಬ ತಾತ್ಪರ್ಯವುಳ್ಳದ್ದಾಗಿತ್ತು. ಜೀವೇಶ್ವರ ಅಭೇದವೆಂದರೆ (ಸಚ್ಚಿದಾನಂದ ಸ್ವರೂಪವು) ನಮ್ಮ ಅನುಭವದಲ್ಲಿ ಕಂಡುಬರುವದಿಲ್ಲ. ಭೇದವೇ ಸತ್ಯವೆಂದು ತಿಳಿಯೋಣವೆಂದರೆ ಅದು ಸರಿತೋರುವದಿಲ್ಲ. ಏಕೆಂದರೆ ಪರಬ್ರಹ್ಮ (ಪರಮಾತ್ಮ)ವೆಂಬ ವಸ್ತು ಅಖಂಡವಿದ್ದು ಸರ್ವತ್ರ ವ್ಯಾಪ್ತವಾದದ್ದರಿಂದ ಮೇಲೆ, ಜೀವ ಜಡವೆಂಬ ವಸ್ತುಗಳು ಬೇರೆ ಬೇರೆ ಉಂಟೆಂದರೆ ಆ ಪರಮಾತ್ಮನೆಂಬ ವಸ್ತುವಿನ ಅಖಂಡತ್ವಕ್ಕೂ, ಸರ್ವತ್ರ ವ್ಯಾಪ್ತತ್ವಕ್ಕೂ ಭಂಗ ಬರುತ್ತದೆ. ನಾನು ಎಂಬ ವಸ್ತು (ಜೀವ) ಮತ್ತು (ನನ್ನ) ದೇಹವೆಂಬ ವಸ್ತು ಹಾಗೂ ಪರಮಾತ್ಮ ವಸ್ತು ಇಷ್ಟಕ್ಕೂ ಭೇದ ಹೇಳದೆ ಹೋದರೆ, ಈ ದೇಹಕ್ಕೆ ಉಂಟಾಗುವ ಶೀತೋಷ್ಣಾದಿಪರಿಣಾಮಗಳನ್ನು ಸರ್ವತ್ರವ್ಯಾಪ್ತನಾದ ಪರಮಾತ್ಮನಿಗೂ ಹೇಳಬೇಕಾಗುವುದು. ಮತ್ತು ಅಭೇದ ಹೇಳದೆ ಹೋದರೆ, ಏಕ ದೇಶಾವಸ್ಥಿತ (ಎಲ್ಲಿಯೋ ಒಂದು ಕಡೆ ದೇಹದಲ್ಲಿದ್ದ) ಜೀವಗೆ ಪರಿಣಾಮವಾಗುವದೆಂಬ ಮಾತು ಅಸಂಭವನೀಯ. ಯಾಕೆಂದರೆ, ವ್ಯಾಪ್ತಪದಾರ್ಥಕ್ಕೆ (ಸರ್ವತ್ರ ವ್ಯಾಪ್ತವಸ್ತುವಿಗೆ) ಪರಿಣಾಮವಾಗದೆಂದ ಮೇಲೆ ದೇಹದ ಎಲ್ಲಿಯೋ ಏಕದೇಶದಲ್ಲಿದ್ದ ಜೀವಗೆ ಪರಿಣಾಮ ಉಂಟೆಂಬುದು ಸಮಂಜಸವಲ್ಲ. ಇನ್ನು ಪರಮಾತ್ಮನು ಸ್ವತಂತ್ರನಾದುದರಿಂದ ಈ ಪರಿಣಾಮಗಳು ಆತನಿಗೆ ಸಂಬಂಧವಾಗಲಾರವೆಂದರೂ ಸರಿಯಾಗುವದಿಲ್ಲ. ಯಾಕಂದರೆ, ಒಬ್ಬ ಕಳ್ಳನ ಒಂದು ಕೈಗೆ ಬೇಡಿಯನ್ನು ಹಾಕಿ ಅವನು ಓಡಿಹೋಗದಂತ ಪ್ರತಿಬಂಧಕ ಆಗುವ ಸಲುವಾಗಿ ಪೋಲೀಸ ಅಧಿಕಾರಿಯು ತನ್ನ ಕೈಗೂ ಆ ಬೇಡಿಯ ಮತ್ತೊಂದು ಭಾಗವನ್ನು ಹಾಕಿಕೊಂಡಿರುತ್ತಾನೆ. ಆದರೆ ಆ ಕಳ್ಳನು ಬದ್ಧನು. ಈ ಪೋಲೀಸ ಅಧಿಕಾರಿಯು ಮುಕ್ತನೆಂದು ದ್ವೈತವಾದಿಗಳು ಹೇಳುತ್ತಾರೆ. ಅದು ನನಗೆ ಸರಿತೋರುವದಿಲ್ಲ. ಏಕೆಂದರೆ, ಬೇಡಿಯು ಆ ಕಳ್ಳನು ಓಡಿಹೋಗದಂತೆ ಮಾಡಲು ಎಷ್ಟು ಪ್ರತಿಬಂಧಕವಾಗುವದೋ

ಹಾಗೆಯೇ ಈ ಪೋಲೀಸ ಅಧಿಕಾರಿಗೂ ಅಷ್ಟೇ ಪ್ರತಿಬಂಧಕ ಉಂಟುಮಾಡುತ್ತದೆ. ಅಂದಮೇಲೆ ಒಬ್ಬ ಮುಕ್ತನೆಂತಲೂ ಮತ್ತೊಬ್ಬ ಬದ್ಧನೆಂತಲೂ ಹೇಳುವದು ಹೇಗೆ? ಒಬ್ಬ ಕಳ್ಳನನ್ನು ಜೇಲಿನಲ್ಲಿಟ್ಟಿರುತ್ತಾರೆ. ಅವನನ್ನು ಕಾಯಲೋಸುಗ ಒಬ್ಬ ಅಧಿಕಾರಿಯು ಎಲ್ಲಿಯೂ ಹೋಗದಂತೆ ಆ ಸ್ಥಲದಲ್ಲಿಯೇ ಇದ್ದ ಪಕ್ಷದಲ್ಲಿ ಒಬ್ಬನ ಬದ್ಧತ್ವಕ್ಕೂ, ಮತ್ತೊಬ್ಬನ ಮುಕ್ತತ್ವಕ್ಕೂ ಪ್ರಭೇದ ತೋರುವದಿಲ್ಲ. ಅದರಂತೆ ಜೀವೇಶ್ವರರ ಬಿಂಬ - ಪ್ರತಿಬಿಂಬ ಇರುವದರಿಂದ ಬಿಂಬನು ಸ್ವತಂತ್ರನೆಂಬುವದು ಹ್ಯಾಗೆ ಕೂಡುತ್ತದೆ? ಏಕೆಂದರೆ ಪ್ರತಿಬಿಂಬವನ್ನು ಬಿಟ್ಟು ಬಿಂಬನು ಯಾವ ಕಾಲಕ್ಕೂ ಹೋಗುವಂತಿಲ್ಲ. ಅಂದ ಮೇಲೆ ಪರಮಾತ್ಮ ಸ್ವತಂತ್ರನೆಂಬ ಮಾತು ಹ್ಯಾಗೆ? ಅಧಿಕಾರಿಯು ಕಳ್ಳನು ಓಡಿಹೋಗದಂತೆ ಜೇಲಿನಲ್ಲಿ ಇಟ್ಟಿದ್ದು, ಅವನು ಇದ್ದಲ್ಲೇ ತಾನು ಇದ್ದ ಪಕ್ಷದಲ್ಲಿ ಆ ಜೇಲಿನಲ್ಲಿಯ ಕಾಟ (ಸೊಳ್ಳೆ, ತಿಗಣೆ, ಇತ್ಯಾದಿ) ಆ ಕಳ್ಳನು ಅನುಭವಿಸುವಂತೆ ಅಧಿಕಾರಿಯಾ(ಗಿದ್ದು)ದಾಗ್ಯೂ ಆ ಸ್ಥಳ ನಿಮಿತ್ತ ಬಾಧಾವನ್ನು ಅಧಿಕಾರಿಯೂ ಭೋಗಿಸಬೇಕಾಗುವದು. ಆದರೆ, ನೀವು ಹೇಳುವಂತೆ ಪರಮಾತ್ಮ ಸರ್ವಶಕ್ತ, ಸರ್ವ ಕರ್ತೃ, ಸ್ವತಂತ್ರ, ನಿರ್ಲಿಪ್ತ, ಅಘಟಿತ ಘಟಕ, ಸರ್ವಸಾರಭೋಕ್ತೃ, ದೋಷದೂರ ಇತ್ಯಾದಿಗಳು. ನನ್ನ ಮನಸ್ಸಿಗೆ ಸಮರ್ಪಕವಾಗಿಲ್ಲ. ಸರ್ವಸಾರಭೋಕ್ತ ಎಂದಮೇಲೆ ನಿರ್ಲಿಪ್ತತ್ವ ಹ್ಯಾಗೆ ಕೂಡುತ್ತದೆ? ತಪ್ತ (ಕಾದ) ಲೋಹವನ್ನು ಬಡಿಯಲು ಅದರಲ್ಲಿ ವ್ಯಾಪ್ತವಾದ ಅಗ್ನಿಗೆ ಪೆಟ್ಟು ಹತ್ತದೆ ಲೋಹಕ್ಕೆ ಮಾತ್ರ ಪೆಟ್ಟು ಅನ್ನುವ ಮಾತು ನನಗೆ ಸರಿ ತೋರುವದಿಲ್ಲ. ಏಕೆಂದರೆ, ಆ ಅಗ್ನಿಗೆ ಬಾಯಿಯಿಲ್ಲದ ಪ್ರಯುಕ್ತವೂ ಮತ್ತು ಜಡವಾದದ್ದರಿಂದಲೂ, ಸುಖ ದುಃಖಾನುಭವ ಅದಕ್ಕಿಲ್ಲದ್ದರಿಂದ ಅದು "ನನಗೆ ದುಃಖವಾಗುತ್ತದೆ, ಹೊಡೆಯಬೇಡಿರಿ" ಅಂತಾ ಹೇಳಿಕೊಳ್ಳದಿದ್ದ ಮಾತ್ರದಿಂದ ಲೋಹಕ್ಕೆ ಮಾತ್ರ ಪೆಟ್ಟು ಅಗ್ನಿಗೆ ಪೆಟ್ಟು ಇಲ್ಲಾಂತ ಹ್ಯಾಗೆ ಹೇಳುವದು? ಅಗ್ನಿಯಂತೆ ಲೋಹವೂ ಜಡ, ಮತ್ತು ಬಾಯಿಯೂ ಇಲ್ಲ. ಆದ್ದರಿಂದ ಅದು ಕೂಡಾ, "ಪೆಟ್ಟು ಹಾಕಬೇಡಾ, ದುಃಖವಾಗುವದು" ಅಂತಾ ಹೇಳಿಕೊಳ್ಳುವದಿಲ್ಲ. ಆದಾಗ್ಯೂ ಲೋಹಕ್ಕೆ ಮಾತ್ರ ಪೆಟ್ಟು ಅನ್ನುವ ಮಾತು ಯಾವ ರೀತಿ ಸಿದ್ಧ ಮಾಡುತ್ತೀರಿ? ಮೇಲ್ಕಂಡ ಉದಾಹರಣದಿಂದ ಲೋಹದಲ್ಲಿ ವ್ಯಾಪ್ತವಾದ ಅಗ್ನಿ ಹ್ಯಾಗೆ ನಿರ್ಲಿಪ್ತವೋ, ಅದರಂತೆ ಸರ್ವ ವ್ಯಾಪ್ತನಾದ ಪರಮಾತ್ಮನು ನಿರ್ಲಿಪ್ತನೆಂದು ಸಾಧಿಸುವದೂ ಅಸಮಂಜಸ. ಮತ್ತು ಸರ್ವಸಾರ ಭೋಕ್ತೃ ಎಂದಮೇಲೆ ಸುಖಸಾರ ಭೋಕ್ತೃತ್ವವು ಹ್ಯಾಗೆ ಕೊಡುವದೋ ಹಾಗೆ ದುಃಖಸಾರ ಭೋಕ್ತೃತ್ವವೂ ಪರಮಾತ್ಮಗೆ ಬರಲಿ, ಇತ್ಯಾದಿ ಪ್ರಶ್ನೆಗಳ ಸುರಿಮಳೆ ಮಾಡಿದರು. ಈ ಪ್ರಶ್ನೆಗಳನ್ನು ಕೇಳಿ ಮುಸಿ-ಮುಸಿ ನಕ್ಕು, 'ವರದಾಚಾರ್ಯರೇ! ಈ ನಿಮ್ಮ ಪ್ರಶ್ನೆ ಕೇವಲ ಅದ್ವೈತಕ್ಕೂ ಹೊಂದಿಲ್ಲ ಕೇವಲ ದ್ವೈತಕ್ಕೂ ಹೊಂದಿಲ್ಲ. ಆದರೆ ಈ ಉಭಯ ಸಮ್ಮಿಳಿತ ಪ್ರಶ್ನಕ್ಕೆ ನಮ್ಮ ಯೋಗ್ಯತಾ ಅವಸ್ಥಾದಿಗಳೇ ಕಾರಣ. ಅಸ್ತು, ಈ ನಿಮ್ಮ ಪ್ರಶ್ನೆಗಳನ್ನು ಸ್ವಲ್ಪ ವಿಮರ್ಶನ ಮಾಡಿದರೆ ಯಥಾರ್ಥ ಜ್ಞಾನವಾಗುತ್ತದೆ. ಆ ಯಥಾರ್ಥ ಜ್ಞಾನ ನಿಮ್ಮ ಮನಸ್ಸಿನಲ್ಲಿ ಆರೂಢವಾಗಿ ನಿಮ್ಮ ಸಂಶಯ ಮಾಯವಾಗಬೇಕಾದರೆ "ವಾಯುದೇವರ" ಅನುಗ್ರಹಬೇಕು. ಅದಕ್ಕಾಗಿ ನೀವು ಒಂದು ಸಪ್ತಕಾದರೂ ಈ ಊರಲ್ಲಿ "ಮಂಗರಾಯನೆಂಬ" ಶ್ರೀ ವ್ಯಾಸರಾಯ ಪ್ರತಿಷ್ಠಿತ

ವಾಯುದೇವರ ಸನ್ನಿಧಿಯಲ್ಲಿ (ಪ್ರಾಣ ಪ್ರತೀಕ) ನಾವು ಹೇಳುವ ರೀತಿಯಲ್ಲಿ 'ಸೇವಾ' ಮಾಡಿ ಬಂದರೆ ಈ ನಿಮ್ಮ ಪ್ರಶ್ನೆಗಳಿಗೆ ಉತ್ತರ ಹೇಳುತ್ತೇವೆ ಅಂತಾ ಹೇಳಿದರು. 'ಶಭಾಸ್ತು' ಅಂತಾ ವರದಾಚಾರ್ಯರು ಒಪ್ಪಿಕೊಂಡರು. ಒಂದು ವಾರ ಇವರು (ಮುತ್ತಿಗಿ ಆಚಾರ್ಯರು) ಹೇಳಿದ ಕ್ರಮ ಪ್ರಕಾರ ಸೇವಾ ಮಾಡುತ್ತ, ೫ ಮನೆಯ ಗೋಪಾಳದ ಅನ್ನ ಮಾತ್ರ ಸೇವಿಸಿಕೊಂಡು ಪುನೀತರಾಗಿ ಬಂದರು. ಮರುದಿನದಿಂದ ಅವರ ಪ್ರಶ್ನೆಗಳಿಗೆ ಉತ್ತರ ಕೊಡಲಾರಂಭಿಸಿದರು. ಆ ಸಂವಾದವು ಸುಮಾರು ಹದಿನೈದು ದಿನಗಳವರೆಗೆ ನಡೆಯಿತು. ಆ ಪ್ರಶ್ನೋತ್ತರಗಳನ್ನು ಗ್ರಂಥ ಬಾಹುಲ್ಯ ಭೀತಿಯಿಂದ ಸಂಕೋಚ ಮಾಡಿ ಅದರ ಮುಖ್ಯಾಂಶಗಳ ದರ್ಶನ ಮಾಡಲಾಗಿದೆ.

೨೬. ದ್ವಂದ್ವ ದ್ವಂದ್ವಾತೀತವಾಯಿತು.

"ವರದಾಚಾರ್ಯರೇ! ನಿಮ್ಮ ಪ್ರಶ್ನೆಗಳಲ್ಲಿ ಅದ್ವೈತ ತತ್ವದ ಜೀವೇಶ್ವರೈಕ್ಯವನ್ನು ನೀವೇ ನಿರಾಕರಣ ಮಾಡಿದುದರಿಂದ ಆ ವಿಷಯವನ್ನು ಪಾಷಾಣದಂತೆ ಚರ್ಚಿಸುವದನಾವಶ್ಯಕ. ಆದರೆ ನಿಮ್ಮ ಪ್ರಶ್ನೆಗಳೆಲ್ಲ ಕೇವಲ ಚಾರ್ವಾಕ, ಬೌದ್ಧಮತ ಪ್ರಶ್ನೆಗಳಂತೆ ನಾಸ್ತಿಕವಾಗಿರದೆ ಆಸ್ತಿಕಭಾವವುಳ್ಳವುಗಳಾಗಿವೆ. ವೇದ - ಶಾಸ್ತ್ರಾನುಗುಣವಾಗಿ ನಮ್ಮ ಅನುಭವದಲ್ಲಿ ಬಂದ ಹಾಗೂ ಜ್ಞಾನಿಗಳ ಪರಂಪರಾನುಭವಿಕ ಕ್ರಮದಿಂದ ಉತ್ತರ ಹೇಳುವೆವು. ಜೀವೇಶ್ವರರ ಬದ್ಧತ್ವ, ಮುಕ್ತತ್ವ ವಿಷಯ ಪ್ರಶ್ನೆಯಲ್ಲಿ ಪೋಲೀಸ ಅಧಿಕಾರಿಯು ಕಳ್ಳನಿಗೆ ಬೇಡಿ ಹಾಕಿ ಅದರ ಮತ್ತೊಂದು ಭಾಗವನ್ನು ತನ್ನ ಕೈಗೂ ಹಾಕಿಕೊಳ್ಳುವದರಿಂದ ಉಭಯರಲ್ಲಿ ಸಾಮ್ಯ ಬಂತು ಅಂತ ನಿಮ್ಮ ಅನ್ನೋಣವಷ್ಟೆ ! ಅದೇ ಮಾತಿನ ಮೇಲಿಂದಲೇ ಒಬ್ಬನು ಸ್ವತಂತ್ರನು, ಮಹಾಶಕ್ತನು, ಮುಕ್ತನು, ಮತ್ತೊಬ್ಬನು ಪರತಂತ್ರನು, ಬದ್ಧನು, ಅಸಮರ್ಥನು ಅಂತ ಕಾಣುವದಿಲ್ಲವೇ? ಆ ಉಭಯರಲ್ಲಿ ಅಸಮಾನ ಧರ್ಮವೆಂದರೆ, ಯಾವಾಗಲಾದರೂ ಪೋಲೀಸ ಅಧಿಕಾರಿಗೆ ಕಳ್ಳನು ಬೇಡಿ ಹಾಕಲು ಶಕ್ತನೋ? ಯಾವ ಕಾಲಕ್ಕೂ ಇಲ್ಲ. ಅಂದಮೇಲೆ, ಆ ಪೋಲೀಸ ಅಧಿಕಾರಿಯು ಸ್ವತಂತ್ರನು, ಶಕ್ತಿ ಸಂಪನ್ನನು, ಮುಕ್ತನು ಅಂತ ಸಿದ್ಧವಾಗುತ್ತದೆ. ಮತ್ತು ನಿಮ್ಮ ಮತ್ತೊಂದು ಉದಾಹರಣೆಯಾದ ಜೇಲ ಸಂಬಂಧಿ ಪ್ರಶ್ನದಿಂದ ಪರಮಾತ್ಮನ ನಿರ್ಲಿಪ್ತತ್ವಕ್ಕೆ ಬಾಧಾ ಬರುವದೆಂದು ಹೇಳುತ್ತಿರಲ್ಲ? ಆ ಉದಾಹರಣದಿಂದಲೇ ಪರಮಾತ್ಮನು ಬದ್ಧನಲ್ಲವೆಂದು ಸಿದ್ಧವಾಗುತ್ತದೆ. ಹ್ಯಾಗಂದರೆ, ಆ ಅಧಿಕಾರಿಗೆ ಜೇಲಿನಿಂದ ಹೊರಗೆ ಬರಲು, ಒಳಗೆ ಹೋಗಲು, ಇರಲು, ಇದ್ದಾಗ್ಯೂ ಅಲ್ಲಿನ ಬಾಧಾಕ್ಕೆ ಒಳಪಡದಂತೆ ಇರಲು ಮತ್ತು ಅವಶ್ಯ ಬಿದ್ದರೆ ಅಲ್ಲಿನ ಬಾಧಾ ಆಗದಂತೆ ವ್ಯವಸ್ಥಾ ಮಾಡಿಕೊಳ್ಳಲು ಸ್ವತಂತ್ರನಿರುವಂತೆ ಕಳ್ಳನು ಸ್ವತಂತ್ರನಲ್ಲ. ಆದ್ದರಿಂದ ಕಳ್ಳನು ಬದ್ಧನೆಂತಲೂ, ಅಧಿಕಾರಿಯು ಮುಕ್ತನೆಂತಲೂ, ಅದೇ ಮಾತಿನಿಂದ ಸಿದ್ಧವಾಗುತ್ತದೆ. ಮತ್ತು ದೇಹಗತವಾದ ಏಕದೇಶಾವಸ್ಥಿತ ಜೀವನಿಗೆ ಮಾತ್ರ ಇರುವ ಸ್ಪರ್ಶಾದಿ ಪರಿಣಾಮಗಳು ಸರ್ವವ್ಯಾಪಿಯಾದ ಪರಮಾತ್ಮನಿಗೂ ಕೂಡಲಿ ಅಂತ ನಿಮ್ಮ ಪ್ರಶ್ನೆಯಷ್ಟೆ! ಅದಕ್ಕೆ ಕುಂಬಾರ ಹುಳವೆಂಬ ಕೀಟವು ಕೆಸರಿನಲ್ಲಿದ್ದರೂ ಆ ಕೆಸರಿನಿಂದ ನಿರ್ಲಿಪ್ತವಾಗಿರುತ್ತದೆ. ಮತ್ತು ನೀರಿನಲ್ಲಿಯೇ ಇರುವ ಕಮಲ ಪತ್ರವೂ ನೀರಿನ

ಲೇಪವು ಇಲ್ಲದಂತೆ - ಇರುವದೆಂದ ಮೇಲೆ, ಸರ್ವಶಕ್ತನಾದ, ಸ್ವತಂತ್ರನಾದ ಪರಮಾತ್ಮನು ನಿರ್ಲಿಪ್ತನಾಗಿರುವನೆಂದರೆ ಬಾಧಕವೇನು? ಜೀವನನ್ನು ಬಿಟ್ಟು ಹೋಗದಿರುವದರಿಂದ ಬಿಂಬನಾದ ಪರಮಾತ್ಮನು ಮುಕ್ತನಲ್ಲ, ಅವನೂ ಬದ್ಧನೇ ಎಂದರೆ, ಜೀವನನ್ನು ಆ ಬಿಂಬರೂಪಿ ಪರಮಾತ್ಮನು ಬಿಟ್ಟು ಹೋಗುವದಿಲ್ಲರೆಂಬುದು ನಿಜ; ಆದರೆ, ಈ ಒಂದು ನಿಮಿತ್ತದಿಂದ ಅವನು ಮುಕ್ತನಲ್ಲವೆಂದು ಹೇಳಲಿಕ್ಕಾಗದು. ಏಕೆಂದರೆ, ಆ ಬಿಂಬರೂಪಿ ಪರಮಾತ್ಮನು ಸರ್ವಕಾಲದಲ್ಲಿ ವ್ಯಾಪ್ತನಾಗಿದ್ದು ಸರ್ವಾತ್ಮನಾಪ್ರೇರಕ ನಾಗಿರೋಣದರಿಂದಲೇ ಜೀವನಿಗೆ ಜೀವತ್ವವು. ಅಂದಮೇಲೆ ಜೀವನಿಗೆ ಜೀವತ್ವವಿರಲೋಸುಗ ತಾನು (ಪರಮಾತ್ಮ) ಜೀವನನ್ನು ಬಿಟ್ಟಿಗಲನು. ಕದಾಪಿ ಜೀವನನ್ನು ಬಿಟ್ಟು ಹೋದರೆ, ಜೀವನಿಗೆ ಜೀವತ್ವವೇ ನಾಶವಾಗುವದು. ಯಾಕೆಂದರೆ, ಜೀವನ ಜೀವತ್ವವು ಪರಮಾತ್ಮನ ಅಧೀನ ಆಗಿರುವದರಿಂದ ಆ ಪರಮಾತ್ಮನು ಅಲ್ಲಿದ್ದುಕೊಂಡು ಸತ್ತಾಪ್ರದಾನ ಮಾಡಬೇಕಾಗುತ್ತದೆ. ಆ ವಿಷಯದಲ್ಲಿ ಪ್ರತಿಯೊಬ್ಬರ ಅನುಭವವು ಬೇರೆ ಬೇರೆ ಆಗಿರುತ್ತದೆ. ಆ ಅನುಭವದಿಂದಲೇ ತಿಳಿಕೊಳ್ಳತಕ್ಕದ್ದು. ಇದಕ್ಕೆ ಶೃತಿ, ಪುರಾಣಾದಿ ಸ್ಮೃತಿಗಳು, ಗೀತಾಶಾಸ್ತ್ರ ಹಾಗೂ ಅಪರೋಕ್ಷ ಜ್ಞಾನಿಗಳ **ದಾಸೋಹಂತವ ದಾಸೋಹಂ** ಎಂಬ ಪದದಲ್ಲಿಯ ಜೀವಾಂತರ್ಗತ, ಜೀವನಿಯಾಮಕ, ಜೀವವಿಲಕ್ಷಣ, ಜೀವನದ ಇತ್ಯಾದಿ ಅನುಭವದ ವಚನಗಳು ಮತ್ತು ನಮ್ಮ ಸಾಧನ ಕಾಲದ ನಲವತ್ತನೇ ದಿನದ ಉಪವಾಸದ ಅನುಭವವೂ ಇರೋಣದರಿಂದ ಪರಮಾತ್ಮನಿಗೆ ಸ್ವಾತಂತ್ರ್ಯ ಇತ್ಯಾದಿ ಸರ್ವಗುಣ ಪೂರ್ಣತ್ವವು ಕೂಡುತ್ತದೆ. ಕೆಲವು ಜೀವರಿಗೆ ಸುಖ, ಕೆಲವು ಜೀವರಿಗೆ ಮಾತ್ರ ಮಿಶ್ರ (ಸುಖ-ದುಃಖ) ಕೆಲವು ಜೀವರಿಗೆ ಕೇವಲ ದುಃಖ ಕೊಡುತ್ತಾನೆಯಾದ್ದರಿಂದ ಪರಮಾತ್ಮನಿಗೆ ವೈಷಮ್ಯಾದಿ ದೋಷಗಳನ್ನು ಪ್ರತಿಪಾದಿಸುವ ನಿಮ್ಮ ಪ್ರಶ್ನಗೆ ಆಯಾ ಜೀವರ ಯೋಗ್ಯತಾನುಸಾರ ಫಲ ಕೊಡುತ್ತಾನಾದ್ದರಿಂದ ವೈಷಮ್ಯಾದಿ ದೋಷಗಳನ್ನು ಹೇಳಿದರೆ ಸರಿಹೋಗುವದಿಲ್ಲ. ಯಾಕೆಂದರೆ (ಕೂಸು) ಚೇಳನ್ನು ಬಾಧಕವೆಂಬ ಜ್ಞಾನವಿಲ್ಲದೆ ಹಿಡಿಯಲು ಹೋದರೆ, ಆಗ ಜ್ಞಾನ ಉಳ್ಳ ತಂದೆ-ತಾಯಿಗಳು, ಕೂಸಿನ ಇಚ್ಛಾ ಆ ಚೇಳನ್ನು ಹಿಡಿಯುವದಿದೆ ಅದಕ್ಕಾಗಿ ಹೋಗುತ್ತಿರುವದು. ಅದನ್ನು ನಾವು ಯಾತಕ್ಕೆ ನಿವಾರಣೆ ಮಾಡಬೇಕು? ನಿವಾರಣೆ ಮಾಡಿದರೆ ಅದಕ್ಕೆ ಅಸಮಾಧಾನ ಉಂಟಾಗುವುದು. ಆದ್ದರಿಂದ ಚೇಳನ್ನು ಹಿಡಿಯಲೆಂದು ಸುಮ್ಮನಿದ್ದರೆ, ನಿಷ್ಪಕ್ಷಪಾತದ ಲಕ್ಷಣದಲ್ಲಿ ನಿರ್ದೋಷಿಗಳೆನಿಸಬಹುದೇ? ಅದರಂತೆ ಒಂದು ಗುಂಪಿನ ಜೀವರು ಅಸದುಪಾಸನಾ ಮಾರ್ಗಾವಲಂಬನ ಮಾಡಲು, ತತ್ಫಲವಾಗಿ, ಮನಸ್ಸಿನಲ್ಲಿ ನಿತ್ಯ ದುಃಖದ ಅನುಭವ ಕೊಡತಕ್ಕ ಪರಮಾತ್ಮನಿಗೆ ವೈಷಮ್ಯಾದಿ ದೋಷ ದೂರನೆಂದು ಹ್ಯಾಂಗೆ ಹೇಳುವುದು? ಅಂತ ಪ್ರಶ್ನೆ ಮಾಡಿದರೆ, ಅದಕ್ಕೆ ನಾವು ಹೇಳುವದು ಇಷ್ಟೆ. ಪರಮಾತ್ಮ ಯಾವ ಜೀವರಿಗೂ ಸುಖ, ಮಿಶ್ರ, ದುಃಖಗಳನ್ನು ತಾವಾಗಿಯೇ ಕೊಡುವುದಿಲ್ಲ. ಆಯಾ ಜೀವರ ಸ್ವರೂಪಾಭಿವ್ಯಕ್ತಿ ಮಾತ್ರ ಮಾಡುತ್ತಾನೆ. ಈ ಸ್ವರೂಪಾಭಿವ್ಯಕ್ತಿಗೆ ಕಾರಣವಾದ ಸಾಧನ ಮಾರ್ಗಾವಲಂಬನ ಮಾಡಿಸುವನೇ ಹೊರತು ಇದರಿಂದ ಸರ್ವಜ್ಞನಾದ ನಿತ್ಯಮುಕ್ತನಾದ ಪರಮಾತ್ಮನು ಮಾರ್ಗಾವಲಂಬನ ಮಾಡಿದಂತಾಗುವುದಿಲ್ಲ. ಕೆಲವು ಜೀವರನ್ನು ಆ ಮಾರ್ಗದಿಂದ ತಪ್ಪಿಸಿ

ಸುಖಾನುಭವ ಮುಕ್ತಿ ಮಾರ್ಗಕ್ಕೆ ಹಚ್ಚದಿರುವದು ವೈಷಮ್ಯವೂ ಅಲ್ಲ, ಮತ್ತು ದಯಾಹೀನತ್ವವೂ ಅಲ್ಲ. **"ಕರ್ತುಮಕರ್ತುಮನ್ಯಥಾ ಕರ್ತುಂ"** ಎಂಬ ಶಕ್ತಿಯನ್ನು ಉಪಯೋಗಿಸಿ, ಆಯಾ ಜೀವರ ಸ್ವರೂಪ ಯೋಗ್ಯತಾ ಬದಲಾವಣೆ ಮಾಡುವುದೇ ವೈಷಮ್ಯಾದಿ ದೋಷ ಮತ್ತು ಹುಚ್ಚುತನ. ಹ್ಯಾಗಂದರೆ, ಒಬ್ಬ ರಾಜನು ತನ್ನ ಸ್ವಾತಂತ್ರ್ಯವನ್ನು ಉಪಯೋಗಿಸಿ ಪ್ರಧಾನಿ (ಮಂತ್ರಿ)ಯನ್ನು ಜವಾನನನ್ನಾಗಿ, ಜವಾನನನ್ನು ದಿವಾನನನ್ನಾಗಿ ಮಾಡಿದರೆ, ಆ ರಾಜನು ಮೂರ್ಖನೆಂದನಿಸಲಾರನೆ? ಮತ್ತು ಮನುಷ್ಯ ಸಾಮಾನ್ಯನಿಗೂ ಮಾಡಲು ಬರುವ ಶಿರೋವೇಷ್ಟ (ರುಮಾಲು)ವನ್ನು ಕಾಲಿಗೆ ಸುತ್ತಿ, ಕಾಲಿಗೆ ಹಾಕುವ ಪಾದರಕ್ಷೆಯನ್ನು ತಲೆಯ ಮೇಲೆ ಇಟ್ಟುಕೊಳ್ಳಲು ಸಾಧ್ಯವೇ? ಈ ರೀತಿ ಸಾಧ್ಯವಾದುದನ್ನು ಮಾಡಿದರೂ, ಆ ಮನುಷ್ಯನನ್ನು ಹುಚ್ಚನೆಂದು ಕರೆಯುವರೇ ಹೊರತು ಸಮದೃಷ್ಟಿಯುಳ್ಳವನೆಂದೆನಿಸಲಾರನು. ಅದರಂತೆ, ನಮ್ಮ ಸ್ವಾಮಿ ಆಯಾ ಜೀವರ ಸ್ವರೂಪ-ಅಭಿವ್ಯಕ್ತಿಗೋಸ್ಕರ ಕಾಲ, ಕರ್ಮ, ಪ್ರಕೃತಿ ನಿಮಿತ್ತಮಾಡಿ, ಆ ಜೀವರ ಸ್ವಭಾವಕ್ಕನುಸರಿಸಿ ಲೀಲಾ ಮಾಡುವನು. ಈ ಲೀಲಾ ಸ್ವಪ್ರಯೋಜಕವಲ್ಲದಿದ್ದರೂ, ಪರಪ್ರಯೋಜಕ (ಜೀವರಿಗೆ ಪ್ರಯೋಜಕ)ವಾಗಿರೋಣದರಿಂದ ಅವನ ದಯಾಳುತ್ವವೇ ಸಿದ್ಧವಾಗುವುದು. ಆತನು ಸಮಾಭ್ಯದಿಕಶೂನ್ಯನಾದುದರಿಂದ, ಪಾರತಂತ್ರ್ಯಾದಿ ದೋಷಗಳಿಲ್ಲದಿರುವ ಪ್ರಯುಕ್ತ ಈ ನಿಮ್ಮ ಪ್ರಶ್ನೆಗಳೇ ಸರಿಯಾದುದೆಂದು ಹೇಳಲು ಬರುವಂತಿಲ್ಲ. ನಿಮಗೆ ದ್ವೈತಾದ್ವೈತ ಉಭಯ ಗ್ರಂಥಗಳ ಸಂಸ್ಕಾರ ಉಂಟಾದ ಪ್ರಯುಕ್ತ ನಿಮ್ಮ ಮನಸ್ಸು ಡೋಲಾಯಮಾನವಾಗಿತ್ತು. ಈ ನಿಮ್ಮ ಸಂಶಯ ಹೋಗಿದ್ದ ಪಕ್ಷದಲ್ಲಿ ನಾವು ಹೇಳುವಂತೆ ನಿಮ್ಮ ಆಚರಣವಿರಲಿ. ಪಕ್ವಕಾಲ ಬಂದಾಗ ಯಾವ-ಯಾವ ಜೀವರು, ಯಾವ-ಯಾವ ಫಲಭಾಗಿಗಳೋ, ಆಯಾ ಮಾರ್ಗಾವಲಂಬನ ಮಾಡಿ ಸಾಧನ ಮಾಡಿಕೊಂಡು ಮುಕ್ತರಾಗುತ್ತಾರೆ" ಅಂತ ಹೇಳೋಣದರಿಂದ ಆ ವರದಾಚಾರ್ಯರ ಮನಸ್ಸು ಈತ್ತ ಕಡೆಗೆ ತಿರುಗಿ, ಈ ಮಾತಿಗೆ ಒಡಂಬಟ್ಟು ಆ ಗೋಸಾಯಿ ವೇಷವನ್ನು ವಿಸರ್ಜನ ಮಾಡಿ ಇವರಿಂದ ಮಂತ್ರೋಪದೇಶವನ್ನು ಹೊಂದಿದರು.

ಆಮೇಲೆ, ಈ ವರದಾಚಾರ್ಯರ ತಂದೆಗಳಾದ ವಾಯಿ ನಾರಾಯಣಾಚಾರ್ಯರಿಗೆ ತಿಳಿಯಲು, ಅವರು ತಮ್ಮ ಸೊಸೆ (ಈ ವರದಾಚಾರ್ಯರ ಹೆಂಡತಿ) ಕುಂ|| ಸೌ|| ಗೋದಾವರೀ ಬಾಯಿಯನ್ನು ಇಲ್ಲಿಗೆ ಕಳಿಸಿದರು. ಕೆಲವು ದಿನಗಳವರೆಗೆ ಈ ದಂಪತಿಗಳನ್ನು ಇಟ್ಟುಕೊಂಡು, ನಂತರ ಹೈದ್ರಾಬಾದ ನಾರಾಯಣಾಚಾರ್ಯರ ಕಡೆಗೆ ಕಳಿಸಿದರು. ಇದರಿಂದ, ಅವರು ಬಹುಸಂತುಷ್ಟರಾಗಿ "ನನಗೆ ತಾವು ಪುತ್ರ ಭಿಕ್ಷಾ ಕೊಟ್ಟದ್ದಕ್ಕಾಗಿ ತಮಗೆ ನಾನು ಬಹು ಋಣಿಯಾಗಿದ್ದೇನೆ. ಈಗಲೇ ತಮ್ಮ ದರ್ಶನಕ್ಕೆ ಬರತಕ್ಕದ್ದು- ಧರ್ಮ! ಆದರೆ, ಸಧ್ಯಕ್ಕೆ ಲೌಕಿಕ ಪ್ರತಿಬಂಧಕ ವಿರೋಣದರಿಂದ ಬರಲಿಕ್ಕೆ ಆಗಿಲ್ಲ, ಕ್ಷಮಿಸಬೇಕು. ಅಲ್ಪಕಾಲದಲ್ಲಿಯೇ ತಮ್ಮ ಸನ್ನಿಧಾನಕ್ಕೆ ಬಂದು ದರ್ಶನ ತೆಗೆದುಕೊಳ್ಳುತ್ತೇನೆ" ಎಂಬುವುದಾಗಿ ಪತ್ರ ಹಾಕಿ ಅದರಂತೆಯೇ ಸ್ವಲ್ಪದಿನಗಳಲ್ಲಿಯೇ ಬಂದು ದರ್ಶನ ಪಡೆದು ಧನ್ಯರಾದರು.

೨೭. ಕನ್ಯಾದಾನ ಮಾಡಿಸಿ ಮಾನ್ಯರಾದರು.

ಆದವಾನಿಯಲ್ಲಿಯ ಮಂಗರಾಯನೆಂದು ಪ್ರಸಿದ್ಧ ಪ್ರಾಣದೇವರ ಅರ್ಚಕನಾದ ತ್ರಿವಿಕ್ರಮ ಅಪ್ಪಣಾಚಾರ್ಯನೆಂಬ ಬಹುರಿಕ್ತ ಬ್ರಾಹ್ಮಣನು ತನ್ನ ಎರಡು-ಮೂರು ಕನ್ಯಾಗಳನ್ನು ದ್ರವ್ಯ ತೆಗೆದುಗೊಂಡು (ಕನ್ಯಾಶುಲ್ಕ ತೆಗೆದುಕೊಂಡು) ಲಗ್ನ ಮಾಡಿಕೊಟ್ಟನು. ಇನ್ನು ಉಳಿದ ಕನ್ಯಾಗಳನ್ನು ಸಹ ಅದೇ ರೀತಿಯಲ್ಲಿ ಲಗ್ನ ಮಾಡಿಕೊಡುವ ಯೋಜನೆಯಲ್ಲಿದ್ದನು. ಆ ಅಪ್ಪಣಾಚಾರ್ಯರನ್ನು ಕುರಿತು, 'ಹೇ! ಅಪ್ಪಣಾಚಾರ್ಯ ! ನೀನು ಈವರೆಗೂ ಬಹು ದಾರಿದ್ರ್ಯವನ್ನು ಅನುಭವಿಸುತ್ತಲಿದ್ದೆ. ಇದಕ್ಕೆ ಜನ್ಮಾಂತರದಲ್ಲಿ ಅನ್ನ ವಿಕ್ರಯ, ಕನ್ಯಾ ವಿಕ್ರಯ ಇತ್ಯಾದಿ ಪಾಪಕರ್ಮಗಳ ಮಾಡಿದ್ದೇ ಕಾರಣ. ಮುಂದಿನ ಜನ್ಮದಲ್ಲೂ ಇಂತಹ ದಾರಿದ್ರ್ಯ ಅನುಭವಕ್ಕೆ ಕಾರಣವಾದ ಕನ್ಯಾ ವಿಕ್ರಯ ರೂಪ ಸಾಧನ ಮಾಡಿಕೊಳ್ಳಬೇಡ. ಈ ಪೂರ್ವದಲ್ಲಿ ಆದದ್ದು ಆಗಿ ಹೋಯಿತು. ಇನ್ನು ಮುಂದೆಯಾದರು ಅಂತಹ ಕೆಲಸ ಮಾಡಬೇಡ' ಅಂತ ಹಿತೋಪದೇಶ ಮಾಡಿದರು. 'ಸ್ವಾಮಿ! ನನಗೇನು ಅಂತಹ ಕೀಳು ಕೆಲಸ ಮಾಡಬೇಕೆಂಬ ಇಚ್ಛಾವಿಲ್ಲ. ಆದರೆ ಕನ್ಯಾದಾನ ಮಾಡಿಕೊಡುವುದಕ್ಕೆ ಅನಾನುಕೂಲ ಮೂಲಕ ಆ ರೀತಿ ಮಾಡಿದೆ. ಈಗಿರುವ ಕನ್ಯಾಕ್ಕೆ ನನ್ನ ಮೇಲೆ ಖರ್ಚು ಬೀಳದಂತೆ ಯಾರಾದರೂ ಅನುಕೂಲ ಮಾಡಿದರೆ ಅವಶ್ಯ ಕನ್ಯಾದಾನ ಮಾಡಿಕೊಡುತ್ತೇನೆ' ಅಂತ ಹೇಳಿದನು. 'ಹಾಗಾದರೆ ಸ್ವಲ್ಪ ಸಮಾಧಾನ ತಾಳು, ಆತುರ ಪಡಬೇಡ. ನಿನ್ನ ಮೇಲೆ ಲಗ್ನ ಖರ್ಚು ಬಾರದಂತೆ ನೋಡಿಕೊಳ್ಳುತ್ತೇನೆ' ಅಂತ ಅಭಯ ಕೊಟ್ಟರು.

ಹೈದ್ರಾಬಾದದಿಂದ ವಾಯಿ ನಾರಾಯಣಾಚಾರ್ಯರು ಬಂದಿದ್ದರಷ್ಟೆ! ಅವರಲ್ಲಿ ಈ ಅಪ್ಪಣಾಚಾರ್ಯರ ಮಗಳಿಗಾಗಿ ವರವನ್ನು ವಿಚಾರಿಸಲು, ಅವರು 'ನಮ್ಮ ಶಿಷ್ಯ ವರ್ಗದ ಪೈಕಿ ಋತುಪರ್ಣನೆಂಬ ಇಪ್ಪತ್ತು ವರ್ಷ ವಯಸ್ಸಿನ ಯೋಗ್ಯ ವರನು ಇದ್ದಾನೆ. ಅವನು ಮ್ಯಾಟ್ರಿಕ್ (S.S.C.) ಪಾಸಾಗಿದ್ದಾನೆ. ಅವನ ಚಿಕ್ಕತನದಲ್ಲಿಯೇ ತಂದೆ-ತಾಯಿಗಳು ತೀರಿಕೊಂಡದ್ದರಿಂದ, ಮಲಾಪಹಾರಿ ತೀರದ ಹೊಳೆ ಆಲೂರುವೆಂಬಲ್ಲಿ ಕನಕರಾಯನೆಂಬ ಸೋದರಮಾವನಲ್ಲಿ ಸಂರಕ್ಷಿತನಾದವನು. ಭೂ ಆಸ್ತಿ ಕೂಡಾ ಉಂಟು' ಅಂತ ಶಿಫಾರಸ ಮಾಡಿದರು. ಹಾಗಾದರೆ, 'ಈ ಊರಲ್ಲಿ ಮಂಗರಾಯನೆಂಬ ಶ್ರೀ ವ್ಯಾಸರಾಯರ ಪ್ರತಿಷ್ಠಿತ ಪ್ರಾಣ ದೇವರ ಅರ್ಚಕ ಅಪ್ಪಣಾಚಾರ್ಯನೆಂಬ ಬಹುರಿಕ್ತ ಬ್ರಾಹ್ಮಣನಿದ್ದಾನೆ. ಆತನ ಮಗಳಿಗೆ ಈ ವರನನ್ನು ಯೋಜನಾ ಮಾಡಿಕೊಡಿರಿ. ಆದರೆ, ಆ ಅಪ್ಪಣಾಚಾರ್ಯರ ಮೇಲೆ ಯಾವ ತರಹದ ಖರ್ಚು ಹಾಕದೆ, ಉಭಯ ಖರ್ಚುಗಳೆಲ್ಲವನ್ನು ವಹಿಸಿಕೊಂಡು, ಲಗ್ನ ಮಾಡಿಕೊಂಡು ಹೋಗುವಂತೆ ಯೋಜನಾ ಮಾಡಲಾದೀತೇ?' ಅಂತ ಪ್ರಶ್ನೆ ಮಾಡಿದರು. "ಈ ಮಹತ್ಕಾರ್ಯಕ್ಕೆ ಅವಶ್ಯ ಯೋಜನಾ ಮಾಡುತ್ತೇನೆ. ತಾವು ನನಗೆ ಪುತ್ರ ಭಿಕ್ಷಾ ಕೊಟ್ಟಿದ್ದೀರಿ. ಆ ನನ್ನ ವರದರಾಜ (ಮಗ)ನಿಂದ ಈ ಮಂಗರಾಯ ಮಹಾಜಾಗ್ರತನೆಂದು ಕೇಳಿದ್ದೇನೆ. ಆ ಮಂಗರಾಯನ ಅರ್ಚಕನೆಂದ ಮೇಲೆ ನಾವು ಅವಶ್ಯ ಈ ಕಾರ್ಯಮಾಡಿಕೊಡುತ್ತೇವೆ" ಅಂತ ಹೇಳಿ, ಆ

ಋತುಪರ್ಣನನ್ನು ಕರೆಸಿದರು. ಉಭಯ ಸಮ್ಮತವಾಗಿ ಹದಿನೈದು ದಿನಗಳಲ್ಲಿ ಲಗ್ನ ಮುಹೂರ್ತ ನಿಶ್ಚಯ ಮಾಡಲಾಯಿತು. 'ಈ ಲಗ್ನಕ್ಕೆ ಬೇಕಾಗುವ ಸಾಮಾನುಗಳು ತಾವು ಸಿದ್ಧಪಡಿಸಿರಿ. ಲಗ್ನಕ್ಕೆ ಬಂದಾಗ ಪಟ್ಟಿ ಪ್ರಕಾರ ಯಾವತ್ತೂ ದ್ರವ್ಯ ಕೊಡಲಾಗುವುದು' ಅಂತ ವಾಯಿ ನಾರಾಯಣಾಚಾರ್ಯರು ಹೇಳಿದ್ದರು. "ತಥಾಸ್ತು" ಅಂತ ಒಪ್ಪಿಗೊಂಡರು. ವರನಿಗೂ – ಕನ್ಯೆಗೂ ಕೂಡಿ ಮೂರು ನೂರು ರೂಪಾಯಿ ಆಭರಣಗಳು, ಇನ್ನೂರು (೨೦೦) ರೂಪಾಯಿಯ ಜವುಳಿ, (ಆಗಿನ ಕಾಲದಲ್ಲಿ ಇಪ್ಪತ್ತೈದು ರೂಪಾಯಿಗಳಿಗೆ ಒಂದು ತೊಲೆ ಬಂಗಾರದ ಧಾರಣೆಯಿತ್ತು) ಮುನ್ನೂರು (೩೦೦) ರೂಪಾಯಿಯಲ್ಲಿ ಭೋಜನಾದಿ ಸರ್ವಕಾರ್ಯಗಳಿಗೆ ಬೇಕಾಗುವ ಸಂಭಾರಗಳನ್ನು ತೆಗೆದುಕೊಂಡರು. ಈ ರೀತಿ ಒಟ್ಟು ಎಂಟುನೂರು ರೂಪಾಯಿಯ ಅಂದಾಜು (Budget) ಗೊತ್ತುಪಡಿಸಿ, ನಾರಾಯಣಾಚಾರ್ಯ ಹಾಗೂ ಋತುಪರ್ಣನು ತಮ್ಮ ಊರಿಗೆ ಹೊರಟುಹೋದರು. ಈ ಚರಿತ್ರ ನಾಯಕರು ಗೊತ್ತುಪಡಿಸಿದಂತೆ ಎಲ್ಲಾ ಸಂಭಾರಗಳನ್ನು ಲಗ್ನ ಮುಹೂರ್ತಕ್ಕೆ ಸರಿಯಾಗಿ ಸಿದ್ಧಪಡಿಸಿದರು. ಲಗ್ನ ಮುಹೂರ್ತದ ಪೂರ್ವದಿನ ಸಾಯಂಕಾಲ ನಾರಾಯಣಾಚಾರ್ಯರ ಹೊರತಾಗಿ ಯಾವತ್ತು ಬೀಗರು ಬಂದರು. ಇಲ್ಲಿಗೆ ಬರಲೋಸುಗ ಪ್ರಯಾಣ ಮಾಡುವ ವೇಳೆಗೆ ಸರಿಯಾಗಿ ಬರತಕ್ಕಷ್ಟು ದ್ರವ್ಯ ಕೈಗೆ ಬರಲಿಲ್ಲ. ಅದಕ್ಕಾಗಿ ಕಾಯುತ್ತ ನಾವೆಲ್ಲರೂ ಕುಳಿತರೆ ರೈಲು ತಪ್ಪಿ ಮುಹೂರ್ತ ತಪ್ಪುತ್ತದೆಯೆಂಬುದಕ್ಕಾಗಿ, ಮಾರ್ಗದ ಖರ್ಚಿನ ಮಟ್ಟಿಗೆ ದ್ರವ್ಯ ತೆಗೆದುಕೊಂಡು ಬಂದಿದ್ದೇವೆ. ನಮ್ಮ ಸೋದರಮಾವನಾದ ಕನಕರಾಯನು ಆ ದ್ರವ್ಯವನ್ನು ತೆಗೆದುಕೊಂಡು ರಾತ್ರಿ ಗಾಡಿಯಿಂದ ಹೊರಟು ನಾಳೆ ಬರುತ್ತಾನೆ. ಆತನು ಬಂದು ಕೂಡಲೇ ನಿಮ್ಮ ಪಟ್ಟಿ ಪ್ರಕಾರ ಯಾವತ್ತು ಲೆಕ್ಕವನ್ನು ಕೊಡುತ್ತಾನೆ. ಈ ಶುಭಕಾರ್ಯ ಸಾಗಲಿ ಅಂತ ಋತುಪರ್ಣನು ಹೇಳಿದನು. ಈ ಮಾತನ್ನು ನಂಬಿಕೊಂಡು ಲಗ್ನ ಕಾರ್ಯವನ್ನು ನೆರವೇರಿಸಿದರು. ಆದರೆ ಆ ಕನಕರಾಯನು ಬರಲಿಲ್ಲ. ಇತ್ತ ಮುತ್ತಿಗಿ ಆಚಾರ್ಯರು ಯಾಡಕಿಯಲ್ಲಯ್ಯನೆಂಬ ವೈಶ್ಯನಲ್ಲಿ ಭೋಜನ ಸಾಮಗ್ರಿಗಳು, ಗೌರಾ ಲಕ್ಷ್ಮಿನಾರಾಯಣ ಶೆಟ್ಟಿಯಲ್ಲಿ ಜವುಳಿ, ಬೊಬ್ಬಲಾದಿ ಪದ್ಮಣ್ಣನೆಂಬಾತನಲ್ಲಿ ಬಂಗಾರದಾಭರಣವನ್ನು ತೆಗೆದುಕೊಂಡು ಲಗ್ನದ ದಿವಸ ನಿಮ್ಮ ಪಟ್ಟಿಯ ಪ್ರಕಾರ ದ್ರವ್ಯವನ್ನು ಕೊಡಿಸುತ್ತೇನೆ ಅಂತ ಅವರುಗಳಿಗೆ ಹೇಳಿ ಸಾಮಾನುಗಳನ್ನು ಸಿದ್ಧಪಡಿಸಿದ್ದರು. ಆಗ ಇವರು ಗೋಪಾಳ ವೃತ್ತಿಯಿಂದಲೇ ಇರುತ್ತಿದ್ದರಾದುದರಿಂದ ಇವರನ್ನು ಶ್ರೀಮಂತರೆಂದು ಯಾರೂ ಭಾವಿಸದಿದ್ದರೂ ಮಹನೀಯರು ಸುಳ್ಳಾಡತಕ್ಕವರಲ್ಲರೆಂಬ ನಂಬಿಕೆಯಿಂದ ಇಷ್ಟು ಪದಾರ್ಥವನ್ನು ಆ ವರ್ತಕರು ಕೊಟ್ಟಿದ್ದರು. ೬ ಪ್ರಕಾರ ಲಗ್ನದ ದಿವಸ ಬಂದು ತಮ್ಮ ಪಟ್ಟಿಯನ್ನು ಮುಂದಿಟ್ಟು ದ್ರವ್ಯವನ್ನು ಕೇಳುವವರಾದರು. ಲಗ್ನವು ನೆರವೇರಿಸಿರೋಣದರಿಂದ ಅವರುಗಳು ತಮ್ಮ ಕುಟಿಲ ತಂತ್ರ ಸಾಧಿಸಿ ತಮ್ಮ ಪ್ರಯಾಣಕ್ಕೆ ಪ್ರತಿಬಂಧಕವಾಗಬಾರದೆಂದು ಸವಿಮಾತನಾಡಿ ಹೋಗುವ ಉಪಾಯದಿಂದ, ಕನಕರಾಯನಿಗೆ ಬರಲು ಅನಾನುಕೂಲ ವಾಗಿರಬಹುದು. ನಾಳೆ ಕಳು ಊಟವಾದ ಕೂಡಲೇ ಸಾಯಂಕಾಲ ಪ್ರಯಾಣ ಮಾಡಿ, ಮರುದಿನವೇ ನಿಮಗೆ ಎಂಟು ನೂರು ರೂಪಾಯಿ ಮನಿ ಆರ್ಡರ (Money Order)

ದಿಂದ ಕಳಿಸುತ್ತೇವೆ. ತಾವೇನು ಅನ್ಯಥಾ ಭಾವಿಸದೆ ಪೂರ್ಣಾನುಗ್ರಹ ಮಾಡಬೇಕೆಂದು ಋತುಪರ್ಣನೂ ತಥಾ ಸಂಬಂಧಿಕರೂ ಕೇಳಿಕೊಂಡರು. ಆಗ "ಇನ್ನು ಒಂದು ವಾರದಲ್ಲಿ ನಿಮ್ಮ-ನಿಮ್ಮ ದ್ರವ್ಯಗಳನ್ನು ಕೊಡುತ್ತೇವೆ" ಅಂತ ಇವರು ಹೇಳಿದ್ದಕ್ಕೆ ಆ ವರ್ತಕರು ಒಳ್ಳೇದು ಅಂತ ಸುಮ್ಮನೆ ಹೋದರು. ಇತ್ತ ೩-೪ ದಿನಗಳು ಕಳೆದವು. ಆದರೂ ಅವರ ಕಡೆಯಿಂದ ಯಾವ ತರಹ ಪತ್ರ ಸಹವಿಲ್ಲದ್ದರಿಂದ ಮೋಸಮಾಡುವ ಯೋಜನೆ ಮಾಡಿದಂತೆ ತೋರುತ್ತದೆಂದು, ತಮ್ಮ ಪ್ರಿಯ ಶಿಷ್ಯನಾದ ಪಿ.ಕೆ. ಸುಬ್ಬರಾಯನಿಗೆ ಈ ವಿಷಯವನ್ನು ತಿಳಿಸಿದರು. ಆತನು ಕೂಡಲೇ ನಾಲ್ಕು ನೂರು ರೂಪಾಯಿಗಳನ್ನು ಕಳಿಸಿ, ಇವರ ಮತ್ತೊಬ್ಬ ಶಿಷ್ಯನಾದ ಪಶುಪತಿಹಾಳ ಸುಬ್ಬರಾವ್ ಕುಲಕರ್ಣಿಯೆಂಬ ಗೃಹಸ್ಥನಿಗೆ ನಾಲ್ಕು ನೂರು ರೂಪಾಯಿಗಳನ್ನು ಕಳಿಸುವಂತೆ ತಿಳಿಸಿದರು. ಆ ಗೃಹಸ್ಥನು ಸಹ ನಾಲ್ಕು ನೂರು ರೂಪಾಯಿಗಳನ್ನು ಕಳಿಸಿದನು. ಈ ಎಂಟುನೂರು ರೂಪಾಯಿಗಳನ್ನು ಆಯಾ ವರ್ತಕರಿಗೆ ಕೊಟ್ಟು ಋಣಮುಕ್ತರಾಗಿ, ಕನ್ಯಾ ಪ್ರದಾನ ಮಾಡಿದ ಮಹಾಫಲ ಈ ಮಹನೀಯರು ಸಂಪಾದಿಸಿದರು.

೨೮. ಅಸದುಪಾಸನೆಯ ಅಂತರಂಗ ಬಹಿರಂಗ.

ಯಾದಗಿರಿಯ ಟಂಕಸಾಲಿ ಶ್ರೀನಿವಾಸಾಚಾರ್ಯರಿಗೆ ಇವರಲ್ಲಿ (ಈ ಚರಿತ್ರ ನಾಯಕರಲ್ಲಿ) ವಿಶೇಷ ವಿಶ್ವಾಸವಿದ್ದುದ್ದು ವಾಚಕರು ಬಲ್ಲರಷ್ಟೆ! ಈ ನಿಮಿತ್ತ ಆಗಾಗ ಆ ಶ್ರೀನಿವಾಸಾಚಾರ್ಯರು ದರ್ಶನಾರ್ಥ ಬರುತ್ತಿದ್ದರು. ಶ್ರೀಹರಿ ಆಚಾರ್ಯರು ಎಂಬ ಜ್ಞಾನಿಗಳು ಸೇಲಂಪ್ರಾಂತದಲ್ಲಿ ಪ್ರಸಿದ್ಧಿ ಹೊಂದಿದ್ದರು. ಅವರಾದರೂ ಅದರಂತೆ ತಿಳಿದುಕೊಂಡಿದ್ದರು. ಆದಾಗ್ಯೂ ತಮ್ಮ ವಿಷಯಕ್ಕೆ ತಮಗೆ ಸಂಶಯವಿತ್ತು. ಈ ಸಂಶಯವು ತಮಗಿಂತಲೂ ಹೆಚ್ಚಿನ ಯೋಗ್ಯತೆ ಉಳ್ಳವರಲ್ಲಿ ಪರಿಹಾರವಾಗಬೇಕು. ಆದರೆ, ಅವರು ತಮ್ಮ ಊಹಾದೃಷ್ಟಿಯಿಂದ ಆ ಪ್ರಾಂತದಲ್ಲಿಯೂ, ಇತರ ಪ್ರಾಂತದಲ್ಲಿಯೂ ಪ್ರಸಿದ್ಧವಂತರನ್ನು ಪರೀಕ್ಷಿಸಿ ನೋಡಿದವರಲ್ಲಿ ತಮಗಿಂತ ಜೀವ ಹೀನತೆ ಕಂಡು ಬರುತ್ತಿದ್ದರಿಂದ ಮನಸ್ಸಿನಲ್ಲಿ ಬಹುದಿನ ಕೊರಗುತ್ತಿದ್ದರು. ಸೇಲಂ ಸ್ಥಳೀಯರಾದ ಎಂ.ಎ. ಸುಬ್ಬರಾಯರು ಹಾಗೂ ಅಮಿತ ವಿಕ್ರಮರಾಯರು ಈ ಚರಿತ್ರ ನಾಯಕರ ವಿಷಯವಾಗಿ ಹೇಳೋಣದರಿಂದ ಅವರು ಮಾಮೂಲಿನ ಪ್ರಕಾರ ತಮ್ಮ ದೃಷ್ಟಿಯಿಂದ ನೋಡಿದ್ದರಲ್ಲಿ, ಅವರಿಗೆ ಇವರು ತಮಗಿಂತಲೂ ಪ್ರಕಾಶವಂತರೆಂದು ಕಂಡು ಬಂದ ಪ್ರಯುಕ್ತ ಅದವಾನಿಗೆ ಬಂದು ತಮ್ಮ ಸಂಶಯ ವಿಷಯವನ್ನು ಪರಿಹಾರ ಮಾಡಬೇಕೆಂದು ಕೇಳಿಕೊಂಡರು. 'ನೀವು ನಿಮ್ಮ ಊಹಾ ದೃಷ್ಟಿಯಿಂದ ಅನೇಕರನ್ನು ಪರೀಕ್ಷಾ ಮಾಡಿದಂತೆ ನಮ್ಮನ್ನೂ ಪರೀಕ್ಷಿಸಿದವರಲ್ಲಿ ನಾವು ಹೆಚ್ಚು ಪ್ರಕಾಶ ಕಂಡುಬಂದದ್ದಾಗಿ ಹೇಳುವಿರಷ್ಟೆ! ಆ ನಿಮ್ಮ ಊಹಾದೃಷ್ಟಿ ಎಂತಹದು? ನಿಮ್ಮ ಉಪದೇಶ ಗುರು ಯಾರು? ಮಾಡಿದ ಸಾಧನ ಬಗೆ ಏನು?' ಅಂತ ಇವರು ಕೇಳಿದರು. ಆಗ ಆ ಶ್ರೀಹರಿ ಆಚಾರ್ಯರು ಹೇಳಿದ್ದೇನಂದರೆ, 'ನಾನು ಪ್ರತಿನಿತ್ಯವೂ ಪ್ರಾತಃಕಾಲ ಊರ ಹೊರಗೆ ಬಹಿರ್ದೇಶಕ್ಕೆ ಹೋಗಿ, ಅಲ್ಲಿ ಒಂದು ಬಾವಿಯಲ್ಲಿ ಮುಖ ಪ್ರಕ್ಷಾಲನಾದಿಗಳ ಮಾಡಿಕೊಂಡು ಬರುವ ಸಂಪ್ರದಾಯವಿತ್ತು. ಆ ಪ್ರಕಾರ ಹೋದ ಸಮಯದಲ್ಲಿ ಒಂದಾನೊಂದು ದಿನ ಅಕಸ್ಮಾತ್ ಒಬ್ಬ ಬಾವಾಜಿಯು

ನನ್ನನ್ನು ಕರೆದು ತನ್ನ ಎದುರಿನಲ್ಲಿ (ಏಕಾಂತದಲ್ಲಿ) ಕೂಡಿಸಿಕೊಂಡು ತಾನು ಧ್ಯಾನ ಪರನಾದನು. ಸ್ವಲ್ಪ ಹೊತ್ತಿನಲ್ಲಿ ಪ್ರಣವ ಧ್ವನಿಯುಕ್ತವಾಗಿ ನಾಭಿ ಪ್ರದೇಶದಿಂದ ಹೃದಯ ಪರಿಯಂತರ ಒಂದು ಮಹತ್ತರ ಪ್ರಕಾಶವು ಪ್ರಕಟವಾಗಿ ಆ ಪ್ರಕಾಶದಲ್ಲಿ ಆ ಬಾವಾಜಿಯು ಲೀನನಾದಂತೆ (ಈ ಹರಿಯಾಚಾರ್ಯರಿಗೆ) ಕಂಡು ಬಂತು. ಇದನ್ನು ಮಹದಾಶ್ಚರ್ಯದಿಂದ ನೋಡುತ್ತಿರಲು ಆ ಮಹಾ ಪ್ರಕಾಶದ ಒಂದು ಅಂಶವು ನಮ್ಮ (ಈ ಹರಿ ಆಚಾರ್ಯರ) ಹೃದಯ ಪ್ರವೇಶ ಮಾಡಿದಂತೆ ಆಯಿತು. ಆಮೇಲೆ ಉಭಯರೂ ಆಸ್ಥಲದಿಂದ ಎದ್ದೆವು. ಆ (ಬೈರಾಗಿ) ಬಾವಾಜಿಯು ಎಲ್ಲಿಯೋ ಹೊರಟು ಹೋದನು. ನಾನು (ಈ ಹರಿ ಆಚಾರ್ಯರು) ನನ್ನ ಕುಟೀರಕ್ಕೆ ಬಂದೆನು. ಮರುದಿನ ನಾನು (ಈ ಹರಿ ಆಚಾರ್ಯರು) ಯಥಾ ಪ್ರಕಾರ ಆ ಬಾವಿಯಲ್ಲಿ ಮುಖ ಪ್ರಕ್ಷಾಲನಾಗಳನ್ನು ಮಾಡಿಕೊಂಡು ಪೂರ್ವದಿನ ಕುಳಿತ ಪ್ರದೇಶದಲ್ಲಿ ಕುಳಿತ ಕೂಡಲೇ ನಮ್ಮ ನಾಭಿ ಪ್ರದೇಶದಿಂದ ಹೃದಯದವರೆಗೂ ಪ್ರಣವ ಧ್ವನಿಯುಕ್ತವಾಗಿ ಒಂದು ಜ್ವಾಲೆಯು ಉದ್ಭವಿಸಿ ಅಂತರ್ಧಾನ ಹೊಂದಿದಂತಾಯಿತು, ಇದು ನನ್ನನ್ನು ಆಶ್ಚರ್ಯಗೊಳಿಸಿತು. ಆ ಮರುದಿವಸವೂ ಅದರಂತೆ ಆ ಪ್ರದೇಶದಲ್ಲಿ ಕುಳಿತುಕೊಳ್ಳಲು ಪೂರ್ವ ದಿನದಂತೆ ಜ್ವಾಲೆಯು ಪ್ರಕಟವಾಗಿ ನಮ್ಮ ಸುತ್ತಲೂ ಪ್ರಕಾಶ ಕಂಡು ಬಂತು. ಇದರಂತೆ ಕ್ರಮೇಣ ಪ್ರಕಾಶವು ವೃದ್ಧಿ ಹೊಂದುತ್ತಾ ಹೋಗಲು ಆ ಪ್ರಕಾಶವು ಎಷ್ಟು ದೂರ ವ್ಯಾಪಿಸಿತೋ ಅಷ್ಟುದೂರದಲ್ಲಿಯ ಯಾವದ್ವಿಷಯಗಳು (ಅಷ್ಟು ಪ್ರದೇಶದಲ್ಲಿ ನಡೆಯತಕ್ಕ ವಿಷಯವು) ದೃಗ್ಗೋಚರವಾಗುತ್ತಿದ್ದವು. ಇದನ್ನು ಪರೀಕ್ಷಿಸಲೋಸುಗ ಉತ್ಕರ್ಷಾರ್ಥ ಒಬ್ಬಿಬ್ಬರನ್ನು ವಿಚಾರಿಸಲು, ಆ ಸಮಯದಲ್ಲಿ ಅವರಿಗೆ ಜನರು ಮಾಡುತ್ತಿದ್ದ ಕೆಲಸಗಳು ಯಥಾರ್ಥವಾಗಿ ಕಂಡುಬಂದಿರುವುದು ದೃಢವಾಗೋಣದರಿಂದ (ಕೆಲವು ಜನರನ್ನು ವಿಚಾರಿಸಿದ್ದಲ್ಲಿ) ಆಯಾ ಜನರು ಆ ಸಮಯದಲ್ಲಿ ಮಾಡಿದ ಕೆಲಸವನ್ನು ಒಪ್ಪಿಕೊಳ್ಳೋಣದರಿಂದ ಆನಂದವಾಯಿತು. ಆಮೇಲೆ ಬರಬರುತ್ತಾ ಆ ಪ್ರಕಾಶವು ಬಹುದೂರದವರೆಗೂ ವ್ಯಾಪಿಸಿದಂತಾಯಿತು. ಮತ್ತು ಪ್ರಕಾಶದಲ್ಲಿ ನಾನು ಭಗವದ್ರೂಪವನ್ನು ಚಿಂತನಾ ಮಾಡಿದರೂ ಅದು ಕಾಣಹತ್ತಿತು. ಈ ರೀತಿ ಕೆಲವು ದಿನಗಳಾದ ಬಳಿಕ ಆ ಪ್ರಕಾಶಗತ ಭಗವದ್ರೂಪದಲ್ಲಿಯೇ ಆಗಲಿ ಅಥವಾ ಭಗವದ್ರೂಪ ರಹಿತ ಕೇವಲ ಪ್ರಕಾಶದಲ್ಲಿಯಾಗಲಿ ತಾನು ಲೀನವಾದಂತಾಗುತ್ತಿತ್ತು. ಇದರಂತೆ ಆದಾಗ ಬಾಹ್ಯಸ್ಮೃತಿ ರಹಿತವಾಗುತ್ತಿತ್ತು. ಇದು ಕ್ಷಣಕಾಲ ವಿರೋಣದರಿಂದ, ಆ ಭಗವದ್ರೂಪವಾದರೂ ಸ್ಥಿರವಾಗಿ ಇರದಿರೋಣದರಿಂದ ಮನಸ್ಸಿಗೆ ಅತೃಪ್ತಿಕರವಾಗಿ, ಆ ಭಗವದ್ರೂಪವು ಸ್ಥಿರವಾಗಿ ಬಹುಕಾಲ ಕಾಣುವಂತಾಗಲು ಮತ್ತು ಆ ಅಸಂಪ್ರಜ್ಞಾತ ಸಮಾಧಿಯು ಬಹುಕಾಲವಿರುವಂತೆಯೂ ಆಗುವುದಕ್ಕೆ ಏನು ಉಪಾಯ ಮಾಡಬೇಕೆಂದು ಯೋಚನೆಯಾಯಿತು. ನಾನು ಆ ಪ್ರಕಾಶದಲ್ಲಿ ಯಾರನ್ನು ಕುರಿತು ಚಿಂತನಾ ಮಾಡುತ್ತಿದ್ದೆನೋ ಅವರು ಕಂಡುಬರುತ್ತಿದ್ದರು. ಆದರೆ, ಅನೇಕರು ಈ ನನ್ನ ಪ್ರಕಾಶಕ್ಕಿಂತಲೂ ಕಡಿಮೆ ಪ್ರಕಾಶ ಉಳ್ಳವರಾಗಿ, ನನ್ನ ಪ್ರಕಾಶವೇ ಪ್ರಬಲವಾಗಿ ಅವರು ಗೋಚರರಾಗುತ್ತಿದ್ದರು. ಆದರೆ, ತಾವು ಮಾತ್ರ ಆ ನನ್ನ ಪ್ರಕಾಶಗಿಂತಲೂ ತೇಜಃಪುಂಜರಾಗಿ ಕಂಡುಬಂದದ್ದರಿಂದ ನನ್ನ

ಸಂಶಯ ಪರಿಹಾರವಾಗಬಹುದೆಂದು ಕುತೂಹಲದಿಂದ ಬಂದಿದ್ದೇನೆ. ಅನುಗ್ರಹ ಮಾಡಬೇಕು' ಅಂತ ತಮ್ಮ ವೃತ್ತಾಂತವನ್ನು ಹೇಳಿಕೊಂಡರು. ಈ ಮಾತು ಇವರಿಗೂ (ಈ ಚರಿತ್ರ ನಾಯಕರಿಗೂ) ಆಶ್ಚರ್ಯ ಉಂಟುಮಾಡಿತು. ಯಾದಗಿರಿಯ ಟಂಕಸಾಲಿ ಶ್ರೀನಿವಾಸ ಆಚಾರ್ಯರನ್ನು ಆಶ್ಚರ್ಯಗೊಳಿಸಿದ್ದಲ್ಲದೇ ಅವರನ್ನೂ ಮುಗ್ಧರನ್ನಾಗಿ ಮಾಡಿತು. ಈ ಮಾತುಗಳನ್ನು ಕೇಳಿದ ಮೇಲೆ "ಈ ವಿಷಯವು ನನಗೆ ಆಶ್ಚರ್ಯ ಉಂಟುಮಾಡುತ್ತಿದೆ. ಆದರೆ, ನಿಮ್ಮಂತೆ ನಾನು ಪ್ರಕಾಶದಲ್ಲಿ ಅಥವಾ ಪ್ರಕಾಶಗತ ಭಗವದ್ರೂಪದಲ್ಲಿ ಲೀನವಾಗುವುದು ಕಂಡಿಲ್ಲ, ಮತ್ತು ಕಾಣುವುದಿಲ್ಲ. ಹಾಗೂ ಕಾಣಬೇಕೆಂಬ ಲವಲವಿಕೆಯೂ ಇಲ್ಲ. ನೀವು ಕೇಳತಕ್ಕ ವಿಷಯ ನಮ್ಮಿಂದ ಬಗೆಹರಿಯತಕ್ಕಂತಹುದಲ್ಲ. ಪ್ರಯುಕ್ತ ನೀವು ಅನ್ಯತ್ರ ಹೋಗಿರಿ." ಅಂತ ಈ ಚರಿತ್ರ ನಾಯಕರು ಹೇಳಿದರು. 'ನಾನು ಬಹು ಮಂದಿಯನ್ನು ಪರಿಶೀಲಿಸಿದೆ, ಅವರುಗಳೆಲ್ಲರೂ ನನಗಿಂತಲೂ ಕಡಿಮೆ ದರ್ಜಾ ಯೋಗ್ಯತಾದವರಾಗಿ ಕಂಡು ಬಂದು, ತಾವು ಮಾತ್ರ ಹೆಚ್ಚಿನ ದರ್ಜಾದವರಾಗಿ ಕಂಡುಬಂದದ್ದರಿಂದ ತಮ್ಮಲ್ಲಿ ಶರಣಾಗತನಾಗಿ ಬಂದಿದ್ದೇನೆ. ನಿರ್ವಂಚನೆಯಿಂದ ನನ್ನ ಮನಸ್ಸು ತೃಪ್ತಿಯಾಗುವಂತೆ ಮಾಡಬೇಕೆಂದು' ಅನ್ನುತ್ತ ಸಾಷ್ಟಾಂಗ ಪ್ರಣಾಮ ಮಾಡಿದರು. 'ಹಾಗಾದರೆ, ನಾವು ಹೇಳುವಂತೆ ಒಂದು ವರುಷ ವರ್ತಿಸಿದರೆ ಅನಂತರ ನಿಮ್ಮ ವಿಷಯ ಹೇಳುತ್ತೇವೆ. ಅದೇನೆಂದರೆ ಈ ಊರಲ್ಲಿ ಶ್ರೀ ವ್ಯಾಸರಾಯರಿಂದ ಪ್ರತಿಷ್ಠಿತ ಪ್ರಾಣಪ್ರತೀಕವಿದೆ. ಅದಕ್ಕೆ ಮಂಗರಾಯನೆಂದು ಹೆಸರು. ಬಹು ಜಾಗ್ರತಸ್ಥಲ, ಅದು ಊರ ಹೊರಗೆ ಪ್ರದೇಶವಾಗಿ ತಪಸ್ಸಿಗೆ ಅನುಕೂಲವಾಗಿದೆ. ನೀವು ಅಲ್ಲಿ ವಾಸಮಾಡಿಕೊಂಡಿದ್ದು, ಪ್ರತಿನಿತ್ಯವೂ ವಾಯುದೇವರಿಗೆ ವಾಯುಸ್ತುತಿ ಪುರಶ್ಚರಣ ರೀತ್ಯಾ ಗೋಕ್ಷೀರದಿಂದ ಅಭಿಷೇಕ ಮಾಡಿ, ಆಕ್ಷೀರವನ್ನೇ ಪಾನಮಾಡಿಕೊಂಡು ಒಂದು ಸಂವತ್ಸರ ಪರ್ಯಂತರ ವ್ರತಸ್ಥರಾಗಿರಬೇಕು. ಭಾಗವತಾದಿ ಸಚ್ಛಾಸ್ತ್ರ ಪಾರಾಯಣ ಮಾಡುತ್ತಾ ಕಾಲಕ್ರಮಣ ಮಾಡಬೇಕು' ಅಂತ ಹೇಳಿದರು. ಈ ಮಾತು ಅವರಿಗೆ ರುಚಿಸದೆ, 'ನಾನು ಸೇವಾರ್ಥವಾಗಲಿ, ಸಾಧನಾರ್ಥವಾಗಲಿ ಬರಲಿಲ್ಲ. ವಾಯುದೇವರ ಸೇವಾ ಮಾಡುವದು ನನಗೆ ಅವಶ್ಯಕತಾ ಇಲ್ಲ. ಮತ್ತು ಮಾಡುವವನೂ ಅಲ್ಲ. ಏನೋ, ನನಗೆ ಬಂದ ಒಂದೆರಡು ಸಂಶಯ ವಿಷಯಗಳ ಕೇಳಿಕೊಂಡು ಹೋಗಲು ಬಂದಿದ್ದೇನೆ. ಮತ್ತು ನನಗೆ ಹೆಂಡರಾಗಲಿ, ಮಕ್ಕಳಾಗಲಿ ಇಲ್ಲ. ಇಲ್ಲದಿದ್ದರೂ ದ್ರವ್ಯ ಬಹುಜನರನ್ನು ಆವರಿಸಿಕೊಂಡಿರುತ್ತದೆ. ಅದು ಕೂಡಾ ನನಗಿಲ್ಲ. ಅಂದಮೇಲೆ ನಾನು ಯಾತರ ಉದ್ದೇಶ್ಯ ಪುರಶ್ಚರಣಾದಿ ಸೇವಾ ಮಾಡಬೇಕು. ತತ್ರಾಪಿ ನನಗೆ ಯಾವ ಭಗವದ್ರೂಪವಾದರೂ ಸ್ಮರಣ ಮಾತ್ರ ದರ್ಶನ ಮತ್ತು ಅದರಲ್ಲಿ ಲೀನತ್ವ, ಈ ರೀತಿ ಸ್ವಾಭಾವಿಕ ಸಿದ್ಧಿ ಇರೋಣದರಿಂದ ವಾಯು ದೇವರನ್ನು ಕುರಿತು ಆರಾಧನಾ ಮಾಡುವ ಅವಶ್ಯಕತಾ ಏನು? ಆದ್ದರಿಂದ ಆ ಸೇವಾದಿಗಳನ್ನು ಮಾಡುವನಲ್ಲ' ಅಂತ ಸ್ವಲ್ಪ ಆಗ್ರಹಪೂರ್ವಕ ಮಾತನಾಡಿದರು. "ಕಬಂಧಿ ಕಾತ್ಯಾಯನಾದಿಗಳು ಪಿಪ್ಪಲಾದರಲ್ಲಿ ಪರತತ್ವ ವಿಚಾರಾರ್ಥ ಹೋದಾಗ ಒಂದು ಸಂವತ್ಸರ ದೀಕ್ಷಾ ಹೇಳಿ ಅದನ್ನು ಅವರಗಳು ಪಾಲಿಸಿಕೊಂಡು (ಹೇಳಿದಂತೆ ಮಾಡಿ) ಬಂದ ಮೇಲೆಯೇ ಪರತತ್ವೋಪದೇಶ ಮಾಡಿದ್ದಾರಷ್ಟೆ! ಅದರಂತೆ ನಾನು ಕೂಡಾ ಒಂದು ಸಂವತ್ಸರ

ದೀಕ್ಷಾನಿಮಿತ್ತವೂ, ಆ ನಿಮ್ಮ ಗುರು ಸಂಪ್ರದಾಯಸ್ಥ ಶ್ರೀಮದಾಚಾರ್ಯರ ಸಿದ್ಧಾಂತಜ್ಞ ಬ್ರಾಹ್ಮಣನಲ್ಲನಾದ್ದರಿಂದ ನೀವು ಅಪವಿತ್ರರಾಗಿ ರೋಣದರಿಂದಲೂ ಆ ರೀತಿ ವಾಯುದೇವಾ ಸೇವಾ ಹೇಳಿದ್ದೇವೆ. ನೀವು ಅದನ್ನು ಮಾಡಿಕೊಂಡು ಬಂದ ಮೇಲೆಯೇ ನಿಮ್ಮ ವಿಷಯ ವಿಚಾರ ಮಾಡುವೆವು. ಇಲ್ಲವಾದರೆ ನಿಮ್ಮ ವಿಷಯ-ವಿಚಾರ ಮಾಡುವುದಿಲ್ಲ." ಅಂತ ಸ್ಪಷ್ಟವಾಗಿ (ಖಂಡ-ತುಂಡ) ಮಾತನಾಡಿದರು. ಈ ಉಭಯರ ಮಾತನ್ನು ಕೇಳುತ್ತಲಿದ್ದ ಟಂಕಸಾಲಿ ಶ್ರೀನಿವಾಸಾಚಾರ್ಯರು "ಪಾಪ! ಈ ಆಚಾರ್ಯರು ಕೇಳುವ ಒಂದೆರಡು ವಿಷಯವನ್ನು ವಿಚಾರ ಮಾಡಿದ ಮಾತ್ರಕ್ಕೆ ಇಷ್ಟು ನಿಷ್ಠುರವಾಗಿ ಕಠಿಣವಾದ ಸೇವಾ ಹೇಳಬೇಕೆ? ಅವರಾದರೂ ಸಿದ್ಧ ಪುರುಷರಾಗಿದ್ದಾರೆ. ಹೀಗಿದ್ದ ಕಾಲಕ್ಕೂ ಲಕ್ಷ್ಯಕ್ಕೆ ತಾರದೆ ತುಚ್ಛೀಕರಿಸುವದು ಕ್ರಮವಲ್ಲ. ಬಹುದೂರ ದೇಶದಿಂದ ಬಂದವರನ್ನು ನಿರಾಕರಿಸುವದು ಯೋಗ್ಯವೇ?" ಅಂತ ಆ ಹರಿ ಆಚಾರ್ಯರ ಪಕ್ಷ ವಹಿಸಿ ಮಾತನಾಡಿದರು. "ಅದ್ವೈತ ಮತ ಖಂಡನಪೂರ್ವಕ ಮಧ್ವ ಸಿದ್ಧಾಂತ ಎಂಬುವುದು ಗುರ್ತು ಹಿಡಿಯದೆ ಅವರ ಪಕ್ಷ ವಹಿಸಿ ಮಾತನಾಡುತ್ತೀರಿ! ಈ ತರಹದ ಉಪಾಸನಾ ತಮೋ ಯೋಗ್ಯರಿಗಲ್ಲದೆ ಇತರರಿಗೆ ಬರುವುದುಂಟೇ" ಅಂತ ಏಕಾಂತದಲ್ಲಿ ಟಂಕಸಾಲಿ ಆಚಾರ್ಯರಲ್ಲಿ ಅಂದರು. 'ಏನಿದು! ಪ್ರಕಾಶೋಪೇತ ವ್ಯಾಪ್ತನಾದ ಭಗವದ್ರೂಪವನ್ನು ಚಿಂತನಾ ಮಾಡಿದ ಮಾತ್ರ ಅಪರೋಕ್ಷೀಕೃತನಾಗಬೇಕಾದರೆ (ಕಾಣಬೇಕಾದರೆ) ತಮೋಯೋಗ್ಯರಿಗೆ ಅಂತ ಹೇಳುವುದು ದಾರ್ಷ್ಟ್ಯವೇ ಸರಿ. ಆ ವಿಷಯವು ನಿಮ್ಮ ಮನಸ್ಸಿಗೆ ಬಾರದಿದ್ದ ಮಾತ್ರಕ್ಕೆ ಏನಾದರೂ ಅಪಶಬ್ದ ಕೊಡಬಹುದೆ?' ಅಂತ ಟಂಕಸಾಲಿ ಆಚಾರ್ಯರು ನಗುತ್ತಾ ನುಡಿದರು. "ಹಾಗಲ್ಲ ಆಚಾರ್ಯರೇ, ಅದ್ವೈತ ತತ್ವದಲ್ಲಿ ತೇಜೋಮಯ ವ್ಯಾಪ್ತವಾದ ಅಖಂಡ ಬ್ರಹ್ಮಸ್ವರೂಪದಲ್ಲಿ ಸಕಲ ವಸ್ತುಗಳು (ವೈವಿಧ್ಯಗಳು) ಭೇದಾರೋಪಿತವಾಗಿ ತೋರುವವು. ವಸ್ತುತಃ ಅದೆಲ್ಲವೂ ಏಕಸ್ವರೂಪವೇ; ಆದ್ದರಿಂದ ಯಾವುದನ್ನು ನೋಡಿದರೂ, ಆ ಪರಬ್ರಹ್ಮ ವಸ್ತುವಿನಿಂದಲೇ ಅಭಿವ್ಯಕ್ತವಾಗುವುದು. ಮತ್ತು ಅದರಲ್ಲಿಯೇ ಲಯ ಹೊಂದುವುದು. **ವಿವಿಧ ವಸ್ತುವಾನ್ ಪಾತಿ-ತಾನು** ಕೂಡಾ ಆ ಪರಬ್ರಹ್ಮವಸ್ತುವಿನಿಂದಲೇ ವ್ಯಕ್ತನಾದವನೆಂತಲೂ ಅದರಲ್ಲಿಯೇ ತಾನು ಲಯ ಹೊಂದುವೆನೆಂತಲೂ ಕಾಣುತ್ತಾನೆ (ತಿಳಿಯುತ್ತಾನೆ). ಅಂದ ಮೇಲೆ ಇದನ್ನು ಅಸದೋಪಾಸನಾವೆಂದು ಹೇಳಲೇಬೇಕು, ಹೊರತು ದ್ವೈತ ಸಿದ್ಧಾಂತಕ್ಕನುಸಾರಿಯಾದ ಉಪಾಸನಾ ಅಂತ ಹೇಳಲಿಕ್ಕೆ ಬಾರದು. ಮತ್ತು ಆ (ತಮೋಯೋಗ್ಯ) ಜೀವರಿಗೆ ವಾಯುದೇವರೆಂದರೆ ಸರಿ ಹೋಗುವುದಿಲ್ಲ. ಅಂದ ಮೇಲೆ ವಾಯುದೇವರ ಸೇವಾ ಹೇಳಿದ ಮೇಲೆ ಅವನ ಸ್ವರೂಪ ವ್ಯಕ್ತವಾಗುವದೆಂದು ಯೋಚಿಸಿ ಆ ರೀತಿ ಹೇಳಿದ್ದೇವೆ. ಅದಕ್ಕೆ ಅವನು ಸಮ್ಮತಿಸಲಿಲ್ಲ. ಇದರಿಂದಲೂ ಅವನು ಅಯೋಗ್ಯ ಮಾರ್ಗಗಾಮಿಯಂತಲೇ ನಿಶ್ಚಯ ಮಾಡಿದ್ದೇವೆ. ಹೀಗೆ, ಇನ್ನೂ ಕೆಲವು ಕಾರಣಗಳಿಂದಲೂ ಅವನು ತಮೋಯೋಗ್ಯನೆಂದು ಸಿದ್ಧಮಾಡಿಕೊಟ್ಟರು. ಆ ಬಳಿಕ ಆ ರಾತ್ರಿ ಆ ಹರಿ ಆಚಾರ್ಯರ ಸಮೀಪದಲ್ಲಿಯೇ ಆ ಟಂಕಸಾಲಿ ಆಚಾರ್ಯರು ಮಲಗಿದ್ದು ಅವರ ಶ್ವಾಸೋಚ್ಛ್ವಾಸಗಳನ್ನು ಪರೀಕ್ಷಿಸಿ ನಿಜವೆಂದು ಮನಗೊಂಡರು. ಮುಂದೆ ಒಂದೆರಡು ದಿನ ಆ ಶ್ರೀ ಹರಿ ಆಚಾರ್ಯರು ಹಟ ಹಿಡಿದು ನಿಂತುಕೊಂಡು (ಇವರು ಹೇಳಿದ ಸೇವಾಮಾಡಲು ಒಪ್ಪದೆ) ತಮ್ಮ ಮಾತನ್ನೇ

ತಾವು ಆಡುತ್ತಿದ್ದರು. 'ಈ ತಮೋಯೋಗ್ಯನನ್ನು ಹೊರಹಾಕಿ ಸಂಪ್ರೋಕ್ಷಣ ಮಾಡು' ಎಂಬುವುದಾಗಿ ವಾಯು ದೇವರ ಆಜ್ಞಾ ಆದದ್ದರಿಂದ ಮರುದಿವಸ ನಿಷ್ಠುರ ವಚನಗಳಿಂದ ಅವರನ್ನು ಧಿಕ್ಕರಿಸಲು, ಆ ಹರಿ ಆಚಾರ್ಯರಿಗೆ ವಿಶೇಷ ಸಿಟ್ಟು ಬಂದು ಹೊರಟು ಹೋದನು. 'ನಾವು ಕೇವಲ ಪುಸ್ತಕದಲ್ಲಿಯ ಶಬ್ದಗಳನ್ನೇ ವಿಮರ್ಶನ ಮಾಡತಕ್ಕವರೇ ಹೊರತು ಜೀವರುಗಳ ಅಂತರ್ಭೂತ ಸ್ವರೂಪ ಯೋಗ್ಯತಾ ವಿಮರ್ಶಕರಲ್ಲ, ತಾವು ಇಷ್ಟು ರೀತಿಯಿಂದ ಹೇಳಿ ನಿದರ್ಶನಕ್ಕೆ ತಂದುಕೊಟ್ಟ ಮೇಲೆ ನಮ್ಮ ಪೂರ್ವಾಗ್ರಹ ದೂರವಾಯಿತು. ಇಲ್ಲವಾಗಿದ್ದರೆ ಆ ಗ್ರಹವು ನಮ್ಮ ಪಾಲಿಗೆ ಗ್ರಹವಾಗಿ ಪರಿಣಮಿಸಿ ಈ ಗ್ರಹವು (ನಾವು) ಆ ಗ್ರಹದ ಸುತ್ತ ಭ್ರಮಣ ಹೊಂದುತ್ತಿತ್ತು' ಎಂಬುವುದಾಗಿ ತಮ್ಮ ಭ್ರಮೆಯನ್ನು ಒಪ್ಪಿಕೊಂಡರು ಟಂಕಸಾಲಿ ಆಚಾರ್ಯರು. ಗ್ರಂಥಸ್ಥ ವಿಷಯಗಳು ಜಗತ್ತಿನಲ್ಲಿಯ ಪದಾರ್ಥಗಳ ವಿಮರ್ಶನ ಮಾಡುವ ಸಲುವಾಗಿ ದಿಗ್ದರ್ಶಕಗಳಾಗಿವೆ. ಅದನ್ನು ತಿಳಿಯದೆ ಕೇವಲ ಶಬ್ದ ವಿಷಯಗಳನ್ನು ಮಾತ್ರ ವಿಮರ್ಶನ ಮಾಡುವದಕ್ಕೆ ಬಂದು ಅನ್ಯತ್ರಬಾರದೆ ಹೋದರೆ ಗಿಳಿ ಪಾಠದಂತೆ ಆಗುತ್ತದೆ ಅಂತ ನುಡಿದದ್ದಕ್ಕೆ ಒಪ್ಪಿಕೊಂಡರು.

೨೯. ಯಾದಗಿರಿಯ ಏಕಾಂತ ಅನೇಕಾಂತವಾಯಿತು.

ತರುವಾಯ ಈ ಟಂಕಸಾಲಿ ಆಚಾರ್ಯರೂ ಇವರನ್ನು (ಈ ಮುತ್ತಿಗಿ ಆಚಾರ್ಯರನ್ನು) ತಮ್ಮ ಗ್ರಾಮಕ್ಕೆ ಬರುವುದಾಗಿ ಆಮಂತ್ರಣ ಕೊಟ್ಟರು. 'ನಾನು ನಿಮ್ಮಷ್ಟು ಸಹ ಸ್ವತಂತ್ರನಲ್ಲ, ಶ್ರೀಹರಿ ವಾಯುಗಳ ಆಜ್ಞಾಪ್ರಕಾರ ವರ್ತಿಸುವವನು. ಅವರ ಆಜ್ಞೆಯಾದರೆ ಅವಶ್ಯಕ ಬರುತ್ತೇನೆ' ಅಂತ ಹೇಳಿದರು. ಕೆಲವು ತಿಂಗಳ ನಂತರ ಇವರು (ಈ ಚರಿತ್ರ ನಾಯಕರು) ಯಾದಗಿರಿಗೆ ಹೋದರು. ಅಲ್ಲಿ ಒಂದೆರಡು ದಿನಗಳಾದ ಮೇಲೆ, ಒಂದು ದಿನ ಮುಂಜಾನೆ ಮಾತನಾಡುತ್ತಾ ಸುಮಾರು ಎರಡು ಮೈಲು ದೂರದಲ್ಲಿರುವ ಚಿಕ್ಕ ಬೆಟ್ಟಕ್ಕೆ ಹೋಗಿ, ಪರ್ವತಾರೋಹಣ ಮಾಡಿ, ಅಲ್ಲಿ ಚಿಂತರವೇಲಿಶೇಷದಾಸರಿಗೆ ಒಲಿದು (ತಿರೋಧಾನ ಹೊಂದಿದ್ದ) ಅಪರೋಕ್ಷ ಜ್ಞಾನವನ್ನು ಪುನಃ ಒದಗಿಸಿಕೊಟ್ಟ "ಸಮಯದಗಲ" ಪ್ರಾಣದೇವರ ದರ್ಶನ ತೆಗೆದುಕೊಂಡು ಸ್ವಲ್ಪ ಹೊತ್ತು ಕುಳಿತುಕೊಂಡ ಮೇಲೆ "ನಿಮ್ಮ ಶಿಷ್ಯನಾದ ವೆಂಕಪ್ಪನನ್ನು ನಿಮ್ಮ ಮನೆಗೆ ಕಳಿಸಿ ಭಾಗವತ ಪುಸ್ತಕವನ್ನು ಹಾಗು ಅರ್ಧಶೇರು ಅನ್ನವಾಗುವ ತಪ್ಪೇಲಿ ಮತ್ತು ಅದಕ್ಕೆ ತಕ್ಕಷ್ಟು ಅಕ್ಕಿ, ತುಪ್ಪ ತರಲು ಹೇಳಿರಿ. ಆ ಅಕ್ಕಿಯನ್ನು ಮನೆಯಿಂದ ತರುವ ಬದಲು, ಬರ-ಬರತಾ ಗೋಪಾಳ ಮಾಡಿಕೊಂಡು ತಂದರೆ ಉತ್ತಮ" ಅಂತ ಟಂಕಸಾಲಿ ಆಚಾರ್ಯರಿಗೆ ತಿಳಿಸಿದರು. ಒಳ್ಳೇದು! ಅಕ್ಕಿ ಮಾತ್ರ ತಂದರೆ ಹ್ಯಾಗೇ? ಉಪಷ್ಟಂಭಕಗಳು ಬೇಡವೇ? ಅದು ಸಹ ತರ ಹೇಳುತ್ತೇವೆ ಎಂದು ಅಂದರು. 'ವೈಶ್ವಾನರಾಗ್ನಿಗೆ ವೈಶ್ವದೇವ ಹವಿಶೇಷ ಮಾತ್ರ ಕೊಡತಕ್ಕದ್ದು. ಪ್ರಯುಕ್ತ ಅಕ್ಕಿ ಮತ್ತು ತುಪ್ಪ ತಂದರೆ ಸಾಕು, ಇದಕ್ಕೂ ಹೆಚ್ಚಿನ ಪದಾರ್ಥ ತರುವದುನಾವಶ್ಯಕ' ಅಂತ ಹೇಳಿದರು. ಆ ಪ್ರಕಾರವೇ ವೆಂಕಣ್ಣ ತಂದನು. ಅಷ್ಟರಲ್ಲಿ ಈ ಉಭಯರು ಸ್ನಾನಾಹ್ನೀಕ ತೀರಿಸಿಕೊಂಡು ಕುಳಿತಿದ್ದರು. ಪುಸ್ತಕ ಬಂದ ಕೂಡಲೇ ಪುರಾಣ ಆರಂಭವಾಯಿತು. ಆ ವೆಂಕಪ್ಪನು ಅನ್ನ ಮಾತ್ರ ಮಾಡಿಟ್ಟನು. ಅನ್ನವಾದ ಮೇಲೆ ಪುರಾಣ ಸಂಕ್ಷೇಪ ಮಾಡುವ ಯತ್ನ ಮಾಡಿದಾಗ್ಯೂ "ಅಸ್ತಮಯ ಪರ್ಯಂತರ ಪುರಾಣ ನಡೆಯಲಿ" ಅಂತ ಇವರು

ಹೇಳಿದರು. ಅವರು ಹಸಿವೆಯಿಂದ ಬಳಲುವರಾದಾಗ್ಯೂ ಭಿಡೇಕ್ಕೆ ಆ ದಿನ ಅಸ್ತಮಯ ಪರ್ಯಂತ ಪುರಾಣ ಹೇಳಿ, ನಂತರ ನೈವೇದ್ಯ ವೈಶ್ವದೇವ ಮುಗಿಸಿ, ಮೂರೂ ಜನರು ಊಟಕ್ಕೆ ಕುಳಿತುಕೊಂಡರು. ಆ ಟಂಕಸಾಲಿ ಆಚಾರ್ಯರಿಗೂ ಹಾಗೂ ವೆಂಕಪ್ಪನಿಗೂ ಯಾವ ಸಾಧನೆ ಇಲ್ಲದೆ ಕೇವಲ ಅನ್ನ ರುಚಿಸದಂತಾಗಿ ಸ್ವಲ್ಪವೇ ಭೋಜನ ಮಾಡಿದರು. ಇವರು ಮಾತ್ರ ಯಥಾ ಪ್ರಕಾರ ಭೋಜನ ಮಾಡಿದರು. ಆ ರಾತ್ರಿ ಹಾಸಿಗೆ ಹೊದ್ದಿಕೆ ಯಾವುದೂ ಇಲ್ಲದಿರೋಣದಿಂದ ನಿದ್ರಾ ಹತ್ತದೆ ಆವರು ಶ್ರಮಪಟ್ಟರು. ಇವರಾದರು ನಿದ್ರಾ ಮಾಡದೆ ಪದ್ಮಾಸನಾಸೀನರಾಗಿಯೇ ಬೆಳತನಕ ಧ್ಯಾನಾಸಕ್ತರಾಗಿದ್ದರು. ಮರುದಿನವು ಇದರಂತೆಯೇ ಸುಮ್ಮನೆ ಪುರಾಣ ಶ್ರವಣ ಮಾಡುತ್ತಿರಲು, 'ನಾವು ಹೇಳಿದಂತೆ ಸುಮ್ಮನೇ ಕೇಳುತ್ತಾ ಹೋದರೆ ಹ್ಯಾಗೇ? ಏನಾದರೂ ಪ್ರಶ್ನೆ ಮಾಡಿದರೆ "ವಾದೇ ವಾದೇ ಜಾಯತೇ ತತ್ವಬೋಧಃ" ಎಂದಿರುವದರಿಂದ ಪ್ರಶ್ನೆ ಮಾಡಿರಿ' ಅಂತ ಇವರಿಗೆ ಟಂಕಸಾಲಿ ಆಚಾರ್ಯರೆಂದರು. ಒಳ್ಳೇದು ಅಂದು, ಆದಿನ ಪುರಾಣಾರಂಭಿಸಿದ ಕೂಡಲೇ ಪ್ರಶ್ನೆ ಪ್ರಾರಂಭ ಮಾಡಿ, ಸಾಯಂಕಾಲದವರಿಗೂ ಪ್ರಶ್ನೋತ್ತರ ನಡೆಯುವದರಲ್ಲಿ ಅರ್ಧ ಶ್ಲೋಕ ಸಹ ಪುರಾಣ ಸಾಗಲಿಲ್ಲ. 'ಈ ಪ್ರಕಾರ ಸಾವಕಾಶದಿಂದ ಪುರಾಣ ನಡೆಸಿದರೆ, ಗ್ರಂಥ ಎಷ್ಟು ದಿನಕ್ಕೆ ಮುಗಿಯಬೇಕು?' ಅಂತ ಅಂದರು, "ಗ್ರಂಥ ಮುಗಿಯಲೇಬೇಕೆಂಬ ಸಂಕಲ್ಪ ಯಾರಿಗಿದೆ? ಎಷ್ಟಾದರಷ್ಟೇ ಸಾಕು!" ಅಂತ ಅವರು ಉತ್ತರ ಕೊಟ್ಟರು. ಮರುದಿನವೂ ಇದರಂತೆ (ಪುರಾಣ) ಸಂವಾದ ನಡೆಯುತ್ತಿರುವಾಗ ಯಾರೋ ಒಬ್ಬ ಗೃಹಸ್ಥನು ಮಾರ್ಗಸ್ಥನಾಗಿ ದೊಡ್ಡ ಕುದುರೆ ಹತ್ತಿ ಹೋಗುತ್ತಿರಲು, ಈ ಉಭಯರ ಸಂವಾದ ಕೇಳಿಬಂದಿದ್ದರಿಂದ ಆ ಗೃಹಸ್ಥನು ಬೆಟ್ಟಹತ್ತಿ ಬಂದನು. ಆತನು ಸಭ್ಯ ಗೃಹಸ್ಥನಾದರಿಂದ ತನ್ನ ಪ್ರಯಾಣವನ್ನು ರಹಿತಮಾಡಿ ತನ್ನ ಕುದುರೆಯನ್ನು ಮನುಷ್ಯ ಸಹಿತ ತನ್ನ ಗ್ರಾಮಕ್ಕೆ (ಮನೆಗೆ) ಕಳಿಸಿ, ತಾನು ಪುರಾಣ ಶ್ರವಣ ಮಾಡಲು ಕುಳಿತುಕೊಂಡನು. ಆ ದಿನ ಗೃಹಸ್ಥನಿಗೂ ತಮ್ಮ ಹವಿರ್ಭಾಗವನ್ನು ಕೊಟ್ಟರು. ಆತನು ಬೆರಗಾಗಿ ಕೂಡಲೇ ತನ್ನ ಒಬ್ಬ ಮನುಷ್ಯನ ಸಂಗಡ ಹೇಳಿಕಳಿಸಿ, ಒಂದು ಗಾಡಿಯಲ್ಲಿ ಯಾವತ್ತೂ ಭೋಜನ ಪದಾರ್ಥಗಳನ್ನು ತರಿಸಿ, ಅಡಗಿ-ನೀರಿನವರನ್ನು ಹಾಗೂ ತನ್ನ ಮನೆಯವರನ್ನೂ ಕರಿಸಿದನು. ಆ ದಿನರಾಭ್ಯ ಒಂದು ಸಪ್ತಕದವರೆಗೂ ದಿನೇ ದಿನೇ ಜನ ಹೆಚ್ಚುತ್ತಲೂ, ಭಕ್ಷ್ಯಭೋಜ್ಯಾದಿಗಳು ಬೆಳೆಯುತ್ತಲೂ ವೈಭವ ನಡೆಯಹತ್ತಿತು. ಈ ವೈಭವದಿಂದ ಟಂಕಸಾಲಿ ಆಚಾರ್ಯರು ಸಂತುಷ್ಟರಾಗಿ ತಾವಾಗಿಯೇ ಪುರಾಣವನ್ನು ಯಥಾ ಸಾವಕಾಶ ನಡೆಸಹತ್ತಿದರು. ಈ ಮುತ್ತಿಗಿ ಆಚಾರ್ಯರು, 'ಏಕಾಂತ ವಾಗಿರಬೇಕೆಂದು ನಾವು ಇಲ್ಲಿಗೆ ಬಂದರೆ, ಇಲ್ಲಿಯೂ ದಿನೇ ದಿನೇ ಗಲಾಟೆ (ಗದ್ದಲ) ಹೆಚ್ಚುತ್ತಾ ನಡೆಯಿತು. ಇದರಿಂದ ಉದರಂಭರಣದ ಇತರ ವ್ಯವಸಾಯಗಳಂತೆ ಈ ಭಾಗವತ ಪುರಾಣವೂ ಆದಂತಾಯಿತು. ಆದ್ದರಿಂದ, ಇನ್ನು ಮೇಲೆ ಇಲ್ಲಿರುವುದನಾವಶ್ಯಕ, ಊರೊಳಗೆ ಹೋಗೋಣ' ಅಂತ ಅಂದರು. ಪ್ರಥಮದಲ್ಲಿ ಬಹು ಶ್ರಮವಾಗಿದ್ದಾಗ ನಾವು ಹೋಗೋಣವೆಂದರೆ ಬೇಡವೆಂದಿರಿ. ಈಗ ಎಲ್ಲ ರೀತಿಯಿಂದಲೂ ಅನುಕೂಲವಾಗಿರೋಣದರಿಂದ ಊರೊಳಗೆ ಹೋಗುವದಕ್ಕಿಂತಲೂ, ಇಲ್ಲಿಯೇ ಇರುವದು ಉತ್ತಮವೆಂಬುದಾಗಿ ನನಗೆ ಅನಿಸಿದೆ. ಇದು ನಿಮಗೆ ಬೇಡವಾಗಿದೆ. ಉಪಾಯವಿಲ್ಲವೆಂದು

ತಮ್ಮ ಹಾರ್ದವನ್ನು ವ್ಯಕ್ತಮಾಡಿ ಪ್ರಯಾಣಕ್ಕೆ ಸಿದ್ಧರೋ? ಎಂದು ಕೇಳಿದ್ದಕ್ಕೆ 'ಹೌದು' ಈಗಲೇ ಹೊರಡಬೇಕು ಅಂತ ಹೇಳಿದ್ದಕ್ಕೆ ವಿಷಾದದಿಂದ ಪ್ರಯಾಣಕ್ಕೋನ್ಮುಖರಾದರು. ಆಗ ಬಂದ ಗೃಹಸ್ಥರಿಗೆ ಅಪ್ಪಣೆ ಕೊಟ್ಟು ತಾವು ಹೊರಟು ಸ್ವಗೃಹಕ್ಕೆ ಬಂದು ಒಂದೆರಡು ದಿನಗಳ ನಂತರ ಮುತ್ತಿಗಿ ಆಚಾರ್ಯರು ಆದವಾನಿಗೆ ಬಂದರು.

೩೦. ವಿಜಯದಾಸರ ಆರಾಧನೆ ವಿಜೃಂಭಿಸಿತು.

ಈ ಚರಿತ್ರ ನಾಯಕರು ವಿಜಯರಾಯರ ಗುಡಿಯಲ್ಲಿರುತ್ತಿದ್ದ ಪ್ರಯುಕ್ತ ಅವರ ಸ್ಮರಣಾರ್ಥ ಪ್ರತಿವರುಷ ಕಾರ್ತೀಕ ಶುದ್ಧ (ಶುಕ್ಲ) ದಶಮೀ ದಿನ 'ವಿಜಯದಾಸರ ಆರಾಧನೆ' ನಿಮಿತ್ತ ಮಾಡಿಕೊಂಡು ಸರ್ವ ಬ್ರಾಹ್ಮಣ ಸಂತರ್ಪಣ ಮಾಡಿಸುತ್ತಿದ್ದರು. ಇವರು ಪ್ರತಿನಿತ್ಯವೂ ಕ್ಲುಪ್ತವಾದ ಗೋಪಾಳ (ಉಪಾದಾನ) ವೃತ್ತಿಯಿಂದಲೂ, ಶಿಷ್ಯ ವರ್ಗದವರಿಂದಲೂ, ಇತರರಿಂದಲೂ ಯಾದೃಚ್ಛಿಕವಾಗಿ ಬಂದ ದ್ರವ್ಯದಿಂದ ತಮ್ಮ ಚರಿತಾರ್ಥ ಸಾಗಿಸುತ್ತಿದ್ದಾಗ್ಯೂ ಈ ವಿಜಯರಾಯರ ಆರಾಧನಾ ದಿನ ಸುಮಾರು ಏಳೆಂಟು ನೂರು ಜನ ಬ್ರಾಹ್ಮಣರ ಭೋಜನ ಮಾಡಿಸುತ್ತಿದ್ದರು. ಇದಕ್ಕಾದರೂ ಆ ದಿನಕ್ಕೆ ಬೇಕಾಗುವಷ್ಟು ಅಕ್ಕಿ ಮೊದಲಾದ ಧಾನ್ಯವೂ ತಥಾ ದಕ್ಷಿಣೆ ವೈದಿಕರಿಗೆ ಬೇಕಾಗುವ ಧನ ಯಾದೃಚ್ಛಿಕವಾಗಿ ಬರುತ್ತಿತ್ತು. ಇದರಿಂದ ಕೆಲವು ಕುಹಕರು ತಾಪಗೊಳ್ಳುತ್ತಿದ್ದರು. ಒಂದು ಸಲ ಹ್ಯಾಗಾದರೂ ಮಾಡಿ, ಈ ಕಾರ್ಯ (ಅನ್ನಸಂತರ್ಪಣಾ)ವನ್ನು ಅಭಾವಗೊಳಿಸಬೇಕೆಂದು ಆ ಕುಹಕರು ದುರಾಲೋಚನಾ ಮಾಡಿಕೊಂಡಿದ್ದರು. ಈ ಮುತ್ತಿಗಿ ಆಚಾರ್ಯರು ನವಮಿ ದಿನ (ಪೂರ್ವದಿನ) ಸರ್ವ ಬ್ರಾಹ್ಮಣರಿಗೆ ಆಮಂತ್ರಣ ಕೊಟ್ಟು ಬಂದಮೇಲೆ ಪಾಚಕರಿಗೂ (ಅಡಿಗೆಯವರಿಗೂ) ನೀರಿನವರಿಗೂ ಈ ದಿನ ರಾತ್ರಿ ಮುತ್ತಿಗಿ ಆಚಾರ್ಯರಲ್ಲಿ ಹೋಗಿ, 'ಈಗ ನಮಗೆ ಜ್ವರ ಬಂದಿದೆ, ಪ್ರಯುಕ್ತ ನಾಳೆ ನಿಮ್ಮಲ್ಲಿ ಬಂದು ಕೆಲಸ ಮಾಡಲಿಕ್ಕಾಗುವದಿಲ್ಲ ಅಂತ ಹೇಳಿರಿ. ಅವರು ನಿಮಗೆ ಎಷ್ಟು ದ್ರವ್ಯ ಕೊಡುವರೋ ಅಷ್ಟು ದ್ರವ್ಯವನ್ನು ನಾವೂ ಕೊಡುತ್ತೇವೆ' ಅಂತ ಹೇಳಿದರು. ಆ ಮಾತಿನಂತೆ ಅವರು ಏಕದಾ ಒಪ್ಪದಿದ್ದರೂ 'ನಿಮ್ಮದೇನು ನಷ್ಟವಾಗುವದು? ದುಡಿಯದೆ ನಿಮಗೆ ಬರುವ ದ್ರವ್ಯ ಬಂದಮೇಲೆ ಏಕೆ ಆಲೋಚನಾ ಮಾಡುತ್ತೀರಿ?' ಅಂತ ಅವರನ್ನು ಪುರಿದುಂಬಿಸಿ, ರಾತ್ರಿ ಹತ್ತು ಗಂಟೆಯ ಮೇಲೆ ಅವರ ಮೂಲಕ ನಾಳಿನ ಕೆಲಸಕ್ಕೆ ಬರುವದಾಗದೆಂದು ಹೇಳಿಸಿದರು. ಆದಾಗ್ಯೂ ಎದೆಗುಂದದೆ ಆ ಕ್ಷಣದಲ್ಲಿಯೇ ಮುನಿಸಿಪಾಲಿಟಿ ಅಧಿಕಾರಿಯಲ್ಲಿ ಹೋಗಿ, ವಿಜಯರಾಯರ ಗುಡಿಗೆ ಅರ್ಧ ಫರ್ಲಾಂಗ ದೂರದಲ್ಲಿರುವ ನಳಕ್ಕೆ ನೀರು ಬರುವಂತೆ ವ್ಯವಸ್ಥ ಮಾಡಿ ಬಂದು, ತಮ್ಮ ಭಾರ್ಯಳನ್ನು ನೀರು ತುಂಬುವ ಸಲುವಾಗಿ ಇಟ್ಟು, ಪುತ್ರನನ್ನು (ನನ್ನನ್ನು) ಮನೆ ಕಾಯಲಿಕ್ಕಿಟ್ಟು, ತಾವು ಒಬ್ಬರೇ ಬೇಕಾಗುವಷ್ಟು ನೀರು ತಂದುಕೊಂಡು ಉಷಃಕಾಲಕ್ಕೆ ಅಡಿಗಿಗೆ ತಾವೇ ಆರಂಭ ಮಾಡಿ ಸಹಸ್ರ ಜನರಿಗೆ ಪೂರೈಸುವಷ್ಟು ಅಡಿಗೆ ಹಾಗೂ ಶಿರಾ-ಲಾಡುಮುಂ. ಒಂಭತ್ತು ಗಂಟೆ ಸುಮಾರದೊಳಗಾಗಿ ತಯಾರು ಮಾಡಿ, ಸಿದ್ಧವಾದ ಯಾವತ್ತು ಅಡಿಗೆಯನ್ನು ತಮ್ಮ ಚಿಕ್ಕ ಅಡಿಗೆ ಮನೆಯಲ್ಲಿ ಅಡಗಿಸಿಟ್ಟು ಬಾಗಿಲು ಮುಚ್ಚಿ, ಬೀಗ ಹಾಕಿ ಅಡಗಿ ಮಾಡಿದ ಸ್ಥಳ ಶುದ್ಧ ಮಾಡಿ, ತಾವು

ದೇವತಾರ್ಚನಾ ಮಾಡುತ್ತ ಕುಳಿತುಕೊಂಡರು. ಇತ್ತ ಕುಹಕರು ಈ ಸಾರೆ ಮಾತ್ರ ಆಚಾರ್ಯರ ಫಜೀತಿಯಾಗುವದೆಂದು ಸಂತೋಷ ಭರದಲ್ಲಿದ್ದರು. ನಂತರ ಹನ್ನೊಂದು ಘಂಟೆಯ ಮೇಲೆ ಭೋಜನಾರ್ಥ ಒಬ್ಬೊಬ್ಬರಾಗಿಯೂ, ಕಾಲಗತಿಸಿದಂತೆ ಗುಂಪಾಗಿಯೂ ಜನ ಸೇರಹತ್ತಿದರು. ಅಡಿಗೆ ಮಾಡುವ ಸ್ಥಲದಲ್ಲಿ ಒಲೆ ಸಹ ಹೊತ್ತಿಸದೆ ಪರಿಶುದ್ಧವಾದದ್ದು ನೋಡಿ ಅದರಲ್ಲಿ ಕೆಲವರು ಈವರೆಗೂ ಅಡಿಗೆಗೆ ಸಹಾ ಇಟ್ಟಿಲ್ಲ. ಏನು ಕಾರಣ ಅಂತ ತಮ್ಮ-ತಮ್ಮೊಳಗೇ ತಾವು ಅಂದುಕೊಳ್ಳುತ್ತಾ, ಕೆಲವರು ಅನುಕಂಪದಿಂದ ಅಡಿಗೆ ಮಾಡಲು ನಿರ್ಧರಿಸಿಕೊಂಡು ಬಂದು, 'ಸ್ವಾಮಿ! ಈವರೆಗೆ ಅಡಿಗಿಗೆ ಇಟ್ಟಂತೆ ಕಾಣುವುದಿಲ್ಲ? ಏನು ಕಾರಣ? ಕದಾಚಿತ್ ಅಡಿಗೆಯವನು ಬಾರದಿದ್ದರೆ ಏನಾಯಿತು? ನಮ್ಮಗಳಿಗೆ ಸೂಚನೆ ಕೊಟ್ಟಿದ್ದರೆ, ಈ ಒಳಗಾಗಿಯೇ ಬಂದು ಪಾಕಸಿದ್ಧ ಮಾಡುತ್ತಿದ್ದೆವು. ಈವರೆಗೂ ತಾವು ದೇವತಾರ್ಚನಾ ಮಾಡುತ್ತಾ ಸುಮ್ಮನೆ ಕುಳಿತಿದ್ದೀರಿ. ನೈವೇದ್ಯಕ್ಕೆ ಹ್ಯಾಂಗೆ?' ಅಂತ ಕೇಳಿದರು. 'ಈ ಸಮಾರಾಧನೆಯು ದೈವೇಚ್ಛೆಕ್ಕೆ ಬಂದಿದ್ದರೆ ಎಲ್ಲವೂ ಸುಸೂತ್ರವಾಗಿಯೇ ಸಾಗುತ್ತದೆ. ನಾವು (ಜೀವರು) ಅಸ್ವತಂತ್ರರು, ಮಾಡುವುದೇನು, ಆತನ ಸಂಕಲ್ಪವೇ ಸಂಕಲ್ಪ. ಆತನೇ ರಕ್ಷಿಸುವನು' ಅಂತ ಉತ್ತರಕೊಟ್ಟು, ತಮ್ಮ ದೇವತಾರ್ಚನಾ ಕ್ರಮವನ್ನೇ ಸಾಗಿಸಹತ್ತಿದರು. ಆ ಜನರಿಗೆ ಮನಸ್ಸಮಾಧಾನವಾಗದೆ, ಇನ್ನೂ ಕೆಲವರು ಬಂದು ಇದರಂತೆ ಕೇಳುತ್ತ, ಪದಾರ್ಥ ಸಿದ್ಧವಿದ್ದರೆ ಕೊಡಿರಿ, ಅಡಿಗೆ ಮಾಡುತ್ತೇವೆ. ಇಲ್ಲವಾದರೆ ಬಜಾರದಿಂದ ಪದಾರ್ಥಗಳನ್ನು ಸಹ ತಂದು ಅಡಿಗೆ ಮಾಡುತ್ತೇವೆ' ಅಂತ ಇವರಲ್ಲಿ ಹೇಳಿಕೊಂಡಾಗ್ಯೂ ಸ್ವಸ್ಥವಾಗಿಯೇ ಕೂತಿದ್ದರಿಂದ ಈ ಆಚಾರ್ಯರಿಗೆ ಇದ್ದ ಭಗವದ್ವಿಷಯಕದಾರಢ್ಯ ನಮಗೆ ಇಲ್ಲವಾದರೂ, ಏನೇ ಆಗಲಿ ಪಟ್ಟು ಹಾಕಿಕೊಂಡು ಬಜಾರದಿಂದ ಪದಾರ್ಥಗಳನ್ನು ತರುವ ಸಿದ್ಧತೆ ನಡೆಸಿದ್ದರು. ಇಷ್ಟರಲ್ಲಿ ಇವರ ದೇವತಾರ್ಚನೆಯು ನೈವೇದ್ಯಕ್ಕೆ ಬಂತು. ತತ್ಕಾಲ ಅವರ ಪೈಕಿ ಒಬ್ಬರನ್ನು ಕರೆದು 'ಆ ಚಿಕ್ಕ ಮೋಲಿ (ಆ ಚಿಕ್ಕ ಅಡಿಗೆ ಮನೆ)ಯಲ್ಲಿ ಏನು ಪದಾರ್ಥವಿದೆಯೋ ಅದನ್ನು ನೈವೇದ್ಯಕ್ಕೆ ತೆಗೆದುಕೊಂಡು ಬನ್ನಿ' ಅಂತ ಹೇಳಿ, ಬಾಗಿಲು ತೆಗೆಯುವದಾಗಿ ತಮ್ಮ ಭಾರ್ಯಳಿಗೆ ಆಜ್ಞಾ ಮಾಡಿದರು. ಆಗ ಆ ಬ್ರಾಹ್ಮಣನು ಸಿದ್ಧವಾಗಿದ್ದ ಯಾವತ್ತು ಪದಾರ್ಥಗಳನ್ನು ನೋಡಿ ಬೆರಗಾಗಿ 'ಇದು ಈ ಮಹಾತ್ಮರ ಮಹಿಮಾ ನೋಡ ಬನ್ನಿರಿ' ಅಂತ ಹರ್ಷೋದ್ಗಾರ ತೆಗೆಯುತ್ತ ನೈವೇದ್ಯ ತಂದಿಟ್ಟನು. ಇದು ಬಹು ಕೌತುಕವಾಗಿ ತೋರಿತು. ಅದರಲ್ಲಿ ಕೆಲವರು 'ಇದೇನಾಶ್ಚರ್ಯ! ಅಡಿಗೆ ಸಿದ್ಧಪಡಿಸಿದ ಸ್ಥಲ ಸಹ ಕಪ್ಪಾಗಿಲ್ಲವಲ್ಲ! ಅಂತ ಆಶ್ಚರ್ಯಪಡುತ್ತಿರುವಾಗ ಆ ಕುಹಕರ ಗುಟ್ಟು ಕೆಲವರಿಗೆ ಗೊತ್ತಾಗಿದ್ದುದರಿಂದ ಅಡಿಗೆ ಮಾಡಿದ ಸ್ಥಲ ಕಪ್ಪಾಗದೆ ಆ ಕುಹಕರ ಮುಖವೇ ಕಪ್ಪಾಗಿದೆ' ಎಂದು ಉದ್ಗಾರ ತೆಗೆದರು. ಮಧ್ಯಾಹ್ನ ಸಮಯಕ್ಕೆ ಸರ್ವಬ್ರಾಹ್ಮಣ ಭೋಜನ ಸುಸೂತ್ರವಾಗಿ ನೆರವೇರಿತು. ನಂತರ ಅಡಿಗೆ ನೀರಿನವರು ಬಂದು ಆ ಕುಹಕರ ಮಾತು ಕೇಳಿ ತಾವು ಮಾಡಿದ ಅಪರಾಧವನ್ನು ಪ್ರಾಣದೇವರು ಕ್ಷಮಿಸಲಿ ಅಂತ ಬೇಡಿಕೊಂಡರು. ತಮಗೆ ಕೊಡುತ್ತಿದ್ದ ಸಂಭಾವನಾ ದ್ರವ್ಯದಷ್ಟು ಅವರು ಅಪರಾಧ ಕಾಣಿಕೆಯೆಂದು ಸಮರ್ಪಿಸಿದರು. ಆ ಕುಹಕರಿಗೆ ಜಾಡ್ಯಪ್ರಾಪ್ತವಾಗೋಣದರಿಂದ ಅವರುಗಳು ಸಹ ತಮ್ಮ ಅಪರಾಧವನ್ನು

ಹೇಳಿಕೊಂಡು ಕ್ಷಮಿಸುವಂತೆ ಪ್ರಾರ್ಥಿಸಿ ತಪ್ಪು ಕಾಣಿಕೆ ಎಂದು ಒಂದು ನೂರು ರೂಪಾಯಿಗಳನ್ನು ಸಮರ್ಪಿಸಿದರು.

೩೧. ತತ್ತ್ವಪ್ರಮೇಯ ಪ್ರಪಂಚಿಸಿದರು.

ಎಸ್. ಸುಬ್ಬರಾವ್, ಎಂ.ಎ. ಇವರು ಈ ಚರಿತ್ರ ನಾಯಕರಲ್ಲಿ ಪುನಃ ಶಾಂತಿ ಹಾಕಿ ಶಿಷ್ಯನಾದುದರಿಂದ ವಿದ್ಯಾಗುರುಗಳಾದ ಪೆರಿಯಕುಳಂ ರಾಮಾಚಂದ್ರಾಚಾರ್ಯರಿಗೆ ಮನೋವೈಕಲ್ಯ ಉಂಟಾಗಿ ಸಮಯೋಚಿತ ಪರೀಕ್ಷಿಸಿ, ತಮ್ಮ ಪಾಂಡಿತ್ಯಗಿಂತಲೂ ಇವರದು ಕಡಿಮೆ ಎನಿಸಬೇಕೆಂದು ಹೊಂಚುಹಾಕಿದರು. ಅದಕ್ಕನುಗುಣವಾಗಿ ಒಂದಾನೊಂದು ಸಮಯದಲ್ಲಿ ಆ ಪೆರಿಯಕುಳಂ ರಾಮಾಚಂದ್ರಾಚಾರ್ಯರು "ಸರ್ವ ಹಿಂದೂಮತ ತತ್ತ್ವ ಸಭಾಕ್ಕೆ" (All India Philosophical Conference) ಹೊರಟಿದ್ದರು. ಆ ಸಭೆಯು ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತಿದ್ದು. ಆ ಸಲ ಬರೋಡದಲ್ಲಿ ನಡೆಯವದಿತ್ತು. ಅದಕ್ಕಾಗಿ ಮೈಸೂರು ಸಂಸ್ಥಾನ ಪರವಾಗಿ ಪ್ರತಿನಿಧಿಗಳಾಗಿ (Delegate) ಆರಿಸಲ್ಪಟ್ಟಿದ್ದರು. ಅವರ ಹಿಂದೆ ರಾಮಸ್ವಾಮೀರಾಯನೆಂಬ ಪಂಡಿತ ಶಿಷ್ಯನು ಸಹ ಹೊರಟಿದ್ದನು. ಮಾರ್ಗದಲ್ಲಿ ಸ್ನಾನಾಹ್ನೀಕಾದಿಗಳ ಸಲುವಾಗಿ ಅಣುಮಂತ್ರಾಲಯ (Mantralayam Road Station) ದಲ್ಲಿ ಇಳಿದು ರಾತ್ರಿ ಗಾಡಿಯಿಂದ ಮುಂದೆ ಪ್ರಯಾಣ ಮಾಡುವ ಯೋಚನೆ ಮಾಡಿದರು. ಆಗ ರಾಮಚಂದ್ರಾಚಾರ್ಯರು (ಬೆಂಗಳೂರು) ಮೈಸೂರು ಗಾಡಿಯಿಂದ ಇಳಿದು, ಗುಂತಕಲ್ ಜಂಕ್ಷನ್‌ದಲ್ಲಿ ಮದ್ರಾಸದಿಂದ ಮುಂಬಯಿಗೆ ಹೋಗುವ (ಮೇಲ್) ಗಾಡಿಗೆ ಬಂದರು. ಅದೇ ಸಂದರ್ಭದಲ್ಲಿ ಎಂ.ಎ. ಸುಬ್ಬರಾಯರು ಆ ಮೇಲ್ ಗಾಡಿಯಲ್ಲಿದ್ದನು. ಈ ಉಭಯರಿಗೂ ಆಕಸ್ಮಾತ್ ಭೇಟಿಯಾಗೋಣದರಿಂದ ಸುಬ್ಬರಾಯರಿದ್ದ ಡಬ್ಬಿಯಲ್ಲಿಯೇ ಅವರೂ ಹತ್ತಿ ಪರಸ್ಪರ ಯೋಗಕ್ಷೇಮಗಳ ವಿಚಾರಿಸುತ್ತ, ತಮ್ಮ ತಮ್ಮ ಪ್ರಯಾಣಗಳೆಲ್ಲಿಗೆ ಎಂಬುವದನ್ನು ವಿವರಿಸಿಕೊಂಡರು. ಆಗ ಈ ಸುಬ್ಬರಾಯ 'ಸ್ನಾನಾಹ್ನೀಕಾದಿಗಳ ಸಲುವಾಗಿ ಆದವಾನಿಗೆ ಬರೋಣವಾಗಲಿ' ಎಂದು ವಿಜ್ಞಾಪನಾ ಮಾಡಿಕೊಂಡನು. ಅದಕ್ಕೆ ಪೂರ್ವದಲ್ಲಿ "ಪ್ರತ್ಯಕ್ಷಗಮ್ಯ" ಎಂಬ ಉತ್ತರ ಬಂದಿದ್ದಕ್ಕೆ ಈಗ ಸದವಕಾಶ ಸಿಕ್ಕಿದಂತಾಯಿತು. ಇದನ್ನು ಉಪಯೋಗಿಸಿಕೊಂಡು ಆ ಮುತ್ತಿಗಿ ಆಚಾರ್ಯರಲ್ಲಿ ಕೆಲವು ಪೂರ್ವ ಪಕ್ಷ (ಪ್ರಶ್ನೆ) ಮಾಡಿ ನಿರುತ್ತರರನ್ನಾಗಿ ಮಾಡಲು ಬರುವದೆಂದೆಣಿಸಿ, ಒಳ್ಳೇದು ಎಂದು ಒಪ್ಪಿಕೊಂಡರು. ಗುಂತಕಲ್ಲದಿಂದ ಆದವಾನಿಗೆ ಬರಬೇಕಾದರೆ (ಮೇಲುಗಾಡಿ) ಸುಮಾರು ಒಂದುವರೆ ಘಂಟೆ ಹಿಡಿಯುತ್ತದೆ. ಈ ಅವಧಿಯಲ್ಲಿ ಮಾಡಬೇಕಾದ ಪೂರ್ವ ಪಕ್ಷಗಳನ್ನು ಮನಸಾ ಯೋಚಿಸಿ ನಿರ್ಧರಿಸಿಕೊಂಡರು. ಈ ಮೂರು ಮಂದಿ ವಿಜಯರಾಯರ ಗುಡಿಗೆ ಬಂದರು. ಆಗ ಈ ಎಂ.ಎ. ಸುಬ್ಬರಾಯರು ಆ ಉಭಯರನ್ನು ಮುತ್ತಿಗಿ ಆಚಾರ್ಯರಿಗೆ ಪರಿಚಯ ಮಾಡಿಕೊಟ್ಟರು. ಆ ಉಭಯರು ಪರಸ್ಪರ ನಮಸ್ಕಾರಮಾಡಿ ಯೋಗಕ್ಷೇಮಗಳ ವಿಚಾರ ಮಾಡುತ್ತಾ, ಆ ಪೆರಿಯಕುಳಂ ರಾಮಚಂದ್ರಾಚಾರ್ಯರ ಮನೋಗತ ಪೂರ್ವಪಕ್ಷಗಳಿಗೆ ಒಂದೊಂದಾಗಿ ಉತ್ತರ ಕೊಡಲಾರಂಭಿಸಿದರು. ಅದೇನೆಂದರೆ, "ಜೀವರು ಸ್ವರೂಪತಃ ನಿತ್ಯವಾದ

ಯೋಗ್ಯತಾ ಉಳ್ಳವರಾಗಿ ತರತಮ ವಿಶಿಷ್ಟರಾಗಿ ತಮ್ಮ ತಮ್ಮ ಸಾಧನ ಕಾಲ ಒದಗಿದಾಗ, ಶ್ರೀ ಹರಿಯು 'ಏನಂ ಮೋಚಯಾಮಿ' ಎಂದು ಸಂಕಲ್ಪ ಮಾಡಲು, ಯೋಗ್ಯಾರಂಭವಾಗಿ ಮುಂದೆ ಉತ್ತರೋತ್ತರ ಸಾಧನಾಭಿವೃದ್ಧಿಯನ್ನು ಸಾಧಿಸುತ್ತ ಕ್ಷೇಮ ಹೊಂದುವವರಾಗುವರು. ಇದಕ್ಕೆ ಜೀವ ಕರ್ತೃಕ ಯತ್ನ ಯಾವದೂ ಕಾರಣವಾಗದಿದ್ದರೂ ಫಲಭೋಕ್ತೃತ್ವದ ದೆಸೆಯಿಂದ ಸ್ವರೂಪ ಭೂತ ಜ್ಞಾನೇಚ್ಛಾಕ್ರಿಯಾಗಳು ಬಿಂಬಕ್ರಿಯಾದ್ವಾರಾ ಅಭಿವ್ಯಕ್ತವಾಗಿ ಜೀವನೂ ಕರ್ತೃವೆಂದೆನಿಸುತ್ತಾನೆ; ಈ ಕರ್ತೃವು ಪರಾಧೀನವೆಂದು ಹೇಳುವುದುಂಟು. ಆದರೆ ಪ್ರತಿಮೆಯನ್ನು, ಸೂತ್ರದಾರನು ಆಡಿಸುವಂತೆ ಬಿಂಬನಾದ ಪರಮಾತ್ಮನಿಂದ ಚಲನವಲನಾದಿ ಕ್ರಿಯೆಗಳು ಆಗುವವೆಂದು ಭಾಗವತಾದಿ ಸಚ್ಛಾಸ್ತ್ರಗಳು ಹೇಳುವವು; ಆದರೆ ಈ ಜೀವನು, ಸ್ವರೂಪತಃ ಜ್ಞಾನ ಕರ್ಮ ಇಂದ್ರಿಯಾದಿಗಳುಳ್ಳವನಾದುದರಿಂದ ಅವುಗಳಿಗೆ ಸ್ವಾಭಾವಿಕ ಕ್ರಿಯಾಗಳು ಹೇಳಿದರೆ ಮೇಲ್ಕಂಡ ಪ್ರತಿ ಉದಾಹರಣೆ ಕೊಡುವುದಿಲ್ಲ. ಆ ಇಂದ್ರಿಯಗಳಿಗೆ ಸ್ವಾಭಾವಿಕ ಶಕ್ತಿ ಉಂಟೆಂದು ಹೇಳಿದರೆ ಸ್ವತಂತ್ರ ಕರ್ತೃತ್ವ ಹೇಳಿದ್ಹಾಂಗಾಗುತ್ತದೆ. ಇನ್ನು ದತ್ತ ಕರ್ತೃತ್ವವಾದರೂ ಎಂತಹದೆಂಬುದಾಗಿ ವಿಚಾರ ಮಾಡಿದರೆ ಪ್ರಥಮದಲ್ಲಿ ಜೀವನಿಗೆ ಕರ್ತೃತ್ವವಿಲ್ಲ ; ಪರಮಾತ್ಮನು ಕೊಟ್ಟ ಮೇಲೆಯೇ ಉಂಟಾದಂತೆ ತೋರುತ್ತದೆ. ಈ ಮಾತು ಕೂಡಾ ಸರಿಹೋಗುವುದಿಲ್ಲ. ಯಾಕೆಂದರೆ "ಕರ್ತಾ ಶಾಸ್ತ್ರಾರ್ಥವತ್ವಾತ್" ಎಂಬ ಬ್ರಹ್ಮಸೂತ್ರದ ರೀತ್ಯಾ ಶಾಸ್ತ್ರದಲ್ಲಿ ಹೇಳಿದ ಪ್ರಕಾರ ಪ್ರತಿ ಜೀವರ ಸ್ವರೂಪ ಭೂತ ಸುಖ, ದುಃಖ ಫಲಭೋಕ್ತೃತ್ವವು ನಿಯಮಿತವಾಗಿರೋಣದರಿಂದ ತತ್ಸಾಧನವಾದರೂ ನಿಯಮಿತವಾದದ್ದೆ. ಈ ಸಾಧನ ಸಂಪತ್ತಿಯು ಜ್ಞಾನೇಚ್ಛಾಕ್ರಿಯಾಗಳನ್ನೊಳಗೊಂಡ ಏಕಾದಶೇಂದ್ರಿಯ ವ್ಯಾಪಾರವೆಂದು ಹೇಳಬೇಕು. ಈ ಇಂದ್ರಿಯಗಳು ನಿತ್ಯ ಸರ್ವಕಾಲದಲ್ಲಿ ಇದ್ದದ್ದಾದರೆ ಅಸೃಜ್ಯಾವಸ್ಥೆಯಲ್ಲಿಯೂ ಕ್ರಿಯಾಯುಕ್ತವಾಗಿರಬೇಕಾಗಿತ್ತು ಎಂಬ ಶಂಕಾಕ್ಕೆ ಆಸ್ಪದವಿಲ್ಲದಂತೆ ಜೀವನ ಸ್ವರೂಪವು "ಶಂಖ ಕ್ರಿಮಿವತ್" ಎಂದು ಹೇಳಿದ್ದಾರೆ. ಅದು ಹೇಗೆಂದರೆ ಶಂಖ ಕ್ರಿಮಿಯು ಶಂಖದಲ್ಲಿ ಒಂದು ಮುದ್ದೆಯಾಗಿ ಅಡಗಿದ್ದು ತನ್ನ ಇಚ್ಛಾ ಪ್ರಕಾರ ಕರಚರಣಾದ್ಯಯವಗಳ ಅಭಿವ್ಯಕ್ತಿ ಮಾಡಿಕೊಂಡು ವ್ಯಾಪಾರ ಮಾಡುವಂತೆ ಅಸೃಜ್ಯಾವಸ್ಥೆಯಲ್ಲಿ (ಸುಪ್ತಾವಸ್ಥೆಯಲ್ಲಿ)ರೋಣದರಿಂದ ಕ್ರಿಯಾಶೂನ್ಯರಾಗಿರುತ್ತಾರೆ. ಆದರೆ ಬಿಂಬನಾದ ಪರಮಾತ್ಮನಿಗೆ ಸುಪ್ತಾವಸ್ಥೆಯಿಲ್ಲ. ಅವನು ಶಶ್ವದೇಕನಾದುದರಿಂದ ಅವನು ಸರ್ವದಾ ಜಾಗರೂಕನು. ಬಿಂಬನು ಜಾಗರೂಕನಾದ ಮೇಲೆ, ಪ್ರತಿಬಿಂಬನೂ ಜಾಗರೂಕನಾಗಿರಬೇಕು. ಅಂತಹುದು ತದ್ವಿರುದ್ಧವಿರೋಣದರಿಂದ "ಬಿಂಬ ಕ್ರಿಯೆಯೈವ ಕ್ರಿಯಾವಾನ್" ಎಂಬ ಮಾತಿಗೆ ಭಾದಕ ಬರುತ್ತದೆಂದರೆ ಬಿಂಬನು ಗುಣಪೂರ್ಣನಾಗಿರೋಣದರಿಂದ ಅವನ ಸೃಷ್ಟ್ಯಾ ದೃಷ್ಟ ಕರ್ತೃತ್ವವು ಇದ್ದೇ ಇರೋಣದರಿಂದ ತದನುಗುಣವಾಗಿ ಜೀವನಿಗೆ ಬಂಧಮೋಕ್ಷಾದಿಗಳು ಕೂಡುತ್ತವೆ. ಈ ನಿಮಿತ್ತ ಜೀವನು ಸುಪ್ತಾದ್ಯವಸ್ಥಾ ಬದ್ಧನಿರುತ್ತಾನೆ. ಇನ್ನು ಈ ಜೀವರಲ್ಲಿ ಸಾಂಶರೆಂದು, ನಿರಂಶರೆಂದು ಎರಡು ವಿಧ. ಸಾಂಶರೆಂಬುವರಿಗೆ ಏಕಕಾಲದಲ್ಲಿ ಒಂದರ ಕ್ಕಿಂತಲೂ ಹೆಚ್ಚು ದೇಹಗಳು ಬಂದು ಅವುಗಳಲ್ಲಿ ಜೀವನ ಒಂದಂಶ ಇರುತ್ತದೆ. ಆದರೆ "ನೈನಂ ಛಿಂದಂತಿ ಶಸ್ತ್ರಾಣಿ" ಇತ್ಯಾದಿ

ಪ್ರಮಾಣಗಳ ರೀತ್ಯಾ ನೋಡಿದರೆ ಯಾವ ಜೀವನಿಗೂ ಅಂಶತ್ವಕ್ಕೆ ಆಸ್ಪದವಿಲ್ಲ. ಅಂದಮೇಲೆ ಸಾಂಶತ್ವವು ಹ್ಯಾಂಗೆ ಕೊಡುತ್ತದೆ? ಮತ್ತು ಪರಮಾತ್ಮನ ಅಚಿಂತ್ಯಾದ್ಭುತ ಶಕ್ತಿಯಿಂದ ಜೀವರಿಗೆ ಭೇದ ಭೇದಾದಿಗಳ ಆಸ್ಪದವಿದ್ದು, ಆ ಪರಮಾತ್ಮನು ಮಾಡುವನೆಂದು ಸಮಾಧಾನ ಹೇಳಿದರೆ ಅದು ಸರಿ ತೋರದು. ಯಾಕೆಂದರೆ ಭೇದ್ಯನಾಗುವ ಜೀವನು ಬೇರೆ ಬೇರೆ ದೇಹಗಳಲ್ಲಿ ಯಾವದೋ ಒಂದು ಅಥವಾ ಹೆಚ್ಚು ಅವಯವದಿಂದ ಇರಬೇಕಾಗುವುದು; ಹೀಗೆ ಇರೋಣವೆಂದರೆ ಯಾವದಾದರೂ ಒಂದು ಅಥವಾ ಹೆಚ್ಚು ಅವಯವನ್ಯೂನತಾ ಎಂದಿರಬೇಕಾಗುವುದು. ಈ ನ್ಯೂನತೆಯು ಲಿಂಗದೇಹಕ್ಕೂ ಹೇಳಬೇಕಾಗುವುದು. (ಯಾಕೆಂದರೆ ಇದು ಜೀವಿಗೆ ಅಂಗಿಯಂತೆ ಅವರಕವಾಗಿರೋಣದರಿಂದ) ಹೇಳಿದರೆ ಭಾದಕವೇನೆಂದರೆ, ಪರಮಾತ್ಮಗೆ ಜೀವ ಹ್ಯಾಗೆ ಪ್ರತಿಬಿಂಬನೋ, ಹಾಗೆ ಜೀವನಿಗೆ ಲಿಂಗ ದೇಹ, ಅದಕ್ಕೆ ಅನಿರುದ್ಧ ದೇಹ, ಅದಕ್ಕೆ ಸ್ಥೂಲ ದೇಹ ಬಿಂಬ ಪ್ರತಿಬಿಂಬಗಳಾಗಿರುವವು. ಅಂದ ಮೇಲೆ ಸ್ಥೂಲ ದೇಹವು ಜೀವನಿಗೆ ಪ್ರತಿಬಿಂಬ ಪ್ರಾಯವೇ ಸರಿ. ಈ ಪ್ರತಿಬಿಂಬ ಪ್ರಾಯವಾದ ದೇಹದ (ಇಂದ್ರಿಯ) ವ್ಯಾಪಾರ ನಡೆಯಬೇಕಾದರೆ ಪ್ರಥಮದಲ್ಲಿ ಬಿಂಬನಾದ ಪರಮಾತ್ಮನ ಕ್ರಿಯಾಭಿವ್ಯಕ್ತಿ ದ್ವಾರಾ ಜೀವನ ಸ್ವರೂಪ ಇಂದ್ರಿಯ ವ್ಯಾಪಾರ, ಅದಕ್ಕೆ ಅನುಸರಿಸಿ ಕ್ರಮವಾಗಿ ಸ್ಥೂಲ ದೇಹೇಂದ್ರಿಯ ವ್ಯಾಪಾರ ನಡೆಯುತ್ತದೆ. ಅಂದಮೇಲೆ ಜೀವನನ್ನು ಅಂಶವನ್ನಾಗಿ ಮಾಡಿ ಬೇರೆ ಬೇರೆ ದೇಹಗಳಲ್ಲಿ ಯೋಜನ ಮಾಡುವಾಗ ಭೇಧ ಭೇದಾದಿಗಳಿಂದ ಲೋಪವಾದ ಅವಯವ ವ್ಯಾಪಾರ ಇಲ್ಲದಾಗುವುದು. ಇದರಿಂದ ಈ ಸ್ಥೂಲ ದೇಹಗತ ಇಂದ್ರಿಯ ವ್ಯಾಪಾರವೂ ಲೋಪವಾಗ ಬೇಕಾದೀತು. ಇನ್ನು ಪರಮಾತ್ಮನ ಒಂದೊಂದು ಅವಯವವೇ ಎಲ್ಲಾ ಅವಯವದ ವ್ಯಾಪಾರ ಮಾಡಲು ಶಕ್ತವಾಗಿದ್ದಂತೆ ಜೀವನ ಒಂದೊಂದು ಅವಯವವೂ ಎಲ್ಲಾ ಅವಯವದ ವ್ಯಾಪಾರ ಶಕ್ತಿ ಉಂಟೆಂದು ಯಾವ ಶಾಸ್ತ್ರದಲ್ಲಿಯೂ ಕಂಡಿಲ್ಲ. ಪ್ರಯುಕ್ತ ಪ್ರತಿ ದೇಹದಲ್ಲಿಯೂ ಜೀವನೂ ಕೂಡಾ ಪೂರ್ಣಾವಯವದಿಂದ ಯುಕ್ತನಾಗಿರುತ್ತಾನೆಂದು ಹೇಳಿದರೆ ಯುಕ್ತಿವಿರುದ್ಧವಾಗುತ್ತದೆ. ಯಾಕೆಂದರೆ, ಇವನು ಪೂರ್ಣ ವ್ಯಾಪ್ತನಲ್ಲವಾದ್ದರಿಂದ ಒಂದು ದೇಹದಲ್ಲಿ ಪೂರ್ಣಾವಯವದಿಂದ ಜೀವನು ಇದ್ದಪಕ್ಷದಲ್ಲಿ ಇನ್ನೊಂದು ದೇಹದಲ್ಲಿ ಇರಲು ಶಕ್ಯವಿಲ್ಲ. ಮತ್ತು ಎಷ್ಟು ದೇಹಗಳು ಬಂದಿರುತ್ತವೆಯೋ ಆಯಾ ದೇಹಗಳಿಂದ ಸುಖ-ದುಃಖಾದಿಗಳು ಬೇರೆ ಬೇರೆಯಾಗಿರೋಣದರಿಂದಲೂ, ಒಂದು ದೇಹದಿಂದ ಅನುಭವಿಸುತ್ತಿರುವ ಸುಖ ದುಃಖಾದಿ ಭೋಗ (ಅದೇ ಅಂಶಿಯ) ಮತ್ತೊಂದು ದೇಹಕ್ಕೆ ಜ್ಞಾತವಾಗದೆ ಇರೋಣದರಿಂದಲೂ, ಜೀವಗೆ ಅಂಶವೇ ಕೊಡುವದಿಲ್ಲವೆಂದು ಹೇಳಬೇಕಾಗುತ್ತದೆ. ಅಂದ ಮೇಲೆ ಸಾಂಶ ಜೀವರುಯೆಂದು ಇರುವರೆಂಬುದು ಹ್ಯಾಗೆ ಕೂಡುತ್ತದೆ?" ಅಂತ ಪೂರ್ವ ಪಕ್ಷ ಮಾಡಿಕೊಂಡು ಉತ್ತರ ಹೇಳಲಾರಂಭಿಸಿದರು.

ಅದೇನೆಂದರೆ: 'ನಹಿದೃಷ್ಟಾಂತೇ ಸರ್ವಸಾಮ್ಯಂ' ಅಂತ ಇರೋಣದರಿಂದ ಅತೀಂದ್ರಿಯವಾದ ವಿಷಯ ಕಿಂಚಿತ್ತಾದರೂ ಬೋಧವಾಗುವದಕ್ಕೆ ಸಹಾಯವಾಗುವ ನಿಮಿತ್ತ ಸಾಂಶ ಜೀವರ ಲಕ್ಷಣವು ಕಸಕಸಿ ಲಡ್ಡಿಗೆಯಂತೆ ಅಂದರೆ ಸ್ವಲ್ಪ ಸರಿಹೋಗುತ್ತದೆ. ಅನೇಕ

ಕಸಕಸಿ ಕಾಳುಗಳು ಕೂಡಿಯೇ ಲಡ್ಡಾಗಿರುತ್ತದೆ. ಆ ಲಡ್ಡಿಗಿಯನ್ನು ವಿಭಾಗ ಮಾಡಿದರೆ ಪ್ರತಿ ಪ್ರತಿಯೊಂದು ವಿಭಾಗದಲ್ಲಿಯೂ ಕಸಕಸಿಯು ಪೂರ್ಣವಾಗಿ ಯಥಾ ಪ್ರಕಾರ ಕಸಕಸಿಯ ರೂಪ ನಾಮಾದಿಗಳಿಂದ ಕೂಡಿಯೇ ಇರುತ್ತದೆ. ಅದರಂತೆ ಅನೇಕ ಅಂಶಗಳು ಕೂಡಿಯೇ ಒಂದು ಅಂಶಿಯಾಗಿರುತ್ತದೆ. ಇದಕ್ಕೆ ಮರುದ್ಗಣ ಉತ್ಪತ್ತಿಯೇ ಸಾಕ್ಷಿ. ಅಂದರೆ ೪೯ ಅಂಶಗಳಿಂದ ಕೂಡಿಯೇ ಒಂದು ಪಿಂಡವಾಗಿದ್ದನ್ನು ಇಂದ್ರನು ೭ ಭಾಗ ಮಾಡಿ, ಆ ೭ ಭಾಗಗಳ ಒಂದೊಂದನ್ನು ಪುನಃ ೭ ಭಾಗಗಳ ಮಾಡಿದ್ದಾಗಿ ಉಂಟಷ್ಟೆ! ಅಂದ ಮೇಲೆ ಆ ಅಂಶಿಯಾದ ಪಿಂಡವು ೪೯ ಅಂಶಗಳಿಂದ ಯುಕ್ತವಾಗಿಯೇ ಇದ್ದದ್ದನ್ನು ಇಂದ್ರನು ಬೇರೆ ಬೇರೆ ಮಾಡಿದನೆಂದರೆ ಸಮಂಜಸವಾಗುತ್ತದೆ. ಮತ್ತು ಸೌಭರಿ ಋಷಿಗಳು ೫೦ ದೇಹಗಳ ಧರಿಸಿ ಅಷ್ಟು ಕನ್ಯಾಗಳನ್ನು ಲಗ್ನ ಮಾಡಿಕೊಂಡು ರಮಿಸಿದರೆಂದು ಭಾಗವತದಲ್ಲಿ ಹೇಳಲ್ಪಟ್ಟಿದೆ. ಪ್ರತ್ಯೇಕ ಪ್ರತ್ಯೇಕ ಅಂಶಗಳು ಕೂಡಿ ಒಂದು ಅಂಶಿಯಾಗಿರದ ಪಕ್ಷದಲ್ಲಿ ಸಾಂಶವೆಂಬ ಪದವೇ ಕೂಡುವದಿಲ್ಲ. 'ಅನೇಕ ಅಂಶೈಃ ಯುಕ್ತಾಃ ಸಾಂಶಾ' ಅಂದರೆ, ಈ ರೀತಿ ಅನೇಕ ಅಂಶಗಳು ಕೂಡಿ ಒಂದು ಅಂಶಿ ಆಗಿರೋಣದರಿಂದ ಈ ಅಂಶಿಯಿಂದ ಭೋಗಿಸಲ್ಪಟ್ಟ ಸುಖ-ದುಃಖ ಭೋಗಗಳು ಏಕ ಕಾಲಾವಚ್ಛೇದೇನ ಉಂಟಾಗುತ್ತವೆ. ಆ ಅಂಶಗಳು ಬೇರೆ ಬೇರೆ ಆದಾಗ ಒಂದು ಅಂಶದ ಸುಖ-ದುಃಖ ಭೋಗ ಮತ್ತೊಂದು ಅಂಶಕ್ಕೆ ಆಗುವದಕ್ಕೆ ಮಾರ್ಗವಿಲ್ಲ. ಇದಕ್ಕೆ ರುದ್ರಾಂಶರಾದ ಶುಕಾಚಾರ್ಯರೂ, ದುರ್ವಾಸರೂ, ಜೈಗೀಷವ್ಯರೂ ಹಾಗೂ ಅಶ್ವತ್ಥಾಮಾಚಾರ್ಯರೂ ಏಕಕಾಲದಲ್ಲಿ ಭೂಮಿಯ ಮೇಲೆ ಇದ್ದಾಗ್ಯೂ ಅವರವರ ಜ್ಞಾನ ಕ್ರಿಯಾ ಕರ್ಮಗಳು ಭೇದವಾಗಿದ್ದು ಕಂಡಿರೋಣದರಿಂದ ಸುಖ ದುಃಖಾದಿ ಭೋಗಗಳು ಬೇರೆ ಬೇರೆಯಾಗಿರುವದು ಸ್ಪಷ್ಟವಾಗಿದೆ. ಇದರಂತೆಯೇ ಯಮಾಂಶರಾದ ಜಾಂಬುವಂತ, ಧರ್ಮರಾಯ, ವಿದುರ. ಇದರಿಂದ ಏನು ಹೇಳಿದಂತಾಯಿತೆಂದರೆ ಜೀವರ ಕರ್ತೃತ್ವವು ಔಪಚಾರಿಕವಾಗಿ ಜಡ ವಿಲಕ್ಷಣವೆಂದು ಹೇಳಿದಂತಾಗುವದೇ ಹೊರ್ತು ಸ್ವರೂಪ ಭೂತವಾದ ಜ್ಞಾನೇಚ್ಛಾ ಕ್ರಿಯಾಗಳು ಬಿಂಬನ ಅಧೀನವಾಗಿರೋಣದರಿಂದ **"ಯದನು ಗೃಹತಃ ಸಂತಿನ ಸಂತಿ ಯದುಪೇಕ್ಷೆಯಾ"** ಎಂಬ ಮಾತೇ ಸರಿ ಅಂತ ಸಿದ್ಧಾಂತ ಹೇಳಿದ್ದಕ್ಕೆ ಆ ಪೆರಿಯಕುಳಂ ರಾಮಾಚಂದ್ರಾಚಾರ್ಯರು ತಲೆದೂಗಿದರು. ಆದಾಗ್ಯೂ ಈ ಅನುವಾದವು ಇಷ್ಟಕ್ಕೆ ನಿಲ್ಲದೆ ಮುಂದುವರಿದು ಜೀವರ ಸ್ವರೂಪವು ಸಚ್ಚಿದಾನಂದಾತ್ಮವೋ ಹೇಗೆ?, ಎಂದು ಪ್ರಶ್ನೆ ಮಾಡಿಕೊಂಡು ಉತ್ತರ ಹೇಳುವವರಾದರು. ಅದು ಹ್ಯಾಗೆಂದರೆ ಎಲ್ಲ ಜೀವರೂ ಸಚ್ಚಿದಾನಂದ ಸ್ವರೂಪರಲ್ಲ. ಯಾಕೆಂದರೆ 'ಸತ್' ಎಂದರೆ ನಿರ್ದುಷ್ಟ, 'ಚಿತ್' ಎಂದರೆ ಜ್ಞಾನ, 'ಆನಂದ' ಎಂದರೆ 'ಸುಖ'; ಅಂದ ಮೇಲೆ ನಿರ್ದುಷ್ಟವಾದ ಜ್ಞಾನಾನಂದಾತ್ಮಕರು ಅಂತ ಹೇಳಿದಂತಾಗುತ್ತದೆ. ಇದು ಸರಿಯಾಗುವುದಿಲ್ಲ. ಯಾಕೆಂದರೆ, ಎಲ್ಲಾ ಜೀವರ ಸ್ವರೂಪವ್ವಾ ಆನಂದಾತ್ಮಕ (ಸುಖಾತ್ಮಕ)ವಲ್ಲ, ತಮೋಯೋಗ್ಯರ ಸ್ವರೂಪವು ದುಃಖಾತ್ಮಕ. ನಿತ್ಯ ಸಂಸಾರಿಗಳ ಸ್ವರೂಪವು ಸುಖ-ದುಃಖ ಮಿಶ್ರಾತ್ಮಕ, ಅಂದ ಮೇಲೆ ಆನಂದಾತ್ಮಕರು ಎಲ್ಲ ಜೀವರು ಎಂಬ ಮಾತು ಕೂಡುವದಿಲ್ಲ. ಇನ್ನು ನಿರ್ದುಷ್ಟವಾದ ಜ್ಞಾನಾತ್ಮಕತ್ವಕ್ಕೂ ಇದರಂತೆ ಅನುಪಪತ್ತಿ ಬರುತ್ತದೆ. ಅದು ಹ್ಯಾಗೆಂದರೆ

ಜೀವನ ಸ್ವರೂಪವೇ ನಿರ್ದುಷ್ಟವಾದ ಜ್ಞಾನಾತ್ಮಕವಾದ ಮೇಲೆ ಅಜ್ಞಾನಾದಿ ದೋಷಗಳಿಗೆ ಆಸ್ಪದವಿಲ್ಲ. ಸ್ವತಃ ಪ್ರಕಾಶನಾದ ಸೂರ್ಯನಲ್ಲಿ ಅಂಧಕಾರ ಕೂಡುವದೇ ಇಲ್ಲ, ತದ್ವತ್ ಸುಜ್ಞಾನಾತ್ಮಕನಾದ ಮೇಲೆ ಅಜ್ಞಾನಕ್ಕೆ ಆಸ್ಪದವಿಲ್ಲ. ಇದು ಪರಮಾತ್ಮನು ಕಲ್ಪಿಸುತ್ತಾನೆಂದರೂ ಸರಿ ಕಾಣುವುದಿಲ್ಲ. ಯಾಕಂದರೆ ಆ ಪರಮಾತ್ಮನು ನಿರ್ವ್ಯಾಜ ಆಪ್ತನು, ಆದ್ದರಿಂದಲೇ ಆಯಾ ಜೀವರಿಗೆ ಯೋಗ್ಯತಾನುಗುಣವಾಗಿ ಫಲ ಹೊಂದಿಸಲೋಸುಗವೇ ಅಸೃಜ್ಯರಾಶಿಯಿಂದ ಸೃಷ್ಟಿಗೆ ತಂದದ್ದು. ಆದರೆ ಸರ್ವ ಜೀವರನ್ನೂ ಏಕದಾ ಸೃಷ್ಟಿಗಾಗಿ ತನ್ನ ಉದರ ಹೊರಗೆ ತಂದು, ಕೂಡಲೇ ಮೋಕ್ಷಕ್ಕೆ ಕಳಿಸಬಹುದಾಗಿತ್ತು. ಆತನು ಆ ರೀತಿ ಮಾಡದೆ, ಜೀವರ ಸ್ವರೂಪ ಯೋಗ್ಯತಾನುಗುಣವಾಗಿ ತನ್ನ ಸ್ವಭಾವ ಲೀಲೆಯಿಂದ ಸರ್ವ ಜೀವರಿಗೆ (ಸೃಷ್ಟಿಗೆ ಬರುವವರಿಗೆ) ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳ ಕಲ್ಪಿಸಿ ತನ್ನ ಸತ್ಯ ಸಂಕಲ್ಪಕ್ಕನುಸರಿಸಿಯೇ, (ವೈಷಮ್ಯಾದಿ ದೋಷಗಳಿಲ್ಲದಿರುವದರಿಂದ) ಪ್ರತಿ ಜೀವರೂ ಅನಾದಿ ಕರ್ಮ (ಲಿಂಗದೇಹ) ಬದ್ಧರಾಗಿರೋಣದರಿಂದ, ಅದರಿಂದ ಬಿಡುಗಡೆ ಮಾಡಿಸಲೋಸುಗವೇ, ಆಯಾ ಜೀವರ ಯೋಗ್ಯತೆಗೆ ತಕ್ಕಂತೆ ಸಾಧನಗಳ ಮಾಡಿಸಿ, ಕೆಲವು ಜೀವರಿಗೆ ವಿರಜಾನದಿಯ ಸ್ನಾನದಿಂದಲೂ, ಕೆಲವು ಜೀವರಿಗೆ ವಾಯು ದೇವರ ಹುಂಕಾರದಿಂದಲೂ, ಕೆಲವು ಜೀವರಿಗೆ ವಾಯು ದೇವರ ಗದಾ ಪ್ರಹಾರದಿಂದಲೂ (ಅನಾದಿಯಿಂದ ಬದ್ಧವಾದ) ಲಿಂಗ ದೇಹದಿಂದ ಬಿಡುಗಡೆ ಹೊಂದಿಸಿ, ಸ್ವರೂಪಾಭಿ ವ್ಯಕ್ತಿ ಹೊಂದಿಸುತ್ತಾನೆ. ಅಂದ ಮೇಲೆ ಜೀವರೆಲ್ಲ ಸಚ್ಚಿದಾನಂದಾತ್ಮಕರೆಂದು ಹೇಳಲು ಬರುವುದಿಲ್ಲ. ಆದ್ದರಿಂದ, ಸಾತ್ವಿಕನು (ಜೀವನು) ಕೇವಲ ಸಚ್ಚಿದಾತ್ಮಕನೆಂದು ಹೇಳಬೇಕಾಗುತ್ತದೆ. ಸಚ್ಚಿದಾತ್ಮಕ ಎಂದರೆ ಚೇತನಾತ್ಮಕ ಅಂತ ಇಷ್ಟೇ ಅರ್ಥ ಮಾಡಿದರೆ ಬಾಧಕವಿಲ್ಲ. ಚೇತನಾತ್ಮಕ ಎಂದರೆ ಜ್ಞಾನೇಚ್ಛಾಕ್ರಿಯಾ ಉಳ್ಳ ಧರ್ಮ ಅಂತ ಹೇಳಿದಂತಾಗುವುದು. ಜೀವನು ಅಸ್ವತಂತ್ರನೆಂದರೆ ಜಡ ಸಾಮ್ಯ ತೋರುತ್ತದೆ. ಇದಕ್ಕೆ ಆಸ್ಪದವಿಲ್ಲದಂತೆ ಜಡ ವಿಲಕ್ಷಣನೆಂದು ಸಿದ್ಧಾಂತ ಮಾಡಿ, ಮತ್ತು ಅನುವಾದವನ್ನು ಮುಂದುವರಿಸಿ ಜೀವಕೋಟಿ ಪ್ರವಿಷ್ಟರಾದ ವಾಯುದೇವರ ವಿಚಾರಕ್ಕೆ ಹೊರಳಿ ಆ ವಿಷಯವನ್ನು ಹೇಳಲಾರಂಭಿಸಿದರು:-

೩೨. ಅಸುದೇವನ ಜೀವಸ್ವರೂಪಪ್ರವೇಶದ ಹಿರಿಮೆ-ಮಹಿಮೆ

ಜೀವನ ಸ್ವರೂಪ (ದೇಹ)ದಲ್ಲಿ ವಾಯು ದೇವರ ಪ್ರವೇಶ ಉಂಟೆಂದು ಕೆಲವರ ಮತ. ಇಲ್ಲವೆಂದು ಕೆಲವರ ಮತ. ಇಲ್ಲವೆಂದು ಪ್ರತಿಪಾದಿಸುವ ಮತದಲ್ಲಿ ಬ್ರಹ್ಮಾದಿಪಿಪೀಲಿಕಾಂತ ಜೀವನ ಪರಿಮಾಣ ಚಿಕ್ಕ-ದೊಡ್ಡ ರೀತ್ಯಾ ತಾರತಮ್ಯವಿಲ್ಲದೆ ಸಾಮ್ಯವಿರುವದರಿಂದಲೂ, ಈ ವಾಯುದೇವರು ಸಲಿಂಗರಾಗಿ ಅಮುಕ್ತರಾದುದರಿಂದ ಜೀವರ ಸ್ವರೂಪ ದೇಹದಲ್ಲಿ ಅವರಿಗೆ ಪ್ರವೇಶ ಕೂಡದು. ಮತ್ತು ಜೀವರ ಸ್ವರೂಪ ದೇಹದಲ್ಲಿ ಪ್ರವೇಶ ಹೇಳುವದಾದರೆ ಮುಕ್ತಾ ಮುಕ್ತಾ ಸೃಜ್ಯ ಸರ್ವ ಜೀವರಲ್ಲಿ ಹೇಳಬೇಕಾಗುವುದು. ಅವರು ಅಮುಕ್ತರಾಗಿರೋಣದರಿಂದ ಮುಕ್ತರಾದವರಲ್ಲಿ ಇರುವರೆಂಬುದು ಅಸಂಭವನೀಯ. ಹಾಗೂ ಅಸೃಜ್ಯಾವಸ್ಥೆಯಲ್ಲಿ ಈ ವಾಯುದೇವರು ಲಾತವ್ಯಪದದಲ್ಲಿರುತ್ತಾರೆ. (ಅಂದರೆ ವಾಯು ಪದಕ್ಕೆ ಬಂದಿರುವುದಿಲ್ಲ).

ಇನ್ನು ಲಾತವ್ಯ ಪದದಲ್ಲಿರುವವರಿಗೂ ಪ್ರವೇಶ ಹೇಳಹೋದರೆ ವಾಯು ಪದಕ್ಕೆ ಬರತಕ್ಕ ಋಜುಗಣದ ಎಲ್ಲರಿಗಾಗಲಿ ಅಥವಾ ವಾಯು ಪದಕ್ಕೆ ಬಾರದಿದ್ದ ಒಬ್ಬಬ್ಬರಿಗಾಗಲಿ ಪ್ರವೇಶ ಹೇಳುವದು ಯಾವ ಶಾಸ್ತ್ರದಲ್ಲಿ ಕಂಡಿಲ್ಲ. ಇನ್ನು ಸೃಜ್ಯಾಸ್ಥೆಯಲ್ಲಿಯ ಬ್ರಹ್ಮ ಪದಕ್ಕೆ ಬರುವವರು ವಾಯು ಪದದಿಂದಲೇ ಬರುವರಾದ್ದರಿಂದ ಅವರ ಪ್ರವೇಶ ಅಲ್ಲಿ ಹೇಳಲು ಬರುವದಾದರೂ ಅಸೃಜ್ಯಾವಸ್ಥೆಯಲ್ಲಿಯ ವಾಯುದೇವರು ಬೇರೆಯಾದ್ದರಿಂದ ಮುಂದೆ ಬ್ರಹ್ಮಪದಕ್ಕೆ ಬರಬೇಕಾಗಿರುವುದರಿಂದ, ಬಹಿರ್ಗತರಾಗಿ ಲಾತವ್ಯ ಪದದಲ್ಲಿದ್ದು ಈಗ ವಾಯು ಪದಕ್ಕೆ ಬರುವವರಿಗೆ ಒಪ್ಪಿಸಬೇಕಾಗುವುದು. ಇನ್ನು ಮುಕ್ತಿಗೆ ಹೋಗುವ ಜೀವರಲ್ಲಿ ಈ ವಾಯು ದೇವರು ಬಹಿರ್ಗತರಾಗಿ ಮುಕ್ತರಾಗುವ ಬ್ರಹ್ಮದೇವರಿಗೆ ಒಪ್ಪಿಸಬೇಕಾಗುವುದು. ವಾಯು ಪದವಿಯಿಂದ ಮುಕ್ತಿ ಇಲ್ಲ. ವಾಯುದೇವರೇ ಮುಂದಿನ ಸೃಷ್ಟಿಯಲ್ಲಿ ಬ್ರಹ್ಮ ಪದವಿಯನ್ನು ಆಳುವದಕ್ಕೋಸ್ಕರ ಅಮುಕ್ತರಾಗಿಯೇ ಉಳಿಯಬೇಕಾಗಿದೆ. ಅಂದರೆ ಅಸೃಜ್ಯಾವಸ್ಥೆ-ಸೃಜ್ಯಾವಸ್ಥೆ ಮುಕ್ತಾವಸ್ಥೆಯಲ್ಲಿ ಬೇರೆ ಬೇರೆ ವಾಯು ದೇವರು ಇರುವ- ನಿಮಿತ್ತ ಜೀವನ ಸ್ವರೂಪ ದೇಹದ ಅವಸ್ಥಾತ್ರಯದಲ್ಲಿ ಒಬ್ಬರೇ ವಾಯುದೇವರು ಇರುವದಕ್ಕೆ ಮಾರ್ಗವಿಲ್ಲದ್ದರಿಂದ ವಾಯುದೇವರ ಪ್ರವಿಷ್ಟವು ಕೂಡುವದಿಲ್ಲ. ಮತ್ತು ಮೇಲ್ಕಾಣಿಸಿದಂತೆ ಅವಸ್ಥಾತ್ರಯದಲ್ಲಿ ಒಬ್ಬರು ಬಹಿರ್ಗತರಾಗಿರೋಣ, ಮತ್ತೊಬ್ಬರು ಪ್ರವಿಷ್ಟರಾಗಿರೋಣ, ಕಡೆಗೆ (ಮುಕ್ತಿ ಕಾಲದಲ್ಲಿ) ಮುಕ್ತರಾಗುವ ಬ್ರಹ್ಮದೇವರಿಗೆ ಒಪ್ಪಿಸಿ ಈ ವಾಯು ದೇವರು ಹೊರಗೆ ಉಳಿದುಕೊಳ್ಳುವದು ನೋಡಿದರೆ, ಈ ರೀತಿ ದ್ರಾವಿಡ ಪ್ರಾಣಾಯಾಮವು ಯುಕ್ತಿ ವಿರುದ್ಧ ಮತ್ತು ಶಾಸ್ತ್ರದಲ್ಲಿಲ್ಲದ ಮಾತಾಗಿದೆ. ಇದರ ಮೇಲೆ ಜೀವನ ಸ್ವರೂಪ ದೇಹದಲ್ಲಿ ಪ್ರವೇಶವಿದೆಂದರೆ, ಅವರು ಅಲ್ಲಿದ್ದು ಮಾಡುವ ಕಾರ್ಯವೇನು? ಮತ್ತು **'ಅಣೋರಣಿ ಯಾನ್ಮಹತೋ ಮಹೀಯಾನ್'** ಎಂಬ ಶೃತಿ ಪ್ರತಿಪಾದ್ಯತ್ವವು ಇವರಿಗೆ ಕೂಡುವದೆ? ಅಂತ ಪ್ರತಿಪಾದಿಸುತ್ತಾರೆ. ಇನ್ನು ಪ್ರವೇಶ ಉಂಟೆಂದು ಹೇಳುವವರ ವಿಚಾರವೇನೆಂದರೆ–

ಜೀವನು ಅಸೃಜ್ಯಾವಸ್ಥೆಯಲ್ಲಿ ಸುಪ್ತನಾಗಿದ್ದಾಗ್ಯೂ ಜಡನಲ್ಲ. ಚೇತನನು ಯಾವಾಗಲೂ ಚೇತನನೇ ಸರಿ. ಅಂದ ಮೇಲೆ ತನ್ನಿಷ್ಟ ಧರ್ಮ ಯಾವಾಗಲೂ (ಅವಸ್ಥಾತ್ರಯದಲ್ಲೂ) ಇದ್ದೆ ತೀರಬೇಕು. ಆ ಧರ್ಮ ಯಾವುದೆಂದು ವಿಚಾರ ಮಾಡಿದರೆ ಶ್ವಾಸೋಚ್ಛ್ವಾಸವೆಂದು ಹೇಳಬೇಕಾಗುವುದು. ಈ ಸ್ವರೂಪ ನಿಷ್ಠ ಧರ್ಮಕ್ಕೆ ಮತ್ತೊಬ್ಬರು ಯಾಕೆ ಬೇಕು? ಸ್ವರೂಪ ಭೂತ ಧರ್ಮ ಅಂತ ಹೇಳಿದರೆ ಇದು ಸರಿ ಹೋಗುವುದಿಲ್ಲ. ಯಾಕೆಂದರೆ ಯಾವಚ್ಚೇತನರು ಪರಾಧೀನ ಕರ್ತೃಗಳಾಗಿರೋಣದರಿಂದ ಈ ಶ್ವಾಸೋಚ್ಛ್ವಾಸವೂ ಪರಾಧೀನವೆಂದೇ ಹೇಳಬೇಕು. ಆದ್ದರಿಂದ ಈ ಕಾರ್ಯಕ್ಕೆ ಮತ್ತೊಬ್ಬ ಚಾಲಕರು ಬೇಕಾಗುತ್ತದೆ. ಆದ್ದರಿಂದ, ಈ ಕಾರ್ಯವನ್ನು ಎಂದು ವಾಯು ದೇವರು ಮಾಡಿಸುವರೆಂದು ಹೇಳಿದರಾಯಿತು ಎಂದು ಅಂದರೆ **'ಯತ್ರ ಹರಿಸ್ತತ್ರ ವಾಯುಃ'** ಅಂತ ಇರೋಣದರಿಂದಲೂ ಪವಮಾನ ಸಂಹಿತೆಯಲ್ಲಿ **'ಜೀವಾಸ್ತು ತ್ರಿವಿಧಾಃ ಪ್ರೋಕ್ತಾಃ'** ಎಂಬುದರಿಂದ **ಸರ್ವಪ್ರೇರಕರೂಪವಾನ್** ಎಂಬುವವರಿಗೂ ಇದ್ದ ಪ್ರಮಾಣ ಮಧ್ಯೆ **'ಸಾತ್ವಿಕಾ ರಾಜಸಾಸ್ತತ್ರ ತಾಮಸಾದಿಪ್ರಭೇದತಃ। ತೇಷು ಸರ್ವೇಷು**

ಅದು ಹೇಗೆಂದರೆ, ಈ ಬ್ರಹ್ಮಾಂಡವನ್ನು ಎರಡು ಹೋಳುಗಳಾಗಿ ಮಾಡಿ ತಾಳ ಬಾರಿಸಿದಂತೆ ಬಾರಿಸುವೆನೆಂದು ಭೀಮಸೇನನು ಹೇಳಿಕೊಂಡನು. ಈ ಮಾತಿಗೆ ಕೃಷ್ಣನು ಸಮ್ಮತಿಸಿ 'ನೀನು ನಿನ್ನ ಶಕ್ತಿ ಎಷ್ಟೆಂಬುದನ್ನು ಹೇಳಿಕೊಂಡದ್ದು ಇನ್ನೂ ಕಡಮಿ, ನಿನ್ನ ಶಕ್ತಿ ಇತೋಪ್ಯಧಿಕವಾಗಿಯೇ ಇದೆ' ಎಂದು ಒಪ್ಪಿಗೊಂಡಿದ್ದಾನೆ. ಅಂದ ಮೇಲೆ ಜಡಚೇತನಾತ್ಮಕ ಯಾವತ್ಪದಾರ್ಥಗಳಲ್ಲಿಯೂ ಬ್ರಹ್ಮಾಂಡವೆ ಮಹತ್ವಾದದ್ದು. ಅದನ್ನೇ ತಾಳ ಬಾರಿಸುವಂತಹ ಶಕ್ತಿ ಯುಕ್ತರೆಂದ ಮೇಲೆ ಮಹತೋ ಮಹೀಯತ್ವ ಸಿದ್ಧವಾಯಿತು. ಒಂದು ಶೃತಿಯಲ್ಲಿಯ ಉತ್ತರಾರ್ಧ ಸಿದ್ಧವಾದ ಮೇಲೆ ಪೂರ್ವಾರ್ಧವೂ ಕೈಮುತ್ಯನ್ಯಾಯೇನ ಸಿದ್ಧವೇ ಸರಿ. ಆದ್ದರಿಂದ ಮಹತ್ಪದಾರ್ಥದಲ್ಲಿ ಬ್ರಹ್ಮಾಂಡ ಹ್ಯಾಂಗೆ ಮಹತ್ವದಾರ್ಥವೋ, ಅಣುತ್ವದಲ್ಲಿ ಜೀವನೆ ಅಣು, ಅದರಲ್ಲಿ ವಾಸವಾಗಿದ್ದು ಚೇತನ ನಿಷ್ಠ ಧರ್ಮಕ್ಕೆ ಚಾಲನಾ ಕೊಡುತ್ತಾರೆ. ಅಂದ ಮೇಲೆ ಅಣೋರಣೀಯತ್ವವೂ ಸಿದ್ಧವೇ ಸರಿ" ಎಂದು ಅನುವಾದ ಮಾಡಿದ್ದಕ್ಕೆ ಆ ಪೆರಿಯಕುಳಂ ರಾಮಚಂದ್ರಾಚಾರ್ಯರು ತೃಪ್ತರಾಗಿ ಆನಂದ ಪರವಶರಾದರು.

೩೩. ಸ್ವಾಮಿರಾಯಾಚಾರ್ಯರು ಗೃಹಸ್ಥಾಶ್ರಮಿಗಳಾದರು.

ಶೇಲಂ ಜಿಲ್ಲೆಯ ಕಾಕಾವೇರಿಯಂಬ ಗ್ರಾಮದ ಜಹಗೀರದಾರ (ಮಿರಾದಾರ)ರಾದ ಅಮಿತವಿಕ್ರಮರಾಯರೆಂಬುವರು ಇವರ ಶಿಷ್ಯರೆಂಬುವದು ವಾಚಕರು ಜ್ಞಾಪಕದಲ್ಲಿರಲಿಕ್ಕೆ ಸಾಕು. ಆ ಗೃಹಸ್ಥನಿಗೆ ಸಂತಾನವಿಲ್ಲದಿದ್ದರೂ ತಾನು ಕನ್ಯಾದಾನ ಮಾಡುವ ಇಚ್ಛಾದಿಂದ ತಮ್ಮ ಭಾವ ಮೈದುನ (ಬೀಗ)ನಾದ ವೆಂಕಟ ನಾರಾಯಣರಾಯರ ಮಗಳಾದ 'ನಾಮಗಿರಿಯಂಬ' ಹೆಣ್ಣು ಕೂಸನ್ನು ಸ್ವೀಕಾರ ಮಾಡಿಕೊಂಡು ಸಂರಕ್ಷಣ ಮಾಡುತ್ತಿದ್ದನು. ಈ ಅಮಿತವಿಕ್ರಮರಾಯರ ಮಾವಂದರಾದ ಹನುಮಂತರಾಯರು ತಮ್ಮ ಅವಸಾನ ಕಾಲದಲ್ಲಿ ತಮ್ಮ ಅಳಿಯ ಮಗಳನ್ನು ಕರೆದು ಈಗ ನೀವು ಸಂರಕ್ಷಣ ಮಾಡುತ್ತಿರುವ ಕನ್ಯಾವನ್ನು 'ನಾನು ಸತ್ತ ಒಂದು ವರುಷದಲ್ಲಿಯೇ ಒಬ್ಬ ಸತ್ಕುಲ ಪ್ರಸೂತ ಯೋಗ್ಯ ವರನಿಗೆ ಕನ್ಯಾದಾನ ಮಾಡಿ ಆ ಫಲವನ್ನು ನನಗೆ ಪ್ರದಾನ ಮಾಡಬೇಕೆಂದು' ಹೇಳಿ ಅವರುಗಳಿಂದ 'ಒಳ್ಳೇದು' ಅಂತ ಒಪ್ಪಿಸಿಕೊಂಡು ಮರಣ ಹೊಂದಿದರು. ಆರೇಳು (೬-೭) ತಿಂಗಳಾದ ನಂತರ ತಾವು ಕೊಟ್ಟ ವಚನವನ್ನು ಜ್ಞಾಪಿಸಿಕೊಂಡು ತಮ್ಮ ಗುರು ಪುತ್ರನಿಗೆ ಈ ಕನ್ಯಾದಾನ ಮಾಡಿಕೊಡುವ ವಿಚಾರದಿಂದ ಆದವಾನಿಗೆ ಬಂದನು. 'ಸ್ವಾಮಿ! ನಮ್ಮ ಮಾವಂದಿರ ಅವಸಾನ ಕಾಲದಲ್ಲಿ ಅವರಿಗೆ ಕೊಟ್ಟ ವಚನದ ಮೇರೆಗೆ ಇನ್ನು ೩-೪ ತಿಂಗಳಲ್ಲಿ ನನ್ನ ಸ್ವೀಕೃತ ಪುತ್ರಿಯಾದ 'ನಾಮಗಿರಿ' ಎಂಬ ಕನ್ಯಾವನ್ನು ತಮ್ಮ ಪುತ್ರನಿಗೆ ಸ್ವೀಕಾರ ಮಾಡಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಬೇಡಿಕೊಂಡನು. 'ನೀನು ಮಾಡಿದ ಸಂಕಲ್ಪ ಯೋಗ್ಯವೇ ಸರಿ. ಈ ನಮ್ಮ ಹುಡುಗನಿಗೆ ಈಗ ೧೧ನೇ ವರುಷ ವಯಸ್ಸು. ಮತ್ತು ನಾವು ವಾಯುದೇವರ ಆಜ್ಞಾ ಮೇರೆಗೆ ಅವನಿಗೆ ಲೌಕಿಕ ವಿದ್ಯಾವನ್ನು ಕಲಿಸುವವರಾಗಿರುವದಿಲ್ಲ. ಮತ್ತು ಉದರಂಭರಣ ಸುಸೂತ್ರ ಸಾಗುವಂತೆ ಯಾವ ಆಸ್ತಿಯೂ ಇಟ್ಟಿಲ್ಲ. ಅದಕ್ಕಾಗಿ ಪ್ರಯತ್ನ ಸಹ ಮಾಡುವವರಲ್ಲ. ಇಂತಹವನಿಗೆ ನಿಮ್ಮಂತಹ ಮಿರಾದಾರರು ಕನ್ಯಾ ಕೊಡುವದೆಂದರೇನು! ಮತ್ತು ಈ ಅಲ್ಪ ವಯಸ್ಸಿನಲ್ಲಿಯೇ ಅವನಿಗೆ ಲಗ್ನ ಮಾಡಿ ತನ್ಮೂಲಕ ಸಂಸಾರಿಕ

ಕ್ಲೇಶಗಳನುಭವಿಸುವ ಅವಶ್ಯಕತಾ ಏನು? ಈ ಪ್ರಯುಕ್ತ ನೀನು ಅನ್ಯತ್ರ ವರಾನ್ವೇಷಣ ಮಾಡಿ ನೀನು ವಚನ ಪಾಲನೆ ಮಾಡಿಕೊಳ್ಳುವವನಾಗು. ಇದಕ್ಕೆ ಇನ್ನೂ ಅವಧಿಯಿದೆ' ಅಂತ ಹೇಳಿದರು. '**ಸ್ವಾಮಿ! ಸರಕ್ಷಿತಾ ರಕ್ಷತಿ ಯೋಹಿ ಗರ್ಭೇ**' ಎಂಬುದನ್ನು ಅನುಭವದಲ್ಲಿ ತಂದುಕೊಂಡು, ನಮ್ಮಗಳಿಗೂ ಉಪದೇಶ ಮಾಡಿ ದಾರಢ್ಯ ತಂದು ಕೊಡುವ ತಾವು, ಈ ರೀತಿ ಲೌಕಿಕ ಮಾತುಗಳನ್ನು ಹೇಳಿ ನನ್ನನ್ನು ಮೋಸಗೊಳಿಸಬಹುದೆ? ಆ ಹುಡುಗನ ಯೋಗ-ಕ್ಷೇಮವನ್ನು ತಾವು ವಹಿಸುವೆವೆಂದು ವಾಯುದೇವರು ಅಭಯ ವಚನವಿತ್ತ ಮೇಲೆ ಎರಡನೇ ಆಲೋಚನಾ ಮಾಡುವದುಂಟೆ? ಮತ್ತು ಗುರುಪುತ್ರನಿಗೆ ಕನ್ಯಾದಾನ ಮಾಡಿ ಆ ಮಹಾಫಲಕ್ಕಧಿಕಾರಿಯಾಗುವದು ಬಿಟ್ಟು "**ತೃಷೀತೋ ಜಾನ್ಹವೀತೀರೇ ಕೂಪಂಖನತಿ ದುರ್ಮತಿಃ**" ಎಂಬಂತೆ ಮಾಡಿಕೊಳ್ಳುವುದೇ! ಆ ಮಾತು ಎಂದಿಗೂ ಆಗದು. ತಾವು ನನ್ನ ಮೇಲೆ ಅನುಗ್ರಹ ಮಾಡಿ ಸ್ವೀಕರಿಸುವುದಾಗಿ ವಚನ ಕೊಡಲೇಬೇಕೆಂದು ಸಾಷ್ಟಾಂಗ ಪ್ರಣಾಮ ಮಾಡಿದನು. 'ಒಳ್ಳೇದು ಶ್ರೀಹರಿ ವಾಯುಗಳ ಸಂಕಲ್ಪ ನಿರೀಕ್ಷಿಸಿ ಅವರ ಇಛ್ಛಾಪ್ರಕಾರ ಮಾಡುವೆವು' ಅಂತ ಸಮಾಧಾನಪಡಿಸಿದರು. ಮರುದಿನ '**ಈಶೇಚ್ಛಾ ಬಲೀಯಸೀ**' ಶ್ರೀಹರಿ ವಾಯುಗಳ ಸಂಕಲ್ಪಕ್ಕೆ ಬಂದಿದೆ. ಉಪಾಯವಿಲ್ಲ, "ತಥಾಸ್ತು" ಅಂತ ಒಪ್ಪಿಕೊಂಡರು. 'ಕೃತಾರ್ಥನಾದೆ' ಅಂತ ಅಮಿತ ವಿಕ್ರಮರಾಯನು ಸಂತೋಷಪಟ್ಟು, 'ಈ ಲಗ್ನವು ನಮ್ಮ ಮನೆಯ ಕುಲಸ್ವಾಮಿಯಾದ "ತಾಂದೋಣಿ ವೆಂಕಟರಮಣ" ದೇವರ ಸನ್ನಿಧಾನದಲ್ಲಿ ಆಗತಕ್ಕದ್ದು' ಅಂತ ವಿಜ್ಞಾಪನಾ ಮಾಡಿಕೊಂಡನು. ಆ ಸ್ಥಲವೆಲ್ಲಿ ಅಂತ ಪ್ರಶ್ನೆ ಮಾಡಿದರು?. 'ತಿರುಚನಾಪಲ್ಲಿ (ಶ್ರೀರಂಗ ಕ್ಷೇತ್ರ) ಜಿಲ್ಲೆಯ 'ಕರೂರ್' ಎಂಬ ತಾಲೂಕ ಗ್ರಾಮಕ್ಕೆ ೪-೫ ಮೈಲು ದೂರದಲ್ಲಿ ಒಂದು ಚಿಕ್ಕ ಬೆಟ್ಟವಿದೆ. ಅದರಲ್ಲಿ ಶ್ರೀ ವೆಂಕಟೇಶನು ಸ್ವಯಂ ವ್ಯಕ್ತನಾಗಿದ್ದಾನೆ. ಅದು ಪುರಾತನ ಗಿರಿ. ಅಲ್ಲಿ ಅನೇಕ ಜನರು ಸೇವಾದಿಗಳನ್ನು ಮಾಡಿ ಇಷ್ಟಾರ್ಥಗಳನ್ನು ಹೊಂದುತ್ತಾರೆ. ಸ್ಥಳ, ನೀರು ಇತ್ಯಾದಿಗಳಿಗೂ ಅನುಕೂಲವಿದೆ. ಅದು ಈರೋಡ ಜಂಕ್ಷನ್ (Junction) ದಿಂದ ಪ್ರತ್ಯೇಕ ಸಣ್ಣ ಗಾಡಿ (Meter guage) ತಿರುಚನಾಪಲ್ಲಿಗೆ ಹೋಗುವ ಮಧ್ಯವಿದೆ. ಮತ್ತು ನಮ್ಮ ಗ್ರಾಮವಾದ ನಾಮಕಲ್ಲಿನಿಂದ ಸುಮಾರು ೨೫ ಮೈಲು ಆಗುತ್ತದೆ. ನಮ್ಮ ಗ್ರಾಮದಿಂದ ಕುದುರೆ ಅಥವಾ ಎತ್ತಿನ ಗಾಡಿಯಲ್ಲಿ (ಆಗ ಬಸ್ಸು ಇರಲಿಲ್ಲ) ಹೋಗಬೇಕಾಗುತ್ತದೆ. ತನ್ಮಧ್ಯೆ ಕಾವೇರಿ ನದಿಯು ಬರುತ್ತದೆ. ಅದನ್ನು ಹರಿಗೋಲದಲ್ಲಿ ದಾಟಬೇಕಾಗುತ್ತದೆ' ಅಂತ ಮಾರ್ಗವೆಲ್ಲ ವಿವರಿಸಿ ಶಾಲಿವಾಹನ ಶಕೆ ೧೮೩೩ ವಿರೋಧಿಕೃತ ಸಂವತ್ಸರ ಮಾಘ ಶುಕ್ಲ ಪಂಚಮಿ ಲಗ್ನ (೨೪-೧-೧೯೧೨) ಮುಹೂರ್ತವನ್ನು ನಿಶ್ಚಯ ಮಾಡಿಕೊಂಡು ತನ್ನ ಊರಿಗೆ ಹೋದನು. ಇತ್ತ ಲಗ್ನಕ್ಕಾಗಿ ಬೇಕಾಗುವ ಸಂಭಾರಗಳಿಗಾಗಿ ತಮ್ಮ ಆಗಿನ ಶಿಷ್ಯವರ್ಗಕ್ಕೆ ತಿಳಿಸಲು ಅವರವರು ತಮ್ಮ ತಮ್ಮ ಅನುಕೂಲಾನುಸಾರ ದ್ರವ್ಯವನ್ನು ಕಳಿಸಿದರು. ಆ ಮುಹೂರ್ತಕ್ಕೆ ಅನುಸರಿಸಿ ಇಲ್ಲಿ ತಮ್ಮ ಮನೆಯಲ್ಲಿ ಪೂರ್ವ ಸಂಪ್ರದಾಯಾನುಗುಣವಾಗಿ ಕುಲಸ್ವಾಮಿಯ ಆರಾಧನೆ ಮಾಡಿಕೊಂಡು ವಿಜೃಂಭಣೆಯಿಂದ ಹೊರಡುವದಾಗಿ ನಿಶ್ಚಯಿಸಲು (ಆದವಾನಿಯಲ್ಲಿ) 'ಪ್ಲೇಗ' ಎಂಬ ಮಹಾಮಾರಿ ಉಪದ್ರವ

ಇದ್ದದ್ದರಿಂದ ಯಾವ ಉತ್ಸವ ಮಾಡಲವಕಾಶವಾಗದೆ ಆ ಸಮಯಕ್ಕೆ ಬಂದೊದಗಿದ ತಮ್ಮ ಶಿಷ್ಯವರ್ಗದ ಪೈಕಿ ಮುಂಡರಗಿ ರಾಮಾಚಾರ್ಯ ದಂಪತಿಗಳು ಹಾಗೂ ಮಂತ್ರಾಲಯದ ಗದಗ ಶೇಷಗಿರಿರಾಯ, ಕೋಮಟ ಭೀಮಯ್ಯ ವಗೈರೆ ಮಂಡಳಿ ಸಮೇತ ತಿರುಪತಿ ಮಾರ್ಗವಾಗಿ ಕರೂರ (ತಾಂದೋಣಿ ಬೆಟ್ಟ) ಎಂಬಲ್ಲಿಗೆ ಪ್ರಯಾಣ ಮಾಡಿ, ಸುಖವಾಗಿ ಆ ಸ್ಥಲಕ್ಕೆ ಹೋದರು. ಅಲ್ಲಿ ಈ ಅಮಿತ ವಿಕ್ರಮರಾಯನು ತನ್ನ ಬಂಧು-ಬಳಗದವರಿಂದ ಕೂಡಿಕೊಂಡು ಯಥೋಚಿತ ಮರ್ಯಾದಾ ಪೂರ್ವಕ ಸ್ವಾಗತಿಸಿದನು. ಲಗ್ನವೂ ಮುಹೂರ್ತಕ್ಕೆ ಸರಿಯಾಗಿ ಯಥಾ ಯೋಗ್ಯ ಕೊನೆಗೊಂಡಿತು. ಲಗ್ನ ನಿಮಿತ್ತ ಬಂದ ಮುಂಡರಗಿ ರಾಮಾಚಾರ್ಯರು ಮೊದಲಾದ ಶಿಷ್ಯವರ್ಗವು ಇವರ ಆಜ್ಞಾಪಡೆದು (ಸಮೀಪ ಇರೋದದರಿಂದ) ಶ್ರೀರಂಗ ರಾಮೇಶ್ವರಾದಿ ಕ್ಷೇತ್ರಗಳಿಗೆ ಪ್ರಯಾಣ ಮಾಡಿದರು. ಈ ಅಮಿತ ವಿಕ್ರಮರಾಯನು ಕೃತಕಾರ್ಯನಾಗಿ ಬಂಧು-ಬೀಗರ ಸಹ ನಾಮಕಲ್ಲಿಗೆ ಬಂದು, ಸಂಭ್ರಮದಿಂದ ೪-೬ ದಿನ ಕಳೆದು ಶೇಲಂ ಮಾರ್ಗವಾಗಿ ಆದವಾನಿಗೆ ಕಳಿಸಿಕೊಟ್ಟನು.

೩೪. ರಾಯರ ಆಜ್ಞೆಯಂತೆ ಯಾತ್ರೆಗೆ ನಡೆದರು.

ಶಾ.ಶ. ೧೮೩೩ನೇ ಪರಿಧಾವಿ ಸಂವತ್ಸರ ಜೇಷ್ಠ ಮಾಸದಲ್ಲಿ ಮಂತ್ರಾಲಯಕ್ಕೆ ಸಕುಟುಂಬ ಹೋಗಿರಲು, ಭಾಗೀರಥಿ ಸ್ನಾನರ್ಥ ಉತ್ತರ ದೇಶದ ತೀರ್ಥ ಯಾತ್ರೆಗೆ ಹೋಗುವುದಾಗಿ ಗುರುರಾಜರ ಆಜ್ಞಾ ಆದದ್ದಕ್ಕೆ ಕೂಡಲೇ ಗದಗ ಶೇಷಗಿರಿರಾಯ, ಬೀಗಮುದ್ರಿ ವೆಂಕಟರಮಣಾಚಾರ್ಯ, ಖೇಡಕರ ಗುಂಡಾಚಾರ್ಯರ ತಂಗಿಯಾದ ಸರಸ್ವತಿಬಾಯಿ ಈ ಮಹಾಯಾತ್ರೆಗೆ ಇವರ ಜೊತೆಯಲ್ಲಿ ಹೊರಟರು. ಆ ದಿನ ಜೇಷ್ಠ ವದ್ಯ ದ್ವಾದಶಿ ಇದ್ದುದರಿಂದ ಪಾರಣೆಯಾದ ನಂತರ ಎತ್ತಿನ ಗಾಡಿಯಿಂದ ತುಂಗಭದ್ರಾ (ಮಂತ್ರಾಲಯಂ ರೋಡ್) ಸ್ಟೇಶನ್‌ಗೆ ಬರುವಾಗ ಹೈದ್ರಾಬಾದ ರಾಷ್ಟ್ರದ ಮಹಬೂಬನಗರ 'ಪಾಲ್ಮೂರ' ಜಿಲ್ಲೆಯ ಮಖತಲ್ ತಾಲೂಕದ 'ದೊಡ್ಡ ಜಠರ'ಯಂಬ ಗ್ರಾಮದ ಕುಲಕರ್ಣಿ (ಶಾನುಭೋಗ) ಭೀಮರಾಯನೆಂಬ ಗೃಹಸ್ಥನು ಈ ಬಂಡಿ ಅನುಸರಿಸಿಯೇ ಬರುತ್ತಿದ್ದನು. ಗೃಹಸ್ಥನನ್ನು ನೋಡಿ, ಯಾರೋ ಒಬ್ಬ ಗೃಹಸ್ಥನು ನಮ್ಮ ಬಂಡಿ ಹಿಂದೆಯೇ ಬರುತ್ತಿರುವನು. ಅವನು ಸ್ಟೇಷನ್ನಿಗೆ ಬರುವದಿದ್ದರೆ ಆತನನ್ನು ಬಂಡಿಯಲ್ಲಿ ಕೂಡಲೋಸುಗ ಕರೆ, ಅಂತ ಶೇಷಗಿರಿರಾಯನಿಗೆ ಹೇಳಿದರು. ಕರೆದಾಗ್ಯೂ, 'ನಾನು ಸ್ಟೇಷನ್ನಿಗೆ ಬರುವುದಾದರೂ ನನಗೆ ಬಂಡಿ ತಡೆಯುವದಿಲ್ಲ. ಆದ್ದರಿಂದ ನಡೆಯುತ್ತಲೆ ಬರುತ್ತೇನೆ' ಅಂತ ಹೇಳಿ ನಡೆಯುತ್ತಲೇ ಬಂದನು. ಅಲ್ಲಿಂದ ಕೃಷ್ಣಾ ಸ್ನಾನಾರ್ಥ ಕೃಷ್ಣಾ ಸ್ಟೇಷನ್ನಿಗೆ ಬಂದರು. ಆ ಭೀಮರಾಯರು ಹಿಂಬಾಲಿಸಿದನು. ಅಲ್ಲಿ ಮಾಡಬೇಕಾದ ಪಿತೃಕಾರ್ಯಗಳು ಮಾಡುವಾಗ ಈತನು ಮಾಡಿದನು. ಅಲ್ಲಿಂದ ಯಾದಗಿರಿಯಲ್ಲಿದ್ದ ಇವರಿಗೆ ಪ್ರೀತ್ಯಾಸ್ಪದರಾದ ಟಂಕಸಾಲಿ ಶ್ರೀನಿವಾಸಾಚಾರ್ಯರ ಭೇಟಿಗಾಗಿ ಮಾರ್ಗತ್ವೇನ ಯಾದಗಿರಿಗೆ ಬಂದರು. ಈ ಭೀಮರಾಯನೂ ಹಿಂಬಾಲಿಸಿದನು. ಈ ಗೃಹಸ್ಥನು ನಮ್ಮ ಹಿಂದೆಯೇ ಬರುತ್ತಿರುವನು. ಕಾರಣವೇನೆಂಬುವುದಾಗಿ ವಿಚಾರಿಸುವುದಾಗಿ ಶೇಷಗಿರಿರಾಯಗೆ ಹೇಳಿದರು. ವಿಚಾರಿಸಲಾಗಿ "ನಾನು ಮಂತ್ರಾಲಯಕ್ಕೆ ಸೇವಾರ್ಥ ಬಂದಿದ್ದೆ. ಗುರುರಾಜರು ಅಪ್ಪಣೆ

ಕೊಟ್ಟರು. ನಮ್ಮ ಗ್ರಾಮಕ್ಕೆ ಹೋಗಬೇಕಾದರೆ ಕೃಷ್ಣಾದಿಂದಲೂ, ಯಾದಗಿರಿಯಿಂದಲೂ ಸುಮಾರು ೩೦ ಮೈಲುಗಳಾಗುತ್ತದೆ. ಇಲ್ಲಿಂದ ಹೋಗುವದರ ಬದಲಾಗಿ ಯಾದಗಿರಿಯಿಂದ ಹೋದರಾಯಿತು ಅಂತ ಬರುತ್ತಿದ್ದೇನೆ" ಅಂತ ಉತ್ತರ ಕೊಟ್ಟು ಜೊತೆಯಾಗೆ ಯಾದಗಿರಿಗೆ ಬಂದನು. ಮರುದಿನ ಅಲ್ಲಿಂದ ಪಂಢರಾಪುರಕ್ಕೆ ಹೋಗುವುದಾಗಿ ಸ್ಟೇಷನ್ನಿಗೆ ಬಂದರು. ಈ ಗೃಹಸ್ಥನು ಹಿಂದೆಯೇ ಬಂದನು. ಆಗ ಆಷಾಡ ಶುದ್ಧ ಏಕಾದಶೀ ಸಮೀಪ ದಿನಗಳಾಗಿದ್ದರಿಂದ ವಿಶೇಷ ಜನ ಸಮ್ಮರ್ದದಿಂದ ಪ್ಲೇಗು ವಗೈರೆ ಉಪದ್ರವಗಳಿಗೆ ಕಾರಣವಾಗುವುದೆಂದು ಪಂಢರಾಪುರಕ್ಕೆ ತಿಕೀಟು ಕೊಡಬಾರದೆಂದು ಸರಕಾರದವರು ನಿರ್ಬಂಧ ಪಡಿಸಿದ್ದರು. ಆ ಮೇರೆಗೆ ಯಾದಗಿರಿಯಲ್ಲಿ ಪಂಢರಾಪುರಕ್ಕೆ ತಿಕೀಟು ಕೊಡಲಾಗದಾಗಿ, ತಿಕೀಟು ಮಾಸ್ತರರನ್ನು ಕೇಳಲು, ಮುಂದೆ ಗೋದಾವರಿ ತೀರವಾದ 'ಪುಣತಾಂಬಾ' ಎಂಬುದಕ್ಕೆ ತಿಕೀಟು ತೆಗೆದುಕೋ ಎಂದು ಹೇಳಿದರು. ಆಗ ಈ ಭೀಮರಾಯನು ಖಿನ್ನನಾಗಿ, 'ನಾನು ಕೂಡಾ ತಮ್ಮ ಜೊತೆಯಲ್ಲಿ ಮಹಾ ಯಾತ್ರಕ್ಕೆ ಬರುವ ಇಚ್ಛಾಯಿತ್ತು. ನಮ್ಮ ಗ್ರಾಮಕ್ಕೆ ಹೋಗಿ ದ್ರವ್ಯ ತಂದುಕೊಂಡು ಬರಲು ಅವಕಾಶವಿಲ್ಲ' ಅಂತ ದೀನವಾಣಿಯಿಂದ ನುಡಿದನು. ಆಗ ಈ ಗೃಹಸ್ಥನ ಗ್ರಾಮ ಕುಲಗೋತ್ರಗಳ ವಿಚಾರಿಸಲು "ಶ್ರೀಕೃಷ್ಣಾಪುರ ಮಠದ ಸ್ವಾಮಿಗಳವರ ಶಿಷ್ಯವರ್ಗದವರ ಲ್ಲೊಬ್ಬರಾದ 'ಜಠರ ವೆಂಕಣ್ಣದಾಸ'ರೆಂದು ನಮ್ಮ ತಂದೆಗಳಿದ್ದರು. ಅವರು ಸರ್ವದಾ ಸದಾಚಾರದಲ್ಲಿ ಕಾಲ ಕಳೆಯುತ್ತಿದ್ದರು. ನಾನು ಜೇಷ್ಠ ಪುತ್ರನಾದ್ದರಿಂದ ಗ್ರಾಮದ ಕುಲಕರ್ಣಿಕಿ ನನ್ನ ಹೆಸರಲ್ಲಿದೆ. ಆದಾಗ್ಯೂ ನನ್ನ ತಮ್ಮನಾದ 'ಆನಂದರಾಯ'ನೆಂಬಾತನೇ ದೇಶ ವ್ಯವಹಾರ ಎಲ್ಲಾ ಮಾಡುತ್ತಾನೆ. ಇನ್ನೊಬ್ಬ ಚಿಕ್ಕ ತಮ್ಮ 'ನಾರಾಯಣ' ಎಂಬಾತನು ಕುಲಕರ್ಣಿಕಿ ಲೆಖ್ಖ ಬರೆಯುತ್ತಾನೆ. ನಾನು ಅಲ್ಲಿ-ಇಲ್ಲಿ ತೀರ್ಥ ಕ್ಷೇತ್ರಗಳಿಗೆ ಹೋಗುವುದು, ದೊಡ್ಡವರನ್ನು ಕಂಡರೆ ಅವರಲ್ಲಿ ಸೇವಾ ಮಾಡಿಕೊಂಡು ಇರುವುದು ಇತ್ಯಾದಿಗಳಿಂದಲೇ ಕಾಲಕಳೆಯುತ್ತೇನೆ" ಅಂತ ತನ್ನ ಸಂಕ್ಷೇಪ ಇತಿಹಾಸವನ್ನೇ ಹೇಳಿಕೊಂಡನು. "ಹಾಂಗಾದರೆ ಈ ಗೃಹಸ್ಥನ ತಂದೆ-ತಾಯಿಗಳು ಪರಮ ಯೋಗ್ಯರಾಗಿರಬೇಕು. ಅವರು ಜಮಖಂಡಿ (ಲಂಗೋಟಿ) ಆಚಾರ್ಯರು ಮತ್ತು ಕೊಡಂಗಲ್ ವೆಂಕೋಬಾಚಾರ್ಯರು (ಆರ್ಯಅಕ್ಷೋಭ್ಯತೀರ್ಥ ಮಠಾಧೀಶ ಶ್ರೀ ರಘುಕಾಂತ ತೀರ್ಥರು) ಶ್ರೇಷ್ಠ ಆಪ್ತರ ಪೈಕಿ" ಎಂದು ಅಂದರು. 'ಹಾಂಗಾದರೆ ಈ ಭೀಮರಾಯನೂ ನಮ್ಮ ಹಿಂದೆ ಬರಲಿ, ಇವನಿಗೋಸ್ಕರವಾಗಿಯೂ ತಿಕೀಟು ತೆಗೆ' ಅಂತ ಶೇಷಗಿರಿರಾಯನಿಗೆ ಅಪ್ಪಣೆ ಮಾಡಿದರು. ಆ ಭೀಮಣ್ಣನು ಸಂತುಷ್ಟನಾಗಿ ಹಿಂಬಾಲಿಸಿದನು. ಗೋದಾವರಿ ತೀರ್ಥ ಪ್ರಯುಕ್ತ ಮಾಡಬೇಕಾದ ಪಿತೃಗಳ ಕಾರ್ಯ ಪುಣತಾಂಬಾದಲ್ಲಿ ಮುಗಿಸಿಗೊಂಡು, ನರ್ಮದಾ ತೀರವಾದ ಜಬ್ಬಲಪುರಕ್ಕೆ ಬಂದರು. ಅಲ್ಲಿಯ ತೀರ್ಥ ವಿಧಿಗಳನ್ನು ಮುಗಿಸಿಕೊಂಡು ಪ್ರಯಾಗ ಕ್ಷೇತ್ರಕ್ಕೆ ಹೋದರು. ಅಲ್ಲಿ ಒಂದು ಪಕ್ಷ (೧೫ ದಿನಗಳು) ಇರುವವರಾಗಿ, ಅಲ್ಲಿಂದಲೇ ತಮ್ಮ ಶಿಷ್ಯ ವರ್ಗದವರಿಗೆ, 'ದೈವಸಂಕಲ್ಪನುಸಾರ ಮಂತ್ರಾಲಯದಿಂದ ಏಕಾ-ಏಕಿ ಗಂಗಾ ಸ್ನಾನಾರ್ಥ ಬಂದಿದ್ದೇವೆ. ಇಲ್ಲಿ ಒಂದು ಪಕ್ಷ ಇರತಕ್ಕದ್ದಿದೆ. ಈ ಅವಧಿಯಲ್ಲಿ ಅನುಕೂಲವಿದ್ದವರು ಬರಬಹುದು. ಇಲ್ಲಿಂದಾ ಗಯಾ, ಕಾಶೀ, ಅಯೋಧ್ಯಾ, ಹರಿದ್ವಾರ ಮತ್ತು ಮುಂದೆ

ಬದರಿಕಾಶ್ರಮಕ್ಕೆ ಹೋಗುವ ದೈವಸಂಕಲ್ಪ ಕಂಡರೆ ಅಲ್ಲಿಯವರೆಗೂ ಹೋಗುತ್ತೇವೆ. ಇಲ್ಲದಿದ್ದರೆ ಹರಿದ್ವಾರದಿಂದ ದಿಲ್ಲಿ, ಮಥುರಾ ಮಾರ್ಗವಾಗಿ ಹಿಂದಿರುಗಿ ಆದವಾನಿಗೆ ಹೋಗುತ್ತೇವೆ.' ಅಂತ ಪತ್ರಗಳನ್ನು ಹಾಕಿದರು. ಈ ಪತ್ರಗಳು ತಲುಪಿದವರೆಲ್ಲರೂ ತಮ್ಮ ತಮ್ಮ ಅನುಕೂಲ ಅನುಸರಿಸಿ ದ್ರವ್ಯವನ್ನು Money Order ಕಳಿಸಿ, 'ಆ ಮಹಾಕ್ಷೇತ್ರಗಳಲ್ಲಿ ತಮ್ಮಿಂದ ನಮ್ಮಗಳ ಸ್ಮರಣೆ ಮಾಡಲ್ಪಟ್ಟರೆ 'ಕೂರ್ಮವು ಆಹಾರ ಭುಂಜಿಸಿ ಅನ್ಯತ್ರವಿರುವ ತನ್ನ ಕೂಸನ್ನು ಸ್ಮರಣೆ ಮಾಡಿದರೆ ತನ್ನ ಕೂಸಿಗೆ ತೃಪ್ತಿಯಾಗುವಂತೆ' ನಮ್ಮಗಳಿಗೆ ಶ್ರೇಯಃ ಪ್ರಾಪ್ತಿ ಸುಲಭವಾಗಿ ಆಗುತ್ತದೆ. ಈ ಅಲ್ಪ ಸೇವಾ ಸ್ವೀಕರಿಸಿ ಅನುಗ್ರಹಿಸಬೇಕೆಂಬ ಅಭಿಪ್ರಾಯದ ಪತ್ರಗಳನ್ನು ಬರೆದುಕೊಂಡರು. ಆಗ ಅಮಿತ ವಿಕ್ರಮರಾಯನು, ವೆಂಕಟರಂಗಾಚಾರ್ಯರೆಂಬ ಶೀಲಂದವರು ಪ್ರಯಾಗಕ್ಕೆ ಬಂದು ಸೇರಿದರು. ಆ ಮೇಲೆ ಪ್ರಯಾಗದಲ್ಲಿಯ ಪಿತೃಕಾರ್ಯಗಳುನ್ನು ಮುಗಿಸಿಕೊಂಡು ಗಯಾಕ್ಕೆ ಹೋದರು. ಅಲ್ಲಿಯೂ ಮಾಡಬೇಕಾದ ಪಿತೃಕಾರ್ಯಗಳ ಮಾಡಿಕೊಂಡರು. ಮರುದಿನ ಏಕಾದಶೀ ಇದ್ದ ಪ್ರಯುಕ್ತ ದ್ವಾದಶೀ (ಪಾರಣೆ) ಆದ ನಂತರ ಕಾಶಿಗೆ ಹೋಗಲು ನಿಶ್ಚಯ ಮಾಡಿದರು.

೩೫. ಮೋಸಕ್ಕೆ ಬಲಿಯಾದರು.

ಇದೇ ಸಂದರ್ಭದಲ್ಲಿ ಉತ್ತರಾದಿ ಮಠದ ದಿವಾನರಾಗಿದ್ದ ಸೇತುರಾಮಾಚಾರ್ಯರು ರಾಜಮಹೇಂದ್ರಿಯಲ್ಲಿ ಶ್ರೀಸತ್ಯಜ್ಞಾನ ತೀರ್ಥರಿಂದ ಸನ್ಯಾಸ ಸ್ವೀಕರಿಸಿ ಚಾತುರ್ಮಾಸ್ಯ ಸಂಕಲ್ಪ ಆರಂಭದಲ್ಲಿಯೇ ಗಯಾ ಕ್ಷೇತ್ರಕ್ಕೆ ಬಂದು ಶ್ರೀ ವಿಷ್ಣು ಪಾದ ಗುಡಿಯ ಪ್ರಾಕಾರದ ಒಂದು ಭಾಗದಲ್ಲಿ ಚಾತುರ್ಮಾಸ್ಯ ದೀಕ್ಷಾ ಮಾಡಿಕೊಂಡಿದ್ದರು. ಶ್ರೀ ಉತ್ತರಾದಿ ಮಠಾಧಿಷ್ಠಿತ ಶ್ರೀ ಸತ್ಯಧ್ಯಾನ ತೀರ್ಥರು ಬಂದಿರುವರೆಂದು ಇವರಿಗೆ (ಈ ಮುತ್ತಿಗಿ ಆಚಾರ್ಯರಿಗೆ) ಗೊತ್ತಿದ್ದರೂ, ಪೂರ್ವದಲ್ಲಿ (ಅವರ ಪೂರ್ವಾಶ್ರಮದಲ್ಲಿ ಆದವಾನಿಯಲ್ಲಿ ಉಭಯರಿಗೆ ಕಲಹವಾಗಿದ್ದರಿಂದ) ಅವರಿಗೂ ಇವರಿಗೂ ಸೌಹಾರ್ದ ವಿರದಿದ್ದರಿಂದ ಮಠಕ್ಕೆ ಇವರು ಹೋಗಿರಲಿಲ್ಲ. ಆದಾಗ್ಯೂ ಮಠೀಯ ಜನಗಳು ಇವರನ್ನು ನೋಡಿದ್ದರಿಂದ ಅವರಾಗಿಯೇ ಆ ದಿನ (ಏಕಾದಶೀ) ಪ್ರಾತಃಕಾಲ ಇವರಲ್ಲಿ ದ್ವಾರಪಾಲಕನು ಬಂದು 'ಶ್ರೀ ಉತ್ತರಾದಿ ಮಠದ ದಿವಾನರು ತಮ್ಮನ್ನು ಕರೆದುಕೊಂಡು ಬರುವುದಾಗಿ ಆಜ್ಞಾ ಮಾಡಿದ್ದಾರೆ, ಬರಬೇಕು' ಅಂತ ಕರೆದನು. 'ಒಳ್ಳೇದು' ಅಂದು ಅಲ್ಲಿಗೆ ಹೋದರು. ನೀವೂ ಮಹಾಯಾತ್ರೆಗೆ ಬಂದಿದ್ದು ಶ್ರೀಗಳವರಿಗೆ ತಿಳಿದಿದೆ. ಈವರೆಗೆ ಇಲ್ಲಿ ಮಾಡಬೇಕಾದ ಪಿತೃ ಕಾರ್ಯಗಳಲ್ಲಿ ತೊಡಗಿರುತ್ತೀರಿ. ಅದು ಮುಗಿದ ನಂತರ ಕರಿಸುವುದಾಗಿ ಆಜ್ಞಾ ಮಾಡಿದ್ದರು. ಆ ಕಾರ್ಯಗಳು ನಿನ್ನೆ ಮುಗಿದವೆಂದು ಕೇಳಿ ಈ ದಿನ ನಿಮ್ಮನ್ನು ಕರೆಸಿದ್ದೇವೆ. ನೀವು ನಾಳೆ ಪಾರಣೆ ಮಾಡಿಕೊಂಡು ಕಾಶೀಗೆ ಹೋಗುವಿರೆಂದು ತಿಳಿದಿದೆ. ಆದರೆ "ದೇಶೇಕಾಲೇಚ ಪಾತ್ರೇಚ ತದ್ದಾನಂ ಸಾತ್ವಿಕಂ ಸ್ಮೃತಂ" ಅಂತ ಇದ್ದುದರಿಂದ ದೇಶ ಗಯಾಕ್ಷೇತ್ರ! ಕಾಲ ಚಾತುರ್ಮಾಸ್ಯ, ನ ತಿಥಿರ್ದ್ವಾದಶೀ ಸಮಾ!! ಪಾತ್ರ ಸರ್ವಜ್ಞಪೀಠ!!! ಈ ರೀತಿ ಯೋಗ ಸಿಕ್ಕುವದು ದುರ್ಲಭವಾದ್ದರಿಂದ ನಾಳಿನ ಶ್ರೀ ರಾಮಚಂದ್ರ ದೇವರ ಪೂಜಾ ನಿಮ್ಮ ಕಡೆಯಿಂದಲೇ ಆಗತಕ್ಕದ್ದು" ಅಂತ ಶ್ರೀ ಸತ್ಯಜ್ಞಾನ ತೀರ್ಥರ ತಮ್ಮಂದಿರಾದ

ಕಿನ್ನಾಳ ಗೋವಿಂದಾಚಾರ್ಯರು ವಿವರಿಸಿದರು. ಸ್ವಾಮಿ! 'ತಾವು ಆಡುವ ಮಾತುಗಳೆಲ್ಲವೂ ಯೋಗ್ಯವಾಗಿಯೇ ಇವೆ. ಈ ಪರಸ್ಥಲದಲ್ಲಿ ಸಂಸ್ಥಾನ ಪೂಜಾ ಮಾಡಿಸುವುದಕ್ಕೆ ಅನುಕೂಲವಾಗುವಷ್ಟು ದ್ರವ್ಯವೆಲ್ಲಿಂದ ಬರಬೇಕು? ಮತ್ತು ಅವರಿಗೂ ನನಗೂ ಸೌಹಾರ್ದತೆ ಇಲ್ಲ, ಎಂಬುದು ತಿಳಿದ ವಿಷಯವಷ್ಟೇ! ಅಂದ ಮೇಲೆ ಈ ವಿಚಾರ ತಾವು ಉಪರಮಿಸಿಕೊಳ್ಳುವುದು ಯೋಗ್ಯ' ಅಂತ ಉತ್ತರ ಕೊಟ್ಟರು. 'ಶ್ರೀ ಶ್ರೀನಿವಾಸ ಆಚಾರ್ಯರೇ! ಅದೆಲ್ಲ ಅವರ ಪೂರ್ವಾಶ್ರಮದ ವಿಷಯ. ಈಗ ಸನ್ಯಾಸ್ತರಾಗಿರೋಣದರಿಂದ ಜನ್ಮಾಂತರವೆಂದೇ ಭಾವಿಸಬೇಕು. **"ಗತಗೋಷ್ಠೀ ನ ಕರ್ತವ್ಯಾ"** ಅಂತ ಅಂದರು. ಸರಿ; ಅದಾಗ್ಯೂ 'ನನ್ನಲ್ಲಿ ದ್ರವ್ಯ ಅನುಕೂಲವಿಲ್ಲ. ಮಾಡುವುದೇನು- ಉಪಾಯವಿಲ್ಲ' ಅಂತ ಉತ್ತರ ಕೊಟ್ಟರು. 'ಹಾಂಗಾದರೆ ಮಠದಿಂದ ನಿಮ್ಮಗೆ ೧೦೦ ರೂಪಾಯಿ ಸಾಲ ಕೊಡುತ್ತೇವೆ. ಅದು ತೆಗೆದುಕೊಂಡು ಕಾರ್ಯನಿರ್ವಾಹ ಮಾಡಿಕೊಳ್ಳಿರಿ. ಇಂಥ ಸುಸಂಧಿ ದೊರೆಯಲಾರದು. ಧರ್ಮಾಭಿಜ್ಞರಿಗೆ ಹೆಚ್ಚಿಗೆ ಹೇಳುವುದೇನು!' ಅಂತ ಪ್ರೋದ್ಬಲ ಮಾಡಿದರು. 'ಹಾಂಗಾದರೆ ಈ ದ್ರವ್ಯವನ್ನು ನಾನು ಆದವಾನಿಗೆ ಹೋದಮೇಲೆ ಕಳಿಸುತ್ತೇನೆ. ಅಲ್ಲಿವರೆಗೂ ತಡೆಯತಕ್ಕದ್ದು' ಅಂತ ಹೇಳಿದರು. ಹಾಂಗೆ ಮಾಡಿರಿ. ಇಷ್ಟೇ ಅಲ್ಲ, ಆದವಾನಿಗೆ ಹೋದಮೇಲೆ ಆರು ತಿಂಗಳ ಅವಧಿ ಕೊಡುತ್ತೇವೆ. ಆದರೆ ಈ ದಿನ ಏಕಾದಶೀ ಇರೋಣದರಿಂದ ನೀವು ಮತ್ತು ನಿಮ್ಮ ಯಾವತ್ಪರಿವಾರ ತಪ್ತಮುದ್ರಾ ಸ್ವೀಕರಿಸಿರಿ. ನಾಳೆ ಶ್ರೀಗಳವರು ಸ್ನಾನ ಮಾಡುವದಕ್ಕಿಂತ ಮೊದಲು ಪಾದಪೂಜಾ ನೆರವೇರಿಸಿರಿ. ನಂತರ ಪೂಜಾ ಸಮಯ ಸೂಚಿಸುತ್ತೇವೆ. ಪೂಜಾ ನೋಡಿಕೊಂಡು ತೀರ್ಥ ಪ್ರಸಾದ, ಫಲ ಮಂತ್ರಾಕ್ಷತ ಸ್ವೀಕರಿಸಿಕೊಂಡು ಮುಂದೆ ಕಾಶಿಗೆ ಹೋಗಬಹುದು ಅಂತ ಹೇಳಿದರು. ಒಳ್ಳೇದು ಅಂತ ಹೇಳಿದ ಮೇಲೆ ಇವರು ಮತ್ತು ಇವರ ಪರಿವಾರದವರು ಒಪ್ಪಿಕೊಂಡರು. ಹೆಸರುಗಳನ್ನು ಬರೆದುಕೊಂಡು ಮಠದ ಪದ್ಧತಿ ಪ್ರಕಾರ ಆ ಚೀಟಿಯನ್ನು ಶ್ರೀಗಳವರಿಗೆ ಕಳಿಸಿದರು ಮತ್ತು ಈ ೧೦೦ ರೂಪಾಯಿಗಳಿಗಾಗಿ ಒಂದು ಪತ್ರವನ್ನು ಬರೆದುಕೊಡಿರಿ ಅಂತ ಹೇಳಿದರು. ಒಳ್ಳೇದು ಅಂತ ಒಪ್ಪಿಕೊಂಡ ಮೇಲೆ 'ಪಾದಪೂಜಾ, ತಪ್ತಮುದ್ರಾ ಕಟ್ಟಲೆ ೨೫ ರೂಪಾಯಿಗಳಾಗುತ್ತದೆ. ಈ ಅಲ್ಪ ದ್ರವ್ಯವನ್ನು ಈಗಲೇ ಕೊಟ್ಟುಬಿಡಿರಿ' ಅಂತ ಅಂದರು. 'ತಥಾಽಸ್ತು' ಅಂತಾ ಹೇಳಲು ಅಂದು ತಮ್ಮ ಸ್ಥಲಕ್ಕೆ ಬಂದು ೨೫ ರೂಪಾಯಿ ತೆಗೆದುಕೊಂಡು ಹೋದರು. ಅಷ್ಟರಲ್ಲಿ ಮಠದ ಕಾಪಟ್ಯದ ಹೊಂಚು ಗೊತ್ತು ಮಾಡಿಕೊಂಡಿದ್ದರು. ಇವರು ಕೊಟ್ಟ ೨೫ ರೂಪಾಯಿ ತೆಗೆದುಕೊಂಡು ಹೋಗಿ ಬಾಕಿ ಆ ೧೦೦ ರೂಪಾಯಿಗಳಿಗಾಗಿ ಕೊಪ್ಪಳದಲ್ಲಿರುವ ವಕೀಲ ಹನುಮಂತರಾಯರಿಗೆ ಚೀಟಿ ಕೊಡಿರಿ ಅಂತ ಕೇಳಿದರು. 'ಸ್ವಾಮಿ, ನನಗೂ ಹನುಮಂತರಾಯರಿಗೂ ಯಾವ ವ್ಯವಹಾರವಿಲ್ಲ, ವ್ಯಾಪಾರಸ್ಥರಂತೆ (ಹುಂಡಿ) ಚೀಟಿ ಕೊಡಲು ಬರುವುದಿಲ್ಲ, ಕಿಂಚಿತ್ ವಿಶ್ವಾಸ ಮಾಡುವರೆಂದ ಮಾತ್ರಕ್ಕೆ ಈ ರೀತಿ ಚೀಟಿ ಕೊಡುವುದು ವ್ಯವಹಾರವಲ್ಲ, ನಾನು ಊರಿಗೆ ಹೋದನಂತರ ಕಳಿಸುತ್ತೇನೆ. ಈ ನನ್ನ ಮಾತಿನಲ್ಲಿ ವಿಶ್ವಾಸವಿದ್ದರೆ ಸರಿ, ಇಲ್ಲವಾದರೆ ನಾಳಿನ ನನ್ನ ಸಂಬಂಧಿ ಭೀಕ್ಷಾರಹಿತ ಮಾಡಿರಿ. ಈಗ ಕೊಟ್ಟ ರೂಪಾಯಿಗಳಿಗಾಗಿ ನಮ್ಮೆಲ್ಲರಿಗೂ

ಈಗ ತಪ್ತಮುದ್ರಾ ನಾಳೆ ಬೆಳಗು ಮುಂಜಾನೆ ಪಾದಪೂಜೆ ನೆರವೇರಿಸಿದರೆ ಸಾಕು' ಅಂತ ಕಿನ್ನಾಳ ಗೋವಿಂದಾಚಾರ್ಯರಿಗೆ ಹೇಳಿದರು. 'ಏನು ಮಾತು ಹೇಳುತ್ತೀರಿ ಶ್ರೀನಿವಾಸಚಾರ್ಯರೇ! ನಮ್ಮ ಮಾತಿನ ಮೇಲೆ ವಿಶ್ವಾಸವಿಲ್ಲವೇ! ಸ್ವಾಮಿಗಳು ಈ ರೀತಿ ಹೇಳಿ ಕಳಿಸಿದ್ದಾರೆ. ಆ ಮಾತಿನ ಪ್ರಕಾರ ನಿಮಗೆ ತಿಳಿಸಿದ್ದೇವೆ. ಈ ವಿಷಯದಲ್ಲಿ ನೀವಾದರು ಹೆಚ್ಚಿಗೆ ವಿಚಾರ ಮಾಡದೆ ಚೀಟಿ ಕೊಟ್ಟರಾಯಿತು' ಅಂತ ಹಿತೈಷಿಗಳಂತೆ ನಟಿಸಿದರು. 'ಸ್ವಾಮಿ! ನಾನು ಆ ರೀತಿ ಚೀಟಿ ಕೊಡುವುದು ಯೋಗ್ಯವಲ್ಲ, ಕೊಟ್ಟರೂ ಅರ್ಥಕಾರಿಯಾಗುವುದಿಲ್ಲ. ಇದರ ಮೇಲೆ ನಿಮ್ಮ ಇಚ್ಛಾ' ಅಂತ ಹೇಳಿದರು. 'ಚೀಟಿ ಕೊಡಿರಿ' ಅಂತ ನಾವೇ ಕೇಳಿ ಇಸಿದುಕೊಂಡ ಮೇಲೆ ಆ ಜವಾಬ್ದಾರಿ ನಮ್ಮದಾಯಿತು. ಆ ಚೀಟಿ ಪ್ರಕಾರ ರೂಪಾಯಿ ಬರಲಿ-ಬಿಡಲಿ, ಅದರ ಸಂಬಂಧಿ ಜವಾಬ್ದಾರಿ ನಿಮಗಿಲ್ಲ,' ಅಂತ ಕಾಗದ ಲೇಖಣಿ ಮುಂದೆ ಇಟ್ಟರು. 'ಈ ರೀತಿ ಚೀಟಿ ಕೊಡುವುದು ಯುಕ್ತವಲ್ಲ. ಕೊಟ್ಟರೂ ಅದಕ್ಕೆ ಗೌರವ ಬರುವುದಿಲ್ಲ ಮತ್ತು ನಿಮ್ಮಗೆ ೧೦೦ ರೂಪಾಯಿಗಳನ್ನು ಅವರು ಕೊಡಲಾರರು' ಅಂತ ಮತ್ತೆ ಒತ್ತಿ ಹೇಳಿದರು. 'ಏನಾದರೂ ಸರಿ, ನೀವು ಮಾತ್ರ ಚೀಟಿ ಕೊಡಿರಿ' ಅಂತ ಆಗ್ರಹದಿಂದ ಹೇಳಿದರು. 'ಸರಿ! ಹಾಂಗಾದರೆ ಬರೀ ಚೀಟಿ ಕೊಡುವದೊಂದೇ ನನ್ನ ಕೆಲಸವಾದರೆ ಲಂಡನ್‌ದಲ್ಲಿರುವ ಚಕ್ರವರ್ತಿಗಾದರೂ ಕೊಡುತ್ತೇನೆ, ತರಿಸಿಕೊಳ್ಳುವ ಸಾಮರ್ಥ್ಯ ತಮ್ಮದು' ಅಂತ ಹೇಳಿ ಕೊಪ್ಪಳದ ಹನುಮಂತರಾಯರಿಗೆ ೧೦೦ ರೂಪಾಯಿಗಳಿಗಾಗಿ ಚೀಟಿ ಬರೆದುಕೊಟ್ಟರು. ತಮ್ಮ ಕುಟಿಲತ್ವ ಸಾಧಿಸಿತೆಂದು ಮಠೀಯರು ಮನದಲ್ಲಿ ಹಿಗ್ಗಿ, 'ನೀವೆಲ್ಲರೂ ೧೦ ಗಂಟೆಗೆ ಸ್ನಾನ ಮಾಡಿಕೊಂಡು ಬಂದುಬಿಟ್ಟರೆ ತಪ್ತಮುದ್ರಾವಾಗುತ್ತದೆ. ಆಮೇಲೆ ಸ್ವಾಮಿಗಳವರ ಸ್ನಾನದ ನಂತರ ಹೇಳಿಕಳಿಸುತ್ತೇವೆ. ಆಗ ಬಂದು ಪೂಜಾ ನೋಡಿಕೊಂಡು ತೀರ್ಥ ಪ್ರಸಾದ ತೆಗೆದುಕೊಂಡು ಹೋಗಬೇಕು. (ದ್ವಾದಶೀ) ಪಾದಪೂಜಾ ನಿಮಿತ್ತ ನೀವು ರಾತ್ರಿ ಎರಡು ಗಂಟೆಯಾದ ಕೂಡಲೇ ಸ್ನಾನ ಮಾಡಿಕೊಂಡು ಬಂದರೆ, ಸ್ವಾಮಿಗಳವರು ಸ್ನಾನ ಮಾಡುವ ಪೂರ್ವದಲ್ಲಿ ಪಾದಪೂಜಾ ಮುಗಿಸಬೇಕು. ಇದಕ್ಕಾಗಿ ರಾತ್ರಿ ಒಂದು ಗಂಟೆಯಾದ ಮೇಲೆ ಒಬ್ಬ ದ್ವಾರಪಾಲಕನನ್ನು ಕಳಿಸುತ್ತೇವೆ. ಅವನು ಬಂದು ಸೂಚನಾ ಕೊಟ್ಟು ಪುನಃ ಸ್ವಾಮಿಗಳ ಸ್ನಾನದ ಸಮಯಕ್ಕೆ ನಿಮ್ಮನ್ನು ಕರೆದುಕೊಂಡು ಬರುತ್ತಾನೆ. ಅಷ್ಟರಲ್ಲಿ ನಿಮ್ಮ ಸ್ನಾನ ತೀರಿಸಿ ಸಿದ್ಧರಾಗಿರಿ. ಅನಂತರ ಪೂಜಾಕಾಲಕ್ಕೆ ಪುನಃ ಹೇಳಿಕಳಿಸುತ್ತೇವೆ. ಆಗ್ಗ ಬಂದು ಪೂಜಾ ನೋಡಿಕೊಂಡು ತೀರ್ಥ-ಪ್ರಸಾದ ಫಲ-ಮಂತ್ರಾಕ್ಷತ ಸ್ವೀಕರಿಸಿ ಕೃತ-ಕೃತ್ಯರಾಗಿ ಮುಂದೆ ಕಾಶಿಗೆ ಪ್ರಯಾಣ ಮಾಡಿರಿ' ಅಂತ ದಿವಾನ್ ಗೋವಿಂದಾಚಾರ್ಯರು ಅಂದರು. ಒಳ್ಳೇದು ಅಂತ ಹೇಳಿ ತಮ್ಮ ಸ್ಥಲಕ್ಕೆ ಬಂದು ಸ್ನಾನ ತೀರಿಸಿಕೊಂಡು ಸಿದ್ಧರಾಗಿ ಕುಳಿತರು. ಮಧ್ಯಾಹ್ನ ಸಮಯವಾದರೂ ಕರೆಯಲು ಬರಲಿಲ್ಲ. ಆದಾಗ್ಯೂ ಇವರೆ ತಮ್ಮ ಪರಿವಾರದೊಡನೆ ಮಠಕ್ಕೆ ಹೋದರು. ಆಗ ಸ್ವಾಮಿಗಳವರು ಶಿಷ್ಯರಿಗೆ ಪಾಠ ಹೇಳುತ್ತಾ ಕುಳಿತಿದ್ದರು. ಇವರು ನಿರೀಕ್ಷಿಸಿಕೊಂಡು ಅಲ್ಲಿಯೇ ಕುಳಿತರು. ಸ್ವಲ್ಪ ಹೊತ್ತಿನ ಮೇಲೆ ಇನ್ನೂ ಸ್ವಲ್ಪ ಜನ ತಪ್ತಮುದ್ರಾರ್ಥ ಬಂದರು. ಅವರಿಗೋಸ್ಕರ ಪಾಠ ಹೇಳುವುದನ್ನು ಸಂಕ್ಷೇಪ ಮಾಡಿ ತಪ್ತಮುದ್ರಾ ಪ್ರದಾನ ಮಾಡಿದರು. 'ಈ ನಮ್ಮ ಪರಿವಾರ

ಪೈಕಿ ಜಠರದ ಭೀಮರಾಯನಿಗೆ ಯಾತಕ್ಕೆ ತಪ್ತಮುದ್ರಾ ಪ್ರಧಾನ ಮಾಡಲಿಲ್ಲ' ಅಂತ ಕೇಳಲು, ಏನೋ ಸ್ವಾಮಿ! ಸ್ವಾಮಿಗಳವರ ಚಿತ್ತ! ಆ ಗೃಹಸ್ಥನನ್ನು ಇಲ್ಲಿಯೇ ಕುಳಿತುಕೊಳ್ಳಲು ಹೇಳಿರಿ. 'ಇನ್ನೊಮ್ಮೆ ತಪ್ತಮುದ್ರಾ ಪ್ರದಾನ ಮಾಡುವಾಗ ಈ ಗೃಹಸ್ಥನಿಗೂ ಹಾಕಿಸುವ ಪ್ರಯತ್ನ ಮಾಡುತ್ತೇವೆ' ಅಂತ ಮಠೀಯ ಒಬ್ಬ ಆಚಾರ್ಯರೂ ಹೇಳಿದರು. ಅದರಂತೆ ಆ ಭೀಮರಾಯನನ್ನು ಕುಳಿತುಕೊಳ್ಳಲು ಹೇಳಿ ಅವನ ಜೊತೆಯಲ್ಲಿ ಗದಗದ ಶೇಷಗಿರಿರಾಯನನ್ನೂ ಬಿಟ್ಟು ತಾವಿದ್ದ ಸ್ಥಲಕ್ಕೆ ಬಂದು ಬಿಟ್ಟರು. ಅನಂತರ ಸ್ವಾಮಿಗಳವರ ಸ್ನಾನ ಸಮಯದಲ್ಲಿ ಒಬ್ಬ ಆಚಾರ್ಯನು ಮುದ್ರಾವನ್ನು ಕಾಯಿಸಿಕೊಂಡು ಬಂದು ಸ್ವಾಮಿಗಳವರ ಕೈಯಲ್ಲಿ ಕೊಟ್ಟು 'ಈ ಗೃಹಸ್ಥನಿಗೆ ಮುದ್ರಾ ಪ್ರದಾನ ಮಾಡಬೇಕೆಂದು' ಹೇಳಿದನು. ಆಗ ಸ್ವಾಮಿಗಳು ಹುಬ್ಬುಗಂಟಿಕ್ಕಿ 'ಆ ಮುತ್ತಿಗಿ ಆಚಾರ್ಯನಿಗೆ ತಪ್ತಮುದ್ರಾ ಕೊಡಬಾರದಾಗಿತ್ತು. ಮುದ್ರಾ ಪ್ರದಾನ ಮಾಡುವ ಗುಂಪಿನಲ್ಲಿ ಅವರಿಗೆ ಆಯಿತು, ಉಪಾಯವಿಲ್ಲ. ಇವನಿಗೆ ಮುದ್ರಾ ಪ್ರದಾನ ಮಾಡುವದಿಲ್ಲ ಹೊರಟುಹೋಗು' ಅಂತ ರಭಸದಿಂದ ಅಂದದ್ದು ಕೇಳಿ ಆ ಭೀಮರಾಯ, ಶೇಷಗಿರಿರಾಯ ಹೊರಟು ಬಂದು ಅಲ್ಲಿ ಆದ ವಿಷಯವನ್ನು ನಿವೇದಿಸಿದರು. 'ಸರಿ; ಇನ್ನು ಮುಂದಿನ ವಿಷಯವನ್ನು ನೋಡೋಣ. ಅಂದು ಪೂಜಾ ಸಮಯದಲ್ಲಿ ಕರೆಯಲು ಬರಬಹುದೆಂದು ಪ್ರತೀಕ್ಷಾ ಮಾಡುತ್ತಾ ಕುಳಿತರು. ಮಠದಿಂದ ಯಾರೂ ಬರಲಿಲ್ಲ. ಮತ್ತು ರಾತ್ರಿ ಪಾದಪೂಜಾ ನಿಮಿತ್ತವಾಗಲಿ, ಪೂಜಾ ನಿಮಿತ್ತವಾಗಲಿ (ದಿವಾನ್ ಗೋವಿಂದಾಚಾರ್ಯ ಹೇಳಿದ ಮಾತಿನಂತೆ) ಯಾರೂ ಕರೆಯಲು ಬರಲಿಲ್ಲ. ಇದು ಮಠದ ಕಾಪಟ್ಯವೆಂದು ಮನಗೊಂಡು ದ್ವಾದಶೀಪಾರಣೆಗಾಗಿ ತಮ್ಮಲ್ಲಿ ಅಡಿಗೆ ಆರಂಭ ಮಾಡಿಸಿ ತಮ್ಮ ದೇವತಾರ್ಚನೆ, ನೈವೇದ್ಯ ಯಾವತ್ತೂ ಮುಗಿಸಿಕೊಂಡು ಮಠಕ್ಕೆ ಶೇಷಗಿರಿರಾಯರನ್ನು ಕರೆದುಕೊಂಡು ಹೋದರು. ಆಗ ಮಠದಲ್ಲಿ ಪೂಜಾ ಮುಗಿದು, ತೀರ್ಥ ಕೊಡುತ್ತಿದ್ದರು. ಆ ಗುಂಪಿನಲ್ಲಿ ಇವರಿಗೂ ತೀರ್ಥ ಹಾಕೋಣವಾಯ್ತು. ನಂತರ ಅವರ (ಸ್ವಾಮಿಗಳವರ) ದೃಷ್ಟಿಗೆ ಬೀಳಲು ಹುಬ್ಬುಗಂಟ್ಹಾಕಿದರು. ಅದು ಅವರ ದೃಷ್ಟಿಗೆ ಬಿದ್ದುದರಿಂದ ಚಾಣಾಕ್ಷರಾದ ಇವರು ಕೂಡಲೇ ಮಠದಿಂದ ಹೊರಬಿದ್ದು ತಮ್ಮ ಸ್ಥಲಕ್ಕೆ ಬಂದು ಪಾರಣೆ ಮಾಡಿಕೊಂಡು ಕಾಶಿಗೆ ಪ್ರಯಾಣ ಮಾಡಿದರು. ಕಾಶಿಯಲ್ಲಿ ಟೋಣಪೇ ಚಿಕ್ಕ ಬಾವೂ ಆಚಾರ್ಯರಲ್ಲಿ ಹೋದರು. ಅವರು ಆದರದಿಂದ ಸ್ವಾಗತಿಸಿ ತಮ್ಮ ಮನೆಯ ಸಮೀಪದಲ್ಲಿಯೇ ಇಳಿಸಿದರು.

೩೬. ಆಜ್ಞಾಪತ್ರ.

ಇತ್ತ ಗಯಾದಲ್ಲಿ ಮಠೀಯರು, ಇವರು ಕಾಶಿಗೆ ಹೋದದ್ದು ತಿಳಿದು ತಮ್ಮ ದ್ವಾರಪಾಲಕನ ಕೈಯಲ್ಲಿ ಒಂದು ಆಜ್ಞಾಪತ್ರವನ್ನು ಚಿಕ್ಕಭಾವು ಆಚಾರ್ಯರಿಗೆ ಬರೆದು ಕಳಿಸಿದರು. ಆ ದ್ವಾರಪಾಲಕನು ಚಿಕ್ಕಭಾವು ಆಚಾರ್ಯರಿಗೆ ಆ ಆಜ್ಞಾಪತ್ರವನ್ನು ಕೊಡಲು, ಆ ಭಾವು ಆಚಾರ್ಯರು ಆ ದ್ವಾರಪಾಲಕನೊಡನೆ ಇವರಲ್ಲಿ ಬಂದು 'ಶ್ರೀ ಉತ್ತರಾದಿಮಠದ ಸ್ವಾಮಿಗಳಿಗೆ ನಿಮ್ಮ ಮೇಲೆ ಪೂರ್ಣ ಕಟಾಕ್ಷವಿದ್ದಂತೆ ತೋರುತ್ತದೆ; ಅದಕ್ಕಾಗಿ ಮುದ್ದಾಂ ದ್ವಾರಪಾಲಕನ

ಸಂಗಡ ಆಜ್ಞಾಪತ್ರ ಬರೆಸಿ ಕಳಿಸಿದ್ದಾರೆ, ಅಂತ ಅಪಹಾಸ್ಯ ಮುಖದಿಂದ ನುಡಿದು ಆ ಆಜ್ಞಾಪತ್ರವನ್ನು ಓದಹತ್ತಿದರು. ಆ ಆಜ್ಞಾಪತ್ರವು ಕೆಳಗಿನಂತಿತ್ತು.

'ಶ್ರೀ ದಿಗ್ವಿಜಯರಾಮೋ ವಿಜಯತೇ'

ಶ್ರೀಮತ್ಪರಮಹಂಸೇತ್ಯಾದಿ ಅನೇಕ ಬಿರುದಾಂಕಿತ ಶ್ರೀಮದುತ್ತರಾದಿ ಮಠಾಧೀಶ ಶ್ರೀ ೧೦೮ ಶ್ರೀ ಸತ್ಯಜ್ಞಾನತೀರ್ಥಕರಪದ್ಮಸಂಜಾತ ಶ್ರೀ ೧೦೮ ಸತ್ಯಧ್ಯಾನತೀರ್ಥ ಶ್ರೀ ಪಾದಂಗಳವರು ಬರೆಸಿ ಕಳುಹಿಸಿದ ಆಜ್ಞಾಪತ್ರ ಕ್ರಮವೇನೆಂದರೆ,

ನಮಗೆ ಪ್ರಿಯತಮರಾದ ಉತ್ತರಾಧಿ ಮಠಾಧಿಕಾರಿ ಕಾಶಿಸ್ಥ ಚಿಕ್ಕಭಾವು ಆಚಾರ್ಯರಿಗೆ ಮಾಡುವ ನಾರಾಯಣ ಸ್ಮರಣೆಗಳು. ಸಾಂಪ್ರತ ಈಗ ನಿಮ್ಮಲ್ಲಿಗೆ ಆದವಾನಿಯ ಮುತ್ತಿಗಿ ಶ್ರೀನಿವಾಸಾಚಾರ್ಯರು ತಮ್ಮ ಪರಿವಾರದೊಡನೆ ಬಂದಿರಬಹುದು. ಅವರಿಗೆ ನೀವು ಯಾವ ತರಹದ ಸಹಾಯ ಮಾಡದೆ ನಿರಾಕರಿಸಬೇಕು. ಪಾಕ್ಷಿಕ ದ್ರವ್ಯಾಕಾಂಕ್ಷೆಯಿಂದ ಅವರನ್ನು ಬಿಡಲಾಗದಿದ್ದರೆ ನಿಮಗೆ ಶಕ್ಯವಿದ್ದಷ್ಟು ಸರ್ವತೋಪರಿಯಿಂದ ತೊಂದರೆ ಕೊಟ್ಟು ಅವರಿಂದ ದ್ರವ್ಯಹರಣ ಮಾಡಬಹುದು. ಮುಕ್ಕಾಂ: ಗಯಾ ಕ್ಷೇತ್ರ. ಪರಿಧಾವಿ ಸಂ. ಶ್ರಾವಣ ಶುಕ್ಲ ದ್ವಾದಶೀ ಅಂತ ಆ ಆಜ್ಞಾಪತ್ರದಲ್ಲಿದ್ದಂತೆ ಓದಿದರು, ಅದಕ್ಕೆ ಮಠದ ಮೊಹರು (Seal) ದಿವಾನರ ಸಹಿ ಇತ್ತು.

೩೭. ಆಜ್ಞಾಪತ್ರ ಪ್ರಭಾವ ಬೀರಲಿಲ್ಲ.

ಈ ಪತ್ರದ ಅಭಿಪ್ರಾಯವನ್ನು ಕೇಳಿದ ಇವರು "ಭಾವೂ ಆಚಾರ್ಯರೇ ನಮಗೆ ಅಪ್ಪಣೆ ಕೊಟ್ಟರೆ ನಾವೂ ಅನ್ಯತ್ರ ಹೋಗುತ್ತೇವೆ. ನೀವು ಮಠಾಧಿಕಾರಿಗಳು. ಅವರ ಆಜ್ಞಾಬದ್ಧರು" ಅಂತ ಅಂದರು. 'ಹೌದು, ಆಚಾರ್ಯರೆ! ನೀವೂ ಆಡುವದೆಲ್ಲವೂ ನಿಜವೇ. ಆದರೆ ಆ ಆಜ್ಞಾಪತ್ರವು ಕೇವಲ ಆಕ್ರೋಶ ಮೂಲಕ ಕುಟಿಲತ್ವದಿಂದ ಬರೆದಿದ್ದಾಗಿದೆ. ಈ ನಮ್ಮ-ನಿಮ್ಮ ಪರಿಚಯ ಈಗಿನದಲ್ಲ. ನಮ್ಮ ತಂದೆಗಳ ಕಾಲದಿಂದ ಬಂದಿದ್ದು, ಆಗಾಗ ನೀವೂ ಬಂದು ಹೋಗುತ್ತಿರುವುದು ನಮಗೆ ಗೊತ್ತೇ ಇದೆ. ಅವರ ಅಸೂಯದಿಂದ ಮಾಡಿದ ಆಜ್ಞಾಪತ್ರದಂತೆ ನಾವೂ-ನೀವೂ ನಡೆಯುವ ಕಾರಣವಿಲ್ಲ. ಇಲ್ಲಿ ನಿಮಗೆ ನಮ್ಮಿಂದ ಏನು ಸಹಾಯ ಬೇಕೋ ಅಷ್ಟೆಲ್ಲ ಸಹಾಯ ಮಾಡಲು ನಾವು ಸಿದ್ಧರಿದ್ದೇವೆ. ನಮ್ಮ ಪುರೋಹಿತ ವೃತ್ತಿ ಸಹಾಯವಲ್ಲದೆ ಮತ್ತೇನಾದರೂ ಹೆಚ್ಚಿನ ಸಹಾಯ ಬೇಕಾದರೂ ಕೊಡುವೆವು' (ಅಂದರೆ ದ್ರವ್ಯ ಬೇಕಾದರೂ ಕೊಡುವೆವು) ಅಂತ ಅಂದರು. ಭಾವೂ ಆಚಾರ್ಯರೇ! ನಮ್ಮ ನಿಮಿತ್ತ ಆ ಉತ್ತರಾದಿಮಠದಿಂದ ತೊಂದರೆ ನಿಮಗೆ ಯಾತಕ್ಕೆ? ಈಗ ನೀವೂ ಆಜ್ಞಾಪಾಲಿಸದ ಪಕ್ಷದಲ್ಲಿ ನಿಮ್ಮ ಮಠಾಧಿಕಾರವನ್ನು ಕಸಿದುಕೊಂಡು ನಿಮಗೆ ಅನಾನುಕೂಲತೆ ಕಲ್ಪಿಸಬಹುದು. ಅದಕ್ಕೆ ಅವಕಾಶ ಏಕೆ ಕೊಡುತ್ತೀರಿ? ನನಗೆ ಅಪ್ಪಣೆ ಕೊಟ್ಟರೆ ಅನ್ಯತ್ರ ಹೋಗಿಬಿಡುತ್ತೇವೆ ಎಂದು ಅಂದರು. 'ಛೇ.. ಛೇ.. ಈ ಕೆಲಸ ಕಾಲತ್ರಯದಲ್ಲಿ ಆಗಲಾರದು. ಈ ಮೂಲಕ ಅದೇನು ತೊಂದರೆ ಬರುವದೋ ಆ ವಿಚಾರ ನಾನು ನೋಡಿಕೊಳ್ಳುತ್ತೇನೆ. ಈಗ ನಿಮ್ಮ ಖರ್ಚಿಗೆ ಸ್ವಲ್ಪ ತೊಂದರೆ ಆಗುವಂತಿದ್ದರೆ

ಸಂಕೋಚವಿಲ್ಲದೆ ತಿಳಿಸಿರಿ. ನಿಮಗೆ ಬೇಕಾದಷ್ಟು ದ್ರವ್ಯ ಕೊಡುತ್ತೇನೆ' ಅಂತ ಹೇಳಿದರು. 'ಈಗ ನಿಮ್ಮ ದ್ರವ್ಯ ನಮಗೆ ಬೇಡ. ತೊಂದರೆಯೂ ಇಲ್ಲ. ಕದಾಚಿತ್ ಬೇಕಾದರೆ ತಾರು ಮಾಡಿ ತರಿಸಿಕೊಳ್ಳುತ್ತೇವೆ' ಅಂತ ಅಂದರು. ಆಗ ಚಿಕ್ಕಭಾವೂ ಆಚಾರ್ಯರು ಕಣ್ಣು ಸನ್ನೆ ಮಾಡಿ 'ನಿಮಗೆ ಎಷ್ಟು ದ್ರವ್ಯ ಬೇಕೋ ತೆಗೆದುಕೊಳ್ಳಿರಿ. ತಾರು ಮಾಡಿ ದ್ರವ್ಯ ತರಿಸಿಕೊಳ್ಳುವ ಪ್ರಯಾಸ ಬೇಡ' ಅಂತ ಅನ್ನುತ್ತ ೫೦೦ ರೂಪಾಯಿಗಳ ನೋಟುಗಳನ್ನು ಕೊಡಲು ಹೋದರು. 'ಹಾಂಗಾದರೆ ಇಷ್ಟು ದ್ರವ್ಯ ಕೊಡಲು ಸಿದ್ಧರಿರುವಿರೋ!' ಅಂತ ಕೇಳಲು 'ಅವಶ್ಯ ತೆಗೆದುಕೊಳ್ಳಿರಿ' ಅಂತ ಕೊಟ್ಟು, 'ಆ ನಿಮ್ಮ ಸ್ವಾಮಿಗಳು ಇನ್ನು ಈ ತರಹ ಆಜ್ಞಾಪತ್ರ ಕಳಿಸಬಾರದು, ಕಳಿಸಿದರೆ ಆ ಪತ್ರಕ್ಕೆ ಗೌರವ ಬರಲಾರದು. ಸನ್ಯಾಸರಾದುದಕ್ಕೆ ರಾಗ ದ್ವೇಷಗಳ ಪರಿತ್ಯಾಗ ಮಾಡುವದರ ಬದಲಿ ಹೆಚ್ಚಿಸಿಕೊಳ್ಳುವುದು ಯೋಗ್ಯವಲ್ಲ' ಅಂತ ಆ ದ್ವಾರಪಾಲಕನಿಗೆ ಹೇಳಿ ಆ ಆಜ್ಞಾಪತ್ರವನ್ನು ಭಂಗ ಮಾಡಿದರು. ಆ ದ್ವಾರಪಾಲಕನು ಗಯಾಕ್ಕೆ ಹೋಗಿ ಇಲ್ಲಿ ನಡೆದ ಎಲ್ಲ ವೃತ್ತಾಂತವನ್ನು ಹೇಳಿದನು. ಸ್ವಾಮಿಗಳೇ ಮೊದಲಾದ ಮಠಸ್ಥರು ಪರಸ್ಥಲದಲ್ಲಿಯೂ ಈ ಮುತ್ತಿಗಿ ಆಚಾರ್ಯರಿಗೆ ಮರ್ಯಾದೆ ಉಂಟಾಯಿತಲ್ಲ ಅಂತ ನೊಂದರು.

೩೮. ಬದರಿಗೆ ತೆರಳದೆ ಮರಳಿದರು.

ಕಾಶಿಯಲ್ಲಿ ಒಂದು ಸಪ್ತಕವಿದ್ದು ಮಾಡಬೇಕಾದ ಪಿತೃಕಾರ್ಯಗಳನ್ನು ಯಥೋಚಿತ ಮುಗಿಸಿ ಬದರಿಕಾಶ್ರಮಕ್ಕೆ ಹೋಗುವ ವಿಚಾರದಿಂದ ಅಯೋಧ್ಯಾಕ್ಕೆ ಪ್ರಯಾಣೋನ್ಮುಖರಾದರು. ಸ್ವಾಮಿ! 'ನಾನು ಅಶಕ್ತ ಬದರಿಕಾಶ್ರಮಕ್ಕೆ ಬರಲಾರೆ. ಇಲ್ಲಿಂದ ನನಗೆ ಅಪ್ಪಣೆ ಕೊಟ್ಟು ಯಾದಗಿರಿಯವರೆಗೂ ಟಿಕೀಟು ಕೊಡಿಸಿ ಮಾರ್ಗದ ಖರ್ಚಿಗಾಗಿ ೧೦ ರೂಪಾಯಿ ಕೊಟ್ಟರೆ ಸಾಕು' ಅಂತ ಭೀಮರಾಯನು ಕೇಳಿಕೊಂಡನು. 'ಹಾಂಗೇ ಆಗಲಿ' ಎಂದು ಶೇಷಗಿರಿರಾಯನಿಗೆ ಅಪ್ಪಣೆ ಮಾಡಿದರು. 'ಧನ್ಯನಾದೆ, ಪೂರ್ಣಾನುಗ್ರಹ ಮಾಡಬೇಕು. ನನಗಾಗಿ ಖರ್ಚು ಆದದ್ದು ಎಷ್ಟು ಎಂಬುದು ತಿಳಿಸಿದರೆ ತಾವು ಆದವಾನಿಗೆ ಬಂದ ಮೇಲೆ ತಮ್ಮಲ್ಲಿಗೆ ನಾನೇ ಬಂದು ತಮ್ಮ ದ್ರವ್ಯವನ್ನು ಸಮರ್ಪಿಸಿ ಕೃತ-ಕೃತ್ಯನಾಗುತ್ತೇನೆ' ಅಂತ ಕೇಳಿಕೊಂಡನು. ರೂ. ೭೫ ಆಗುವುದು ಎಂದು ಶೇಷಗಿರಿರಾಯರು ಸೂಚಿಸಿದರು. 'ಇನ್ನೂ ೨೫ ರೂಪಾಯಿ ನನ್ನ ಅಲ್ಪ ಸೇವಾ ಎಂದು ಸೇರಿಸಿ ೧೦೦ ರೂಪಾಯಿಗಳನ್ನು ಕಾರ್ತಿಕ ಮಾಸದಲ್ಲಿ ತಂದು ಸಮರ್ಪಣೆ ಮಾಡುತ್ತೇನೆ' ಅಂತ ನಮಸ್ಕಾರ ಮಾಡಿ ತನ್ನ ಗ್ರಾಮಕ್ಕೆ ಪ್ರಯಾಣ ಮಾಡಿದನು. ಇವರು ಅಯೋಧ್ಯಾ, ಹರಿದ್ವಾರಗಳಲ್ಲಿ ಮಾಡಬೇಕಾದ ಪಿತೃ ಕಾರ್ಯಾದಿಗಳನ್ನು ಮುಗಿಸಿಕೊಂಡು ಬದರಿಕಾಶ್ರಮ ಮಾರ್ಗವನ್ನು ಹಿಡಿದರು. ೩-೪ ದಿನಗಳು ಮಾರ್ಗಕ್ರಮಣ ಮಾಡಿ 'ಮೋಹನ ಚಿಟ್ಟಿ' ಎಂಬ ಸ್ಥಲ ಸೇರಿದರು. ಮರುದಿನ ಅಮಿತ ವಿಕ್ರಮರಾಯ ಶೇಷಗಿರಿರಾಯರನ್ನು ಕರೆದು 'ಈಗ ನಮಗೆ ಬದರಿಕಾಶ್ರಮಕ್ಕೆ ಬರುವುದು ಶ್ರೀ ಹರಿವಾಯುಗಳು ಅಪ್ಪಣೆ ಕೊಡಲಿಲ್ಲ. ಪ್ರಯುಕ್ತ ನಾವು ಹಿಂತಿರುಗುತ್ತೇವೆ, ನೀವು ಯಾರಾದರೂ ಹೋಗುವುದಾದರೆ ಹೋಗಿ. ನಿಮಗೆ ಬೇಕಾಗುವಷ್ಟು ದ್ರವ್ಯವನ್ನು ಕೊಡುತ್ತೇವೆ' ಅಂತ ಹೇಳಲು ಶೇಲಂ ವೆಂಕಟ ರಂಗಾಚಾರ್ಯರೊಬ್ಬರೆ ಬದರಿಕಾಶ್ರಮಕ್ಕೆ ಹೋಗುವವರಾದರು. ಉಳಿದವರೆಲ್ಲರೂ ಇವರ

ಹಿಂದೆಯೇ ಕುರುಕ್ಷೇತ್ರ, ಡಿಲ್ಲಿ, ಮಥುರ, ಗೋಕುಲ, ವೃಂದಾವನ ಮಾರ್ಗವಾಗಿ ಗೋದಾವರಿ ತೀರ ಪುಣತಾಂಬಾ ಮಾರ್ಗತ್ವೇನ ಆದವಾನಿಗೆ ಸುರಕ್ಷಿತವಾಗಿ ಸೇರಿದರು. ಅಮಿತ ವಿಕ್ರಮರಾಯರೇ ಮೊದಲಾದವರು ಇವರ ಅಪ್ಪಣೆ ಪಡೆದು ತಮ್ಮ ತಮ್ಮ ಗ್ರಾಮಗಳಿಗೆ ಹೋಗಿ ಸೇರಿದರು. ಗಯಾದಲ್ಲಿ ನಡೆಸಿದ ಉತ್ತರಾದಿ ಮಠದವರ ಕುಹಕಯುಕ್ತಿ ಕೊಪ್ಪಳ ಹನುಮಂತರಾಯರಿಗೆ ತಿಳಿಸಿದ್ದರಿಂದ ಆ ಮಠೀಯರು ನಾಲ್ಕಾರು ತಿಂಗಳ ನಂತರ ಆ ಚೀಟಿ ಸಂಬಂಧಿ ೧೦೦ ರೂಪಾಯಿ ಕೇಳ ಹೋಗಲು 'ನೀವು ಮಾಡಿದ ಮೋಸ ಕೃತ್ಯಗಳು ನಮಗೆ ತಿಳಿದಿವೆ. ಎಷ್ಟು ನಿರ್ಲಜ್ಜತನ' ಅಂತ ಉದ್ಗಾರ ತೆಗೆದರು. ಕೇಳಲು ಬಂದ ಆಚಾರ್ಯನು ಮೌನ ಮುಖದಿಂದ ಹೊರಟು ಹೋದನು.

೩೯. ಟಂಕಸಾಲಿ ಆಚಾರ್ಯರು ಶ್ರೀ ರಘುದಾಂತತೀರ್ಥರಾದರು.

ಕೆಲಕಾಲ ನಂತರ ಮಂತ್ರಾಲಯ ಮಾರ್ಗದ ಅಣು ಮಂತ್ರಾಲಯ ವಾಸಸ್ಥ ಶ್ರೀಮದಾರ್ಯ ಅಕ್ಷೋಭ್ಯತೀರ್ಥ ಮಠಾಧೀಶರಾದ ಶ್ರೀ ರಘುಕಾಂತತೀರ್ಥ ಶ್ರೀಪಾದಂಗಳವರಿಗೆ ಅಶಕ್ತಿಯಾದ ಮೂಲಕ ಈ ಚರಿತ್ರ ನಾಯಕರಾದ ಮುತ್ತಿಗಿ ಆಚಾರ್ಯರಿಗೆ ಯತ್ಯಾಶ್ರಮವನ್ನು ಕೊಟ್ಟು ತಮ್ಮ ಮಠಕ್ಕೆ ಅಧಿಪತಿಗಳನ್ನಾಗಿ ಮಾಡುವ ಇಚ್ಛಾದಿಂದ ತಮ್ಮ ಶಿಷ್ಯನಾದ ಆದವಾನಿಯ 'ರಾತನೇ ವೆಂಕೋಬಾಚಾರ್ಯ'ನೆಂಬ ತಹಶೀಲದಾರ (ಅಮಲ್‌ದಾರ) ನನ್ನು ಈ ಮುತ್ತಿಗಿ ಶ್ರೀನಿವಾಸಾಚಾರ್ಯರನ್ನು ತಮ್ಮಲ್ಲಿಗೆ ಶೀಘ್ರವಾಗಿ ಕರೆದುಕೊಂಡು ಬರುವುದಾಗಿ ಆಜ್ಞಾಮಾಡಿ ಕಳಿಸಿಕೊಟ್ಟರು. ಅವರು ಬಂದು, 'ನಮ್ಮ ಗುರುಗಳಾದ ಶ್ರೀ ರಘುಕಾಂತತೀರ್ಥ ಶ್ರೀಪಾದಂಗಳವರು ತಮ್ಮನ್ನು ಈಗಲೇ ಕರೆದುಕೊಂಡು ಬರುವುದಾಗಿ ಆಜ್ಞಾಮಾಡಿ ಕಳಿಸಿದ್ದಾರೆ. ತಾವು ಹೊರಡಬೇಕು' ಅಂತಾ ವಿಜ್ಞಾಪನಾ ಮಾಡಿಕೊಂಡನು. 'ಏನು ಕಾರಣ?' ಅಂತ ಕೇಳಿದರು. 'ಆ ವಿಷಯ ನನಗೆ ತಿಳಿಯದು. ಈ ಪ್ರಾತಃಕಾಲವೇ ಅಣುಮಂತ್ರಾಲಯದಿಂದ ಮುದ್ದಾಂ ನನ್ನನ್ನು ಕಳಿಸಿದ್ದಾರೆ. ನಾನು ಈ ೧೦ ಗಂಟೆಗೆ ಹೊರಡುವ ಮೇಲುಗಾಡಿಯಿಂದ ಹೋಗುತ್ತೇನೆ. ಆ ಸಮಯಕ್ಕೆ ತಾವೂ ಹೊರಡಬೇಕು' ಅಂತ ಹೇಳಿದನು. "ಒಳ್ಳೇದು, ಅಷ್ಟರಲ್ಲಿ ಸ್ನಾನ ಮುಗಿಸಿಕೊಂಡು ಪರಭಾರೆ ರೈಲ್ವೇ ಸ್ಟೇಶನ್ (Railway Station) ಗೆ ಬರುತ್ತೇನೆ" ಅಂತ ಹೇಳಿದರು. ಆ ಪ್ರಕಾರ ಗೃಹಸ್ಥನು ಇವರ ಸಲುವಾಗಿಯೂ ಟಿಕೀಟು ತೆಗೆದುಕೊಂಡು ಪ್ರತೀಕ್ಷಿಸುತ್ತಿದ್ದನು. ಆದರೆ, ಇವರು ದೇವತಾರ್ಚನೆ ಮಾಡಿಕೊಂಡು ಸ್ಟೇಶನ್ನಿಗೆ ಹೋಗುವಷ್ಟರಲ್ಲಿ ರೈಲುಗಾಡಿ ಹೋಗಿತ್ತು. ಅತ್ತ ಈ ಗಾಡಿಗೆ ಇವರು ಬಾರದ್ದರಿಂದ ನಿರುಪಾಯರಾಗಿ ಆ ಸಮಯದಲ್ಲಿ ಸೇರುವ ಜನಗಳಲ್ಲಿ ಯತ್ಯಾಶ್ರಮಕ್ಕೆ ಯಾರು ಯೋಗ್ಯರೆಂಬುದನ್ನು ಯೋಚಿಸುತ್ತಿರಲು ಯಾದಗಿರಿಯ ಶ್ರೀನಿವಾಸಾಚಾರ್ಯ ಟಂಕಸಾಲಿ ಎಂಬುವರು ಶ್ರೀ ರಘುಕಾಂತತೀರ್ಥರಲ್ಲಿ ಹೋಗಿ ನಮಸ್ಕಾರಮಾಡಿ, 'ಸ್ವಾಮಿ! ತಾವು ಈಗ ಆದವಾನಿ ಮುತ್ತಿಗಿ ಆಚಾರ್ಯರಿಗೆ ಯತ್ಯಾಶ್ರಮ ಕೊಟ್ಟು ಈ ಸಂಸ್ಥಾನಾಧೀಶರನ್ನಾಗಿ ಮಾಡುವ ಇಚ್ಛಾ ಮಾಡೋಣವಾಗಿತ್ತು. ಆ ಪ್ರಕಾರವಾಗಿದ್ದರೆ ಕಾಲಾಂತರದಲ್ಲಿ ಅವರಿಂದ ನಾನು ಯತ್ಯಾಶ್ರಮ ಸ್ವೀಕಾರ ಮಾಡುವ ಇಚ್ಛಾ ನನ್ನದಾಗಿತ್ತು. ಈಗ ಅವರು ಬಾರದ್ದರಿಂದ ನಮ್ಮ

ವಿಜ್ಞಾಪನಾ ತಾವು ಚಿತ್ತೈಸುವದಾದರೆ ನಿವೇದನಾ ಮಾಡಿಕೊಳ್ಳುತ್ತೇನೆ' ಅಂತ ಕೇಳಿದರು. 'ಅದೇನು!' ಅಂತ ಅವರು ಕೇಳಲು, "ತಾವು ಈಗ ನನಗೆ ಸನ್ಯಾಸಾಶ್ರಮ ಕೊಟ್ಟರೆ ಸ್ವಲ್ಪ ಕಾಲಾವಧಿಯಲ್ಲಿಯೇ ನಾನು ಅವರಿಗೆ (ಈ ಚರಿತ್ರ ನಾಯಕರಿಗೆ) ಸನ್ಯಾಸಾಶ್ರಮ ಕೊಟ್ಟು ಬಿಡುತ್ತೇನೆ ಈ ಮಾತು ಸತ್ಯ. ಇದಕ್ಕೆ ಶ್ರೀ ಹರಿವಾಯುಗಳು ಸಾಕ್ಷಿ" ಅಂತ ಶಪಥ ಕೈಕೊಳ್ಳಲು ಅವರು ಸಂತುಷ್ಟರಾಗಿ ಈ ಟಂಕಸಾಲೀ ಆಚಾರ್ಯರಿಗೆ ಯತ್ಯಾಶ್ರಮ ಕೊಟ್ಟು "ಶ್ರೀ **ರಘುದಾಂತ**" ತೀರ್ಥರೆಂದು ನಾಮಕರಣ ಮಾಡಿದರು. ತದಾರಭ್ಯ ಕೆಲವು ಕಾಲ ಗುರುಗಳ ಸನ್ನಿಧಾನದಲ್ಲಿ ಶಿಷ್ಯತ್ವ ಮಾಡಿಕೊಂಡಿರಲು ಆ ರಘುಕಾಂತತೀರ್ಥ ಶ್ರೀಪಾದಂಗಳವರ ಜಾಡ್ಯವು ದಿನ ಕ್ರಮೇಣ ಕಡಿಮೆಯಾಗುತ್ತಾ ನಡೆಯಿತು. ಆ ಮೇಲೆ ಇವರು ಚಾತುರ್ಮಾಸ್ಯ ಸಮೀಪಿಸಲು ತಮ್ಮ ಮಠೀಯ ದಿಗ್ವಿಜಯರಾಮಚಂದ್ರ ದೇವರೇ ಮೊದಲಾದ ಪ್ರತಿಮಾಗಳೊಂದಿಗೆ ಚಿಕ್ಕ ಸಂಸ್ಥಾನವೆಂಬ ಹೆಸರಿನಿಂದ ಶಿಷ್ಯರಿಗೆ ದೇಶ ಸಂಚಾರಾರ್ಥ ಅಪ್ಪಣೆ ಕೊಟ್ಟು ಕಳಿಸಲು, ಅದೇ ಸಮಯದಲ್ಲಿ ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಧ್ಯಾನ ತೀರ್ಥರು ಗದ್ವಾಲ ಎಂಬ ಸ್ಥಳದಲ್ಲಿ ಚಾತುರ್ಮಾಸ್ಯ ದೀಕ್ಷಾ ಸಂಕಲ್ಪಾರ್ಥ ಹೋಗುವ ಮಾರ್ಗತ್ವೇನ ರಾಯಚೂರಿನಲ್ಲಿ ಬಂದಿರಲು, ಈ ನೂತನ ಯತಿಗಳಾದ ಶ್ರೀ ರಘುದಾಂತತೀರ್ಥರು ತಮ್ಮ ಚಾತುರ್ಮಾಸ್ಯ ದೀಕ್ಷಾ ಸಂಕಲ್ಪಾರ್ಥ ರಾಯಚೂರಿಗೆ ಹೋದರು. ಆ ಉಭಯ ಯತಿಗಳು ನಾಲ್ಕಾರು ದಿವಸ ಕೂಡಿದ್ದು, ಮುಂದೆ ಶ್ರೀ ಸತ್ಯಧ್ಯಾನ ತೀರ್ಥರು ಗದ್ವಾಲಿಗೆ ಪ್ರಯಾಣ ಮಾಡಿ ಅಲ್ಲಿ ಚಾತುರ್ಮಾಸ್ಯ ದೀಕ್ಷಾ ಬದ್ಧರಾದರು.

೪೦. ಅಕ್ಷೋಭ್ಯತೀರ್ಥಮಠ 'ಆರ್ಯಮಠ'.

ಈ ರಘುದಾಂತತೀರ್ಥರು ರಾಯಚೂರಿನಲ್ಲಿ ಚಾತುರ್ಮಾಸ್ಯ ದೀಕ್ಷಾ ಸಂಕಲ್ಪ ಮಾಡಿಕೊಂಡು ಛಾವಣೀ ಫಕೀರಪ್ಪನವರ ಛತ್ರದಲ್ಲಿ ವಾಸ ಮಾಡಿಕೊಂಡಿದ್ದರು. ಅವರು ತಮ್ಮಲ್ಲಿದ್ದ ಯರಗೋಳ ವೆಂಕಪ್ಪನೆಂಬ ಶಿಷ್ಯನನ್ನು ಆದವಾನಿಗೆ ಕಳುಹಿಸಿ ಈ ಮುತ್ತಿಗಿ ಆಚಾರ್ಯರನ್ನು ಕರೆಸಿಕೊಂಡರು. ಇವರು ಬಂದ ಕೂಡಲೇ ಹರುಷದಿಂದ ಮೈಮರೆತು ತಾವು-ತಮ್ಮ ಪೂರ್ವಾಶ್ರಮದಲ್ಲಿ ಇವರಲ್ಲಿ ಯಾವ ಮರ್ಯಾದೆ ಮಾಡುತ್ತಿದ್ದರೋ ಆ ಪ್ರಕಾರ ಮರ್ಯಾದೆ ಮಾಡುವವರಾದರು. "ಈಗ ಸನ್ಯಸ್ತರಾಗಿರೋಣದರಿಂದ ಪೂರ್ವಾಶ್ರಮದಲ್ಲಿ ಮಾಡಿದಂತೆ ಈಗ ಮರ್ಯಾದೆ ಮಾಡಕೂಡದು. ಇದು ಲೋಕದಲ್ಲಿ ವ್ಯತ್ಯಾಸ ಕಾಣುತ್ತದೆ" ಅಂತ ಸಮಾಧಾನಗೊಳಿಸಿದರು. ಪುಲಕಾಂಕಿತರಾದ ಶ್ರೀ **ರಘುದಾಂತತೀರ್ಥರು** ಗದ್ಗದ ಸ್ವರದಿಂದ, **ಈ ಸನ್ಯಾಸ ಕವಚ** ತಮ್ಮದೇ, ಶ್ರೀ ಹರಿ ವಾಯುಗಳ ಸಂಕಲ್ಪಾನುಸಾರ ತಮ್ಮಿಂದಲೇ ಬೇರೆ ರೂಪದಿಂದ ಬಂದಿದೆ, ಎಂದು ಭಾವಿಸಿದ್ದೇನೆ. ಈ ಕವಚ ಪ್ರಥಮದಲ್ಲಿ ತಮಗೆ ಬಂದಿದ್ದರೆ ನಾನು ತಮ್ಮಲ್ಲಿ ಆಶ್ರಯ ಮಾಡಿಕೊಂಡಿದ್ದು ತಮ್ಮಿಂದ ಈ ಕವಚ ಪಡೆಯುವ ಅಭಿಲಾಷಾ ಇತ್ತು. ತಾವು ಆ ಸಮಯಕ್ಕೆ ಬರಲಿಲ್ಲವಾದ್ದರಿಂದ ತಮ್ಮದಾಗಿ ನಾನು ಸ್ವೀಕಾರ ಮಾಡಿದ್ದೇನೆ, ಆದದ್ದಾಯಿತು. ಇಂದಿನಾರಭ್ಯ ತಾವು ಈ ಮಠದಲ್ಲಿ ಸರ್ವಾಧಿಕಾರ ಮಾಡಿಕೊಂಡು ಇರಬೇಕು. ನಾನು ಕೇವಲ ಸಂಸ್ಥಾನ ದೇವರ ಪೂಜಾ, ಪಾಠ, ಪ್ರವಚನಾದಿ ಪಾರಮಾರ್ಥಿಕ

ಸಾಧನೆಯನ್ನು ಮಾಡಿಕೊಳ್ಳುತ್ತ ಇರುತ್ತೇನೆ. ತಾವು ಸಂಸ್ಥಾನದ ಎಲ್ಲ ವ್ಯವಹಾರ ಮಾಡುತ್ತಾ ಇರಬೇಕು. ಪ್ರಸಂಗವಶಾತ್ ನಾನು ತಮಗೆ ಯತ್ಯಾಶ್ರಮ ಕೊಟ್ಟು, ಈ ಸಂಸ್ಥಾನ ದೇವರ ಪೂಜಾದಿ ಸರ್ವಕಾರ್ಯಗಳನ್ನು ನಿಮಗೆ ವಹಿಸಿ ಕೊಡುತ್ತೇನೆ' ಅಂತ ಹೇಳುತ್ತ ತಮ್ಮ ಮಠದಲ್ಲಿದ್ದ ಎಲ್ಲ ಕಾರ್ಯಕರ್ತರನ್ನು ಕರೆದು 'ಇನ್ನು ಮುಂದೆ ಈ ಸಂಸ್ಥಾನದ ಸರ್ವಾಧಿಕಾರಿಗಳು ಈ ಮುತ್ತಿಗಿ ಆಚಾರ್ಯರೇ. ನೀವುಗಳೆಲ್ಲರೂ ಇವರ ಆಜ್ಞಾದಂತೆ ನಡೆಯತಕ್ಕದ್ದೆಂದು' ಹೇಳಿದರು, ಮತ್ತು ಆ ದಿನ ಸಾಯಂಕಾಲವೇ ಆ ಗ್ರಾಮಸ್ಥ (ರಾಯಚೂರದ) ಲೌಕಿಕ ವೈದಿಕರುಗಳನ್ನು ಕರೆಸಿ'ಈ ನಮ್ಮ ಆರ್ಯಅಕ್ಷೋಭ್ಯ ತೀರ್ಥ ಮಠದ ಸರ್ವಾಧಿಕಾರತ್ವವು ಇವರದೇ. ನಮ್ಮ ಮಠೀಯ ಕಾರ್ಯಕರ್ತರು ಅವರಲ್ಲಿ ಆಜ್ಞಾಬದ್ಧರು. 'ಕಿಂ ಬಹುನಾ' ನಾವು-ನೀವು ಸಹ ಇವರಿಗೆ ಆ ಮರ್ಯಾದಾ ನಡೆಸತಕ್ಕದ್ದು ಅಂತ ಹೇಳುತ್ತಾ ಈ ನಮ್ಮ ಮಠವು ದ್ರವ್ಯದಿಂದಲೂ, ಶಿಷ್ಯವರ್ಗದವರಿಂದಲೂ ನ್ಯೂನ ಇದ್ದಾಗ್ಯೂ ಗೌರವದಲ್ಲಿ ಉತ್ತರಾದಿ ಮಠದಗಿಂತಲೂ ಹೆಚ್ಚು. ಯಾಕೆಂದರೆ, ಶ್ರೀಮಟ್ಟೀಕಾಕೃತ್ಪಾದರೇ 'ಆರ್ಯಮಠ' ಅಂತ ಬಿರುದು ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ಉತ್ತರಾದಿ ಮಠದಗಿಂತಲೂ ಶ್ರೇಷ್ಠ. ಈವರೆಗೂ ಈ ಮಠದ ಪೂರ್ವ ಅಧಿಪತಿಗಳು ದೇಶ ಸಂಚಾರ ಮಾಡದೆ ಶಿಷ್ಯ ಸಂಪತ್ತನ್ನು ಹೆಚ್ಚಿಸಿಕೊಳ್ಳಲಿಲ್ಲ. ಇತ್ತೀಚೆಗೆ ನಮ್ಮ ಗುರುಗಳಾದ ಶ್ರೀ ರಘುಕಾಂತತೀರ್ಥರು ದೇಶ ಸಂಚಾರ ಮಾಡಿದಾಗ್ಯೂ ಉತ್ತರಾದಿ ಮಠದ ದೌರ್ಜನ್ಯದಿಂದ ಮೂಲೆಗೆ ಒತ್ತಲ್ಪಟ್ಟು, ಆ ಉತ್ತರಾದಿ ಮಠಾಧೀನ ಮಠವೆಂದೆನಿಸಿತ್ತು. ಇದುವರೆಗೂ ಆದದ್ದು ಆಗಿ ಹೋಯಿತು. ಇನ್ನು ಮೇಲೆ ಆ ರೀತಿ ಅಧೀನರಾಗದೆ ತಮ್ಮ ಸಂಪೂರ್ಣ ಸ್ವತಂತ್ರ ಪಡೆಯಲು ಮಾಡಬೇಕಾದ ತಪ್ತಮುದ್ರಾ ಪ್ರದಾನಾದಿ ಸರ್ವ ಕಾರ್ಯಕ್ರಮಗಳನ್ನು ಕೈಕೊಳ್ಳುವೆವು' ಅಂತ ಉದ್ಗಾರ ತೆಗೆದರು. ಈ ಮಾತುಗಳು ಉತ್ತರಾದಿಮಠ ಪಕ್ಷಪಾತಿಗಳಿಗೆ ಸಹನವಾಗದೆ ಅವರುಗಳು ಗದ್ವಾಲಿಯಲ್ಲಿರುವ ಶ್ರೀ ಶ್ರೀ ಸತ್ಯಧ್ಯಾನ ತೀರ್ಥರಿಗೆ ತಿಳಿಸಿದರು. ಆಗ ಅವರು ಆಕ್ರೋಶದಿಂದ 'ಆದವಾನಿಯ ಮುತ್ತಿಗಿ ಆಚಾರ್ಯನು ಅಲ್ಲಿ ಸೇರಿರುವದರಿಂದ ಆ ಸನ್ಯಾಸಿಯು ಈ ರೀತಿ ಹಾರಾಡುತ್ತಿರುವರು. ಈಗಿಂದೀಗಲೇ ನೀವು ಆ ಮಠಕ್ಕೆ ಹೋಗಿ, ಆ ಮುತ್ತಿಗಿ ಆಚಾರ್ಯನನ್ನು ಮಠದಿಂದ ಹೊರಗೆ ಕಳಿಸಿ, ಮೊನ್ನೆ ಮಾತಿನ ಭರದಲ್ಲಿ ಆಡಿದ್ದು ಹಿಂತೆಗೆದುಕೊಂಡಿದ್ದೇವೆಂದು ಹೇಳಿ, ನಮ್ಮ ಸನ್ನಿಧಾನಕ್ಕೆ ಬಂದು ಕ್ಷಮಾಪಣೆ ಕೇಳಿಕೊಳ್ಳುವವರಿಗೂ ನಮ್ಮ ಮಠಾಭಿಮಾನಿಗಳಾದವರು ಅವರಿಗೆ ಪ್ರೋತ್ಸಾಹ (ಗೌರವ) ಕೊಡಬಾರದೆಂಬುದಾಗಿ' ತಮ್ಮ ಮಠದ ದ್ವಾರಪಾಲಕನೊಂದಿಗೆ , ಮತ್ತೊಬ್ಬ ಆಚಾರ್ಯನನ್ನು ಕಳುಹಿಸಿ ಒಂದು ಪತ್ರವನ್ನು ಬರೆದು ಶ್ರೀ ಶ್ರೀ ರಘುದಾಂತ ತೀರ್ಥರಿಗೆ ಕೊಡಲು ಹೇಳಿದರು. ಆ ಉಭಯ ಬ್ರಾಹ್ಮಣರು ರಾಯಚೂರಿನಲ್ಲಿ ಶ್ರೀ ಉತ್ತರಾದಿ ಮಠಾಧೀಶರ ಸಂದೇಶವನ್ನು ಬೀರುತ್ತ ಈ ಶ್ರೀ ರಘುದಾಂತ ತೀರ್ಥರಲ್ಲಿಗೆ ಬಂದು, ಶ್ರೀ ಶ್ರೀ ಸತ್ಯಧ್ಯಾನ ತೀರ್ಥರ ಪತ್ರವನ್ನು ಕೊಟ್ಟರು. ಆ ಪತ್ರವು ಈ ರೀತಿ ಇತ್ತು.

೪೧. ಪತ್ರಕ್ಕೆ ಪ್ರತ್ಯುತ್ತರ.

ಆರ್ಯ ಅಕ್ಷೋಭ್ಯತೀರ್ಥ ಮಠದ ನೂತನ ಸನ್ಯಾಸಿಯಾದ ರಘುದಾಂತ ಒಡೆಯರಿಗೆ ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀ ಶ್ರೀ ಸತ್ಯಧ್ಯಾನ ತೀರ್ಥರು ಬರೆಸಿ ಕಳಿಸಿದ ಆಜ್ಞಾಪತ್ರವೇನಂದರೆ, 'ಇತ್ತೀಚೆಗೆ ಆದವಾನಿ ಮುತ್ತಿಗಿ ಆಚಾರ್ಯರ ಪ್ರೋದ್ಬಲದಿಂದ ಅನೇಕ ರೀತಿ ಅವ್ಯವಹಾರ ಮಾತುಗಳಾಡಿದ್ದಾಗಿ ತಿಳಿದುಬಂದಿದೆ. ಅದಕ್ಕಾಗಿ ಈಗಲೇ ಮುತ್ತಿಗಿ ಆಚಾರ್ಯರನ್ನು ನಿಮ್ಮ ಮಠದಿಂದ ಹೊರ ಕಳಿಸಿ ನಮ್ಮಲ್ಲಿಗೆ ಬಂದು ಕ್ಷಮಾಪಣೆ ಕೇಳಿಕೊಳ್ಳುವವರೆಗೂ ನಮ್ಮ ಮಠದಿಂದ ತಿರಸ್ಕರಿಸಿದ್ದೇವೆ' ಮುಕ್ಕಾಂ ಗದ್ವಾಲ, ಪ್ರಮಾದಿ ಸಂವತ್ಸರ ಶ್ರಾವಣ ಶುಕ್ಲ ತೃತೀಯಾ ಅಂತ ಬರೆದಿದ್ದನ್ನು ನೋಡಿದ ಶ್ರೀ ಶ್ರೀ ರಘುದಾಂತ ತೀರ್ಥರು ತಪ್ತರಾಗಿ ಉತ್ತರಾದ ಮಠದಿಂದ ಬಂದ ಬ್ರಾಹ್ಮಣರು ಮತ್ತು ಕೆಲವು ಗೃಹಸ್ಥ ವೈದಿಕರ ಸಮಕ್ಷಮ ಈ ಕೆಳಗಿನಂತೆ ತತ್ಕ್ಷತಿಯಾಗಿ ಉತ್ತರವನ್ನು ಬರೆದು ಕೊಟ್ಟರು. ಅದೇನೆಂದರೆ:

ಶ್ರೀ ಸತ್ಯಧ್ಯಾನ ತೀರ್ಥರಿಗೆ,

ಶ್ರೀಮದಾರ್ಯ ಅಕ್ಷೋಭ್ಯ ತೀರ್ಥ ಸಂಸ್ಥಾನಾಧೀಶರಾದ ಶ್ರೀ ರಘುದಾಂತತೀರ್ಥರು ಮಾಡುವ ನಾರಾಯಣ ಸ್ಮರಣೆಗಳು. 'ಈಗ ತಾವು ವಿದ್ಯಾ, ಧನ, ಗರ್ವ, ಅಧಿಕಾರ ಚತುಷ್ಟಯಗಳಿಂದ ದೊಡ್ಡವರಿರಬಹುದು. 'ಏಕೈಕಮಪ್ಯನರ್ಥಾಯ ಕಿಮೇಕತ್ರ ಚತುಷ್ಟಯಂ' ಅನ್ನುವಂತೆ ಇದೆ. ತಾವು ಹೇಗೆ ಒಂದು ಸಂಸ್ಥಾನಕ್ಕೆ ಅಧಿಪತಿಯಾಗಿದ್ದೀರೋ, ಅದರಂತೆ ನಾವು ಆರ್ಯ ಅಕ್ಷೋಭ್ಯ ಮಠಕ್ಕೆ ಅಧಿಪತಿ. ತಾವು 'ಮರ್ಕಟಸ್ಯ ಯದ್ವಾ ತದ್ವಾ ಭವಿಷ್ಯತಿ' ಅನ್ನುವಂತೆ ಮದ ಚತುಷ್ಟಯಗಳಿಂದ ತಮ್ಮ ಲಿಖಿತ ಪತ್ರವನ್ನು ಉಪಸಂಹಾರ ಮಾಡಿಕೊಂಡು ಕ್ಷಮಾಪಣಾ ಪತ್ರ ಕಳಿಸಿದರೆ ಸರಿ. ಇಲ್ಲವಾದಲ್ಲಿ ನಮ್ಮ ಧೋರಣೆಗನುಸರಿಸಿ ನಮ್ಮ ಪ್ರಭಾವವನ್ನು ಮನವರಿಕೆ ಮಾಡಿಕೊಡಲಾದೀತು.'

ಮುಕ್ಕಾಂ. ರಾಯಚೂರು ಪ್ರಮಾದೀ ಸಂವತ್ಸರ ಶ್ರಾವಣ ಶುಕ್ಲ ಪಂಚಮೀ ಅಂತ ಬರೆದು ಆ ಬ್ರಾಹ್ಮಣನ ಕೈಯಲ್ಲಿ ಕೊಟ್ಟು ಮನಬಂದಂತೆ ರೇಗಾಡಿದರು. ಆಗ ಈ ಮುತ್ತಿಗಿ ಆಚಾರ್ಯರೇ ಇನ್ನುಳಿದ ಅನೇಕರು ಶಾಂತರಾಗಲು ಎಷ್ಟು ಹೇಳಿದರೂ ಕೇಳದೆ ನುಡಿದರು. ಈ ವಿಷಯಗಳು ಆ ಬ್ರಾಹ್ಮಣದ್ವಯರಿಂದ ಒಂದಕ್ಕೆ ನಾಲ್ಕಾಗಿ ಹೇಳುತ್ತಲು ಆ ಪತ್ರವನ್ನು ಶ್ರೀ ಸತ್ಯಧ್ಯಾನತೀರ್ಥರು ನೋಡಿ, ಅತ್ಯಂತ ತಪ್ತರಾಗಿ ರಾಯಚೂರು ಮೊದಲಾದ ಕಡೆಗೆ ತಮ್ಮ ಮಠಾಧಿಕಾರಿಗಳಿಗೆ ಶ್ರೀ ರಘುದಾಂತ ತೀರ್ಥರಿಗೆ ಸತ್ಕಾರ ಮಾಡಬಾರದಾಗಿ ಆಜ್ಞಾಪತ್ರ ಕಳಿಸಿದರು.

೪೨. ಸಂಧಾನ ಸಂಧಿಸಿತು.

ಇತ್ತ ಶ್ರೀ ರಘುದಾಂತತೀರ್ಥರು ಚಾತುರ್ಮಾಸ್ಯ ದೀಕ್ಷಾ ಮುಗಿದ ಮೇಲೆ ಸಂಸ್ಥಾನ ಪದ್ಧತಿ ಪ್ರಕಾರ 'ಸುರಪುರ' ಪ್ರಾಂತಕ್ಕೆ ಸಂಚಾರ ಹೊರಡುವವರಾದರು. ಕಲಿಕಾಲಕ್ಕೆ ಅನುಸರಿಸಿ

ಜನಗಳಿಗೆ ಧರ್ಮಗಳಲ್ಲಿ ಆಸಕ್ತಿ ಮತ್ತು ಆಸ್ತಿಕ್ಯ ಬುದ್ಧಿ ಕಡಿಮೆಯಾಗುತ್ತಾ ನಡದೇ ಇದೆ. ಅದಕ್ಕೆ ಅನುಸರಿಸಿಯೇ ಉತ್ತರಾದಿ ಮಠದಿಂದ ಹೊರಟ ಆಜ್ಞಾ ಈ ರಘುದಾಂತತೀರ್ಥರ ಸತ್ಕಾರಾದಿಗಳ ಪ್ರತಿಬಂಧಕಕ್ಕೆ ಆಸ್ಪದವಾದದ್ದು ಎರಡು ಮೂರು ಸ್ಥಲಗಳಲ್ಲಿ ಅನುಭವಕ್ಕೆ ಬಂತು. ಕೇವಲ ವಿರಕ್ತತಾದಿಂದ ಸನ್ಯಸ್ತರಾಗದೆ, ದ್ರವ್ಯಾದಿ ವ್ಯಾಮೋಹಯುಕ್ತರಾದವರಿಗೆ, ಪರರಿಂದ ಸತ್ಕಾರವಾಗದಿದ್ದರೆ ಸ್ಥೈರ್ಯ ಸಾಲದೆ ಚಡಪಡಿಸುವುದು ಸ್ವಾಭಾವಿಕ. ಈ ಮೂಲಕ ರಘುದಾಂತತೀರ್ಥರ ಮನಸ್ಸು ಹೊಯ್ದಾಡುವುದು ಕಂಡು ಮುತ್ತಿಗಿ ಆಚಾರ್ಯರು ಕಾಡ್ಲೂರು ಎಂಬ ಕೃಷ್ಣಾ ತೀರದ ಗ್ರಾಮದಿಂದ ಮುಡಮಾಲಿ ಗ್ರಾಮಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಪ್ರಯಾಣ ಮಾಡುವವರಾದರು.

ಇತ್ತ ಶ್ರೀ ರಘುದಾಂತತೀರ್ಥರು ಸುರಪುರಕ್ಕೆ ಹೋಗಿ ತಮ್ಮ ವಿದ್ಯಾಗುರುಗಳಾದ 'ಯಳಮೇಲಿ ವಿಠಲಾಚಾರ್ಯ'ರ ಮುಖಾಂತರ ಉತ್ತರಾದಿ ಮಠಾಧೀಶ ಶ್ರೀ ಸತ್ಯಧ್ಯಾನ ತೀರ್ಥರ ಸಂಗಡ ಸಂಧಾನ (ರಾಜೀ) ಮಾಡಿಕೊಂಡರು. ಇವರಿಂದ ಈಗಿನವರೆಗೂ ಶ್ರೀ ರಘುದಾಂತತೀರ್ಥರು ಹಾರಾಡುತ್ತಿದ್ದುದು, ಈ ಮುತ್ತಿಗಿ ಆಚಾರ್ಯರ ಬೆಂಬಲದಿಂದಲೇ ಎಂಬುದು ದಾರಢ್ಯವಾಗಲು ಕಾರಣವಾಯಿತು.

೪೩. ರಾಮರಾಯ ಶಿಷ್ಯನಾದ, ಜೀರ್ಣೋದ್ಧಾರ ಸೇವೆಗೈದು ಧನ್ಯನಾದ.

ಹಿಂದುಸ್ತಾನದಲ್ಲಿ ಪ್ರಜಾರಾಜ್ಯವಾಗುವ ಮೊದಲು ಅನೇಕ ಚಿಕ್ಕ-ಪುಟ್ಟ ಸಂಸ್ಥಾನಗಳಿದ್ದವು. ಅವುಗಳ ಪೈಕಿ ನಿಜಾಮ ರಾಜ್ಯಕ್ಕೆ ಒಳಪಟ್ಟ 'ಮುಡಮಾಲಿ' ಎಂಬ ಚಿಕ್ಕ ಸಂಸ್ಥಾನದ ಸರ್ವಾಧಿಕಾರಿಯಾದ 'ರಾಮರಾಯ'ನೆಂಬ ಗೃಹಸ್ಥನು ಒಂದಾನೊಂದು ಕಾಲದಲ್ಲಿ ಮಂತ್ರಾಲಯದಲ್ಲಿ ಈ ಮುತ್ತಿಗಿ ಆಚಾರ್ಯನನ್ನು ಕಂಡು ತನ್ನಲ್ಲಿ ಬರುವುದಾಗಿ ವಿಜ್ಞಾಪನಾ ಮಾಡಿಕೊಂಡಿದ್ದನು. ಆ ಮೇರೆಗೆ ಕಾಡ್ಲೂರಿ ನಿಂದ 'ಮುಡಮಾಲಿ'ಯು ಸಮೀಪ ವಿದ್ದುದರಿಂದ ಅಲ್ಲಿಗೆ ಹೋಗುವವರಾದರು. ಆ ರಾಮರಾಯನು ಇವರು ಬಂದಿದ್ದರಿಂದ ಸಂತುಷ್ಟನಾಗಿ ಒಂದು ಸಪ್ತಕ (ವಾರ) ತನ್ನಲ್ಲಿರುವದಾಗಿ ಪ್ರಾರ್ಥಿಸಿ ಆ ಅವಧಿಯಲ್ಲಿ ಸಂಪ್ರದಾಯ ಪ್ರಕಾರ ಉಪದೇಶ ಹೊಂದಿ, ಶಿಷ್ಯನಾಗಿ 'ಇಂದಿನಾರಭ್ಯ ನನ್ನಲ್ಲಿ ಪರಮಾನುಗ್ರಹ ಮಾಡಿ, ತನು, ಮನ, ಧನದಿಂದ ನಾನು ಮಾಡುವ ಸೇವಾ ಸ್ವೀಕಾರ ಮಾಡಬೇಕು' ಅಂತ ವಿಜ್ಞಾಪನಾ ಮಾಡಿಕೊಂಡನು. ಒಳ್ಳೇದು ಎಂದು ಅವರು ಅಭಿವಚನ ಕೊಟ್ಟರು.

ಅಲ್ಲಿಂದ ಆದವಾನಿಗೆ ಬಂದ ಮೇಲೆ ಸ್ವಲ್ಪ ದಿನಗಳಲ್ಲಿಯೇ ಶ್ರೀಹರಿ ವಾಯುಗಳ ಸಂಕಲ್ಪಾನುಸಾರ ಈ ವಿಜಯರಾಯರ ಗುಡಿಯ ಜೀರ್ಣೋದ್ಧಾರ ಮಾಡುವ ಪ್ರಸಂಗ ಬಂತು. ಇದಕ್ಕಾಗಿ 'ಆ ಮುಡಮಾಲಿ ರಾಮರಾಯ'ನನ್ನು ಕರೆಸಿ ಪ್ರಸ್ತಾಪಿಸಲು, 'ಈ ಗುಡಿಯ ಜೀರ್ಣೋದ್ಧಾರಕ್ಕಾಗಿ ಎಷ್ಟು ದ್ರವ್ಯ ಬೇಕಾಗುವದೋ ಅಷ್ಟು ದ್ರವ್ಯವನ್ನು ನನ್ನೊಬ್ಬನಿಂದಲೇ ಸೇವಾ ಸ್ವೀಕರಿಸುವ ಅನುಗ್ರಹ ಮಾಡಬೇಕೆಂದು' ಪ್ರಾರ್ಥಿಸಿದನು. ಇದಕ್ಕೆ ೧೨೦೦ ರೂಪಾಯಿಗಳವರೆಗೂ ಬೇಕಾಗಬಹುದು. 'ಇಷ್ಟು ದ್ರವ್ಯ ಅನಾಯಾಸವಾಗಿ ಸಾಧ್ಯವಾಗುವ

ದಾದರೆ ಕೊಡು, ಪ್ರಯಾಸಪಟ್ಟು ಕೊಟ್ಟು, ಆ ಮೇಲೆ ಮನೋವೈಕಲ್ಯವಾಗಬಾರದು' ಅಂತ ಹೇಳಿದರು. 'ಇಷ್ಟೇ ಅಲ್ಲ, ಇದಕ್ಕೂ ಹೆಚ್ಚು ದ್ರವ್ಯ ಒದಗಿದರೂ ಚಿಂತೆಯಿಲ್ಲ. ಅಷ್ಟೂ ಸೇವಾ ನನ್ನಿಂದಲೇ ಸ್ವೀಕರಿಸಬೇಕು. ಅದರಿಂದ ನನಗೆ ಏನೂ ಆಯಾಸವಾಗುವದಿಲ್ಲ'ಅಂತ ಹೇಳುತ್ತ ಸಾಷ್ಟಾಂಗ ಪ್ರಣಾಮ ಮಾಡಿದನು. ಹಾಗೆಯೇ ಆಗಲಿ ಅಂತ ಆಶ್ವಾಸನ ಕೊಟ್ಟರು. ಕೂಡಲೇ ತನ್ನ ಗ್ರಾಮಕ್ಕೆ ಹೋಗಿ ೫೦೦ ರೂಪಾಯಿಗಳನ್ನು ಏಕದಾ ಕಳಿಸಿ ಕೊಟ್ಟು, ಯಾವ ಸಮಯಕ್ಕೆ ಎಷ್ಟು ದ್ರವ್ಯ ಬೇಕೆಂಬುದನ್ನು ಸಂಕೋಚಪಿಲ್ಲದೆ ಆಜ್ಞಾ ಮಾಡಿ, ಸೇವಾ ಸ್ವೀಕರಿಸಿ ಅನುಗ್ರಹ ಮಾಡಬೇಕೆಂದು ಪತ್ರವನ್ನು ಬರೆದನು. ಆ ಪ್ರಕಾರ ಆಗಾಗ ಬೇಕಾಗುವಷ್ಟು ದ್ರವ್ಯವನ್ನು ತರಿಸಿಕೊಂಡು, ಆಲಯ ನಿರ್ಮಾಣ ಮಾಡುವ ಕೆಲಸ ಪೂರ್ತಿಗೊಳಿಸಿದರು.

೪೪. ರಾಣಿ ದಾನಿಯಾದಳು.

ಈ ಅವಧಿಯಲ್ಲಿ ಒಮ್ಮೆ ಅಮಿತ ವಿಕ್ರಮರಾಯರು ಸ್ವಾದಿಗೆ ಹೋಗಿರಲು ಬೆಳಗಾವಿಯ 'ಬೀಳಗಿ ಕೃಷ್ಣ ರಾಯ'ನೆಂಬ ಗೃಹಸ್ಥನು ಜೊತೆ ಕಲೆತಿರುವಾಗ ತನ್ನ ಗುರುಗಳಾದ ಈ ಮುತ್ತಿಗಿ ಆಚಾರ್ಯರ ಜ್ಞಾನ, ಭಕ್ತಿ, ವೈರಾಗ್ಯದ ಸಾಧನ ಅತಿಶಯ ಗುಣಗಳನ್ನು ಹಾಗೂ ಹರಿವಾಯುಗಳ ಅನುಗ್ರಹ ಬಗೆಯನ್ನೂ ವಿವರಿಸಿದ್ದನು. ಇದನ್ನು ಕೇಳಿದಾರಭ್ಯ ಆ ಬೀಳಗಿ ಕೃಷ್ಣರಾಯನು ಇವರ ದರ್ಶನೋತ್ಕಟೇಚ್ಛಾ ಉಳ್ಳವನಾಗಿ ಸಮಯ ನಿರೀಕ್ಷಿಸುತ್ತಿದ್ದನು. (ಅಂದರೆ ರಜೆ ದೊರಕಬೇಕು. ಹಾಗೂ ದ್ರವ್ಯ ಅನುಕೂಲವಾಗಬೇಕು) ಆ ಸಮಯವಲ್ಲಿ ಉಭಯ ಅನುಕೂಲವಾಗೋಣದರಿಂದ ಪ್ರಯಾಣೋನ್ಮುಖನಾಗಿ ತಾನು ಹೊರಡುವ ವಿಚಾರವನ್ನು ತನ್ನ ಸ್ನೇಹಿತನಾದ B.D. ಶಾಮರಾಯನೆಂಬ ಗೃಹಸ್ಥನಿಗೆ ಹೇಳಿದನು. ಆತನೂ ಈತನೂ ಜೊತೆಯಾಗಿ ಆದವಾನಿಗೆ ಬಂದರು. ಅಮಿತ ವಿಕ್ರಮರಾಯನಿಂದ ಕೇಳಿದಂತೆ ಪ್ರತ್ಯಕ್ಷವು ಕಂಡುಬಂದದ್ದರಿಂದ ಅತ್ಯಂತ ವಿಶ್ವಾಸ ಉಂಟಾಗಿ ಆ ಉಭಯರು ಉಪದೇಶ ಹೊಂದಿ ಶಿಷ್ಯರಾಗಿ ತಮ್ಮ ಗ್ರಾಮವಾದ ಬೆಳಗಾವಿಗೆ ಹೋದರು. ಮರು ದಿವಸ B.D. ಶ್ಯಾಮರಾಯನ ಮತ್ತೊಬ್ಬ ಸ್ನೇಹಿತನಾದ 'ಪೇರೂರು ಗುಂಡೇರಾಯ'ನೆಂಬ ಬಿಜಾಪುರ ಗೃಹಸ್ಥನು, ಇವರನ್ನು ಈ ನಾಲ್ಕಾರು ದಿನಗಳು ಕಾಣಲಿಲ್ಲ? ಎಲ್ಲಿಗೆ ಹೋಗಿದ್ದಿ ಅಂತ ಪ್ರಶ್ನಿಸಲು ಆ ಶ್ಯಾಮರಾಯನು ಆದವಾನಿಗೆ ಹೋಗುವ ಕಾರಣ ಮೊದಲು ಮಾಡಿ ಬೆಳಗಾವಿಗೆ ತಿರುಗಿ ಬರುವವರೆಗೆ ಕೇಳಿದ ಮತ್ತು ನೋಡಿದ ಯಾವದ್ವೃತ್ತಾಂತವನ್ನು ಹೇಳಲು 'ಆ ಮಹನೀಯರ ದರ್ಶನ ನನಗೂ ಮಾಡಿಸು. ಇದಕ್ಕಾಗಿ ಈ ರಾತ್ರಿಯೇ ಪ್ರಯಾಣ ಮಾಡೋಣ' ಅಂತ ಹೇಳಿ ಪುನಃ ಶ್ಯಾಮರಾಯನೂ, ಗುಂಡೇರಾಯನೂ ಆದವಾನಿಗೆ ಬಂದರು. ಈ ಗುಂಡೇರಾಯನು ಸಹ ಉಪದೇಶ ಹೊಂದಿ ಶಿಷ್ಯನಾಗಿ 'ಈಗ ನಾನು 'ಢಫಳಾಪೂರ'ವೆಂಬ ಸಂಸ್ಥಾನದ ಕಾರಭಾರಿ (ದಿವಾನ್) ಇದ್ದೇನೆ. ಅಲ್ಲಿಯ ರಾಣೀ ಸಾಹೇಬರು ೬೦ ವರ್ಷ ಮೇಲ್ಪಟ್ಟು ಅತ್ಯಂತ ವೃದ್ಧರಾಗಿದ್ದಾರೆ. ಆಕೆಯು ಮರಾಠ ಕುಲದವಳಾದಾಗ್ಯೂ ಧರ್ಮವಾಸನಾ ವಿಶೇಷ, ತತ್ರಾಪಿ ತಮ್ಮಂಥಹರನ್ನು ಕಂಡರೆ ಅತ್ಯಂತ ಆನಂದ. ಈಗ ನಾನು ಹೋದ ಕೂಡಲೇ 'ಈ ನಾಲ್ಕಾರು ದಿನಗಳು ಎಲ್ಲಿಗೆ ಹೋಗಿದ್ದೆ?' ಅಂತ ಕೇಳುತ್ತಾರೆ. ಸರ್ಕಾರಿ ಕೆಲಸದ ನಿಮಿತ್ತ ಬೆಳಗಾವಿಗೆ

ಹೋಗಿದ್ದೆ. ಮತ್ತು ಅಲ್ಲಿಂದ ತಮ್ಮಲ್ಲಿಗೆ ಬಂದು ಹೋದ ವೃತ್ತಾಂತವನ್ನು ತಿಳಿಸಬೇಕಾಗುತ್ತದೆ. ಆಕೆಯು ಇದನ್ನು ಕೇಳಿದ ಕೂಡಲೇ 'ಆ ಮಹನೀಯರನ್ನು ಏತಕ್ಕೆ ಕರೆದುಕೊಂಡುಬರಲಿಲ್ಲ?' ಅಂತ ಕೇಳುತ್ತಾಳೆ. ಈಗ ಅವರು ಒಂದು ಗುಡಿಯ ಜೀರ್ಣೋದ್ಧಾರದ ಕಾರ್ಯದಲ್ಲಿ ತೊಡಗಿದ್ದಾರೆ. ಪ್ರಯುಕ್ತ ಕರೆದುಕೊಂಡು ಬರಲಾಗಲಿಲ್ಲ. ಆದಾಗ್ಯೂ ನಿಮ್ಮ ಪರವಾಗಿ ಆಮಂತ್ರಣ ಕೊಟ್ಟು ಬಂದಿದ್ದೇನೆ ಎಂದು ಹೇಳಬೇಕಾಗುವುದು. ಈ ನನ್ನ ಮಾತು ವ್ಯರ್ಥವಾಗದಂತೆ ಅನುಗ್ರಹ ಪೂರ್ವಕ ಆಶ್ವಾಸನ ಕೊಡಬೇಕೆಂದು' ವಿಜ್ಞಾಪನಾ ಮಾಡಿಕೊಂಡನು. 'ಒಳ್ಳೇದು' ಅಂತ ಅಭಿವಚನ ಕೊಟ್ಟರು. ಅದೇ ಪ್ರಕಾರ ರಾಣೀ ಸಾಹೇಬರಿಗೆ ಹೇಳಿದ್ದಕ್ಕೆ ತಾನು ಯಾವ ರೀತಿ ಊಹಿಸಿ ಹೇಳಿದ್ದೇನೋ, ಅದೇ ಪ್ರಕಾರ ರಾಣಿ ಸಾಹೇಬರು ಕೇಳಿದ್ದಲ್ಲದೆ, ಆ ಗುಡಿ ಜೀರ್ಣೋದ್ಧಾರ ಕಾರ್ಯ ನಂತರ ಮಾಡಬೇಕಾದ ವಿಧಿ (ಸಂಪ್ರೋಕ್ಷಣಾದಿ ವಿಧಿ)ಗೆ ಬೇಕಾಗುವ ದ್ರವ್ಯರೂಪ ಸೇವಾವನ್ನು ಸ್ವೀಕರಿಸುವ ವಿಜ್ಞಾಪನಾ ಮಾಡಿಕೊಳ್ಳಲು ಹೇಳಿದಳು. ಆ ಪ್ರಕಾರ ಗುಂಡೇರಾಯನು ನಿವೇದನಾ ಮಾಡಿಕೊಂಡನು.

೪೫. ಕಂಕಣಭಾಗ್ಯ ಕರುಣಿಸಿದರು.

ಇತಃ ಪೂರ್ವದಲ್ಲಿ ಈ ಚರಿತ್ರ ನಾಯಕರ ತಮ್ಮನಾದ (ಕಕ್ಕನ ಮಗ) ಹೂವಿನ ಹಡಗಲಿ ವಾಸಿಯಾದ, ರಿಕ್ತನಾದ ಮುತ್ತಿಗಿ ರಾಮಾಚಾರ್ಯ ಸ್ವರ್ಗವಾಸಿಯಾಗಿದ್ದರಿಂದ ಆತನ ಪುತ್ರಿ ಪದ್ಮಾವತಿ ಎಂಬ ೧೨ ವರ್ಷದ ವಯಸ್ಸಿನ ಕನ್ಯಾವನ್ನು ಕರೆದುಕೊಂಡು ಬಂದು ಸಂರಕ್ಷಣಾ ಮಾಡುತ್ತಿದ್ದರು. ಈ ವಿಜಯರಾಯರ ಗುಡಿಯ ಜೀರ್ಣೋದ್ಧಾರವಾದ ಮೇಲೆ ಮಾಡಬೇಕಾದ ಸಂಪ್ರೋಕ್ಷಣಾ ವಿಧಿಯ ಮಹೋತ್ಸವದಲ್ಲಿ ಈ ಪದ್ಮಾವತಿಯೆಂಬ ಕನ್ಯಾವನ್ನು ತಮ್ಮ ಶಿಷ್ಯನಾದ B.D. ಶ್ಯಾಮರಾಯನಿಗೆ ಕೊಟ್ಟು ಲಗ್ನ ಮಾಡಬೇಕೆಂದು ಸಂಕಲ್ಪಿಸಿ ಅದರಂತೆ ಆತನ ಆಪ್ತಮಿತ್ರರಿಗೂ, ತಮ್ಮ ಆಪ್ತಮಿತ್ರ ಶಿಷ್ಯವರ್ಗದವರಿಗೂ ತಿಳಿಸಲು ಆ ಹೂವಿನ ಹಡಗಲಿಯ ಮತ್ತೊಬ್ಬ ತಮ್ಮ ಮುತ್ತಿಗಿ ಶೇಷಾಚಾರ್ಯ (ಸ್ವರ್ಗವಾಸಿಯಾದ ಆ ಮುತ್ತಿಗಿ ರಾಮಾಚಾರ್ಯ ಸಹೋದರ) ಆದವಾನಿಗೆ ಬಂದು, ತಾವು ಈ ಪದ್ಮಾವತಿಯ ಲಗ್ನ ಭಾರವನ್ನು ವಹಿಸಿ ಯೋಗ್ಯ ವರನಿಗೆ ಪ್ರದಾನ ಮಾಡುವ ವಿಚಾರ ತಿಳಿದೆನು. ನಮ್ಮೆಲ್ಲರಿಗೆ ಅತ್ಯಂತ ಸಂತೋಷವಾಗಿದೆ. ರಿಕ್ತರಾದ ನಾವು ಆ ಕನ್ಯಾ ಲಗ್ನ ವಿಷಯವಾಗಿ ಆಲೋಚನಾಗ್ರಸ್ತರಾಗಿದ್ದೆವು. ಆದರೆ ಮತ್ತೊಂದು 'ನನ್ನ ವಿಜ್ಞಾಪನಾ ಮನ್ನಿಸಿ ನಮ್ಮ ಮೇಲೆ ಕೃಪಾ ಮಾಡಬೇಕೆಂದು ಪ್ರಾರ್ಥನಾ ಮಾಡಿಕೊಳ್ಳುತ್ತೇನೆ' ಅಂತ ಕೇಳಿಕೊಂಡನು. ಆ ಮಾತಿನ ಇಂಗಿತವನ್ನು ಅರಿತು 'ಆ ನಿನ್ನ ಪುತ್ರಿಗೆ ಯೋಗ್ಯನಾದ ವರನು ನನ್ನ ದೃಷ್ಟಿಯಲ್ಲಿಲ್ಲ. ನೀನು ವರ ಗೊತ್ತುಮಾಡಿಕೊಂಡು ಸಂಪ್ರೋಕ್ಷಣ ಕಾಲದಲ್ಲಿ ಬಂದರೆ ಆ ಖರ್ಚು ಸಹ ನಾನು ನೋಡಿಕೊಳ್ಳುತ್ತೇನೆ' ಅಂತ ಆಶ್ವಾಸನಾ ಕೊಟ್ಟರು. ಈ ಮಾತಿಗೆ ಸಂತುಷ್ಟನಾಗಿ' ನಮ್ಮ ಅಕ್ಕನ ಮಗನಾದ ಹೊಸಪೇಟೆಯ ಅಗ್ನಿಹೋತ್ರಿ ಹನುಮಂತಾಚಾರ್ಯನೆಂಬ ವರನಿಗೆ ಗೊತ್ತುಮಾಡಿ ಆ ಸಮಯದಲ್ಲಿ ಲಗ್ನ ಮಾಡುವ ಸಿದ್ಧತಾ ಮಾಡಿಕೊಂಡು ಬರುತ್ತೇನೆ. ಅಂತ ಹೇಳಿ ಹೋದನು. ಆ ಪ್ರಕಾರ ಶಾಲಿವಾಹನ ಶಕೆ ೧೮೩೬ನೇ ಆನಂದ ನಾಮ ಸಂವತ್ಸರ ಚೈತ್ರ ವದ್ಯ (ಕೃಷ್ಣಪಕ್ಷ) ಪಂಚಮಿ

ಸಂಪ್ರೋಕ್ಷಣಾ ವಿಧಿಯೊಂದಿಗೆ ಈ ಎರಡು ಲಗ್ನಗಳನ್ನೂ ವಿಜೃಂಭಣೆಯಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ತಮ್ಮ ಆಗಿನ ಮತ್ತು ಮುಂದಾಗುವ ಶಿಷ್ಯವರ್ಗವೆಲ್ಲ ಸೇರಿತು.

೪೬. ಪಿಶಾಚಿ ಪಲಾಯನಗೊಂಡಿತು, ಪ್ರಮೇಯ ಪ್ರವಹಿಸಿತು.

ಇದೇ ಸಂದರ್ಭದಲ್ಲಿ, ಈ ಪೂರ್ವದಲ್ಲಿ ಈ ಮುತ್ತಿಗಿ ಆಚಾರ್ಯರನ್ನು ಹಿಂಬಾಲಿಸಿ ಕೊಂಡು ಕಾಶೀ ಯಾತ್ರಾ ಮಾಡಿಬಂದಿದ್ದ 'ಜಠರ ಭೀಮರಾಯನ' ತಮ್ಮನಾದ ಆನಂದರಾಯನೂ ಮತ್ತು ಈತನ ಕಕ್ಕನ ಮಗನಾದ ನಾರಾಯಣ ಪೇಟೆಯಲ್ಲಿ ವಾಸವಾಗಿದ್ದ 'ಬೊಜ್ಜೀ ಗುರುರಾಜಾಚಾರ್ಯ'ರೆಂಬುವರು ಕುಟುಂಬ ಸಹಿತ ಸೇವಾ ನಿಮಿತ್ತ ಮಂತ್ರಾಲಯಕ್ಕೆ ಬಂದಿದ್ದರು. ಅವರಲ್ಲಿ ಈ ಆನಂದರಾಯನ ಹೆಂಡತಿಯಾದ ರಾಘಮ್ಮನಿಗೂ ಮತ್ತು ಗುರುರಾಜಾಚಾರ್ಯ ಕಕ್ಕಿ ದೊಂಡಮ್ಮನೆಂಬಾಕೆಗೂ ಪಿಶಾಚಗ್ರಸ್ತವಾಗಿದ್ದರಿಂದ ಸೇವಾಸಕ್ತರಾಗಿದ್ದರು. ಕೆಲವು ದಿನಗಳ ನಂತರ 'ಆದವಾನಿಯಲ್ಲಿರುವ ಈ ಮುತ್ತಿಗಿ ಆಚಾರ್ಯರಲ್ಲಿ ಶರಣು ಹೋಗು' ಎಂಬುದಾಗಿ ಗುರುರಾಜರು ಸ್ವಪ್ನದಲ್ಲಿ ಆಜ್ಞಾ ಮಾಡಿದ್ದ ಮೇರೆಗೆ, ಆ ಬೊಜ್ಜೀ ಗುರುರಾಜಾಚಾರ್ಯ ಹಾಗೂ ಆನಂದರಾಯನೂ ಕೂಡಿ ಆದವಾನಿಗೆ ಬಂದು ಶಿಷ್ಯರಾಗಿ ತಮ್ಮ ಅಣ್ಣ ಭೀಮರಾಯನು ಕಾಶಿಯಾತ್ರಾ ನಿಮಿತ್ತದ ಬಾಕಿ ಒಂದು ನೂರು ರೂಪಾಯಿ ಕೊಡುವದು ಈವರೆಗೂ ಆಲಸ್ಯವಾದದ್ದಕ್ಕೆ ಅಪರಾಧ ಕಾಣಿಕೆ ಎಂದು ಕಿಂಚಿತ್ ಹೆಚ್ಚು ದ್ರವ್ಯ ಸಮರ್ಪಿಸಿ ಪ್ರಸನ್ನತೆಯನ್ನು ಪಡೆದು ಈ ಸಂಪ್ರೋಕ್ಷಣ ಉತ್ಸವಕ್ಕೆ ಸರ್ವರೂ ಬಂದು (ಈ ಮುತ್ತಿಗಿ ಆಚಾರ್ಯರ ಅನುಗ್ರಹದಿಂದ) ಆನಂದರಾಯನ ಕುಟುಂಬ ರಾಘಮ್ಮ ಆ ಪಿಶಾಚಾ ಬಾಧದಿಂದ ಮುಕ್ತಳಾದಳು.

'ಧಫಳಾಪುರದ' ಸಂಸ್ಥಾನದ ಕಾರಭಾರಿ (ದಿವಾನ್)ಯಾದ ಪೇರೂರ ಗುಂಡೇರಾಯನು ತನ್ನ ಭಾವ ಮೈದುನ (ಬೀಗ) ನಾದ ವಿಜಾಪುರ ಡಾಕ್ಟರ್ ಮಂಗಳವೇಢ ಗೋವಿಂದರಾಯನನ್ನು ಈ ಸಂಪ್ರೋಕ್ಷಣಾ ಮಹೋತ್ಸವಕ್ಕೆ ಕರೆದುಕೊಂಡು ಬಂದನು. ಈ ಉಭಯರು ತಮ್ಮಲ್ಲಿಗೆ ಬರುವುದಾಗಿ ವಿಜ್ಞಾಪಿಸಿಕೊಂಡರು. ಇವರು ಒಳ್ಳೇದು ಅಂತ ಹೇಳಿದರು. ಆ ಮೇಲೆ ಸ್ವಲ್ಪ ದಿನಗಳಲ್ಲಿಯೇ ಈ ಗೋವಿಂದರಾಯನು ತನ್ನ ಪ್ರಥಮ ಪುತ್ರನಾದ 'ಕೃಷ್ಣನ' ಪ್ರಥಮ ಕೇಶಖಂಡನ (ಜಾವಳ) ಮಹೋತ್ಸವವನ್ನು ನಿಶ್ಚಯ ಮಾಡಿ, ಉತ್ಸವಕ್ಕೆ ಈ ಮುತ್ತಿಗಿ ಆಚಾರ್ಯರನ್ನು ಬರುವುದಾಗಿ ಆಮಂತ್ರಣ ಪತ್ರಿಕಾ ದ್ವಾರಾ ವಿಜ್ಞಾಪನಾ ಮಾಡಿಕೊಂಡನು. ಮತ್ತು ಅದೇ ಸಮಯದಲ್ಲಿ ಈ ಗುಂಡೇರಾಯನು ಸಹ 'ನಮ್ಮ ರಾಣಿಯು ತಮ್ಮ ದರ್ಶನಾಕಾಂಕ್ಷಿ ಯಾಗಿದ್ದಾಳೆ. ತಾವು ಗೋವಿಂದರಾಯನ ಮಗನ ಜಾವಳಕ್ಕೆ ಬಿಜಾಪೂರ (Bijapur) ಕ್ಕೆ ಬಂದಾಗ ನಾನೂ ಸಹ ಬಂದು ತಮ್ಮನ್ನು ಧಫಳಾಪುರಕ್ಕೆ ಕರೆದುಕೊಂಡು ಬರುತ್ತೇನೆ' ಅಂತ ಆಹ್ವಾನ ಕಳಿಸಿದನು. ಈ ಎರಡೂ ಸ್ಥಳಗಳಿಗೆ ಸಕುಟುಂಬ ಹೋಗುವವರಾದರು. ಈ ಜಾವಳಕ್ಕೆ ಗೋವಿಂದರಾಯನ ಸ್ನೇಹಿತರಾದ ಧಾರವಾಡ ಗೋವಿಂದರಾವ ಮೇಲಗಿರಿ ಕುಲಕರ್ಣಿ, ಹುಬ್ಬಳ್ಳಿಯ ವಿಠಲರಾವ್ ದೇಶಪಾಂಡೆ, ರಾಮರಾವ್ ಕುಲಕರ್ಣಿ ಕೊರ್ತಿ, ಬಾಗಲಕೋಟೆಯ

ಮಳಗಿ ಕೃಷ್ಣಾಚಾರ್ಯ ಹಾಗೂ ಮುಂಡೇವಾಡಿದಾಸರು ತಮ್ಮ ಕೆಲವು ಶಿಷ್ಯರ ಸಹಿತ ಬಂದರು. ವಿಜಾಪೂರದಲ್ಲಿ ಒಂದು ವಾರವಿದ್ದು ಈ ಸಮಯದಲ್ಲಿ ಈ ಮುತ್ತಿಗಿ ಆಚಾರ್ಯರು ಪ್ರಮೇಯ ವಿಷಯಗಳ ಅನುವಾದ ಮಾಡುವ ವಿಷಯವನ್ನು ಕೇಳಿ, 'ಈ ರೀತಿ ಸುಧಾ ಮಹಾಗ್ರಂಥಸ್ಥ ಪ್ರಮೇಯಗಳನ್ನೂ ಪ್ರವಾಹ ರೂಪೇಣ ಅನುವಾದ ಮಾಡುವ ಶಕ್ತಿಯು ಶ್ರೀ ಹರಿವಾಯುಗಳ ವಿಶೇಷ ಸನ್ನಿಧಾನ ದ್ಯೋತಕವಾಗಿದೆ' ಅಂತ ಅನ್ನುತ್ತ ಎಲ್ಲರೂ ಸಂತೋಷಪಟ್ಟರು.

೪೭. ರಾಣಿಯ ಕನಸು ನನಸಾಯಿತು.

ಈ ಸಂದರ್ಭದಲ್ಲಿ ಬಿಜಾಪುರದ 'ಮಣೂರು ನಾರಾಯಣರಾಯ'ನೆಂಬ ಪೋಲೀಸ ಅಧಿಕಾರಿಯು ಅಶಕ್ತನಾಗಿರಲು ಈತನಿಗೆ ಹೃದ್ರೋಗ ಎಂದು ಅಲ್ಲಿಯ ಡಾಕ್ಟರು (Civil Surgeon) ಹೇಳಿರೋಣದರಿಂದ, ಈ ಗೃಹಸ್ಥನ ವೃದ್ಧ ತಂದೆಯಾದ 'ರಾಮಚಂದ್ರ ರಾಯನು' ಗಾಬರಿಗೊಂಡು ಇವರನ್ನು (ಈ ಮುತ್ತಿಗಿ ಆಚಾರ್ಯರನ್ನು) ಪುತ್ರ ಭಿಕ್ಷಾ ಕೊಡಬೇಕೆಂಬುದಾಗಿ ಬೇಡಿಕೊಂಡನು. ಈಗ ನಾವು ಢಫಳಾಪುರಕ್ಕೆ ಹೋಗುವವರಿದ್ದೇವೆ. ನಾವು ಹೋಗುವಾಗ ನಮ್ಮ ಸಂಗಡ ನಿಮ್ಮ ಮಗನನ್ನು ಕುಟುಂಬ ಸಹಿತ ಕಳಿಸಿಕೊಡಿರಿ. ನಾವು ಹೇಳಿದಂತೆ ಸೇವಾ ಮಾಡುವರಾದರೆ ಶ್ರೀ ಹರಿವಾಯುಗಳು ಈ ವಿಪತ್ತಿನಿಂದ ಮುಕ್ತನನ್ನಾಗಿ ಮಾಡುವರೆಂದು ಅಭಯಕೊಟ್ಟರು. ಈ ಮಾತಿಗೆ ಆ ಗೃಹಸ್ಥನು ಸಂತುಷ್ಟನಾದನು. ಮುಂದೆ ಇವರು ಢಫಳಾಪುರಕ್ಕೆ ಹೋದರು. ಅಲ್ಲಿ ರಾಣಿಯು ಅತ್ಯಂತವಾಗಿ ರಾಜ ವೈಭವದ ಸತ್ಕಾರ ಮಾಡಿ ಒಂದು ಸಹಸ್ರ ರೂಪಾಯಿಗಳನ್ನು ಅರ್ಪಿಸಿದಳು. ಈ ರೂಪಾಯಿಗಳನ್ನು ಆ ಕಾರಭಾರಿಯಾದ (ದಿವಾನ) ಗುಂಡೇರಾಯನನ್ನು ಕರೆದು ಈ 'ರಾಜವಾಡೆ' ಅರಮನೆಯಲ್ಲಿ ಗುಡಿಯನ್ನು ಕಟ್ಟಿಸಿ 'ಬಲಪಾರ್ಶ್ವದಲ್ಲಿ ಸೀತಾಯುಕ್ತ ರಾಮಚಂದ್ರ, ಲಕ್ಷ್ಮಣ, ಹನುಮಂತ' ಈ ರೀತಿ ನಾಲ್ಕು ಪ್ರತಿಮಾಗಳನ್ನೂ ಪ್ರತಿಷ್ಠಾಪನಾ ಮಾಡಿರಿ, ಅದಕ್ಕಾಗಿ ಈ ಸಹಸ್ರ ರೂಪಾಯಿಗಳನ್ನು ವಿನಿಯೋಗ ಮಾಡಿರಿ' ಅಂತ ಹೇಳಿ ಆ ರೂಪಾಯಿಗಳನ್ನು ತಿರುಗಿ ಕೊಟ್ಟರು. ಇದನ್ನು ನೋಡಿದ ರಾಣಿಯು ಆನಂದಾಶ್ಚರ್ಯದಿಂದ 'ನಾನು ಗುಡಿ ಕಟ್ಟಿಸಿ ರಾಮ ಸೀತಾ ಲಕ್ಷ್ಮಣ ಮಾರುತಿ ದೇವರನ್ನು ಪ್ರತಿಷ್ಠಾಪನಾ ಮಾಡಬೇಕೆಂದು ಬಹುಕಾಲದಿಂದ ಅಂದುಕೊಂಡಿದ್ದೆ. ಈ ಮೊದಲು ಆಗಿಹೋದ ನಾಲ್ಕಾರು ಕಾರಭಾರಿಗಳಲ್ಲಿ ಹೇಳಿಕೊಂಡಿದ್ದೆ. ಆಗಿನವರ್‍ಯಾರೂ ಈ ಕಾರ್ಯದ ಕಡೆಗೆ ಲಕ್ಷ್ಯ ಸಹ ಕೊಡಲಿಲ್ಲ. ಪ್ರಯುಕ್ತ ವೃದ್ಧಳಾದ ನಾನು ಏನು ಮಾಡಬಲ್ಲೆ? ಎಂದು ಅಂದುಕೊಂಡು ಈ ಮನೋಭಿಲಾಷೆಯನ್ನು ನಿರಾಶಾದಿಂದ ಅಡಗಿಸಿಕೊಂಡಿದ್ದೆ. ತಾವು ಅದನ್ನು ಪ್ರಚೋದನ ಗೊಳಿಸಿ, ಆ ಕಾರ್ಯವು ನೆರವೇರುವಂತೆ ಮಾಡಿದ್ದಕ್ಕೆ ಧನ್ಯಳಾದೆ. ಆದರೆ, ಈಗ ತಮಗೆ ನಾನು ಸಮರ್ಪಿಸಿದ ಸೇವಾ (ದ್ರವ್ಯ)ವನ್ನು ತಾವೇ ತೆಗೆದುಕೊಳ್ಳಬೇಕು. ಆ ಗುಡಿಯು ಮತ್ತು ಆ ಪ್ರತಿಮಾಗಳ ನಿರ್ಮಾಣಕ್ಕಾಗಿಯೂ, ಪ್ರತಿಷ್ಠಾಪನಕ್ಕೂ ಬೇಕಾಗುವಷ್ಟು ದ್ರವ್ಯವನ್ನು ಈ ಸಂಸ್ಥಾನದ ಮೇಲ್ವಿಚಾರಣಾ ಅಧಿಕಾರಿಯಿಂದ ಪರವಾನಿಗಿ ಪಡೆದು ನೆರವೇರಿಸಲಿ. ಇದಕ್ಕಾಗಿ ತಮ್ಮ ಶಿಷ್ಯನಾದ ಗುಂಡೇರಾಯನಿಗೆ ಆಜ್ಞಾ ಮಾಡುವದಾಗಿ (ಮಹಾರಾಷ್ಟ್ರ ಭಾಷಾದಿಂದ)

ಕೇಳಿಕೊಂಡಳು. "ತಥಾಸ್ತು" ಎಂದು ಗುಂಡೇರಾಯನಿಗೆ ಆಜ್ಞಾ ಮಾಡಿದರು. ಆತನು ಪ್ರಯತ್ನ ಮಾಡಿ ೨೫ ಸಾವಿರ ರೂಪಾಯಿ ಮಂಜೂರು ಮಾಡಿಸಿ ಗುಡಿ ಕಟ್ಟಿಸಿದನು.

೪೮. ಸತ್ಸೇವೆ ಹೃದ್ರೋಗನಾಶಗೈಸಿತು.

ಇತ್ತ ಒಂದು ಸಪ್ತಕ ನಂತರ ಢಘಳಾಪುರದಿಂದ ಬಿಜಾಪುರಕ್ಕೆ ತಿರುಗಿ ಬರುವವರಾದರು. ಆಗ ಆ ಮಣೂರು ನಾರಾಯಣರಾಯನು ಸಕುಟುಂಬ ಇವರ ಸಂಗಡ ಆದವಾನಿಗೆ ಹಿಂಬಾಲಿಸಿದನು. ಇಲ್ಲಿ ವಿಜಯರಾಯರ ಗುಡಿಯಲ್ಲಿ ಸುಮಾರು ಒಂದು ತಿಂಗಳ ಸೇವಾ ನಂತರ ಒಂದು ದಿನ ಮಧ್ಯಾಹ್ನ 'ನಾವು ಸೇತು ಸ್ನಾನಕ್ಕೆ (ರಾಮೇಶ್ವರಕ್ಕೆ) ಹೊರಡತಕ್ಕ ದೈವಸಂಕಲ್ಪ ಕಂಡುಬಂದಿದೆ. ಈ ಯಾತ್ರಾಕ್ಕೆ ನೀವೂ ಬರೋಣದರಿಂದ ನಿಮ್ಮ ವ್ಯಾಧಿಯು ಪರಿಹಾರವಾಗುತ್ತದೆ. ಈ ಪ್ರಯಾಣವನ್ನು ೩ ದಿನಗಳಿಗಿಂತಲೂ ಹೆಚ್ಚು ಮುಂದುವರಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರಯಾಣಕ್ಕೆ ಸಿದ್ಧರಾಗಿರಿ' ಅಂತ ಏಕಾಏಕೀ ಹೇಳಿದರು. ಈ ಮಾತಿಗೆ ನಾರಾಯಣರಾಯನು ಒಪ್ಪಿಗೊಂಡು 'ಯಾತ್ರಾದ ಯಾವತ್ತೂ ಖರ್ಚು ನಾನು ವಹಿಸುತ್ತೇನೆ. ಈ ಸೇವಾ ನನ್ನಿಂದ ಸ್ವೀಕರಿಸಿ ಪರಮಾನುಗ್ರಹ ಮಾಡಬೇಕೆಂದು' ಕೇಳಿಕೊಂಡನು. 'ಈ ನಮ್ಮ ಪ್ರಯಾಣವು ಶ್ರೀ ಹರಿವಾಯುಗಳ ಸಂಕಲ್ಪಾನುಸಾರಿಯಾಗಿರೋಣದರಿಂದ ನಮ್ಮ ಖರ್ಚಿಗಾಗಿ ಶ್ರೀ ಹರಿವಾಯುಗಳು ಒದಗಿಸಿ ಕೊಡುತ್ತಾರೆ. ನೀವು ಯೋಚನೆ ಮಾಡುವ ಕಾರಣವಿಲ್ಲ. ಈ ನಿಮ್ಮ ವ್ಯಾಧಿಯ ಮೂಲಕ ನಿಮಗೆ (ನೌಕರೀ ಸಂಬಂಧಿ) ಆದಾಯವಿಲ್ಲವಾಗಿರೋಣದರಿಂದ ನಿಮ್ಮ ಖರ್ಚಿಗೆ ನೀವು ನೋಡಿಕೊಂಡರೆ ಸಾಕು' ಅಂತ ಹೇಳಿದರು 'ಸ್ವಾಮಿ! ನಾವು ಕೇವಲ ನೌಕರಿ ಪಗಾರದ ಮೇಲೆಯೇ ಅವಲಂಬನಾ ಮಾಡಿಕೊಂಡಿಲ್ಲ. ನಾವು ಮನೆತನದಿಂದ ಸಂಪನ್ನರಾಗಿದ್ದೇವೆ. ಆದ್ದರಿಂದ ಈ ಖರ್ಚಿನ ಭಾರ ನಾನೇ ವಹಿಸುತ್ತೇನೆ. ಈ ಸೇವಾ ಸ್ವೀಕಾರ ಮಾಡಿ ನನ್ನನ್ನು ಈ ವ್ಯಾಧಿಯಿಂದ ಮುಕ್ತನಾಗುವಂತೆ ಅನುಗ್ರಹ ಮಾಡಬೇಕೆಂದು' ಪುನಃ ವಿಜ್ಞಾಪನಾ ಮಾಡಿಕೊಂಡನು. 'ಸರಿ, ಹಾಗಾದರೆ ಈ ಫಲಕ್ಕೆ ನೀವೂ ಅಧಿಕಾರಿಗಳಾಗಿದ್ದ ಪಕ್ಷಕ್ಕೆ ಶ್ರೀ ಹರಿವಾಯುಗಳು ನಿಮ್ಮಿಂದಲೇ ಸೇವಾ ತೆಗೆದುಕೊಳ್ಳುವುದಕ್ಕೆ ಆಜ್ಞಾ ಮಾಡುತ್ತಾರೆ. ಹಾಗಾದ ಪಕ್ಷದಲ್ಲಿ ಸೇವಾ ಸ್ವೀಕಾರ ಮಾಡುವೆವು' ಅಂತ ಹೇಳಿ ಮರುದಿನ ಶ್ರೀ ಹರಿವಾಯುಗಳು 'ನಿಮ್ಮಿಂದಾ ಸೇವಾ ತೆಗೆದುಕೊಳ್ಳಲು ಆಜ್ಞಾ ಪ್ರದಾನ ಮಾಡಿದ್ದಾರೆ, ಸೇವಾ ಸ್ವೀಕಾರ ಮಾಡುತ್ತೇವೆ' ಅಂತ ವಚನ ಕೊಟ್ಟರು. ಈ ಮಾತಿಗೆ ಸಂತೋಷಪಟ್ಟು ಅದಕ್ಕೆ ಬೇಕಾಗುವ ದ್ರವ್ಯವನ್ನು ತಾರು (wire) ದಿಂದ ತರಿಸಿಕೊಂಡು, ಮೂರು ದಿನಗಳಲ್ಲಿಯೇ 'ಗದಗ ಶೇಷಗಿರಿರಾಯ' ಮತ್ತು 'ಕಾಡ್ಲೂರ ಹನುಮೇಶ'ನೆಂಬ ಹುಡುಗನು ಸಹ, ಅಂದರೆ ಸರ್ವರೂ (ಈ ಮುತ್ತಿಗಿ ಆಚಾರ್ಯರೂ ಅವರ ಕುಟುಂಬ ಕುಂ॥ ಸೌ॥ ಲಕ್ಷ್ಮೀಬಾಯಿ, ಪುತ್ರ ಸ್ವಾಮಿರಾಯ ಹಾಗೂ ಮಣೂರು ನಾರಾಯಣರಾಯ, ಆತನ ಕುಟುಂಬ ಕುಂ॥ ಸೌ॥ ರಾಧಾಬಾಯಿ) ಎಲ್ಲರೂ ಪ್ರಥಮದಲ್ಲಿ ತಿರುಪತಿ, ಘಟಿಕಾಚಲ, ನಾಮಕಲ್ (ಅಲ್ಲಿಂದ ಅಮಿತ ವಿಕ್ರಮರಾಯ ಆತನ ಕುಟುಂಬ ಮತ್ತು ಮಗಳು ಕುಂ॥ ಸೌ॥ ನಾಮಗಿರಿಬಾಯಿ ಅಂದರೆ ಮುತ್ತಿಗಿ ಆಚಾರ್ಯರ ಸೊಸೆ ಕುಂ॥ ಸೌ॥ ತುಂಗಾಬಾಯಿ) ಸಹಿತರಾಗಿ ಶ್ರೀರಂಗ, ಅಲ್ಲಿಂದ ಧನುಷ್ಕೋಟಿ (ಸೇತೂ)

ರಾಮೇಶ್ವರ ನೋಡಿಕೊಂಡು ಹೋದ ದಾರಿಯಿಂದಲೇ (ಹೋಗುವಾಗ ಮಾರ್ಗದಲ್ಲಿ ಹತ್ತಿದ ತೀರ್ಥ ಕ್ಷೇತ್ರಗಳಲ್ಲಿ ಮಾಡಬೇಕಾದ ವಿಧ್ಯುಕ್ತ ಕರ್ಮಗಳ ತೀರಿಸಿಕೊಂಡು) ತೀವ್ರಗತಿಯಿಂದ ನಾಮಕಲ್ಲಿಗೆ ಬಂದರು. ಅಲ್ಲಿಂದ ಅಮಿತ ವಿಕ್ರಮರಾಯ ತನ್ನ ಕುಟುಂಬ ಸಹ ಉಳಿದು, ಉಳಿದವರನ್ನು ಬೀಳ್ಕೊಟ್ಟನು. ಮುಂದೆ ಒಂದು ತಿಂಗಳು ಮಣೂರು ನಾರಾಯಣನನ್ನು ಆದವಾನಿಯಲ್ಲಿ ನಿಲ್ಲಿಸಿಗೊಂಡು ಆಮೇಲೆ ಅಪ್ಪಣೆ ಕೊಟ್ಟರು. 'ಧನ್ಯನಾದೆ' ಎಂದು ತನ್ನ ವ್ಯಾಧಿಯಿಂದ ಮುಕ್ತನಾಗಿ ಸ್ವಗ್ರಾಮ ಬಿಜಾಪುರಕ್ಕೆ ಹೋದನು. ಅಲ್ಲಿಂದ ತನ್ನ ಪ್ರಕೃತಿಯನ್ನು ವೈದ್ಯರುಗಳಿಂದ ಪರೀಕ್ಷಾ ಮಾಡಿಸಲು 'ಈ ವ್ಯಾಧಿಯಿಂದ ನೀವು ಮುಕ್ತರಾದದ್ದು ಆ ಮಹನೀಯರ ಅನುಗ್ರಹ ಬಲವೇ ಸರಿ' ಎಂದು ವೈದ್ಯರು ಆಶ್ಚರ್ಯ ವ್ಯಕ್ತ ಮಾಡಿದರು. ಈ ನಾರಾಯಣರಾಯನು ಪುನಃ ತನ್ನ ನೌಕರಿಯಲ್ಲಿ ಹಾಜರಾದನು.

೪೯. ರಾಮರಾಯ ಆರ್ಯರನ್ನು ಕೊಂಡಾಡಿದ.

ಕೆಲಕಾಲಾನಂತರ ಕೊರ್ತಿ ರಾಮರಾಯನ ಹೆಂಡತಿಯಾದ ಕುಂ।। ಸೌ।। ಗಂಗೂಬಾಯಿಯನ್ನು ಪಿಶಾಚಿಯು ಪೀಡಿಸುತ್ತಿತ್ತು. ಈ ದಂಪತಿಗಳು ಮಂತ್ರಾಲಯಕ್ಕೆ ಬಂದು ಸೇವಾ ಮಾಡುತ್ತಿರಲು 'ಆದವಾನಿ ಮುತ್ತಿಗಿ ಆಚಾರ್ಯರಲ್ಲಿ ಹೋಗುವುದಾಗಿಯೂ ಕಿಂಚಿತ್ ಅವರ ಮಹಾತ್ಮ್ಯವನ್ನು ಪರಿಚಯ ಮಾಡಿಕೊಂಡು ಸ್ತೋತ್ರ ಮಾಡುವದಾಗಿ'ಯೂ ಸ್ವಪ್ನವಾಗಲು, ಅಲ್ಲಿದ್ದ ಗದಗ ಶೇಷಗಿರಿರಾಯನನ್ನು ವಿಚಾರಿಸಲು ಆತನು ಅವರ ಮಹಾತ್ಮ್ಯೆಯನ್ನು ತಿಳಿಸಿದನು. ನಂತರ ಆ ಶೇಷಗಿರಿರಾಯನನ್ನು ಕರೆದುಕೊಂಡು ಮಂತ್ರಾಲಯದಿಂದ ಆದವಾನಿಗೆ ಬರುವಷ್ಟರಲ್ಲಿ (ಈ ರಾಮರಾಯನಿಗೆ ಕವಿತಾ ಮಾಡುವ ಶಕ್ತಿಯಿದ್ದುದರಿಂದ) ಎರಡು ಪದಗಳನ್ನು ಮಾಡಿಕೊಂಡು ಬೆಳಗು ಮುಂಜಾನೆ ಗಾಡಿಯಿಂದ ಬಂದು, ಬಾಗಿಲು ಮುಂದೆ ನಿಂತು ಈ ಸ್ತವನ ಹಾಡುವವನಾದನು. 'ಯಾರೋ! ಬಾಗಿಲು ಹೊರಗೆ ಹಾಡುವಂತಿದೆ' ಅಂದು ಬಾಗಿಲು ತೆಗೆದರು. ಕೂಡಲೇ ಶೇಷಗಿರಿರಾಯನು ಹಾಗೂ ರಾಮರಾಯನು ಸಾಷ್ಟಾಂಗ ನಮಸ್ಕಾರ ಮಾಡಿದರು. ಆಗ ಶೇಷಗಿರಿರಾಯನು ಈ ರಾಮರಾಯನ ಪರಿಚಯ ಮಾಡಿಕೊಟ್ಟನು. 'ನೀವು ಹಿಂದಕ್ಕೆ ವಿಜಾಪುರದಲ್ಲಿ ಗೋವಿಂದರಾಯನ ಮನೆಯಲ್ಲಿ ಬಂದಿರಲಿಲ್ಲವೇ ?' ಅಂತ ಪ್ರಶ್ನಿಸಿದರು. 'ಹೌದು ಸ್ವಾಮಿ' ಅಂತ ಒಪ್ಪಿಕೊಂಡನು. ಮರುದಿನ ಗುರೂಪದೇಶ ಹೊಂದಿ ಶಿಷ್ಯನಾದನು. ಅನಂತರ ಪುನಃ ಮಂತ್ರಾಲಯಕ್ಕೆ ಹೋಗುವದಾಗಿ ಅಪ್ಪಣೆ ಕೊಟ್ಟರು. ಅನಂತರ, ಹೋದ ಸ್ವಲ್ಪ ದಿನಗಳಲ್ಲಿ ಆತನ ಹೆಂಡತಿಯ ಪಿಶಾಚಾ ಬಾಧಾ ನಿವಾರಣೆಯಾಗಿ ಸ್ವಪ್ನದಲ್ಲಿ ಫಲ ಮಂತ್ರಾಕ್ಷತಾ ದೊರೆತ ಮೇಲೆ ತನ್ನ ಗ್ರಾಮಕ್ಕೆ ಹೋಗುವವನಾದನು.

ಈ ಚರಿತ್ರೆ ನಾಯಕರ ಮೇಲೆ ಮಾಡಿದ ಸ್ತುತಿ ಈ ರೀತಿ ಇದೆ.

೧. ಪದ : ರಾಗ : ಕೇದಾರಗವಳ ತಾಳ : ದೀಪಚಂದಿ

ಪೊಗಳಲೆನ್ನೊಶವಲ್ಲ ಪರಮ ಪಾವನರಾದ ಸುಗುಣ ಜಲಧಿ
ಶ್ರೀನಿವಾಸಾರ್ಯರ ।। ಪ।।

ಖಗಪಗಮನನ ರೂಪ ಗುಣಗಳ ಬಗೆ ಬಗೆಯಲಿಂದರಿತು ಕಾಣುತ। ಮಿಗೆ ಹರುಷದಿಂದಿರುವ ಗುರುಗಳ ಜಗವ ಮರೆವನಾಂತ ಚರಿತೆಯ ॥ ಅ.ಪ. ॥ ಕಲಿಯುಗದಲ್ಲಿ ಜ್ಞಾನ ಶೂನ್ಯರಾಗುತಾ ಜನ ತೊಳಲಿ ಬಳಲಿ ಭವದಿ ಮುಳುಗಿ ಗತಿ ಕಾಣದಿರಲು ಕಂಡು ನಳಿನನಾಭನುದಯದಿ। ತಾತ್ವರದಿ ॥ ಕಳುಹಿದನು ಧರೆಗಿವರ ಭಕ್ತಾವಳಿಯ ಹೃತ್ಪರಿತಾಪವನೆ ಶೀಘ್ರದಿ ತೊಳೆವದಕೆ ಜ್ಞಾನಾಮೃತದ ಬಳಲು ಮಳೆಗರೆಯುತಿಹ । ಮೇಘಪತಿಯು ॥೧॥ ಮೇದಿನಿಯೊಳುಳ್ಳ ತೀರ್ಥ ಕ್ಷೇತ್ರಂಗಳು ದ್ವಾದಶ ವತ್ಸರವು ಪಾದಚಾರಿಗಳಾಗಿ ಪರ್ಣಾಹಾರವ ಮಾಡಿ ಮೋದದಿ ತನು ದಂಡಿಸಿ। ಸಂಚರಿಸಿ ॥ ಮಾಧವನ ಮೆಚ್ಚಿಸಿದ ಬೆಳಗಲ್ ಸಾಧುವರ ದಯಜಾತರ ಅತ್ಯಗಾಧ ಮಹಿಮೆ ವಿಸ್ತರಿಸಲಿನ್ನೀ ಧರೆಯ ಜನರೇ ಸೈ ಸೈ ॥೨॥ ಮನೆ, ಧನ, ಧಾನ್ಯ ಅಷ್ಟೈಶ್ವರ್ಯಗಳನೆಲ್ಲ ತೃಣವೆಂದು ತಿಳಿದು ಬುಧ। ಜನರಿಗೆ ಕೊಟ್ಟು ರಿಕ್ತ ದಂಪತಿಗಳು ವನದಿ ತಪವಗೈಯುತ। ನಿತ್ಯದಾತಾ॥ ಮನೆಯನ್ನೈದು ಭಿಕ್ಷಾ ಬೇಡುತ ವಸತಿಗಿತ್ತುಪವಾಸವನು ದಿನದಿ ಹರಿಯಲಿ ಮೈಮರೆದು ಶ್ರೀ ವನಜನಾಭನೊಲಿಸಿ ನಿಲಿಸಿದ ॥೩॥ ವೇದಶಾಸ್ತ್ರಾರ್ಥದಿಂಗಿತವನರೆಯದ ಅಡ್ಡ ಹಾದಿಯು ಜನಪಿಡಿದು। ಓದನ ಧನದಾಸೆಯಲಿ ಪೇಳ್ವ ಕುವಾದಿಗಳಿಂ ಕತ್ತಲು। ತುಂಬಿರಲು॥ ಮೋದ ಮುನಿಹೃದ್ಗತ ಪ್ರಕಾಶದ ಭೋದನೆಯ ಕರುಣಾಕರಗಳಿಂ। ದೀ ಧರೆಯ ಬೆಳಗುತಿಹ ಭಕ್ತಾಹ್ಲಾದಕರ ಸೂರ್ಯೋದಯ ವಿದ್ಯೆ ॥೪॥ ಗೋವಿನ್ನ ಮರಡಿಯ ದೇವನ್ನ ಹೃದಯದೊಳ್ ಕೇವಲ ನಿಲ್ಲಿಸಿದ ಭಾವಿಕ ಜನರ ಕೃಪಾವಲೋಕನದಿಂದೆ ಪಾವನಗೈವರನ। ಶಕ್ತರನ ॥ ಭೂವಲಯದೊಳ್ ಮುತ್ತಿಗೀಯ ವಂಶಾಬ್ಧಿಯಮಣಿ ಆದವಾನಿ ಪುರಾವಲಂಬಗರಾರ್ಯರಲ್ಲದೆ ಯಾವತಾರದಲರಸಿ ಕಾಣೆನೋ ॥೫॥

"ಶ್ರೀ ಕೃಷ್ಣಾರ್ಪಣಮಸ್ತು"

೨ ಪದ ರಾಗ : ಕೇದಾರ ಗೌಳ ತಾಳ : ದೀಪಚಂದಿ

ಏನು ಬಣ್ಣಿಸಲೇನು ಸಾರುವದೀ। ಶ್ರೀನಿವಾಸಾರ್ಯರ ಮಹಿಯನು ॥ಪ॥ ದೀನ ಜನರನು ದೇಹಾನುಬಂಧಿಗಳಂತೆ ತಾನು ಪಾಲಿಸುವ ಕರುಣಾನಿಧಿಯನು ॥ ಅ.ಪ. ॥ ದುಷ್ಟ ಕರ್ಮಗಳಿಂದ ಭವದಿ ಸತತ। ಕಷ್ಟ ಸಹಿಪರೀ ಜನರು ಪದ ಕೆರಗುತ॥ ನಿಷ್ಠೆಯಲಿ ಸೇವಿಸುತ ಇಷ್ಟಾರ್ಥಗಳ ಪೊಂದಿ। ತುಷ್ಟರಾಗುವರು ಶಿಷ್ಟೇಷ್ಟರನು ॥೧॥ ಮುತ್ತಿಗೀ ಆಚಾರ್ಯ-ರಂಘ್ರಿಗಳನು। ಚಿತ್ತದಲಿ ನೆನೆಯ ದುರಿತಾವಳಿಯನು। ಕಿತ್ತು ಪುರುಷಾರ್ಥಗಳನಿತ್ತು ತನ್ನಯ ಪುರಕೆ। ಎತ್ತಿ ಕೊಂಡೊಯ್ವುದು ಸತ್ಯ ಹರಿಯ ॥೨॥ ಆವ ಸುರರೋ ಮುನಿಗಳಾರೋ ಇವರು ಪಾವನವ ಮಾಳ್ಪುದಕೆ ಬಂದಿಹರು। ಗೋವಿನ್ನ ಮರಡಿಯ ದೇವನಾಜ್ಞವವಂತು। ಈ ವಸುಂಧರಿಯ ಜನರಾವಳಿಯನು ॥೩॥

ಶ್ರೀ ಕೃಷ್ಣಾರ್ಪಣಮಸ್ತು

೫೦. ಸರ್ವಸ್ವದಾನಪ್ರದಾನ

ಇತ್ತ ಢಫಳಾಪುರ ರಾಣಿಯು ಗುಡಿ ಕಟ್ಟಿಸಿ, ಶ್ರೀರಾಮ ಸೀತಾ ಲಕ್ಷ್ಮಣ ಹನುಮಂತ ವಿಗ್ರಹಗಳನ್ನು ತರಿಸಿ ಪ್ರತಿಷ್ಠಾಪನಾ ಸಲುವಾಗಿ ಇವರನ್ನು ಬರುವುದಾಗಿ ಪ್ರಾರ್ಥಿಸಿಕೊಂಡಳು. ಇದಕ್ಕನುಸರಿಸಿ ತಮ್ಮ ಶಿಷ್ಯ ಪರಿವಾರದೊಡನೆ ಸುಮಾರು ೧೦೦ ಜನರ ಸಮೇತರಾಗಿ ರಾಜವಾಡೆಗೆ ಹೋಗಿ ಶಾಲಿವಾಹನ ಶಕೆ ೧೮೨೬ನೇ ಆನಂದ ನಾಮ ಸಂವತ್ಸರ ಅಶ್ವೀಜ ಕೃಷ್ಣಪಕ್ಷ ಪಂಚಮಿೂ ಶುಕ್ರವಾರ (ಕ್ರಿ.ಶ. ೧೯೧೪) ವಿಧಿಪೂರ್ವಕ ಪ್ರತಿಷ್ಠಾಪನಾ ಮಾಡಿ ಮಿರಜ ಮಾರ್ಗವಾಗಿ ಕೊಲ್ಹಾಪುರ ಶ್ರೀ ಮಹಾಲಕ್ಷ್ಮಿ ದೇವಿಯ ದರ್ಶನ ತೆಗೆದುಕೊಂಡು ಬೆಳಗಾಂ, ಧಾರವಾಡ, ಹುಬ್ಬಳ್ಳಿಯ ಅಶೇಷ ವೈದಿಕ ಲೌಕಿಕರಿಂದ ಸತ್ಕಾರ ಹೊಂದುತ್ತ ಆದವಾನಿಗೆ ಬಂದು ಸೇರಿದರು.

ಶ್ರೀ ವಿಜಯರಾಯರ ಗುಡಿಯ ಜೀರ್ಣೋದ್ಧಾರಕ್ಕಾಗಿ ಸಂಪ್ರೋಕ್ಷಣಾ ಮಾಡಲಾಗಿತ್ತಷ್ಟೆ. ಇದನ್ನು ಸರ್ವಸ್ವ ದಾನ ಮಾಡುವುದಾಗಿ ಶ್ರೀ ಹರಿವಾಯುಗಳ ಆಜ್ಞಾವಾಗಲು ತಮ್ಮ ಗುರುಗಳಾದ ಹತ್ತೀ ಬೆಳಗಲ್ ಅರಳಿಕಟ್ಟೆ ಆಚಾರ್ಯರ ಮೊಮ್ಮಕ್ಕಳಾದ 'ಹನುಮಂತ ಆಚಾರ್ಯ'ರನ್ನು ಸಕುಟುಂಬರಾಗಿ ಕರೆಸಿ, ಮನೆಯಲ್ಲಿ ಆ ಕುಟುಂಬಕ್ಕೆ ಒಂದು ಸಂವತ್ಸರಕ್ಕೆ ಸರಿ ಹೋಗುವಷ್ಟು ಅಕ್ಕಿ, ಬ್ಯಾಳಿ ಮೊದಲಾದ ಪದಾರ್ಥಗಳೊಡನೆ ಶಾಲಿವಾಹನ ಶಕೆ ೧೮೨೭ನೇ ರಾಕ್ಷಸ ನಾಮ ಸಂವತ್ಸರ ಮಾರ್ಗಶಿರ ಕೃಷ್ಣಪಕ್ಷ ಪ್ರತಿಪದ ಬುಧವಾರ (೧೮-೧೨-೧೯೧೫) ಪ್ರಾತಃಕಾಲ ಕೃಷ್ಣಾರ್ಪಣ ಪೂರ್ವಕ 'ಸರ್ವಸ್ವದಾನ'ವನ್ನು ಮಾಡಿ ತಾವು ಪೂರ್ವದಲ್ಲಿ ತಪಸ್ಸು ಮಾಡಿದ ಮಂಗರಾಯನ ಸನ್ನಿಧಿಗೆ ಪುತ್ರ ಕಳತ್ರ ಸಹ ಹೋಗುವವರಾದರು. ಈ ಹೋಗುವ ಮಾರ್ಗದಲ್ಲಿ ಆದವಾನಿಯ ಆಬಾಲವೃದ್ಧರು ಬಂದು ಪಾದಕ್ಕೆರಗುತ್ತ, 'ತಾವು ಈ ಊರು ಬಿಟ್ಟು ಹೋಗಕೂಡದು. ತಾವು ಇರಲೋಸುಗ ನಮ್ಮ ಮನೆಯನ್ನು ತಮಗೆ ಅರ್ಪಣ ಮಾಡುತ್ತೇವೆ. ಅಥವಾ ತಮಗೆ ಇಚ್ಛಾ ಬಂದ ಸ್ಥಲವನ್ನು ತೋರಿಸಿದರೆ ತಮ್ಮ ಇಷ್ಟದಂತೆ ನೂತನ ಮನೆ ನಿರ್ಮಾಣ ಮಾಡಿಕೊಡುತ್ತೇವೆ' ಅಂತ ಬೇಡಿಕೊಳ್ಳಹತ್ತಿದರು. ಶ್ರೀ ಹರಿವಾಯುಗಳ ಸಂಕಲ್ಪದಲ್ಲಿ ಎಲ್ಲಿ ಯಾವ ರೀತಿ ಇರಬೇಕೆಂದು ಕಂಡು ಬರುವದೋ ಅದರಂತೆ ಇರುತ್ತೇವೆಯೇ ಹೊರತು, ನಿಮ್ಮಗಳಿಂದ ಮನೆಯನ್ನು ತೆಗೆದುಕೊಂಡು ಇರುವದಾಗಿದ್ದರೆ ಈ ನನ್ನ ಮನೆಯನ್ನು (ಸರ್ವಸ್ವ) ದಾನ ಮಾಡುವ ಅವಶ್ಯಕತಾ ಏನಿತ್ತು?' ಅಂತ ಅವರಿಗೆ ಸಮಾಧಾನ ಹೇಳಿದರು. ಆದಾಗ್ಯೂ ಫಿಟ್ಟರ್ (Fitter) ಫಕೀರಪ್ಪನೆಂಬ ಲಿಂಗಾಯಿತ ಗೃಹಸ್ಥನು ಬಂದು 'ಹೆಂಗಸರ ಆಸ್ಪತ್ರೆ (ಸ್ತ್ರೀ ಚಿಕಿತ್ಸಾಲಯ Female Hospital) ಸಮಿೂಪದ ರೈಲ್ವೆ ಮಾರ್ಗಕ್ಕೆ ಹೊಂದಿಕೊಂಡು ನನ್ನ ಬಯಲು ಜಾಗವಿದೆ. ಅಲ್ಲಿ ನಾನು ಬಂಗ್ಲೆ ಕಟ್ಟಿಸಲು ಮುನಸೀಪಾಲಿಟಿಯಿಂದ (Plot) ಸ್ಥಲ ತೆಗೆದುಕೊಂಡಿದ್ದೇನೆ. ಅದನ್ನು ತಮಗೆ ಕೃಷ್ಣಾರ್ಪಣ ಪೂರ್ವಕ ಅರ್ಪಿಸುತ್ತೇನೆ. ಸ್ವೀಕರಿಸಬೇಕೆಂದು' ಪ್ರಾರ್ಥನಾ ಮಾಡುತ್ತಾ ಈ ದಂಪತಿಗಳಿಗೆ ಧೋತ್ರ, ಸೀರೆ, ಕುಪ್ಪಸ, ದಕ್ಷಿಣೆಯ ಸಂಗಡ ಮುಂದಿಟ್ಟು ನಮಸ್ಕಾರ ಮಾಡಿದನು.

'ಈ ನಿಮ್ಮ ಸ್ಥಲ ತೆಗೆದುಕೊಂಡೇನು ಮಾಡತಕ್ಕದ್ದು. ಅದನ್ನು ಕಟ್ಟಿಸುವದಕ್ಕೆ ನಮ್ಮಲ್ಲಿ ದ್ರವ್ಯವೆಲ್ಲಿ? ಶ್ರೀ ಹರಿವಾಯುಗಳ ಚಿತ್ತಕ್ಕೆ ಬಂದರೆ ಸ್ವೀಕರಿಸುತ್ತೇನೆ' ಅಂತ ಆತನಿಗೂ ಸಮಾಧಾನ ಹೇಳಿ ಮುಂದೆ ಪ್ರಯಾಣ ಮಾಡಹತ್ತಿದರು. ಈ ಸರ್ವಸ್ವ ದಾನ ಸಮಾರಂಭವನ್ನು ನೋಡುವದಕ್ಕಾಗಿ ತಮ್ಮ ಶಿಷ್ಯ ವರ್ಗದ ಬಿ.ಡಿ. ಶ್ಯಾಮರಾಯನೇ ಮೊದಲಾದ ಅನೇಕರು ಬಂದು ಅವರುಗಳು ಸಹ ಇವರನ್ನು ಹಿಂಬಾಲಿಸಿದರು. ಮಂಗರಾಯನ ಸನ್ನಿಧಿ ಹೋಗುವಷ್ಟರಲ್ಲಿ ಮಾರ್ಗ ಮಧ್ಯ ಅನೇಕ ಜನರು ತಮಗೆ ಇಷ್ಟ ಬಂದ ಪಾತ್ರೆ - ಪದಾರ್ಥಗಳನ್ನು ಅರ್ಪಿಸಿದರು. ಕೆಲವರು ಇವರಗಿಂತಲೂ ಮೊದಲೇ ಮಂಗರಾಯನ ಸನ್ನಿಧಿಯಲ್ಲಿ ಪಾತ್ರೆ, ಪದಾರ್ಥ, ಸೀರೆ, ಧೋತ್ರಗಳನ್ನು ತೆಗೆದುಕೊಂಡು ಬಂದು ನಿರೀಕ್ಷಿಸುತ್ತಾ ಇದ್ದು, ಇವರು ಬಂದ ಕೂಡಲೇ ಅವುಗಳನ್ನು ಅರ್ಪಿಸುವವರಾದರು. ಈ ಸಂದರ್ಭದಲ್ಲಿ 'ನನ್ನ ಮನೆಯ ಎದುರಿನಲ್ಲಿ ನೂತನವಾಗಿ ಕಟ್ಟಿಸಿದ ಬಂಗ್ಲೆಯನ್ನು ತಮಗೆ ಸಮರ್ಪಿಸುತ್ತೇನೆ. ತಾವು ಈ ಊರು ಬಿಟ್ಟು ಹೋಗುವದೆಂದರೆ ಕೃಷ್ಣನು ಗೋಕುಲದಿಂದ ತೆರಳುವಾಗ ಗೋಪಿಕಾ ಸ್ತ್ರೀಯರು ತಥಾ ಗೋಪರಿಗೆ ಆದ ವಿರಹ ತಾಪದಂತೆ ನಮ್ಮಗಳಿಗೆ ಆಗುತ್ತದೆ. ಆದ್ದರಿಂದ ದಯಮಾಡಿ ಈ ಗ್ರಾಮ ಬಿಡದೇ ನನ್ನ ಬಂಗ್ಲೆಯನ್ನು ಸ್ವೀಕರಿಸಿ ಉದ್ಧಾರ ಮಾಡಬೇಕು. ಅಥವಾ ಫಿಟ್ಟರ್ ಫಕೀರಪ್ಪ ಕೊಟ್ಟ ಸ್ಥಲದಲ್ಲಿ ಯಾವುದಾದರೂ ನೂತನ ಬಂಗ್ಲೆ ತಮ್ಮ ಇಷ್ಟದಂತೆ ಕಟ್ಟಿಸಿ ಕೊಡುತ್ತೇನೆ' ಅಂತ 'ತಾನಾಜಿ ರಂಗರಾಯನು' ಅಂಗಲಾಚಿ ಬೇಡಿಕೊಂಡನು. 'ಶ್ರೀ ಹರಿವಾಯುಗಳ ಚಿತ್ತದಂತೆ ನಾವು ನಡೆಯತಕ್ಕವರೆಂದು ನಿಮಗೆ ಗೊತ್ತೇ ಇದೆ. ಆದ್ದರಿಂದ ಈಗ ನಾವು ಯಾವ ಮಾತು ಹೇಳಲಾರೆವು. ಆ ಹರಿವಾಯುಗಳ ಸಂಕಲ್ಪ ತಿಳಿದು ನಂತರ ನಿಮಗೆ ಹೇಳುತ್ತೇವೆ' ಅಂತ ಉತ್ತರ ಕೊಟ್ಟರು. 'ತಮ್ಮನ್ನು ಇಲ್ಲಿಯೇ ಇರುವಂತೆ ಮಾಡಲೋಸುಗ ನಾವೆಲ್ಲರೂ ತಮ್ಮ ದ್ವಾರಾ ಮಂಗರಾಯನನ್ನು ಪ್ರಾರ್ಥನಾ ಮಾಡಿಕೊಳ್ಳುತ್ತೇವೆ' ಅಂತ ಗದ್ಗದ ಸ್ವರದಿಂದ ಮಂಗರಾಯನಿಗೆ ಸಾಷ್ಟಾಂಗವೆರಗಿದರು. ನೆರೆದಿದ್ದ ಅನೇಕ ಜನರು ಸಹ ಹೌದು - ಹೌದು ಎನ್ನುತ್ತಾ ಮಂಗರಾಯನಿಗೆ ಎಲ್ಲರೂ ಸಾಷ್ಟಾಂಗ ಪ್ರಣಾಮ ಮಾಡಿದರು. ಆ ದಿನ ನೆರೆದಿದ್ದ ಸರ್ವರೂ ಕೂಡಿ ಅಲ್ಲಿಯೇ ನೈವೇದ್ಯ ಮಾಡಿಸುವವರಾದರು. ಅಲ್ಲಿ ಸುಮಾರು ೫೦೦ ಜನರು ಇದ್ದರು. ಇಷ್ಟೇ ಅಲ್ಲ, ಆ ದಿನವೆಲ್ಲವೂ ಜನರು ಪಾತ್ರೆ ಪದಾರ್ಥಗಳನ್ನು ತಂದು ಸಮರ್ಪಿಸುವ ಸಮಾರಂಭವೇ ನಡೆದಿತ್ತು.

೫೧. ಶ್ರೀಕೃಷ್ಣದ್ವೈಪಾಯನರು ಪ್ರಸನ್ನರಾದರು. (ಯಂತ್ರದ ತಂತ್ರವನ್ನು ತಡೆದರು)

ನಾರಾಯಣಪೇಟೆಯ ಬೊಜ್ಜಿ ಗುರುರಾಜಾಚಾರ್ಯರೆಂಬುವನು ಇವರಿಗೆ ಶಿಷ್ಯನೆಂಬುದು ವಾಚಕರು ಬಲ್ಲರಷ್ಟೆ! ಅವರ ಮನೆಯಲ್ಲಿ ಗುಡಿ ಕಟ್ಟಿಸಿ ಶ್ರೀ ರಾಘವೇಂದ್ರ ಶ್ರೀಪಾದಂಗಳವರ ವೃಂದಾವನವನ್ನು ಪ್ರತಿಷ್ಠಾಪನಾ ಮಾಡಲೋಸುಗ ಅವರಿಗೆ ಆಜ್ಞಾ ಮಾಡಿದ್ದರು. ಆ ಮೇರೆಗೆ ಅವನು ಗುಡಿಯನ್ನು ಕಟ್ಟಿಸಿ ರಾಯರ ವೃಂದಾವನವನ್ನು ಪ್ರತಿಷ್ಠಾಪನಾ ಮಾಡಲೋಸುಗ ಇವರನ್ನು ಕರೆಯಲು ಬರತಕ್ಕವನಿದ್ದನು. ಅಷ್ಟರಲ್ಲಿ ಇವರಿಂದ ಸರ್ವಸ್ವ

ದಾನ ಮಾಡಲ್ಪಡುವ ವರ್ತಮಾನ ತಿಳಿದಿದ್ದರಿಂದ, ಈ ಸಮಾರಂಭವನ್ನು ನೋಡಲೋಸುಗ ಬಂದಿದ್ದನು. ಮತ್ತು ಮುಡಮಾಲಿ ರಾಮರಾಯನೂ ಈ ವಾರ್ತಾ ಕೇಳಿ, ಆತನೂ ಬಂದು ತನ್ನಲ್ಲಿಗೆ ಬರುವದಾಗಿ ಪ್ರಾರ್ಥಿಸಿದನು. ಈ ಉಭಯರ ಪ್ರಾರ್ಥನಾ ಅನುಸರಿಸಿ ಮರುದಿನವ್ರಾ ಮಂಗರಾಯನ ಸನ್ನಿಧಾನದಲ್ಲಿದ್ದು ಮೂರನೇ ದಿನ ಶ್ರೀ ವಾಯುದೇವರ ಆಜ್ಞಾ ಮೇರೆಗೆ ನಾರಾಯಣಪೇಟೆಯಲ್ಲಿ ರಾಯರವೃಂದಾವನ ಪ್ರತಿಷ್ಠಾಪನಾ ಮಾಡುವ ಸಲುವಾಗಿ ಪ್ರಯಾಣೋನ್ಮುಖರಾಗಿ ಈವರೆಗೂ ಶೇಖರವಾಗಿದ್ದ ಪದಾರ್ಥಗಳೆಲ್ಲವನ್ನು ತಾನಾಜಿ ರಂಗರಾಯನ ಬಂಗ್ಲೆಯಲ್ಲಿ ಆತನ ಪ್ರಾರ್ಥನಾ ಮೇರೆಗೆ ಇಟ್ಟು ಪ್ರಥಮದಲ್ಲಿ ಮುಡಮಾಲಿ, ಅಲ್ಲಿಂದ 'ಕುಸುಮೂರ್ತಿಗೆ' (ಶ್ರೀ ಕೃಷ್ಣದ್ವೈಪಾಯನ ತೀರ್ಥರ ಸನ್ನಿಧಾನಕ್ಕೆ) ಹೋಗುವವರಾದರು. ಈ ಸಂದರ್ಭದಲ್ಲಿ ಮುಡಮಾಲಿ ಸಮೀಪ 'ಉಂದೇಕೋಡ' ಎಂಬ ಗ್ರಾಮದ ಕುಲಕರ್ಣಿ ಹೈದ್ರಾಬಾದ ನವಾಬನ ಪರಧರ್ ಖಾಸ ಅಂಬರಪೇಟ ತಾಲೂಕ ಪೇಷ್ಕಾರ 'ಕಿಶನರಾವ್' (ಕ್ರಿಷ್ಣರಾವ್) ಇವರ ಪುತ್ರ ಹನುಮಂತರಾವ್ ಮತ್ತು ಈತನ ಭಾರ್ಯೆ ಕುಂ।। ಸೌ।। ವೆಂಕೋಬಾಯಿ ಈ ಉಭಯರನ್ನು ಜಾಡ್ಯವು ಪರಿಪರಿಯಿಂದ ಕಾಡುತ್ತಿರಲು ಸಂತ್ರಸ್ತರಾಗಿ ಅನೇಕ ರೀತಿಯಲ್ಲಿ ಚಿಕಿತ್ಸಾ ನಡೆಸಿದಾಗ್ಯೂ ಪ್ರಯೋಜನಕಾರಿಯಾಗಿರಲಿಲ್ಲ. ಯಾವ ಮಹನೀಯರಲ್ಲಿಯಾದರೂ ಹೋಗಿ ಸೇವಾ ಮಾಡಿ ಆ ಬಾಧಾದಿಂದ ಮುಕ್ತರಾಗುವ ವಿಚಾರದಲ್ಲಿದ್ದು ಆದವಾನಿಯ ಮುತ್ತಿಗಿ ಆಚಾರ್ಯರೆಂಬುವರು ಮಹನೀಯರಿದ್ದಾರೆ. ಅವರಲ್ಲಿ ಸೇವಾಕ್ಕೆ ಹೋಗಬೇಕೆಂದು ಸಂಕಲ್ಪಿಸಿ ಆದವಾನಿಗೆ ಬರುವದಾಗಿ ಹೊರಟಿದ್ದರು. ಈ ಸಮಯದಲ್ಲಿ ಈ ಮುತ್ತಿಗಿ ಆಚಾರ್ಯರೂ ಮುಡಮಾಲಿಗೆ ಬಂದಿದ್ದರು. ಅಷ್ಟರಲ್ಲಿ ಈ ಆಚಾರ್ಯರು ಶ್ರೀ ಕೃಷ್ಣದ್ವೈಪಾಯನತೀರ್ಥರ ಸನ್ನಿಧಾನವಾದ ಕುಸುಮೂರ್ತಿಗೆ ಹೋಗಿದ್ದರು. ಇದನ್ನು ತಿಳಿದು ಆ ದಂಪತಿಗಳು ಕುಸುಮೂರ್ತಿಗೆ ಬಂದು ತಮ್ಮಗಿರುವ ಪೀಡಾವನ್ನು ನಿವಾರಣ ಮಾಡಬೇಕೆಂದು ಬೇಡಿಕೊಂಡರು. 'ನೀವು ನಮ್ಮಲ್ಲಿ ಕೆಲವು ಕಾಲ ಇರುವದಾದರೆ ಆ ವಿಷಯ ಯೋಚಿಸುತ್ತೇವೆ' ಅಂತ ಅಭಯ ಕೊಟ್ಟರು. ಆ ಕೃಷ್ಣದ್ವೈಪಾಯನತೀರ್ಥರ ಸನ್ನಿಧಾನದಲ್ಲಿರುವ ನಿಯಮವೇನಂದರೆ ಅಲ್ಲಿ ಭೋಜನ, ನಿದ್ರಾ ಮಾಡಕೂಡದು. ಅದಕ್ಕಾಗಿ ಸುಮಾರು ಒಂದು ಮೈಲು ದೂರದಲ್ಲಿರುವ ಕುಸುಮೂರ್ತಿ ಎಂಬ ಗ್ರಾಮದಲ್ಲಿ ಆ ಎರಡೂ ಕಾರ್ಯವನ್ನು ಪೂರೈಸುತ್ತಾರೆ. ಕದಾಪಿ ಆ ಸನ್ನಿಧಾನದಲ್ಲಿ ಆ ಎರಡೂ ಕಾರ್ಯ ಅಥವಾ ಒಂದು ಕಾರ್ಯವಾದರೂ ಯಾರಿಂದಲೂ ಸಂಘಟಿಸಿದರೆ ಶ್ರೀ ಕೃಷ್ಣದ್ವೈಪಾಯನರು ಕುಪಿತರಾಗಿ ಸರ್ಪರೂಪದಿಂದ ಭಯಾನಕವಾಗಿ ಯಾರಿಗಾದರೂ ಕಂಡು ಬಂದು ಭಯಕ್ಕೆ ಕಾರಣವಾಗುವದೆಂಬ ಭಾವನಾ ಇದೆ. ತನ್ಮೂಲಕ ಈ ಸನ್ನಿಧಾನಕ್ಕೆ ಬಂದವರೆಲ್ಲರೂ ಕೇವಲ ಪೂಜಾ ಹಸ್ತೋದಕವನ್ನು ತೀರಿಸಿಕೊಂಡು ಕುಸುಮೂರ್ತಿ ಗ್ರಾಮಕ್ಕೆ ಭೋಜನ ಸಲುವಾಗಿ ಹೋಗುತ್ತಿದ್ದರು. ಈ ಸಂಪ್ರದಾಯವನ್ನು ಅಲ್ಲಿಯ ಆ ವೃಂದಾವನ ಅರ್ಚಕರು ಈ ಮುತ್ತಿಗಿ ಆಚಾರ್ಯರಿಗೂ ತಿಳಿಸದೆ ಬಿಡಲಿಲ್ಲ. "ಒಳ್ಳೇದು. ಆದರೆ, ಈ ಕಷ್ಣದ್ವೈಪಾಯನತೀರ್ಥರು ನಮ್ಮ ವಿಷಯದಲ್ಲಿ ಕುಪಿತರಾಗಿ ಭಯೋತ್ಪಾದನಾ ಮಾಡಲಾರರು. ಇದರ ಮೇಲೆ ಮಾಡಿದರೆ



ಶ್ರೀಗಳವರಿಂದ
ಪ್ರತಿಷ್ಠಿತ ಸೀತಾ, ಲಕ್ಷ್ಮಣ
ಹನುಮತ್ಸಮೇತ
ಶ್ರೀ ಕೊದಂಡರಾಮದೇವರು
(ಆದೋನಿ)



ಶ್ರೀ ರಾಮಮಂದಿರ
ಮುಂಭಾಗದ ಧ್ವಜಸ್ತಂಭದಲ್ಲಿರುವ
ಶ್ರೀಮುಖ್ಯಪ್ರಾಣದೇವರು
(ಆದೋನಿ)

ಮಂಥಾನ ಪಾಶಧರ
ಶ್ರೀಗೋಪಾಲಕೃಷ್ಣ
(ಕೋದಂಡರಾಮ)

ಶ್ರೀಗಳವರಿಂದ ಪ್ರತಿಷ್ಠಿತ
ಷೋಡಶಬಾಹು
ಶ್ರೀನರಸಿಂಹದೇವರು
ಶ್ರೀಮುಖ್ಯ ಪ್ರಾಣದೇವರು
ಶ್ರೀರುದ್ರದೇವರು
ಶ್ರೀರಾಘವೇಂದ್ರರು
(ನಾರಾಯಣಪೇಟ)



ಶ್ರೀವಿಷ್ಣುತೀರ್ಥರು
(ಮಾದನೂರು)

ಶ್ರೀಗಳವರಿಂದ
ಪ್ರತಿಷ್ಠಿತ
ಶ್ರೀರಾಯರವೃಂದಾವನ
ಸನ್ನಿಧಿ, ಬಿಜಾಪುರ

ಶ್ರೀಮದಾರ್ಯ ಅಕ್ಷೋಭ್ಯತೀರ್ಥಮಠಾದೀಶ ಶ್ರೀ 108 ಶ್ರೀ ಶ್ರೀ ರಘುದಾಂತೀರ್ಥ
ಶ್ರೀಪಾದರು (ಶ್ರೀರಘುಪ್ರೇಮತೀರ್ಥರ ಆಶ್ರಮ ಗುರುಗಳು)

ತೋರಿಸಲು ಬಂದಿರುವೆ" ಎಂದು ಹೇಳಿ ಆ ಸಜ್ಜನರನ್ನು ಅತಿಕ್ರಮಿಸಿ ಹೋಗಿದ್ದ ನಿದ್ರೆಯಿಂದೆಚ್ಚೆತ್ತು ಆ ವೃಂದಾವನ ಸನ್ನಿಧಿಯಲ್ಲಿಯೇ ಮಾಡುತ್ತಿದ್ದರು. ಇತ್ತ ಇವರು ತಮ್ಮ ಶಿಷ್ಯ ಪಾಠವನ್ನು ಪರಿವಾರದೊಡನೆ ಪೂರ್ವ ಪ್ರವಾಸ ಮಾಡಿ ಅಲ್ಲಿಯೇ ಪ್ರೋಕ್ಷಣಗೈದರು. ಇತಿ ಪೂರ್ವ ಇಲ್ಲಿ ಯಾರೂ ಇರುತ್ತಿದ್ದಿಲ್ಲ, ಆದಾಗ್ಯೂ ಅಲ್ಲಿದ್ದ, ಮರುದಿನ ಉಂಗುರಗಳೊಡನೆ ಹನುಮಂತರಾಯರು ತಥಾ ಅವರ ಹೆಂಡತಿಯನ್ನು ಕರೆದು ಅವರಿಗಾಗಿದ್ದ ವ್ಯಾಧಿಯ ವಿಚಾರಿಸಿ, ಆ ಹನುಮಂತರಾಯನ ಬೆರಳಲ್ಲಿದ್ದ ಬಂಗಾರ ಉಂಗುರವನ್ನು ಇಸಕೊಂಡು ಅದನ್ನು ಪರೀಕ್ಷಿಸಿ ಈ ಉಂಗುರವನ್ನು ನೀವು ಮಾಡಿಸಿಕೊಂಡಿರುವಿರೋ? ಅಥವಾ ಯಾರಾದರೂ ಕೊಟ್ಟಿದ್ದಾರೋ? ಅಂತ ಪ್ರಶ್ನೆ ಮಾಡಿದರು. 'ನನ್ನ ಗ್ರಾಮದಲ್ಲಿ ನನ್ನ ತಮ್ಮನ ಉಪನಯನದ ಸಮಯದಲ್ಲಿ (ಎಷ್ಟೋ ಜನರು ತಮ್ಮ ತಮ್ಮ ಇಷ್ಟ ಬಂದ ಉಡುಗೊರೆ ಕೊಡುವಂತೆ) ಒಬ್ಬರು ಇದನ್ನು ಉಡುಗೊರೆಯಾಗಿ ಕೊಟ್ಟರು. ಅದು ನನ್ನ ತಮ್ಮನಿಗೆ ದೊಡ್ಡದಾದ್ದರಿಂದ ಅದನ್ನು ತೆಗೆದುಕೊಂಡು ತದಾರಭ್ಯ ನಾನೇ ಧಾರಣ ಮಾಡಿದ್ದೇನೆ' ಅಂತ ಹೇಳಿದನು. 'ಇದನ್ನು ಧಾರಣ ಮಾಡಿದ ಸ್ವಲ್ಪ ದಿನಗಳಲ್ಲಿಯೇ ನಿಮ್ಮಗಳಿಗೆ ಪೀಡೆ ಉಂಟಾಯಿತೇ?' ಅಂತ ಕೇಳಲು, 'ಒಂದು ವಾರದಲ್ಲಿಯೇ ನನಗೆ ವಿಷಮ ಜ್ವರ ಬಂದಿತ್ತು. ನಂತರ ನನ್ನ ಹೆಂಡತಿಗೂ ತಂದೆ, ತಾಯಿ, ಅಕ್ಕ, ತಮ್ಮ ಮೊದಲಾದ ಮನೆಯವರೆಲ್ಲರಿಗೂ ಏನಾದರೂ ಒಂದಿಲ್ಲೊಂದು ಬಾಧೆ ಉಂಟಾಗುತ್ತಾ ಇದೆ' ಅಂತ ಹೇಳಿದನು. ಕೂಡಲೇ ಒಂದು ಕಲ್ಲು ತೆಗೆದುಕೊಂಡು ಆ ಉಂಗುರವನ್ನು ಜಜ್ಜಿದ ಕೂಡಲೇ ಒಡೆದು ಅದರಲ್ಲಿದ್ದ (ಲಿಖಿತ) ಯಂತ್ರವೊಂದು ಹೊರಗೆ ಬಿತ್ತು. ಆ ಯಂತ್ರವನ್ನು ಹರಿದು ಆ ಉಂಗುರ ಸಮೇತ ಭೀಮಾ ನದಿಯಲ್ಲಿ ಒಗೆದರು. ತದಾರಭ್ಯ ಅವರ ಪೀಡಾ ಪರಿಹಾರವಾಯ್ತು. ಈ ದಂಪತಿಗಳು ಇವರ ಶಿಷ್ಯರಾಗಿ ಇವರಲ್ಲಿ ಒಂದು ಮಂಡಲ (೪೦) ದಿನ ಸೇವಾ ಮಾಡಿಕೊಂಡು ಸುರಕ್ಷಿತರಾಗಿದ್ದರು. ಮರುದಿನ ಶ್ರೀ ಕೃಷ್ಣದ್ವೈಪಾಯನ ತೀರ್ಥರ ಬೃಂದಾವನ ಅರ್ಚಕರು ಬಂದು ನಮಸ್ಕಾರ ಮಾಡಿ "ಈ ಅರುಣೋದಯದರಲ್ಲಿ ನನ್ನ ಸ್ವಪ್ನದಲ್ಲಿ ಒಬ್ಬ ಯತಿಗಳು ಬಂದು, ತಮ್ಮ ಬೃಂದಾವನದ ಮೇಲಿದ್ದ ತಮ್ಮ ಉಪಾಸ್ಯ ಶ್ರೀರಾಮ ಪ್ರತಿಮಾವನ್ನು ನಿಮಗೆ ತೆಗೆದುಕೊಡುವಂತೆ ಆಜ್ಞಾ ಮಾಡಿದ್ದಾರೆ. ಪ್ರಯುಕ್ತ ಈ ದಿನ ನನ್ನಿಂದ ಆತಿಥ್ಯ ಸ್ವೀಕಾರ ಮಾಡಿ, ಆ ಪ್ರತಿಮೆಯನ್ನು ಸ್ವೀಕರಿಸಿರಿ" ಎಂದು ಅಂದರು. "ಸ್ವೇಚ್ಛಯಾ ಸಜ್ಜನೇಷ್ವಾಗತಮ್" ಎಂಬಂತೆ ಆ ಪರಮಾತ್ಮನ ಅನುಗ್ರಹಾರ್ಥ ಆ ಮಹನೀಯರಿಂದ ಬರುವನೆಂದ ಮೇಲೆ ಸಂತೋಷವಾಯಿತು" ಎಂದು ಆ ದಿವಸ ತಾವೇ ಪೂಜಾ ನೈವೇದ್ಯ ಹಸ್ತೋದಕವನ್ನು ಮಾಡಿ, ಆ ರಾಮಚಂದ್ರ ಪ್ರತಿಮಾವನ್ನು ತೆಗೆದುಕೊಂಡು ಎರಡು ದಿನಗಳ ನಂತರ 'ಬಾಡು' ಎಂಬ ತತ್ಸಮೀಪ ಗ್ರಾಮಕ್ಕೆ ಹೋಗುವವರಾದರು.

೫.೨. ರಾಮದೇವರ ಪ್ರತಿಷ್ಠೆ ಅನೇಕರಿಗೆ ಕಂಕಣಭಾಗ್ಯ

ಅಲ್ಲಿ "ಗುಂಡಾಚಾರ್ಯ"ರೆಂಬವರಿಗೆ ಇವರು ಬರುವಿಕೆಯ ಸ್ವಪ್ನವಾಗಿರಲು, ಆತನು ಹರುಷದಿಂದ ಬಾಜಾ ಬಜಂತ್ರಿ ಸಹ ಮಾರ್ಗ ನಿರೀಕ್ಷಣಾ ಮಾಡುತ್ತಲಿದ್ದು, ಇವರ ಬಂದಿ

(ಚಕ್ಕಡಿ) ಬಂದ ಕೂಡಲೇ ವಾದ್ಯ ವೈಭವದಿಂದ ಬಂದು ಆಹ್ವಾನಿಸಿದರು. ಅಲ್ಲಿಂದ ಮುಂದೆ ನಾರಾಯಣ ಪೇಟೆಗೆ ಬೀಳ್ಕೊಟ್ಟರು. ಅಲ್ಲಿ ಬೊಜ್ಜಿ ಗುರುರಾಜಾಚಾರ್ಯರು ತಮ್ಮ ಕಕ್ಕ "ಬಿಜಾಪೂರ ಲಕ್ಷ್ಮಣರಾಯನೇ" ಮೊದಲಾದ ತಮ್ಮ ಆಪ್ತವರ್ಗವಲ್ಲದೆ, ಆ ನಾರಾಯಣಪೇಟೆಯ ವಿದ್ವದ್ವೈದಿಕ ಲೌಕಿಕರ ಸಹ ಮೇಣೆ (ಸ್ಯಂದನ) ಮತ್ತು ವಾದ್ಯ ವೈಭವದೊಡನೆ ಮಾರ್ಗ ಪ್ರತೀಕ್ಷಿಸುತ್ತ ಈ ಮುತ್ತಿಗಿ ಆಚಾರ್ಯರ ಗಾಡಿ ಬಂದ ಕೂಡಲೇ ಟೆಂಗಿನಕಾಯಿ ಇಟ್ಟು (ಪೀಠಾಧಿಪತಿಗಳಿಗೆ ಮಾಡುವಂತೆ) ನಮಸ್ಕಾರ ಮಾಡಿ, ಈ ಮೇಣೆಯಲ್ಲಿ ಕೂಡಿಸಿ ವಾದ್ಯ ವೈಭವ ಸಂಭ್ರಮದಿಂದ ತಮ್ಮ ಮನೆಗೆ ಕರೆದುಕೊಂಡು ಹೋದರು. ಅನಂತರ ಪಾದ ಪೂಜಾ ಮಾಡಿ ಆ ದಿನ ದೊಡ್ಡ ಸಮಾರಾಧನೆ ಮಾಡಿದರು. ಮರುದಿನ ಆ ಬೊಜ್ಜಿ ಗುರುರಾಜಾಚಾರ್ಯರು ಕಟ್ಟಲ್ಪಟ್ಟ ಮನೆಯಲ್ಲಿ ಶಾಲಿವಾಹನ ಶಕೆ ೧೮೩೭ನೇ ರಾಕ್ಷಸ ನಾಮ ಸಂವತ್ಸರ ಮಾರ್ಗಶೀರ್ಷ ಕೃಷ್ಣಪಕ್ಷ ಪಂಚಮಿ ಆದಿತ್ಯವಾರ ೨೨-೧೨-೧೯೧೫ ಶ್ರೀ ಶ್ರೀ ರಾಘವೇಂದ್ರ ತೀರ್ಥ ಶ್ರೀಪಾದಂಗಳವರ ಬೃಂದಾವನವನ್ನು ಬಹು ಸಂಭ್ರಮದಿಂದ ಪ್ರತಿಷ್ಠಾಪನಾ ಮಾಡಿದರು. ಅನಂತರ ಆ ಊರಲ್ಲಿ "ಕುಲಕರ್ಣಿ ವೆಂಕಣ್ಣ, ಚೆಟ್ಟಿ ಕ್ರಿಷ್ಣಾಚಾರ್ಯ"ರೇ ಮೊದಲಾಗಿ ಅನೇಕರು (ಮಠಾಧಿಪತಿಗಳಂತೆ) ಪಾದಪೂಜಾದಿ ಆತಿಥ್ಯವನ್ನು ಮಾಡಿದರು. ಇದು ಉತ್ತರಾದಿ ಮಠಾಭಿಮಾನಿಗಳಿಗೆ ಅಪಥ್ಯವಾಗಿ, ಅಸೂಯೆಯಿಂದ ಉತ್ತರಾದಿ ಹಾಗೂ ರಾಯರ ಮಠಾಧಿಪತಿಗಳಿಗೆ ಅನೇಕ ವಿಧ ದೂರುಗಳನ್ನು ತಿಳಿಸುತ್ತಾ ಹೋಗಲು ರಾಯರ ಮಠದವರು ಇದಕ್ಕೆ ಲಕ್ಷ್ಯ ಕೊಡಲಿಲ್ಲ. ಆದರೆ ಈ ಮೊದಲಿನಿಂದಲೂ ಈ ಉತ್ತರಾದಿ ಮಠಾಧಿಪತಿಗಳಾದ ಶ್ರೀ ಸತ್ಯಧ್ಯಾನತೀರ್ಥರು ಇವರ (ಶ್ರೀ ಮುತ್ತಿಗಿ ಆಚಾರ್ಯರ) ವಿಷಯದಲ್ಲಿ ಚಿತ್ತಕಾಪಟ್ಯ ಉಳ್ಳವರಾಗಿರುವದರಿಂದ' ಕೂಡಲೇ ತಮ್ಮ ಮಠದಿಂದ ಒಬ್ಬ ಬ್ರಾಹ್ಮಣನನ್ನು ಕಳಿಸಿ, ಅವನ ದ್ವಾರಾ ತಮ್ಮ ಮಠದಿಂದ ಬಹಿಷ್ಕಾರ ಹಾಕಲ್ಪಟ್ಟದ್ದಾಗಿ ಸಾರಿದರು. ಈ ಸಾರುವಿಕೆಯಲ್ಲಿ ಈ ಮುತ್ತಿಗಿ ಆಚಾರ್ಯರಿಗೆ ಗೌರವ ತಗ್ಗುವದರ ಬದಲು ಹೆಚ್ಚಾಗಲು ಕಾರಣವಾಗಿ, ಆ ಸುತ್ತಮುತ್ತಲಿನ ಗ್ರಾಮಸ್ಥರು ಬಂದು ತಮ್ಮ ತಮ್ಮ ಗ್ರಾಮಗಳಿಗೆ ದಿಗ್ವಿಜಯ ಮಾಡುವದಾಗಿ ಪ್ರಾರ್ಥಿಸುವವರಾದರು. ಈ ಪ್ರಾರ್ಥನಾ ಮೇರೆಗೆ ನೂರಾರು ಜನರ ಸಮೇತ ಮೇಣೆ, ವಾದ್ಯ ವೈಭವದಿಂದ ಪ್ರತಿ ಗ್ರಾಮಕ್ಕೂ ಹೋಗುತ್ತಾ, ಸರ್ವತೋಪರಿ ಆತಿಥ್ಯವನ್ನು ಸ್ವೀಕರಿಸುತ್ತಾ, ಒಂದು ತಿಂಗಳ ಸಂಚಾರ ಮಾಡಿ ಆದವಾನಿಗೆ ಬಂದು ಶ್ರೀ ಹರಿವಾಯುಗಳ ಆಜ್ಞಾನುಸಾರ 'ಫಿಟ್ಟರ್ ಫಕೀರಪ್ಪ'ನೆಂಬ ಲಿಂಗಾಯತನಿಂದ ಕೊಡಲ್ಪಟ್ಟ ಬೈಲು ಜಾಗಕ್ಕೆ ಹೊಂದಿಕೊಂಡಿದ್ದ 'ಮೆಹತಾರ ಚಿನ್ನ ಹೊನ್ನೂರಪ್ಪ ಸಾಹೇಬ'ನಿಂದಲೂ ದಾನ ಪೂರ್ವಕ ಕೊಡಲ್ಪಟ್ಟ ಬೈಲು ಸ್ಥಳ ಹಾಗೂ ಮುನಿಸಿಪಾಲಿಟಿಯಿಂದ ಉಳಿದ ೬ ಪ್ಲಾಟು (Plot) ಪಡೆದು ಶ್ರೀ ರಾಮಚಂದ್ರ ದೇವರ ಗುಡಿಯನ್ನು ಹಾಗೂ ಭವ್ಯ ಬಂಗ್ಲೆಯನ್ನು ಕಟ್ಟಿಸುವ ವಿಚಾರ ನಡೆಸಿದರು. ಆದವಾನಿಯ ಜನಗಳಿಗೆ ಇವರು ವಾಸ ಮಾಡಿಕೊಂಡಿರುವದು ಇಷ್ಟ ಆಗಿರೋಣದರಿಂದ ಇವರ ಕಟ್ಟಡಕ್ಕೆ ವ್ಯಾಪಾರ ವರ್ಗದವರೇ ಮೊದಲಾಗಿ ಅನೇಕ ನಾಗರೀಕರು ತಮ್ಮ ತಮ್ಮ ಶಕ್ತ್ಯನುಸಾರ ದ್ರವ್ಯವನ್ನು ಸಮರ್ಪಣೆ

ಮಾಡುವವರಾದರು. ಈ ಆಲಯ ನಿರ್ಮಾಣ ಶಂಕುಸ್ಥಾಪನ ಮಾಘ ಶುಕ್ಲಪಕ್ಷದಲ್ಲಿ ಪ್ರಾರಂಭವಾಗಿ ಕಟ್ಟಡವು ಮೂರು (೩) ತಿಂಗಳಲ್ಲಿ ಮುಗಿದು ಶ್ರೀಸೀತಾರಾಮಚಂದ್ರರ ಪ್ರತಿಷ್ಠಾಪನಕ್ಕೆ ಸಿದ್ಧವಾಯಿತು. ಈ ಕಟ್ಟಡವು ಆಗಿನ ದರಕ್ಕನುಸರಿಸಿ ೧೮,೦೦೦ ರೂಪಾಯಿಗೆ ತಯಾರಾಯಿತು. ಶಾಲಿವಾಹನ ಶಕೆ ೧೮೩೮ ನೇ ನಳನಾಮ ಸಂವತ್ಸರ ವೈಶಾಖ ಶುಕ್ಲ ಪ್ರತಿಪದಾರಭ್ಯ ಪ್ರತಿಷ್ಠಾಪನಾ ಪರ್ಯಂತರ ವಿಧಿ ನಡೆದು ತನ್ಮಧ್ಯೇ ಅಕ್ಷಯ ತೃತಿಯಾ ಶುಕ್ರವಾರ (೫-೫-೧೯೧೬)ನೇ ದಿನ ಶ್ರೀರಾಮ, ಸೀತಾ, ಲಕ್ಷ್ಮಣ, ಹನುಮಂತ ಪ್ರತಿಮಾಗಳ ಪ್ರತಿಷ್ಠಾಪನಾ ಆಯಿತು. (ಉಭಯ ಸೀತಾತ್ಮಕ ಶ್ರೀ ರಾಮಚಂದ್ರನ ಉಪಾಸನಾ ಮಾಡುವವರಾಗಿದ್ದರಿಂದ ತದ್ಯೋತನಾರ್ಥ ಢಫಳಾಪುರದಲ್ಲಿ ಶ್ರೀರಾಮ ಪ್ರತಿಮಾದ ಬಲಪಾರ್ಶ್ವದಲ್ಲಿ ಸೀತಾ ಪ್ರತಿಮೆಯನ್ನು, ಇಲ್ಲಿ ಎಡಪಾರ್ಶ್ವದಲ್ಲಿ ಸೀತಾ ಪ್ರತಿಮೆಯನ್ನು ಪ್ರತಿಷ್ಠಾಪನಾ ಮಾಡಿದರು) ಈ ಮಹೋತ್ಸವ ಸಂದರ್ಭದಲ್ಲಿ ನಾಲ್ಕು ಲಗ್ನಗಳನ್ನು ಮಾಡುವ ಸಂಕಲ್ಪ ಮಾಡಿ ಅದಕ್ಕಾಗಿ ತಮ್ಮ ಶಿಷ್ಯವರ್ಗದವರ ಕನ್ಯಾವನ್ನು ಯೋಜನಾ ಮಾಡುವವರಾದರು. ಇವರ (ಈ ಮುತ್ತಿಗಿ ಆಚಾರ್ಯರ) ಶಿಷ್ಯ ವರ್ಗವು ಇವರ ಆಜ್ಞಾಪರಿಪಾಲಿಸುವ ದೀಕ್ಷಾವುಳ್ಳವರಾದ್ದರಿಂದ ಇವರ ಆಜ್ಞಾಕ್ಕೆ ಒಳಪಟ್ಟು ಎಲ್ಲರೂ ತಮ್ಮ ತಮ್ಮ ಗೋತ್ರ, ನಕ್ಷತ್ರಗಳ ತಿಳಿಸಲು, ಒಬ್ಬ ಜೋತಿಷಿ ಪುರೋಹಿತನನ್ನು ಕರೆದು ಈ ನಾಲ್ಕು ಕನ್ಯಾ ವರಗಳಲ್ಲಿ ಯಾವದು ಯಾವುದಕ್ಕೆ ಯೋಜನಾ ಮಾಡಲಿಕ್ಕೆ (ಜೋತಿಷ್ಯ ಶಾಸ್ತ್ರ ರೀತ್ಯಾ ಯಾವುದಕ್ಕೆ ಕೂಡಿ ಬರುವುದೋ) ಅದಕ್ಕೆ ಜೋಡಣೆ ಮಾಡಿ ತಿಳಿಸಿರಿ ಅಂತ ಹೇಳಿದರು. ಆ ಪ್ರಕಾರ ಆ ಪುರೋಹಿತರು ಆಯಾ ವರ ಕನ್ಯಾಗಳ ಗೋತ್ರ ನಕ್ಷತ್ರಗಳ ಟಿಪ್ಪಣಿ ಮಾಡಿಕೊಳ್ಳುವದರಲ್ಲಿ ವ್ಯತ್ಯಾಸವಾಯಿತು. ಈ ವ್ಯತ್ಯಾಸವಾದದ್ದು (ಈ ಅಚಾತುರ್ಯವು) ತಿಳಿಯದೆ 'P.K. ಸುಬ್ಬರಾಯ'ನ ಮಗಳಾದ ಕುಮಾರಿ 'ಸೇತುಬಾಯಿ' ಯನ್ನು 'ಹುಬ್ಬಳ್ಳಿಯ ದೇಶಪಾಂಡೆ ವಿಠ್ಠಲರಾಯ'ನ ಜೇಷ್ಠ ಪುತ್ರನಾದ 'ರಂಗರಾಯ'ನಿಗೆ, 'ಪೇರೂರು ಗಂಡೇರಾಯ'ನ ಜೇಷ್ಠ ಪುತ್ರಿಯಾದ 'ನರಸುಬಾಯಿ'ಯನ್ನು ಹೈದ್ರಾಬಾದದಲ್ಲಿದ್ದ 'ಉಂದೇಕೋಡ ಕೃಷ್ಣರಾಯ'ನ ದ್ವಿತೀಯ ಪುತ್ರನಾದ 'ಅನಂತ'ನಿಗೂ, 'ಉಂದೇಕೋಡ ರಾಘವೇಂದ್ರ ರಾಯ'ನ ಪುತ್ರಿಯಾದ 'ಗುಂಡಕ್ಕ'ನನ್ನು 'ಮುಡಮಾಲಿ ರಾಮರಾಯ'ನ ಜೇಷ್ಠಪುತ್ರನಾದ 'ರಾಘವೇಂದ್ರ'ನಿಗೂ, 'ಹರಪನಹಳ್ಳಿ ರಿತ್ತಿ ರಾಮಾಚಾರ್ಯ'ರ ಜೇಷ್ಠಪುತ್ರಿ 'ಕಮಲಾಬಾಯಿ'ಯನ್ನು 'ಗುಡೇಕೋಟೆ ರಾಘವೇಂದ್ರ ರಾಯ'ನ ಪುತ್ರ ಹನುಮಂತರಾಯನಿಗೂ ಯೋಜನಾ ಮಾಡಿ, ಆ ಯೋಜನಾ ಪ್ರಕಾರ ಆಯಾ ಗೃಹಸ್ಥರಿಗೆ ತಿಳಿಸಲಾಯಿತು. ಆ ಪ್ರಕಾರ ಆಯಾ ಗೃಹಸ್ಥರು ತಮ್ಮ ತಮ್ಮ ಆಪ್ತೇಷ್ಟ ಮಿತ್ರರೊಡನೆ ಸರ್ವರೂ ವೈಶಾಖ ಶುದ್ಧ ಪ್ರತಿಪದ ದಿನವೇ ಬಂದರು. ಈ ಲಗ್ನ ಸಮಾರಂಭವೂ ಶ್ರೀ ರಾಮಚಂದ್ರದೇವರ (ಪ್ರತಿಮಾ) ಪ್ರತಿಷ್ಠಾಪನಾ ದಿನವೇ ಗೊತ್ತುಪಡಿಸಿದ ರೀತ್ಯ ಪುಣ್ಯಾಹ ವಾಚನ ಆರಂಭವಾಗಿ ಪರಸ್ಪರ (ಉಭಯರು) ಬೀಗರ ಗೋತ್ರ ಉಚ್ಚಾರಣಾ ಕಾಲದಲ್ಲಿ ಪ್ರವರಾದಿಗಳು ಹೇಳುವಾಗ P.K. ಸುಬ್ಬರಾಯನ ಹಾಗೂ ಹುಬ್ಬಳ್ಳಿಯ ದೇಶಪಾಂಡೆ ವಿಠ್ಠಲರಾಯನ ಪ್ರವರೈಕ್ಯವಾಯಿತು. (ಪುರೋಹಿತರ ವ್ಯತ್ಯಾಸ ಟಿಪ್ಪಣಿ ದೋಷ ಮೂಲಕ ಯೋಜನಾ ಸಮಯದಲ್ಲಿ ತಪ್ಪು ತಿಳಿದದ್ದರಿಂದ) ಈ ಪ್ರವರೈಕ್ಯ

ಮೂಲಕ ಲಗ್ನ ನಡೆಯದಾಯ್ತು. ಆಗ ಈ ವಿಷಯವು ಮುತ್ತಿಗಿ ಆಚಾರ್ಯರಿಗೆ ತಿಳಿಯಿತು. ಕೂಡಲೇ ಉಭಯ ಬೀಗರನ್ನು ಖಿನ್ನರಾಗದಂತೆ ಸಮಾಧಾನ ಪಡಿಸಿ P.K. ಸುಬ್ಬರಾಯನ ಮಗಳನ್ನು ಆತನ ಸೋದರ ಅಳಿಯನಿಗೆ (ಈ ಹುಡುಗನು ಲಗ್ನಕ್ಕಾಗಿ ಬಂದ ಆಪ್ತಗಣದಲ್ಲಿ ಒಬ್ಬನಾಗಿ ಬಂದಿದ್ದನು) ಯೋಜನೆ ಮಾಡಿ, ದೇಶಪಾಂಡೆ ವಿಠ್ಠಲರಾಯನ ಮಗನಿಗಾಗಿ ಒಂದು ಕನ್ಯಾ ಯೋಜನ ಮಾಡುವ ಸಲುವಾಗಿ ಆ ಕ್ಷಣವೇ 'ತಾನಾಜಿ ರಂಗರಾಯ'ನ ಮನೆಗೆ ಹೋದರು. ಆತನ ದೇಹ ಸಂಬಂಧಿಯಾದ 'ಹೇಮಾದ್ರಿ ಭೀಮಸೇನರಾಯ'ನ ಪುತ್ರಿ ಕುಮಾರಿ 'ಅಂಬೂಬಾಯಿ' ಎಂಬ ಕನ್ಯಾವನ್ನು ಕರೆದುಕೊಂಡು ಬರುವವರಾದರು. ಈ ಸಂದರ್ಭದಲ್ಲಿ ಆ ಭೀಮಸೇನರಾಯರು ಊರಲ್ಲಿ ಇರದಿದ್ದರೂ ಈ ತಾತ್ಕಾಲಿಕ ಯೋಜನೆಯನ್ನು ಆತನ ಪತ್ನಿ ಸೀತಾಬಾಯಿ ಮತ್ತು ತಾನಾಜಿ ವೆಂಕೋಬರಾಯನೂ ಸಮ್ಮತಿಸಿ ಆ 'ಅಂಬೂಬಾಯಿ'ಯನ್ನು ಇವರ (ಈ ಮುತ್ತಿಗಿ ಆಚಾರ್ಯರ) ಸಂಗಡವೇ ಕಳಿಸಿ ತಾತ್ಕಾಲಿಕ ಹಂದರ ವಗೈರೆ ಶುಭ ದ್ಯೋತಕ ಕಾರ್ಯಗಳ ಮಾಡಿಕೊಂಡು ಬರುವವರಾದರು. ಅವರು ಬಂದ ಕೂಡಲೇ ಪುಣ್ಯಾಹ ವಾಚನಾದಿಗಳು ಆಗಿ, ಅಕ್ಷತಾರೋಪಣ ಸಮಯಕ್ಕೆ ಈ ಐದನೇ ಲಗ್ನದ ಅಕ್ಷತಾವಾಗಿ ಲಾಜಾ ಹೋಮಾದಿಗಳೊಂದಿಗೆ ಲಗ್ನದ ಸಮಾರಂಭವು ನೆರವೇರಿತು. ಈ ಲಗ್ನ ಯೋಜನೆಯಲ್ಲಿ ಅವರವರ ಶ್ರೀಮಂತಿಕೆಗೆ ಅನುಸರಿಸಿ ವರದಕ್ಷಿಣ, ವರೋಪಚಾರ, ಬಟ್ಟೆ (ಅರಿವೆ)ಗಳ ತಾರತಮ್ಯ ಬಿಡದೆ ಪ್ರತಿಯೊಂದು ವರಕ್ಕೆ ೫೦೦ ರೂಪಾಯಿ ವರದಕ್ಷಿಣ, ೩೦೦ ರೂಪಾಯಿ ಬೆಲೆ ಬಾಳುವಷ್ಟು ಪದಾರ್ಥ ರೂಪದಲ್ಲಿ ವರೋಪಚಾರ, ಕನ್ಯಾಕ್ಕೆ ಒಂದು ಸೇರು (೨೪ ತೊಲೆ) ಬಂಗಾರವನ್ನು, ಐದು ನೂರು ರೂಪಾಯಿ ಬೆಲೆ ಬಾಳುವಷ್ಟು (ಜವಳಿ) ಅರವಿಯನ್ನು ಗೊತ್ತು ಮಾಡಲಾಗಿತ್ತು. ಅದರಂತೆ ಈ ಹೆಚ್ಚಿನ ಲಗ್ನಕ್ಕೂ ಅದೇ ಪ್ರಕಾರ ಒದಗಿಸಿದರು. ಇದನ್ನು ಕಂಡು ಸರ್ವರೂ ಆಶ್ಚರ್ಯಚಕಿತರಾದರು. ಮತ್ತು ಈ ಮುತ್ತಿಗಿ ಆಚಾರ್ಯರ ವಿಭೂತಿಯ ಅಗಾಧ ಪ್ರಭೆಯನ್ನು ಕೊಂಡಾಡುತ್ತಾ ಆನಂದ ಪಡುವವರಾದರು. ಈ ಮಹೋತ್ಸವದೊಂದಿಗೆ ೯ ಉಪನಯನಗಳು ಆದವು ಹಾಗೂ ಆರ್ಯ ಅಕ್ಷೋಭ್ಯ ತೀರ್ಥ ಸಂಸ್ಥಾನಾಧೀಶರಾದ ಶ್ರೀ ಶ್ರೀ ರಘುದಾಂತತೀರ್ಥರೂ ಬಂದಿದ್ದರು. ಈ ಮಹೋತ್ಸವದಲ್ಲಿ ಒಂದು ದಿನ ಅಡಿಗೆಯವರು ಮತ್ತು ಉಗ್ರಾಣಿಕನ ತಪ್ಪಿನಿಂದ ಮಾಡಲ್ಪಟ್ಟ ಅಡಿಗೆಯಲ್ಲಿ ಒಂದು ನೂರು ಸೇರು ಅಕ್ಕಿ ಹೆಚ್ಚಿಗೆ ಉಳಿಯಿತು. ಆಗ ಉಗ್ರಾಣಿಕನು ಬಂದು 'ನನ್ನ ತಪ್ಪಿನಿಂದ ಚೀಲ ಅಕ್ಕಿಯ ಅನ್ನವು ವ್ಯರ್ಥವಾಗುವಂತಾಯಿತು' ಅಂತ ಭಯಗ್ರಸ್ತನಾಗಿ ಹೇಳಿಕೊಳ್ಳಲು, ಹೇ ಹುಚ್ಚಾ! ಅನ್ನ ಹೆಚ್ಚಾಯಿತೆಂದರೇನು? ಅದನ್ನು "ಅಶ್ವಿಭ್ಯೋ ಅಶ್ವಪಾಕೇಭ್ಯೋದದ್ಯಾದನ್ನಂ ಸಮಸ್ತಶಃ" ಸರ್ವಜೀವರು ಅನ್ನಪಾತ್ರರು ಅಂತ ಹೇಳೋಣದರಿಂದ ಅನ್ನವನ್ನು ಶೂದ್ರಾದಿಗಳನ್ನೂ ಕರೆಸಿ ವಿನಿಯೋಗ ಮಾಡಿಬಿಡಿರಿ ಅಂತ ಅಪ್ಪಣೆ ಕೊಟ್ಟರು. ಆ ಸಮಯದಲ್ಲಿ ಶೂದ್ರಾದಿಗಳನೇಕರು ಅನ್ನಾರ್ಥಿಗಳಾಗಿ ಕುಳಿತಿದ್ದರು. ಅವರನ್ನು, ಇನ್ನೂ ಇತರರನ್ನು ಕರಿಸಿ ಊಟಕ್ಕೆ ಕೂಡುವದಾಗಿ ಹೇಳಿ ಅಡಿಗೆ ಹತ್ತಿರ ಹೋಗಿ ನೋಡಲು ಅನ್ನದ ವಿನಃ (ಅನ್ನಕ್ಕೆ ಸಾಧನೆ) ಏನೂ ಇದ್ದಿಲ್ಲ. ಪ್ರಯುಕ್ತ ಅನ್ನಕ್ಕೆ "ಸಕ್ಕರೆ ತುಪ್ಪ" ಹಾಕುವಂತೆ

ಉಗ್ರಾಣಿಕನಿಗೆ ಅಪ್ಪಣೆ ಮಾಡಿಬಿಟ್ಟರು. ಅದರಂತೆ ಬಡಿಸಲು ಆ ಶೂದ್ರಾದಿಗಳು ಸಂತುಷ್ಟರಾಗಿ 'ಈ ರೀತಿ ಸಕ್ರಿ ಬಾನಾ (ಅನ್ನ) ನಮ್ಮ ಮನೆಗಳಲ್ಲಿ ಲಗ್ನದಲ್ಲಿ ಸಹಾ ಕಾಣುವದಿಲ್ಲ. ಈ ಮಹಾರಾಯರಿಂದ ನಮ್ಮ ಜನ್ಮದಲ್ಲಿ ಕಾಣದ ಪದಾರ್ಥಗಳನ್ನು ಕಂಡೆವು' ಅಂತ ಕೊಂಡಾಡಿದರು. ಮತ್ತು ಈ ಸಮಾರಂಭದ ಕಡೆಯ ದಿವಸ ಋತ್ವಿಕರಿಗೆ ತಥಾ ಪಾರಾಯಣಾದಿಗಳನ್ನು ಮಾಡಿದವರಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಪ್ರತಿಯೊಬ್ಬರಿಗೆ ೧೦೦ ರೂಪಾಯಿ ಒಳಗೊಂಡು ಇಪ್ಪತ್ತೈದು ರೂಪಾಯಿಗಳಿಗಿಂತ ಕಡಿಮೆ ಇಲ್ಲದಂತೆ ಕೊಟ್ಟು, ತಲಬಾಗಿಲ ಮುಂದೆ ಮಧ್ಯದಲ್ಲಿ ಕುಳಿತು ಎರಡು ಪಾರ್ಶ್ವದಲ್ಲಿ ಕೊಪ್ಪರಿಗೆ ಇಡಿಸಿ ಅವುಗಳ ತುಂಬಾ ರೂಪಾಯಿಗಳನ್ನು ಸುರುವಿಸಿ (ಆ ಕಾಲದಲ್ಲಿ ನೋಟುಗಳ ವಿಶೇಷ ಪ್ರಚಾರವಿರಲಿಲ್ಲ.) ಎಣಿಕೆಯಿಲ್ಲದೆ ಒಂದು ಮುಷ್ಟಿಗೆ ಬಂದಷ್ಟು ಬ್ರಾಹ್ಮಣ ಸುವಾಸಿನಿಯರಿಗೆ (ಮುತ್ತೈದೆಯರಿಗೆ) ದಕ್ಷಿಣಾ ಕೊಟ್ಟರು. ಸರ್ವದಾನ ಮಾಡಿದ ಮೇಲೆ ಐದು ತಿಂಗಳ ಅವಧಿಯಲ್ಲಿ ೧೮,೦೦೦ ರೂಪಾಯಿಗಳಿಂದ ಆಲಯವು (Building) ಕಟ್ಟಲ್ಪಟ್ಟು, ಈ ಪ್ರತಿಷ್ಠಾಪನಾದಿ ಮಹೋತ್ಸವವು ಹನ್ನೆರಡು ಸಹಸ್ರ ರೂಪಾಯಿಗಳ ಖರ್ಚಿನೊಂದಿಗೆ ದಶಮಿ ದಿನ ಪರಿಸಮಾಪ್ತವಾಯಿತು.

೫೩. ಪಿಶಾಚ ಬಾಧೆಯ ಪರಿಹಾರ.

ಶ್ರೀ ವಿಜಯರಾಯರ ಗುಡಿಯ ಸಂಪ್ರೋಕ್ಷಣಾ ಕಾಲದಲ್ಲಿ ಬಿ.ಡಿ. ಶ್ಯಾಮರಾಯನಿಗೆ ಇವರು (ಈ ಚರಿತ್ರೆ ನಾಯಕರು) ತಮ್ಮ ಸಾಕು ಮಗಳ ಲಗ್ನ ಮಾಡಿಕೊಟ್ಟರೆಂಬುದು ವಾಚಕರು ಬಲ್ಲರಷ್ಟೆ. ಆ ಲಗ್ನದ ಕಾಲದಲ್ಲಿ ವಿಧಿಗೆ ಅನುಸರಿಸಿ ಈ ಶ್ಯಾಮರಾಯನಿಗೆ ಪಾದ ಪ್ರಕ್ಷಾಲನ ಮಾಡಿದ್ದಕ್ಕಾಗಿ ಮಹಾತ್ಮರಿಂದ ಪಾದ ಪ್ರಕ್ಷಾಲನ ಮಾಡಿಸಿಕೊಳ್ಳಬೇಕಾದರೆ ತಾನೊಬ್ಬ ದೊಡ್ಡ ದೇವಾಂಶನೆಂಬ ಭ್ರಾಂತಿಯು ಉಂಟಾಯಿತು. ಈ ಮೂಲಕ ಆತನು ಉನ್ಮತ್ತನಾಗಿ ಇತರ ಶಿಷ್ಯರ ಮೇಲೆ ಅಧಿಕಾರ ನಡೆಸದತ್ತಿದನು. ಢಘಳಾಪೂರ ಕಾರಭಾರಿಯಾದ (ದಿವಾನ) ಪೇರೂರು ಗುಂಡೇರಾಯನಿಗೆ ಈ ಶ್ಯಾಮರಾಯನು ಪೂರ್ವದಿಂದಲೂ ಸ್ನೇಹಿತನಾಗಿರೋಣದರಿಂದಲೂ, ಈತನಿಗೆ ನೌಕರಿ ಕೊಡಲು ಇವರು (ಗುರುಗಳು) ಸಿಫಾರಸು ಮಾಡುವವರಾದುದರಿಂದ ಮತ್ತು ಒಬ್ಬ ಕಾರಕೂನ (Clerk) ಬೇಕಾಗಿರೋಣದರಿಂದಲೂ ಈ ಶ್ಯಾಮರಾಯನನ್ನು ಗುಮಾಸ್ತನನ್ನಾಗಿ ನೇಮಿಸಿಕೊಂಡನು. ಈ ಶ್ಯಾಮರಾಯನು ಗುಂಡೇರಾಯನಿಗೆ ನಮ್ರನಾಗಿರುವುದು ಬಿಟ್ಟು ಆತನ ಮೇಲೆ ಅಧಿಕಾರ ಮಾಡಹತ್ತಿದನು. ಇದು ಲೌಕಿಕದಲ್ಲಿ ವ್ಯತ್ಯಾಸ ತೋರುವಂತಾಗಲು ಆ ಗುಂಡೇರಾಯನು ಇವನ ವರ್ತನೆಯನ್ನು ಇವರಲ್ಲಿ (ತನ್ನ ಗುರುಗಳಲ್ಲಿ) ಹೇಳಿಕೊಂಡನು. ಆ ಶ್ಯಾಮರಾಯನನ್ನು ತಮ್ಮಲ್ಲಿ ಕಳಿಸಲು ಹೇಳಿದ್ದರಿಂದ ಅದರಂತೆ ಮಾಡಿದನು. ಇವರು (ಗುರುಗಳು) ಎಷ್ಟು ಹಿತೋಕ್ತಿಗಳನ್ನು ಹೇಳಿದರೂ (ತನ್ನ ಭ್ರಾಂತಿ ಅಜ್ಞಾನ ಮೂಲಕ) ಮತ್ತನಾಗಿದ್ದುದರಿಂದ ಇವರ ಹಿತೋಕ್ತಿಗಳು ರುಚಿಸದೆ ಆ ಗುಂಡೇರಾಯನ ಮಾತಿನ ಮೇಲೆ ತನಗೆ ಈ ರೀತಿ ಹೇಳುತ್ತಾರೆ. ಇದಕ್ಕಾಗಿ "ವಿದುರಾಶ್ವತ್ಥಕ್ಕೆ" ಹೋಗಿ ಇವರೇ ತನ್ನ ವಶರಾಗುವಂತೆ ಕ್ಷುಲ್ಲಕ ಮಂತ್ರವನ್ನು ಜಪಿಸಿ ಸಿದ್ಧಿ ಹೊಂದಬೇಕೆಂದು ಮನಸ್ಸಿನಲ್ಲಿ ಮಾಡಿಕೊಂಡಿದ್ದನ್ನು ಇವರು ತಿಳಿದು, 'ನೀನು ಹಿಂದಕ್ಕೆ ವಿದುರಾಶ್ವತ್ಥದಲ್ಲಿ (ಇದು

ಬೆಂಗಳೂರು ಗುಂತಕಲ್ಲು ರೈಲು ಮಾರ್ಗದ ನಡುವೆ ಇದೆ) ಸೇವಾ ಮಾಡಿ ಕೆಲವು ಇಷ್ಟಾರ್ಥ ಹೊಂದಿದ್ದಿ. ಈಗಲೂ ಅಲ್ಲಿಗೆ ಹೋಗಿ ನಾವು ನಿನ್ನ ವಶವರ್ತಿಗಳಾಗಿರುವಂತೆ ಸಿದ್ಧಿ ಪಡೆಯಬೇಕೆಂದು ಹವಣಿಸಿದ್ದಿ. ಇದು ನಿನ್ನ ಮೂರ್ಖತನ. ಈ ಹವ್ಯಾಸದಿಂದ ನೀನು ವಿದುರಾಶ್ವತ್ಥಕ್ಕೆ ಹೋಗಿ ಸೇವಾ ಮಾಡಲುದ್ಯುಕ್ತನಾದರೆ ಶ್ರೀ ಹರಿ ವಾಯುಗಳು ಕುಪಿತರಾಗಿ ನಿನ್ನ ಆಯುಷ್ಯ ಹರಣ ಮಾಡಿ, ಪಿಶಾಚ ಜನ್ಮವನ್ನು ಕೊಡುವರು' ಅಂತ ಕಟುವಾಗಿ ಹೇಳಿದರು. ಈ ಮಾತುಗಳನ್ನು ಕೇಳದೆ ವಿದುರಾಶ್ವತ್ಥಕ್ಕೆ ಹೋಗಿ, ಮದ್ರಾಸದ ಬ್ರಹ್ಮಾಂಡ ಕೃಷ್ಣಮೂರ್ತಿ ಆಚಾರ್ಯರಿಂದ ಕ್ಷುಲ್ಲಕ ಮಂತ್ರವನ್ನು ಪಡೆದು ಜಪಿಸುತ್ತಿದ್ದ ಅವನು ಐದನೇ ದಿನ ಮರಣ ಹೊಂದಿದನು. ಮುಂದೆ ಪಿಶಾಚ ಜನ್ಮವು ಬಂದಿತು. ಈ ಪಿಶಾಚ ಜನ್ಮದ ಶ್ಯಾಮರಾಯನು ಗುಂಡೇರಾಯ, ಗೋವಿಂದರಾಯರ ಮೇಲೆ ಆಕ್ರೋಶ ಉಂಟಾಗಿ ಗೋವಿಂದರಾಯನ ಹೆಂಡತಿಯನ್ನು ಮತ್ತು ಗುಂಡೇರಾಯನ ತಂಗಿಯಾದ ಕುಂ॥ ಸೌ॥ ಲಕ್ಷ್ಮಿಬಾಯಿಯನ್ನು ಪೀಡಿಸಹತ್ತಿದನು. ಇದರಿಂದ ಗೋವಿಂದರಾಯನು ಕುಟುಂಬ ಸಹಿತ ಆದವಾನಿಗೆ ಇವರಲ್ಲಿ ಸೇವಾ ಮಾಡಲು ಬಂದನು. ಈ ಪಿಶಾಚಿಯ ಆಕ್ರೋಶವು ಮಿತಿಮೀರಿದ್ದರಿಂದ (ಈ ಮುತ್ತಿಗಿ ಆಚಾರ್ಯರ ಮೇಲು ಆಕ್ರೋಶವಿದ್ದುದರಿಂದ) ತನ್ನ ಪೈಶಾಚಿಕ ಶಕ್ತಿಯಿಂದ ರಾಮದೇವರ ಗರ್ಭಗುಡಿಯ ಬಲಭಾಗದ ಮಂಟಪದ ಎರಡು ಸ್ತಂಬಗಳನ್ನು (ಒಂದು ದಿನ ಮಾರ್ಗಶಿರ ಮಾಸದಲ್ಲಿ ಏಕಾಏಕಿ) ಒಮ್ಮಿಂದೊಮ್ಮೆ ಬೀಳುವಂತೆ ಮಾಡಿದನು (ಕೆಡವಿದನು). ಇವು ಬೀಳಲಿಕ್ಕೆ ಬಾಹ್ಯಕಾರಣವು ಊಹಿಸಲು ಬರುವಂತೆ ಇರಲಿಲ್ಲ. ಆಮೇಲೆ ಆ ಎರಡು ಕಂಬಗಳನ್ನು ಕಟ್ಟಿದರು. ಆಮೇಲೆ ಪುನಃ ಅದೇ ಮಂಟಪದ ಬಲಭಾಗದ ಸ್ತಂಬಗಳನ್ನು ಬೀಳುವಂತೆ ಮಾಡಿದನು. ಇದು ಫಾಲ್ಗುಣ ಮಾಸದಲ್ಲಿ ನಡೆಯಿತು. ಶ್ರೀರಾಮ ನವಮೀ ಉತ್ಸವ ಸಮೀಪವಾಗಿದ್ದುದರಿಂದ ಧಾರವಾಡದ ಮಂಗಳವೇಢ್ ರಂಗರಾಯನು ಕುಟುಂಬ ಸಹ ಬಂದಿದ್ದನು. ಮತ್ತು ಕೆಲವರು ನಾರಾಯಣಪೇಟೆ ಕಡೆಯಿಂದ ಬರುವವರಿದ್ದರು. ಇದು ಬೀಳುವಾಗ ಮಂತ್ರಾಲಯ ಖೇಡಕರ್ ಶೇಷಾಚಾರ್ಯನು ಸಾಯಂಕಾಲ ಸಂಧ್ಯಾವಂದನ ಮಾಡುತ್ತ ಕುಳಿತಿದ್ದರಿಂದ ಕಂಬ ತೊಲೆಗಳ ಬುಡದಲ್ಲಿ ಅಡಗಿ ಹೋದನು. ಆಗ ಪ್ರದಕ್ಷಿಣೆ ಮಾಡುತ್ತಿದ್ದ ಗುಂಡೇರಾಯನ ಟೊಂಕದ ಮೇಲೆ ಒಂದು ತೊಲೆ ಬೀಳುವುದನ್ನು ನೋಡಿ ಗರ್ಭಗುಡಿಯಲ್ಲಿದ್ದ ಗೋವಿಂದರಾಯನು ಒಳಕ್ಕೆ ಎಳೆದುಕೊಂಡನು. ಮಂಗಳವೇಢ್ ರಂಗರಾಯನು ತನ್ನ ಮಕ್ಕಳೊಡನೆ ಪ್ರದಕ್ಷಣೆ ಮಾಡುತ್ತಿರಲು ಸ್ಥಂಬಗಳು ಕಂಪಿಸಿದಂತೆ ಕಂಡು ಬರೋಣದರಿಂದ ತನ್ನ ಮಕ್ಕಳ ಸಹಿತ ದೂರ ಓಡಿಹೋಗಲು ಮಕ್ಕಳ ಕಾಲಿಗೆ ಸ್ವಲ್ಪ ಪೆಟ್ಟು ಹತ್ತಿತು. (ಮಂಗಳವೇಢ್ ಗೋವಿಂದರಾಯನ ಪತ್ನಿ ಕುಂ॥ ಸೌ॥ ಲಕ್ಷ್ಮೀಬಾಯಿಯ ತಲೆ ಒಡೆಯಿತು) ಮಾಳಿಗೆಯ ಮೇಲೆ ಕೆಲಸ ಮಾಡುತ್ತಿದ್ದ ಭೀಮನೆಂಬ ಮನುಷ್ಯನು ಬಿದ್ದು ಮೂರ್ಛಾಕ್ರಾಂತನಾದನು. ಈ ಅನರ್ಥ ಇವರು (ಈ ಮುತ್ತಿಗೀ ಆಚಾರ್ಯರು) ಬಹಿರ್ ಭೂಮಿಗೆ ಹೋಗಿ ಬರುವಷ್ಟರಲ್ಲಿ ಆಗಿಹೋಗಿತ್ತು. ಇದನ್ನು ನೋಡಿ ಕೆಳಗೆ ಹೂತುಕೊಂಡವರ ಗತಿ ಏನಾಗಿರುವದೆಂದು ತಿಳಿದು ಗಾಬರಿಗೊಂಡು ಇನ್ನಿತರ ಕೂಲಿಯವರಿಂದ ಹೂತುಕೊಂಡಿದ್ದ

ಆ ಶೇಷಾಚಾರ್ಯನನ್ನು ಹೊರಗೆ ತೆಗೆಸಿ, ಪೆಟ್ಟು ಹತ್ತಿದ ಯಾವತ್ತೂ ಜನರಿಗೆ ಚಿಕಿತ್ಸಾ ಮಾಡಲು ಗೋವಿಂದರಾಯನಿಗೆ (ಔಪಚಾರಿಕವಾಗಿ) ಹೇಳಿ ತಾವು ಶ್ರೀ ಹರಿವಾಯುಗಳನ್ನು ಪ್ರಾರ್ಥನಾ ಮಾಡಿ ಮೂರು ನಾಲ್ಕು ದಿನಗಳಲ್ಲಿಯೇ ಅವರುಗಳ ವಿಪತ್ತು ಪರಿಹಾರವಾಗುವಂತೆ ಮಾಡಿದರು. ಆದಾಗ್ಯೂ ಮಂಟಪ ಬೀಳೋಣದ ಮೂಲಕ ಕೆಲವರಿಗೆ ಪೆಟ್ಟು ಹತ್ತಿರೋಣದರಿಂದ ಇವರಿಗೆ (ಈ ಮುತ್ತಿಗೀ ಆಚಾರ್ಯರು) ಮನೋವೈಕಲ್ಯ ಉಂಟು ಮಾಡಿದ್ದರಿಂದ ಶ್ರೀರಾಮನವಮೀ ಉತ್ಸವ ಮಾಡುವದನ್ನು ನಿಲ್ಲಿಸಬೇಕೆಂದು ಅಂದುಕೊಂಡರು. ಈ ಸಂದರ್ಭದಲ್ಲಿ ಸುಬ್ರಹ್ಮಣ್ಯ ಮಠೀಯ "ಶ್ರೀ ವಿಶ್ವಜ್ಞತೀರ್ಥ" ಶ್ರೀಪಾದಂಗಳವರು ಬಂದರು. ಇವರು ಪೂರ್ವಪರಿಚಿತರಾಗಿದ್ದರು. ಈ ಸ್ವಾಮಿಗಳು ಮುದಮಾಲಿಗ್ರಾಮ ಪ್ರವೇಶ ಮಾಡುವಾಗ ಈ ಮುತ್ತಿಗೀ ಆಚಾರ್ಯರು ಅಲ್ಲಿದ್ದರು. ಆಗ ಯತಿಗಳ ಪ್ರಥಮ ದರ್ಶನವನ್ನು ರಿಕ್ತ ಹಸ್ತದಿಂದ ತೆಗೆದುಕೊಳ್ಳಕೂಡದೆಂದು ಶಾಸ್ತ್ರವಿದ್ದರಿಂದ ಯಾವದಾದರೊಂದು ಫಲವನ್ನು ಸಮರ್ಪಿಸಿ ನಮಸ್ಕಾರ ಮಾಡುವ ಸಂಪ್ರದಾಯ ಪ್ರಕಾರ ಟೆಂಗಿನಕಾಯಿ ತರಲೋಸುಗ ಒಬ್ಬ ಆಳನ್ನು ಕಳಿಸಿದರು. ಅವನು ಸಕಾಲಕ್ಕೆ ಬಾರದಿದ್ದರಿಂದ ತಮ್ಮ ಕೈ ಬೆರಳಲ್ಲಿದ್ದ ನವರತ್ನದುಂಗುರವನ್ನು ಮುಂದಿಟ್ಟು ನಮಸ್ಕಾರ ಮಾಡಿದರು. ಆ ಯತಿಗಳು ಇವರ ತ್ಯಾಗಬುದ್ಧಿಗೆ ಬೆರಗಾದರು. ಈ ಮೂಲಕ ಅವರಿಗೆ ಇವರಲ್ಲಿ ವಿಶ್ವಾಸ ಉಂಟಾಯಿತು. (ಆ ಉಂಗುರವನ್ನು ಅದ್ಯಾಪಿ ತಮ್ಮ ದೇವರ ಕಿರೀಟಕ್ಕೆ ಇಡುತ್ತಾರೆ). ಅವರು ಸಂಚಾರತ್ವೇನ ರಾಯಚೂರಿಗೆ ಬಂದಿರಲು, ಅದವಾನಿಗೆ ಹೋಗಿ ಶ್ರೀರಾಮ ನವಮೀ ಉತ್ಸವವನ್ನು ನಡೆಸುವುದಾಗಿ ಗುರುರಾಜರಿಂದ ಸ್ವಪ್ನವಾಗಲು, ಆ ಯತಿಗಳು ಧಾವಿಸಿಕೊಂಡು ಬಂದು "ನಮಗೆ ಶ್ರೀರಾಮ ಉತ್ಸವ ನಡೆಸುವುದಾಗಿ ಸ್ವಪ್ನವಾಗಿರೋಣದರಿಂದ ಧಾವಿಸಿ ಬಂದಿದ್ದೇವೆ" ಅಂತ ಹೇಳಲು ಈ ಉತ್ಸವ ಮಾಡದಿರುವದನ್ನು ಮಾನಸಿಕ ನಿರ್ಧಾರ ಮಾಡಿದಾಗ್ಯೂ ದೈವೇಚ್ಛಾ ಪ್ರಬಲವಾಗಿದೆ ಎಂದು ಉತ್ಸುಕತೆಯಿಂದ ಶ್ರೀರಾಮೋತ್ಸವವನ್ನು ಉಪಕ್ರಮ ಮಾಡುವವರಾದರು. ತದಾರಭ್ಯ ಈ ಉತ್ಸವವು ನಡೆಯುತ್ತಲಿದೆ. ಇದು ಅಭಿವೃದ್ಧಿ ಹೊಂದುತ್ತಲಿದೆ.

೫೪. ಇಡ್ಲೂರಿನ ಯಜ್ಞ ಸ್ಥಳಾಂತರಗೊಂಡಿತು, ಮುದಮಾಲದಲ್ಲಿಯ ಸಿದ್ಧತೆ ಸಾಧಕವಾಗಲಿಲ್ಲ

ಈ ಚರಿತ್ರ ನಾಯಕರಾದ ಮುತ್ತಿಗಿ ಆಚಾರ್ಯರ ಶಿಷ್ಯರುಗಳ ಪೈಕಿ ನಾರಾಯಣ ಪೇಟೆಯ ಬೊಜ್ಜಿ ಗುರುರಾಜಾಚಾರ್ಯನು ಇವರಲ್ಲಿ ಅತ್ಯಂತ ಭಕ್ತಿ ಮಾಡುವವನಾಗಿದ್ದನು. ತಮ್ಮ ಸಾಧನೆ ಅತಿಶಯವಾಗೋಣದರಿಂದ ತಮಗೆ ಯಾವ ರೀತಿ ವೈಭವ ಉಂಟಾಗಿರುವದೋ, ಅದರಂತೆ ತಮ್ಮ ಶಿಷ್ಯರ ಪೈಕಿ ಒಬ್ಬರಲ್ಲಿಯಾದರೂ ವೈಭವವು ಉಂಟಾಗಬೇಕೆಂಬ ಇಚ್ಛೆಯಿಂದ ಅತ್ಯಂತ ಭಕ್ತಿ ಮಾಡುತ್ತಿದ್ದ ಈ ಬೊಜ್ಜಿ ಗುರುರಾಜಾ ಚಾರ್ಯನಲ್ಲಿ ನಿರ್ವ್ಯಾಜಾಂತಃಕರಣದಿಂದ ಸಾಧನ ಮಾರ್ಗವನ್ನು ಭೋದಿಸ ಹತ್ತಿದರು. ಈ ಗುರುರಾಜಾಚಾರ್ಯನಾದರೂ ಗುರುಗಳ ಆಜ್ಞಾದಂತೆ ನಡೆದುಕೊಳ್ಳುತ್ತಿದ್ದನು. ಇದರಿಂದ ಕೆಲವರು ತಮ್ಮ ತಮ್ಮ ಆಪತ್ಪರಿಹಾರಕ್ಕಾಗಿ ಈ ಗುರುರಾಜಾಚಾರ್ಯರಲ್ಲಿ ಬಂದು ಸೇವಾ

ಮಾಡುತ್ತಿದ್ದರು. ಅವರುಗಳಿಗೆ ಸೇವಾ ವಿಧಾನ ಹೇಳುವದಕ್ಕೆ ತನಗೆ ಸ್ಪಷ್ಟ ತೋರದಿದ್ದರೆ ಕೂಡಲೇ ತನ್ನ ಗುರುಗಳಲ್ಲಿ ಬಂದು ತಿಳಿದುಕೊಂಡು ಹೋಗಿ ಹೇಳುತ್ತಿದ್ದನು. ಹೀಗಿರಲು ಒಂದು ದಿನ ಗುರುರಾಜಾಚಾರ್ಯನಿಗೆ ಒಂದು ಸ್ವಪ್ನವಾಗಲು ಅದರ ಅರ್ಥವಾಗದೆ ಆದುವಾನಿಗೆ ಬಂದು ಕೇಳಿದನು. "ಈ ಸ್ವಪ್ನಾರ್ಥವು ನೀನು ಅಗ್ನಿಹೋತ್ರ ಇಡುವದೆಂದು ಆಗುತ್ತದೆ. ಪ್ರಯುಕ್ತ ಅಗ್ನಿಹೋತ್ರ ಇಡು. ಆದರೆ ಕೇವಲ ಅಗ್ನೀಹೋತ್ರ ಇಡುವದಕ್ಕಿಂತಲೂ "ಸೋಮಯಾಗ" ಮಾಡಿ ಅಗ್ನಿಹೋತ್ರ ಇಡು" ಎಂಬುವುದಾಗಿ ಅಪ್ಪಣೆ ಮಾಡಿದರು. 'ಸ್ವಾಮಿ ನಾನು ರಿಕ್ತನಾದ್ದರಿಂದ ನನ್ನಿಂದ ಯಜ್ಞ ಮಾಡುವದು ಹೇಗೆ ಸಾಧ್ಯ?' ಅಂತ ಕೇಳಲು 'ನೀನು ಅಗ್ನಿಹೋತ್ರ ಮಾಡುವದಾಗಿ ಶ್ರೀ ಹರಿ ವಾಯುಗಳ ಚಿತ್ತದಲ್ಲಿ ಇದ್ದರೆ ಈ ಯಜ್ಞವು ಸುಸೂತ್ರ ನಡೆಯುತ್ತದೆ. ಆಲೋಚನಾ ಮಾಡುವುದು ಅನವಶ್ಯಕ' ಅಂತ ಅಭಿದಾನ ಮಾಡಿ ಆತನ ತಮ್ಮಂದಿರಾದ (ಕಕ್ಕನ ಮಕ್ಕಳಾದ) ಜಠರದ ಆನಂದರಾಯನು ಹಾಗು ಇಡ್ಲೂರು ಶ್ರೀನಿವಾಸರಾಯನನ್ನು ಕರೆಸಿ ಸೋಮಯಜ್ಞ ಪೂರ್ವಕ (ಅಗ್ನಿಹೋತ್ರ) ವಿಷಯವನ್ನು ಪ್ರಸ್ತಾಪಿಸಲು 'ತಮ್ಮ ಗ್ರಾಮದಲ್ಲಿ ಮಾಡುವದಾದರೆ ಪ್ರಯತ್ನ ಮಾಡುವೆವೆಂದು' ಹೇಳಿದರು. ಆಗ ಈ ಯಾಗಕ್ಕೆ ಪ್ರಶಸ್ತವಾದ ಸ್ಥಲವನ್ನು ನಿರ್ದೇಶ ಮಾಡುವ ಸಲುವಾಗಿ ಜಠರ, ಇಡ್ಲೂರು ಗ್ರಾಮಗಳಿಗೆ ಹೋಗುವವರಾಗಿ ಇಡ್ಲೂರು ಗ್ರಾಮ ಸೀಮಾದಲ್ಲಿ ಪುರಾತನ ರುದ್ರದೇವರ (ಶಂಕರಲಿಂಗ ಎಂಬ ಪ್ರಸಿದ್ಧಿಯ) ಗುಡಿಯ ಸಮೀಪದಲ್ಲಿ ಸಣ್ಣ ಹಳ್ಳ (ಚಿಕ್ಕ ನದಿ) ಸಂಗಮದ ಸಮೀಪ ಯಾಗಶಾಲಾ ಹಾಕುವುದಾಗಿ ಗೊತ್ತು ಮಾಡಿದರು. ತದನುಗುಣವಾಗಿ ಯಜ್ಞ ಸನ್ನಾಹಾರ್ಥ ಈ ಗುರುರಾಜಾಚಾರ್ಯನು ತನಗೆ ಪರಿಚಯುವಿದ್ದ ಸ್ಥಲಗಳಿಗೆ ಯಾಚನಾರ್ಥ ಹೋಗುವವನಾದನು ಮತ್ತು ಜಠರದ ಆನಂದರಾಯ ಹಾಗೂ ಇಡ್ಲೂರು ಶ್ರೀನಿವಾಸರಾಯನೂ ಮತ್ತು ಗುರುರಾಜಾಚಾರ್ಯರ ಅಣ್ಣನಾದ 'ಹನುಮಂತರಾಯ' ತಮ್ಮ ತಮ್ಮ ಗ್ರಾಮಗಳಲ್ಲಿ ಪಟ್ಟಿಗಾರಂಭ ಮಾಡಿದರು. ಈ ಯಜ್ಞಕ್ಕೆ ಬೇಕಾಗುವಷ್ಟು ಅಕ್ಕಿ ಇಡ್ಲೂರಲ್ಲಿಯೂ, ಇನ್ನಿತರರಿಂದ ಇತರ ಸಾಮಗ್ರಿಗಳೂ ಒದಗುವಂತೆ ಪ್ರಯತ್ನ ಮಾಡಿದರು. (ಈ ಸಂದರ್ಭದಲ್ಲಿ ಆ ಗುರುರಾಜಾಚಾರ್ಯನೇ ಮೊದಲಾಗಿ ಸರ್ವರೂ ಸಂಚಾರ ಮಾಡಿ ಸಾಂಭಾರಗಳಿಗೆ ಸಿದ್ಧಮಾಡುವವರಾದರು). ತಾವು ಸಿದ್ಧಪಡಿಸಿದ ಸಾಂಭಾರಗಳು ಸರಿಹೋಗುವದೋ ಇಲ್ಲವೋ ಎಂಬುವದನ್ನು ನೋಡಲೋಸುಗ ಇವರನ್ನು (ಮುತ್ತಿಗಿ ಆಚಾರ್ಯರನ್ನು) ಜಠರಕ್ಕೂ ಇಡ್ಲೂರಿಗೂ ಕರೆದುಕೊಂಡು ಹೋದರು (ಅವರು ಅನುಭವಿಕರಾದ ಪ್ರಯುಕ್ತ) ಆ ಸಂಗ್ರಹೀತ ಪದಾರ್ಥಗಳನ್ನು ನಿರೀಕ್ಷಿಸಿ ಗುರುರಾಜಾಚಾರ್ಯರ ಸಹ ಯಜ್ಞದ ಆಮಂತ್ರಣ ಕೊಡಲೋಸುಗವೂ, ಸಂಚಾರಾರ್ಥವೂ ಮಖತಲ್, ಮುಡಮಾಲಾಕ್ಕೆ ಹೋಗುವವರಾದರು. ಆಗ ಮುಡಮಾಲದಲ್ಲಿ 'ಮಹಾಮಾರಿ' (Plague) ಉಪದ್ರವ ಇದ್ದ ಮೂಲಕ ರಾಮರಾಯರೇ ಮೊದಲುಗೊಂಡು ಸರ್ವಜನರೂ ಅರ್ಧ ಮೈಲು ದೂರ ಪರ್ಣಕುಟೀರದಲ್ಲಿ ವಾಸ ಮಾಡಿಕೊಂಡಿದ್ದರು. ಇವರೂ ಅಲ್ಲಿಗೇ ಬಂದು ರಾಮರಾಯರಿಗೆ ಯಜ್ಞದ ಆಮಂತ್ರಣವನ್ನು ಕೊಡಲು ಸ್ವಾಮಿ! 'ಇಡ್ಲೂರಿನಲ್ಲಿ ಯಜ್ಞ ಮಾಡುವ ಬದಲು ಈ ಊರಲ್ಲಿ ಮಾಡುವುದು ಯೋಗ್ಯ. ಯಾಕೆಂದರೆ ಇಲ್ಲಿ ಮಹಾ

ನದಿಗಳ ಶ್ರೇಣಿಯಲ್ಲಿ ಗಣ್ಯವಾದ ಕೃಷ್ಣಾನದಿ ಇದೆ. ಈ ತೀರದಲ್ಲಿ ಶ್ರೀ ವೆಂಕಟೇಶ ದೇವರ ಗುಡಿ ಹಾಗೂ ಶ್ರೀ ಯಾದವೇಂದ್ರತೀರ್ಥರ ವೃಂದಾವನವೂ ಇದೆ. ಆ ಇಡ್ಲೂರು ಗ್ರಾಮ ಮತ್ತು ಅಲ್ಲಿ ಅನಾಮಧೇಯ ಹಳ್ಳದ ತೀರದಲ್ಲಿ ಯಾಕೆ ಮಾಡಬೇಕು' ಅಂತ ಕೇಳಿದರು. 'ರಾಮರಾಯ ನೀನಾಡುವ ಮಾತು ಯೋಗ್ಯವೇ, ಆದರೆ ಈ ಗುರುರಾಜಾಚಾರ್ಯರು ಅತಿರಿಕ್ತರು (ಬಹು ಬಡವರು) ಮತ್ತು ಅವರ ಅಣ್ಣತಮ್ಮಂದಿರಾದರೂ ಶ್ರೀಮಂತರಲ್ಲ. (ಸಾಮಾನ್ಯರು) ಆದ್ದರಿಂದ ಬಡತನ ರೀತಿಯಲ್ಲಿ ಆಯಾ ಗ್ರಾಮದ ರೈತರಿಂದ ದೊರೆಯುವ ಅಲ್ಪ ಕಾಣಿಕೆಯಿಂದಲೇ ಈ ಯಜ್ಞ ಸಾಗಿಸಿಕೊಳ್ಳುವ ಹವ್ಯಾಸದಿಂದ ಅನಾಮಧೇಯ ಇಡ್ಲೂರು ಎಂಬ ಸ್ಥಲದಲ್ಲಿ ಮಾಡುವುದು ಗೊತ್ತುಪಡಿಸಿಕೊಂಡಿದ್ದಾರೆ. ಆ ಮಹಾತ್ಕಾರ್ಯಕ್ಕೆ ನಿನ್ನ ಕೈಲಾದಮಟ್ಟಿಗೆ ಸಹಾಯ ಮಾಡು. ಅದಕ್ಕಾಗಿಯೇ ಅವರು (ಗುರುರಾಜಾಚಾರ್ಯರು) ಯಾಚನಾರ್ಥ ಬಂದಿದ್ದಾರೆ' ಅಂತ ಹೇಳಿದರು. 'ಸ್ವಾಮಿ! ಈ ಮಾತೆಲ್ಲ ನಿಜ. ಆದರೆ 'ಯಜ್ಞ ಯಾಗಾದಿ ಮಹಾತ್ಕಾರ್ಯಗಳನ್ನು ಮಾಡಬೇಕಾದರೆ ಅದಕ್ಕೆ ತಕ್ಕಂತೆ ಮಾಡಿದರೇನೆ ಯೋಗ್ಯ. ಈ ಕಾರ್ಯಕ್ಕೆ ನನಗೆ ಅಪ್ಪಣೆ ಮಾಡಿದರೆ, ಅವರು ತಮಗೆ ದೊರಕಿದಷ್ಟು ತಂದು ಇಲ್ಲಿಯೇ ಮಾಡಲುದ್ಯುಕ್ತರಾಗಿದ್ದಾದರೆ ಎಲ್ಲವನ್ನೂ ನಿರ್ವಾಹ ಮಾಡುತ್ತೇನೆ' ಅಂತ ಪುನಃ ಒತ್ತಿ ಹೇಳಿದನು. 'ರಾಮರಾಯ ನೀನು ಶ್ರೀಮಂತ, ಉದಾರಿ. ನಿನ್ನ ಕೀರ್ತಿ ಪ್ರಭಾವದಿಂದ ಬಹು ಜನ ಸೇರುತ್ತಾರೆ. ಸ್ಥಲವೂ ಪ್ರಶಸ್ತವಿದೆ. ಆದರೆ, ಈ ಗುರುರಾಜಾಚಾರ್ಯರು ಇಡ್ಲೂರಲ್ಲಿ ಮಾಡುವುದು ಬಿಟ್ಟು ಇಲ್ಲಿ ಮಾಡಿದರೆ ಆಯಾ ಗ್ರಾಮದ ರೈತರಿಂದ ಬರುವ ಅಲ್ಪ ಕಾಣಿಕೆಯೂ ಬಾರದೆ ಹೋಗಬಹುದು. ಇದರಿಂದ ಯಾವದ್ಭಾರ ನಿನ್ನ ಮೇಲೆಯೇ ಬೀಳುವುದು. ಈಗ ಈ ಸಂಸ್ಥಾನಾಧಿಪತಿ ಬಾಲಕನಿರುವದರಿಂದ ನೀನೇ ಸರ್ವ ಸ್ವತಂತ್ರನಾಗಿದ್ದಿ. ಈ ಸ್ವಾತಂತ್ರ್ಯ ಮೂಲಕ ಈ ಕಾರ್ಯ ನೀನು ನಿರ್ವಾಹ ಮಾಡಲೂಬಹುದು. ಮುಂದೆ ನಿನ್ನ ಯಜಮಾನ ದೊಡ್ಡವನಾದ ಮೇಲೆ ನಿನ್ನ ಮೇಲೆ ಕೋಪಗೊಂಡಾನು. ಆದ್ದರಿಂದ, ಈ ಹವ್ಯಾಸ ಬಿಟ್ಟು ಮುಂದೆಯಾದರೂ ನಿನಗೆ ತೊಂದರೆ ಬಾರದಂತೆ ನಿನ್ನ ಶಕ್ತ್ಯಾನುಸಾರ ಸೇವಾ ಮಾಡಿ ಶ್ರೇಯೋಭಾಗಿಯಾಗುವದು ಯುಕ್ತ' ಅಂತ ಇವರು ಒತ್ತಿ ಹೇಳಿದರು. 'ಸ್ವಾಮಿ! ತಾವಾಡುವ ಮಾತು ಎಲ್ಲವೂ ಯಥಾರ್ಥ. ಆದರೆ, ಈ ಯಾಗಕ್ಕಾಗಿ ಮಾಡುವ ಖರ್ಚನ್ನು ಈ ಸಂಸ್ಥಾನದ ಮೇಲೆ ಹಾಕದೆ ನನಗೆ ಬೇಕಾದ ಜನರನ್ನು ಕರೆಸಿಕೊಂಡು ಪಟ್ಟೀಮಾಡಿ ಆ ಮೂಲಕ ಈ ಕಾರ್ಯ ನಿರ್ವಾಹ ಮಾಡುತ್ತೇನೆ ಆಜ್ಞಾ ಕೊಡಬೇಕು' ಅಂತ ಕೇಳಿಕೊಂಡನು. 'ಸರಿ, ನೀನು ಪರಭಾರೆ ಪ್ರತ್ಯೇಕವಾಗಿ ಸಂಪಾದಿಸಿ ಮಾಡಿದಾಗ್ಯೂ ಮುಂದೆ ನಿನ್ನ ಯಜಮಾನನಿಗೆ ಅನ್ಯೋಪದೇಶದಿಂದ ನಿನ್ನ ಮೇಲೆಯೇ ಅನುಮಾನ ತಟ್ಟದೇ ಇರಲಾರದು. ಇದರಿಂದ ಮುಂದೆ ನಿನಗೆ ತೊಂದರೆಗೆ ಕಾರಣವಾದೀತು. ಇಷ್ಟೇ ಅಲ್ಲ. ಈ ಯಜ್ಞಾರಂಭದ ದಿನವೂ ಈ ಮಾಘ ಶುಕ್ಲ ಪೌರ್ಣಿಮಾ ಇರೋಣದರಿಂದ ಅದೇ ಸಮಯಕ್ಕನುಸರಿಸಿ ಉತ್ತರಾದಿಮಠದ ಶ್ರೀ ಸತ್ಯಜ್ಞಾನತೀರ್ಥರ ಮಹಾ ಸಮಾರಾಧನಾ ಹಾಗೂ ಮಳಖೇಡ ಕ್ಷೇತ್ರದಲ್ಲಿ ಸಭಾ ಇರೋಣದರಿಂದ ಅಲ್ಲಿ ಸೇರತಕ್ಕ ಹತ್ತೆಂಟು ಸಾವಿರ ಜನರು ನಿನ್ನ ಕೀರ್ತಿಗನುಸರಿಸಿಯೇ

ಅಪರೂಪವಾದ ಯಜ್ಞ ನೋಡುವ ಕುತೂಹಲದಿಂದಲೂ ಇಲ್ಲಿಗೂ ಬರಬಹುದು. ಈ ಎಲ್ಲಾ ವಿಚಾರ ನೋಡಲಾಗಿ ಈ ಸ್ಥಲದಲ್ಲಿ ಯಜ್ಞ ಮಾಡುವದು ಬಹು ಶ್ರಮವೆಂದು ತೋರುತ್ತದೆ. ಪ್ರಯುಕ್ತ ಅವರು ಇಡ್ಲೂರಲ್ಲಿಯೇ ಮಾಡಿಕೊಳ್ಳುವುದು ಸುಲಭ' ಅಂತ ಹಿತೋಕ್ತಿ ಹೇಳಿದರು. 'ಸ್ವಾಮಿ! ಯಜ್ಞಯಾಗಾದಿ ಉತ್ಸವ ಸಮಾರಂಭಗಳಿಗೆ ಜನರು ಬರಲಿ ಅಂತ ಬಯಸುವದೋ? ಸೇರಕೂಡದೆಂದು ಬಯಸುವದೋ? ಅಂತಹ ಮಹಾಸಮಾರಂಭಗಳಿಗೆ ಎಷ್ಟು ಜನ ಸೇರಿದರೆ ಅಷ್ಟು ವಿಜೃಂಭಣೆಯು. ಆದ್ದರಿಂದ ಮಳಖೇಡ ಮಹಾ ಸಮಾರಾಧನೆ ತೀರಿಸಿಕೊಂಡು ಆ ಜನಗಳು ಬರುವದಕ್ಕೋಸ್ಕರ ಅವರುಗಳ ಮುಖ್ಯ ಮುಖ್ಯಸ್ಥರಿಗೆ ತಮ್ಮಿಂದ ಆಮಂತ್ರಣ ಪತ್ರಿಕಾ ಹೋಗುವದು ಯೋಗ್ಯವೆಂದು ನನಗನಿಸುತ್ತದೆ. ಇಂಥಹ ಸುಸಂಧಿ ದೊರೆಯಲಾರದು. ಆದ್ದರಿಂದ, ಈ ಮಹಾತ್ಕಾರ್ಯ ಮಾಡಿ ಶ್ರೇಯಸ್ಸು ಸಂಪಾದನಾ ಮಾಡುವ ಕುತೂಹಲವಿದೆ. ತಾವು ಅಜ್ಞಾಕೊಟ್ಟರೆ ಈ ಕಾರ್ಯದಲ್ಲಿ ಪ್ರಸಕ್ತನಾಗುತ್ತೇನೆ' ಅಂತ ವಿಜ್ಞಾಪನಾ ಮಾಡಿಕೊಂಡನು. 'ನಿನ್ನ ಧರ್ಮಾಭಿಮುಖತ್ವ ಪಕ್ಷ ನೋಡಿದರೆ ಅಪ್ಪಣೆ ಕೊಡತಕ್ಕದ್ದೇ ಯೋಗ್ಯ. ಆದರೆ, ದೂರ ವಿಚಾರ ಮಾಡಿ ನೋಡಿದರೆ ಬೇಡವೆಂದು ಹೇಳಬೇಕಾಗುತ್ತದೆ. ಈ ಉಭಯ ಸಂಕಟದಲ್ಲಿ ನಾನು ಏನು ಹೇಳಬೇಕೋ ತೋಚದಾಗಿದೆ ಮತ್ತು ಧರ್ಮಾಭಿಮುಖನಾದ ನಿನ್ನನ್ನು ಬೇಡವೆಂದು ಹೇಳುವದೂ ನನಗೆ ಅಧರ್ಮ ಮತ್ತು ಮಹಾಪಾಪ ಹಾಗೂ ಈ ಆಚಾರ್ಯರು ತಾವು ದ್ರವ್ಯ ಬೇಡವೆನ್ನುವರೇ ಹೊರ್ತು ಬೇರೆ ಧರ್ಮ ಮಾಡುವದಕ್ಕೆ ಆಸ್ಪದ ಕೊಡುವವರಲ್ಲ ಎಂದೆನಿಸುತ್ತದೆ. ಆದರೆ ಇದಕ್ಕೆ ಬೇಕಾಗುವ ದ್ರವ್ಯ ಎಷ್ಟೆಂಬುದು ಸರಿಯಾದ ಕಲ್ಪನಾ ಬಂದು ಅದಕ್ಕೆ ತಕ್ಕಂತೆ (ನೀನು ಹೇಳಿದಂತೆ) ಪ್ರತ್ಯೇಕ ಪಟ್ಟಿಯಿಂದ ಅನುಕೂಲವಾಗುವಂತೆ ನನಗೆ ನಿದರ್ಶನ ತಂದುಕೊಟ್ಟರೆ ಅಪ್ಪಣೆ ಕೊಡುತ್ತೇವೆ' ಅಂತ ಹೇಳಿದರು. 'ಸ್ವಾಮಿ! ಈ ಕಾರ್ಯಕ್ಕೆ ಸಾಧಾರಣ ೧೦,೦೦೦ - ೧೨,೦೦೦ ರೂಪಾಯಿಗಳು ಹಿಡಿಯಬಹುದೆಂದು ಈಗ ಅಂದುಕೊಂಡಿದ್ದೇನೆ. ಮಹತ್ಕಾರ್ಯಗಳಲ್ಲಿ ನಮ್ಮ ಅಂದಾಜಿಗಿಂತಲೂ ಹೆಚ್ಚು ಖರ್ಚಾಗುವುದು ಉಂಟು. ಅದಕ್ಕಾಗಿ ಹೆದರುವ ಕಾರಣವೂ ಇಲ್ಲ. ನಮಗೆ ಮನವರಿಕೆಯಾಗುವ ಸಲುವಾಗಿ ಈ ಸಾಯಂಕಾಲದೊಳಗಾಗಿ ನನಗೆ ಬೇಕಾದ ಈ ಪ್ರಾಂತೀಯ ಶ್ರೀಮಂತ ಗೌಡರಿಗೆ ಹೇಳಿಕಳುಹಿಸಿ ಪಟ್ಟೀ ಮಾಡುತ್ತೇನೆ. ನೋಡೋಣವಾಗಲಿ, ಮನಃ ಪ್ರಶಸ್ತವಾದರೆ ಆಜ್ಞಾ ಕೊಡೋಣಾಗಲಿ' ಅಂತ ಆಗ್ರಹಪೂರ್ವಕ ವಿಜ್ಞಾಪನಾ ಮಾಡಿಕೊಂಡನು. 'ಒಳ್ಳೇದು ಈ ದಿನ ಸಾಯಂಕಾಲ ನಿನಗೆ ಬೇಕಾದ ಗೃಹಸ್ಥರು ಬಂದು ಯಾರ್‍ಯಾರು ಎಷ್ಟು ಕೊಡುವುದಾಗಿ ವಾಗ್ದಾನ ಮಾಡುವರೋ ಅದನ್ನು ನೋಡಿಕೊಂಡು ಆಮೇಲೆ ಆಜ್ಞಾ ಕೊಡುತ್ತೇನೆ' ಅಂತ ಹೇಳಲು, ತತ್ಕಾಲ ಆಯಾ ಜನಗಳಿಗೆ ಬರಲೋಸಗ ಪತ್ರಗಳನ್ನು ಬರೆದು ತನ್ನ ಆಳುಗಳನ್ನು ಕಳುಹಿಸಿದನು. ಆ ಜನಗಳ ಪೈಕಿ ಬಹು ಜನರು ಬಂದರು. ಕೆಲವರು ಊರಲ್ಲಿರದ ಮೂಲಕ ಬಂದ ಮೇಲೆ ಕಳಿಸಿ ಇದರ ಬಗ್ಗೆ ಕೊಡುತ್ತೇವೆಂಬುದಾಗಿ ಆಯಾ ಮನೆಯವರು ಹೇಳಿದರು. ಕೆಲವರು ಈಗಲೇ ಬರಲು ಅವಕಾಶವಿಲ್ಲ, ನಾಳೆ ನಾಡದ್ದು ಬಂದು ಭೇಟಿ ಆಗುತ್ತೇವೆ ಅಂತ ಹೇಳಿಕಳಿಸಿದರು. ಆ ಬಂದ ಜನರಿಗೆ 'ಗುರುರಾಜಾಚಾರ್ಯರನ್ನು' ತೋರಿಸಿ, 'ಆ ನಮ್ಮ

ಗುರುಗಳು (ಶ್ರೀ ಮುತ್ತಿಗಿ ಆಚಾರ್ಯರು) ತಮ್ಮ ಶಿಷ್ಯರಾದ ಈ ನಾರಾಯಣ ಪೇಟೆಯ ಬೊಜ್ಜಿ ಗುರುರಾಜಾಚಾರ್ಯರಿಗೆ ಯಜ್ಞ ಮಾಡಲು ಆಜ್ಞಾ ಮಾಡಿದ್ದಾರೆ. ಅವರು (ಈ ಗುರುರಾಜಾಚಾರ್ಯರು) ಬಹಳ ಬಡವರು, ಯಜ್ಞವೆಂದರೆ ಸಾಮಾನ್ಯವಲ್ಲ. ಸುಮಾರು ೨೦-೨೫ ಸಾವಿರ ರೂಪಾಯಿಗಳವರೆಗೂ ಖರ್ಚು ಬರುತ್ತದೆ. ಇದನ್ನು ಕುಗ್ರಾಮವಾದ ಇಡ್ಲೂರಲ್ಲಿ ಮಾಡಬೇಕೆಂದುಕೊಂಡಿದ್ದರು. ಅಲ್ಲಿ ನಿಮ್ಮಗಳಿಗೆಲ್ಲ ಪೂರಾ ಸಂಭ್ರಮ ನೋಡಲು ಆಗುವದಿಲ್ಲ. ಕದಾಜಿತ್ ಹೋದರೆ ಒಂದು ದಿನದ ಮಟ್ಟಿಗೆ ಕೆಲವರು ಹೋಗಿ ಬರಬಹುದು ಅಂತ ಆಲೋಚಿಸಿ, ಈ ಕೃಷ್ಣಾನದಿ ತೀರದ ವೆಂಕಟೇಶ ದೇವರ ಹಾಗು ಶ್ರೀ ಯಾದವೇಂದ್ರ ತೀರ್ಥರ ವೃಂದಾವನ ಸಮೀಪ ಯಾಗ ಮಾಡಿದರೆ ನಮ್ಮಗಳಿಗೆಲ್ಲಾ ಪೂರಾ ಸಂಭ್ರಮ ನೋಡಲಿಕ್ಕೆ ಆಗುವದೆಂದು ಯೋಚಿಸಿ ಇದಕ್ಕೆ ತಕ್ಕಂತೆ ನಿಮ್ಮಗಳ ಸಹಕಾರದ ಭರವಸೆಯಿಂದ ನಮ್ಮೂರಲ್ಲಿ (ಮುಡಮಾಲಿಯಲ್ಲಿ) ಮಾಡುವದಾಗಿ ವಿಜ್ಞಾಪನಾ ಮಾಡಿಕೊಂಡಿದ್ದೇವೆ. ಆದ್ದರಿಂದ, ನೀವುಗಳು ನಿಮ್ಮ ನಿಮ್ಮ ಶಕ್ತ್ಯಾನುಸಾರ ಈ ಮಹಾತ್ಕಾರ್ಯದಲ್ಲಿ ದೃಷ್ಟಿಯಿಟ್ಟು ಪಟ್ಟಿಹಾಕಿರಿ' ಅಂತ ಪೀಠಿಕಾ ಹೇಳಿದನು. ಈ ರಾಮರಾಯನ ಮಾತು ಯಾರು ಮೀರಲು ಸಾಧ್ಯವಿಲ್ಲದ್ದರಿಂದ ಸರ್ವರೂ ಏಕಗ್ರೀವರಾಗಿ 'ಬಹಳ ಒಳ್ಳೇ ಕೆಲಸ ಮಾಡಿದಿರಿ, ಈವರೆಗೂ ಇಲ್ಲಿ ಯಜ್ಞ ಯಾಗಾದಿಗಳು ಆಗಿಲ್ಲ. ಆದ್ದರಿಂದ ನಮ್ಮಗಳಿಗೆ ನೋಡಲು ಸಾಧ್ಯವಾಗಿಲ್ಲ. ಈಗ ಅನಾಯಾಸ ಸುಸಂಧಿಯನ್ನು ಒದಗಿಸಿಕೊಟ್ಟ ಮೇಲೆ ಅದನ್ನು ಕಳೆದುಕೊಳ್ಳುವುದುಂಟೆ! ನೀವು ಹೇಳಿದಷ್ಟು ದ್ರವ್ಯ ಕೊಡುತ್ತೇವೆ, ಬಹು ಸಂಭ್ರಮವಾಗಿ ನಡಿಸಿರಿ' ಅಂತ ಆ ಜನರುಗಳು ಅಭಿವಚನವಿತ್ತು, ತಮ್ಮ ತಮ್ಮ ಕೈಲಾದಮಟ್ಟಿಗೆ ಒಬ್ಬೊಬ್ಬರು ೧,೫೦೦ ರೂಪಾಯಿಗಳಂತೆ ಪಟ್ಟಿ ಹಾಕಿದರು. ಈ ರೀತಿ ಪಟ್ಟಿಯು ಹದಿನೈದು ಸಾವಿರ ರೂಪಾಯಿಗಳಿಗೆ ಮೀರಿತ್ತು. ಈ ಯಜ್ಞಾರಂಭ ದಿನಗಳು ಇನ್ನು ೨೫ ದಿನಗಳು ಮಾತ್ರ ಉಳಿದಿವೆ. ಆದ್ದರಿಂದ ಈಗ ಹಾಕಿದ ಪಟ್ಟಿ ಪ್ರಕಾರ ರೂಪಾಯಿಗಳನ್ನು ಒಂದು ವಾರದಲ್ಲಿ ಕಳಿಸಿಕೊಡಿರಿ ಅಂತ ರಾಮರಾಯನು ಗಂಭೀರ ವಾಣಿಯಿಂದ ನುಡಿದನು. ಅವಶ್ಯ ಕಳಿಸುತ್ತೇವೆ, ಅಂತ ಅಭಿವಚನ ಕೊಟ್ಟು ತಮ್ಮ ತಮ್ಮ ಗ್ರಾಮಗಳಿಗೆ ಹೋದರು. 'ಸ್ವಾಮಿ ನೋಡಿದಿರಾ! ಈಗ ಬಂದವರಿಂದಲೇ ಇಷ್ಟು ಪಟ್ಟಿ ಆಯಿತು. ಇನ್ನೂ ಬರತಕ್ಕವರಿದ್ದಾರೆ. ಅವರಗಳಿಂದಲೂ ಇನ್ನೂ ಹತ್ತು ಹನ್ನೆರಡು ಸಾವಿರ ರೂಪಾಯಿಗಳ ಪಟ್ಟಿ ಆಗುವದು. ಆದ್ದರಿಂದ ಈ ಯಜ್ಞದೊಂದಿಗೆ ಶ್ರೀ ಉತ್ತರಾದಿ ಮಠಾಧೀಶರು ಮಳಖೇಡ ಕ್ಷೇತ್ರದಲ್ಲಿ ಮಾಡುವಂತೆ ವಿದ್ವತ್ಸಭಾ ಮಾಡಿ ಆಯಾ ವಿದ್ವಾಂಸರ ಯೋಗ್ಯತಾನುಗುಣ ಸಂಭಾವನೆ ಕೊಟ್ಟು ಕಳಿಸಿದರಾಯಿತು. ಪ್ರಯುಕ್ತ ಮಳಖೇಡಕ್ಕೆ (ಸಭಾಕ್ಕೆ) ಬರುವವರಾದ ಅನೇಕ ದೇಶದ ವಿದ್ವಾಂಸರಿಗೆ ಆಹ್ವಾನ ಪತ್ರಿಕಾ ಈಗಲೇ ಕಳಿಸಿದರೆ ಅನುಕೂಲ. ಯಾಕೆಂದರೆ, ಮಳಖೇಡ ಸಭಾಕ್ಕೆ ಹೊರಡುವ ಸಲುವಾಗಿ ಆಯಾ ವಿದ್ವಾಂಸರು ತಮ್ಮ ತಮ್ಮ ಸ್ಥಲವನ್ನು ಬಿಟ್ಟು ಹೊರಡುವ ಮುಂಚೆ ನಮ್ಮ ಆಹ್ವಾನ ಪತ್ರಿಕಾ ಕಳಿಸಿಬಿಡೋಣ' ಅಂತ ರಾಮರಾಯನು ನುಡಿದು "ಶ್ರೀಕೃಷ್ಣಾ ನದೀ ತೀರದ ಮುಡಮಾಲಿಯೆಂಬ ಗ್ರಾಮ ಶ್ರೀ

ವೆಂಕಟೇಶದೇವರ ಹಾಗು ಶ್ರೀ ಯಾದವೇಂದ್ರತೀರ್ಥರ ವೃಂದಾವನ ಸನ್ನಿಧಾನದಲ್ಲಿ ನಾರಾಯಣಪೇಟೆಯ ಬೊಜ್ಜಿ ಗುರುರಾಜಾಚಾರ್ಯರಿಂದ ಸೋಮಯಾಗ ತಥಾ ವಿದ್ವತ್ಸಭೆಯು ಶಾ.ಶ. ಪಿಂಗಳನಾಮ ಸಂ. ಮಾಘ ಶುದ್ಧ ೧೫ ಪೌರ್ಣಿಮಾರಭ್ಯ ಷಷ್ಠಿವರಿಗೂ ನಡೆಯುತ್ತದೆ. ಈ ಸಮಾರಂಭಕ್ಕೆ ತಾವುಗಳು ತಮ್ಮ ಶಿಷ್ಯ, ಮಿತ್ರ, ಪುತ್ರ, ಕಳತ್ರ, ಸಮೇತ ಬಂದು ಯಜ್ಞ ಪ್ರತಿಪಾದ್ಯನ ಆರಾಧನೆ ನೋಡಿ, ವಿದ್ವತ್ಸಭೆಯಲ್ಲಿ ಭಾಗವಹಿಸಿ ನಮ್ಮಿಂದ ಮಾಡಲ್ಪಡುವ ಮರ್ಯಾದೆಯನ್ನು ಸ್ವೀಕರಿಸಿ ಕೃತಾರ್ಥರನ್ನಾಗಿ ಮಾಡುವದಾಗಿ ವಿಜ್ಞಾಪನಾ. ಸಂಭಾವನೆಯು ೨೫ ರೂಪಾಯಿಗಳ ಮೊದಲ್ಗೊಂಡು ೧೦೦ ರೂಪಾಯಿಗಳವರೆಗೂ ಇಡಲಾಗಿದೆ. ತಮ್ಮಗಳ ಮನೋಭಿಲಾಷಿ ಆದವಾನಿಯ ಮುತ್ತಿಗಿ ಶ್ರೀನಿವಾಸಾಚಾರ್ಯ, ಮುಕ್ಕಾಂ ಮುಡಮಾಲಿ – ಅಂತ ಮಾಘ ಶುದ್ಧ ಪ್ರತಿಪದಾ ಸಮಾರಂಭಕ್ಕೆ ದೇಶ ದೇಶದ ವಿದ್ವಾಂಸರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಬರೆದು ಟಪಾಲಿಗೆ ಹಾಕಲಾಯಿತು ಮತ್ತು ಮಾಡಬೇಕಾದ ಕಾರ್ಯಕ್ರಮಗಳನ್ನನುಸರಿಸಿ ಕಾರ್ಯಗಳನ್ನು ಮಾಡಲುಪಕ್ರಮ ಮಾಡುವಂತೆ ಆ ರಾಮರಾಯನಿಗೆ ಹೇಳಿ ಮುತ್ತಿಗಿ ಆಚಾರ್ಯರು ಆದವಾನಿಗೆ ಪ್ರಯಾಣೋನ್ಮುಖರಾದರು. ಬೊಜ್ಜಿ ಗುರುರಾಜಾಚಾರ್ಯ ಹಾಗು ಅವರ ಲೌಕಿಕಸ್ಥನು, ನನಗೆ ಕಚೇರಿಯ (ಸರ್ಕಾರದ) ಕೆಲಸಗಳು ವಿಶೇಷ ಇರುವರಿಂದ ನಾನು ಊರಲ್ಲಿಯೇ ಇರಬೇಕಾದ್ದರಿಂದ ಈ ಕಾರ್ಯಗಳನ್ನು ನಿರ್ವಾಹ ಮಾಡಲಾಗುವುದಿಲ್ಲ. ಪ್ರಯುಕ್ತ ಈ ಕೆಲಸಗಳು ಸಕಾಲಕ್ಕೆ ಸರಿಯಾಗಿ ನೆರವೇರುವಂತೆ ತಾವೇ ಈ ಕಾರ್ಯದಲ್ಲಿ ಪ್ರವೃತ್ತರಾಗಬೇಕು. ಇದಕ್ಕಾಗಿ ತಮ್ಮ ಕಡೆ ನನ್ನ ಒಬ್ಬ ಗುಮಾಸ್ತನನ್ನು ದ್ರವ್ಯವನ್ನು ಕೊಟ್ಟು ಕಳಿಸುವೆ ಎಂದು ವಿಜ್ಞಾಪನಾ ಮಾಡಿಕೊಂಡನು. ಹಾಗಾದರೆ, 'ಈಗ ನಾವು ಆದವಾನಿಗೆ ಹೋಗಿ ಅಲ್ಲಿ ಮನೆಯ ವ್ಯವಸ್ಥಾ ಮಾಡಿ ಮೂರು ನಾಲ್ಕು ದಿನಗಳಲ್ಲಿ ಬಂದು ಕಾರ್ಯ ಆರಂಭಿಸುತ್ತೇವೆ ಮತ್ತು ಅಷ್ಟರಲ್ಲಿ ಯಜ್ಞಸ್ಥಳವನ್ನು ಸ್ವಚ್ಛ ಮಾಡಿ ಬೇಕಾಗುವ ಬಿದಿರು ಚಾಪೆ ಇತ್ಯಾದಿ ಮತ್ತು ಅಕ್ಕಿ, ಬ್ಯಾಳಿ, ತುಪ್ಪ, ಸಕ್ಕರೆ ವಗೈರೆ ಆಹಾರ ಪದಾರ್ಥಗಳನ್ನು ತರಬೇಕು' ಅಂತ ಆಜ್ಞಾ ಮಾಡಿದರು. ಒಳ್ಳೇದು ಎಂದು ಆ ದಿನವೇ, ಆತನು ಆಲೋಚಿಸಿ, ತರಿಸುವ ಪದಾರ್ಥಗಳ ಪಟ್ಟಿ ತಯಾರು ಮಾಡಿ ಒಬ್ಬ ಗುಮಾಸ್ತನನ್ನು ಹಾಗೂ ಒಬ್ಬ ಜವಾನನ್ನು ಐದು ಸಾವಿರ ರೂಪಾಯಿಗಳೊಂದಿಗೆ ರಾಯಚೂರಿಗೆ ಹೋಗಿ ತರುವದಾಗಿ ಅಪ್ಪಣೆ ಮಾಡಿದನು. ಇನ್ನೊಬ್ಬನಿಗೆ ಯಾಗಕಾಲಕ್ಕೆ ಬೇಕಾಗುವ ಬಿದಿರು, ಚಾಪಿ ಇತ್ಯಾದಿ ಸಲಕರಣೆಗಳನ್ನು ತರಲು ರಾಯಚೂರಿಗೆ ಕಳುಹಿಸಿದನು. ಇದರಂತೆ ಒಬ್ಬೊಬ್ಬ ಜವಾನ, ಗುಮಾಸ್ತರಿಗೆ ಬೇರೆ ಬೇರೆ ಕೆಲಸಗಳನ್ನು ಹಂಚಿಕೊಟ್ಟನು. ಆ ಪ್ರಕಾರ ಗುಮಾಸ್ತರು ಹಾಗು ಜವಾನರು ಕಾರ್ಯೋನ್ಮುಖರಾದರು. ಇತ್ತ ಈ ಮುತ್ತಿಗಿ ಆಚಾರ್ಯರು ಸ್ವಗ್ರಾಮ (ಆದವಾನಿಗೆ) ಬಂದು ಮನಿಯಲ್ಲಿ ವ್ಯವಸ್ಥೆ ಮಾಡಿ, ಮರಳಿ ಮುಡಮಾಲಿಗೆ ಹೋಗುವವರಾದರು. ಅಷ್ಟರಲ್ಲಿ ಈ, ರಾಮರಾಯನಿಗೆ ಏಕಾಏಕೀ ವಿಶೇಷ ಜ್ವರ ಬಂದವು. ಮೊದಲೇ ಮಹಾಮಾರಿ ಉಪದ್ರವ ಇದ್ದ ಊರು, ಅಂದಮೇಲೆ ಈಗ ವಿಶೇಷ ಜ್ವರ ಬರೋಣದರಿಂದ ಸರ್ವರೂ ಗಾಬರಿಯಾದರು. ಈ ಜ್ವರದ ಭರದಲ್ಲಿ ಏನೇನೋ ಪೇಚಾಡುತ್ತಿದ್ದರು. ಆ ಪೇಚಾಟದಲ್ಲಿ "ಈ ಯಜ್ಞ

ಹೂಡಿಕೊಂಡೆ, ಇದಕ್ಕೆ ಆ ಗೌಡರು ವಗೈರೆ ಜನರು ಪಟ್ಟಿಯೇನೊ ಹಾಕಿದರು! ಅವರು ಕೊಟ್ಟರೆ ನಿಜ, ಇಲ್ಲವಾದರೆ ಯಾವತ್ತು ಭಾರ ನನ್ನ ಮೇಲೆಯೇ ಬಿದ್ದರೆ ನನ್ನ ಗತಿಯೇನು! ಇತ್ಯಾದಿ ಅಧೈರ್ಯದ ಮಾತುಗಳಾಡಹತ್ತಿದನು. ಈ ರೀತಿ ಚಡಪಡಿಸುತ್ತಿರುವದಕ್ಕೂ ಮುತ್ತಿಗೀ ಆಚಾರ್ಯರು ಆತನಲ್ಲಿ ಹೋಗುವದಕ್ಕೂ ಸರಿಯಾಗಿತ್ತು. ಇವರು ಮಾರ್ಗಾಯಾಸದಿಂದ ಶ್ರಾಂತರಾಗಿ ಹೋಗಿ ಕೂಡುವವರಾದರು. ಆತನ ಈ ರೀತಿ ಪೇಚಾಟವನ್ನು ಕೇಳಿ ಇವರ ಮನಸ್ಸು ಕಳವಳಗೊಂಡು, "ಏನು ರಾಮರಾಯ! ಏನೇನೋ ಅನ್ನುತ್ತಲಿದ್ದೀಯಾ?" ಅಂತ ಕೇಳಲು 'ಸ್ವಾಮಿ! ತಾವು ಬೇಡವೆಂದು ಹೇಳಿದಾಗ್ಯೂ ಕೇಳದೆ ಹಟದಿಂದ ಈ ಯಜ್ಞ ಕಾರ್ಯದಲ್ಲಿ ಪ್ರಸಕ್ತನಾದೆ. ಆ ಪಟ್ಟಿ ಪ್ರಕಾರ ಆ ಜನರುಗಳು ಕೊಡದೆ ಹೋದರೆ ನನ್ನ ಗತಿ ಏನು? ಅಂತ ಗಾಬರಿಯಾಗ ಹತ್ತಿದೆ! ಮಾಡಲೇನು?' ಅಂತ ನುಡಿದನು. "ರಾಮರಾಯ! ಈ ಮೊದಲೇ ಎಲ್ಲಾ ರೀತಿಯಿಂದಲೂ ಈ ಯಜ್ಞ ಕಾರ್ಯದಲ್ಲಿ ಪ್ರಸಕ್ತನಾಗಬೇಡವೆಂದು ಹೇಳಿದಾಗ್ಯೂ ಕೇಳದೆ ನೀನೆ ದುಡುಕಿದಿ, ಈ ರೀತಿ ಗಾಬರಿಗೊಂಡು, ಕೊನೆಗಾಣಿಸದೆ ಮಧ್ಯದಲ್ಲಿ ಅಭಾಸಗೊಳ್ಳುವುದಕ್ಕಿಂತ ಪ್ರಥಮದಲ್ಲಿಯೇ ಕೈಬಿಡುವದು ಒಳ್ಳೇದು" ಅಂತ ಸಂತಾಪಗೊಂಡರು. ಈ ಮಾತು ಕೇಳಿದ ಕೂಡಲೇ ಬೇರೆ ಗುಮಾಸ್ತ, ಜವಾನರನ್ನು ಕರೆದು 'ಈಗಿಂದೀಗಲೇ ರಾಯಚೂರಿಗೆ, ಕಿರಾಣಿ ವಗೈರೆ ಸಾಂಭಾರಗಳನ್ನು, ಚಾಪಿ ವಗೈರೆ ಸಲಕರಣೆಗಳನ್ನೂ ತರಲೋಸುಗ ಹೋದವರಲ್ಲಿಗೆ ಹೋಗಿ ಆ ಪದಾರ್ಥಗಳನ್ನು ತರಕೂಡದಾಗಿಯೂ, ಕದಾಚಿತ್ ಖರೀದಿ ಮಾಡಿದಾಗ್ಯೂ ತಿರುಗಿ (ವಾಪಸ್) ಕೊಡುವದಾಗಿಯೂ, ಪಾಕ್ಷಕ ಪದಾರ್ಥಗಳನ್ನು ತೆಗೆದುಕೊಂಡು ಇಲ್ಲಿಗೆ ಬರುವ ಮಾರ್ಗದಲ್ಲಿದ್ದಾಗ್ಯೂ ಹಿಂತಿರುಗಿಹೋಗಿ ವಾಪಸ್ ಮಾಡುವದಾಗಿಯೂ, ಅದರಲ್ಲಿ ವಾಪಸ್ ಕೊಡುವ ನಿಮಿತ್ತ ನೂರಾರು ರೂಪಾಯಿಗಳು ನಷ್ಟವಾದರೂ ಚಿಂತೆಯಿಲ್ಲ, ಆ ಪದಾರ್ಥಗಳನ್ನು ತಿರುಗಿಕೊಟ್ಟು ರೂಪಾಯಿಗಳನ್ನು ತಿರುಗಿ ತರುವುದಾಗಿಯೂ ಕಟ್ಟಪ್ಪಣೆ ಮಾಡಿದರು. ಈ ಗುಮಾಸ್ತ ಜವಾನರು ತತ್ಕಾಲ ಹೊರಟರು. ಇತ್ತ ಈ ಕೃತಿಯನ್ನು ನೋಡಿ, ಮನೋವೈಕಲ್ಯವಾದರೂ ಸಹಿಸಿಕೊಂಡು, ಧೈರ್ಯವನ್ನು ತಾಳಿ ನುಡಿದದ್ದು ಹುಸಿಹೋಗ ಗೊಡದೆ ನಡೆಸುವೆವು ಅಂತ ಕೊಟ್ಟ ವರವನ್ನು ಈ ಸಮಯದಲ್ಲಿ ದಯಪಾಲಿಸಬೇಕು ಅಂತ ಶ್ರೀ ಹರಿವಾಯುಗಳನ್ನು ಪ್ರಾರ್ಥಿಸಿ, ಆಗಲೇ ಮುಡಮಾಲಿಯಿಂದ ಪ್ರಯಾಣ ಮಾಡಿ ಆದವಾನಿಗೆ ಬಂದರು.

೫೫. ವಿರೋಧವನ್ನು ರೋಧಿಸಿ ಧೀರರಾದರು.

ಇವರು (ಶ್ರೀ ಮುತ್ತಿಗಿ ಆಚಾರ್ಯರು) ದೇಶ ದೇಶದ ವಿದ್ವಾಂಸರುಗಳಿಗೆ ಕಳುಹಿಸಿದ ಆಮಂತ್ರಣ ಪತ್ರಿಕಾಗಳ ಮೂಲಕ ಬರುವ ಜನರು ಇಲ್ಲಿಗೆ ಬಂದು, ನೋಡಿ ನೊಂದುಕೊಂಡು, ಇಲ್ಲಿ ಯಜ್ಞವಿಲ್ಲವೆಂತಾಗಲು ಅವರು ತೊಂದರೆ ಪಡುವರು; ಹೀಗಾಗಬಾರದೆಂದು ಯೋಚಿಸಿ ಸ್ಥಲ ನೀರು ಇತ್ಯಾದಿ ವಸತಿಗೆ (ಮುಡಮಾಲಾಕ್ಕೆ ಹೋಗಬೇಕಾದರೆ ಕೃಷ್ಣಾ ಸ್ಟೇಷನ್ನಿನಲ್ಲಿ ಇಳಿಯಬೇಕಾಗುವದು ಇಲ್ಲಿ ಇಳಿಯದೆ ಹಾಗೇ ಪ್ರಯಾಣ ಬೆಳೆಸಿ ಬರುವದಕ್ಕೆ ಅನುಕೂಲವಿರಬೇಕೆಂದಾಲೋಚಿಸಿ) ಮಂತ್ರಾಲಯ ಮಾರ್ಗದ "ಅಣು ಮಂತ್ರಾಲಯವು"

ಸರ್ವ ರೀತಿಯಿಂದ ಅನುಕೂಲವೆಂದು ಅಲ್ಲಿ ಯಾಗ ಮಾಡುವುದು ಯುಕ್ತವೆಂದು ನಿಶ್ಚಯಮಾಡಿದರು. ಆ ಸ್ಥಲವು ಶ್ರೀ ರಾಘವೇಂದ್ರಸ್ವಾಮಿಗಳವರ (ರಾಯರ) ಮಠದ ಅಧಿಕಾರಕ್ಕೆ ಒಳಪಟ್ಟಿದ್ದರಿಂದ ಆ ಕಾಲದಲ್ಲಿ ಆ ಮಠದ ಪೀಠಾಧಿಪತಿಗಳಾದ ಶ್ರೀ ಸುಶೀಲೇಂದ್ರ ತೀರ್ಥಶ್ರೀಪಾದಂಗಳವರಿಗೆ, ಅಣು ಮಂತ್ರಾಲಯದಲ್ಲಿ ಯಜ್ಞ ಮಾಡುವದಿದೆ, ಇದಕ್ಕೆ ಆಜ್ಞಾ ದಯಪಾಲಿಸಬೇಕೆಂದು ವಿಜ್ಞಾಪನಾ ಪತ್ರವನ್ನು ಬರೆದುಕೊಂಡರು. ಅವರು (ಆ ಸ್ವಾಮಿಗಳವರು) ಅದನ್ನು ನೋಡಿ ಸಂತೋಷದಿಂದ 'ಆ ಸ್ಥಲದಲ್ಲಿ ಯಜ್ಞ ಮಾಡಲಿಕ್ಕೆ ನಮ್ಮ ಪೂರ್ಣ ಅನುಮತಿ ಉಂಟು ಮತ್ತು ನಮ್ಮ ಮಠದ ಯಾವ ಅಧಿಕಾರವನ್ನು ನಿಮಗೆ ವಹಿಸಿಕೊಟ್ಟಿದ್ದೇವೆ' ಎಂಬುದಾಗಿ ಉತ್ತರವನ್ನು ಹಾಗೂ ಇದೇ ಅಭಿಪ್ರಾಯದ ರೀತಿಯಲ್ಲಿ ಮಂತ್ರಾಲಯದ ತಮ್ಮ ಏಜೆಂಟರಿಗೂ ರಾಯಸವನ್ನು ಕಳಿಸಿದರು. ಈ ಮುತ್ತಿಗಿ ಆಚಾರ್ಯರಾದರೂ ಶ್ರೀಮಂತರೂ ಅಲ್ಲ ಅಥವಾ ದೊಡ್ಡ ಅಧಿಕಾರಸ್ಥರೂ ಅಲ್ಲ. ಅಂದಮೇಲೆ ಈ ಯಜ್ಞಕ್ಕೆ ಬೇಕಾಗುವಷ್ಟು ದ್ರವ್ಯವನ್ನು ಹೇಗೆ ಒದಗಿಸಬೇಕೆಂದು ಆಲೋಚನೆ ಉಂಟಾಗಲು ಶ್ರೀ ಹರಿವಾಯುಗಳು **"ಜಿತ್ವಾಹಿ ಶತ್ರೂಂಶ್ಚಯಶೋ ಲಭಸ್ವ"** ಅಂತ ಅಭಯಪ್ರದಾನ ಮಾಡಿದರು. ಇದರಿಂದ ಹೃಷ್ಟ ಪುಷ್ಟಾಂಗರಾಗಿ **"ಪ್ರಯತ್ನಮೇಕಮಗ್ರತೋ ವಿಧಾಯ ಭೂತಿ ಮಾಪ್ನುಯಾತ್"** ಎಂಬ ಉಕ್ತಿಗನುಸರಿಸಿ ಆದವಾನಿಯಲ್ಲಿ ಇರುವ 'ಓರಭಾವಿ ಕೃಷ್ಣಮೂರ್ತಿರಾಯ'ನೆಂಬ ಗೃಹಸ್ಥನನ್ನು, 'ಭಾಗಿ ಗುಂಡಪ್ಪ'ನೆಂಬ ವೈಶ್ಯ ವರ್ತಕನನ್ನು ಕುರಿತು ಈ ಯಜ್ಞ ವಿಷಯ ಪ್ರಸ್ತಾಪಿಸಲು 'ತಾವು ಇದಕ್ಕಾಗಿ ಮಾಡುವ ಆಜ್ಞಾಕ್ಕೆ ಬದ್ಧರಾಗಿದ್ದೇವೆ. ನಮ್ಮಿಂದ ಏನು ಸಹಾಯ ಪಡೆದುಕೊಳ್ಳುವ ತಮ್ಮ ಇಚ್ಛಾ ಇರುವದೋ ಅದನ್ನು ಸಂಕೋಚವಿಲ್ಲದೆ ತಿಳಿಸಿ. ನಮ್ಮಿಂದ ಸೇವಾ ಸ್ವೀಕಾರ ಮಾಡಬೇಕೆಂದು' ಆ ಉಭಯರು ಹೇಳಿದರು. ಈ ಉಭಯರ ಮಾತಿನ ಮೇಲಿಂದ ಯಜ್ಞ ಕಾರ್ಯವು ನೆರವೇರುವದೆಂದು ನಿಶ್ಚಯಿಸಿ ಕಾರ್ಯದಲ್ಲಿ ಪ್ರವೃಕ್ತರಾದರು. ಈ ಯಶಸ್ಸನ್ನು ಸಹಿಸದ ಕೆಲವು ಕುಹಕರು ಶ್ರೀ ಉತ್ತರಾದಿ ಮಠಾಧೀಶರಾದ ಶ್ರೀ ಶ್ರೀ ಸತ್ಯಧ್ಯಾನತೀರ್ಥ ಶ್ರೀಪಾದಂಗಳವರಿಗೆ ಈ ಮುತ್ತಿಗಿ ಆಚಾರ್ಯರ ವಿಷಯಕ ವೈಷಮ್ಯದ ಲಾಭವನ್ನು ಪಡೆಯುವ ಯತ್ನ ಮಾಡಿ, ಅವರ ಮೂಲಕ ಯಜ್ಞ ಭಂಗ ಮಾಡಿಸುವ ಪ್ರಯತ್ನ ಮಾಡುವವರಾದರು. ಇದಕ್ಕನುಸರಿಸಿ ಮಠದ ಪ್ರಥಮ ತೀರ್ಥ ಮೊದಲಾದ ಕಲಹಕ್ಕೆ ಕಾರಣವಾದ ನೆಪವನ್ನು ಮುಂದುಮಾಡಿ ಶ್ರೀ ಉತ್ತರಾದಿ ಮಠಾಧೀಶರನ್ನು ಕೆರಳಿಸಿದರು. ಯಜ್ಞ ಆರಂಭ ಕಾಲವು ಒಂದು ವಾರವೇ ಇದ್ದ ಮೂಲಕ ಯಜ್ಞಶಾಲ ರಚನವೇ ಮೊದಲ್ಗೊಂಡು ಸರ್ವ ಸನ್ನಾಹವನ್ನು ತ್ವರಿತಗತಿಯಿಂದ ಸಿದ್ಧಪಡಿಸಿ ಶಾ|| ಶ|| ೧೮೩೯ನೇ ಪಿಂಗಳನಾಮ ಸಂ|| ಮಾಘ ಶುಕ್ಲ ಪೌರ್ಣಮಾ ಸಂಕಲ್ಪ ಮಾಡಬೇಕಾಗಿತ್ತು. ಅಷ್ಟರಲ್ಲಿ ಮಹಬೂಬ ನಗರ (ಪಾಲ್ಮೂರಿ) ಜಿಲ್ಲೆಯ ಕೂಡಂಗಳ, ಕೋಸಿಗಿ ಪ್ರಾಂತದ ಋತ್ವಿಕರು ಬಂದು, ತಮ್ಮ ಕಾರ್ಯದಲ್ಲಿ ದಕ್ಷತೆಯನ್ನು ವಹಿಸಿ ಯಜ್ಞಾರಂಭಕ್ಕೆ ಯಾವ ಅಭ್ಯಂತರವೂ ಇಲ್ಲದೆ ತಮ್ಮ ಸಾಂಭಾರಗಳನ್ನು ಸಿದ್ಧಪಡಿಸಿಕೊಂಡು ವರ್ಣೆ ತೆಗೆದುಕೊಳ್ಳಲು ಸಿದ್ಧರಾಗಿದ್ದರು. ಈ ಸಂದರ್ಭದಲ್ಲಿ ಗುಟಕರಿಸುವ ಪಾನಕದಲ್ಲಿ ಕಡ್ಡಿ-ಅಡ್ಡ ಬಿದ್ದಂತೆ ಉತ್ತರಾದಿ

ಮಠದಿಂದ ಬಾಗಲಕೋಟೆಯ 'ಡೊಂಬಳ ಅನಂತಶಯನಾಚಾರ್ಯರು' ರಾಯಚೂರು, ಚಿಂಚೋಳಿ, ಶ್ರೀರಂಗದ ಉತ್ತರಾದಿ ಮಠಾಧಿಕಾರಿಗಳೊಡನೆ ಯಜ್ಞ ಪೂರ್ವ ಕಾಲದ ಚತುರ್ದಶಿ ಬರುವವರಾದರು. ಅವರು ಬಂದಕೂಡಲೇ ಸ್ವಾಗತವೀಯುವ ಸಲುವಾಗಿ ಬೊಜ್ಜಿ ಗುರುರಾಜಾಚಾರ್ಯನು ಧಾವಿಸಿ ಬಂದು ನಮಸ್ಕರಿಸಿ, 'ಯಾವ ಸ್ಥಲ? ಎಲ್ಲಿಂದ ಬರೋಣವಾಯಿತು? ತಮ್ಮ ಸಾಮಾನುಗಳನ್ನು ಈ ಕೋಣೆಯಲ್ಲಿ (Room) ಇಟ್ಟುಗೊಂಡು ಯಜ್ಞಸಮಾರಂಭವನ್ನು ಪೂರ್ತಿಗೊಳಿ". ಅನುಗ್ರಹ ಮಾಡಬೇಕು' ಅಂತ ವಿನಯಪೂರ್ವಕ ಹೇಳಿದನು. ಅವರು ಈ ಆದರದ ಕಡೆ ಲಕ್ಷ್ಯಗೊಡದೆ, 'ನಾವು ಉತ್ತರಾದಿ ಮಠದಿಂದ ಆಜ್ಞಾಪತ್ರ ತೆಗೆದುಕೊಂಡು ಬಂದಿದ್ದೇವೆ. ಆ ಆಜ್ಞಾಪತ್ರದಲ್ಲಿ ಇದ್ದಂತೆ ನಡೆದುಕೊಂಡರೆ ಸರಿ, ಇಲ್ಲವಾದರೆ ಯಜ್ಞ ನಡೆಯಲಾರದು' ಅಂತ ಸ್ವಲ್ಪ ಘಾಡುತರ ಧ್ವನಿಯಿಂದ ನುಡಿದರು. 'ಓಹೋ! ತಾವು ಉತ್ತರಾದಿ ಮಠದಿಂದ ಬರೋಣವಾಯಿತೋ! ಹಾಗಾದರೆ ಬಹಳ ಸಂತೋಷ' ಅಂತ ನುಡಿದನು. ಸಂತೋಷವೋ ವಿತೋಷವೊ! ಈ ಆಜ್ಞಾಪತ್ರ ತೆಗೆದುಕೊಳ್ಳಿರಿ ಅಂತ ಪತ್ರಿಕಾವನ್ನು ಕೈಗೆ ಕೊಟ್ಟರು. ಅದನ್ನು ಗುರುರಾಜಾಚಾರ್ಯನು ಓದಿಕೊಂಡು 'ಯದ್ಯಪಿ ಈ ಆಜ್ಞಾಪತ್ರವು ನನಗೆ ಬರೆದದ್ದಾಗಿದೆ. ಆದರೆ, ಎಲ್ಲ ಈ ಯಜ್ಞದ ಸ್ವಾತಂತ್ರ್ಯವು ನಮ್ಮ ಗುರುಗಳಾದ ಶ್ರೀ ಮುತ್ತಿಗಿ ಆಚಾರ್ಯರದು. ನಾನು ದ್ವಾರ ಪ್ರತಿಮಾ ಇದ್ದಂತೆ. ಸೂತ್ರಧಾರಕನು ಯಾವ ರೀತಿ ಆಡಿಸುವನೋ ಅದರಂತೆ ಆಡುವವನು. ಗೊಂಬೆಯ ಕಾರ್ಯದಂತೆ ನನ್ನ ಕಾರ್ಯ' ಅಂತ ಯಥಾರ್ಥ ವಿಷಯವನ್ನು ಹೇಳಿ ಆ ಪತ್ರಿಕಾವನ್ನು ತಿರುಗಿ ಅವರ ಕೈಗೆ ಕೊಟ್ಟನು. 'ಈ ವಿಷಯ ನಮಗೆ ಗೊತ್ತಿದೆ, ಆದಾಗ್ಯೂ ನೀನೇ ದೀಕ್ಷಿತನು. ಆದ್ದರಿಂದ ಆ ಪತ್ರವು ನಿನ್ನ ಹೆಸರಿನಲ್ಲಿದೆ, ಪ್ರಯುಕ್ತ ನಿನಗೆ ಕೊಟ್ಟೆವು. ಈಗ ಇದನ್ನು ಆ ಮುತ್ತಿಗೀ ಆಚಾರ್ಯರ ಕಡೆ ಕೊಡಲು ಹೋಗುವೆವು. ಅವರೆಲ್ಲಿದ್ದಾರೆ?' ಅಂತ ಗಂಭೀರ ಧ್ವನಿಯಿಂದ ಕೇಳಿಕೊಂಡು ಆ ಮುತ್ತಿಗಿ ಆಚಾರ್ಯರಿದ್ದಲ್ಲಿ ಹೋಗುವವರಾಗಿ ಆ ಆಜ್ಞಾಪತ್ರವನ್ನು ಕೊಟ್ಟರು. ಅವರು ಅದನ್ನು ನೋಡಿಕೊಂಡು 'ಸರಿ! ವಿದ್ಯಮಾನ ಸ್ಥಿತಿಗನುಸರಿಸಿ ಯಾವ ಮಠಕ್ಕೂ ಅವ ಮರ್ಯಾದಾ ಮಾಡದೆ, ಈ ಸ್ಥಳೀಯ ಯಜಮಾನರಾದ ಶ್ರೀ ರಾಘವೇಂದ್ರ ಸ್ವಾಮಿಗಳವರ (ರಾಯರ) ಮಠಕ್ಕೂ ಹಾಗೂ ಉತ್ತರಾದಿ ಮಠಕ್ಕೂ ಯೋಗ್ಯ ಮರ್ಯಾದೆ ಮಾಡಲಾಗುವುದು. ಅದು ಹೇಗೆಂದರೆ, 'ಋತ್ವಿಕರಿಗಾಗಿ ಆಗುವ ಪಾಕಾದಿ ಸರ್ವಕಾರ್ಯದ ನಿಮಿತ್ತ ಮಾಡುವ ತೀರ್ಥಾದಿ ಸರ್ವ ಮರ್ಯಾದೆ ಪ್ರಥಮ ಉತ್ತರಾದಿ ಮಠಕ್ಕೆ, ಭೂರಿ ಭೋಜನಾದಿ ಕಾರ್ಯಗಳ ನಿಮಿತ್ತ ಆಗುವ ಮರ್ಯಾದೆಗಳು ರಾಯರ ಮಠಕ್ಕೆ ಹೀಗೆ ಉಭಯ ಮಠಕ್ಕೂ ಯೋಗ್ಯ ಮರ್ಯಾದೆ ಮಾಡುವದೆಂದು ನಿರ್ಣಯ ಮಾಡಿಕೊಂಡಿದ್ದೇನೆ. ತಾವು ಉತ್ತಮರಾದಿ ಮಠದಿಂದಲೇ ಬಂದಿರೋಣದಿಂದ ತಮ್ಮನ್ನು ಆ ಮಠದ ಪ್ರತಿನಿಧಿಗಳೆಂದು ಭಾವಿಸಿ ಯಥಾರೀತಿ ಮರ್ಯಾದೆ ತಮಗೆ ಮಾಡಲ್ಪಡುವದು. ಸ್ವೀಕರಿಸಿ ಯಜ್ಞ ಕಾರ್ಯವನ್ನು ಸಾಂಗಗೊಳಿಸಬೇಕು' ಅಂತ ಹೃದ್ಯವನ್ನು ಹೇಳಿದರು. ಒಂದು ವಿಧವೇನೋ ಸರಿ. ಮತ್ತೊಂದು ವಿಧ (ರಾಯರ ಮಠಕ್ಕೆ ಮರ್ಯಾದೆ) ಮಾಡುವುದು ಸರಿಯಲ್ಲ. ಯಾಕೆಂದರೆ, ಕಿಂಚಿದಪಿ ಮರ್ಯಾದೆ ನಡಿಯ

ಕೂಡದಾಗಿ ಇದೆಯಷ್ಟೆ; ಅಂದಮೇಲೆ ನಿಮ್ಮ ಯೋಜನಾ ಏನು ಪ್ರಯೋಜನ? ಈಗ ಎರಡನೆಯ ಮಾತು ಏನೂ ಪ್ರಯೋಜನವಿಲ್ಲ. ಈ ಆಜ್ಞಾಪತ್ರದಂತೆ ನಡೆದುಕೊಳ್ಳುವಿರೋ ಅಥವಾ ಮಠಕ್ಕೆ ಬಂದು ಹೇಳಿಕೊಂಡು, ಅಲ್ಲಿ (ಒಪ್ಪಿಕೊಂಡಂತೆ) ನಿರ್ಣಯವಾದಂತೆ ನಡೆದುಕೊಳ್ಳುವಿರೊ' ಅಂತ ಕರ್ಕಶ ಧ್ವನಿಯಿಂದ ಅನಂತಶಯನಾಚಾರ್ಯರು ನುಡಿದರು. "ಹಾಗಾದರೆ, ಈ ಯಜ್ಞ ದೀಕ್ಷಿತನು ನಾನಲ್ಲ ಈ ಯಜ್ಞಪತ್ರ ನನಗೆ ಸಂಬಂಧವಿಲ್ಲ. ಆದ್ದರಿಂದ ಈ ಪತ್ರಿಕಾವನ್ನು ತೆಗೆದುಕೊಂಡು ಹಿಂತಿರುಗಿ ಹೋಗಿರಿ" ಅಂತ ಈ ಮುತ್ತಿಗಿ ಆಚಾರ್ಯರು ಸಹ ಪ್ರತಿಧ್ವನಿಯಿಂದಲೇ ಉತ್ತರ ಕೊಟ್ಟರು. 'ಇದೇನು ಹುಡುಗಾಟ ಅಂದುಕೊಂಡಿರಾ? ಪ್ರಥಮದಲ್ಲಿ ಆ ದೀಕ್ಷಿತನಲ್ಲಿ (ಬೊಜ್ಜಿ ಗುರುರಾಜಾಚಾರ್ಯರಲ್ಲಿ) ಈ ಆಜ್ಞಾಪತ್ರ ಕೊಟ್ಟರೆ ಈ ಯಾಗದ ಸರ್ವ ಸ್ವಾತಂತ್ರ್ಯ ನಿಮಗೆ ಇರೋಣದರಿಂದ ನಿಮ್ಮಲ್ಲಿಗೆ ಹೋಗುವುದಾಗಿ ಹೇಳಿದರು. ನೀವು ಅಲ್ಲಿಗೆ ಹೋಗುವುದಾಗಿ ಹೇಳುವಿರಿ. ಈ ನಿಮ್ಮಿಬ್ಬರ ನಡುವೆ ಓಡಾಡಲಿಕ್ಕೆ ನಾವು ಬಂದವರಲ್ಲ. ಈ ಆಜ್ಞಾಪತ್ರದಂತೆ ನಡೆದುಕೊಳ್ಳುವದಾದರೆ ಯಜ್ಞ ಸಾಗುತ್ತದೆ. ಇಲ್ಲವಾದಲ್ಲಿ ಯಜ್ಞ ಭಂಗವೇ ಸರಿ ಎಂದು ಇವರುಗಳನ್ನೇನು ಕೇಳುವದು? ಆ ಋತ್ವಿಜರನ್ನೇ ಇಲ್ಲಿಂದ ಈ ಸಾಯಂಕಾಲದ ಗಾಡಿಗೆ ಕಳಿಸಿಬಿಡೋಣ, ಆಮೇಲೆ ಯಜ್ಞ ಹೇಗೆ ಮಾಡುವರೋ ನೋಡೋಣ ಅಂತ ಹೇಳುತ್ತ ರಭಸದಿಂದ ಋತ್ವಿಜರುಗಳ ಕಡೆ ಅನಂತಶಯನಾಚಾರ್ಯರೇ ಮೊದಲಾಗಿ (ಉತ್ತರಾದಿ ಮಠದಿಂದ) ಬಂದವರೆಲ್ಲರೂ ನಡೆದರು. ಅಲ್ಲಿ ಋತ್ವಿಜರ ಪೈಕಿ ಮುಖ್ಯಸ್ಥರಾಗಿ ಅಧ್ವರ್ಯ ಕಾರ್ಯವನ್ನು ಮಾಡುವ ಕೋಸಿಗಿ (ಇದು ಮಹಬೂಬನಗರ ಜಿಲ್ಲಾಕ್ಕೆ ಸೇರಿದ ಗ್ರಾಮ) ಕೃಷ್ಣಾಚಾರ್ಯ, ಹೋತೃ (ಕಾರ್ಯವನ್ನು ಮಾಡತಕ್ಕ) ಬುಡ್ಡ ರಾಮಾಚಾರ್ಯರನ್ನು ಕರೆದು ನಾವು ಉತ್ತರಾದಿ ಮಠದಿಂದ ಆಜ್ಞಾಪತ್ರ ತಂದಿದ್ದೇವೆ. ಆಜ್ಞಾಪತ್ರ ಪ್ರಕಾರ ಈ ಯಜ್ಞ ಚಾಲಕರಾದ ಆ ಮುತ್ತಿಗಿ ಆಚಾರ್ಯರು ಮತ್ತು ಅವರ ಶಿಷ್ಯ ದೀಕ್ಷಿತರಾಗುವ ಬೊಜ್ಜಿ ಗುರುರಾಜಾಚಾರ್ಯರು ನಡದುಕೊಳ್ಳುವಂತೆ ಕಾಣುವದಿಲ್ಲ. ಪ್ರಯುಕ್ತ ನೀವು ಯಜ್ಞದಲ್ಲಿ ಋತ್ವಿಕ್ ಭಾಗವನ್ನಾಗಲೀ, ಮತ್ಯಾವ ಭಾಗವನ್ನಾಗಲೀ ವಹಿಸತಕ್ಕದ್ದಲ್ಲ. ಈ ಮಾತನ್ನು ನೀವು ಉಲ್ಲಂಘನಾ ಮಾಡಿದ ಪಕ್ಷದಲ್ಲಿ ಉತ್ತರಾದಿ ಮಠದಿಂದ ಶಾಸನಕ್ಕೆ (ಬಹಿಷ್ಕಾರಕ್ಕೆ) ಒಳಪಡುವಿರಿ. ಆಮೇಲೆ ನಿಮಗೆ ಬಹು ಶ್ರಮವಾದೀತು' ಅಂತ ಭಯಪಡಿಸಿದರು. ಆ ಋತ್ವಿಜರು ಭಯಗ್ರಸ್ಥರಾಗಿ ಆ ಮಠೀಯ ಪ್ರತಿನಿಧಿಗಳ ಸಹಿತ ಬೊಜ್ಜಿ ಗುರುರಾಜಾಚಾರ್ಯ ತಥಾ ಈ ಮುತ್ತಿಗಿ ಆಚಾರ್ಯರಲ್ಲಿಗೆ ಬಂದು (ಆ ಕೋಸಿಗಿ ಕೃಷ್ಣಾಚಾರ್ಯ ತಥಾ ಬುಡ್ಡ ರಾಮಾಚಾರ್ಯರೂ ಬಂದು) 'ಉತ್ತರಾದಿ ಮಠದಿಂದ ಆಜ್ಞಾಪತ್ರವು ಬಂದಿರುವದಷ್ಟೆ! ಆ ಪ್ರಕಾರ ನಡೆದುಕೊಳ್ಳುವದಾದರೆ ನಾವುಗಳು ಯಜ್ಞ ಪೂರ್ತಿಗೊಳಿಸುವೆವು, ಇಲ್ಲವಾದರೆ ನಾವು ನಿಲ್ಲಲಾರೆವು' ಅಂತ ಅವರುಗಳು ಸಹ ಹೇಳಿದರು. "ಇಷ್ಟು ಭಯದಿಂದ ದುಡುಕುವುದೇಕೆ? ನಾಳೆಯೇ ಸಾಯಂಕಾಲ ಯಜ್ಞಾರಂಭ ಆಗತಕ್ಕದ್ದಿರುವದರಿಂದ ಈಗಲೇ ಮಠಕ್ಕೆ ಹೋಗಿ ಬರುವಷ್ಟು ಅವಕಾಶವಿಲ್ಲ. ಈ ಯಜ್ಞ ಪೂರೈಸಿದ ಮೇಲೆ ನಾವೂ ನೀವೂ ಕೂಡಿ ಮಠಕ್ಕೆ ಹೋಗೋಣ, ಅಲ್ಲಿ ನಿಮಗೆ ಯಾವ ತರಹದ ಅಪಮರ್ಯಾದೆ ಅಥವಾ

ಶಾಸನ (ಬಹಿಷ್ಕಾರ) ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಈಗ ಬಂದ ಮಠದವರ ಮಾತು ಕೇಳಿ ಭಯಪಡುವದನಾವಶ್ಯಕ" ಅಂತ ಈ ಮುತ್ತಿಗಿ ಆಚಾರ್ಯರು ಆ ಋತ್ವಿಜರುಗಳಿಗೆ ಆಶ್ವಾಸನಪೂರ್ವಕ ಧೈರ್ಯವನ್ನು ಕೊಟ್ಟರು. ಈ ಮಾತಿಗೆ ಆ ಮಠದಿಂದ ಬಂದವರು, ಅದೆಲ್ಲ ಆಗತಕ್ಕದ್ದಲ್ಲ. ಈ ಆಜ್ಞಾಪತ್ರದಂತೆ ನಡೆದುಕೊಂಡರೇನೆ ಯಜ್ಞ ಸಾಗುವುದು. ಇಲ್ಲವಾದರೆ **ದಕ್ಷಯಜ್ಞ** ಭಂಗವೆಂದೇ ಭಾವಿಸಬೇಕು ಅಂತ ರೌದ್ರದಿಂದ ಅನಂತಶಯನಾಚಾರ್ಯರು ನುಡಿದರು. "ಏನು? ಈ ರೀತಿ ಮಾತನಾಡುತ್ತೀರಿ? ನೀವು ಯಜ್ಞ ಭಂಗ ಮಾಡುವ ಪ್ರತಿಜ್ಞಾದಿಂದಲೇ ಬಂದಂತಿದೆ. ಆದ್ದರಿಂದ ಧರ್ಮ ಪ್ರತಿಷ್ಠಾಪನಾಚಾರ್ಯರಾದವರಿಂದ 'ಈ ರೀತಿ ಯಾಗಾದಿ ಸತ್ಕಾರ್ಯಕ್ಕೆ ಪ್ರತಿಬಂಧ ಮಾಡುವದು ಸರಿಯಲ್ಲ" ಅಂತ ಅಂದರು. ಈ ಮುತ್ತಿಗಿ ಆಚಾರ್ಯರ ಮಾತು ಏನು ಕೇಳೋದು? ಈಗಿಂದೀಗಲೇ ನೀವು ಪ್ರಯಾಣ ಮಾಡಿ ಮಠಕ್ಕೆ ಹೋಗಿರಿ, ಅದಕ್ಕಾಗಿ ಮಾರ್ಗದ ಖರ್ಚಿಗೆ ಮತ್ತು (ಈಗ ನೀವು ಯಾಗವನ್ನು ಮಾಡಿಸಿದ್ದರೆ) ನಿಮ್ಮೆಲ್ಲರಿಗೂ ಬರುವ ದ್ರವ್ಯದ ದ್ವಿಗುಣಿತ (ದುಪ್ಪಟ್ಟು) ದ್ರವ್ಯವನ್ನು ತೆಗೆದುಕೊಳ್ಳಿರಿ ಮತ್ತು ಒಂದು ಕ್ಷಣ ಸಹ ಇಲ್ಲಿ ನಿಲ್ಲದೆ ಹೊರಡಿರಿ' ಅಂತ ಅನಂತಶಯನಾಚಾರ್ಯರು ಋತ್ವಿಜರನ್ನು ಗದರಿಸಿಕೊಂಡು ತತ್ಕಾಲ ಐದುನೂರು ರೂಪಾಯಿಗಳನ್ನು ಅವರಿಗೆ ಕೊಟ್ಟರು. ಅದನ್ನು ತೆಗೆದುಕೊಂಡು ಆ ಋತ್ವಿಜರು ಪ್ರಯಾಣೋನ್ಮುಖರಾದರು. ಆಗ ಈ ಅನಂತಶಯನಾಚಾರ್ಯರು ಅಂದದ್ದೇನೆಂದರೆ '**ನೋಡಿದಿರಾ! ನಮ್ಮ ಉತ್ತರಾದಿ ಮಠದ ಶಾಸನತ್ವದ ಅಧಿಕಾರ!!!** ಇನ್ನಾದರು ಬುದ್ಧಿ ತಂದುಕೊಂಡು ಆಜ್ಞಾಪತ್ರದಂತೆ ನಡೆದುಕೊಂಡು ನಿಮ್ಮ ಯಾಗವನ್ನು ನೆರವೇರಿಸಿಕೊಳ್ಳಿರಿ. ಇಲ್ಲವೆ ಯಜ್ಞ ಭಂಗವೇ ನಿಶ್ಚಯ' ಅಂತ ತುಚ್ಛಭಾವದಿಂದ ಆಗ್ರಹಪೂರ್ವಕ ನುಡಿದರು. ಆ ಋತ್ವಿಜರೂ ಆ ಮಠೀಯರ ಮಾತಿನಲ್ಲಿ ಏಕೀಭವಿಸಿ 'ನಾವುಗಳು ಆಜ್ಞಾಪತ್ರದಂತೆ ನಡೆದುಕೊಳ್ಳುವುದು ಶ್ರೇಯಸ್ಕರ. ನಾವುಗಳು ಗುರುಗಳ ಆಜ್ಞಾಬದ್ಧರು. ಪ್ರಯುಕ್ತ ಆಜ್ಞಾಪತ್ರ ಮೀರಲಿಕ್ಕಾಗದು' ಅಂತ ಅವರಿಗೆ ತೋಚಿದಂತೆ ಹಿತೋಕ್ತಿಯೋಪಾದಿಯಲ್ಲಿ ನುಡಿದರು. 'ಯದ್ಯಪಿ ನಮಗೆ ಅವರಿಗೆ ಸಾಮಾನ್ಯ ಗುರು ಶಿಷ್ಯ ಭಾವವಿದ್ದರೂ ಕೇವಲ ಗುರು ಶಿಷ್ಯ ಭಾವವಿದ್ದ ದ್ರೋಣಾರ್ಜುನರು ಯುದ್ಧವೆಂದು ಭಾವಿಸಿದಂತೆ ಅವರು ಮಾಡುವ ಯಜ್ಞಭಂಗ ಪ್ರತಿಜ್ಞಾಕ್ಕೆ ನಾನು ಪ್ರತಿ-ಪ್ರತಿಜ್ಞಾ ಮಾಡುತ್ತೇನೆ, ಅದೇನೆಂದರೆ, **'ಈ ಯಾಗವನ್ನು ಎಂದಿಗಾದರು ಆರಂಭಿಸಿ ಪೂರೈಸಿಗೊಂಡೇ ಈ ಸ್ಥಳದಿಂದ ಕಾಲು ತೆಗೆಯುತ್ತೇನೆ'** ಅಂತ ಈ ಚರಿತ್ರ ನಾಯಕರು ರಭಸದಿಂದಲೇ ಪ್ರತಿಜ್ಞಾ ಮಾಡುವಂಥವರಾದರು. ಹಾಗಾದರೆ, ಜಗತ್ತಿನಲ್ಲಿ 'ಉತ್ತರಾದಿ ಮಠೀಯರ ವ್ಯತಿರಿಕ್ತ ಅನ್ಯ ಮಠೀಯರಿಗೆ ಋತ್ವಿಕ್ ಕಾರ್ಯ ಮಾಡಿಸಲು ಬರುವುದಿಲ್ಲ ಅಂದಮೇಲೆ ಯಾಗವನ್ನು ಹೇಗೆ ಮಾಡುವಿರಿ? ಗತ್ಯಂತರವಿಲ್ಲದೆ ಸ್ವಾರ್ಥದಿಂದಲೇ ನೀವು ಯಾಗವನ್ನು ಮಾಡಿಸಬೇಕಾಗುತ್ತದೆ' ಅಂತ ಅನಂತಶಯನಾಚಾರ್ಯರು ಅಂದರು. ಅವಕ್ಕೆ ಇವರು 'ನಿಜ! ಆದರೆ ನಾನು ಸ್ವಾರ್ಥದಿಂದಲೂ ಮತ್ತು ಅನ್ಯ ಮಠೀಯರಿಂದಲೂ ಯಾಗವನ್ನು ಮಾಡಿಸದಲೇ ಕೇವಲ ಉತ್ತರಾದಿ ಮಠೀಯ ಋತ್ವಿಜರಿಂದಲೇ ಯಾಗವನ್ನು ವಿಜೃಂಭಣೆಯಿಂದ ಮಾಡಿಸಿಯೇ

10AF

ಇಲ್ಲಿಂದ ಕಾಲು ತೆಗೆಯುತ್ತೇನೆ. ಇದಕ್ಕೆ ಹರಿವಾಯುಗಳೇ ಸಾಕ್ಷಿಯಾಗಿರಲಿ ಅಂತ ಪ್ರತಿ ಉತ್ತರ ಕೊಟ್ಟರು. ಹಾಗಾದರೆ 'ನಾವು ಈ ಯಾಗವನ್ನು ನೆರವೇರಿಸದಂತೆ ಮಾಡಿ ದಕ್ಷ ಯಜ್ಞದಂತೆ ಭಂಗ ಮಾಡುವುದೇ ಸರಿ' ಅಂತ ಅನಂತಶಯನಾಚಾರ್ಯರು ಕ್ರೋಧದಿಂದಲೇ ಉತ್ತರ ಕೊಟ್ಟರು. 'ನೋಡೋಣ, ಹರಿವಾಯುಗಳು ನಮ್ಮ ಪಕ್ಷ ವಹಿಸುವರೋ ಅಥವಾ ನಿಮ್ಮ ಪಕ್ಷ ವಹಿಸುವರೋ, ಈ ವಿಷಯದಲ್ಲಿ ಪರೀಕ್ಷೆ ನಡೆದೆ ಹೋಗಲಿ ಅಂತ ಈ ಚರಿತ್ರನಾಯಕರು ಪ್ರತಿಜ್ಞಾ ಮಾಡಿದರು.

೫೬. ಋತ್ವಿಜರು ಋಜುಧರ್ಮವರಿತು ಬಂದರು.

ಇತ್ತ ಈ ಮುತ್ತಿಗಿ ಆಚಾರ್ಯರು ನೆರೆದಿದ್ದ ಜನರನ್ನು ಕುರಿತು 'ಎಂದಿಗಾದರು ಸರಿ, ಯಜ್ಞ ಸಮಾರಂಭವನ್ನು ನೋಡಿಕೊಂಡೇ ಹೋಗತಕ್ಕದ್ದು, ತಾವತ್ಪರಿಯಂತರ ಸತ್ಕಾಲಕ್ಷೇಪಾರ್ಥ ಪ್ರಾತಃಕಾಲದಲ್ಲಿ ಭಾಗವತವನ್ನು, ಮಧ್ಯಾಹ್ನ ರಾಮಾಯಣವನ್ನು, ಸಾಯಂಕಾಲ ಭಾರತವನ್ನು ಶ್ರವಣ ಮಾಡಿಸುವಂತೆ ವೇ. ಯಳಮೇಲಿ ವಿಠಲಾಚಾರ್ಯರ ಶಿಷ್ಯರಲ್ಲೊಬ್ಬರಾದ ನೇರಡಗುಂದಿ ವೆಂಕೋಬಾಚಾರ್ಯ'ರನ್ನು ನಿಯಮಿಸಿದರು. ಮತ್ತು 'ನಿಮ್ಮ ನಿಮ್ಮ ಮನೆಗಳಲ್ಲಿ ನೀವುಗಳು ನಡೆಸಿಕೊಳ್ಳುತ್ತಿರುವ ವ್ರತ ನಿಯಮಾದಿಗಳನ್ನು ಮಾಡಿಕೊಳ್ಳುತ್ತ, ಉಪನಯನ ವಿವಾಹ ಶುಭ ಕಾರ್ಯಗಳೇನಾದರೂ ಮಾಡಿಕೊಳ್ಳುವದಿದ್ದರೆ ಅದನ್ನು ನೆರವೇರಿಸಿಕೊಂಡು ಸ್ವಸ್ಥ ಚಿತ್ತರಾಗಿ ಶ್ರೀ ಹರಿವಾಯುಗಳ ಪಾದಾರವಿಂದ ಧ್ಯಾನಮಾಡುತ್ತ ವಾಸಮಾಡಿರಿ' ಅಂತ ಸರ್ವರಿಗೂ ವಿಜ್ಞಾಪನಾ ಮಾಡಿಕೊಂಡು, ಸೀತೆಯ ಶೋಧನಾರ್ಥ ಅಮಿತ ಪರಾಕ್ರಮಿಯಾದ ಹನುಮಂತನನ್ನು ದಕ್ಷಿಣ ದೇಶಕ್ಕೆ ಕಳಿಸಿದಂತೆ, ತಮ್ಮ ಶಿಷ್ಯನಾದ 'ಅಮಿತ ವಿಕ್ರಮರಾಯನನ್ನು' ದಕ್ಷಿಣಕ್ಕೆ ಋತ್ವಿಜರ ಶೋಧನಾರ್ಥ ಕಳುಹಿಸಿದರು. ಆತನು ಬೆಂಗಳೂರಲ್ಲಿ ಋತ್ವಿಕ ಕರ್ಮ (ಯಜ್ಞ) ಮಾಡಿಸತಕ್ಕವರು ಎಲ್ಲಿರುವರೆಂದು ವಿಚಾರ ಮಾಡಿಕೊಂಡು ಕೊಯಂಬತ್ತೂರು ಸಮೀಪವಿರುವ 'ಪೊಳ್ಳಾಚ್ಚಿ' ಎಂಬ ಗ್ರಾಮಕ್ಕೆ ಹೋದನು. ಅಲ್ಲಿ ಶ್ರೀನಿವಾಸಾಚಾರ್ಯರೆಂಬುವರು 'ಸೋಮಯಾಗ'ವನ್ನು ಮಾಡಿ, ಅಗ್ನಿಹೋತ್ರವನ್ನು ಇಟ್ಟುಗೊಂಡಿದ್ದರು. ಈ ಅಮಿತ ವಿಕ್ರಮರಾಯನು ಅವರಲ್ಲಿ ಹೋಗಿ ನಮಸ್ಕರಿಸಿ, ಇಲ್ಲಿ (ಅಣು ಮಂತ್ರಾಲಯದಲ್ಲಿ) ಆದ ವೃತ್ತಾಂತವನ್ನು ಹೇಳಲು ಆ ಆಚಾರ್ಯರು 'ಅಯ್ಯೋ, ಹಿಂಗಾಯಿತೇ! ಕಲಿ ವ್ಯಾಪಾರ' ಅಂದು ಈ ಮಹತ್ಕಾರ್ಯಕ್ಕೆ ನಮ್ಮಿಂದ ಆಗುವ ಸಹಾಯವೆಲ್ಲವನ್ನು ಮಾಡುತ್ತೇವೆ. ಅಂದರೆ ನಾವು ಮೂರು ಮಂದಿ ಅಣ್ಣ-ತಮ್ಮಂದಿರು ಮತ್ತು ನಮ್ಮ ಅನುಯಾಯಿಗಳನ್ನು ಕರೆದುಕೊಂಡು ಬರುತ್ತೇವೆ. ಆದರೆ, ನಮ್ಮ ಗುಂಪಿನಲ್ಲಿ ಸೋಮಯಾಗ ಮಾಡತಕ್ಕವರು ಹಾಗು ಇನ್ನು ಕೆಲವು ಋತ್ವಿಕ್ ಕಾರ್ಯ ಮಾಡತಕ್ಕವರು ಇಲ್ಲ, ಅವರ ದೆಶೆಯಿಂದ ಕುಂಭಕೋಣಕ್ಕೆ ಹೋದರೆ ಅಲ್ಲಿ ಎಲ್ಲ ಋತ್ವಿಕ್ ಕಾರ್ಯ ಮಾಡತಕ್ಕವರು ಸಿಗುತ್ತಾರೆ. ಆದರೆ, ಅಲ್ಲಿರುವವರೆಲ್ಲರೂ ಉತ್ತರಾದಿಮಠದ ಅನುಯಾಯಿಗಳು, ಅವರುಗಳ ಪೈಕಿ 'ಕಾಫೆ ರಾಘವೇಂದ್ರಾಚಾರ್ಯ' ರೆಂಬುವರು ಅವರಿಗೆಲ್ಲರಿಗೂ ಮುಖ್ಯಸ್ಥರು. ಅವರು ಉತ್ತರಾದಿ ಮಠದವರರಾಗಿರುವುದರಿಂದ ಅವರು ಬರುವರೋ, ಇಲ್ಲವೋ ಸಂಶಯ. ಅವರು ಬಂದರೆ ಉಳಿದವರೆಲ್ಲರೂ

ನಿರಾಯಾಸವಾಗಿ ಬರುತ್ತಾರೆ. ಅವರು ಬಾರದೇ ಹೋದರೆ ಉಳಿದವರು ಬರುವುದು ಸಂದೇಹವೇ ಅಂತ ಅವರು ಯೋಚಿಸಿ ಪ್ರಥಮದಲ್ಲಿ ಪತ್ರವನ್ನು ಹಾಕಿ ಉತ್ತರಿಸಿಗೊಂಡು ಹೊರಡೋಣ ಅಂತ ಅಂದರು. 'ಸ್ವಾಮಿ! ಈಗ ಪ್ರಶ್ನೋತ್ತರಗಳಿಗೆ ಸಮಯವಿಲ್ಲ. ತಾವು ನನ್ನ ಸಂಗಡ ಬನ್ನಿ, ಉಭಯರು ಎಲ್ಲ ಪ್ರಯತ್ನ ಮಾಡಿ ಆ ಋತ್ವಿಜರನ್ನು ಬರುವಂತೆ ಮಾಡೋಣ, ಬೇರೆ ಯಾವ ಯೋಚನೆಯ ಕಾರಣವಿಲ್ಲ' ಅಂತ ಅಮಿತ ವಿಕ್ರಮರಾಯನು ಅಂದು, ಅದೇ ದಿನವೇ ಶ್ರೀನಿವಾಸಾಚಾರ್ಯರ ತಮ್ಮಂದಿರಾದ ಲೌಕಿಕ ವೈದಿಕ ಧುರೀಣರಾದ ಶ್ರೀಧರಾಚಾರ್ಯರೊಡನೆ ಕುಂಭಕೋಣಕ್ಕೆ ಬಂದರು. ಆಗ್ಗೆ ಈ ಪೂರ್ವದಲ್ಲಿಯೇ ಉತ್ತರಾದಿ ಮಠದಿಂದ ಕಾಫೆ ರಾಘವೇಂದ್ರಾಚಾರ್ಯರಿಗೆ 'ಆದವಾನಿ ಮುತ್ತಿಗಿ ಆಚಾರ್ಯರೆಂಬುವರು ಮಂತ್ರಾಲಯ ಮಾರ್ಗದ **'ತುಂಗಭದ್ರ'** (ಅಣು ಮಂತ್ರಾಲಯ) ಎಂಬ ಸ್ಥಳದಲ್ಲಿ ಸೋಮಯಾಗವನ್ನು ಮಾಡಲು ಸಂಕಲ್ಪಿಸಿದ್ದಾರೆ. ಅವರು ನಮ್ಮ ಮಠಕ್ಕೆ ಅತ್ಯಂತ ವಿರೋಧಿಗಳಾಗಿರೋಣದರಿಂದ ನೀವು ಅಥವಾ ನಿಮ್ಮ ಅನುಯಾಯಿಗಳು ಯಾರೂ ಯಜ್ಞದ ಋತ್ವಿಕ್ ಕಾರ್ಯ ಮಾಡಲು ಹೋಗಕೂಡದು. ಒಂದು ವೇಳೆ ಅವರ ಕಡೆಯಿಂದ ಯಾರಾದರು ಬಂದು ನೀವು ಕೇಳಿದಷ್ಟು ದ್ರವ್ಯ ಕೊಟ್ಟಾಗ್ಯೂ ಹೋಗಕೂಡದು. ಅವರು ಎಷ್ಟು ಕೊಡುವರೆಂಬುದನ್ನು ನೀವು ತಾರುಮೂಲಕ ತಿಳಿಸಿದರೆ, ನಾವು ನಿಮಗೆ ಅದರ ದ್ವಿಗುಣ ತಾರ ಮನಿಆರ್ಡರ್ (T.M.O.) ಕಳಿಸುತ್ತೇವೆ' ಅಂತ ಸವಿಸ್ತಾರ ಪತ್ರದೊಂದಿಗೆ ತಾರು (Wire) ಕಳಿಸಿದ್ದರು ಉತ್ತರಾದಿ ಮಠದವರು. ಆ ಕಾಫೆ ರಾಘವೇಂದ್ರಾಚಾರ್ಯರಿಗೆ ಅತ್ಯಂತ ಪ್ರೀತರಾದ ಪೊಳ್ಳಾಚಿ ಶ್ರೀಧರಾಚಾರ್ಯರು 'ಈ ಕಾಲದಲ್ಲಿ ಯಜ್ಞಯಾಗಾದಿಗಳು ಮಾಡುವುದೇ ಅತಿ ದುರ್ಲಭ. ನಾವು ಆ ವಿದ್ಯೆಗಳನ್ನು ಕಲಿತದ್ದಕ್ಕೆ ಇಂತಹ ಸಂಬಂಧಿಯನ್ನು (ಸಂದರ್ಭವನ್ನು) ಕಳೆದುಕೊಳ್ಳುವುದುಂಟೆ? ಮುತ್ತಿಗಿ ಆಚಾರ್ಯರು ಮಠಕ್ಕೆ ವಿರೋಧಿಗಳಾದ ಮಾತ್ರ ಯಜ್ಞಯಾಗಾದಿಗಳ ಭಂಗ ಮಾಡುವುದೇ? ಮಠಾಧಿಪತಿಗಳಾದವರು ಧರ್ಮ ಪ್ರತಿಷ್ಠಾಪನಾ ಚಾರ್ಯರೆಂದು ಬಿರುದಾಂಕಿತರಾದಾಗ್ಯೂ, ಅಭಿಮಾನಾದಿ ದೋಷಗಳಿಂದ ಪೂರಿತರಾಗಿ ಧರ್ಮಾಧರ್ಮವಿಚಾರದಲ್ಲಿ ಸಹ ಮನಸ್ಸು ಬಾರದೆ ತಮ್ಮ ಹಟವನ್ನೇ ಸಾಧಿಸುವ ಪ್ರವೃತ್ತಿವುಳ್ಳವರಾಗಿದ್ದಾರೆ. ಇದು ಎಂಥಹ ಅನರ್ಥದಾಯಕ! ಅವರೇನೋ, ಅವರ ಪಾಡೇನೋ; ನಾವುಗಳು ಮುಂದುವರೆದು ಯಜ್ಞ ಸಾಗಿಸಿ ಸಮರ್ಪಿಸಿದರೆ ಶ್ರೀ ಹರಿವಾಯುಗಳು ಪ್ರೀತರಾಗುವರು' ಇತ್ಯಾದಿ ಅನೇಕ ಯುಕ್ತಿ ಪ್ರತ್ಯುಕ್ತಿಗಳಿಂದ ಕಾಫೆ ರಾಘವೇಂದ್ರಾಚಾರ್ಯರನ್ನು ಒಡಂಬಡಿಸಿ 'ಈ ಯಾಗಕಾರ್ಯ ಸಾಂಗಗೊಳಿಸುವೆ' ಎಂಬುದಾಗಿ ವಚನವನ್ನು ತೆಗೆದುಕೊಂಡರು. ಈ ವಚನಬದ್ಧರಾದ ರಾಘವೇಂದ್ರಾಚಾರ್ಯರು ತಮ್ಮ ಅನುಯಾಯಿಗಳನ್ನು ಕಳಿಸಿ (ತಾವು ಮಾತ್ರ ಬಾರದೆ) ಯಜ್ಞ ಸಾಂಗಗೊಳಿಸುವ ಯೋಚಿಸಿ, ಆ ತಮ್ಮ ಅನುಯಾಯಿಗಳನ್ನು ಕರೆಸಿ ವಿಚಾರಿಸಲು 'ಈ ಮುತ್ತಿಗಿ ಆಚಾರ್ಯರು ಮಾಡುವ ಯಾಗಕ್ಕೆ ಯಾರೂ ಋತ್ವಿಜರುಗಳಾಗಿ ಹೋಗಕೂಡದಾಗಿ ಉತ್ತರಾದಿ ಮಠದಿಂದ ಆಜ್ಞಾಪತ್ರ ಬಂದದ್ದು ನಮ್ಮ ಮುಂದೆ ಹೇಳಿದ್ದೀರಿ. ಅದನ್ನು ಉಲ್ಲಂಘನ ಮಾಡಿ ನಾವುಗಳು ಹೋದರೆ ನಮ್ಮ

[illegible]

೫೭. [illegible]

[illegible] ಹೇಳಿದರು. [illegible] ಅದರಂತೆ ಆಚಾರ್ಯರು [illegible] ಅದರಂತೆ ಅಮಿತ [illegible] ಅಲ್ಲಿಂದ ರಾತ್ರಿ ೯.೩೦ [illegible] (Bombay Mail) [illegible] ತರಗತಿ [illegible] ೧೧.೩೦ ಸಮಯಕ್ಕೆ [illegible] ಮಂತ್ರಾಲಯಕ್ಕೆ [illegible] ೧೯-೧-೧೯೧೮ ಆಗಿತ್ತು. ಆ ಸಮಯವು [illegible] ಉತ್ತರಾದಿ ಮಠದವರಾದ

ಅನುತಾಪದಿಂದ ಬಂದಿರುವ ರಾಘವೇಂದ್ರಾಚಾರ್ಯರನ್ನು ಕುರಿತು 'ಏನು ಧ್ಯಾನ ಮಾಡಿದ್ದೀರಾ?' ಎಂದು ಉದ್ವೇಗದಿಂದ ಕೇಳಿದರು. ಅದಕ್ಕೆ ರಾಘವೇಂದ್ರಾಚಾರ್ಯರು 'ನಾನು ಯಜ್ಞ ನೋಡಲು ಬಂದಿರುವೆನು ಅಷ್ಟೆ!' ಸಾವಧಾನ ರೀತಿಯಲ್ಲಿ ಉತ್ತರಿಸಿದರು. ಇದನ್ನು ಕೇಳಿ ಬಂದ ಉತ್ತರಾದಿ ಮಠೀಯರು ಯಜ್ಞ ಭಂಗ ಮಾಡಲು ಬಹಳ ಪ್ರಯತ್ನಪಟ್ಟರು. ಆದರೆ ಅದಾವುದೂ ನಡೆಯದಂತೆ ಎಲ್ಲರ ಸಹಕಾರದಿಂದ "ಯತ್ರ ಯೋಗೇಶ್ವರ ಕೃಷ್ಣ" ಎನ್ನುವಂತೆ ಅವರ ಪ್ರಭಾವದಿಂದ ಶ್ರೀಹರಿ ವಾಯುಗಳ ಅನುಗ್ರಹ ಬಲದಿಂದ ಯಜ್ಞವನ್ನು ಶಾ. ಶ. ೧೮೬೫ (ಕ್ರಿ.ಶ. ೧೯೪೩-೪೪) ಸ್ವಭಾನು ಸಂವತ್ಸರದ (ಮಾಘ) ಶುದ್ಧ ದ್ವಿತೀಯ ಬುಧವಾರ ಪ್ರಾರಂಭಗೊಳಿಸಿ ವಿಜಯಭೇರಿ ಹೊಡೆದು, ಉತ್ತರಾದಿ ಮಠಾಧಿಪತಿಗಳಾದ ಶ್ರೀ ಶ್ರೀ ಸತ್ಯಧ್ಯಾನ ತೀರ್ಥರನ್ನು ಸೋಲಿಸಿ, ತಮ್ಮ ಪ್ರತಿಷ್ಠೆಯನ್ನು ನೆರವೇರಿಸಿ ಪ್ರಖ್ಯಾತರಾದರು.

ಯಜ್ಞವನ್ನು ಮುತ್ತಿಗಿ ಆಚಾರ್ಯರು ನೆರವೇರಿಸಿ ವಿಜಯಭೇರಿ ಹೊಡೆದ ಸುದ್ದಿ ಕೇಳಿದ ಶ್ರೀಶ್ರೀಸತ್ಯಧ್ಯಾನತೀರ್ಥರು ಕೋಪೋದ್ರೇಕರಾಗಿ "ಹಾಂ!" (ಅಂದು ಕೈಯಲ್ಲಿದ್ದ "**ಸುಧಾವಾಲಿ**"ಯನ್ನು ಒಗೆದು) 'ಛೀ!' 'ನಿಮ್ಮ ಮುಖಕ್ಕೆ ಬೆಂಕಿ ಹಚ್ಚ. ಯಾಕಿದ್ದೀರ್ ಆ ಮುತ್ತಿಗಿ ಮಾಡುವ ಯಜ್ಞ ಭಂಗ ಮಾಡಲಾಗಲಿಲ್ಲವೆ?' ಇಷ್ಟು ಪ್ರಯತ್ನವಾದರೂ ಯಜ್ಞವನ್ನು ಭಂಗಪಡಿಸಿ ಬರುತ್ತೇವೆಂದು ಪ್ರತಿಜ್ಞೆ ಮಾಡಿ ಲಕ್ಷಾಂತರ ದ್ರವ್ಯ ತೆಗೆದುಕೊಂಡು ಹೋಗಿ ಆ ದ್ರವ್ಯವನ್ನು ಸಿಕ್ಕ ಸಂಗಡರೋ, ಹಾಳು ಮಾಡಿದರೋ, ಆ ಮುತ್ತಿಗಿಯವರ ಲಂಚ ತೆಗೆದುಕೊಂಡರೋ ಯಜ್ಞ ಸಾಗುವಂತೆ ಮಾಡಿ ನಮ್ಮ ಮುಖಭಂಗ, ದ್ರವ್ಯ ಧ್ವಂಸ ಮಾಡಿ ಮುಖ ತೋರಿಸಲು ಬಂದಿರುವಿರೋ? ಯಜ್ಞ ಭಂಗ ಮಾಡಲಾಗದಿದ್ದರೆ ಆ ತುಂಗಭದ್ರಾ ನದಿಯಲ್ಲಿ ದೇಹ ತ್ಯಾಗ ಮಾಡಬಾರದಿತ್ತೆ? ಈ ಪಾಪಯುಕ್ತ ದೇಹದಿಂದ ನಮ್ಮ ಮುಖದರ್ಶನ ಮಾಡಲು ಬಂದಿರಾ? ಛೀ! ಯಾರಿದ್ದೀರೋ ಇವರನ್ನು ಕುತ್ತಿಗೆ ಹಿಡಿದು ಮಠದಿಂದ ಹೊರಕ್ಕೆ ತಳ್ಳಿಬಿಡಿರಿ' ಎಂದು ಆಜ್ಞಾ ಮಾಡಿದರಂತೆ. ಕೋಪ ತಡೆಯಲಾರದೆ ಎದುರಿಗೆ ಬಂದವರೆಲ್ಲರನ್ನು ಬಯ್ಯುತ್ತ ಕೈಗೆ ಸಿಕ್ಕಿದ್ದನ್ನು ಒಗೆಯುತ್ತ 'ಈವರೆಗೆ ನಾವು ಮಾಡಿದ ಪಾಠ ಪ್ರವಚನಾದಿಗಳು, ಶ್ರೀರಾಮ ದೇವರ ಪೂಜಾದಿಗಳು, ಅನ್ನದಾನ, ವಿದ್ಯಾದಾನ ದ್ರವ್ಯ ದಾನಾದಿಗಳು, ಪುಣ್ಯದಾಯಕ ಕಾರ್ಯಗಳ ಫಲಗಳೊಂದು ಸಹ ನಮ್ಮ ಮರ್ಯಾದೆಯನ್ನು ರಕ್ಷಣೆ ಮಾಡಲಿಲ್ಲ! ಧಿಕ್!!' ಎಂದು ನಿಟ್ಟುಸಿರು ಬಿಟ್ಟರಂತೆ. ಈ ರೀತಿ ಉದ್ರೇಕವು ಏಳೆಂಟು ದಿನಗಳವರೆಗೆ ಏಕರೀತ್ಯಾ ಇರುತ್ತ ದಿನಕ್ರಮೇಣ ಇಳಿಯತೊಡಗಿದಾಗ್ಯೂ ಎಂದಾದರೊಂದು ದಿನ ಜ್ಞಾಪಕಕ್ಕೆ ಬಂದರೆ ಸ್ತಬ್ಧರಾಗಿ ಕುಳಿತುಬಿಡುತ್ತಿದ್ದರು. ಈ ಯಜ್ಞದಿಂದಲೇ ಮುತ್ತಿಗಿ ಆಚಾರ್ಯರ ಕೀರ್ತಿ ನಾಲ್ಕು ದಿಕ್ಕಿಗೆ ಹರಡಿ ಪ್ರಸಿದ್ಧಿ ಹೊಂದಿತು.

೫೮. ರಾಜಸೂಯಯಾಗದಂತೆ ವಿಜೃಂಭಿಸಿತು.
(ಸೇವೆ ಸಲ್ಲಿಸಿ ಕೃತಾರ್ಥರಾದರು ಶಿಷ್ಯರು)

ಇತ್ತ ಯಜ್ಞವು ವಿಜೃಂಭಣೆಯಿಂದ ಯಥಾ ಸಾಂಗ ಮುಕ್ತಾಯವಾಯಿತು. ಈ ಯಜ್ಞ ಸಾಂಗವಾಗಲಿಕ್ಕೆ ಅನೇಕ ಧುರೀಣರು ಕಾರಣರಾದರು. ರೆವಿನ್ಯು ಇಲಾಖೆಯವರು, ಪೋಲೀಸ

ಅಧಿಕಾರಿಗಳು, ಟಪಾಲ ಖಾತೆಯವರು, ತತ್ರಾಪಿ ಮಂತ್ರಾಲಯಕ್ಕೆ ಸುಮಾರು ಎರಡು ಮೈಲು ದೂರದಲ್ಲಿರುವ 'ನಾರಾಯಣಪುರ'ವೆಂಬ ಜಹಗೀರದಾರ ಪಿಲ್ಲಪ್ಪಯ್ಯಾನ (ಊರ್ಫ) ವೆಂಕಮ್ಮನವರು ಹಾಗು ಅವರ ಸರ್ವಾಧಿಕಾರಿಗಳಾದ ಅರ್ಷಣಗಿ ಜಮೀನದಾರರು, ರಾಯಚೂರ ವಾಸಿಗಳಾದ ಅರ್ಷಣಗಿ ರಾಘವೇಂದ್ರರಾಯರು, ತಮ್ಮ ಆಪ್ತ ಮಿತ್ರ ಮಂಡಲದ ಮಾನವೀಯ ಪಿರಡೀಗುಪ್ಪ ಕೊಪ್ಪರೇಶರಾವ, ಸಂಪ್ರತಿ ಶ್ರೀನಿವಾಸರಾವ, ಕಲ್ಲೂರ ವೆಂಕೋಬರಾವ, ಬ್ಯಾಗವಾಟ ವೆಂಕೋಬರಾವ, ಚೀಕಲಪರ್ವಿ ಮೇಲಗಿರಿರಾವ, ಬಾದರ ಕೃಷ್ಣಾಚಾರ್, ಕಾಗಲಕರ ರಾವುಜಿರಾವ್ ಕೊಪ್ಪಳ, ಕಾಶಿ ಅನಂತಾಚಾರ್ಯ (ಆದೋನಿ) ಮೊದಲಾದವರು ಯಾವತ್ಪರಿವಾರದೊಂದಿಗೆ ಯಜ್ಞ ಸಾಂಗವಾಗಲು ಕಂಕಣಬದ್ಧರಾಗಿ ತನು, ಮನ, ಧನದಿಂದ ಸಹಾಯಕರಾಗಿ ನಿಂತುಬಿಟ್ಟಿದ್ದರು. ಮತ್ತು ಯಬ್ಬಿಕ್ಕಿ ದೇಶಪಾಂಡೆ ವಿಠಲರಾಯ, ಬೆಳಗಾವಿ ಬೆಳ್ಳಿಕಲಂದಾನಿ ಭೀಮರಾಯರು, ಇನ್ನಿತರ ನೈಜಾಮ ಇಲಾಖೆ, ಮದ್ರಾಸ, ಮುಂಬೈ ಪ್ರಾಂತದ ಶಿಷ್ಯ ವರ್ಗದವರು ಯಾಗ ಸಾಂಗವಾಗುವವರೆಗೂ ದಕ್ಷತೆಯನ್ನು ವಹಿಸಿ ಸರ್ವಕಾರ್ಯಕ್ಕೆ ಸಹಾಯಕರಾಗಿ ನಿಂತುಬಿಟ್ಟರು. ಈ ಸಮಾರಂಭದ ವ್ಯವಸ್ಥಾಪಕತ್ವವನ್ನು 'ಹರಪನಹಳ್ಳಿ ರಿತ್ತಿ ರಾಮಾಚಾರ್ಯ'ನೆಂಬ (ಮುತ್ತಿಗಿ ಆಚಾರ್ಯರಿಗೆ ಸೋದರಳಿಯ)ನಿಗೆ ವಹಿಸಿಕೊಟ್ಟಿದ್ದರು. ಈತನು ವೈದಿಕ, ಲೌಕಿಕ ವಿಷಯಗಳಲ್ಲಿ ಧುರೀಣನಾಗಿದ್ದನು. ಈತನೂ ಕೂಡ ವಿಚಕ್ಷಣನಾದ್ದರಿಂದ ಅಲ್ಲಿ ನೆರೆದಿದ್ದ ಬ್ರಾಹ್ಮಣರುಗಳಿಗೆ ಅವರವರ ಮರ್ಯಾದೆಗೆ ತಕ್ಕಂತೆ ಯೋಗ್ಯ ಮರ್ಯಾದೆ ಮಾಡಿ ಕೀರ್ತಿ ತಂದುಕೊಟ್ಟನು. ಈ ಯಾಗ ಪ್ರಾರಂಭವಾದ ಕೂಡಲೆ ದಿಕ್ಕು ದಿಕ್ಕಿನಲ್ಲಿ ವಾರ್ತಾ ಪಸರಿಸಿ, ಕೇವಲ ಉತ್ತರಾದಿ ಮಠದ ಪಕ್ಷಪಾತಿಗಳೆನ್ನದೆ ದಿನೇ ದಿನೇ ಜನರು ಬರುತ್ತಲೇ ಇದ್ದರು. ಅವಭೃತ ಸಮಯಕ್ಕೆ ಸುಮಾರು ಎರಡು ಸಾವಿರ ಬ್ರಾಹ್ಮಣರು ಕೂಡಿದರು. ಇದರಲ್ಲಿ ಕೆಲವರು ಉತ್ತರಾದಿ ಮಠದ ಭಯದಿಂದ ಬಹಿರಂಗದಲ್ಲಿ ವ್ಯಕ್ತರಾಗದ ವಿದ್ವಾಂಸರು. ಇವರೆಲ್ಲ ಬಂದು ಈ ಸಮಾರಂಭವನ್ನು ನೋಡಿ ಆನಂದ ಪಟ್ಟರಲ್ಲದೆ 'ಇಂತಹ ಮಹತ್ಕಾರ್ಯಕ್ಕೆ ಪೀಠಾಧಿಪತಿಗಳು ಸಹಾಯಕರಾಗುವುದು ಬಿಟ್ಟು ವಿರೋಧ ಮಾಡುವದೆಂದರೆ ಆಶ್ಚರ್ಯವೆಂದೇ ಹೇಳಬೇಕಾಗುವದು' ಎಂದು ಹೇಳಿದರು. ಈ ಯಾಗ ಆರಂಭವಾದ ವಾರ್ತಾ ತಿಳಿದಕೂಡಲೇ ಸ್ಥಳಾಂತರದಲ್ಲಿದ್ದ ಶಿಷ್ಯವರ್ಗವು ಹರ್ಷಸಾಗರದಲ್ಲಿ ಮಜ್ಜನಗೈಯ್ಯಲು ನೆರೆದರು ಮತ್ತು ಕೆಲವರು ಶುಭಾಶಯವನ್ನು ಕಳಿಸಿದರು. **'ನಹಿ ದೃಷ್ಟಾಂತೇ ಸರ್ವ ಸಾಮ್ಯಂ'** ಎಂಬ ನ್ಯಾಯರೀತ್ಯಾ ದೀಕ್ಷಾ ಬದ್ಧನಾದ ಧರ್ಮರಾಯನ ರಾಜಸೂಯ ಯಾಗದಲ್ಲಿ ಭೀಮಸೇನನ ಸಹಾಯದಿಂದ ಅರ್ಜುನನು ದಿಗ್ವಿಜಯ ಮಾಡಿ ಯಜ್ಞಾಂತದ ಅವಭೃತದಲ್ಲಿ ಯಾವ ರೀತಿ ಶೋಭಿಸಿದನೋ ತದ್ವತ್ ನಾರಾಯಣಪೇಟೆಯ ಬೊಜ್ಜಿ ಗುರುರಾಜಾಚಾರ್ಯರನ್ನು ದೀಕ್ಷಿತನನ್ನಾಗಿ ಮಾಡಿ ವಾಯುದೇವರ ಅನುಗ್ರಹ ಬಲದಿಂದ ಈ ಮುತ್ತಿಗಿ ಶ್ರೀನಿವಾಸಾಚಾರ್ಯರು ಜಯಶೀಲರಾಗಿ ಯಜ್ಞ ಸಮಾರಂಭಕ್ಕೆ ನೆರೆದ ಯಾವಜ್ಜನ ಸಮೇತ ರಾರಾಜಿಸಿದರು. ಈ ಯಾಗವು ಪ್ರವರ್ಗ್ಯ, ಸವನತ್ರಯ ಅಗ್ನಿಷ್ಟೋಮಯ, ಸುತ್ಯಾಹಸ್ಸು, ಅವಭೃತ ಕ್ರಮದಿಂದ ಯಥಾ ಸಾಂಗ ಪೂರ್ತಿಯಾಯಿತು.

೫೯. ಆಯುರ್ದಾನಮಾಡಿದ ಧೀಮಂತರು.

ಅತ್ತ ಶ್ರೀ ಶ್ರೀ ಸತ್ಯಧ್ಯಾನತೀರ್ಥರ ಹೃತ್ತಾಪಾಜ್ಞೆಯು ಬೊಜ್ಜಿ ಗುರುರಾಜಾಚಾರ್ಯರ ಆಯುಷ್ಯವನ್ನು (ದೇಹ ಹಾಗು ಮನಸ್ಸನ್ನು) ದಹನ ಮಾಡುತ್ತಿತ್ತು. ಇದರಿಂದ ಗುರುರಾಜಾಚಾರ್ಯರು ಏಕಾಏಕಿ ಮೈ ಉರಿ-ಮೈ ಉರಿ ಅಂತ ಚೀರುತ್ತ ನೆಲಕ್ಕುರುಳಿದರು. ಇದನ್ನು ನೋಡಿ ಸರ್ವರೂ ಗಾಭರಿಯಾಗಿ ಕೂಡಲೇ ಆ ಮುತ್ತಿಗಿ ಆಚಾರ್ಯರಲ್ಲಿ, 'ಬೊಜ್ಜಿ ಗುರುರಾಜಾಚಾರ್ಯರ ಅವಸ್ಥೆ ಈ ರೀತಿಯಾಗಿದೆ (ಚಿಂತಾಜನಕವಾಗಿದೆ) ಪ್ರಾಣ ಸಂದೇಹವೇ ಅದೆ', ಏನು ಮಾಡತಕ್ಕದ್ದು? ಅಂತ ಬೆಳಗಾವಿಯ ಬೆಳ್ಳಿ ಕಲಂದಾಸಿ ಭೀಮರಾಯನು ನಿವೇದನ ಮಾಡಿದನು. ಈ ಮುತ್ತಿಗಿ ಆಚಾರ್ಯರು ಧಾವಿಸಿ ಬಂದು ಈ ಗುರುರಾಜಾಚಾರ್ಯರ ಮೈಮೇಲೆ ತಮ್ಮ ಅಮೃತ ಹಸ್ತದಿಂದ ಸವರಿ ಅವರನ್ನು ಪ್ರಾಣದೇವರ ಗರ್ಭಗುಡಿಯಲ್ಲಿ ಮಲಗಿಸಿ ತಾವು ಒಳಗೆ ಪ್ರವೇಶ ಮಾಡಿ ಬಾಗಿಲು ಮುಚ್ಚಿಕೊಂಡು ಶ್ರೀ ಹರಿವಾಯುಗಳನ್ನು 'ಭಾಗಿ ಕೇಶವರಾಯನಿಗೋಸ್ಕರ ಶ್ರೀ ವಿಜಯದಾಸರು, ಶ್ರೀಹರಿ ವಾಯುಗಳನ್ನು ಪ್ರಾರ್ಥಿಸಿದಂತೆ' ಪ್ರಾರ್ಥಿಸಿ ದಹಿಸಿಹೋಗಿದ್ದ ಆಯುಷ್ಯಕ್ಕೆ ತಮ್ಮ ಆಯುಷ್ಯದ ಕೆಲವು ವರ್ಷಗಳನ್ನು ಹಾಕಿ ಈ ಗುರುರಾಜಾಚಾರ್ಯರನ್ನು ರಕ್ಷಿಸಿದರು.

೬೦. ಅನ್ನಛತ್ರ ಸಂಪನ್ನವಾಯಿತು

ಈಗ ಬಂದ ಮಹಾವಿಪತ್ತು ಪರಿಹಾರವಾದರೂ ಮುಂದೆಯಾದರೂ ಉಪದ್ರವ ಪಡಿಸದಿರಲು ತಕ್ಕ ಪುಣ್ಯ ಸಂಪಾದನೆ ಮಾಡಿಕೊಡುವ ನಿಮಿತ್ತ ಆ ಸ್ಥಳ (ಅಣು ಮಂತ್ರಾಲಯ)ದಲ್ಲಿ ಒಂದು ವರ್ಷ ಬ್ರಾಹ್ಮಣರಿಗೆ ಅನ್ನಛತ್ರವನ್ನು ಇಟ್ಟರು. ಇದಕ್ಕೆ 'ರಿತ್ತಿ ರಾಮಚಾರ್ಯ'ನನ್ನೆ ವ್ಯವಸ್ಥಾಪಕನನ್ನಾಗಿ ನಿಯಮಿಸಿದರು. ಈ ರಿತ್ತಿ ರಾಮಾಚಾರ್ಯನು ಬಂದು ಬ್ರಾಹ್ಮಣರಿಗೆ ಯಥಾಯೋಗ್ಯ ಮರ್ಯಾದೆ ಮಾಡುತ್ತ ಈ ಅನ್ನಛತ್ರವನ್ನು ಒಳ್ಳೆ ಪ್ರಶಂಸನೀಯವನ್ನಾಗಿ ಮಾಡಿದನು. ಆದರೆ ಯಜ್ಞ ಮತ್ತು ಈ ಅನ್ನಛತ್ರ ನಿಮಿತ್ತವಾಗಿ ವಂಚನ ಬುದ್ಧಿಯಿಂದ ದ್ರವ್ಯ ಸಂಪಾದನಾ (ಸಂಗ್ರಹ) ಮಾಡಿಕೊಂಡನು. ಇದು ಮುತ್ತಿಗಿ ಆಚಾರ್ಯರಿಗೆ ತಿಳಿದಿದಾಗ್ಯೂ ಅತ್ತಕಡೆ ದೃಷ್ಟಿ ಕೊಡದೆ ಇದ್ದರು. ಕೆಲವು ದಿನಗಳಲ್ಲಿ ಈ ವಂಚನಾತ್ಮಕ ಬುದ್ಧಿಯು (ರಿತ್ತಿ ರಾಮಾಚಾರ್ಯನಲ್ಲಿ) ಮಿತಿ ಮೀರಿದ್ದಾಗಿ ಕಂಡು ಬಂದಾಗ್ಗೆ ಆತನು ಅಸಮಾಧಾನ ಹೊಂದದಂತೆ ಪ್ರೀತಿಯ ವಚನಗಳಿಂದ ಸಮಾಧಾನಗೊಳಿಸಿ ಸ್ವಲ್ಪ ದಿನಗಳಲ್ಲಿ ಆ ಕೆಲಸದಿಂದ ದೂರ ಮಾಡಿದರು. ಆಮೇಲೆ ಆ ಸ್ಥಾನಕ್ಕೆ ಮಂತ್ರಾಲಯ ಗ್ರಾಮಸ್ಥ 'ಬಾಡದ ಶೇಷಾಚಾರ್ಯ' ನೆಂಬುವನನ್ನು ನಿಯಮಿಸಿದರು. ಈತನು ಸಕುಟುಂಬ ಇದ್ದುಕೊಂಡು ಕೆಲಕಾಲ ಆ ಛತ್ರವನ್ನು ಯಥಾ ಯೋಗ್ಯ ನಡೆಸಿದನು. ನಂತರ, ಈತನೂ ಕೂಡ ವಂಚನ ಮಾಡಿ ದ್ರವ್ಯ ಸಂಪಾದನೆ ಮಾಡದೆ ಬಿಡಲಿಲ್ಲ. ತದನಂತರ ಅಣು ಮಂತ್ರಾಲಯ ಸ್ಥಳಕ್ಕೆ ಯಜಮಾನನಾದ ಹೊಸಪೇಟೆ ಸಮೀಪದ 'ರಾಮಸಾಗರ ಶ್ರೀನಿವಾಸರಾಯ'ನನ್ನು ನೇಮಿಸಿದರು. ಆದರೆ, ಆ ಮೂಲಕ ಈ ಕಟ್ಟಡಗಳು ತನ್ನ ಅಧೀನ ತಪ್ಪಿಹೋಗುವುದೇನೋ ಎಂಬ ಭೀತಿಯಿಂದ ಈ

ಮುತ್ತಿಗಿ ಆಚಾರ್ಯರಲ್ಲಿ ಬಂದು "ನೀವು ಮಾಡತಕ್ಕ ಅನ್ನಛತ್ರವನ್ನು ಬಂದುಮಾಡಿ ಆ ಯಾವತ್ತು ಸ್ಥಳವನ್ನು ತನ್ನ ಸ್ವಾಧೀನ ಮಾಡಬೇಕೆಂದು ಹೇಳಿದನು." 'ಮಂತ್ರಾಲಯಕ್ಕೆ ಹೋಗುವ ಸಲುವಾಗಿ ದೂರ ದೇಶಗಳಿಂದ ಬರುವ ಬ್ರಾಹ್ಮಣರಿಗೆ ಅನುಕೂಲವಾಗಲಿ ಎಂದು ಅನ್ನಛತ್ರ ಇಟ್ಟಿದ್ದೇನೆ ಹೊರತು, ಬೇರೆ ಯಾವ ವಿಚಾರದಿಂದ ಇಟ್ಟಿಲ್ಲ. ಆ ಸ್ಥಳವು ನಿನ್ನದಾಗಿರುವುವರಿಂದ ಆ ಸ್ಥಳಕ್ಕೆ ಬಾಡಿಗೆ ಸಹ ಕೊಡುತ್ತೇವೆ ಅಂತ' ಹೇಳಿವರು. ಆ ಗೃಹಸ್ಥನು ಕೇಳದೆ ಹೋದ ಪ್ರಯುಕ್ತ ಒಂದು ವರ್ಷ ಪೂರ್ತಿ ಅನ್ನಛತ್ರವನ್ನು ನಡೆಸಿ, ಆಮೇಲೆ ಬಂದುಮಾಡಿ ಆ ಸ್ಥಳವನ್ನು ಆ ರಾಮಸಾಗರ ಶ್ರೀನಿವಾಸರಾಯನ ಸ್ವಾಧೀನ ಮಾಡಿದರು. ಈ ಅನ್ನಛತ್ರವನ್ನು ನಡೆಸುತ್ತಿರುವಾಗ, ಸಂಚಾರ ರೀತ್ಯಾ ಧಾರ್ವಾಡಕ್ಕೆ ಬಂದು ಮಾಳಮಡ್ಡಿಯಲ್ಲಿ 'ಮಾಳಾಪುರ ರಾಮರಾಯ'ರೆಂಬ ವಕೀಲರಲ್ಲಿ ಇಳಿದುಕೊಂಡರು. ಅವರ ಸ್ನೇಹಿತರಾದ ಡಾಕ್ಟರ್ ಮಾಧವರಾವ್ ಕುರಂದವಾಡಕರ್, ಗೋವಿಂದರಾವ ಮೇಲಗಿರಿ ಕುಲಕರ್ಣಿ ವಗೈರೆ ಜನರು ಆದರದಿಂದ ಈ ಮುತ್ತಿಗೀ ಆಚಾರ್ಯರಿಗೆ ಆಥಿತ್ಯವನ್ನು ಮಾಡಿ ಒಬ್ಬೊಬ್ಬರು ಅನ್ನಛತ್ರಕ್ಕೆ ಒಂದು ತಿಂಗಳು ಖರ್ಚು, ಕೆಲವರು ಒಂದು ಪಕ್ಷ ಖರ್ಚು, ಈ ರೀತಿ ಸೇವಾ ಮಾಡುವವರಾದರು. ಈ ಸಂದರ್ಭದಲ್ಲಿ ಆ ಮಾಳಮಡ್ಡಿಯಲ್ಲಿಯ ಪ್ರಸಿದ್ಧ ವಕೀಲರಾದ 'ಬಳ್ಳಾರಿ ರಾಮರಾಯ'ನೆಂಬ ಗೃಹಸ್ಥನ ಮೇಲೆ ಪೋಲೀಸರು ಖಟ್ಲೆ (Case) ಹಾಕಿದ್ದರು. ಅದರಲ್ಲಿ ಕೆಲವು ಪುರಾವೆಯಿಂದ ಸಿದ್ಧವಾಗಿ ಬಿಡುಗಡೆಯಾದವು. ಆದರೆ, ಒಂದು ಖಟ್ಲೆದ (Case) ಮೂಲಕ ಮೂರು (೩) ಸಾವಿರ ರೂಪಾಯಿಗಳ ದಂಡ ವಿಧಿಸಲ್ಪಟ್ಟಿತ್ತು. ಇದಕ್ಕೆ ಅಪೀಲು ಮಾಡಿದ್ದನು. ಈ (ಅಪೀಲದಲ್ಲಿ) ಬಿಡುಗಡೆಯಾಗದಿದ್ದರೆ ತನ್ನ ವಕಾಲತ್ತಿಗೆ ಧಕ್ಕೆ ಬರುವಂತಿತ್ತು. ಆದ್ದರಿಂದ, ಆತನು ಬಂದು ಈ ಮುತ್ತಿಗಿ ಆಚಾರ್ಯರನ್ನು ಮೊರೆಹೊಕ್ಕನು. 'ಈಗ ನಾವು ಅನ್ನಛತ್ರವನ್ನು ನಡೆಸುತ್ತಿರೋಣದರಿಂದ ಅದಕ್ಕೋಸ್ಕರ ಸಂಚಾರ ಮಾಡಬೇಕಾಗಿದೆ. ನಿನ್ನಲ್ಲಿದ್ದು ವಿಪತ್ತು ಪರಿಹಾರ ಮಾಡುವದಕ್ಕೆ ಈಗ ಅವಕಾಶವಿಲ್ಲದಂತಾಗಿದೆ. ಕೆಲವು ಕಾಲ ಸಂಚಾರ ಮಾಡಿದರೆ ಅದು ಸಸೂತ್ರ ನಡೆಯುವುದೆಂದು' ಹೇಳಿವರು. 'ಸ್ವಾಮಿ! ಅನ್ನಛತ್ರ ನಿಮಿತ್ತ ತಾವು ಸಂಚಾರ ಮಾಡುವುದನವಶ್ಯಕ. ತಾವು ನನ್ನಲ್ಲಿ ಎಷ್ಟು ದಿನಗಳಿರುವದಾಗುವದೋ ಅಲ್ಲಿಯವರೆಗೂ ಆ ಅನ್ನಛತ್ರಕ್ಕಾಗಿ ಹಿಡಿಯುವ ಖರ್ಚು ನಾನು ಭರಿಸುತ್ತೇನೆ ಮತ್ತು ಖಟ್ಲೆ (Case) ದಿಂದ ಬಿಡುಗಡೆ ಹೊಂದಿದರೆ ಆ ದಂಡವಾದ ೩೦೦೦/- ರೂಪಾಯಿಗಳನ್ನು ತಮ್ಮ ಪಾದಕ್ಕೆ ಅರ್ಪಣ ಮಾಡುತ್ತೇನೆ. ಈ ವಿಪತ್ತಿನಿಂದ ಮುಕ್ತನನ್ನಾಗಿ ಮಾಡಬೇಕು' ಅಂತ ಪ್ರಾರ್ಥಿಸಿಕೊಂಡನು. ಪ್ರಾರ್ಥನೆಯನ್ನು ಮನ್ನಿಸಿ ಮಾಳಾಪುರ ರಾಮರಾಯನ ಮನೆಯಿಂದ ಈ ಬಳ್ಳಾರಿ ರಾಮರಾಯನಲ್ಲಿ ಬಂದು ಸುಮಾರು ಎರಡು ತಿಂಗಳು ವಾಸ ಮಾಡಿದರು. ಇತ್ತ ಈತನ ಮೇಲಿನ ಖಟ್ಲೆ (Case) ಯ ನಡೆದು ನಿರಪರಾಧಿಯೆಂದು ಸಿದ್ಧವಾಗಿ ಕೋರ್ಟಿನಲ್ಲಿ (Court) ಕಟ್ಟಿದ್ದ ೩೦೦೦/- ರೂಪಾಯಿಗಳು (ದಂಡವು) ತಿರುಗಿ ಬಂತು. ಆ ಕೂಡಲೇ ಅದನ್ನೆಲ್ಲವನ್ನು (ಹಣವನ್ನು) ತಂದು ಸಮರ್ಪಿಸಿ ಕೃತಾರ್ಥನಾದೆನೆಂದು ಹರ್ಷಪಟ್ಟನು.

೬೧. ಉಂಡಪದಾರ್ಥಗಳು ಅಖಂಡ ಪಚನವಾದವು.

ಆಮೇಲೆ ಈ ಅನ್ನಛತ್ರ ನಿಮಿತ್ತ ಸಂಚಾರ ಕ್ರಮದಿಂದ ಬೆಳಗಾಂವ, ಬಾಗಲಕೋಟೆ, ಬಿಜಾಪುರಕ್ಕೆ ಬಂದರು. ಅಲ್ಲಿ ಡಾಕ್ಟರ್ ಮಂಗಳವೇಢ ಗೋವಿಂದರಾಯ ಕುಟುಂಬ ಕು॥ ಸೌ॥ ಲಕ್ಷ್ಮಿಬಾಯಿಯು ಕ್ಷಯ (T.B.) ರೋಗದಿಂದ ಬಹಳ ಕ್ಷೀಣಗತಿಗೆ ಬಂದಿದ್ದಳು. 'ಈಕೆಯನ್ನು ನೋಡಿ ಗೋವಿಂದರಾಯನನ್ನು ಕುರಿತು ಏನು ಗೋವಿಂದರಾಯ, ಈಕೆ ಇಷ್ಟು ಕೃಶಳಾಗಿರುವಳು. ಈಕೆಗೆ ಸರಿಯಾದ ಚಿಕಿತ್ಸಾ ಯಾತಕ್ಕೆ ಮಾಡಬಾರದು?' ಅಂತ ಕೇಳಿದರು. 'ಸ್ವಾಮಿ! ನನ್ನ ಬುದ್ಧಿಗೆ ತೋಚಿದ ಎಲ್ಲಾ ಔಷಧಗಳನ್ನು ಕೊಟ್ಟೆ, ಅದ್ಯಾವುದೂ ಪ್ರಯೋಜನವಾಗಲಿಲ್ಲ. ಏನು ಮಾಡಲಿ? ನನಗೆ ತೋಚದಂತಾಗಿದೆ. ಈವರೆಗೂ ಮಾಡಿದ ಚಿಕಿತ್ಸಾ ಯಾವುದೂ ಸರಿ ಹೋಗಲಿಲ್ಲ. ಯಾವುದೂ ನನಗೆ ತಿಳಿಯದಾಗಿದೆ. ಪ್ರಯುಕ್ತ ಸರಿಯಾದ ಚಿಕಿತ್ಸಾ ತಾವೇ ಮಾಡಬೇಕಾಗಿದೆ' ಅಂತ ಜಾಣತನದಿಂದ ಉತ್ತರ ಕೊಟ್ಟನು. 'ಹಾಂಗಾದರೆ ಈಕೆಯನ್ನು ಆದವಾನಿಗೆ ಕರೆದುಕೊಂಡು ಬರುವುದಾದರೆ ಯೋಗ್ಯ ಚಿಕಿತ್ಸಾ ಮಾಡುತ್ತೇವೆ, ಅಂತ ಹೇಳಿದರು. "ಮಹದಾಜ್ಞಾ" ಆದಷ್ಟು ಶೀಘ್ರ ಕರೆದುಕೊಂಡು ಬರುತ್ತೇನೆ ಅಂತ ಅಂದನು. 'ಹಾಂಗೆ ಮಾಡು' ಅಂತ ಹೇಳಿ, ಅಲ್ಲಿಂದ ಆದವಾನಿಗೆ ಬಂದರು. ಈ ಲಕ್ಷ್ಮೀಬಾಯಿಯು ಕೇವಲ ಹತ್ತು ತೊಲೆಯಷ್ಟು ಆಕಳ ಹಾಲು ಮಾತ್ರ ಸ್ವೀಕರಿಸುತ್ತಿದ್ದಳು. ಈ ಅಲ್ಪ ಆಹಾರವು ಸಹ ಸರಿಯಾಗಿ ಪಚನವಾಗುತ್ತಿರಲಿಲ್ಲ. ಪ್ರತಿನಿತ್ಯ ಎಂಟ್ಹತ್ತು ವಿಧ ಔಷಧಗಳನ್ನು ಕೊಡುತ್ತಿದ್ದನು. ಆದವಾನಿಗೆ ಬಂದ ದಿನವೇ 'ಗೋವಿಂದರಾಯ! ಈವರೆಗೆ ನೀನು ಮಾಡಿದ ಚಿಕಿತ್ಸಾ ವ್ಯರ್ಥವಾಗಿದೆ. ಈ ದಿನದಿಂದ ನಾವು ಚಿಕಿತ್ಸಾ ಮಾಡುತ್ತೇವೆ ನೋಡು. ಅಂದು ಆ ದಿನ ಪೂಜಾ ನೈವೇದ್ಯ, ತೀರ್ಥ ವಿನಿಯೋಗವಾದ ಮೇಲೆ, ಈ ಲಕ್ಷ್ಮೀಬಾಯಿಯನ್ನು ನಮ್ಮ ಎದುರಿನಲ್ಲಿ ಊಟಕ್ಕೆ ಕೂಡಿಸಿರಿ' ಅಂತ ಆಜ್ಞಾ ಮಾಡಿದರು 'ಸ್ವಾಮಿ! ಈವರೆಗೂ ಕೇವಲ ಸ್ವಲ್ಪ ಹಾಲಿನ ಮೇಲೆ ಇದ್ದಳು. ಆದಾಗ್ಯೂ ಆ ಅಲ್ಪಾಹಾರವೂ ಪಚನವಾಗುತ್ತಿರಲಿಲ್ಲ. ಅಂದ ಮೇಲೆ ಊಟ ಮಾಡಿದರೆ ಹ್ಯಾಂಗೆ ತಡೆದೀತು?' ಅಂತ ಕೇಳಿದನು. 'ನಿನ್ನ ಚಿಕಿತ್ಸಾ ಪದ್ಧತಿಗೂ ನಮ್ಮ ಚಿಕಿತ್ಸಾ ಪದ್ಧತಿಗೂ ವೈಲಕ್ಷಣ್ಯವಿದೆ. ಇದರಲ್ಲಿ ನಿನ್ನ ಬುದ್ಧಿ ಉಪಯೋಗಿಸುವದು ಬೇಡ' ಅಂತ ಹೇಳಿ ತಮ್ಮ ಎದುರಿನಲ್ಲಿಯೇ ಎಲೆಯನ್ನು ಹಾಕಿಸಿ, ಮಾಡಿದ ಅಡಿಗಿಯ ಯಾವತ್ಪದಾರ್ಥಗಳನ್ನು ಭಕ್ಷಣ ಮಾಡಲು ಹೇಳಿದರು. ಆಕೆಯು ಅವರಂತ ಮಾಡಿದಳು. ಅಂದಿನಾರಭ್ಯ ನಿತ್ಯ ಬರುವ ಜ್ವರ ನಿಂತಿತು. ಕೆಮ್ಮು ಇನ್ನೂ ಉಳಿದಿತ್ತು. ಅದು ಕೂಡಾ ದಿನೇ ದಿನೇ ತೀವ್ರಗತಿಯಿಂದ ಗುಣವಾಗುತ್ತ ಒಂದು ವಾರದಲ್ಲಿ ಪೂರ್ಣ ಗುಣವಾಗಿ ಅಡ್ಡಾಡ ಹತ್ತಿದಳು. ಈ ರೀತಿ ಗುಣವಾದದ್ದು ನೋಡಿ ಗೋವಿಂದರಾಯನು ಸಂತೋಷಭರಿತನಾದನು. "ಗೋವಿಂದರಾಯ! ಈಗ ನಿನ್ನ ಹೆಂಡತಿಯ ಪ್ರಕೃತಿಯನ್ನು ಪರೀಕ್ಷಾ ಮಾಡಿ ನೋಡು. ಗುಣಾದದ್ದು ನಿಶ್ಚಯವಾಗಿ ಕಂಡು ಬಂದರೆ ಸದ್ಯಕ್ಕೆ ನೀನು ಮಾತ್ರ ಬಿಜಾಪುರಕ್ಕೆ ಹೋಗು. ನಾವು ಯಾವಾಗ ಬರುವದೆಂದು ತಿಳಿಸುವೆವೋ ಆಗ ಬಂದು ಕರೆದುಕೊಂಡು ಹೋಗು" ಅಂತ ಹೇಳಿದರು. "ಮಹದಾಜ್ಞಾ" ಅಂದು ಆ ದಿನವೇ ಊರಿಗೆ ಪ್ರಯಾಣ ಮಾಡಿದನು.

ಒಂದು ತಿಂಗಳಾದ ನಂತರ ಬರುವುದಾಗಿ ಆತನಿಗೆ ಪತ್ರ ಹಾಕಿದರು. ಈ ಸಂದರ್ಭದಲ್ಲಿ ನಾಲ್ಕಾರು ತಿಂಗಳಲ್ಲಿ ಈ ಗೋವಿಂದರಾಯನು ಐದು ಸಾವಿರ ರೂಪಾಯಿಗಳ ಬಂಗಾರವನ್ನು ಖರೀದಿ ಮಾಡಿ (ತನ್ನ ಹೆಂಡತಿಗಾಗಿ) ಆಭರಣಗಳ ಮಾಡಲು ಅಗಸಾಲನಲ್ಲಿ ಕೊಟ್ಟಿದ್ದನು. ಅವನು ಎಲ್ಲಾ ಆಭರಣಗಳ ಮಾಡಿಕೊಟ್ಟಾಗ್ಯೂ ಹೆಂಡತಿಯು ಅಶಕ್ತಳಾಗಿದ್ದ ಮೂಲಕ ಧಾರಣ ಮಾಡಿರಲಿಲ್ಲ. ಅದನ್ನು ತೆಗೆದುಕೊಂಡು ಬಂದನು. ಈತನು ಬರುವಷ್ಟರಲ್ಲಿ ಮನೆಯ ಎಲ್ಲಾ ಕೆಲಸಗಳನ್ನು ಮಾಡುವದು, ನೀರು ಜಗ್ಗುವದು (ಬಾವಿಯಿಂದ), ಅಡಗಿ ಸಹ ಮಾಡುವಷ್ಟು ಶಕ್ತಳಾಗಿ ನಿರಾಯಾಸದಿಂದ ಯಾವತ್ತೂ ಕೆಲಸಗಳನ್ನು ಮಾಡುತ್ತಲಿದ್ದದ್ದು ನೋಡಿ ಆ ದಿನ ಸಾಯಂಕಾಲ ತಾನು ತಂದಿದ್ದ ಯಾವದಾಭರಣಗಳನ್ನು ಒಂದು ತಟ್ಟೆಯಲ್ಲಿಟ್ಟು ತನ್ನ ಪತ್ನೀ ಕಡೆಯಿಂದ ಸಮರ್ಪಣ ಮಾಡಿಸಿ ಕೃಷ್ಣಾರ್ಪಣವೆಂದನು. ಈ ಲಕ್ಷ್ಮೀಬಾಯಿಯು ಆಭರಣಗಳಲ್ಲೊಂದನ್ನು ಕೂಡ ಧಾರಣ ಮಾಡಿರಲಿಲ್ಲ. ಈಕೆಯು ಈ ರೀತಿ ಮುಂದಿಟ್ಟು ನಮಸ್ಕಾರ ಮಾಡಿದ್ದಕ್ಕೆ ಏನಿಮ! ಹುಚ್ಚುಗಿಚ್ಚು ಹಿಡಿಯಿತೇ? ಯಾವದಾಭರಣಗಳನ್ನು ಹೇಳದೆ ಕೇಳದೆ ಸಮರ್ಪಿಸೋಣವೆಂದರೇನು! 'ಈ ಪದಾರ್ಥವೆಲ್ಲವನ್ನು ಮನಃಪೂರ್ವಕ ನಾವು ತಮ್ಮ ಪಾದಕ್ಕೆ ಅರ್ಪಣ ಮಾಡಿದ್ದೇವೆ. ಅಣು ಮಂತ್ರಾಲಯದ ಯಜ್ಞನಿಮಿತ್ತ ಆದ ಸಾಲ, ಇನ್ನೂ ತಮಗೆ ಇರುವದು, ಅದಕ್ಕಾಗಿ ಇದನ್ನು ಉಪಯೋಗಿಸಿಕೊಳ್ಳಬೇಕು' ಅಂತ ಹಸನ್ಮುಖದಿಂದ ಆ ಉಭಯರು ಹೇಳಿ ಸಾಷ್ಟಾಂಗ ನಮಸ್ಕಾರ ಮಾಡಿದರು. ಆಗ 'ದ್ರವ್ಯಾದಿ ಪದಾರ್ಥಗಳ ತ್ಯಾಗದಲ್ಲಿ ನಾವೊಬ್ಬರೇ ಸಮರ್ಥರೆಂದು ತಿಳಿದಿದ್ದೆವು. "ಶಿಷ್ಯಾದಚ್ಛೇತ್ಪರಾಜಯಂ" ಅಂತ ಯೋಗ್ಯ ವಚನಗಳಿಂದ ಪ್ರಶಂಸನಾ ಮಾಡಿದರು. 'ಈ ಆಭರಣಗಳನ್ನು ನೀನು ಒಂದು ದಿನ ಕೂಡಾ ಧರಿಸಿಲ್ಲ. ಈಗ ನಮ್ಮೆದುರಿನಲ್ಲಿ ಧಾರಣ ಮಾಡು, ನಾವು ನೋಡಿ ಸಂತೋಷಪಡುತ್ತೇವೆ' ಅಂತ ಹೇಳಿ ತಿರುಗಿ ಕೊಟ್ಟು ಆಗ್ರಹ ಮಾಡಿ ಧಾರಣ ಮಾಡಿಸಿದರು. ಮರುದಿನ ತೆಗೆದುಕೊಂಡು ಹೋಗಲು "ಈ ದಿನವೂ ಇರಲಿ" ಅಂತ ಈ ರೀತಿ ಮೂರು ದಿನ ಮೈಮೇಲೆ ಇರಗೊಟ್ಟರು. ಆಮೇಲೆ ಪ್ರಥಮ ದಿನ ಸಮರ್ಪಿಸುವಾಗ ಯಾವ ಮುಖಮುದ್ರಾ ಇತ್ತೋ ಈಗ ತೆಗೆದುಕೊಡುವಾಗಲೂ ಅದೇ ಪ್ರಕಾರ ಇದ್ದದ್ದು ನೋಡಿ "ಈಗ ಸಂತೋಷದಿಂದ ಸ್ವೀಕರಿಸುವೆವು". ಯಾಕಂದರೆ, 'ಉದ್ವೇಗಾವಸ್ಥೆಯಲ್ಲಿ ತ್ಯಾಗ ಬುದ್ಧಿ ಮೊದಲಾದ ಎಷ್ಟೋ ವಿಚಿತ್ರ ಗುಣ ಕಾರ್ಯಗಳು ಕಂಡು ಬರುತ್ತವೆ. ಆಮೇಲೆ ಅದರ ಉತ್ಸಾಹ ಕಡಿಮೆ. ಅಂದರೆ, ಪ್ರಥಮದಲ್ಲಿ ಮಾಡಿದ ತ್ಯಾಗಾದಿಗಳ ಬಗ್ಗೆ ಖಿನ್ನರಾಗುತ್ತಾರೆ. ಹೀಗಾದರೆ ಅದು ಸಾತ್ವಿಕ ಧರ್ಮ (ದಾನ) ವೆನಿಸಲಾರದು. ಅಂತಹ ದಾನ ಕೊಡುವವನಿಗೂ, ಸ್ವೀಕರಿಸುವವನಿಗೂ ಪಾರಮಾರ್ಥಿಕ ಫಲವಿಲ್ಲ. ಇಂತಹವು ಎಷ್ಟೋ ಜನರಲ್ಲಿ ಕಂಡುಬರುತ್ತದೆ. ಪುರುಷರಕ್ಕಿಂತಲೂ ಸ್ತ್ರೀಯರಲ್ಲಿ ಆಭರಣಾದಿ ಅಲಂಕಾರ ಲಾಲಸೆಯು ಹೆಚ್ಚಿಗಿರುತ್ತದೆ. ನಿಮ್ಮಲ್ಲಿ ಈ ಯಾವ ದೋಷವೂ ಇಲ್ಲ' ಅಂತ ಯೋಗ್ಯ ವಚನಗಳಾಡುತ್ತಿರುವಾಗ ಆ ದಂಪತಿಗಳು "ಇದೆಲ್ಲ ತಮ್ಮ ಪಾದಾನುಗ್ರಹ ಬಲ" ಅಂತ ಒಂದೇ ಮಾತಿನಲ್ಲಿ ಮುಗಿಸಿದರು. ಆಭರಣವೆಲ್ಲವನ್ನು ತಮ್ಮ ಶಿಷ್ಯನಾದ ಕಾಗಲಕರ ರಾಘವೇಂದ್ರರಾಯನನ್ನು ಕರೆದು, 'ಈ ಆಭರಣವೆಲ್ಲವನ್ನು

ಮಾರಾಟ ಮಾಡಿ ಯಜ್ಞದ ಬಾಕಿಗೆ ಜಮಾ ಮಾಡಿ ಬಾ' ಅಂತ ಆಜ್ಞಾ ಮಾಡಿದರು. "ಒಳ್ಳೇದು" ಅಂದು, ಕೂಡಲೇ ಅದನ್ನು ವಿಕ್ರಯ ಮಾಡಿ ಬಂದು ಹಣವನ್ನು ಬಾಕಿಗೆ ಜಮಾ ಮಾಡಿ ಬಂದನು.

೬೨. ಮಡದಿಯ ಮನದಾಸೆಯುದಂತೆ ಮಗನಿಗೆ ಮರುಮದುವೆಯಾಯಿತು.

ಇಷ್ಟಾದ ಮೇಲೆ ಶಿಷ್ಯರುಗಳು ಕೂಡಿ ಈ ಮುತ್ತಿಗಿ ಆಚಾರ್ಯರಿಗೆ ಶಾಂತಿ, ತುಲಾಭಾರವನ್ನು ಮಾಡಿದರು. ಈ ತುಲಾಭಾರವು ಬಹಳ ಬೆಳ್ಳಿ, ಬಂಗಾರ, ಮುತ್ತು, ರತ್ನಗಳಿಂದ ಕೂಡಿದ್ದು, ಅವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಲಾಯಿತು. ಈ ಉತ್ಸವಕ್ಕೆ ಯಾವತ್ತೂ ಜನರು ನೆರೆದಿದ್ದರು. ಇದು ಸಿದ್ಧಾರ್ಥಿ ನಾಮ ಸಂವತ್ಸರ ಕ್ರಿ.ಶ. ೧೯೧೯ ಕಾರ್ತಿಕ ಮಾಸದಲ್ಲಿ ನೆರವೇರಿತು. ಇದಾದ ಸ್ವಲ್ಪ ದಿನಗಳಲ್ಲಿ ಇವರ ಹೆಂಡತಿಯಾದ ಕುಂ|| ಸೌ|| ಲಕ್ಷ್ಮಿಬಾಯಿಗೆ ಬಹುಕಾಲದಿಂದ ಇದ್ದ ಉಬ್ಬಸ, ಕೆಮ್ಮು ಎಷ್ಟು ಚಿಕಿತ್ಸಾ ಮಾಡಿಸಿದಾಗ್ಯೂ ಕಡಿಮೆಯಾಗಲಿಲ್ಲ. ದಿನೇ ದಿನೇ ಜಾಡ್ಯವು ಹೆಚ್ಚುತ್ತ ನಡೆಯಿತು. ಹೀಗಿರಲು ಒಂದು ದಿನ ತಮ್ಮ ಪತ್ನಿಯನ್ನು ಕುರಿತು "ಈ ಜಾಡ್ಯದಿಂದ ಮುಕ್ತಳಾಗುವಂತೆ ಕಾಣುವದಿಲ್ಲ. ಮತ್ತು ನಿನಗೆ ಮರಣವೇ ಸಮೀಪಿಸಿದಂತೆ ಕಾಣುತ್ತದೆ. ಆದ್ದರಿಂದ ನಿನ್ನ ಮನಸ್ಸಿನಲ್ಲಿ ಏನಾದರು ಆಶೆ ಇದ್ದರೆ ತಿಳಿಸು, ನೆರವೇರಿಸುವೆನು" ಅಂತ ಕೇಳಿದರು. 'ನನಗೆ ಈ ಒಬ್ಬ (ಸ್ವಾಮಿರಾಯ) ಮಗನು, ಇವನನ್ನು ಬಿಟ್ಟರೆ ಬೇರೆ ಮಕ್ಕಳಿಲ್ಲ. ಇವನ ಲಗ್ನದ ಸಂಭ್ರಮವು ನನಗೆ ಅಗ್ಗ ತೃಪ್ತಿಕರವಾಗಿರಲಿಲ್ಲ. ಇನ್ನೊಬ್ಬ ಮಗನಿದ್ದರೆ ಅವನಿಗಾದರೂ ನನ್ನ ಇಚ್ಛಾದಂತೆ ಲಗ್ನ ಮಾಡಿ ತೃಪ್ತಿ ಹೊಂದುತ್ತಿದ್ದೆ. ಅದಕ್ಕೆ ಅವಕಾಶವಿಲ್ಲದ್ದರಿಂದ, ಈ ಸ್ವಾಮಿಗೆ (ಮಗನಿಗೆ) ಇನ್ನೊಂದು ಲಗ್ನ ಮಾಡಿ ನನ್ನ ಮನಸ್ಸಿಗೆ ತೃಪ್ತಿಗೊಳಿಸಿರಿ' ಅಂತ ಕೇಳಿಕೊಂಡಳು. ಈ ವಾಸನಾ ವಿಷಯವಾಗಿ ಆಶ್ಚರ್ಯಗೊಂಡು 'ಇದು ಎಂತಹ ವಾಸನಾ! ಈ ಮೊದಲೇ ಅವನಿಗೆ (ಸ್ವಾಮಿರಾಯನಿಗೆ) ಲಗ್ನ ಮಾಡಿದ್ದು, ಆ ಸಂಸಾರವು ಬೆಳೆದರೆ ಅದನ್ನು ನಿರ್ವಾಹ ಮಾಡಿಕೊಳ್ಳುವಷ್ಟು ಶಕ್ತಿ ಇದ್ದರೂ ಆಸ್ತಿ ಇಲ್ಲ. ಅವನಿಗಾದರೂ ದೊಡ್ಡ ಉದ್ಯೋಗ ಅನ್ನುವಂತೆ ವಿಶೇಷ ಲೌಕಿಕ ವಿದ್ಯಾ ಕಲಿಸಲಿಲ್ಲ. ಹೊಟ್ಟೆ ತುಂಬಿಕೊಳ್ಳುವಂತಹ ವೈದಿಕ ವಿದ್ಯಾವನ್ನಾದರೂ ಕಲಿಸಿಲ್ಲ. ವ್ಯಾಪಾರ ಮೊದಲಾದ ವೃತ್ತಿಗಾಗಿ ಬೇಕಾಗುವ ಬಂಡವಾಳ (Capital) ತಕ್ಕಂತೆ ದ್ರವ್ಯವನ್ನಾದರೂ ಸಂಗ್ರಹಿಸಲಿಲ್ಲ. ಒಬ್ಬರನ್ನಾಶ್ರಯಿಸಿ ದ್ರವ್ಯ ಸಂಪಾದನಾ ಮಾಡಿಕೊಳ್ಳುವ ಶಕ್ತಿಯು ಅವನಿಗಿಲ್ಲ. ಮತ್ತು ಇಷ್ಟೇ ಅಲ್ಲ, ಅವನು ಪಾರಮಾರ್ಥಿಕ ಜ್ಞಾನದಿಂದ ವಿರಕ್ತನಾಗಿ ಈಷಣಗಳಲ್ಲಿ ವಿಶೇಷ ಮಮತಾ ಇಲ್ಲದಿರುವ ಸ್ವಭಾವದವನಾಗಿರೋಣದರಿಂದ ಅವನಿಗೆ ಮತ್ತೊಂದು ಮದುವೆ ಮಾಡುವುದು ಯೋಗ್ಯ ಕಾಣುವದಿಲ್ಲ. ಇದರ ಮೇಲೆ ನಿನ್ನ ಮರಣ ಕಾಲವು ಒಂದು ವಾರದಲ್ಲಿಯೇ ಇರುವದು. ಇಷ್ಟರಲ್ಲಿ ಕನ್ಯಾ ದೊರೆತು, ಲಗ್ನ ಮಾಡಿ, ನಿನ್ನ ಮನಸ್ಸು ತೃಪ್ತಿಗೊಳಿಸುವದು ಅಸಾಧ್ಯ ಮಾತೇ ಸರಿ. ಆದ್ದರಿಂದ ಇಂತಹ ವಾಸನಾ ಮನಸ್ಸಿನಿಂದ ತೆಗೆದು ಹಾಕು' ಅಂತ ಹೇಳಿದರು. "ತಾವಾಗಿಯೇ ಮನಸ್ಸಿನ ವಾಸನಾ ವಿಚಾರಿಸಿದ್ದರಿಂದ ಇದ್ದದ್ದನ್ನು ಹೇಳಿಕೊಂಡೆ. ಇದು ತಮ್ಮ ಇಚ್ಛಾಕ್ಕೆ ಬಂದರೆ ಪೂರೈಸಬಹುದು. ಇಲ್ಲವೆ

ಬಿಡಬಹುದು. ಈ ಸ್ವಾಮಿರಾಯ (ಮಗ)ನ ವಿಷಯದಲ್ಲಿ ತಾವು ಹೇಳಿದ್ದೆಲ್ಲ ನಿಜ. ಆದರೆ ಅವನ ಯೋಗಕ್ಷೇಮ ವಾಯುದೇವರು ವಹಿಸುವುದಾಗಿ ಆಶ್ವಾಸನಾ ಕೊಟ್ಟಿರುವುದಾಗಿ ಆಗಾಗ ತಾವೇ ಹೇಳುತ್ತಾ ಬಂದಿದ್ದೀರಿ. ಯಾಕಂದರೆ ತಮಗಿರುವ ವಾಯುದೇವರ ಬೆಂಬಲದಿಂದ ಯಾವುದೂ ಅಸಾಧ್ಯವಿಲ್ಲ. ಕೇವಲ ಮೂರು ಗಳಿಗೆಯಲ್ಲಿ ಶ್ರೀ ರಾಮದೇವರ ಪ್ರತಿಷ್ಠಾಪನಾ ಮಾಡಿದ ತಮಗೆ ಒಂದು ವಾರ ಅವಧಿ ಸಾಲದೇ? ನೀವು ಮನಸ್ಸು ಮಾಡಿದರೆ ಯಾವ ಕಾರ್ಯ ಅಸಾಧ್ಯ? ಯಾವದಾಗಲಾರದೆಂದು ತಮ್ಮ ಅನುವೃತಳಾದ ನನಗೆ ತಿಳಿಯದ ಮಾತಲ್ಲ. ಇದ್ದ ವಾಸನಾ ಅರಿಕೆ ಮಾಡಿಕೊಂಡಿದ್ದೇನೆ. ತಮ್ಮ ಚಿತ್ತಕ್ಕೆ ಬಂದರೆ ನೆರವೇರಿಸಿ ಬೇಡವಾದರೆ ಬಿಡಿರಿ" ಅಂತ ನಿಟ್ಟುಸಿರು ಹಾಕಿದಳು. ಇದನ್ನು ನೋಡಿ ಮುತ್ತಿಗಿ ಆಚಾರ್ಯರ ಮನಸ್ಸು ಕರಗಿ ಹಿಂದಿನ ಜನ್ಮ ಉರ್ವರಿತ ಭೋಗಿಸಬೇಕಾಗಿ ಈಕೆಗೆ (ತಮ್ಮ ಹೆಂಡತಿಗೆ) ಈ ರೀತಿ ಶ್ರೀ ಹರಿವಾಯುಗಳು ಇಟ್ಟಂತೆ ಕಾಣುತ್ತದೆ. ಇದು ಶ್ರೀ ಹರಿವಾಯುಗಳ ಇಚ್ಛಾಕ್ಕೆ ಬಂದಿದ್ದರೆ ಆ ಕೋರಿಕೆಯು ನೆರವೇರಲಿ ಎಂದು ಅಂದುಕೊಂಡು ತಮ್ಮ ಅತ್ಯಂತ ಪ್ರಿಯ ಶಿಷ್ಯನಾದ ನಾರಾಯಣಪೇಟೆಯ ಬೊಚ್ಚಿ ಗುರುರಾಜಾಚಾರ್ಯನಿಗೆ ಕೂಡಲೇ ಬರುವಂತೆ ಪತ್ರ ಹಾಕಿದರು. ಆತನು ಪತ್ರ ನೋಡಿದ ಕೂಡಲೇ ಹೊರಟು ಬಂದು 'ಏನಾಜ್ಞಾ' ಅಂತ ಕೇಳಿದನು. ಆತನಿಗೆ ತಮ್ಮ ಮನೋವಾಸನಾ ತಿಳಿಸಿ "ಇನ್ನು ಮೂರು-ನಾಲ್ಕು ದಿನಗಳಲ್ಲಿ ಕನ್ಯಾ ದೊರೆತು ಲಗ್ನಕ್ಕೆ ಅವಕಾಶವಾದರೆ" ನೋಡಿ ಅಂತ ಆಜ್ಞಾ ಮಾಡಿದರು. "ಮಹದಾಜ್ಞಾ"ವೆಂದು ಆತನು ಆ ದಿನವೇ ಹೊರಟು ನಾರಾಯಣ ಪೇಟೆಗೆ ನಾಲ್ಕು ಮೈಲು ದೂರದಲ್ಲಿದ್ದ "ಜಾಜಾಪುರ"ವೆಂಬ ಗ್ರಾಮದಲ್ಲಿರುವ ತನ್ನ ಕಕ್ಕನಾದ "ಲಕ್ಷ್ಮಣರಾಯ"ನಲ್ಲಿ ಈ ವಿಷಯವನ್ನು ತಿಳಿಸಿದನು. ಆತನು ಸಂತೋಷದಿಂದ ಒಡಂಬಟ್ಟು ತನ್ನ ಹಿರಿಯ ಮಗನಾದ ವೆಂಕಟರಾಯನಿಗೆ (ಕಾನಗಡ್ಡಿ ಎಂಬ ಗ್ರಾಮದಲ್ಲಿರುವ) ಮಗಳನ್ನು ಕೊಡುವದಾಗಿ ತಿಳಿಸಿ, ಕಾನಗಡ್ಡಿಗೆ ಈ ಗುರುರಾಜಾಚಾರ್ಯರನ್ನೇ ಹೋಗ ಹೇಳಿ ತನ್ನ ಸಮ್ಮತಿಯ ಪತ್ರವನ್ನು ಬರೆದುಕೊಟ್ಟನು. ಈ ಕಾನಗಡ್ಡಿ ವೆಂಕಟರಾಯನು ಕೇವಲ ಪಿತೃವಾಕ್ಯ ಪರಿಪಾಲಕನಾಗಿದ್ದು ಈ ಸಮಯದಲ್ಲಿ ಮರುಮಾತನಾಡದೆ ತಂದೆಯವರ ಇಷ್ಟಾನುಸಾರ ಮಾಡಲಿ ಅಂತ ತಾನು ಸಮ್ಮತಿಪಟ್ಟು, 'ಈಗಲೇ ನಾರಾಯಣ ಪೇಟೆಗೆ ಹೋಗಿ ಜಾಗೃತಿಯಾಗಿ ಮುಹೂರ್ತವಿಟ್ಟು ಆದವಾನಿಗೆ, (ಗುರುಗಳಿಗೆ) ನನ್ನ ಅಣ್ಣನಾದ ಕಾನಗಡ್ಡಿ ವೆಂಕಟರಾಯನ ಮಗಳಾದ ರಾಧಾಬಾಯಿಯನ್ನು ತಮ್ಮ ಮಗನಿಗೆ ಸ್ವೀಕಾರ ಮಾಡಿ ಉದ್ಧಾರ ಮಾಡಬೇಕೆಂದು ಪತ್ರವನ್ನು ಹಾಕುವಲ್ಲದೆ ಲಗ್ನ ಪತ್ರಿಕೆಯನ್ನು ಕಳಿಸು ಅಂತ ಒತ್ತಾಯ ಮಾಡಿದನು. ಆಗ ಮುಹೂರ್ತವನ್ನು ನೋಡುವದಕ್ಕೆ ಪಂಚಾಂಗವನ್ನು ನೋಡಲಾಗಿ ಮಾಘ ವದ್ಯ (ಕೃಷ್ಣಪಕ್ಷ) ಚತುರ್ಥಿ ಮುಹೂರ್ತ ದೊರೆಯಿತು. ಆಗ ಈ ಗುರುರಾಜಾಚಾರ್ಯರೂ ಮಾಘ ಶುದ್ಧ (ಶುಕ್ಲ) ದ್ವಾದಶಿ ಆದವಾನಿಯಿಂದ ಆಜ್ಞಾ ತೆಗೆದುಕೊಂಡು ಬಂದು ಚತುರ್ದಶಿ ಕಾನಗಡ್ಡಿಯಲ್ಲಿ ನಿರ್ಣಯ ಮಾಡಿಕೊಂಡು ನಾರಾಯಣಪೇಟೆಗೆ ಬಂದು ಪೌರ್ಣಿಮಾ ಪತ್ರವನ್ನು ಹಾಕಿದರು. ಅತ್ತ ಕಾನಗಡ್ಡಿಯಿಂದ "ಜಾಜಾಪುರಕ್ಕೆ" ಹೊರಟು ಬಂದು ಈ ಶುಭವಾರ್ತೆ (ಲಗ್ನ ಪತ್ರಿಕೆಗಳನ್ನು) ತಮ್ಮ ಆಪ್ತಮಿತ್ರರಿಗೆ

ಕಳಿಸಿ ದ್ವಿತಿಯಾ ನಾರಾಯಣಪೇಟೆಗೆ ಬಂದು ಲಗ್ನ ಸಂಭಾರಗಳನ್ನು ಸಿದ್ಧಪಡಿಸಿದರು. ಇತ್ತ ಗುರುರಾಜಾಚಾರ್ಯರಿಗೆ ಆಜ್ಞಾ ಮಾಡಿ ಕಳಿಸಿ, ಅವರಿಂದ ಪತ್ರ ಬರುವದಕ್ಕಿಂತಲೂ ಮೊದಲೇ ತಮ್ಮ ಶಿಷ್ಯವರ್ಗಕ್ಕೂ, ದೇಹಾನುಬಂಧಿಗಳಿಗೂ ಲಗ್ನ ಪತ್ರಿಕಾ ಬರೆದು ಕಳಿಸಿದರು. ಈ ಲಗ್ನ ಪತ್ರಿಕಾದಲ್ಲಿ ಕನ್ಯಾ ಯಾವದೆಂಬುದು ಇಲ್ಲದಿರೋಣದರಿಂದ ಈ ಲಗ್ನ ಪತ್ರಿಕಾ ವಿಷಯದಲ್ಲಿ ಅನೇಕರಿಗೆ ಸಂಶಯ ಉಂಟಾದರೂ ಆಜ್ಞಾ ಪತ್ರವೆಂಬ ಭಾವನೆಯಿಂದ ಅನುಕೂಲಾದವರು ಕೂಡಲೇ ಆದವಾನಿಯಿಂದ ನಾರಾಯಣಪೇಟೆ ರೋಡ್ ಸ್ಟೇಶನಕ್ಕೆ ಬಂದು ಸೇರಿದರು. ಮಾಘ ವದ್ಯ ದ್ವಿತೀಯಾ ಪ್ರಾತಃಕಾಲ ಹೊರಡುವ (ರೈಲು) ಗಾಡಿಯಿಂದ ಲಗ್ನಕ್ಕೆ ಹೊರಡುವದಿತ್ತು. ಆದರೆ ಪ್ರತಿಪದಾ ರಾತ್ರಿ ಅಂದರೆ ದ್ವಿತೀಯಾ ಬೆಳಗು ಮುಂಜಾನೆ ಮೂರು ಘಂಟೆಯ ಸುಮಾರಕ್ಕೆ ಈ ಲಕ್ಷ್ಮಿಬಾಯಿಯ (ಈ ಚರಿತ್ರನಾಯಕರ ಪತ್ನಿಯ) ಕೈಕಾಲು ತಣ್ಣಗಾಗಿ ಪ್ರಾಣೋತ್ಕ್ರಮಣ ಸಮಯವು ಸಮೀಪಿಸಿದಂತೆ ಆಯಿತು. ಇದರಿಂದ ಲಗ್ನಕ್ಕೆ ಪ್ರಯಾಣ ಮಾಡುವದು ಸಂಕ್ಷೇಪ ಮಾಡಬೇಕೆಂದು ಎಲ್ಲರ ಅಭಿಪ್ರಾಯವಾದಾಗ್ಯೂ ಈ ಮುತ್ತಿಗಿ ಆಚಾರ್ಯರು ಅಂದದ್ದೇನಂದರೆ: 'ಲಗ್ನಕ್ಕೆ ಹೊರಡಬೇಕಾದರೆ (ಗಾಡಿಯು) ಇನ್ನೂ ಎರಡು ತಾಸು (ಘಂಟೆ) ಅವಧಿ ಇದೆ. ಅಷ್ಟರಲ್ಲಿ ಪ್ರಾಣೋತ್ಕ್ರಮಣವಾದರೆ ಉಪಾಯವಿಲ್ಲ. ಇಲ್ಲವಾದರೆ ನಾನು ಮಾತ್ರ ಉಳಿದುಕೊಳ್ಳುತ್ತೇನೆ. ನೀವೆಲ್ಲರೂ ಲಗ್ನಕ್ಕೆ ಪ್ರಯಾಣ ಮಾಡಿರಿ. ಕದಾಚಿತ್ ಪ್ರಾಣದೇವರು ಇನ್ನೂ ಮೂರು-ನಾಲ್ಕು ದಿನಗಳಿರುವದು ಕಂಡು ಬಂದರೆ (ತಣ್ಣಗಾಗಿದ್ದ ಕೈಕಾಲುಗಳು ಬೆಚ್ಚಗಾಗಿ ಹುಷಾರಾದರೆ) ಹತ್ತು ಘಂಟೆಯ ಸುಮಾರಕ್ಕೆ ಹೊರಡುವ ಮೇಲು ಗಾಡಿಯಿಂದ (ನಮ್ಮ ಪತ್ನಿಯನ್ನು) ಕರೆದುಕೊಂಡು ಬರುತ್ತೇವೆ. ನೀವು-ನಾವು ಕೃಷ್ಣಾದಲ್ಲಿ ಕೂಡೋಣ. ಆ ರಾತ್ರಿ ಗಾಡಿಯಿಂದ ಹೊರಟು ಮುಂದೆ ನಾರಾಯಣಪೇಟೆಗೆ ಹೋಗೋಣ' ಅಂತ ಹೇಳಿ ಲಗ್ನಕ್ಕೆ ಎಲ್ಲರನ್ನು ಪ್ರಯಾಣ ಮಾಡಿಸಿದರು. ಮುಂದೆ ತಮ್ಮ ಪತ್ನಿಗೆ ಹುಷಾರಾಗಿ ಸ್ಮೃತಿ ಬಂದು "ಮನಿಯಲ್ಲಿ ಯಾರೂ ಕಾಣುವದಿಲ್ಲವಲ್ಲ? ಅಂತ ಪ್ರಶ್ನೆ ಮಾಡಿದರು." 'ಈವರೆಗೂ ನಿನಗೆ ಸ್ಮೃತಿ ಇದ್ದಿಲ್ಲ, ಆದ್ದರಿಂದ ನಾನು ಮಾತ್ರ ಉಳಿದು ಎಲ್ಲರನ್ನು ಲಗ್ನಕ್ಕೆ ಕಳಿಸಿದ್ದೇನೆ.' ಅಂತ ಉತ್ತರ ಕೊಟ್ಟರು. 'ನಾನು ಸಂಭ್ರಮ ನೋಡಬೇಕೆಂದೇ ಈ ಲಗ್ನ ಹೊರಡಿಸಿದ್ದು. ಅಂತಾದ್ದು ನನ್ನನ್ನು ಬಿಟ್ಟು ಲಗ್ನ ಆಗುವದೇ?' ಅಂತ ವಿಷಾದದಿಂದ ಕೇಳಿದರು. ಇಲ್ಲ! 'ಆಗ್ಗೆ ನಿನಗೆ ಸ್ಮೃತಿ ಇದ್ದಿಲ್ಲಾದ್ದರಿಂದ ಮುಂಜಾನಿನ ಗಾಡಿಗೆ ಎಲ್ಲರನ್ನು ಕಳಿಸಿದ್ದೇನೆ. ಈಗ ಹತ್ತು ಗಂಟೆಯ ಗಾಡಿಯಿಂದ ನಾವಿಬ್ಬರೂ ಹೊರಟು ಕೃಷ್ಣಾದಲ್ಲಿ ಅವರನ್ನು ಕೂಡಿಕೊಂಡು ಭೋಜನ ಮಾಡಿ, ಮುಂದಿನ ಗಾಡಿಯಿಂದ ಸರ್ವರೂ ಕೂಡಿ ನಾರಾಯಣ ಪೇಟೆಗೆ ಹೋಗುವದು' ಅಂತ ತಿಳಿಸಿದರು. ಈ ಮಾತು ಕೇಳಿ ಹಸನ್ಮುಖಿಯಾದಳು. ಆ ಪ್ರಕಾರ ಕೃಷ್ಣಾಕ್ಕೆ ಬಂದರು. ಇಲ್ಲಿ ತಮ್ಮ ಪರಿವಾರವೆಲ್ಲರೂ ಸಂತೋಷಪಟ್ಟು ಭೋಜನೋತ್ತರ ಎಲ್ಲರೂ ಕೂಡಿ ರಾತ್ರಿ ಗಾಡಿಯಿಂದ ಹೊರಟು 'ಸೈದಾಪೂರ' (ನಾರಾಯಣಪೇಟ ರೋಡ್) ಸ್ಟೇಶನ್ ಸೇರಿದರು. (ಆ ಕಾಲದಲ್ಲಿ ಮೋಟಾರು ಬಸ್ಸುಗಳು ಪ್ರಚಾರದಲ್ಲಿರಲಿಲ್ಲ.) ಅಲ್ಲಿಂದ ಇಪ್ಪತ್ತು (೨೦) ಮೈಲು ಟಾಂಗಾದಲ್ಲಿ ಪ್ರಯಾಣ ಮಾಡಿ ತೃತಿಯಾ ಪ್ರಾತಃಕಾಲ ನಾರಾಯಣಪೇಟೆ

ಸೇರಿದರು. ಆ ದಿನ ದೇವರ ಸಮಾರಾಧನೆ, ರಾತ್ರಿ ರುಕ್ಮೋತ (ಜಾನ್ವಾಸ), ಎದುರುಗೊಳ್ಳುವುದು ಯಥಾ ಕ್ರಮ ನಡೆಯಿತು. ಆ ದಿನ ಈ ಲಕ್ಷ್ಮೀಬಾಯಿಯವರ ಪ್ರಕೃತಿಯಲ್ಲಿ ವಿಲಕ್ಷಣ ಮಾರ್ಪಾಟು ಹೊಂದಿ ಆರೋಗ್ಯವಿರುವಂತೆ ಅನಿಸಿ 'ಈಗ ನನ್ನ ಪ್ರಕೃತಿಯು ಅತ್ಯಂತ ಗುಣವಾಗಿರೋಣದರಿಂದ ಈ ಲಗ್ನವು ಒಂದು ದಿನದಲ್ಲಿ ಮುಗಿಸದೇ ಎಂಟು ದಿನಗಳು ಒಳ್ಳೇ ವಿಜೃಂಭಣೆಯಿಂದ ನಡೆಯಲಿ. ಈ ಲಗ್ನದಲ್ಲಿ ಪುಣ್ಯಾಹ ವಾಚನಾದಿ ಕಾರ್ಯಗಳಲ್ಲಿ ನಾನೂ ಭಾಗವಹಿಸಿ ನನ್ನ ಮನೋರಥ ಪೂರ್ಣ ಮಾಡಿಕೊಳ್ಳುತ್ತೇನೆ' ಅಂತ ಗುರುರಾಜಾಚಾರ್ಯರಲ್ಲಿಯೂ, ತಮ್ಮ ಪತಿಗಳಲ್ಲಿಯೂ ತಿಳಿಸಿದರು. "ತಥಾಸ್ತು" ಅಂದು ಅವರನ್ನು ಅತ್ಯಂತ ಸಮಾಧಾನಪಡಿಸಿದರು. ಇತ್ತ ಹೊರಗೆ ಬಂದು 'ಈಕೆಯು ಇನ್ನು ಒಂದು ದಿನ ಮಾತ್ರ ಇರುವಳು. ಪ್ರಯುಕ್ತ ಈ ದಿನವೇ ಲಗ್ನದ ಶುಭಕಾರ್ಯ ಯಾವತ್ತೂ ಅಂದರೆ, ಕಂಕಣ ವಿಸರ್ಜನ, ಕುಲದೇವತಾ, ಮಂಟಪ ದೇವತಾ ವಿಸರ್ಜನ ಕೆಲಸಗಳು ಮುಗಿಸಿರಿ' ಅಂತ ಗುರುರಾಜಾಚಾರ್ಯರಿಗೆ ಸೂಚಿಸಿದರು. ಅವರು ಅದರಂತೆ ಸ್ವಾಮಿರಾಯನಿಗೆ ಕುಂ॥ ಸೌ॥ ರಾಧಾಬಾಯಿಯೊಡನೆ ವಿವಾಹ ಮಾಡಿದರು. ಮರುದಿನ (ಮಾಘ ವದ್ಯ ಪಂಚಮಿ.) ಈ ಲಕ್ಷ್ಮಿಬಾಯಿಯು (ತಮ್ಮ ಭಾರ್ಯಳ) ಸಂಗಡ ಈ ಗುರುರಾಜಾಚಾರ್ಯರ ಮುಖೇನ ರಾಯರ ಗುಡಿಯಲ್ಲಿ ರುದ್ರದೇವರನ್ನು ಪ್ರತಿಷ್ಠೆ ಮಾಡಿದರು. ಆ ದಿನವೆಲ್ಲವೂ ಆರೋಗ್ಯವಂತಳಂತೆ ಕಂಡುಬಂದು, ಆ ರಾತ್ರಿ ಏಕಾಏಕಿ ಪ್ರಕೃತಿಯಲ್ಲಿ ಬದಲಾವಣೆಯಾಗಿ (ಮಾಘ ವದ್ಯ ಷಷ್ಠಿ) ಬೆಳಗು ಮುಂಜಾನೆ (ಅರುಣೋದಯ ಸಮಯದಲ್ಲಿ) ಪ್ರಾಣೋತ್ಕ್ರಮಣವಾಯಿತು. ಇವರು ಪೂರ್ವದಲ್ಲಿ ಅಗ್ನಿಹೋತ್ರವನ್ನು ಇಟ್ಟಿದ್ದ ಪ್ರಯುಕ್ತ ಆ ವಿಧಿಗನುಸರಿಸಿ ಪ್ರೇತ ದೇಹವನ್ನು ಮಾಡಿ, ಇಷ್ಟಿಯೇ ಮೊದಲಾದ ವಿಮುಕ್ತ ಕ್ರಿಯಾಗಳು ಮಾಡಲ್ಪಟ್ಟು, ಆ ದಿವಸ ಅಪರಾಹ್ನ ಕಾಲದಲ್ಲಿ ಅಗ್ನಿ ಸಂಸ್ಕಾರವಾಯಿತು. ಆ ದಿನದಿಂದಲೇ ಉತ್ತರ ಕ್ರಿಯಾದಿಗಳು ಪ್ರಾರಂಭ ಮಾಡಿ ಅಂತೇಷ್ಟಿ ಕರ್ಮ ಯಾವತ್ತನ್ನೂ ನಾರಾಯಣ ಪೇಟೆಯಲ್ಲಿಯೇ ನೆರವೇರಿಸಿ ಸ್ವಸ್ಥಳ (ಆದವಾನಿ)ಕ್ಕೆ ಬಂದು ಸೇರಿದರು.

೬೩. ಸಂಸ್ಥಾನ ಪೂಜೆ ಸುಗಮವಾಗಿತು, ಶ್ರೀಗಳವರು ಸಂತಸಗೊಂಡರು.

ಕುಂಭಕೋಣಂ ಅನಂತ ಕೃಷ್ಣಶಾಸ್ತ್ರಿ ಎಂಬ ಮಾಯವಾದಿ " ಶ್ರೀ ವ್ಯಾಸರಾಯ" ರಿಂದ ವಿರಚಿಸಲ್ಪಟ್ಟ "ಚಂದ್ರಿಕಾ ಖಂಡನಂ" ಎಂಬ ಗ್ರಂಥ ಬರೆದು ಅದನ್ನು ಪ್ರಚಾರಗೊಳಿಸಿದ್ದನು. ಈ ಗ್ರಂಥಕ್ಕೆ "ಗೌಡಗಿರಿ ವೆಂಕಟರಮಣ" ಆಚಾರ್ಯರೇ ಮೊದಲಾದ ಅನೇಕ ದ್ವೈತ ವಿದ್ವಾಂಸರುಗಳು ಪ್ರತಿಖಂಡನ (ಅರ್ಥಾತ್ ಚಂದ್ರಿಕಾ ಮಂಡನಂ) ಬರೆಯತೊಡಗಿದ್ದರು. ಅಷ್ಟರಲ್ಲಿ ಆಗ್ಗೆ ಶ್ರೀ ಉತ್ತರಾದಿ ಮಠಾಧೀಶರಾದ ಶ್ರೀ ಶ್ರೀ ಸತ್ಯಧ್ಯಾನ ತೀರ್ಥ ಶ್ರೀಪಾದಂಗಳವರು ಸಹ ಆ ಚಂದ್ರಿಕಾ ಖಂಡನ ರೂಪ ಗ್ರಂಥಕ್ಕೆ ಪ್ರತಿ ಖಂಡನ ರೂಪವಾಗಿ "ಚಂದ್ರಿಕಾ ಮಂಡನ" ಎಂಬ ಗ್ರಂಥವನ್ನು ರಚಿಸಿ ಅದನ್ನು ತಿರುಪತಿಯ ಪದ್ಮ ಸರೋವರ (ತಿರಚಾನೂರ) ವಿದ್ವತ್ಸಭಾದಲ್ಲಿ ಮಂಡಿಸಿ ಆ "ಅನಂತ ಕೃಷ್ಣಶಾಸ್ತ್ರಿಯನ್ನು ಕರಿಸಿ ಆ ಶಾಸ್ತ್ರೀಯ ಸಮಕ್ಷಮವೇ

ಅವರಿಂದ ರಚಿಸಲ್ಪಟ್ಟ ಗ್ರಂಥವನ್ನು ಖಂಡಿಸಿ, ತಮ್ಮಿಂದ (ಶ್ರೀ ಸತ್ಯಧ್ಯಾನತೀರ್ಥರಿಂದ) ರಚಿಸಲ್ಪಟ್ಟ "ಚಂದ್ರಿಕಾ ಮಂಡನ"ವೆಂಬ ಗ್ರಂಥವನ್ನು ಪ್ರಚಾರಗೊಳಿಸುವ ಉದ್ದೇಶದಿಂದ ಧಾಟಿಸಿ, ಆದವಾನಿ, ರಾಯಚೂರು ಮಾರ್ಗವಾಗಿ ಶೀಘ್ರಗತಿಯಿಂದ ಪ್ರಯಾಣ ಬೆಳೆಸಿದರು. ಅಗ್ಗೆ ಆ ಮಠದಲ್ಲಿ ಮೊಕ್ಕಾಂ ಇದ್ದಿಲ್ಲ, ಮತ್ತು ಅದರಲ್ಲಿ ಕುಳಿತುಕೊಂಡು ಪ್ರಯಾಣ ಮಾಡುವದು ಅನಾಸ್ತವೆಂಬ ಅಭಿಪ್ರಾಯವಿತ್ತು. ಆಗಿನ ಕಾಲಕ್ಕನುಸರಿಸಿ, ಮೇಣೆ (ಸ್ಯಂದನ) ದಲ್ಲಿಯೇ ಪ್ರಯಾಣ ಮಾಡುತ್ತಿದ್ದುದರಿಂದ ಸ್ವಲ್ಪ ದಣುವಿಕೆ ಹೊಂದಿದ್ದರು. ಆದವಾನಿಯಲ್ಲಿ ಈ ಮುತ್ತಿಗಿ ಆಚಾರ್ಯರ ಸ್ಥಲವು (ವಿಶ್ರಾಂತಿಗೆ) ಪ್ರಶಸ್ತವಿದೆಯೆಂದು ತಿಳಿದು ಮಠದ ಕ್ರಮ ಪ್ರಕಾರ ಪೂರ್ವ ದಿನವೇ ಮಠೀಯ ದ್ವಾರಪಾಲಕನ ಸಂಗಡ ರಾಯಸ (ಶ್ರೀಮುಖ) ಪತ್ರವನ್ನು ಆದವಾನಿಯ ಮಹಾಜನಕ್ಕೆ ಹಂಚುವವಾಗಿ ಹೇಳಿದರಲ್ಲದೆ ಇವರಲ್ಲಿಯೂ (ಈ ಮುತ್ತಿಗಿ ಆಚಾರ್ಯರಲ್ಲಿಯೂ) ಹೋಗಿ ತಾವು (ಶ್ರೀ ಸತ್ಯಧ್ಯಾನತೀರ್ಥರು) ಈ ರಾಮಚಂದ್ರ ದೇವರ ಸನ್ನಿಧಾನದಲ್ಲಿಯೇ (ತಮ್ಮಲ್ಲಿಯೇ) ಇಳಿದುಕೊಳ್ಳುವುದಾಗಿಯೂ ಅದಕ್ಕಾಗಿ ಸ್ಥಲವನ್ನು ಸ್ವಚ್ಛವಾಗಿಡುವಂತೆಯೂ ಹೇಳಿ ಕಳಿಸಿದ್ದರು. ಆ ದ್ವಾರಪಾಲಕನೂ ಹಾಂಗೂ (ಆದವಾನಿಯ) ಆಗಿನ ಉತ್ತರಾದಿ ಮಠಾಧಿಕಾರಿಯಾಗಿದ್ದ 'ಕೆರೆ ಬೆಳಗಲ್ಲ ವೆಂಕೋಬಾಚಾರ್ಯ'ನು ಬಂದು ಇವರಿಗೆ (ಈ ಚರಿತ್ರನಾಯಕರಿಗೆ) ರಾಯಸ ಪತ್ರವನ್ನು ಕೊಟ್ಟು ಶ್ರೀ ಸತ್ಯಧ್ಯಾನತೀರ್ಥರು ಹೇಳಿಕಳಿಸಿದ್ದನ್ನು ತಿಳಿಸಿದರು. ಆಗ ಈ ಮಾತುಗಳು ಯಥಾರ್ಥವೋ ಅಥವಾ ಕುಟಿಲ ನೀತಿ ಪೂರಿತವೋ ಏಂದೆಣಿಸಿ, ಯಾಕೆಂದರೆ ಬಹುಕಾಲದಿಂದ ಅವರಿಗೂ ಇವರಿಗೂ ವಿರೋಧವಿದ್ದುದರಿಂದ, ಯದ್ಯಪಿ ಬಾಗಲಕೋಟೆಯಲ್ಲಿ ರಾಜಿ (ಸಂಧಾನ) ಆದಾಗ್ಯೂ, ಅದು ಸಮರ್ಪಕ ತೋರಿರಲಿಲ್ಲ. ಯಾಕೆಂದರೆ, ತಪ್ತ ಮುದ್ರಾ ವಿಷಯಕ ಮಾಡಿದ್ದ ಪ್ರಚಾರ ಮೂಲಕ ರಾಜಿಯಾಗಿರಬಹುದು ಅಂತ ಅಂದುಕೊಂಡು ಆ ಮಾತುಗಳ ಯಥಾರ್ಥ ಬೈಲಿಗೆ ಬರುವುದಕ್ಕಾಗಿ "ಸುವರ್ಣವನ್ನು ಒರೆಗಲ್ಲಿಗೆ ತಿಕ್ಕುವಂತೆ" 'ಇದು ಕೇವಲ ನನ್ನ ಸ್ಥಲ. ತಮ್ಮದು ಹ್ಯಾಂಗೆ ರಾಮಚಂದ್ರದೇವರ ಸನ್ನಿಧಾನವೊ ಅದರಂತೆ ಇದು ಕೂಡಾ ಶ್ರೀ ರಾಮಚಂದ್ರ ದೇವರ ಸನ್ನಿಧಾನ. ಇಲ್ಲಿ ತ್ರಿಕಾಲದಲ್ಲಿಯೂ ಪೂಜಾದಿಗಳು ನಡೆಯುತ್ತವೆ. ಆಗ್ಗೆ ಘಂಟೆ, ಜಾಗಟೆ, ನಗಾರಿ ವಗ್ಯೆರೆ ವಾದ್ಯಗಳು, ಕಾಲಕಾಲಕ್ಕೆ ಆಗುವ ಪೂಜಾಕ್ಕನುಸರಿಸಿ ನೈವೇದ್ಯ ಮಂಗಳಾರತಿ ವಗ್ಯೆರೆ ಆಗುತ್ತಿರುತ್ತವೆ. ಈ ಯಾವದಕ್ಕೂ ಪ್ರತಿಬಂಧಕ ಇರಕೂಡದು. ಹಾಂಗಾದರೆ ಬರಲಿ' ಅಂತ ಸ್ಪಷ್ಟ ಹೇಳಿದರು. ಆಗ ಮಠಾಧಿಕಾರಿಯು 'ಮಠ (ಸಂಸ್ಥಾನ) ಇದ್ದಲ್ಲಿ ಮಠದ ವಾದ್ಯ ವೈಭವದ ವ್ಯತಿರಿಕ್ತ ಅನ್ಯ ವಾದ್ಯ ವೈಭವಗಳು ಆಗುವ ಸಂಪ್ರದಾಯವಿಲ್ಲದ್ದರಿಂದ ಈ ನಿಮ್ಮ ಮಾತಿಗೆ ನಾವು ಹ್ಯಾಂಗೆ ಸಮ್ಮತಿ ಕೊಟ್ಟೇವು? ಈ ನಿಮ್ಮ ಅಭಿಪ್ರಾಯವನ್ನು ಸ್ವಾಮಿಗಳವರಲ್ಲಿ ತಿಳಿಸುವೆವು. ಅದಕ್ಕೆ ಅವರೇನು ಹೇಳುವರೋ ಅದನ್ನು ತಮಗೆ ತಿಳಿಸುತ್ತೇವೆ' ಅಂತ ಹೇಳಿ ಹೋಗಿ, ಊರಲ್ಲಿರುವ 'ವೆಂಕಟ ನರಸಪ್ಪ' ನವರ ಗುಡಿಯಲ್ಲಿ ಇಳಿಸುವದೆಂದು ಗೊತ್ತುಮಾಡಿ, ಶ್ರೀ ಸತ್ಯಧ್ಯಾನ ತೀರ್ಥರಿಗೆ ತಿಳಿಸಿದರು. ಶ್ರೀ ಸತ್ಯಧ್ಯಾನ ತೀರ್ಥರಿಗೆ ಇಲ್ಲಿ (ಈ ಚರಿತ್ರನಾಯರ ಸ್ಥಳದಲ್ಲಿ) ಬರುವ ಅಭಿಪ್ರಾಯವೇ ಪ್ರಧಾನವಾಗಿತ್ತಾದ್ದರಿಂದ "ಆ ಕರಾರು (ಷರ್ತು)ಗಳಿಗೆ ಸಮ್ಮತಿಸಿರುವೆವೆಂದು ತಿಳಿಸುವುದಾಗಿ (ಶ್ರೀ ಸತ್ಯಧ್ಯಾನತೀರ್ಥರು)

ಮಠಾಧಿಕಾರಿಗಳಿಗೆ ಹೇಳಿದರು. 'ಸ್ವಾಮಿ! ಈಗ ಹೋಗಿ ಹೇಳುವದೆಂದರೆ ಅವಧಿ ಇಲ್ಲ. ಈಗ ಸರ್ವ ಜನ ಸಮ್ಮತಿಯಿಂದ ಊರು ಮಧ್ಯದಲ್ಲಿರುವ ವೆಂಕಟನರಸಪ್ಪನವರ 'ಈಶ್ವರಾಲಯ' ದಲ್ಲಿ ಇಳಿಸುವದೆಂದು ಗೊತ್ತು ಮಾಡಿ ವ್ಯವಸ್ಥಾ ಮಾಡಲಾಗಿದೆ. ಸದ್ಯಕ್ಕೆ ವೆಂಕಟ ನರಸಪ್ಪನವರ ಗುಡಿಯಲ್ಲಿಯೇ ಇಳಿದುಕೊಂಡು ನಾಳೆ ತಮ್ಮ ಇಚ್ಛಾ ಪ್ರಕಾರ ಮಾಡಬಹುದು' ಅಂತ ವಿಜ್ಞಾಪಿಸಿಕೊಂಡನು. 'ಒಳ್ಳೇದು' ಅಂದು ಅಲ್ಲಿಗೇ ಹೋಗುವ ದೃಷ್ಟಿಯಿಂದ ತೀವ್ರಗತಿಯಿಂದ (ಮೇನೆ ಊರು ಪ್ರವೇಶ ಮಾಡುವಲೋಸುಗ) ಬರುತ್ತಿರಲು, ಶ್ರೀ ಶ್ರೀಗಳವರ ಸ್ವಾಗತದ ಸಲುವಾಗಿ ವಾದ್ಯ ವೈಭವದೊಡನೆ ಅನೇಕ ಜನರು ನಿರೀಕ್ಷಿಸುತ್ತ ಕುಳಿತಿರುವದಕ್ಕಿಂತಲೂ ಈ ಮುತ್ತಿಗಿ ಆಚಾರ್ಯರು ಒಂದು ಮೈಲು ದೂರ ಎದುರುಗೊಳ್ಳಲು ಹೋದರು. ಅತ್ತ ಮೇನೆ ಬರುವದನ್ನು ಕಂಡು ಅದು ಸಮೀಪಕ್ಕೆ ಬಂದ ಕೂಡಲೇ ಸಾಷ್ಟಾಂಗ ನಮಸ್ಕಾರ ಮಾಡುವದನ್ನು ನೋಡಿ ಸ್ವಾಮಿಗಳವರು ಮೇನೆಯನ್ನು ನಿಲ್ಲಿಸಿ ನಾರಾಯಣ ಸ್ಮರಣೆ ಪೂರ್ವಕ ತಾತ್ಕಾಲಿಕ ಯೋಗಕ್ಷೇಮ ವಿಚಾರಿಸಿ ನಂತರ ತಾವೇ (ಶ್ರೀಗಳವರೇ) 'ಈಗಲೇ ನಿಮ್ಮ ಸ್ಥಲಕ್ಕೆ ಬರಬಹುದಾಗಿತ್ತು. ಆದರೆ, ಯಾವತ್ತೂ ಜನರು ಪ್ರತ್ಯೇಕ ಸ್ಥಲ ವ್ಯವಸ್ಥಾ ಮಾಡಿರುವಂತೆ ಅವರ ಸಂತೋಷಾರ್ಥ ಈ ದಿನ ಅಲ್ಲಿ ಇಳಿದುಕೊಳ್ಳುತ್ತೇವೆ. ನಾಳೆ ನಿಮ್ಮಲ್ಲಿಗೆ ಬರುತ್ತೇವೆ. ನೀವು ನಮ್ಮ ಮಠಾಧಿಕಾರಿಯಲ್ಲಿ ತಿಳಿಸಿದ ಎಲ್ಲಾ ಕರಾರುಗಳು ನಮಗೆ ಸಮ್ಮತವಿವೆ' ಅಂತ ಹೇಳಿದರು. "ಮಹದಾಜ್ಞಾ" ಅಂದು ಒಂದುಳಿದರು. ಕೂಡಲೇ ಸ್ವಾಮಿಗಳವರು ಕರೆದು 'ಈಗ ನಮ್ಮ ಸಂಗಡವೇ ನಾವು ಇಳಿದುಕೊಳ್ಳುವ ಸ್ಥಳದವರೆಗೂ ಬರಬೇಕು' ಅಂತ ಹೇಳಿ ಮೇನೆಯನ್ನು ಸಾವಕಾಶವಾಗಿ ನಡೆಸುವದಾಗಿ (ಭೋವಿವರಿಗೆ) ತಿಳಿಸಿದರು. ಅಲ್ಲಿಂದ ಮೇನೆಯ ಜೊತೆಯಲ್ಲಿಯೇ ಬಂದು, ಸರ್ವ ಜನರನ್ನೊಳಗೊಂಡು ವೆಂಕಟ ನರಸಪ್ಪನವರ ಈಶ್ವರ ದೇವಾಲಯ ಪ್ರವೇಶ ಮಾಡಿದರು. ಆಗ ಮರು ದಿವಸದ ಭಿಕ್ಷಾ 'ತಾನಾಜಿ ವೆಂಕೋಬರಾಯ'ರಿಂದ ಮಂಗರಾಯನ ಸನ್ನಿಧಾನದಲ್ಲಿ (ಪೂಜಾ) ಆಗತಕ್ಕದ್ದೆಂದು ನಿರ್ಣಯವಾಗಲು 'ನಾಳೆ ತೀರ್ಥ ಪ್ರಸಾದಕ್ಕೆ ನೀವು ಮಂಗರಾಯನ ಸನ್ನಿಧಾನಕ್ಕೆ ಬರಲೇ ಬೇಕು. ನೀವು ಬಂದರೇನೆ ನಿಮ್ಮ ಮನಸ್ಸಿನ ಕಲ್ಮಷ ತೆಗೆದುಹಾಕಿಕೊಂಡಿರುವಿರೆಂದು ಭಾವಿಸಿ ನಾವು ನಿಮ್ಮಲ್ಲಿಗೆ ಬರುವೆವು' ಅಂತ ಹೇಳಿದರು. 'ಮಹದಾಜ್ಞಾ' ಅವಶ್ಯ ಬರುತ್ತೇನೆ ಅಂತ ಹೇಳಿ ಮರುದಿನ ಆದರಂತೆ ತೀರ್ಥ ಪ್ರಸಾದಕ್ಕೆ ಹೋದರು. ಇವರು (ಈ ಚರಿತ್ರನಾಯಕರು) ಹೋದಕೂಡಲೇ ಶ್ರೀ ರಾಮದೇವರ ಪೂಜಾ ಮಾಡುತ್ತಿದ್ದ ತಾವು (ಶ್ರೀ ಸ್ವಾಮಿಗಳು) ಒಬ್ಬ ಸೇವಕನಿಗೆ ಸಂಜ್ಞಾಮಾಡಿ, ಆಚಾರ್ಯರನ್ನು ಹತ್ತಿರ ಕರೆದು ಸಮೀಪದಲ್ಲಿ ಕುಳಿತುಕೊಳ್ಳಲು ಹೇಳಿದರು. ಪೂಜಾ ನಂತರ ವಿದ್ವಜ್ಜನ ಸಮೂಹದಲ್ಲಿ ಪ್ರಥಮ ತೀರ್ಥವನ್ನು ಕೊಟ್ಟು ತಮ್ಮ ಸಮ್ಮುಖದಲ್ಲಿ ಇವರಿಗೆ ಎಲೆ ಹಾಕಿಸಿ ಭೋಜನಕ್ಕೆ ಕೂಡಿಸಿದರು. ಅರ್ಧ ಭೋಜನವಾದ ಮೇಲೆ 'ನೀವು ಜಾಗ್ರತೆ ಎದ್ದು ಮನೆಗೆ ಹೋಗಿ, ನೀವು ಹೋಗುವದರೊಳಗಾಗಿ ನಾವು ನಿಮ್ಮಲ್ಲಿಗೆ ಬರುತ್ತೇವೆ ಅಂತ ಸ್ವಾಮಿಗಳವರು ಹೇಳಿದರು. 'ಮಹಾದಾಜ್ಞಾ' ಎಂದು ತೀವ್ರ ಮನೆಗೆ ಬಂದರು. ಹೇಳಿದಂತೆ ಶ್ರೀರಾಮ ದೇವರ ಪೆಟ್ಟಿಗೆ ಹಾಗೂ ಇಬ್ಬರು ಶಿಷ್ಯರು ಸಹ

ಮೇನೆಯಲ್ಲಿ ಶ್ರೀ ಸ್ವಾಮಿಗಳವರು ಬಂದರು. ಅವರಿಗಾಗಿ ಸಿದ್ಧಪಡಿಸಿದ್ದ ಸ್ಥಳದಲ್ಲಿ ಇಳಿಸಿದರು. ಆ ರಾತ್ರಿ ಕೆಲಹೊತ್ತು ಸರಸ-ಸಲ್ಲಾಪಾದಿಗಳು ನಡೆದು, ಅವರು-ಇವರೂ ವಿಶ್ರಾಂತಿ ತೆಗೆದುಕೊಂಡರು. ಮರುದಿನ ಶ್ರೀ ರಾಮಚಂದ್ರ ದೇವರ ಪೂಜಾ (ಭಿಕ್ಷಾ) ನಡೆಯುವದಾಗಿ ನಿರ್ಣಯವಾಯಿತು. ಮಠದ ಪದ್ಧತಿ ಪ್ರಕಾರ ಪೂಜಾ ಮಾಡಿಸತಕ್ಕ ಯಜಮಾನರು ಪ್ರಥಮದಲ್ಲಿ ಮಠದ ದಿವಾನರಲ್ಲಿ ಹೋಗಿ ಸೇವಾದ್ರವ್ಯ, ಪಾದಪೂಜಾ, ತಪ್ತಮುದ್ರಾ, ಮಂಟಪ, ತೊಟ್ಟಿಲು ವಗೈರೆ ಏರ್ಪಾಟು ಮಾಡತಕ್ಕದ್ದು. ಅಂಥಾದ್ದು ಇಲ್ಲಿ ಆ ಕ್ರಮವನ್ನು ಅನುಸರಿಸದೆ ಸಾಕ್ಷಾತ್ ಸ್ವಾಮಿಗಳವರಿಗೂ, ಈ ಮುತ್ತಿಗಿ ಆಚಾರ್ಯರಿಗೂ ದ್ರವ್ಯಾದಿಗಳ ಸಂಬಂಧಿ ಯಾವ ಮಾತೂ ಆಗದೆ, ಕೇವಲ ಅನುಬಂಧಿಗಳ ವ್ಯವಹಾರದಂತೆ ನಡೆಯುವದು, ಆಗಿನ ದಿವಾನರಾಗಿದ್ದ 'ಪಾಂಡುರಂಗಿ ಜಯಾಚಾರ್ಯ'ರಿಗೆ (ಭಾವಿ ಸ್ವಾಮಿಗಳು ಸತ್ಯಪ್ರಜ್ಞರು) ಸಹನವಾಗದೆ ಹೇಗಾದರೂ ಮಾಡಿ ಈ ಮೈತ್ರಿಯನ್ನು ಮುರಿಯಬೇಕೆಂದು ಹೊಂಚುಹಾಕಿ ಕಲಾಪಕ್ಕೆ ಮಾರ್ಗ ಆಗುವದನ್ನು ಯೋಚಿಸತೊಡಗಿ, ಶ್ರೀ ಸತ್ಯಧ್ಯಾನತೀರ್ಥರು ಪಾದ ಪೂಜಾರ್ಥ ಊರೊಳಗೆ ಹೋದ ಸಮಯದಲ್ಲಿ ಇಲ್ಲಿಯ ಶ್ರೀ ರಾಮಚಂದ್ರದೇವರ ಸನ್ನಿಧಿಯಲ್ಲಿ ಒಂದು ಕುರ್ಚಿಯನ್ನು ತರಿಸಿ, ಅದರಲ್ಲಿ ಕುಳಿತು ಕೆಲವು ವಿದ್ಯಾರ್ಥಿಗಳಿಗೆ ಪಾಠವನ್ನು (ತರ್ಕ ವೇದಾಂತ) ಹೇಳತೊಡಗಿದರು. ಆಗ ಈ ಮುತ್ತಿಗಿ ಆಚಾರ್ಯರ ಶಿಷ್ಯನಾದ ನಾರಾಯಣಪೇಟೆಯ ಬೊಜ್ಜಿ ಗುರುರಾಜಾಚಾರ್ಯನು ಅಗ್ನಿಹೋತ್ರದ ಪ್ರಾತಃಕಾಲದ ಹೋಮವನ್ನು ಮಾಡಬೇಕಾಗಿ, ಪಾಂಡುರಂಗಿ ಜಯಾಚಾರ್ಯರಿಗೆ 'ಸ್ವಾಮಿ! ಈಗ ಇಲ್ಲಿ ಹೋಮವು, ಶ್ರೀ ರಾಮಚಂದ್ರದೇವರ ಪೂಜೆಯು ನಡೆಯುವದು. ಈ ಸಂದರ್ಭದಲ್ಲಿ ತಾವು ಕುರ್ಚಿಯ ಮೇಲೆ ಕುಳಿತುಕೊಂಡು ಪಾಠವನ್ನು ಹೇಳುತ್ತಿರುವದು ಸರಿಯಲ್ಲ. ಬೇಕಾದರೆ ಕೃಷ್ಣಾಜಿನ ಕೊಡುತ್ತೇನೆ. ಅದರ ಮೇಲೆ ಕುಳಿತುಕೊಂಡೆ ಪಾಠ ಹೇಳಿರಿ. ಒಂದು ಪಕ್ಷ ನಿಮಗೆ ಕುರ್ಚಿಯ ಮೇಲೆ ಕುಳಿತುಕೊಂಡೆ. ಪಾಠ ಹೇಳುವ ಇಚ್ಛಾ ಇದ್ದರೆ, ಈಗ ಹಿಂದಿನ ಪಡಸಾಲಿಯಲ್ಲಿ ಕುಳಿತುಕೊಂಡೇ ಪಾಠ ಹೇಳಿರಿ' ಅಂತ ತಿಳಿಸಿದನು. ಈ ಮಾತುಗಳು ಆ ದಿವಾನರಿಗೆ ಸಹನವಾಗದೆ ಪಾಠವನ್ನೇ ನಿಲ್ಲಿಸಿ, ಸ್ವಾಮಿಗಳವರು ಬಂದಕೂಡಲೇ ಅವರಿಗೆ ಸಿಟ್ಟು ಬರುವಂತೆ "ಸ್ವಾಮಿ! ಅವರು, (ಈ ಮುತ್ತಿಗಿ ಆಚಾರ್ಯರೂ) ಎಲ್ಲಾ ಕರಾರುಗಳಿಗೆ ಒಪ್ಪಿಕೊಂಡು ಬಂದಾಗ್ಯೂ ಪಾಠ, ಪ್ರವಚನ ಕೂಡಾ ಮಾಡಕೂಡದಾಗಿ ಹೇಳುತ್ತಿರುವರು" ಅಂತ ಹೇಳಿದರು. (ಸ್ವಾಮಿಗಳವರಿಗೆ ಪಾಠ ಪ್ರವಚನವು ಬಹು ಇಷ್ಟ, ಇದನ್ನು ಪ್ರತಿಬಂಧಕ ಮಾಡುವುದೆಂದರೆ, ಅವರಿಗೆ ಸಿಟ್ಟು ಬರುವುದೆಂದೆಣಿಸಿ) ಕೂಡಲೇ ಸ್ವಾಮಿಗಳವರು ಈ ಮುತ್ತಿಗಿ ಆಚಾರ್ಯರನ್ನು ಹಾಗೂ ಬೊಜ್ಜಿ ಗುರುರಾಜಾಚಾರ್ಯರನ್ನು ಕರೆದು, ಪಾಠ ಪ್ರವಚನ ಮಾಡಕೂಡದೆಂದು ಹೇಳಿದರಂತಲ್ಲ! ಯಾತಕ್ಕೆ? ಅಂತ ವಿಚಾರಿಸಿದರು. ಆಗ ಬೊಜ್ಜಿ ಗುರುರಾಜಾಚಾರ್ಯರು ಕೈ ಜೋಡಿಸಿ "ಸ್ವಾಮಿ! ಪಾಠ ಪ್ರವಚನ ಮಾಡಕೂಡದಾಗಿ ಹೇಳಲಿಲ್ಲ, ಆ ದಿವಾನರು, ಹೋಮ ಮತ್ತು ಶ್ರೀ ರಾಮಚಂದ್ರದೇವರ ಪೂಜಾ ನಡೆಯುತ್ತಿರುವ ಸಮಯದಲ್ಲಿ ಕುರ್ಚಿಯ ಮೇಲೆ ಕೂತು ಪಾಠವನ್ನು ಹೇಳುತ್ತಿರಲು- 'ಇಲ್ಲಿ ಪಾಠವನ್ನು ಹೇಳುವವಾದರೆ ಮೃಗಾಸನ ಕೊಡುತ್ತೇನೆ,

ಅದರ ಮೇಲೆ ಕುಳಿತು ಪಾಠ ಹೇಳಿರಿ. ಅಥವಾ ತಮಗೆ ಕುರ್ಚಿಯ ಮೇಲೆ ಕುಳಿತು ಪಾಠ ಹೇಳುವ ಅಪೇಕ್ಷಾ ಇದ್ದರೆ ಹಿಂದಿನ ಪಡಸಾಲಿಯಲ್ಲಿ ಕೂತು ಪಾಠ ಹೇಳಿರಿ' ಅಂತ ವಿಜ್ಞಾಪನಾ ಮಾಡಿಕೊಂಡಿದ್ದೇನೆ, ಹೊರ್ತು ಸರ್ವಥಾ ಪಾಠ ಹೇಳಕೂಡದಾಗಿ ಹೇಳಲಿಲ್ಲ" ಅಂತ ತಿಳಿಸಿದನು. "ಏನ್ರೀ ನೀವು ಸಾಲಿ ಅಯ್ಯಾರೇ?! (School Master) ಕೃಷ್ಣಾಜಿನ ಮೇಲೆ ಕೂತುಕೊಂಡು ಶುದ್ಧ ಸಂಪ್ರದಾಯಕ್ಕನುಸರಿಸಿ ಪಾಠ ಹೇಳುವುದು ಬಿಟ್ಟು ಕಂಡ ಕಂಡಂತೆ ಪಾಠ ಹೇಳುತ್ತೀರಲ್ಲ! ನೀವು ಮಾಡಿದ ತಪ್ಪನ್ನು ಮುಚ್ಚಿ ಅದರ ಮೇಲೆ ಸುಳ್ಳು ಅಪವಾದ ಮಾಡುತ್ತಿರಾ? ಯಾವಾಗಲೂ ನಿಮ್ಮ ಸ್ವಭಾವವು ಕಲಹೋದ್ದಿಷ್ಟವಾಗಿಯೇ ಇರುತ್ತದೆ. ಸರಿಯಾಗಿ ಕೂತು ಪಾಠ ಹೇಳಿರಿ" ಅಂತ ಪಾಂಡುರಂಗಿ ಜಯಾಚಾರ್ಯರಿಗೆ ತಿಳಿಹೇಳಿದರು. 'ಇದೇನಾಶ್ಚರ್ಯ! ಈ ಸ್ಥಳದಲ್ಲಿ ಸ್ವಾಮಿಗಳವರ ಸ್ವಭಾವವೇ ಬದಲಾಗಿರುವದು!! ಉಪಾಯವಿಲ್ಲ!! ಅಂತ ಖಿನ್ನರಾಗಿ ಅತ್ತಕಡೆ ಹೋದರು. ಇದರಿಂದ ಅವರಿಗೆ ಒಂದು ರೀತಿ ಅಪಮಾನ ಅಂತ ಅನಿಸಿ ಆಕ್ರೋಶ ಉಂಟಾಗಿ ಆಚಾರ್ಯರಿಗೆ ತೊಂದರೆ ಆಗುವಂತೆ ಮಾಡಬೇಕೆಂದೆಣಿಸಿದಾಗ್ಯೂ, ಸುಸೂತ್ರ ಸ್ವಾಮಿಗಳವರಿಂದ ಶ್ರೀ ರಾಮಚಂದ್ರ ದೇವರ ಪೂಜಾ ತೀರ್ಥ ವಿನಿಯೋಗವಾಗಿ ಪ್ರಥಮ ಪಂಕ್ತಿ ಬ್ರಾಹ್ಮಣರ ಭೋಜನ ನೆರವೇರಿತು. ಇನ್ನು ಎರಡನೇ ಪಂಕ್ತಿ ಭೋಜನ ಆಗತಕ್ಕದ್ದಿತ್ತು. ಅದರಲ್ಲಿ ಈ ಚರಿತ್ರನಾಯಕರೂ ಹಾಗೂ ಇವರ ಶಿಷ್ಯರೂ ಮತ್ತು ಇನ್ನಿತರ ಇಷ್ಟ ಮಿತ್ರರು, ಸುಮಾರು ಇನ್ನೂರು ಜನರಿದ್ದರು. ಅಷ್ಟರಲ್ಲಿ ತಮ್ಮ ಮಠೀಯ ಅಡಿಗೆಯವರನ್ನು ಪ್ರಚೋದನಗೊಳಿಸಿ ಮೈಲಗಿಯಿಂದ ಆ ಅಡಿಗೆಯಲ್ಲವನ್ನು ಮುಟ್ಟಿ, ಶೂದ್ರರಿಗೆ ಹಾಕುವದಾಗಿ ಕಳಿಸಿದರು. ಈ ರೀತಿ ಮಾಡಲು ಬಂದ ಅಡಿಗೆಯವರನ್ನು ಇವರು ತಡೆದರು. 'ಈಗಲೇ ಮುಸುರೆ ತೊಳೆದು ಶೂದ್ರರಿಗೆ ಹಾಕುವುದಾಗಿ ನಮ್ಮ ದಿವಾನರ ಅಪ್ಪಣೆಯಾಗಿದೆ' ಅಂತ ಅನ್ನುತ್ತ ಉನ್ಮತ್ತತನದಿಂದ ಅಡಿಗೆ ಸಮೀಪ ಹೋದರು. ಆಗ ಆಚಾರ್ಯರು 'ಈಗ ನಾವುಗಳು ಇನ್ನೂರು ಜನಗಳಿದ್ದೇವೆ. ನಮ್ಮ ಭೋಜನ ಹಾಗೂ ಮೂರನೇ ಪಂಕ್ತಿ ಭೋಜನ ಆದಮೇಲೆ ಉಳಿದ ಪದಾರ್ಥವನ್ನು ನೀವು ಯಾರಿಗಾದರೂ ಹಾಕಿರಿ, ಮುಸರೆಯೂ ತೊಳಿಸಿಕೊಳ್ಳಿರಿ' ಅಂತ ಹೇಳಿದರೂ ಕೇಳದೆ ಮುಂದೆ ಬರುತ್ತಿರಲು ಒಳ್ಳೇ ಮಾತಿನಿಂದ ಹಿಂಜರಿಯ ಹೋದರೆ ಸರಿ, ಇಲ್ಲವಾದರೆ ಅನಾಹುತವಾದೀತೆಂದು, ಕೋಪದಿಂದ ಇವರ (ಈ ಮುತ್ತಿಗಿ ಆಚಾರ್ಯರ) ಶಿಷ್ಯರಲ್ಲೊಬ್ಬನಾದ ಕಾಗಲಕರ ರಾಘವೇಂದ್ರರಾಯನು ಅಂದನು. ಇದನ್ನು ನೋಡುತ್ತಿದ್ದ ದಿವಾನರ ಅಣ್ಣನಾದ 'ಪಾಂಡುರಂಗಿ ಭೀಮಾಚಾರ್ಯನು' ಬಂದು 'ನಮ್ಮ ಮಠದ ಶೂದ್ರರು ಎಷ್ಟೊತ್ತು ಉಪವಾಸವಿರಬೇಕು? ಅವರು ನಮ್ಮಂತೆ (ಬ್ರಾಹ್ಮಣರಂತೆ) ಹಸಿದಿರಲಾರರು. ಈಗ ಈ ಅಡಿಗೆಯನ್ನು ಅವರಿಗೆ ಹಾಕುವದಾಗಿ ನಾವೇ ಅಪ್ಪಣೆ ಮಾಡಿದ್ದೇವೆ, ಅದರಂತೆ ಹಾಕುವರು ಎಂದು' ನುಡಿದರು.

'ಮಠ ಅಂದರೆ ಅಧರ್ಮ, ಅನ್ಯಾಯ, ಅನೀತಿಯ ತೌರುಮನೆಯೇ? ಈ ರೀತಿ ಅಧರ್ಮದ ನಡತೆಯು ಮಠಕ್ಕೆ ಶೋಭಿಸದು, ಇದರಿಂದ ಮಠಕ್ಕೆ ದೊಡ್ಡ ಕಲಂಕವೇ ಸರಿ.

ಈ ರೀತಿ ಅನ್ಯಾಯಗಳು ನಡೆಯಲೋಸುಗ ನಿಮ್ಮಂತಹ ಮಹಾ ಪ್ರಭೃತಿಗಳೇ ಕಾರಣ. ಆದರಿಂದಲೇ 'ಮಠ ಅಂದರೆ ಮಹಾ ಠಕ್ಕರ ಕೂಟ'ವೆಂಬುದು ಲೋಕದಲ್ಲಿ ಭಾವನಾ ಉಂಟಾಗಿದೆ' ಅಂತ ಇನ್ನೊಬ್ಬ ಶಿಷ್ಯ ನುಡಿದನು. ಇದರಿಂದ ಭೀಮಾಚಾರ್ಯರಿಗೆ ಮತ್ತಷ್ಟು ಸಿಟ್ಟುಬಂದು "ನಮ್ಮಂತಹವರಿಂದಲೇ ಮಠ ನಡೆಯುವದು. ನಾವುಗಳಿಲ್ಲದಿದ್ದರೆ ಮಠ ನಡೆಯಲಾರದು. ನಾವು ಮಾಡುವ ಕೃತ್ಯಗಳಿಗೆ ಸ್ವಾಮಿಗಳು ಸಮ್ಮತಿಸಲೇಬೇಕು. ಇಲ್ಲವಾದರೆ ಸ್ವಾಮಿಗಳೊಬ್ಬರೆ ಏನು ಮಾಡುವರು, ಸ್ನಾನ ಸಹ ಕಾಣಲಿಕ್ಕಿಲ್ಲ" ಅಂತ ಚೀರಿಕೊಂಡರು. ಈ ರಭಸದ ಸಂವಾದವು ಶ್ರೀ ಶ್ರೀಗಳವರ ಕಿವಿಯಲ್ಲಿ ಬಿದ್ದು, ಅವರಾಗಿಯೇ ಇತ್ತ ನೋಡಲಿಕ್ಕೆ ಬಂದರು. ಈ ಭೀಮಾಚಾರ್ಯನನ್ನು ಹಾಗೂ ಅಡಿಗೆಯವರನ್ನು ನೋಡಿ 'ಏನಿದು ಗಲಾಟೆ' ಅಂತ ಕೇಳಿದರು. ನಡೆದ ಯಥಾರ್ಥ ವಿಷಯವನ್ನು ಸ್ವಾಮಿಗಳಲ್ಲಿ ತಿಳಿಸಲು 'ಹುಚ್ಚು ಮುಂಡೆ ಗಂಡ್ರಾ, ನೀವು ಮಾಡುವ ಅನ್ಯಾಯ ಕೃತ್ಯಕ್ಕೆ ನಮ್ಮ ಸಮ್ಮತಿ ಇರುವದೋ? ಬ್ರಾಹ್ಮಣ ಭೋಜನಾತ್ಪೂರ್ವದಲ್ಲಿ ಶೂದ್ರರಿಗೆ ಅನ್ನ ಹಾಕುವುದಾಗಿ ನಾವು ಹೇಳುವೆವೋ? ನಿಮ್ಮಿಂದಲೇ ಮಠ ನಡೆಯುವುದೋ? ನಿಮ್ಮಂತಹರ ಹರಟೆಯಿಂದಲೇ ಮಠದವರೆಲ್ಲರು ಉನ್ಮತ್ತರು, ದುಷ್ಟರು ಅಂತ ಪ್ರಖ್ಯಾತಿ ಹೊಂದಿದೆ. ಯೋಗ್ಯ ರೀತಿಯಿಂದ ಇರುವದಾದರೆ ಮಠದಲ್ಲಿ ಇರ್ರಿ, ಇಲ್ಲವಾದರೆ ನೀವು ನಿಮ್ಮ ಅಣ್ಣತಮ್ಮಂದಿರು ಎಲ್ಲರೂ ಮಠಬಿಟ್ಟು ಹೊರಟುಹೋಗಿರಿ. 'ಮೂರ್ಖರೇ' ಈಗಿಂದೀಗಲೇ ಹೊರಟುಹೋಗಿರಿ' ಅಂತ ಸ್ವಾಮಿಗಳವರು ಝುಬರಿಸಿದರು. ಆ ಪಾಂಡುರಂಗಿ ಭೀಮಾಚಾರ್ಯರು ಸಣ್ಣ ಮುಖಮಾಡಿಕೊಂಡು ಅಡಿಗೆಯವರ ಸಮೇತ ಹೊರಗೆ ಹೊರಟುಹೋದರು. ಆ ದಿನ ದಿವಾನರಾದ ಪಾಂಡುರಂಗಿ ಜಯಾಚಾರ್ಯರಿಗೆ ವಿಷಾದ ಸಂತಾಪವಾಗಿ 'ಈವರೆಗೂ ನಮ್ಮ ಮಾತನ್ನೇ ನಡೆಸುತ್ತಿದ್ದ ಸ್ವಾಮಿಗಳವರು ಇವತ್ತು ಯಾತಕ್ಕೆ ನಮ್ಮ ಮಾತನ್ನು ಧಿಕ್ಕರಿಸುತ್ತಿರುವರೋ ಆಶ್ಚರ್ಯವಾಗಿದೆ. ಇದೇನೋ ಈ ಮುತ್ತಿಗಿ ಆಚಾರ್ಯರ ತಪಸ್ಸಿನ ಫಲವೋ, ಸ್ಥಲ ಮಹಾತ್ಮೆಯೋ, ತಿಳಿಯದಾಗಿದೆ' ಅಂತ ತಮ್ಮ ಅನುಯಾಯಿಗಳಲ್ಲಿ ಉದ್ಗಾರ ತೆಗೆದು 'ಮುಂದೆ ನೋಡುವ!' ಅಂತ ಈರ್ಷೆಯನ್ನು ತೊಟ್ಟರು. ಮರುದಿನವೇ ತಿರುಪತಿಗೆ ಧಾವಿಸಿಕೊಂಡು ಪ್ರಯಾಣ ಮಾಡಬೇಕಾಗಿದ್ದರೂ, ಆ ದಿನ ರಾತ್ರಿ ಈ ಮುತ್ತಿಗಿ ಆಚಾರ್ಯರನ್ನು ಶ್ರೀಗಳವರು ಕರೆದು "ಈ ಸ್ಥಳದಲ್ಲಿರುವ ತುಲಸಿ ಪುಷ್ಪಗಳ ರಮಣೀಯತೆ ನಮ್ಮ ಮನಸ್ಸನ್ನು ಪ್ರಸನ್ನವಾಗಿರಿಸಿದೆ. ಪ್ರಯುಕ್ತ ಈ ಸ್ಥಳವನ್ನು ಬಿಟ್ಟುಹೋಗುವ ಮನಸ್ಸೆ ಬಾರದಾಗಿದೆ. ಆಚಾರ್ಯರೆ, ನೀವು ಎಲ್ಲಾ ವಿಧವಾದ ಫಲ ವೃಕ್ಷಗಳನ್ನು ಹಾಕಿದಂತಿದೆಯಲ್ಲ! ಆದರೆ ಅನಿವಾರ್ಯದಿಂದ ಮುಂದೆ ಮಾಡಬೇಕಾಗಿರುವ ಮಹಾತ್ಕಾರ್ಯವಾದ ವಾದಿ ನಿಗ್ರಹಾರ್ಥ ಪದ್ಮಸರೋವಕ್ಕೆ (ತಿರುಪತಿಗೆ) ಹೋಗಬೇಕಾಗಿದೆ. ನಾಳೆ ಪ್ರಾತಃಕಾಲ ಹೊರಡುವದರ ಬದಲು ಭೋಜನೋತ್ತರ ಹೊರಡುವದೆಂದು ಅಂದುಕೊಂಡಿದ್ದೇವೆ. ಈ ದಿನವೇ ನಿಮಗೆ ವಿಶೇಷ ಖರ್ಚಾಗಿದೆ. ಪ್ರಯುಕ್ತ ನಾಳಿನ ಖರ್ಚು ಮಠದಿಂದ ಆಗುತ್ತೆ" ಅಂತ ಅಂದರು. "ಸ್ವಾಮಿ! ತಾವು ಎಷ್ಟು ದಿವಸಬೇಕಾದರೂ ಇರಬಹುದು, ತಾವು ಇರುವವರೆಗೂ ಯಾವತ್ತು ಖರ್ಚು ಇಂದಿನಂತೆ ನನ್ನಿಂದ ಮಾಡಲ್ಪಡುವದನ್ನು

ಸ್ವೀಕರಿಸಬಹುದೆಂದು ಭಾವಿಸುತ್ತೇನೆ" ಅಂತ ವಿಜ್ಞಾಪನೆ ಮಾಡಿಕೊಂಡರು. "ನೀವು ಏಕೆ ಹಿಂಜರಿಯುವವರಲ್ಲವೆಂಬುದು ಮನಗಂಡಿದ್ದೇವೆ. ಆದರೆ ನಾವೇ ಈ ಮಾತು ಹೇಳಿದೆವು" ಎಂದು ಹೇಳಿ ಅಷ್ಟಕ್ಕೆ ಸುಮ್ಮನಾದರು. ಮರುದಿವಸ ಪ್ರಾತಃಕಾಲ ಪಾದಪೂಜಾಕ್ಕೆ ಊರೊಳಗೆ ಹೋಗುವಾಗ ಶ್ರೀ ರಾಮದೇವರ ಗುಡಿಯಲ್ಲಿ ಬಂದು, ಹೋಮ ಮಾಡುತ್ತಿರುವ ಗುರುರಾಜಾಚಾರ್ಯರನ್ನು ನೋಡಿ, "ನೀವೇನೂ ದೊಡ್ಡ ಗುರುರಾಜಾಚಾರ್ಯರು! ದೀಕ್ಷಿತ!" ಅಂತ ಕೇಳಿದರು. "ಹೌದು ಸ್ವಾಮಿ!" ಅಂತ ನಮಸ್ಕಾರ ಮಾಡಿದನು. "ಸರಿ-ದೇವರಿಗೆ ಮಂಗಳಾರ್ತಿ ಮಾಡು" ಅಂತ ಹೇಳಿದರು. ಅಷ್ಟರಲ್ಲಿ ಮುತ್ತಿಗಿ ಆಚಾರ್ಯರು ಅಲ್ಲಿಗೆ ಬಂದರು. ಮಂಗಳಾರ್ತಿ ಮಾಡಿದಮೇಲೆ "ಇದಕ್ಕೆ ಶಿಲಾಮಂಟಪ ಯಾಕೆ ಮಾಡಿಲ್ಲ?" ಅಂತ ಕೇಳಿದರು. ಸ್ವಾಮಿ! ನಾನು "ನಿಮ್ಮಿಂದ" ಅಂತ ಉತ್ತರವನ್ನು ಕೊಡಲು "ಈ ಔಪಚಾರಿಕ ಮಾತುಗಳು ಹೇಳಬೇಡಿರಿ? ನಿಮ್ಮ ಸಾಮರ್ಥ್ಯವನ್ನು ನಾವು ಬಲ್ಲೆವು. ಯಾಕೆ ಮನಸ್ಸು ಬಂದಿಲ್ಲವೋ!! ಮನಸ್ಸು ಬಂದರೆ ತಡವಾಗಲಾರದು" ಅಂತ ಸ್ವಾಮಿಗಳು ನುಡಿದರು. "ಸ್ವಾಮಿ! ಈ ಸೇವಾ ನನ್ನಿಂದ ತೆಗೆದುಕೊಳ್ಳಬೇಕೆಂದು ಶ್ರೀ ಹರಿವಾಯುಗಳ ಚಿತ್ತಕ್ಕೆ ಬಂದರೆ ಆಗಲಿ, ಆದರೆ ಇದು ನನ್ನಿಂದ ತೆಗೆದುಕೊಳ್ಳುವರೋ ಅಥವಾ ನಮ್ಮ ಚಿರಂಜೀವಿಯಿಂದ ತೆಗೆದುಕೊಳ್ಳುವರೋ!" ಅಂತ ಮುತ್ತಿಗಿ ಆಚಾರ್ಯರೆಂದರು. "ನಿಮ್ಮ ಪ್ರತಿಯೊಂದು ಮಾತಿನಲ್ಲಿಯೂ ಶ್ರೀ ಹರಿವಾಯುಗಳ ಸಂಕಲ್ಪವೆಂದೇ ಉದ್ಗಾರ ಬರುತ್ತಿರುತ್ತದೆ. ಇದೇ ಅಕರ್ತೃತ್ವಾನುಸಂಧಾನ ಲಕ್ಷಣ. ಇದು ಸಾಮಾನ್ಯವಾಗಿ ಬರುವುದಿಲ್ಲ. ನಿಮಗೆ ಸಹಜವಾಗಿ ಬರುತ್ತದೆ. ಇದರಿಂದಲೇ ನಿಮಗೆ ಶ್ರೀ ಹರಿವಾಯುಗಳ ಸಂಕಲ್ಪ ತಿಳಿಯುವದೆಂತಲೂ, ಅದನ್ನು ತಿಳಿದೇ ನೀವು ಕಾರ್ಯದಲ್ಲಿ ಪ್ರಸಕ್ತರಾಗುವಿರೆಂತಲೂ, ಆದ್ದರಿಂದ ನಿಮ್ಮ ಕಾರ್ಯ ಜಯಪ್ರದವಾಗುವದೆಂತಲೂ ತೋರುತ್ತದೆ" ಅಂತ ವರ್ಣನೆ ಮಾಡಿದರು. ಅತ್ತ ಸ್ವಾಮಿಗಳವರು ಪಾದಪೂಜಾರ್ಥ ಊರೊಳಗೆ ಹೋದಮೇಲೆ ಈ ದಿನವಾದರು ತಂಟೆ ತೆಗೆಯಬೇಕೆಂದು ಎಣಿಸಿ ಶ್ರೀ ರಾಮದೇವರ ಗುಡಿಯ ಆವರಣದ (Compound) ಹೊರಗೆ ಅಡಿಗೆಯನ್ನು ಮಾಡಿಸಿ, ಹಾಕುವ ಪದಾರ್ಥ (ಅಕ್ಕಿ ಬೇಳೆ ಮೊದಲಾದ) ವನ್ನು ಪರಭಾರೆ ಸಾಗಿಸಲು (ಫರಾರಿ ಮಾಡಲು) ಅನುಕೂಲವಾಗುವ ಹೊಂಚು ಹಾಕಿ, ಹೊರಗೆ ಸುಮಾರು ೨೦ ಒಲೆಗಳನ್ನು (ಮೂರು ಕಲ್ಲುಗಳ ಒಲೆ) ಹೂಡಿದರು. ಆಗ ಮಠೀಯ ಉಗ್ರಾಣಿಕನು ಬಂದು "ಈ ದಿನ ಹೊರಗೆ ಅಡಿಗೆ ಮಾಡುವುದಾಗಿ ದಿವಾನರ ಅಪ್ಪಣೆಯಾಗಿದೆ ನೀವು ಇಲ್ಲಿಯೇ ನಾವು ಕೇಳಿದಷ್ಟು ಪದಾರ್ಥವನ್ನು ಒದಗಿಸಿದರೆ ಅಡಿಗೆ ಮಾಡಿಸುತ್ತೇನೆ" ಅಂತ ತಿಳಿಸಿದನು. "ನಿನ್ನೆ ಮಾಡಿದ ಸ್ಥಳದಲ್ಲಿ ಒಳಗೆ ಅಡಿಗೆ ಮಾಡುವುದಲ್ಲ; ಹೊರಗೆ ಯಾತಕ್ಕೆ?" ಅಂತ ಕೇಳಿದರು. "ಅದೆಲ್ಲ ನಮಗೆ ಗೊತ್ತಿಲ್ಲ-ನಮ್ಮ ದಿವಾನರು ಎಲ್ಲಿ ಮಾಡಲು ಅಪ್ಪಣೆ ಮಾಡುವರೋ, ಅಲ್ಲಿ ಮಾಡಿಸತಕ್ಕವನು. ಅವರ ಅಧೀನದವನೇ ಹೊರತು ನಿಮ್ಮ ಅಧೀನನಲ್ಲ" ಅಂತ ಅಂದನು. "ಯದ್ಯಪಿ ನೀನು ನಮ್ಮ ಅಧೀನನಲ್ಲದಿದ್ದರೂ, ಪದಾರ್ಥ ನಮ್ಮ ಅಧೀನವಾದ್ದರಿಂದ ನಾವು ಹೇಳಿದ ಕಡೆ ಮಾಡುವದಾದರೆ ಪದಾರ್ಥ ಹಾಕಿಸುತ್ತೇವೆ, ಇಲ್ಲವಾದರೆ ಇಲ್ಲ?"

ಅಂತ ಹೇಳಿದರು. ಹಾಗಾದರೆ ಅಡಿಗೆಯೇ ಮಾಡುವದಿಲ್ಲವೆಂದು ಅಡಿಗೆಯವರು ಹೊರಗೆ ಕುಳಿತುಕೊಂಡರು. ಈ ಮಠದವರ ಚೇಷ್ಟೆಯನ್ನು ಬಲ್ಲ ಇವರು (ಈ ಮುತ್ತಿಗಿ ಆಚಾರ್ಯರು) ತಮ್ಮ ಶಿಷ್ಯರಲ್ಲೊಬ್ಬನನ್ನು (ಅಡಿಗೆ ಮಾಡಬಲ್ಲವನನ್ನು) ಕರೆದು, ಸ್ನಾನಮಾಡಿ ಅಡಿಗೆ ಆರಂಭ ಮಾಡುವುದಾಗಿ ಹೇಳಿ ತಮ್ಮ ಉಗ್ರಾಣಿಕನನ್ನು ಕರೆದು "ನಿನ್ನೆಯಂತೆ ಯಾವತ್ಪದಾರ್ಥಗಳನ್ನು ಹಾಕಿ ಅಡಿಗೆ ಮಾಡಿಸು" ಅಂತ ಆಜ್ಞಾ ಮಾಡಿದರು. ಆಜ್ಞಾದಂತೆ ಗುಡಿಯ ಆವರಣದೊಳಗೆ ಅಡಿಗಿ ಆರಂಭವಾಯಿತು. ಹತ್ತು ಗಂಟೆಯ ಸುಮಾರದಲ್ಲಿ ಸ್ವಾಮಿಗಳವರು ಬರುತ್ತಿರಲು ಅವರಿಗೆ ಸಿಟ್ಟು ಬರುವಂತೆ ಪ್ರಥಮದಲ್ಲಿಯೇ ಏನಾದರೂ ದೂರು ಹೇಳಬೇಕೆಂದು ಉದ್ದೇಶಪಟ್ಟು ಅವರ ಸಮೀಪಕ್ಕೆ ಹೋದರು. "ಏನ್ರೋ! ಇನ್ನು ಯಾಕೆ ಅಡ್ಡಾಡುತ್ತಿದ್ದೀರಿ, ಇನ್ನು ಅಡಿಗೆ ಯಾತಕ್ಕೆ ಪ್ರಾರಂಭ ಮಾಡಿಲ್ಲ? ಅಡಿಗೆಗೆ ಅವರಲ್ಲಿ ಪದಾರ್ಥ ಕಡಿಮೆಯೇ? ಬಜಾರದಿಂದ ತರುವವರೆಗೂ ಯಾಕೆ ನಿರೀಕ್ಷಿಸಿಗೊಂಡು ಕೂತಿದ್ದೀರಿ? ಮಠದ ಉಗ್ರಾಣದಿಂದಾದರೂ ಪದಾರ್ಥ ಹಾಕಿ ಅಡಿಗೆ ಮಾಡಿಸಲಿಲ್ಲವೆ?" ಅಂತ ಸ್ವಾಮಿಗಳವರು ಕೇಳಿದರು. "ಸ್ವಾಮಿ! ನಮ್ಮನ್ನು ಅಡಿಗೆ ಮಾಡಕೂಡದಾಗಿ ಹೇಳಿ, ಅವರ ತಮ್ಮ ಅಡಿಗೆಯವನಿಂದ ಮಾಡಿಸುತ್ತಿದ್ದಾರೆ. ಇಷ್ಟೇ ಅಲ್ಲ, ನಮ್ಮನ್ನು ಒಳಗೆ ಸಹ ಕಾಲು ಇಡಕೂಡದಾಗಿ ಅಂದಿದ್ದಾರೆ" ಅಂತ ಅಪವಾದ ಹೊರಿಸಿದರು. "ಈ ಮಾತು ಅವರು ಸುಮ್ಮ-ಸುಮ್ಮನೆ ಯಾತಕ್ಕೆ ಅನ್ನುತ್ತಾರೆ? ನೀವೇನಾದರು ತಂಟೆ ಮಾಡಿರುತ್ತೀರಿ, ಅಂತ ಅನ್ನುತ್ತಾ ಗುಡಿಯೊಳಗೆ ಬಂದು ಅಡಿಗೆಯಾಗುತ್ತಿರುವದನ್ನು ನೋಡಿ ಸಂತೋಷಪಟ್ಟು "ಏನೇನು ಅಡಿಗೆ ಮಾಡುತ್ತೀರಿ?" ಅಂತ ಪ್ರಶ್ನೆ ಮಾಡಿದರು. "ಸ್ವಾಮಿ! ಅನ್ನ, ಸಾರು, ಹುಳಿ, ಪರಮಾನ್ನ, ಹಯಗ್ರೀವ, ಅವಕಾಶವಿದ್ದರೆ ಚಿತ್ರಾನ್ನ ಮಾಡುತ್ತೇನೆ" ಎಂದು ಅಡಿಗೆಯವನು ಹೇಳಿದನು. ಇಷ್ಟು ಅಡಿಗೆ ನೀನೊಬ್ಬನೆ ಇನ್ನು ಒಂದು ಘಂಟೆಯಲ್ಲಿ ನೈವೇದ್ಯಕ್ಕೆ ಒದಗಿಸುವೆಯಾ?" ಅಂತ ಕೇಳಿದರು. "ಹೋ! ಶ್ರೀ ಹರಿವಾಯು ಗುರುಗಳ ಅನುಗ್ರಹ ಬಲದಿಂದ ಮಾಡುವೆನು" ಅಂತ ಉತ್ತರ ಕೊಟ್ಟನು. "ಶಬಾಶ್" ನಿನ್ನಲ್ಲಿಯೂ ಶ್ರೀಶಕರ್ತೃತ್ವಾನುಸಂಧಾನ ಸಹಜವಾಗಿಯೇ ಇದೆಯಲ್ಲ! ನಿಮ್ಮ ಗುರೂಪದೇಶವೇ ಇಂತಹದೆಂದು ತೋರುತ್ತದೆ." ಅಂತ ಅನ್ನುತ್ತಿರುವಷ್ಟರಲ್ಲಿ ಈ ಮುತ್ತಿಗಿ ಆಚಾರ್ಯರು ಅಲ್ಲಿಗೆ ಬಂದರು. "ಏನು ನಮ್ಮ ಮಠೀಯ ಅಡಿಗೆಯವರನ್ನು ಅಡಿಗೆ ಮಾಡಕೂಡದಾಗಿಯೂ, ಕಿಂಬಹುನಾ ಆವರಣದಲ್ಲಿ ಸಹ ಕಾಲು ಹಾಕಬಾರದಾಗಿ ಅಪ್ಪಣೆ ಮಾಡಿದ್ದೀರಂತೆ, ಕಾರಣವೇನು? ಅಂತ ಪ್ರಶ್ನೆ ಮಾಡಿದರು. "ಹೌದು ಸ್ವಾಮಿ! ಅವರು ಮಾಡಿದ ಕುಚೇಷ್ಟೆಗೆ ಆ ರೀತಿ ಹೇಳಿದೆ" ಅಂತ ಹೇಳಿದರು. ಅದೇನು ಕುಚೇಷ್ಟೆ ಅಂತ ಕೇಳಿದರು "ನಿನ್ನಿನಂತೆ ಇಲ್ಲಿ ಅಡಿಗೆ ಮಾಡಿರಿ, ಯಾವತ್ಪದಾರ್ಥ ಹಾಕುತ್ತೇವೆ" ಅಂತ ಹೇಳಿದೆ. ಅವಕ್ಕೆ ಮಠದ ಉಗ್ರಾಣಿಕನು ನಿರಾಕರಿಸಿ, ಪದಾರ್ಥಗಳು ಹೊರಗೆ ತಂದುಕೊಡುವದಾದರೆ ಅಡಿಗೆ ಮಾಡಿಸುತ್ತೇವೆ. ಇಲ್ಲವಾದರೆ-ಇಲ್ಲವೆಂದು ಹೇಳಿ ಹೊರಗೆ ಕೂತುಗೊಂಡಿದ್ದಾರೆ. ನೈವೇದ್ಯಕ್ಕೆ ಅನಾನುಕೂಲವಾಗಬಾರದೆಂದು ನಮ್ಮ 'ಅಡಿಗೆಯವನ ಸಂಗಡ ಪ್ರಾರಂಭ ಮಾಡಿಸಿದ್ದೇನೆ' ಅಂತ ಸಮಾಧಾನ ಹೇಳಿದರು "ಯಾಕರೋ!

ನೀವು ತಂಟೆಮಾಡಿ ಅವರ ಮೇಲೆ ಅಪವಾದ ಹೇಳುತ್ತೀರಾ?" ಅಂತ ಗದರಿಸಿದರು. "ಸ್ವಾಮಿ! ಇಲ್ಲಿ ನಿನ್ನೆ ಅಡಿಗೆ ಮಾಡಿರೋಣದರಿಂದ ಸ್ಥಳ ಶುದ್ಧಿ ಸರಿಯಾಗಿ ಆಗಿರುವದಿಲ್ಲವೆಂದು, ದಿವಾನರು ಹೊರಗೆ ಮಾಡಿರಿ ಎಂದು ಅಪ್ಪಣೆ ಮಾಡಿದ್ದಾರೆ. ಅವರ ಅಪ್ಪಣೆಯ ಮೇರೆಗೆ ನಾವು ಒಳಗೆ ಮಾಡುವುದಿಲ್ಲವೆಂದು ಹೇಳಿದ್ದು ನಿಜ" ಅಂತ ಅಡಿಗೆಯವರುತ್ತರ ಕೊಟ್ಟರು. ಸ್ವಾಮಿ! ಯದ್ಯಪಿ ನಿನ್ನೆ ಇಲ್ಲಿ ಅಡಿಗೆ ಮಾಡಲಾಗಿದ್ದರೂ, ನಾನೇ ಸ್ಥಲ ಶುದ್ಧಿ ಮಾಡಿಸಿ ಮನಃ ಪ್ರಶಸ್ತವಾದ ಮೇಲೆಯೇ ಇಲ್ಲಿ ಅಡಿಗಿಗೆ ಆರಂಭ ಮಾಡಿಸಿದ್ದೇನೆ. ಹೊರಗೆ ತಿರುಗಾಡುತ್ತಿರುವ ಸ್ಥಲದಲ್ಲಿ ಅಡಿಗೆ ಮಾಡುತ್ತೇನೆ ಅಂತ ಅಂದದ್ದಕ್ಕೆ ಇದರಲ್ಲಿ ಏನೋ ಕುಟಿಲವಿರಬಹುದೆಂದು, ಮಾಡುವದಾದರೆ ಇಲ್ಲಿ (ಒಳಗೆ) ಮಾಡಿರಿ ಇಲ್ಲವಾದರೆ ಬಿಡಿರಿ ಅಂತ ಹೇಳಿದ್ದು ನಿಜ" ಅಂತ ಉತ್ತರಿಸಿದರು. "ಇದರಲ್ಲಿ ಆ ಹುಚ್ಚುಮುಂಡೇಗಂಡ್ರು ದಿವಾನರು, ಆಕ್ರೋಶದಿಂದ ಈ ರೀತಿ ನಿಮಗೆ ಹೇಳಿ, (ಕುಟಿಲತನದಿಂದ) ಹಾಕಿದ ಪದಾರ್ಥವೆಲ್ಲವನ್ನು ಹಾಳುಮಾಡಿ ಪ್ರಸ್ತ ಆಭಾಸವಾಗಲು ಅನುಕೂಲವಾಗುವದೆಂಬ ಹೊಂಚಿಕೆಯಿಂದ ಆ ರೀತಿ ನಿಮಗೆ ಅಪ್ಪಣೆ ಮಾಡಿದಂತೆ ತೋರುತ್ತದೆ. ನೀವು ನಮ್ಮ ಮಠದ ಸೇವಕರೋ? ಆ ದಿವಾನನ ಸೇವಕರೋ? ನಿಮಗೆ ಪಗಾರ (ಸಂಬಳ) ಮಠದಿಂದಾ ಸಿಗುವದೋ ಅಥವಾ ದಿವಾನನು ತನ್ನ ಮನೆಯಿಂದ ಕೊಡುವನೋ? ನಿಮ್ಮ ನಿಮ್ಮ ಕರ್ತವ್ಯ ಕರ್ಮಗಳನ್ನು ನೀವು ಮಾಡಬೇಕೋ, ಇಲ್ಲವೋ? ಇಷ್ಟು ಹೊತ್ತು ವ್ಯರ್ಥ ಕೂತದ್ದಕ್ಕಾಗಿ ಪ್ರತಿಯೊಬ್ಬರಿಗೆ ಐದು ರೂಪಾಯಿಗಳ ದಂಡ ಮಾಡಿದ್ದೇವೆ. ಇದನ್ನು ಈಗಿಂದೀಗಲೇ ಕೊಟ್ಟು ಸ್ನಾನ ಮಾಡಿಬಂದು ನೈವೇದ್ಯಕ್ಕೆ ಒದಗಿಸಿದರೆ ಸರಿ; ಇಲ್ಲವಾದರೆ ಈಗಿಂದೀಗಲೇ ನೀವೆಲ್ಲರೂ ಮಠ ಬಿಟ್ಟು ಹೊರಗೆ ಹೋಗಿರಿ" ಅಂತ ಕೋಪಗೊಂಡರು. ಆಗ ಅಡಿಗೆಯವರು ಗಾಬರಿಯಾಗಿ, ಉಗ್ರಾಣಿಕನು ಸಹ ದಿವಾನ ಪಾಂಡುರಂಗಿ ಜಯಾಚಾರ್ಯರಲ್ಲಿ ಹೋಗಿ, ಇಲ್ಲಿ ನಡೆದ ವಿಷಯವನ್ನು ತಿಳಿಸಲು, "ಇದೇನಾಶ್ಚರ್ಯ! ಈಗಿರುವವರು ಶ್ರೀ ಶ್ರೀ ಸತ್ಯಧ್ಯಾನತೀರ್ಥರೋ ಅಥವಾ ಮತ್ತೊಬ್ಬರಾಗಿರುವರೋ! ತಿಳಿಯದಾಗಿದೆ" ಅಂತ ಗೊಣಗುಟ್ಟುತ್ತ ಪ್ರತಿಯೊಬ್ಬರ ಕೈಯಲ್ಲಿ ಐದು ರೂಪಾಯಿಗಳಂತೆ ಕೊಟ್ಟು, ಸ್ವಾಮಿಗಳವರ ಮುಂದಿಟ್ಟು ನಮಸ್ಕಾರ ಮಾಡಿ, ಅಡಿಗೆ ಮಾಡಹೋಗಿ. ಸ್ವಾಮಿಗಳು ಈ ಸ್ಥಳ ಬಿಡುವವರೆಗೂ ನಮ್ಮ ಆಟ ಯಾವದೂ ನಡೆಯದು, ಅಂತ ಅಂದು ಅಡಿಗೆಯವರನ್ನು ಕಳಿಸಿದರು. ಆ ದಿನವೂ ಸುಸೂತ್ರ ಪೂಜಾ, ತೀರ್ಥ, ಬ್ರಾಹ್ಮಣ ಭೋಜನ ನೆರವೇರಿತು. ಎರಡನೇ ಪಂಕ್ತಿ ಆದಕೂಡಲೇ ಈ ಮುತ್ತಿಗಿ ಆಚಾರ್ಯರನ್ನು ಕರೆದು "ಈಗ ನಿಮಗೆ ಇಲ್ಲಿ ಮಂತ್ರಾಕ್ಷತೆ ಕೊಡುವದಿಲ್ಲ. ನೀವು 'ಪದ್ಮ ಸರೋವರ'ದ 'ಚಂದ್ರಿಕಾ ಮಂಡನ' ಸಭಾಕ್ಕೆ ಬರಲೇಬೇಕು. ಅಲ್ಲಿಯೇ ನಿಮಗೆ ಫಲ ಮಂತ್ರಾಕ್ಷತಾ ಕೊಡುವೆವು" ಅಂತ ಅಂದರು. "ಮಹಾ ಸ್ವಾಮಿ! ಸಭಾಕ್ಕೆ ಬಂದು ನಾನೇನು ಮಾಡಲಿ? ನನಗೆ ಸಭಾದಲ್ಲಿ ವಾಕ್ಯಾರ್ಥ ಮಾಡುವ ಪಾಂಡಿತ್ಯವಿಲ್ಲ. ನಾನು ಸಭಾಕ್ಕೆ ಬರೋಣದರಿಂದ ಪ್ರಯೋಜನವೇನು?" ಅಂತ ಕೇಳಿದರು. "ನಿಮ್ಮಲ್ಲಿ ಸಭಾ ಪಾಂಡಿತ್ಯವಿಲ್ಲವೆಂದು, ನೀವು ಹೇಳಿಕೊಳ್ಳುವುದು ಕೇವಲ ಸ್ವಾಹಂಕಾರ ಖಂಡನವೆಂದು ತಿಳಿದಿದ್ದೇವೆ. ನಿಮ್ಮ ಜ್ಞಾನ ಎಂತಹದೆಂದು ಪೆರಿಯಕುಳಂ

ರಾಮಚಂದ್ರ ಆಚಾರ್ಯರಿಂದಲೂ ಮತ್ತು ಯಳಮೇಲಿ ವಿಠಲಾಚಾರ್ಯ ಮೊದಲಾದವರಿಂದಲೂ ಕೇಳಿದ್ದೇವೆ ಮತ್ತು ಈ ಎರಡು ದಿನಗಳು ಸರಸವಾಗಿ ಮಾತನಾಡುವದರಲ್ಲಿಯೇ ನಾವು ಕಂಡುಕೊಂಡಿದ್ದೇವೆ. ನಿಮ್ಮಲ್ಲಿ ಶ್ರೀ ಹರಿವಾಯುಗಳು ಮೂರ್ತಿಮಂತರಾಗಿ ಇದ್ದು ಕಾರ್ಯ ನಡೆಸುತ್ತಿರಲು ನಿಮಗೆ ಯಾವದು ಸಾಧ್ಯವಿಲ್ಲ! ನೀವು ಸಭಾಕ್ಕೆ ಬಂದರೆ ನಮಗೂ ಶ್ರೀ ಹರಿವಾಯು ಗುರುಗಳ ಬೆಂಬಲ ಉಂಟಾಗಿ ನಾವು ಜಯಶೀಲರಾಗುತ್ತೇವೆಂಬ ಭರವಸೆ ಇದೆ. ಪ್ರಯುಕ್ತ ತಪ್ಪದೇ ಬರಲೇಬೇಕು" ಅಂತ ಆಗ್ರಹಪೂರ್ವಕ ಹೇಳಿದರು. ಆಗ 'ಒಳ್ಳೇದು ಅವಶ್ಯ ಬರುತ್ತೇವೆ' ಅಂತ ಅಂದರು. ಆಗ ಒಂದು ಫಲವನ್ನೂ, ಮಂತ್ರಾಕ್ಷತವನ್ನೂ ಕೊಟ್ಟು ಅಲ್ಲಿಗೆ ಬರಲೋಸುಗ ಆಮಂತ್ರಣಾತ್ಮಕ ಈ ಫಲ-ಮಂತ್ರಾಕ್ಷತೆ ಅಂತ ಹೇಳಿಕೊಟ್ಟರು. ಅದನ್ನು ಸ್ವೀಕರಿಸಿ ಒಂದು ನೂರು ರೂಪಾಯಿಗಳನ್ನು ಸೇವಾತ್ವೇನ ಸ್ವಾಮಿಗಳವರಿಗೆ ಸಮರ್ಪಿಸಿದರು. "ಈ ಎರಡು ದಿನ ಮಾಡಿದ ಖರ್ಚು ಸೇವಾ ಅಲ್ಲವೇ? ಅದರ ಮೇಲೆ ಇನ್ನು ಇದೇತಕ್ಕೆ ಶ್ರಮ ತೆಗೆದುಕೊಂಡಿರಿ?" ಅಂತ ಸಮಯೋಚಿತ ಮಾತುಗಳನ್ನಾಡಿ, ಕೂಡಲೇ ಮೇನೆಯನ್ನು ತರಿಸಿ ಪ್ರಯಾಣ ಮಾಡಿದರು. ಜಾಗ್ರತೆ ಹೊರಡುವುದಾಗಿ ಪಾಂಡುರಂಗಿ ಜಯಾಚಾರ್ಯ (ದಿವಾನಗೆ) ಮತ್ತು ಯಾವತ್ತು ಸೇವಕರಿಗೆ ತಿಳಿಸಿ ತಾವು ಹೊರಟುಹೋದರು.

೬೪. 'ಚಂದ್ರಿಕಾಮಂಡನ' ಮಂಡನವಾಯಿತು.

ಪದ್ಮಸರೋವರದಲ್ಲಿ ಈ ಸಭಾ ಆರಂಭವಾಗುವ ಎರಡು ದಿನ ಮುಂಚೆಯೇ ಈ ಮುತ್ತಿಗಿ ಆಚಾರ್ಯರಿಗೆ ಸಭಾಕ್ಕೆ ಬರಲು ಶ್ರೀ ಸತ್ಯಧ್ಯಾನತೀರ್ಥರು ತಾರು ಮಾಡಿಸಿದರು. ಇವರು ಸಹ ಕುಟುಂಬ ಹಾಗೂ ಕೆಲವು ಶಿಷ್ಯರ ಸಮೇತ ಅಲ್ಲಿಗೆ (ಪದ್ಮಸರೋವರಕ್ಕೆ) ಹೋದರು. ಆದಾಗ್ಯೂ ಒಂದು ದಿನ ಆಲಸ್ಯವಾಯಿತು. "ಅಷ್ಟರಲ್ಲಿ ತಿರುಪತಿಯಲ್ಲಿಳಿದು ಕೊಂಡಿರುವರೇನೊ ನೋಡಿ ಕರೆದುಕೊಂಡು ಬರ್ರಿ" ಅಂತ ತಮ್ಮ ಮಠದ ಸೇವಕರಿಗೆ ಅಪ್ಪಣೆ ಮಾಡಿದರು. ಇವರು ಪದ್ಮಸರೋವರಕ್ಕೆ ಬರುವಷ್ಟರಲ್ಲಿ ಕೆಲವು ಮಠೀಯ ಜನರು ಕಂಡು "ಸ್ವಾಮಿ! ನಿಮ್ಮನ್ನು ಆ ಸ್ವಾಮಿಗಳವರು ನಿನ್ನೆಯಿಂದಲೇ ಬಂದರೇ-ಬಂದರೇ ಅಂತ ಪ್ರತಿಯೊಬ್ಬರನ್ನೂ ವಿಚಾರಿಸುತ್ತಿರುವರು. ಅವರಿಗೆ ನಿಮ್ಮ ವಿಷಯದಲ್ಲಿ ವಿಶೇಷ ಮನಸ್ಸು ತಿರುಗಿಹೋಗಿದೆ. ಜಾಗ್ರತೆ ಬನ್ನಿರಿ" ಅಂತ ಕರೆದರು. "ಒಳ್ಳೇದು, ಸ್ನಾನ ಮಾಡಿಕೊಂಡು ಬರುತ್ತೇವೆ" ಅಂತ ಹೇಳಿದರು. "ಸ್ವಾಮಿ! ಪ್ರಥಮದಲ್ಲಿ ಆ ಸ್ವಾಮಿಗಳಿಗೆ ನಿಮ್ಮ ಮುಖ ತೋರಿಸಿ, ಆಮೇಲೆ ನೀವೇನಾದರೂ ಮಾಡಿರಿ" ಎಂದು ಹೇಳುತ್ತ ಜುಲುಮೆಯಿಂದ (ಬಲಾತ್ಕಾರ) ಡೊಂಬಳ ವೆಂಕಣ್ಣಾಚಾರ್ಯರು ಕರೆದುಕೊಂಡು ಹೋದರು. ತಮ್ಮ ಪರಿವಾರ ಸಮೇತ ಸ್ವಾಮಿಗಳವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದರು. ಸ್ವಾಮಿಗಳು ತಮ್ಮ ಹತ್ತಿರ ಕೂಡಿಸಿಕೊಂಡು ಯೋಗಕ್ಷೇಮವನ್ನು ವಿಚಾರಿಸಿ ಇನ್ನು ನಾವು ಜಯಶಾಲಿಗಳಾಗುವೆವು ಅಂತ ಅಂದರು. ಇವರನ್ನು ಮುಂದೆ ಮಾಡಿಕೊಂಡು ವಾದದಲ್ಲಿ ಶ್ರೀ ಸತ್ಯಧ್ಯಾನತೀರ್ಥರು ಜಯಶೀಲರಾಗಿ ಶ್ರೀ ವ್ಯಾಸತೀರ್ಥರಿಂದ ರಚಿಸಲ್ಪಟ್ಟ 'ಚಂದ್ರಿಕಾ' ಗ್ರಂಥವನ್ನು ಹಾಗು ತಮ್ಮ

"ಚಂದ್ರಿಕಾಮಂಡನ" ಗ್ರಂಥವನ್ನು ಆನೆಯ ಮೇಲೆ ವಾದ್ಯವೈಭವ ಸಮೇತ ಪದ್ಮಸರೋವರ ಪುರದಲ್ಲಿ ಮೆರೆಸಿದರು. ನೆರೆದಿದ್ದ ವಿದ್ವಜ್ಜನ ಸಮೂಹವು ಈ ಸಭೆಯನ್ನು ಕೊಂಡಾಡಿತು. ಆಗ ನೆರೆದ ಸಮೂಹಕ್ಕೆ ಅವರವರ ಯೋಗ್ಯತೆಗೆ ತಕ್ಕ ಮರ್ಯಾದೆ ಮಾಡಿ ಶ್ರೀ ಸತ್ಯಧ್ಯಾನ ತೀರ್ಥರು ಅಪ್ಪಣೆ ಕೊಟ್ಟರು. ಆ ಸಮಯದಲ್ಲಿ ಈ ಮುತ್ತಿಗಿ ಆಚಾರ್ಯರು ತಮ್ಮ ಶಿಷ್ಯ ಸಮೇತ ಫಲ- ಮಂತ್ರಾಕ್ಷತವನ್ನು ಕೇಳಲು "ಈ ದಿನ ಪುರಸೊತ್ತು (ಅವಕಾಶ) ಇಲ್ಲ ನಾಳೆ ಕೊಡುತ್ತೇವೆ ಅಂತ ಹೇಳಿದರು. ಮರುದಿನ ಸಾಯಂಕಾಲ ಶ್ರೀ ಸತ್ಯಧ್ಯಾನತೀರ್ಥರು ಏಕಾಂತದಲ್ಲಿ ಕುಳಿತಿರಲು ಇದು ಅನುಕೂಲ ಸಮಯವೆಂದು ಫಲ-ಮಂತ್ರಾಕ್ಷತಾರ್ಥ ಹೋದರು. ಆಗ ಶ್ರೀ ಸತ್ಯಧ್ಯಾನತೀರ್ಥರೂ ಸಂತೋಷಪಟ್ಟು ಎರಡು ಫಲ (ಟೆಂಗಿನಕಾಯಿ) ಹಾಗು ಒಂದು ನೂರು ರೂಪಾಯಿಯನ್ನು ಪಾಂಡುರಂಗಿ ಜಯಾಚಾರ್ಯರಿಗ (ದಿವಾನರಿಗೆ) ತರ ಹೇಳಿದರು. ಎರಡು ಫಲ ಯ್ಯಾತಕ್ಕೆ ಆಶ್ರಮ ಕೊಡುತ್ತೀರೇನು? ಅಂತ ಅಪಹಾಸ್ಯ ಮುಖದಿಂದ (ಕೊಂಕು ಮಾತಿನಿಂದ) ಕೇಳಿದರು ."ಅದೆಲ್ಲ ತಲೆಹರಟೆ ಮಾತು ನಿಮಗೇಕೆ? ಅವರು ಅದಕ್ಕೂ ಅರ್ಹರಿದ್ದಾರೆ?" ಅಂತ ಶ್ರೀ ಸತ್ಯಧ್ಯಾನ ತೀರ್ಥರು ಅಂದದ್ದಕ್ಕೆ ನಿರುಪಾಯರಾಗಿ ಎರಡು ಟೆಂಗಿನಕಾಯಿಗಳನ್ನು ಹಾಗು ಒಂದು ನೂರು ರೂಪಾಯಿಗಳನ್ನು ತಂದುಕೊಟ್ಟರು. "ಸ್ವಾಮಿ! ಕೇವಲ ಅನುಗ್ರಹ ಪೂರ್ವಕ ಫಲ-ಮಂತ್ರಾಕ್ಷತೆ ಕೊಟ್ಟರೆ ಸಾಕು" ಎಂದು ಅಂದು "ಈ ವೈಶಾಖ ಶುದ್ಧದಲ್ಲಿ (ಮುಂದೆ ಬರುವ ವೈಶಾಖ ಮಾಸದಲ್ಲಿ) ಶ್ರೀ ಕ್ಷೇತ್ರ ಬದರಿಕಾಶ್ರಮ ಮಾರ್ಗದಲ್ಲಿ ಗಂಗಾ ತೀರದ ಶ್ರೀ ಹೃಷಿಕೇಶವೆಂಬ ಕ್ಷೇತ್ರದಲ್ಲಿ ಈ ನಾರಾಯಣಪೇಟೆಯ ಬೊಜ್ಜಿ ಗುರುರಾಜಾಚಾರ್ಯರಿಂದ "ಸರ್ವಪಿಷ್ಟಾಪ್ತೋರ್ಯಾಮ-ಚೈನ" ಯಾಗವನ್ನು ಮಾಡಿಸುವ ಸಂಕಲ್ಪ ಮತ್ತು ಉದ್ದೇಶದ ನಿಮಿತ್ತ ಆಮಂತ್ರಣ ಕೊಟ್ಟರು. "ಅಷ್ಟುದೂರ ಯಾತಕ್ಕೆ ಮಾಡುತ್ತೀರಿ. ಅಲ್ಲಿ ವೈಷ್ಣವರೇ ಇಲ್ಲ. ನಿಮ್ಮ (ಆದವಾನಿ) ಶ್ರೀ ರಾಮದೇವರ ಗುಡಿಯಲ್ಲಿ ಮಾಡಿರಿ ನಾವು ಬರುತ್ತೇವೆ" ಅಂತ ಹೇಳಿದರು. "ಸ್ವಾಮಿ! ಅಲ್ಲಿ ವೈಷ್ಣವರಿಲ್ಲರೆಂಬುದು ನಿಜ. ಆದರೆ ಈ ಯಾಗ ಅಲ್ಲಿ ಮಾಡೋಣದರಿಂದ ಅಲ್ಲಿಯ ಅದ್ವೈತರು, ಯಜ್ಞ ನೋಡುವ ಸಲುವಾಗಿಯೂ, ನಮ್ಮ ವೈಷ್ಣವ ಸಂಪ್ರದಾಯಕ್ಕನುಸರಿಸಿ ಮಾಡುವ ಪಿಷ್ಟಪಶು ಇತ್ಯಾದಿಗಳ ಖಂಡನಾರ್ಥವಾದ ಕ್ಷೋಸ್ಕರವ್ವಾ ಬರತಕ್ಕ ಹಾಗೂ ಬಂದಿರತಕ್ಕ ವಿದ್ವಜ್ಜರನ್ನು ವಾದದಲ್ಲಿ ಗೆದ್ದು, ಅವರನ್ನು ದ್ವೈತಿಗಳನ್ನಾಗಿ ಮಾಡಿ ತಪ್ತಮುದ್ರಾ ದೀಕ್ಷೆಯನ್ನು ಕೊಟ್ಟರೆ ನಮ್ಮ ಮಧ್ವಮತವನ್ನು ವಿಸ್ತರಿಸಿದ ಶ್ರೇಯಸ್ಸಿಗೆ ಪಾತ್ರರಾಗುವೆವು ಎಂಬ ನಿಮಿತ್ತ ಅಲ್ಲಿ ಯಾಗವನ್ನು ಹೂಡಿದ್ದೇನೆ. ಕೇವಲ ಅದ್ವೈತ ಮತ ಖಂಡನ ಪೂರ್ವಕ ದ್ವೈತಮತ ಪ್ರತಿಷ್ಠಾಪನಾರ್ಥ ಸಭಾ ಏರ್ಪಾಟು ಮಾಡಿದರೆ, ಆ ಅದ್ವೈತಿಗಳು ಬಾರದೆ ಹೋದರೆ ಸಭೆಯೇ ನಿಷ್ಪ್ರಯೋಜನವಾಗುವದು" ಅಂತ ಹೇಳಿದ್ದಕ್ಕೆ "ಇದು ಯೋಗ್ಯವಿದೆ. ಆದರೆ ದೂರ ಪ್ರವಾಸ ಬರಲು ಆಗುವದೋ, ಇಲ್ಲವ್ವೋ ಹೇಳಲಾರೆವು. ಅಂತಹ ಪ್ರಸಂಗ ಬಂದಲ್ಲಿ ತಾರು ಮಾಡಿದರೆ, ನಮಗೆ ಬರಲಾಗದಿದ್ದರೆ ನಮ್ಮ ವಿದ್ವಾಂಸರನ್ನಾದರೂ ಕಳಿಸುವೆವು" ಅಂದು ಇನ್ನೂ ಐವತ್ತು ರೂಪಾಯಿಗಳನ್ನು ತರಿಸಿ ಬೊಜ್ಜಿ ಗುರುರಾಜಾಚಾರ್ಯರಿಗೆ

ಫಲ-ಮಂತ್ರಾಕ್ಷತವನ್ನು ಹಾಗು ಒಂದು ನೂರು ರೂಪಾಯಿಗಳೊಂದಿಗೆ ಎರಡು ಫಲ-ಮಂತ್ರಾಕ್ಷತೆಯನ್ನು (ಶ್ರೀ ಮುತ್ತಿಗಿ ಆಚಾರ್ಯರಿಗೆ) ಕೊಟ್ಟು ಕಳಿಸಿದರು.

೬೫. ಹೃಷೀಕೇಶದಲ್ಲಿ ಹಿರಿದಾದ ಯಾಗ.

ಮುಂದೆ ಚೈತ್ರಮಾಸದಲ್ಲಿ ಮಾಡತಕ್ಕ ಶ್ರೀ ರಾಮನವಮಿ ಉತ್ಸವವನ್ನು ಮುಗಿಸಿ 'ಶ್ರೀ ಹೃಷಿಕೇಶ' ಕ್ಷೇತ್ರಕ್ಕೆ ಯಜ್ಞವನ್ನು ಮಾಡುವ ಸಲುವಾಗಿ ನೇರವಾಗಿ ಅಲ್ಲಿಗೆ ಹೋಗದೆ ಯಾತ್ರಾತ್ವೇನ ನಾಶಿಕ, ಪ್ರಯಾಗ, ಕಾಶಿ, ಗಯಾ, ಹರಿದ್ವಾರ ಆದಿ ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಿ ಮಾಡಬೇಕಾದ ವಿಧ್ಯುಕ್ತ ಪಿತೃಕಾರ್ಯ ಮಾಡಿ ಸತ್ಕರ್ಮಗಳಾಚರಿಸುತ್ತ ಶ್ರೀ ಬದರಿಕ್ಷೇತ್ರ ಮಾರ್ಗದಲ್ಲಿರುವ ಹರಿದ್ವಾರ ಸಮೀಪ ಸ್ಥಲ ಶ್ರೀ ಅಲಕನಂದಾ ನದಿ ತೀರದಲ್ಲಿರುವ ಶ್ರೀ ಹೃಷಿಕೇಶ ಕ್ಷೇತ್ರದಲ್ಲಿ 'ಸರ್ವಪಿಷ್ಟಾಪ್ತೋರ್ಯಾಮಚೈನ' ಯಾಗವನ್ನು ಮಾಡಿ ಶ್ರೀಕ್ಷೇತ್ರ ಬದರಿಕಾಶ್ರಮಕ್ಕೆ ಹೋಗುವೆವು. ಈ ಸುಸಂಧಿಯನ್ನು ಸಾಧಿಸುವ ಇಚ್ಛಾವುಳ್ಳ ಅಶೇಷ ವೈದಿಕ, ಲೌಕಿಕ, ಜನಗಳು ಬರತಕ್ಕದ್ದು ಎಂದು ತಮ್ಮ ಶಿಷ್ಯವರ್ಗ ಮತ್ತು ಇಷ್ಟಮಿತ್ರ, ಬಂಧು-ಬಳಗ ವರ್ಗದವರಿಗೂ ತಿಳಿಸಿದರು. ಶ್ರೀ ಬದರಿಕಾಶ್ರಮ ಮೊದಲಾದ ಸುಕ್ಷೇತ್ರ ಸಂದರ್ಶನ, ಗಂಗಾದಿ ತೀರ್ಥಗಳಲ್ಲಿ ಸ್ನಾನ, ತತ್ರಾಪಿ ಗುರುಗಳ ಸನ್ನಿಧಾನೋಪೇತವಾಗಿ ಯಜ್ಞದಲ್ಲಿಯ ವೇದ ಘೋಷಾದಿಗಳ ಶ್ರವಣ ಇತ್ಯಾದಿ ಸತ್ಕಾಲಕ್ಷೇಪಕ್ಕೆ ಕಾರಣವಾಗುವ ಸುಸಂಧಿಯು ಮತ್ತೊಮ್ಮೆ ದೊರೆಯಲಾರದೆಂದು ಬಹು ಜನಗಳು ಆದವಾನಿಗೆ ಬಂದು ಸೇರಿದರು. ಚೈತ್ರ ವದ್ಯ (ಬಹುಳಾ) ದಲ್ಲಿ ಪ್ರಯಾಣ ಮಾಡಿ ಶಾಲಿವಾಹನ ಶಕೆ ೧೯೨೦ನೇ 'ರೌದ್ರಿ ಸಂವತ್ಸರ'ದ ವೈಶಾಖ ಶುದ್ಧದಲ್ಲಿ ಹೃಷಿಕೇಶವನ್ನು ತಲುಪಿದರು. ಮಾರ್ಗತ್ವೇನ ಕೃಷ್ಣಾ (ಕೃಷ್ಣಾನದಿ) ಮಳಖೇಡ, ಪಂಢರಪೂರ, ಗೋದಾವರಿ ನದೀತೀರದ ನಾಶಿಕ, ತ್ರಿಯಂಬಕ ಕ್ಷೇತ್ರಗಳನ್ನು ಹಾಗು ನರ್ಮದಾ ನದೀತೀರದ ಹುಶಂಗಾಬಾದಕ್ಕೆ ಮತ್ತು ಗಂಗಾತೀರ ಶ್ರೀಪ್ರಯಾಗ, (ಅಲಹಾಬಾದ್) ಗಯಾ, ಕಾಶಿ, ಅಯೋಧ್ಯಾ, ಹರಿದ್ವಾರವೇ (ಮಾಯಾಕ್ಷೇತ್ರ) ಮೊದಲಾದ ಮಹಾ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತ ಅಲ್ಲಲ್ಲಿ ಮಾಡಬೇಕಾದ ವಿಧ್ಯುಕ್ತ ದೇವ, ಪಿತೃ ಕಾರ್ಯಗಳಾಚರಿಸುತ್ತ ಹೋಗುವಾಗ ಶ್ರೀ ಕಾಶಿಕ್ಷೇತ್ರದಲ್ಲಿರುವ ಟೋಣಪೆ ಚಿಕ್ಕಭಾವು ಆಚಾರ್ಯರೂ ಪೂರ್ವದಲ್ಲಿ ಮರುತ ಮಹಾರಾಜನು ಯಾಗ ಮಾಡಿಕೊಂಡ ಅವಶಿಷ್ಟ (ಉಳಿದ) ಪದಾರ್ಥ (ಸಾಂಭಾರ)ಗಳನ್ನು ತಂದುಕೊಂಡು ಧರ್ಮರಾಜನು 'ರಾಜಸೂಯಾಖ್ಯ' ಯಾಗ ಮಾಡಿರುವನಷ್ಟೇ! ಅಂತಹ ಮರುತ ಮಹಾರಾಜನು ಯಜ್ಞ ಮಾಡಿದ ಮಹಾಕ್ಷೇತ್ರವಾದ ಹೃಷಿಕೇಶ ಸ್ಥಳದಲ್ಲಿ ದಕ್ಷಿಣ ಪ್ರದೇಶಸ್ಥ ಶ್ರೀ ಮನ್ಮಧ್ವಮತ (ವೈಷ್ಣವ) ಸಂಪ್ರದಾಯಾನುಯಾಯಿಗಳಾದ ಆದವಾನಿಯ "ಶ್ರೀ ಮುತ್ತಿಗಿ ಶ್ರೀನಿವಾಸಾಚಾರ್ಯ"ರೆಂಬ ಮಹನೀಯರಿಂದ ನೆರವೇರಿಸಲ್ಪಡುವ "ಚೈನ" ಯಾಗವನ್ನು ಸಂದರ್ಶಿಸುವ ಸುಸಂಧಿಯನ್ನು ಸಾಧಿಸುವದಾಗಿ ಅಶೇಷ ಜನಗಳಿಗೆ ಆಹ್ವಾನ ಪತ್ರಿಕಾವನ್ನು ಪ್ರಚಾರಗೊಳಿಸಿದ ಪ್ರಯುಕ್ತ ಆ ಪ್ರಾಂತೀಯ ಮಹಾಜನಗಳು ಈ ಯಜ್ಞಕ್ಕೆ ಬಂದು ಮಹಾ ಶೋಭಾವನ್ನುಂಟುಮಾಡಿದ್ದರಿಂದ ಈ ಯಜ್ಞವನ್ನು ಯಶಸ್ವಿಯಾಗಿ ನೆರವೇರಿಸಿದರು. ಬಂದ ಜನರುಗಳಿಗೆ ಬದರಿ ಕ್ಷೇತ್ರಕ್ಕೆ ಮತ್ತು ತಮ್ಮ ವಾಸಸ್ಥಳಕ್ಕೆ ಹೋಗಲು ಅಪ್ಪಣೆ ಕೊಟ್ಟರು. ತಾವು ಮಾತ್ರ ದೇಹಾಲಸ್ಯದಿಂದ

ಹೃಷಿಕೇಶದಲ್ಲಿ ವಾಸಮಾಡಿದರು. ಅನಂತರ ಇವರು (ಈ ಚರಿತ್ರೆ ನಾಯಕರು) ದೇಹಕ್ಕೆ ವಿಶೇಷ ಜಾಡ್ಯವು ಬಂದದ್ದರಿಂದ ಅಲ್ಲಿಂದ ಹೊರಟು ಆದವಾನಿಗೆ ಬಂದು ಸೇರಿದರು.

೬೬. ಸನ್ಯಾಸಕ್ಕೆ ಸಿದ್ಧರಾದರು.

ಹೃಷಿಕೇಶ ಕ್ಷೇತ್ರಕ್ಕೆ ಪ್ರಯಾಣ ಮಾಡುವಾಗ ಶ್ರೀ ಕ್ಷೇತ್ರ ಮಳಖೇಡಕ್ಕೆ ಹೋಗಿದ್ದರಷ್ಟೆ. ಅಲ್ಲಿ ಅವರು ಕೂಡ್ಲೀ ಆರ್ಯ ಅಕ್ಷೋಭ್ಯತೀರ್ಥ ಮಠಾಧೀಶ ಶ್ರೀ ಶ್ರೀ ರಘುಕಾಂತ ತೀರ್ಥರು (ಇವರೇ ಕೋಡಂಗಲ್ ವೆಂಕಪ್ಪಾಚಾರ್ಯರೆಂಬ ವೇದಾಂತ ಪಂಡಿತರಾದ ಪ್ರಯುಕ್ತ ಇವರಿಗೆ ಕೊಡಂಗಲ್ ಸ್ವಾಮಿಗಳೆಂದೂ ಪ್ರತೀತಿ) ಹಾಂಗೂ ಇವರ ಕರಕಮಲೋದ್ಭೂತ ಶ್ರೀ ಶ್ರೀ ರಘುದಾಂತತೀರ್ಥರು (ಇವರು ಯಾದಗಿರಿಯ ಟಂಕಸಾಲಿ ಶ್ರೀನಿವಾಸಾಚಾರ್ಯರೆಂಬ ವ್ಯಾಕರಣ ವೇದಾಂತ ಪಂಡಿತರಾದ ಪ್ರಯುಕ್ತ ಇವರಿಗೆ ಟಂಕಸಾಲಿ ಸ್ವಾಮಿಗಳೆಂದು ಪ್ರತೀತಿ). ಈ ಉಭಯರೂ ವಾಸಮಾಡಿಕೊಂಡಿದ್ದರು. ಆಗ ಉಭಯ ಸ್ವಾಮಿಗಳು ತತ್ರಾಪಿ ಶ್ರೀ ಶ್ರೀ ರಘುಕಾಂತತೀರ್ಥರು ಅಂದದ್ದೇನೆಂದರೆ: "ನೀವು ಶ್ರೀ ಕ್ಷೇತ್ರ ಹೃಷಿಕೇಶದಲ್ಲಿ ಯಾಗವನ್ನು ಮಾಡಿಕೊಂಡು ಸ್ವಸ್ಥಲಕ್ಕೆ (ಆದವಾನಿಗೆ) ಹೋಗುವಾಗ ಪುನಃ ಇಲ್ಲಿಗೆ ಬಂದು ಅಲ್ಲಿ ನೆರವೇರಿಸಿದ ಯಜ್ಞದ ವಿಷಯವನ್ನು ತಿಳಿಸಿ, ನಮಗೆ ಹಸ್ತೋದಕವನ್ನು ಮಾಡಿ ನಮ್ಮ ಮನಸ್ಸು ಸಂತೋಷ ಪಡಿಸಬೇಕು" ಅಂತ ಹೇಳಿದ್ದರಷ್ಟೆ! ದೇಹಾಲಸ್ಯ ಮೂಲಕ ಅವರು ಅಲ್ಲಿಗೆ ಬರಲಾಗಲಿಲ್ಲ. ಆದ್ದರಿಂದ ಈಗ ಅವರನ್ನು (ಮುತ್ತಿಗಿ ಆಚಾರ್ಯರನ್ನು) ಕರೆಸುವ ಯತ್ನ ಮಾಡೋಣ ಎಂದು ಟಂಕಸಾಲಿ ಸ್ವಾಮಿಗಳಲ್ಲಿ ಹೇಳಿದರು. ಈ ಮಾತನ್ನು ಅನುಸರಿಸಿ ಆ ಟಂಕಸಾಲಿ ಸ್ವಾಮಿಗಳು ತಮ್ಮ ಶಿಷ್ಯನೊಬ್ಬನನ್ನು ಕಳುಹಿಸಿ, ಕರೆಯಿಸಿಕೊಂಡರು. (ಮಾರ್ಗದಲ್ಲಿ ರಾಯಚೂರಿನಲ್ಲಿದ್ದ ಕಲ್ಲೂರು ಕುಲಕರ್ಣಿ ವೆಂಕೋಬರಾಯನನ್ನು ಸಂಗಡ ಕರೆದುಕೊಂಡು ಹೋದರು) ಈ ಮುತ್ತಿಗಿ ಶ್ರೀನಿವಾಸಾಚಾರ್ಯರು ಬಂದದ್ದನ್ನು ನೋಡಿ ಆ ಉಭಯ ಸ್ವಾಮಿಗಳು ಸಂತುಷ್ಟರಾಗಿ ಹೃಷಿಕೇಶದಲ್ಲಿ ನೆರವೇರಿಸಿದ ಯಾಗದ ವೃತ್ತಾಂತವನ್ನು ಕೇಳಿ ಆನಂದಭರಿತರಾಗಿ. ಸರಿ, ಈಗ ನಮ್ಮಗಳಿಗೆ ಹಸ್ತೋದಕ ಮಾಡುವಿರಷ್ಟೆ! ಅಂತ ಚಾಣಾಕ್ಷರಾದ ಕೊಡಂಗಲ್ ಸ್ವಾಮಿಗಳು ಕೇಳಿದರು. 'ಅವಶ್ಯ ಮಾಡುತ್ತೇನೆ' ಅಂತ ಉತ್ತರ ಕೊಟ್ಟರು. ಹಸ್ತೋದಕವು ನಮ್ಮ ಪ್ರೀತಿಗಾಗಿಯಷ್ಟೇ!' ಅಂತ ದೃಢೀಕರಿಸಿದರು. "ಹೌದು" ಅಂತ ಉತ್ತರಿಸಿದರು. 'ಹಸ್ತೋದಕವು ನಮ್ಮ ಪ್ರೀತಿಗಾಗಿ ಅಂದಮೇಲೆ ನಮ್ಮ ಪ್ರೀತಿಯಾಗುವ ಹಸ್ತೋದಕವನ್ನೇ ನೀವು ಮಾಡುವಿರಷ್ಟೆ!' ಅಂತ ಪುಷ್ಟೀಕರಿಸಿ (ಈ ಮಾತಿನ ಇಂಗಿತವು ಸ್ಪಷ್ಟ ತೋರದೆ ಆಗ್ಗೆ ಅವರು ಕಟ್ಟಿಸುತ್ತಿರುವ ಮಂಟಪಕ್ಕೆ ಏನಾದರೂ ಹೆಚ್ಚಿನ ದ್ರವ್ಯ ಕೇಳುವ ಇಚ್ಛಾದಿಂದ ಈ ರೀತಿ ಮಾತನಾಡುತ್ತಿರ ಬಹುದೆಂದಣಿಸಿ) 'ತಮ್ಮ ಪ್ರೀತಿಯಾಗುವ ಯಾವ ಹಸ್ತೋದಕವೋ ಅದನ್ನೆ ಮಾಡುವೆನು, ಆಜ್ಞಾ ಆಗಬೇಕು' ಅಂತ ಕೇಳಿದರು. 'ಇದು ರಾಮವಾಕ್ಯವಷ್ಟೆ!' ಅಂತ ದೃಢೀಕರಣಾರ್ಥ ಪುನಃ ಈ ರೀತಿ ಕೇಳಿದರು. 'ಹೋ! ರಾಮವಾಕ್ಯವೇ' ಅಂತ ಉತ್ತರ ಕೊಟ್ಟರು. "ಹಾಗಾದರೆ ಹೇಳುತ್ತೇವೆ ಕೇಳಿರಿ. ನೀವು ನಮ್ಮ ಸಂಸ್ಥಾನಕ್ಕೆ ನಮ್ಮಿಂದ ಸನ್ಯಾಸಾಶ್ರಮ ಸ್ವೀಕಾರ ಮಾಡಬೇಕು.

ಇದೇ ನಮ್ಮ ಪ್ರೀತಿಯ ಹಸ್ತೋದಕ" ಅಂತ ಸ್ಪಷ್ಟಪಡಿಸಿದರು. "ಸ್ವಾಮಿ! ತಾವು ಹಾಗೂ ಟಂಕಸಾಲಿ ಸ್ವಾಮಿಗಳೂ ದೃಢಾಂಗರಾಗಿದ್ದು ಈ ತಮ್ಮ ಮಠಕ್ಕೆ ಈ ನನ್ನ ಆಶ್ರಮದ ಮಹತ್ವವೇನು?" ಅಂತ ಕೇಳಿದರು. "ಆ ಮಹತ್ವವನ್ನೇ ವಿವರಿಸುತ್ತೇವೆ ಕೇಳಿರಿ! ನಮ್ಮ ಮಠವು ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಲ್ಲೊಬ್ಬರಾದ ಅಕ್ಷೋಭ್ಯತೀರ್ಥರ ಮಠ. ಆ ಅಕ್ಷೋಭ್ಯತೀರ್ಥರಿಂದ ಶ್ರೀಮದ್ ಜಯತೀರ್ಥರೂ ಮತ್ತು ಶ್ರೀ ತ್ರೈಲೋಕ್ಯ ಭೂಷಣತೀರ್ಥರೂ ಅಂತ ಇಬ್ಬರು ಸ್ವಾಮಿಗಳಾದರು. ಶ್ರೀ ಜಯತೀರ್ಥರ ಶಾಖಾ (ಭಾಗ)ವೇ ಈಗಿರುವ ಉತ್ತರಾದಿಮಠ, ರಾಯರಮಠ ಮತ್ತು ವ್ಯಾಸರಾಯರ ಮಠ ಅಂತ ಮೂರು ಮಠಗಳಾಗಿವೆ. ನಮ್ಮದು ಶ್ರೀ ತ್ರೈಲೋಕ್ಯ ಭೂಷಣತೀರ್ಥರ ಮಠ (ಶಾಖಾ); ಇದರಲ್ಲಿ ಜಯತೀರ್ಥರ ಮಠದಂತೆ ಶಾಖೋಪ ಶಾಖವಾಗದೆ ಏಕ ಪ್ರಕಾರವಾಗಿಯೇ ನಡೆದು ಬಂದಿದೆ. ಈ ನಮ್ಮ ಮಠಕ್ಕೆ ಅಲ್ಪವಾಗಿ ಜಹಗೀರು, ಜಮೀನು, ಶಿಷ್ಯವರ್ಗ ಉಂಟು. ಇದು ಮೈಸೂರು ಇಲಾಖಾದ ಶಿವಮೊಗ್ಗ ಸಮೀಪದ ತುಂಗಾನದಿ ಹಾಗೂ ಭದ್ರಾನದಿಗಳ ಸಂಗಮ ಸ್ಥಳವಾದ 'ಕೂಡ್ಲಿ' ಎಂಬ ಗ್ರಾಮದಲ್ಲಿ ನಮ್ಮ ಪೂರ್ವ ಪರಂಪರಾಗತ ಮಠವಿದೆ. ಈ ಮಠದ ಮೂಲ ಪುರುಷರಾದ ಶ್ರೀ ತ್ರೈಲೋಕ್ಯಭೂಷಣತೀರ್ಥರಾರಭ್ಯ ಎಷ್ಟೋ ಮಂದಿ ಸ್ವಾಮಿಗಳವರು ಅತಿ ವಿರಕ್ತರಾಗಿ, ತಪಶ್ಚರ್ಯದಲ್ಲಿ ನಿರತರಾಗಿ ವಿವಿಕ್ತ ಪ್ರದೇಶವಾದ ಕೂಡ್ಲಿಯಲ್ಲಿಯೇ ವಾಸಮಾಡಿಕೊಂಡಿದ್ದು ಯದೃಚ್ಛಾಲಾಭಸಂತುಷ್ಟರಾಗಿ, ಅಲ್ಲಿಯೇ ಪಾಠ, ಪ್ರವಚನಾದಿಗಳನ್ನು ಮಾಡುತ್ತಾ ವೃಂದಾವನಸ್ಥರಾಗಿದ್ದಾರೆ. ಆದ್ದರಿಂದ ಉತ್ತರಾದಿ, ರಾಯರ, ವ್ಯಾಸರಾಯರ ಮಠಗಳಂತೆ ಸಂಚರಿಸಿ ಶಿಷ್ಯ ಸಂಪತ್ತನ್ನೂ, ಕನಕಾದಿ ದ್ರವ್ಯ ಸಂಪತ್ತನ್ನು ಹೆಚ್ಚಿಸಿಗೊಂಡಿಲ್ಲ. ಈ ಐಹಿಕ ಸಂಪತ್ತು ನ್ಯೂನತಾ ಮಾತ್ರದಿಂದ ಆ ರಾಯರ, ವ್ಯಾಸರಾಯರ, ಉತ್ತರಾದಿ ಮಠಗಳಕ್ಕಿಂತಲೂ ಕಡಮಿದರ್ಜಾ ಮಠವೆಂದು ಭಾವಿಸಕೂಡದು. ಆ ಮಠಗಳಂತೆ ನಮ್ಮ ಮಠದಲ್ಲಿಯೂ ಶ್ರೀಮದಾಚಾರ್ಯರ ಕರಾರ್ಚಿತ ಪ್ರತಿಮಾ ಉಂಟು. ಆ ಮಠಗಳಿಗಿರುವಂತೆ ಈ ಮಠಕ್ಕೂ ಸರಕಾರದಲ್ಲಿಯೂ ಗೌರವ ಉಂಟು. ಆದರೆ, ಕಾಲಬಲದಿಂದ ರಾಯರ ಮಠ ತತ್ರಾಪಿ ಉತ್ತರಾದಿ ಮಠಗಳು ನಮ್ಮ ಮಠಕ್ಕಿಂತ ಮುಂದೆ ಬಂದಿವೆ. ಐಹಿಕ ಸಂಪತ್ತಿನಿಂದ ಅವರು ಪ್ರಬಲರಾಗಿರೋಣದರಿಂದ ಆ ಮಠಗಳು ದೊಡ್ಡವೆಂತಲೂ, ಇದು ಚಿಕ್ಕದೆಂತಲೂ ಅಜ್ಞಪ್ರವಾದ. ಈ ಅಜ್ಞಪ್ರವಾದದ ಲಾಭವನ್ನು ಪಡೆದು ಉತ್ತರಾದಿ ಮಠವು ಈ ನಮ್ಮ ಮಠವನ್ನು ತಮ್ಮ ಅಧೀನ ಮಠವನ್ನಾಗಿ ಮಾಡಿಕೊಂಡಿದ್ದಾರೆ. ಇದರಿಂದ ನಮ್ಮ ಸ್ವಾತಂತ್ರ್ಯಕ್ಕೆ ಭಂಗ ಬಂದಿದೆ. ಈ ಸ್ವಾತಂತ್ರ್ಯ ಭಂಗ ನಮ್ಮ ಮನಸ್ಸಿಗೆ ವಿಶೇಷ ವ್ಯಥೆಗೊಳಿಸಿದೆ. ವ್ಯಥೆಯಷ್ಟೆ ಅಲ್ಲ, ದುಃಖಕ್ಕೆ ಕಾರಣವಾಗಿದೆ. ಈ ದುಃಖದ ಕಾರಣವೇನೆಂದರೆ ನಮ್ಮ ಗುರುಗಳಾದ ಶ್ರೀ ರಘುಶಾಂತ ತೀರ್ಥರು ಪೂರ್ವದವರಂತೆ ಏಕ ಸ್ಥಲದಲ್ಲಿ ಕೂಡದೆ ಈ ಪ್ರಾಂತಕ್ಕೆ ಸಂಚಾರತ್ವೇನ ಬಂದು, ಈ ಪ್ರಾಂತೀಯ ಒಬ್ಬ ಸ್ಮಾರ್ಥ ಬ್ರಾಹ್ಮಣನಿಗೆ ಅನುಗ್ರಹ ಮಾಡಿ ಅವನಿಗೆ ವೈಷ್ಣವ ದೀಕ್ಷಾವನ್ನು ಕೊಟ್ಟರು. ಅಂದರೆ ತಪ್ತಮುದ್ರಾ ಪ್ರದಾನ ಮಾಡಿದರು. ಮತ್ತು ಭಾಷ್ಯಾದಿ ಶತ ಸಿದ್ಧಾಂತವನ್ನು ಉಪದೇಶ ಮಾಡಿದರು. ಈ ವರ್ತಮಾನವನ್ನು ಆಗಿನ ಉತ್ತರಾದಿ ಮಠಾಧೀಶರಾದ

ಶ್ರೀ ಸತ್ಯಧೀರತೀರ್ಥರು (ಇವರ ಮಕ್ಕಳಾದ ಸೇತುರಾಮಾಚಾರ್ಯರ ಆಗ್ರಹ ಮೂಲಕ) ಆ ನಮ್ಮ ಗುರುಗಳಾದ ಶ್ರೀ ರಘುಶಾಂತತೀರ್ಥರನ್ನು ತಮ್ಮ (ಉತ್ತರಾದಿ) ಮಠೀಯ ಶಿಷ್ಯರು (ಯಾವ ಮಠದ ಸ್ವಾಮಿಗಳವರಿಂದ ತಪ್ತಮುದ್ರಾ ಸ್ವೀಕರಿಸುವವರೋ ಅವರು ಆ ಮಠೀಯ ಶಿಷ್ಯರೆಂದು ಲೋಕಪ್ರವಾದ) ಯಾರೂ ಇವರಿಗೆ ಪೂಜಾ ಸತ್ಕಾರ ಮಾಡಕೂಡದೆಂದು ಆಜ್ಞಾ ಹೊರಡಿಸಿದರು. ವಿಮರ್ಶನ ಜ್ಞಾನವಿಲ್ಲದ ಜನಗಳನೇಕರು ಆ ಆಜ್ಞಾದಂತೆ ನಡೆದುಕೊಳ್ಳುವದರಿಂದ ನಮ್ಮ ಗುರುಗಳ ಸಂಚಾರ ಕಷ್ಟತರವಾಯಿತು. ಅನ್ವರ್ಥಕ ನಾಮದ ಆ ಶಾಂತ ಸ್ವಭಾವಿಯಾದ ನಮ್ಮ ಗುರುಗಳು ಉತ್ತರಾದಿ ಮಠವಿರುವ ಕೃಷ್ಣಾತೀರದ 'ಅತಕೂರ' ಎಂಬ ಗ್ರಾಮಕ್ಕೆ ಬರುವವರಾಗಿ, ಆ ಗ್ರಾಮದ ಎದುರಿನಲ್ಲಿಯ ಕೃಷ್ಣಾತೀರದ 'ಪಂಚಲವಾಡಿ' ಎಂಬ ಗ್ರಾಮಕ್ಕೆ ಬಂದು ಅಲ್ಲಿಯ ಲೌಕಿಕ ವೈದಿಕ ಧುರೀಣರ ಮುಖಾಂತರ ಉತ್ತರಾದಿ ಮಠಾಧೀಶರಲ್ಲಿ ಸಂಧಾನ ನಡೆಸಿದರು. 'ಆ ನಮ್ಮ ಗುರುಗಳು ಸ್ಮಾರ್ತನಿಗೆ' ತಪ್ತಮುದ್ರಾ ಕೊಟ್ಟಿದ್ದಕ್ಕಾಗಿ ತಪ್ಪು ದಂಡವೆಂದು ಐದುನೂರು ರೂಪಾಯಿ ಕೊಡಬೇಕು ಮತ್ತು ಶಿಷ್ಯ (ಗೃಹಸ್ಥ)ನನ್ನು ನಮ್ಮ (ಉತ್ತರಾದಿ) ಮಠಕ್ಕೆ ಒಪ್ಪಿಸಿ ತಪ್ತಮುದ್ರಾ ಕೊಡಿಸಿ ಅವನನ್ನು ಉತ್ತರಾದಿ ಮಠದ ಶಿಷ್ಯನನ್ನಾಗಿ ಮಾಡುವದಲ್ಲದೆ ತಮ್ಮ ಮಠಕ್ಕೆ ತಪ್ತಮುದ್ರಾ ಕೊಡುವ ಅಧಿಕಾರವಿಲ್ಲವೆಂದು ಕಾಗದ ಬರೆದು ಕೊಡಬೇಕು ಅಂತ ಸಂಧಿಯಾದ್ದರಿಂದ ಆ ಪ್ರಕಾರ ಮಾಡಲ್ಪಟ್ಟಿತು. ಇದು ಅವರಿಗೆ ತಥಾ ನಮಗೆ ದುಃಖವನ್ನುಂಟುಮಾಡಲು ಒಂದು ಕಾರಣ. ಮತ್ತೊಂದೇನೆಂದರೆ ನಾವೂ ಸಂಚಾರ ಮಾಡುತ್ತಿರಲು ಒಬ್ಬ ಅದ್ವೈತ ಪಂಡಿತನು ವಾದಾರ್ಥ ಬಂದನು. ಆಗ ಅವನಿಗೂ ನಮಗೂ ಪಣವೆಂದರೆ, ನಾವು ಈ ವಾದದಲ್ಲಿ ಸೋತ ಪಕ್ಷದಲ್ಲಿ ಅದ್ವೈತ ಮತವನ್ನವಲಂಬಿಸಬೇಕು. ಅವನು ಸೋತಪಕ್ಷದಲ್ಲಿ ಅವನು ದ್ವೈತ ಮತವನ್ನವಲಂಬಿಸಬೇಕು. ಈ ರೀತಿ ಶಪಥವೇರ್ಪಟ್ಟು ವಾದಾರಂಭವಾಯಿತು. ಎಂಟು ಹತ್ತು ದಿನಗಳು ವಾದ ನಡೆದು ಅವನು ಪರಾಜಿತನಾದನು. ಆ ನಿಬಂಧನ ಪ್ರಕಾರ ಅವನು ದ್ವೈತನಾಗತಕ್ಕದ್ದಕ್ಕಾಗಿ ಅವನಿಗೆ ತಪ್ತಮುದ್ರಾ ಕೊಟ್ಟು ಮಧ್ವ ಭಾಷ್ಯವನ್ನು ಶ್ರವಣ ಮಾಡಿಸಿದೆವು. ಈ ವಾರ್ತೆ ಅದೇ 'ಅತಕೂರ'ದಲ್ಲಿದ್ದ ಉತ್ತರಾದಿ ಮಠಾಧೀಶ ಶ್ರೀ ಸತ್ಯಧೀರತೀರ್ಥರಿಗೆ (ಹಾಗು ಅವರ ಮಕ್ಕಳಾದ ಸೇತುರಾಮಾಚಾರ್ಯರಿಗೆ) ತಿಳಿಯಿತು. ಆ ಕೂಡಲೆ ಕುಪಿತರಾಗಿ 'ಈ ಪೂರ್ವದಲ್ಲಿ ನಿಮ್ಮ ಗುರುಗಳಾದ ಶ್ರೀ ರಘುಶಾಂತರು, ಒಬ್ಬ ಸ್ಮಾರ್ತ ಗೃಹಸ್ಥನಿಗೆ ತಪ್ತಮುದ್ರಾ ಕೊಟ್ಟಿದ್ದಕ್ಕಾಗಿ ಇಲ್ಲಿಯವರೆಗೂ ಬಂದು, ತಪ್ಪು ದಂಡ ಕೊಟ್ಟು ಆ ಗೃಹಸ್ಥನನ್ನು ಕರೆಸಿ ನಮ್ಮಲ್ಲಿ ತಪ್ತಮುದ್ರಾ ಕೊಡಿಸಿ, ನಮ್ಮ ಮಠದ ಶಿಷ್ಯನನ್ನಾಗಿ ಮಾಡಿದ್ದಲ್ಲದೆ ಇತಃ ಪರ ನಾವು ಯಾರಿಗೂ ತಪ್ತಮುದ್ರಾ ಪ್ರದಾನ ಮಾಡುವದಿಲ್ಲ ಮತ್ತು ತಪ್ತಮುದ್ರಾ ಪ್ರದಾನ ಮಾಡುವ ಅಧಿಕಾರ ನಮ್ಮ ಮಠಕ್ಕೆ ಇಲ್ಲವೆಂದು ಪತ್ರ ಬರೆದುಕೊಟ್ಟಿದ್ದು ನಿಮಗೆ ವಿದಿತವಿದ್ದರೂ ಆ ಲೇಖನಾತಿಕ್ರಮಣವನ್ನು ನೀವು ಮಾಡುವ ಕಾರಣವೇನು? ಕೂಡಲೇ ಬಂದು ನಿಮ್ಮ ಗುರುಗಳಂತೆ ಶರಣಾಗತರಾಗಬೇಕು. ಇಲ್ಲವೇ ಮಠ ಕ್ರಮ ಪ್ರಕಾರ ಬಹಿಷ್ಕಾರ ಪತ್ರ ಕಳಿಸಲಾಗುವುದು' ಅಂತ ಪತ್ರ (ನೋಟೀಸು) ಕಳುಹಿಸಿದರು. ಆ ಪತ್ರವನ್ನು ನೋಡಿ, ನಮ್ಮ

ಸಂಚಾರಕ್ಕೆ ಪ್ರತಿಬಂಧಕವಾಗಬಾರದೆಂದು ಆ ಗೃಹಸ್ಥನಿಗೆ ತಪ್ತಮುದ್ರಾ ಕೊಡುವ ಪ್ರಸಂಗ ಬಂದ ರೀತಿಯನ್ನು ತಿಳಿಸುತ್ತೇವೆ. ಆ ಗೃಹಸ್ಥನಿಗೆ ತಮ್ಮ ಪರವಾಗಿಯೇ ತಪ್ತಮುದ್ರಾ ಕೊಟ್ಟಿದ್ದೇವೆ. ಅನ್ಯಥಾ ಇಲ್ಲ. ಕದಾಚಿತ್ ಆ ಗೃಹಸ್ಥನನ್ನು ತಮ್ಮಲ್ಲಿ ಹೋಗಲು ಕಳುಹಿಸಿದರೆ ತಪ್ಪಿಸಿಗೊಂಡಾನು ಎಂಬ ಅನುಮಾನ ಮೂಡಿತು. ಇನ್ನು ಆ ಗೃಹಸ್ಥನನ್ನೇ ಕರೆದುಕೊಂಡು ತಮ್ಮ ಸನ್ನಿಧಾನಕ್ಕೆ ಬರಬೇಕೆಂದರೆ ಇದು ಗೋದಾವರೀ ತೀರ, ತಾವು ಇದ್ದದ್ದು ಕೃಷ್ಣಾತೀರ, ಇಷ್ಟು ದೂರ ಸಂಚಾರತ್ವೇನ ಬರುವದಾದಲ್ಲಿ ಕಾಲವಿಲಂಬವಾಗುವುದು. (ಆ ಕಾಲದಲ್ಲಿ ಬಂಡಿ, ಕುದುರೆ, ಮೇನಾದಿ ವಾಹನಗಳಿಂದ ಯತಿಗಳು ಸಂಚರಿಸುತ್ತಿದ್ದರು. ಮೋಟಾರು, ವಿಮಾನ, ರೈಲುಗಳಲ್ಲಿ ಪ್ರಯಾಣ ಮಾಡುತ್ತಿರಲಿಲ್ಲ. ಅದು ನಿಷೇಧವೆಂದು ಭಾವಿಸಿದ್ದರು) ಈ ಕಾಲ ವಿಲಂಬನಕ್ಕೆ ಆ ಗೃಹಸ್ಥನು ಒಡಂಬಡದೆ ತಪ್ಪಿಸಿಗೊಂಡ ಪಕ್ಷಕ್ಕೆ ಶ್ರೀಮನ್ಮಧ್ವಮತಕ್ಕೆ ಒಂದು ಮನೆತನ ಲಾಭವಾಗುವದನ್ನು ಕಳೆದುಕೊಂಡಂತಾಗುವದೆಂದು ತಪ್ತಮುದ್ರಾ ಕೊಟ್ಟು, ಸಾವಕಾಶ ತಮ್ಮಲ್ಲಿಗೆ ಬಂದು ಆ ಗೃಹಸ್ಥನನ್ನು ಕರೆಸಿ, ತಮ್ಮಲ್ಲಿ ತಪ್ತಮುದ್ರಾ ಕೊಡಿಸಿ ತಮ್ಮ ಮಠದ ಶಿಷ್ಯನಾಗುವಂತೆ ಮಾಡುವದಿತ್ತು. ಈ ಮಾತಿಗೆ ಆ ಗೃಹಸ್ಥನೂ ಒಡಂಬಟ್ಟಿದ್ದಾನೆ, ನಾವು ಕೂಡಾ ಅಲ್ಪಾವಧಿಯಲ್ಲಿ ತಮ್ಮ ಸನ್ನಿಧಾನಕ್ಕೆ ಬರುತ್ತೇವೆ. ಪೂರ್ಣ ಅನುಗ್ರಹ ಇರಬೇಕು' ಅಂತ ಉತ್ತರಕೊಟ್ಟು ಆ (ಬಹಿಷ್ಕಾರ ರೂಪ) ಬ್ರಹ್ಮಾಸ್ತ್ರವನ್ನು ತಪ್ಪಿಸಿಕೊಂಡು ಸಂಚಾರ ಕ್ರಮದಿಂದ ಅತ್ತಕಡೆಗೆ ಬಂದು ಶರಣಾಗತರಾಗಿ, ನಾವು ಕೂಡಾ ಕಾಗದ ಬರೆದುಕೊಟ್ಟು, ಆ ಗೃಹಸ್ಥನನ್ನು ಕರೆಸಿ ಮಠಕ್ಕೆ ಒಪ್ಪಿಸಿದೆವು. ಅಂದಮೇಲೆ **'ತತೋ ದುಃಖಕರಂ ನು ಕಿಂ'**. ಇದರಿಂದ ನಮ್ಮ ಹೃದಯ ಎಷ್ಟು ತಾಡಿತವಾಗಿದೆ ನೀವೇ ಯೋಚಿಸಿರಿ. ಈ ಅಪಮಾನಕ್ಕೆ ಪ್ರತೀಕಾರ ಮಾಡುವ ಶಕ್ತಿ ನಮ್ಮಲ್ಲಿಲ್ಲ ಎಂಬುದಾಗಿ ಮನಗಂಡು, ಇತಃ ಪೂರ್ವ ನಿಮ್ಮಗೆ ನಮ್ಮ ಸಂಸ್ಥಾನಕ್ಕೆ ಆಶ್ರಮ ಕೊಡುವ ಇಚ್ಛಾದಿಂದ ನಾವು ಅಣು ಮಂತ್ರಾಲಯದಲ್ಲಿರುವಾಗ ವಿಶೇಷ ಸಂದರ್ಭದಲ್ಲಿ ನಮಗೂ ನಿಮಗೂ ಅತ್ಯಂತ ಪ್ರೀತಿಕರನಾದ ಆದವಾನಿಯ ತಹಶೀಲ್ದಾರರಾಗಿದ್ದ ರಾತ್ನೇ ವೆಂಕೋಬಾಚಾರ್ಯರನ್ನು ನಿಮ್ಮನ್ನು ಕರೆದುಕೊಂಡು ಬರುವ ಸಲುವಾಗಿ ಹೇಳಿಕಳುಹಿಸಿದ್ದೆವು. ಆಗ್ಗೆ ನೀವು ಬಾರದ್ದರಿಂದ ಈ ಟಂಕಸಾಲೀ ಶ್ರೀನಿವಾಸಾಚಾರ್ಯರು ಪಂಡಿತ ರಾಗಿರೋಣದರಿಂದ ಇವರಿಂದಲಾದರೂ ನಮ್ಮ ಮನ-ಇಚ್ಛಾ ಪೂರ್ಣವಾದೀತೆಂದು ಭಾವಿಸಿ ಸನ್ಯಾಸಾಶ್ರಮ ಕೊಟ್ಟೆವು. ಈ ಪರಿಯಂತರ ನೋಡಿದಾಗ್ಯೂ ಕೇವಲ ಪೌರುಷ ಮಾತಿನ ಹೊರ್ತು ಕಾರ್ಯ ಸಾಧಿಸುವ ಶಕ್ತಿಯಿಲ್ಲ, ಇಷ್ಟೇ ಅಲ್ಲ, ನಮಗಿಂತಲೂ ಭಯಗ್ರಸ್ಥರು. ನಮ್ಮ ಇಷ್ಟಸಿದ್ಧಿಸುವದಾದರೆ ಹೊರ್ತು ಬೇರೆಯವರಿಂದ ಸಾಧ್ಯವಿಲ್ಲವೆಂದು ನಿಶ್ಚಯಿಸಿ ನಿಮಗೆ ಆಶ್ರಮ ಕೊಡುವ ವಿಷಯದಲ್ಲಿ ಆತುರರಾಗಿದ್ದೇವೆ. **"ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ"** ಅಂತ ತಮ್ಮ ಹಾರ್ದವನ್ನು ತೋಡಿಕೊಂಡರು. (ವ್ಯಕ್ತಪಡಿಸಿದರು) "ತಾವು ನನಗೆ ಸನ್ಯಾಸಾಶ್ರಮ ಕೊಡುವದಾದರೆ ಈ ಟಂಕಸಾಲಿ ಸ್ವಾಮಿಗಳು ಸಮ್ಮತ ಪಡುವರೋ?" ಅಂತ ಕೇಳಿದರು. "ನಾವು ಉಭಯಕರು ಕೂಡಿ ಯೋಚಿಸಿಯೇ ನಿಮ್ಮನ್ನು ಬರಮಾಡಿಕೊಂಡಿದ್ದೇವೆ. ಈಗ ನಿಮ್ಮ ಸಮಕ್ಷಮವೇ ಅವರ ಸಮ್ಮತಿಯನ್ನು ವ್ಯಕ್ತಪಡಿಸುತ್ತೇವೆ, ನೋಡಿರಿ" ಅಂತ ಅಂದು,

ಬೇರೆ ಮನೆಯಲ್ಲಿದ್ದ ಆ ಟಂಕಸಾಲಿ ಸ್ವಾಮಿಗಳನ್ನು ಕರಿಸಿ ಅವರ ಸಮ್ಮತಿಯನ್ನು ವ್ಯಕ್ತಪಡಿಸಿದರು. ಆದರೆ ಟಂಕಸಾಲಿ ಸ್ವಾಮಿಗಳು ಕೋಡಂಗಲ್ ಸ್ವಾಮಿಗಳಿಗೆ ಅಂದದ್ದೇನೆಂದರೆ "ಈಗ ತಾವೇ ಈ ಮುತ್ತಿಗಿ ಆಚಾರ್ಯರಿಗೆ ಆಶ್ರಮ ಕೊಟ್ಟರೆ ಪ್ರಥಮದಲ್ಲಿ ನನಗೆ ತಾವೇ ಆಶ್ರಮ ಕೊಟ್ಟಿರೋಣದರಿಂದ ಅವರಿಗೂ-ನಮಗೂ ಭ್ರಾತೃಭಾವ ಬಂದು ಶ್ರೀ ಯಾದವೇಂದ್ರರಿಗೂ, ಶ್ರೀ ರಾಘವೇಂದ್ರರಿಗೂ ಕಲಹ ಉಂಟಾದಂತೆ ನಮಗೂ-ಅವರಿಗೂ ಕಲಹ ಉಂಟಾದೀತು. ಪ್ರಯುಕ್ತ ನಾವೇ ಅವರಿಗೆ ಆಶ್ರಮ ಕೊಡುತ್ತೇವೆ. ಇದು ತಮಗೆ ಸಮ್ಮತವೇ? ಅಂತ ಅಂದರು. "ಹಾಂಗಾದರೂ... ಬಾಧಕವಿಲ್ಲಾ, ನೀವು ಮಕ್ಕಳಂತೆಯೇ" ಆದಿರಿ. ನಮ್ಮ ಪೂರ್ವಾಶ್ರಮದಲ್ಲಿ ಮಕ್ಕಳು, ಮೊಮ್ಮಕ್ಕಳನ್ನು ನಾವು ಕಾಣಲಿಲ್ಲ. ಈಗ ಕಂಡಂತಾಗುವುದು ಇದು ಯೋಗ್ಯವೇ ಇದೆ ಅಂದು ಆ ಮಾತಿಗೆ ಅವರು ಸಮ್ಮತಿಸಿದರು. "ಹಾಗಾದರೆ ಈಗ ನಾನು ಆದವಾನಿಗೆ ಹೋಗಿ ಈ ವರ್ತಮಾನವನ್ನು ನಮ್ಮ ಚಿರಂಜೀವಿಗೂ ಹಾಗೂ ನಮಗೆ ಬೇಕಾದ ಶಿಷ್ಯವರ್ಗದವರಲ್ಲಿಯೂ ತಿಳಿಸಿ, ಅವರನ್ನು ಕರೆದುಕೊಂಡು ಬಂದು ಸನ್ಯಾಸಾಶ್ರಮ ಸ್ವೀಕಾರ ಮಾಡುತ್ತೇನೆ" ಅಂತ ಹೇಳಿದರು. ಹಾಗಲ್ಲ, ಶ್ರೇಯಾಂಸಿ ಬಹುವಿಘ್ನಾನಿ ಆದ್ದರಿಂದ ಈ ಕಾರ್ಯವನ್ನು ಆಲಸ್ಯ ಮಾಡುವಂತಿಲ್ಲ. ಪ್ರಯುಕ್ತ ಆಶ್ರಮ ಕೊಡುವದು ಎಂಟ್ಹತ್ತು ದಿನಗಳ ನಂತರವೆಂದು ಹೇಳುತ್ತಾ, ನಾಳೆಯೇ ಯಾವದ್ವಿಧಾನವನ್ನು ಮಾಡಿ ಆಶ್ರಮ ಕೊಡುತ್ತೇವೆ. ಈ ದಿನವೇ ಕೇವಲ ತಮಗೆ ಬೇಕಾದವರಿಗೆ ತಾರು ಮಾಡಿ ನಾಳೆಯೇ ಬರುವಂತೆ ಮಾಡಬಹುದು ಮತ್ತು ನಿಮಗೆ ಚಿರಂಜೀವಿಯನ್ನು ಕರೆಸುವುದಕ್ಕೆ ಇಲ್ಲಿಂದ ಯಾರನ್ನಾದರೂ ಕಳಿಸಿ ಕರೆಸಬಹುದು. ನಿಮಗೆ ಪತ್ನಿ ವಿಯೋಗ ಆಗಿರೋಣದರಿಂದ ನೀವು ಹೋಗುವ ಕಾರಣವಿಲ್ಲ" ಅಂತ ಹೇಳಿ, ಯರಗೋಳ ವೆಂಕಪ್ಪನೆಂಬ ಶ್ರೀ ಟಂಕಸಾಲಿ ಸ್ವಾಮಿಗಳವರ ಶಿಷ್ಯನು ಇವರು (ಈ ಮುತ್ತಿಗಿ ಆಚಾರ್ಯರು) ಹೇಳಿದ ಪ್ರಕಾರ ಮಂಗಳವೇಡೆ ಗೋವಿಂದರಾವ್, ವಿಜಾಪುರದಲ್ಲಿಯ ಶಿಷ್ಯರು, ಹುಬ್ಬಳ್ಳಿಯ ದೇಶಪಾಂಡೆ ವಿಠ್ಠಲರಾಯರಿಗೂ, ಧಾರವಾಡದ ಕುಲಕರ್ಣಿ ಗೋವಿಂದರಾಯ ಮೊದಲಾದವರಿಗೆ ತಾರು (telegram) ವಾಡಿ (Wadi Station) ಸ್ಟೇಷನ್‌ದಿಂದ ಮಾಡಿದನು. ಮತ್ತು ಇನ್ನೊಬ್ಬ ಮನುಷ್ಯನನ್ನು ಕಳಿಸಿ ನಾರಾಯಣಪೇಟೆಯ ಬೊಜ್ಜಿ ಗುರುರಾಜಾಚಾರ್ಯರನ್ನು ಕರೆದುಕೊಂಡು ಬರಹೇಳಿದರು. ಮರುದಿನ ಪ್ರಾತಃಕಾಲ ಆದವಾನಿಯಿಂದ ಸ್ವಾಮಿರಾಯಾಚಾರ್ಯರು (ನಾನು) ಹಾಗೂ ಚುಡ್ರಿಕಿ ಶೇಷಪ್ಪಮ ಡಾಕ್ಟರ್ ಮಂಗಳವೇಢೆ ಗೋವಿಂದರಾಯರು ಸಕುಟುಂಬರಾಗಿಯೂ ಮತ್ತು ತಹಶೀಲ್ದಾರ ಪೇರೂರು ಗುಂಡೇರಾಯರು ಹಾಗು ಧಾರವಾಡದ ಗೋವಿಂದರಾವ್ ಕುಲಕರ್ಣಿ ಮಳಖೇಡಕ್ಕೆ ಬಂದರು.

೬೭. ಮುತ್ತಿಗಿ ಆಚಾರ್ಯರು 'ಶ್ರೀರಘುಪ್ರೇಮತೀರ್ಥ'ರಾದರು.

ಇತ್ತ ಉತ್ತರಾದಿ ಮಠದ ಪಕ್ಷಪಾತಿಗಳಿಂದ, ಎಂಟ್ಹತ್ತು ದಿನಗಳಲ್ಲಿ ಈ ಅಕ್ಷೋಭ್ಯ ತೀರ್ಥರ ಮಠಕ್ಕೆ ಆದವಾನಿಯ ಶ್ರೀ ಮುತ್ತಿಗಿ ಶ್ರೀನಿವಾಸಾಚಾರ್ಯರಿಗೆ ಸನ್ಯಾಸಾಶ್ರಮ

ವಾಗುವುದು ನಿಶ್ಚಯವಾಗಿದೆ ಎಂದು ಪದ್ಮಸರೋವರ (ತಿರುಪತಿ ತಿರುಚಾನೂರು) ದಲ್ಲಿದ್ದ ಉತ್ತರಾದಿ ಮಠಾಧೀಶ ಶ್ರೀ ಸತ್ಯಧ್ಯಾನತೀರ್ಥರಿಗೆ ಸೂಚನಾ ಕಳಿಸಿದರು. 'ಅಕ್ಷೋಭ್ಯ ತೀರ್ಥಮಠಕ್ಕೆ ಈಗ ಉಭಯ ಸ್ವಾಮಿಗಳು ದೃಢಾಂಗರಾಗಿದ್ದರೂ, ಮುತ್ತಿಗಿ ಆಚಾರ್ಯರಿಗೆ ಆ ಮಠಕ್ಕೆ ಆಶ್ರಮ ಕೊಟ್ಟು ಮೂರನೇ ಸ್ವಾಮಿಗಳನ್ನಾಗಿ ಮಾಡುವ ಕಾರಣವೇನು? ಕದಾಚಿತ್ ನಮ್ಮ ಮೇಲಿನ ವೈಷಮ್ಯಕ್ಕಾಗಿಯೇ ಈ ವ್ಯೂಹ ರಚಿಸಲ್ಪಟ್ಟಿರುವದೋ ಏನೋ 'ಎಂದು ಚಾಣಾಕ್ಷರಾದ ಶ್ರೀ ಸತ್ಯಧ್ಯಾನತೀರ್ಥರೂ ಊಹಿಸಿ ಈ ಆಶ್ರಮವಾಗದಂತೆ ನೋಡಬೇಕೆಂದು ಕೃತನಿಶ್ಚಯರಾಗಿ ಮಠದಲ್ಲಿಯ ನಾಲ್ಕು ದಿಂಡೇರನ ಕಳಿಸುವ ಸಿದ್ಧತೆ ಮಾಡಿದರು. ಇತ್ತ ನಿರ್ವಿಘ್ನದಿಂದ ಮರುದಿನವೇ ಶ್ರೀ ರಘುದಾಂತತೀರ್ಥರು (ಟಂಕಸಾಲಿ ಸ್ವಾಮಿಗಳು) ಮುತ್ತಿಗಿ ಶ್ರೀನಿವಾಸಾಚಾರ್ಯರಿಗೆ ಶಾಲಿವಾಹನ ಶಕೆ ೧೮೪೨ನೇ ರೌದ್ರಿ ಸಂವತ್ಸರ ಅಧಿಕ ಶ್ರಾವಣ ವದ್ಯ (ಕೃಷ್ಣಪಕ್ಷ) ಷಷ್ಠಿ ಶುಕ್ರವಾರ ಸನ್ಯಾಸಾಶ್ರಮ; ಅಂದರೆ ಕ್ರಿ.ಶ. ೧೯೨೦ನೇ ಇಸವಿ, ಆ ಮರುದಿನ (ಸಪ್ತಮಿ) ಈ ನೂತನ ಸ್ವಾಮಿಗಳವರಿಗೆ ಶ್ರೀ ರಘುದಾಂತತೀರ್ಥರು ವಿದ್ಯುಕ್ತ ಪ್ರಕಾರ ಪ್ರಣವ ಮಂತ್ರೋಪದೇಶವನ್ನೂ, ದಂಡಕಮಂಡಲವನ್ನೂ ಕೊಟ್ಟು ತಲೆಯ ಮೇಲೆ ತಮ್ಮ ಮಠೀಯ ಮೂಲ ರಾಮಾದಿ ಪ್ರತಿಮಾಗಳನ್ನಿಟ್ಟು ಸಂಪ್ರದಾಯ ಪ್ರಕಾರ ಪಟ್ಟಾಭಿಷೇಕ ಮಹೋತ್ಸವವನ್ನು ಮಾಡುತ್ತ ಆನಂದ ಬಾಷ್ಪಗಳುದುರಿಸುತ್ತ, "ಈ ನೂತನ ಯತಿಗಳನ್ನು ನಾವು 'ಪ್ರೇಮ' ಪೂರ್ವಕ ಸಂಸ್ಥಾನಾಧಿಪತಿಗಳನ್ನಾಗಿ ಮಾಡಿದ್ದೇವೆ. ಆದ್ದರಿಂದ ಇವರಿಗೆ **ಶ್ರೀ ರಘುಪ್ರೇಮತೀರ್ಥರೆಂದು** ನಾಮಕರಣ ಮಾಡಿದ್ದೇವೆ". ಈ ಮಠದಲ್ಲಿ "**ರಘು**" ಎಂಬ ಪದ ಪ್ರಥಮ ಉಪಯೋಗಿಸುವ ರೂಢಿಯಿದ್ದ ಪ್ರಯುಕ್ತ ಅದರಂತೆ ಇವರಿಗೂ ಪ್ರಥಮ ಪದ "**ರಘು**" ಎನ್ನುವುದನ್ನು ಉಪಯೋಗಿಸಿ "**ಪ್ರೇಮ**" ತೀರ್ಥರೆಂಬ ಹೆಸರಿಟ್ಟರು. ಆ ದಿನ ಈ ಉತ್ಸವವನ್ನು ನೆರವೇರಿಸಿ ಈ "**ರಘುಪ್ರೇಮತೀರ್ಥರಿಂದಲೇ**" ಈ ಸಂಸ್ಥಾನ ದೇವರ ಪೂಜಾ ಮಾಡಿಸುವವರಾಗಿ ಆ ಉಭಯ ಯತಿಗಳು (ಶ್ರೀ ರಘುಕಾಂತತೀರ್ಥರೂ ತಥಾ ಶ್ರೀರಘುದಾಂತತೀರ್ಥರೂ) ಉಪವಿಷ್ಟರಾಗಿ ಈ ನೂತನ ಯತಿಗಳು ಮಾಡುವ ಪೂಜಾ ಕ್ರಮವನ್ನು ನೋಡಿ) ಆನಂದಭರಿತರಾದರು.

"ಇತಿ ಚತುರ್ಥೋಽಧ್ಯಾಯಃ"

॥ ಶ್ರೀ ರಾಮಚಂದ್ರ ಪ್ರಸೀದ ॥

ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯತ್ವಾದ್ಯನಂತ
ಬಿರುದಾಂಕಿತ ಶ್ರೀ ಶ್ರೀಮದಕ್ಷೋಭ್ಯತೀರ್ಥ
ಮಠಾಧೀಶ್ವರ ಶ್ರೀ ಶ್ರೀಮದ್ರಘುಕಾಂತತೀರ್ಥ
ಕರಾರವಿಂದಾವಿರ್ಭೂತ ಶ್ರೀಮದ್ರಘುದಾಂತತೀರ್ಥ
ಶ್ರೀಪಾದಂಗಳವರು ನಮ್ಮ ಮಠದ
ಚಿಕ್ಕ ಸಂಸ್ಥಾನದಲ್ಲಿ ಪಟ್ಟಾಭಿಷಿಕ್ತರಾದ
ಶ್ರೀರಘುಪ್ರೇಮತೀರ್ಥ ಸ್ವಾಮಿಗಳವರಿಗೆ

ಮಾಡುವ ಅನೇಕ ನಾರಾಯಣ ಸ್ಮರಣೆಗಳು. ಶಕೆ ೧೮೪೨ನೇ ರೌದ್ರಿ ಸಂ॥ ಅಧಿಕ ಶ್ರಾವಣ ವದ್ಯ ದಶಮಿ ಸೋಮವಾರ. ಶ್ರೀಹರಿ ಗುರುಗಳ ಪ್ರಸಾದದಿಂದ ಸಂಸ್ಥಾನದ ಮೂಲ ರಾಮದೇವರು, ದಿಗ್ವಿಜಯ ರಾಮದೇವರು, ವೇದವ್ಯಾಸದೇವರ ಸೇವಾ, ಪ್ರವಚನ ಮುಂತಾದ್ದು ಮಾಡುತ್ತ ಮಳಖೇಡ ಕ್ಷೇತ್ರದಲ್ಲಿ ಕ್ಷೇಮದಿಂದ ಇದ್ದೇವೆ. ಪ್ರಕೃತ ಈ ರಾಯಸು ತಮಗೆ ಬರದುಕೊಡೋ ವ್ಯಾಜದಿಂದ ಸಮಸ್ತ ಜಗತ್ತಿಗೆ ತಿಳಿಸುವದೇನುಂದರೆ- ನಿಮ್ಮಿಂದ ಪ್ರಾರ್ಥಿತರಾಗಿ ನಿಮ್ಮಲ್ಲಿ ಪರಮಾನುಗ್ರಹ ಮಾಡಿ ನಮ್ಮ ಗುರುವರ್ಯರ ಆಜ್ಞಾಪ್ರಕಾರ ಸಂಸ್ಥಾನದ ಉದ್ದಿಶ್ಯ ಸನ್ಯಾಸಕೊಟ್ಟು, ಯೌವ್ವ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿ, ಸಂಸ್ಥಾನದ ರಾಯರ ಕರಾರ್ಚಿತ ಕೋದಂಡರಾಮದೇವರನ್ನು ಪೂಜಾರ್ಥ ಕೊಟ್ಟು ಇದ್ದೇವಾದ ಕಾರಣ ಸಂಚಾರಕ್ಕೆ ಹೋದ ಕಾಲದಲ್ಲಿ ಸರ್ವರಿಗೆ ಈ ಸಂಸ್ಥಾನ ದೇವರ ಸಂದರ್ಶನ ಮಾಡಿಸುತ್ತ ಸಂಪ್ರದಾಯ ಪ್ರಕಾರ ಸರ್ವ ಮರ್ಯಾದೆಗಳನ್ನು ನಡೆಸುತ್ತ ಇರಬೇಕು. ಸನ್ನಿಧಾನದಲ್ಲಿ ಇದ್ದಾಗ ಮೂಲರಾಮ ದೇವರ ಪೂಜಾ ಮುಂತಾದ್ದು ಪೂರ್ವ ಪ್ರಕಾರ ಮಾಡುತ್ತ ನಮಗೂ, ನಮ್ಮ ಗುರುಗಳಿಗೂ ಶಾಸ್ತ್ರ ಪ್ರಕಾರ ಪೂರ್ವದಂತೆ ಅನುಕೂಲರಾಗಿದ್ದು ಕ್ರಮಾತ್ ಮಹಾಸಂಸ್ಥಾನವನ್ನು ಕೂಡಾ ಪರಿಪಾಲಿಸುತ್ತ, ಈ ಸಂಸ್ಥಾನವನ್ನು ಸರ್ವಪ್ರಕಾರದಿಂದ ಅಭಿವೃದ್ಧಿಗೆ ತರಬೇಕು.

ಶಿವಮೊಗ್ಗ

ಇತಿ ನಾರಾಯಣ ಸ್ಮರಣೆಗಳು
ಶ್ರೀ ರಘುದಾಂತತೀರ್ಥರು

V. ಅಥ ಪಂಚಮೋಧ್ಯಾಯಃ

೧. ತಪ್ತ ಮುದ್ರಾಪ್ರದಾನಮಾಡಿ ಮಾನ್ಯರಾದರು.

(ಚಾತುರ್ಮಾಸ್ಯ ಚತುರತರವಾಯಿತು)

ಶ್ರೀ ಶ್ರೀ ೧೦೦೮ ಕೂಡ್ಲಿ ಆರ್ಯ ಅಕ್ಷೋಭ್ಯತೀರ್ಥರ ಮಠಾಧೀಶರಾದ ಶ್ರೀ ರಘು ಪ್ರೇಮತೀರ್ಥರು ಚತುರ್ಥಾಶ್ರಮವನ್ನು ಹೊಂದಿ, ವೇದಾಂತ ಸಾಮ್ರಾಜ್ಯವಾದ ಶ್ರೀಮದಾರ್ಯ ಕೂಡ್ಲಿ ಅಕ್ಷೋಭ್ಯ ತೀರ್ಥಸಂಸ್ಥಾನಕ್ಕೆ ಪಟ್ಟಾಭಿಷಿಕ್ತರಾಗೋಣದರಿಂದ, ಈ ವೇದಾಂತ ಸಾಮ್ರಾಜ್ಯದ ಮುಖ್ಯಾಧಿಕಾರ ಹಾಗೂ ಕರ್ತವ್ಯವೆನಿಸಿದ ಧ್ಯಾನ, ಪಾಠ ಪ್ರವಚನಗಳು ಹಾಗೂ ಸಜ್ಜನರಿಗೆ ವೈಷ್ಣವ ದೀಕ್ಷಾ ಕೊಡುವ ಕಾರ್ಯವನ್ನೂ ಕೈಗೊಂಡು ಮರುದಿವಸವೇ ತಮಗೆ ಆಶ್ರಮ ಕೊಟ್ಟ ಗುರುಗಳಾದ ಶ್ರೀ ರಘುದಾಂತತೀರ್ಥರಿಂದ ಪ್ರೇರಿತರಾಗಿ ವಿಧ್ಯುಕ್ತವಾಗಿ **'ಸುದರ್ಶನ ಹೋಮ'** ನಡೆಸಿ, ಆ ಸಂಸ್ಕಾರೋಪೇತ ಅಗ್ನಿಯಿಂದಲೇ ತಪನ ಮಾಡಲ್ಪಟ್ಟ ಶಂಖಚಕ್ರಾತ್ಮಕ ತಪ್ತಮುದ್ರಾ ಸ್ವೀಕರಿಸಿದರು. ಮತ್ತು ಈ ತಪ್ತಮುದ್ರಾ ಸಂಸ್ಕಾರವು ಕೇವಲ ಪ್ರಾಯಶ್ಚಿತ್ತ ಧರ್ಮವಾಗಿರದೆ ವೈಷ್ಣವಾತ್ಮಕ ಚಿಹ್ನೆಯಾಗಿದೆ. ಇದನ್ನು ಪ್ರತಿಯೊಬ್ಬ ವೈಷ್ಣವನು ತನಗೆ ಮಾನ್ಯರಾದವರಿಂದ ಪರ್ವಣಿ, ಪುಣ್ಯಕಾಲ ವಿಶೇಷಗಳಲ್ಲಿ ಸ್ವೀಕರಿಸತಕ್ಕದ್ದು. ಈಗ ಬಂದ ಮಠದ ಯತಿಗಳಿಂದ ತಥಾ ಯಾವ ಯತಿಗಳಿಂದಾದರೂ ತಪ್ತಮುದ್ರಾ ಸ್ವೀಕರಿಸಿರುವದು ವಿಹಿತ. ಇನ್ನು ವಂಶ ಪಾರಂಪರ್ಯದಿಂದ ಯಾವ ಮಠದಲ್ಲಿ ತಪ್ತಮುದ್ರಾ ಸ್ವೀಕರಿಸಲಾಗಿರುವದೋ ಆ ಮಠದ ಯತಿಗಳಿಂದಲೇ ತಪ್ತಮುದ್ರಾ ಸ್ವೀಕರಿಸಬೇಕೆ ಹೊರ್ತು ಶಾಸ್ತ್ರವಿಹಿತವಾಗಿ ತನಗೆ ಮಾನ್ಯರೆನಿಸಿದವರಲ್ಲಿ, ಉಕ್ತಕಾಲ ಒದಗಿದಾಗ್ಯೂ ಆ ಸುಸಂಧಿಯನ್ನು ಬಿಟ್ಟು, ಬೇರೆ ಮಠದ ಯತಿಗಳಿಂದ ಸರ್ವಥಾ ತಪ್ತಮುದ್ರಾ ಸ್ವೀಕರಿಸಬಾರದೆಂದು ಪ್ರವಾದವಿದೆ. ಆದರೆ, ಇದು ಆಜ್ಞಪ್ರವಾದ. ಶೃತಿ, ಸ್ಮೃತಿ, ಪುರಾಣಗಳಲ್ಲಿ ತನಗೆ ಮಾನ್ಯರಾದ (ಜ್ಯೇಷ್ಠರಾದ) ತಂದೆ, ಕಕ್ಕ, ಅಣ್ಣ, ಮಾವ, ಪುರೋಹಿತ, ಗುರು, (ಸ್ತ್ರೀಯರಿಗೆ) ಪತಿ ಮೊದಲಾದವರಿಂದ ತಪ್ತಮುದ್ರಾ ಸ್ವೀಕರಿಸತಕ್ಕದ್ದೆಂದು ಸ್ಪಷ್ಟ ವಚನಗಳಿರೋಣದರಿಂದ, ಈಗಿನ ಆಜ್ಞ ಪ್ರವಾದದ ಬಗ್ಗೆ ಭಾವನಾವಶರಾಗಿ ಉಕ್ತ ಸಮಯ ಒದಗಿದಾಗ್ಯೂ ತನಗೆ ಮಾನ್ಯರಾದವರಿಂದ ಸ್ವೀಕರಿಸುವದನ್ನು ಬಿಟ್ಟರೆ, ಕೃಷಿಕನು ಮಳೆ ಬಂದಾಗ ಬೀಜಾವಪ ಮಾಡದೆ ಹೋದರೆ ಅವನು ಯಾವ ಸುಸಂಧಿಯನ್ನು ಕಳೆದುಕೊಂಡಂತಾಗುವದೋ, ಅಂದರಂತೆ ವೈಷ್ಣವ ದೀಕ್ಷಾವುಳ್ಳವನು ಅಂತಹ ಸುಸಂಧಿಯನ್ನು ಕಳೆದು ಕೊಂಡಂತಾಗುವುದು ಎಂದು ಅನೇಕ ರೀತ್ಯಾ ತಪ್ತಮುದ್ರಾ ವಿಷಯವಾಗಿ ಪ್ರವಚನ ಮಾಡಲು, ಆ ಸಮಯದಲ್ಲಿ ಕೇಳುತ್ತಿದ್ದ ಅನೇಕರಲ್ಲಿ ಕೆಲವರಿಗೆ ಈ ಪ್ರವಚನ ವಿಷಯ ಸಮರ್ಪಕ ತೋರಿ, ಇವರಿಂದ ತಪ್ತಮುದ್ರಾ ಸ್ವೀಕರಿಸಲು

ಸಿದ್ಧರಾಗಿ ಸ್ವೀಕರಿಸಿದರು. ಆದರೆ, ಅತಿರೇಕ ಮಠಾಭಿಮಾನವುಳ್ಳವರಿಗೆ ಈ ಪ್ರವಚನವು ರುಚಿಸಲಿಲ್ಲ. ಇಷ್ಟೇ ಅಲ್ಲ, ಆ ಮಠಾಭಿಮಾನಿಗಳಿಗೆ ಕೆಲವರು ತಪ್ತಮುದ್ರಾ ಸ್ವೀಕರಿಸಿದ್ದು ಮನಸ್ಸಿಗೆ ಕ್ಲೇಶವುಂಟಾಗಿ ವಿರೋಧಕ್ಕೆ ಕಾರಣವಾಯಿತು. ಈ ವಿರೋಧಿಗಳು ಇಲ್ಲಿ ನಡೆದ ವಿಷಯವನ್ನು ಉತ್ತರಾದಿ ಮಠಕ್ಕೆ ತಿಳಿಸಿದರು. ಈ ವರ್ತಮಾನ ತಿಳಿದ ಕೂಡಲೇ ಉತ್ತರಾದಿ ಹಾಗೂ ರಾಯರ ಮಠಾಧಿಪತಿಗಳು ತಮ್ಮ ಮಠದ ಮೇಲೆ ಅತಿ ಕ್ರಮಣವೆಂದು ಕೋಲಾಹಲವೆಬ್ಬಿಸಿದರು.

ಪೂರ್ವದಲ್ಲಿ ಶ್ರೀ ರಘುದಾಂತತೀರ್ಥರಿಂದಲೂ, ಶ್ರೀ ರಘುಕಾಂತತೀರ್ಥರಿಂದಲೂ ಬರೆಸಿಕೊಂಡ ಕಾಗದ ಆಧಾರದ ಮೇಲೆ ಅವರೀರ್ವರನ್ನು ಸಾಧಿಸಿದರೆ, ಶ್ರೀ ರಘುಪ್ರೇಮ ತೀರ್ಥರನ್ನು ದಂಡಿಸುವ ವಿಚಾರದಿಂದ ತಮ್ಮ ಮಠದಲ್ಲಿದ್ದ ಧೂರ್ತರಾದ ಅಗ್ನಿಹೋತ್ರಿ ಹನುಮಂತಾಚಾರ್ಯ, ಡೊಂಬಳ ವೆಂಕಣ್ಣಾಚಾರ್ಯ ಮೊದಲಾದ ನಾಲ್ಕು ಜನರನ್ನು ಶ್ರೀ ಸತ್ಯಧ್ಯಾನತೀರ್ಥರೂ ಪದ್ಮ ಸರೋವರದಿಂದ ಕಳಿಸಿದರು. ಈ ನಾಲ್ಕು ಜನರು ರಾಯಚೂರಿಗೆ ಬಂದು, (ಮಳಖೇಡದಲ್ಲಿಯ) ಪರಿಸ್ಥಿತಿಯನ್ನು ಅಭ್ಯಸಿಸಹತ್ತಿದರು.

ಇತ್ತ, ತಪ್ತಮುದ್ರಾ ಸ್ವೀಕರಿಸಿದ ಧಾರವಾಡ ಗೋವಿಂದರಾವ್, ಬಿಜಾಪೂರದ ಮಂಗಳವೇಢೆ ಗೋವಿಂದರಾವ್ ವಗೈರೆ ತಮ್ಮ ತಮ್ಮ ಗ್ರಾಮಗಳಿಗೆ ಹೋದರು. ಆ ಮೇಲೆ ಈ ಚರಿತ್ರ ನಾಯಕರು ಸನ್ಯಸ್ತರಾದದ್ದನ್ನು ಕೇಳಿ ದರ್ಶನಾಪೇಕ್ಷಿಗಳಾಗಿ (ಇವರ ಪೂರ್ವಾಶ್ರಮದ ಶಿಷ್ಯರೂ) ಶಿಷ್ಯವರ್ಗದವರು ಬಂಧು-ಮಿತ್ರ ವರ್ಗದವರೂ ತಂಡ-ತಂಡವಾಗಿ ಬರುತ್ತಿದ್ದರು. ಇದು ಅಸೂಯಾಪರರಿಗೆ ಸಹಿಸಲಾರದಾಗಿ ತಪ್ತಮುದ್ರಾ ಪ್ರದಾನ ಮಾಡಿದ ದಿನಾರಭ್ಯ ಬುದ್ಧಿಪೂರ್ವಕ ಮೂರು-ನಾಲ್ಕು ದಿನಗಳು ಊಟದ ಆರಂಭದಲ್ಲಿಯೇ ಕೂದಲು ಬರುವಂತೆ ಮಾಡಿದರು. ಕೂದಲು ಭೋಜನದಲ್ಲಿ ಬರುವದು ಸ್ವಾಭಾವಿಕವಾಗಿ ಮೈಲಗಿ, ತತ್ರಾಪಿ ಯತಿಗಳಿಗೆ ವಿಶೇಷ ಮೈಲಿಗೆ. ಇದರಿಂದ ಊಟ ಬಿಟ್ಟು ಏಳಬೇಕಾಗುತ್ತಿತ್ತು. ಈ ರೀತಿ ಸತತವಾಗಿ ಮೂರು-ನಾಲ್ಕು ದಿನಗಳು ಉಪವಾಸವಾಗಿರೋಣದರಿಂದ (ಉಪವಾಸ ಮಾಡುವ ಅಭ್ಯಾಸ ಇವರಿಗೆ ಇರೋಣದಿಂದ) ಏನೂ ಆಯಾಸವಾಗದಿದ್ದರೂ ಶ್ರೀ ರಘುಕಾಂತ ತೀರ್ಥರಿಗೂ ಹಾಗೂ ಶ್ರೀ ರಘುದಾಂತತೀರ್ಥರಿಗೂ ವಿಶೇಷ ಖೇದವಾಗಿ ಇದಕ್ಕೆ ಏನು ಉಪಾಯ ಮಾಡಬೇಕೆಂದು ಯೋಚಿಸಹತ್ತಿದ್ದರು. ಒಂದು ದಿನ ಶ್ರೀ ರಘುಕಾಂತತೀರ್ಥರು, "ನಮಗೆ ಕೂದಲು ಬಾರದೆ ಪ್ರತಿನಿತ್ಯವೂ ನಿಮಗೆ ಬರುವುದಲ್ಲ! ಇದಕ್ಕೆ ಕಾರಣವೇನಿರಬಹುದು? ಇದರಂತೆ ಪ್ರತಿನಿತ್ಯವೂ ಉಪವಾಸವಾಗುತ್ತಾ ಹೋದರೆ ಗತಿ ಏನು?" ಅಂತ ಚಿಂತಾಕ್ರಾಂತರಾಗಿ ಕೇಳಿದರು. "ಸ್ವಾಮಿ! ಇದಕ್ಕೆ ನಾನು ಈ ಮಠಕ್ಕೆ ಆಶ್ರಮ ತೆಗೆದುಕೊಂಡದ್ದು, ತತ್ರಾಪಿ ತಪ್ತಮುದ್ರಾ ಪ್ರದಾನ ಮಾಡಿದ್ದೇ ಕೆಲವರಿಗೆ ಅಸೂಯಾಕ್ಕೆ ಕಾರಣವಾಗಿರೋಣದರಿಂದ ಈ ರೀತಿ ನಡೆದಿದೆ. ಆದ್ದರಿಂದ ನಾವುಗಳು ಈ ಸ್ಥಳ ಬಿಡುವದೇ ಇದಕ್ಕೆ ಉಪಾಯವೆಂದು ಹೇಳಿದರು" "ಇದು ಸಮರ್ಪಕವಾಗಿಯೇ ಇದೆ. ಆದರೆ ಎಲ್ಲಿಗೆ ಹೋಗತಕ್ಕದ್ದು? ಈಗ

ಚಾತುರ್ಮಾಸ್ಯಪಿರುವುದರಿಂದ ಸಂಕಲ್ಪ (ದೀಕ್ಷಾ) ದಲ್ಲಿದ್ದೇವಾದ್ದರಿಂದ ಎಲ್ಲಿಗೂ ಹೋಗಲೂ ಬರುವಂತಿಲ್ಲವಲ್ಲ" ಅಂತ ಶ್ರೀ ರಘುಕಾಂತತೀರ್ಥರು ಅಂದರು. "ಈ ಚಾತುರ್ಮಾಸ್ಯ ಸಂಕಲ್ಪ ಮುಗಿಯುವವರೆಗೂ ಶ್ರೀ ಟೀಕಾರಾಯರ ಸನ್ನಿಧಾನದಲ್ಲಿದ್ದು, ನಂತರ ನಮ್ಮ ಸ್ಥಳಕ್ಕೆ (ಆದವಾನಿಗೆ) ಪ್ರಯಾಣ ಮಾಡೋಣ" ಅಂತ ಶ್ರೀ ರಘುಪ್ರೇಮ ತೀರ್ಥರು ಅಂದರು. ಈ ಮಾತಿಗೆ ನಿರುತ್ತರವಾಗಿ ಒಡಂಬಟ್ಟಂತಾದರೂ, (ಅವರಲ್ಲಿ ಐವತ್ತರವತ್ತು ಸಹಸ್ರ ರೂಪಾಯಿಗಳಿದ್ದ ಪ್ರಯುಕ್ತ) ಆ ನಿರ್ಜನ ಪ್ರದೇಶವಾದ ಶ್ರೀ ಟೀಕಾರಾಯರ ಗುಡಿ ಹತ್ತಿರ ಇರಲು ಭಯಗ್ರಸ್ತರಾದರು. ಮತ್ತು ಅಲ್ಲಿದ್ದರೆ ಶ್ರೀ ಟೀಕಾರಾಯರ ದರ್ಶನಾರ್ಥ ಬಹುಜನಗಳು ಬರೋಣದರಿಂದ ಅನಿಮಿತ್ತ ಹೆಚ್ಚು ಖರ್ಚಾಗುವದೆಂಬ ಲೋಭತನದಿಂದಲೂ, "ನಾವು ಇಲ್ಲಿಯೇ ಸಂಕಲ್ಪ ಮಾಡಿರೋಣದರಿಂದ ಈ ಸ್ಥಳ ಬಿಟ್ಟು ಬರುವಂತಿಲ್ಲ" ವೆಂದು ಪುನಃ ಅದೇ ಅಭಿಪ್ರಾಯವನ್ನು ಪುಷ್ಟೀಕರಿಸಿದರು. "ಸ್ವಾಮಿ! ತಾವು ಶ್ರೀ ಟೀಕಾಕೃತ್ಪಾದರ ಸನ್ನಿಧಾನವೆಂದು ಇಲ್ಲಿ (ಮಳಖೇಡದಲ್ಲಿ) ಚಾತುರ್ಮಾಸ್ಯ ಸಂಕಲ್ಪ ಮಾಡಿದ್ದೀರೋ ಅಥವಾ ಮಳಖೇಡಗ್ರಾಮ ಗ್ರಾಮವೆಂದು ಸಂಕಲ್ಪಮಾಡಿದ್ದೀರೋ? ಇಲ್ಲವೋ" ಅಂತ ಪ್ರಶ್ನೆ ಮಾಡಿದರು. "ಆದರೆ ಆ ಶ್ರೀ ಟೀಕಾರಾಯರ ವೃಂದಾವನ ಹತ್ತಿರ ಇರುವ ನಮ್ಮಿಂದ ಕಟ್ಟಿಸಲ್ಪಟ್ಟ ಛತ್ರದಲ್ಲಿ ಇರಬಹುದಾದರೂ ಅದು ನಿರ್ಜನ ಪ್ರದೇಶ, ಅಲ್ಲಿ ಕಳ್ಳರ ಬಾಧೆಯುಂಟು, ಪ್ರಯುಕ್ತ ಅಲ್ಲಿ ಹೋಗಿ ಇರುವುದು ಸಾಧ್ಯವಿಲ್ಲ" ಅಂತ ಉತ್ತರ ಕೊಟ್ಟರು. "ಸ್ವಾಮಿ! ಯತಿಗಳಾದ ನಮ್ಮಗಳಿಗೆ ಭಯವೇತಕ್ಕೆ? ಮತ್ತು ನಾವು ಕೌಪೀನ ಧಾರಿಗಳು ಆದ್ದರಿಂದ, ಆ ಕಳ್ಳನು ಆಶೆಪಡಲಾರ" ಅಂತ ಇವರು ಪ್ರತ್ಯುತ್ತರ ಕೊಟ್ಟರು. ಹಾಗಲ್ಲ, ಯದ್ಯಪಿ ನಮ್ಮಲ್ಲಿ ಏನೂ ಇರದಿದ್ದರೂ, ಆ ರಾಮದೇವರು ಇದ್ದಾರಲ್ಲ! ಈ ರಾಮದೇವರ ಆಭರಣಾದಿಗಳು ಹಾಗೂ ಪೂಜಾ ಸಲಕರಣಗಳಾದ ಬೆಳ್ಳಿ, ಬಂಗಾರ ಸಾಮಾನುಗಳು ಇರುವವು" ಎಂದು ಸೂಚಿಸಿದರು. "ಸ್ವಾಮಿ ಸನ್ಯಸ್ತರಾದ ನಮ್ಮಗಳಿಗೆ ಆ ಪದಾರ್ಥಗಳ ಬಗ್ಗೆ ಲೋಭವ್ಯಾಕೆ? ಯಾದೃಚ್ಛಿಕವಾಗಿ ಇರುವ ಪರಿಯಂತರ ಇರಲಿ, ಹೋದರೆ-ಹೋಗಲಿ, ಅವುಗಳ ಇರುವಿಕೆಗಾಗಿ ನಾವು ಸಂತೋಷಪಡುವ ಕಾರಣವಿಲ್ಲ, ಇನ್ನು ರಾಮದೇವರ ವಿಷಯ 'ತನ್ನನ್ನೇ-ತಾನು ರಕ್ಷಿಸಿಕೊಳ್ಳಲು ಅಸಮರ್ಥನಾದ ಶ್ರೀ ರಾಮದೇವರು ನಮ್ಮನ್ನೇನು ಸಂರಕ್ಷಿಸುವನು? ಅಂತಹ ಅಸಮರ್ಥ ದೇವರನ್ನು ಪೂಜಾ ಮಾಡೋಣದರಿಂದ ಪ್ರಯೋಜನವೇನು? ಶ್ರೀ ಮದಾಚಾರ್ಯರಿಂದ ಅರ್ಚಿತವಾಗಿ ಈವರೆಗೂ ಪೂಜಾ ನಡೆಯುತ್ತ ಬಂದಮೇಲೆ ಮಹಾ ಸನ್ನಿಧಾನವಿರಲೇಬೇಕು. ಈ ಸನ್ನಿಧಾನ ನಿಮಿತ್ತ ಕಳ್ಳಕಾಕರಿಗೆ ಭಯವುಂಟಾಗಬೇಕು. ಆ ಭಯವಿಲ್ಲದಂತಾಗಿ ಕಳ್ಳನಿಗೆ ತೆಗೆದುಕೊಂಡು ಹೋಗುವುದಕ್ಕೆ ಧೈರ್ಯವಾಗುವುದಾದರೆ ಆ ಮಹಾ ಸನ್ನಿಧಾನವು ಇಲ್ಲದಿರುವಿಕೆಯೆಂದು ತಿಳಿಯಬೇಕು. ಇಂತಹ ಸನ್ನಿಧಾನ ರಹಿತ ಪ್ರತಿಮಾ ಪೂಜಾ ಮಾಡೋಣದರಿಂದ ಪ್ರಯೋಜನವೇನು? ಕದಾಚಿತ್ ಕಳ್ಳನು ಬಂದರೆ ಈ ಲೋಹ ಪ್ರತಿಮಾವನ್ನು ಅಪೇಕ್ಷಿಸಿ ಬರಲಾರ; ಅವನು ಕನಕ, ರತ್ನಗಳಿಗಾಗಿ ಬಂದು ಅವುಗಳನ್ನು ತೆಗೆದುಕೊಂಡು ಹೋಗುವ ಭರದಲ್ಲಿ ಈ ಲೋಹ ಪ್ರತಿಮಾಗಳನ್ನು ತೆಗೆದುಕೊಂಡು ಹೋಗಿ

ತಮಗೆ ಬೇಕಾದ ಆಭರಣ ಪದಾರ್ಥಗಳನ್ನು ತೆಗೆದುಕೊಂಡು ಈ ಪ್ರತಿಮಾಗಳನ್ನು ಎಲ್ಲಿಯೋ ಭಾವಿ, ಕೆರೆ, ನದೀಪಾಲು ಮಾಡಬಹುದು. ಆದರೆ ಆ ಪ್ರತಿಮಾದಲ್ಲಿ ಯೋಗ್ಯ ಸನ್ನಿಧಾನ ಇರುವ ಪರ್ಯಂತರ ಇಂತಹ ಅನರ್ಥಕ್ಕೆ ಆಸ್ಪದವೇ ಇರಲಾರದು. ಒಂದುವೇಳೆ ಸಂಭವಿಸಿದರೆ ತಾವುಗಳೆ ಮಾಡಬೇಕೆಂದರೆ ಆ ಕಳ್ಳನು ಬಂದ ಕೂಡಲೇ ಅವನಿಗೆ ಬೇಕಾದ ಕನಕ, ರತ್ನಾಭರಣಗಳು ತಥಾ ಬೆಳ್ಳಿಯ ಪದಾರ್ಥಗಳನ್ನು ಯಾವ ಗಲಾಟೆ ಮಾಡದೆ ಸಂತೋಷದಿಂದ ತೆಗೆದುಕೊಟ್ಟರೆ, ಅವನೂ ಸಂತೋಷದಿಂದ ತೆಗೆದುಕೊಂಡು ಆ ಪ್ರತಿಮಾಗಳ ತಂಟೆಗೆ ಬರಲಾರ" ಅಂತ ಸಮಾಧಾನ ಹೇಳಿದರು. "ನೀವು ಹೇಳುವ ಮಾತುಗಳೆಲ್ಲವೂ ಯೋಗ್ಯವಾದವುಗಳೇ. ಆದರೆ, ಇಷ್ಟುದಾರಢ್ಯ ನಮ್ಮಲ್ಲಿಲ್ಲ. ಪ್ರಯುಕ್ತ ನಾವು ಅಲ್ಲಿಗೆ ಬರಲಾರೆವು. ಮತ್ತೆ ಅಲ್ಲಿಯ ಖರ್ಚು ಹೆಚ್ಚು ಬರುತ್ತದೆ. ನಮ್ಮದು ಬಡ ಮಠ" ಅಂತ ಅಂದರು. "ಸ್ವಾಮಿ! ನಾವು ಖರ್ಚಿಗೆ ಆಲೋಚನೆ ಮಾಡತಕ್ಕದ್ದಲ್ಲ. 'ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ' ಎಂಬುದು ನನ್ನ ಜೀವ ಮಂತ್ರವಾಗಿದ್ದು, ಈವರೆಗೂ ಅದನ್ನೇ ಅನುಭವದಲ್ಲಿ ತಂದುಕೊಂಡಿದ್ದೇನೆ. ಮುಂದೆಯೂ, ಅನುಭವದಲ್ಲಿರುತ್ತದೆಂಬ ನಿಶ್ಚಯ ಜ್ಞಾನವಿದೆ. ಪ್ರಯುಕ್ತ ಎಷ್ಟು ಖರ್ಚು ಬಂದರೂ ನಮ್ಮ ಸ್ವಾಮಿ ನಿರ್ವಾಹ ಮಾಡುತ್ತಾನೆ. ಅಲ್ಲಿಗೆ ಹೋಗುವುದೇ ಯೋಗ್ಯ". ಎಂದು ಆಗ್ರಹಪೂರ್ವಕ ಹೇಳಿದರು. "ಹಾಗಾದರೆ ಹಗಲು ಮಾತ್ರ ಅಲ್ಲಿದ್ದು, ಸಾಯಂಕಾಲ ಈ ಮನೆಗೆ ಬರುತ್ತೇವೆ. ಪುನಃ ಮರುದಿನ ಪ್ರಾತಃಕಾಲ ಅಲ್ಲಿಗೆ ಬರುತ್ತೇವೆ. ಇದಕ್ಕೂ ಹೆಚ್ಚು ಧಾರಢ್ಯ ಮಾಡುವದು ನಮ್ಮಿಂದ ಸಾಧ್ಯವಿಲ್ಲ" ಅಂತ ಸ್ಪಷ್ಟವಾಗಿ ಹೇಳಿದರು. ಹಾಗೆ ಆಗಲಿ ಅಂದು, ಆ ಸಾಯಂಕಾಲವೇ ಇವರು (ಈ ಚರಿತ್ರ ನಾಯಕರು) ಶ್ರೀ ಟೀಕಾರಾಯರ ಸಮೀಪ ಇದ್ದ ಛತ್ರಕ್ಕೆ ತಮ್ಮ ಪರಿವಾರ ಸಹಿತ ಹೋಗಿ ವಾಸಮಾಡಿದರು. ಮರುದಿನ ಮುಂಜಾನೆ ಶ್ರೀರಘುಕಾಂತತೀರ್ಥರು ಹಾಗೂ ಶ್ರೀ ರಘುದಾಂತತೀರ್ಥರೂ ಶ್ರೀ ರಾಮದೇವರ ಪೆಟ್ಟಿಗೆ ಹಾಗೂ ದೇವರ ಪೂಜಾ ಸಾಮಗ್ರಿಗಳು ಸಹಿತ ಬಂದರು. ಆ ದಿವಸದಾರಭ್ಯ ಮಳಖೇಡದಲ್ಲಿದ್ದ ಯಾವತ್ತೂ ಬ್ರಾಹ್ಮಣರಿಗೆ ತೀರ್ಥ ಪ್ರಸಾದಕ್ಕೆ ಬರುವುದಾಗಿ ಆಮಂತ್ರಣವನ್ನು ಕೊಟ್ಟು, ಇದನ್ನು ನಿರ್ವಾಹ ಮಾಡಲೋಸುಗ ಇನ್ನೂ ತಮ್ಮ ಕೆಲವು ಪರಿವಾರದವರನ್ನು ಪರಿಚಾರಕ್ಕಾಗಿ ಕರೆಸಿಕೊಂಡರು. ಇಲ್ಲಿ ದಿನೇ ದಿನೇ ಬ್ರಾಹ್ಮಣ ಸಂತರ್ಪಣವೂ ಹಾಗೂ ಇವರಿಗೆ ಬೇಕಾದವರು ಬಂದು ಹೋಗುವುದೂ, ಬಂದು ಹೋಗುವವರಲ್ಲಿ ಕೆಲವು ತಪ್ತ-ಮುದ್ರಾ ಸ್ವೀಕರಿಸುವದು, ಇತ್ಯಾದಿ ವೈಭವ ನಡೆಯಿತು.

೩. ಪ್ರತಿಮಾದಿಗಳ ವೈಭವವನ್ನು ಅಧ್ಯಾತ್ಮಪರ ಚಿಂತಿಸಿದರು.

ಅತ್ತ ಉತ್ತರಾದಿ ಮಠದಿಂದ ಪ್ರೇರಿತರಾಗಿ ಮಳಖೇಡದಲ್ಲಿ ಈ ನೂತನ ಯತಿಗಳ ಪ್ರಭಾವ ಯಾವ ರೀತಿ ಇರುವದೋ ಎಂದು ನಿರೀಕ್ಷೆಗೊಂಡ ಅಗ್ನಿಹೋತ್ರಿ ಹನುಮಂತಾಚಾರ್ಯ ಪ್ರಭೃತಿಗಳು ಮನದಲ್ಲಿ ಈರೀತಿ ನೆನೆದರು. ಅದೇನೆಂದರೆ 'ಆ ನೂತನ ಯತಿಗಳು ಪ್ರಭಾವ ಶಾಲಿಗಳಾದ ಮುತ್ತಿಗಿ ಆಚಾರ್ಯರು. ತಮ್ಮ ಪ್ರಭಾವದಿಂದ ಬಲಾತ್ಕಾರದಿಂದಲಾದರೂ ನಮಗೆ ತಪ್ತಮುದ್ರಾ ಹಾಕೋಣ, ಮತ್ತೇನಾದರೂ ಅಪಮಾನ ಮಾಡೋಣ ಇತ್ಯಾದಿ

ಅನರ್ಥವಾದೀತು' ಎಂಬ ಭೀತಿಯಿಂದ ರಾಯಚೂರಲ್ಲಿಯೇ ಇದ್ದುಕೊಂಡು, ಅಲ್ಲಿಯ ವಾರ್ತಾ ತಿಳಿದುಕೊಳ್ಳೋಣ, ಅಲ್ಲಿಂದ ತಮ್ಮ ಪಕ್ಷಪಾತಿಗಳಿಗೆ ಸಂದೇಶ ಕಳಿಸೋಣ ಇತ್ಯಾದಿ ಕ್ಷುದ್ರ (ಕೆಟ್ಟ) ಕೆಲಸವನ್ನು ಮಾಡುತ್ತಾ ಕುಳಿತದ್ದಲ್ಲದೆ, ಈ ನೂತನ ಸ್ವಾಮಿಗಳಿಗೆ ವಿಷ (poison) ಪ್ರಯೋಗ ಮಾಡಿಸಿದರು. ಇದರಿಂದ ಈ ಚರಿತ್ರೆ ನಾಯಕರಿಗೆ ಏಕಾ-ಏಕೀ ತೀಕ್ಷ್ಣ ಜ್ವರ ಬರಹತ್ತಿತು. ಈ ಜ್ವರವು ದಿನೇ-ದಿನೇ ಉಲ್ಬಣಗೊಳ್ಳುತ್ತಿದ್ದರಿಂದ, ಈ ಅವಸ್ಥೆಯನ್ನು ವಿಜಾಪುರದ ಡಾಕ್ಟರ ಮಂಗಳವೇಢ ಗೋವಿಂದರಾಯರಿಗೆ ತಿಳಿಸಲಾಯಿತು. ಕೂಡಲೇ ಆತನು ಹಾಗೂ ಕೊರ್ತಿ ರಾಮರಾಯನೆಂಬ ವೈದ್ಯನೂ ಕೂಡಿ ಮಳಖೇಡಕ್ಕೆ ಬಂದು ಚಿಕಿತ್ಸಾ ಮಾಡಲು, ದಿನೇ-ದಿನೇ ಜಾಡ್ಯವು ಕಡಿಮೆಯಾಗುತ್ತಾ ನಡೆಯಿತು. ಆದಾಗ್ಯೂ ಇಲ್ಲಿ ವಿರೋಧ ಪಕ್ಷ ಇರೋಣದಿಂದ ಇಲ್ಲಿರುವದು ಹಿತಕರವಲ್ಲ. ಆದ್ದರಿಂದ ಇಲ್ಲಿಂದ ಹೊರಡುವುದೇ ಯೋಗ್ಯವೆಂದು ನಿರ್ಧರಿಸಿ ನಾರಾಯಣಪೇಟೆಗೆ ಪ್ರಯಾಣೋನ್ಮುಖರಾದರು. ಆದರೆ ಇನ್ನೂ ಚಾತುರ್ಮಾಸ ಅವಧಿ ಮುಗಿದಿರಲಿಲ್ಲವಾದ್ದರಿಂದ ಶ್ರೀ ರಘುಕಾಂತತೀರ್ಥರು ಹಾಗೂ ಶ್ರೀ ರಘುದಾಂತತೀರ್ಥರೂ ಹೊರಡಲು ಸಿದ್ಧರಾಗಿರಲಿಲ್ಲ. ಈವರೆಗೂ ಅನ್ನ ಸಂತರ್ಪಣಾದಿಗಳ ಖರ್ಚು ನಿಮಿತ್ತ ಸುಮಾರು ಎಂಟುನೂರು ರೂಪಾಯಿಗಳವರೆಗೂ ಸಾಲ ಆಗಿತ್ತು. ಇದಕ್ಕಾಗಿ 'ಯಾಲಿ ರಾಮರಾಯ' ನೆಂಬ ಗೃಹಸ್ಥನನ್ನು (ಈತನು ಪೂರ್ವಾಶ್ರಮದ ಶಿಷ್ಯನು) ಕರೆಸಿ ಆತನ ಮೂಲಕ ದ್ರವ್ಯವನ್ನು ತರಿಸಿ ಆ ಸಾಲವನ್ನು ತೀರಿಸಿದರು. ಮತ್ತು ಬೊಜ್ಜಿ ಗುರುರಾಜಾಚಾರ್ಯರನ್ನು ನಾರಾಯಣಪೇಟೆಗೆ ಕಳಿಸಿ ಮೇನೆ, ಭಂಡಿ, ಕುದುರೆ ವಗ್ಯೆರೆ ವಾಹನಗಳನ್ನು ತರಿಸಿ ತಥಾ ಆಳುಗಳನ್ನು ಕರೆತರಿಸಿ ಪ್ರಯಾಣ ಸನ್ನಾಹವನ್ನು ಮಾಡಿಕೊಂಡರು. ಇಷ್ಟರಲ್ಲಿ ಶ್ರೀ ರಘುಕಾಂತತೀರ್ಥರಲ್ಲಿ ಇದ್ದ ದ್ರವ್ಯಕ್ಕಾಗಿ ಕಾದುಕೊಂಡಿದ್ದ ಅವರ ಹಿತಚಿಂತಕರಂತಿದ್ದವರು ಅವರ ಬುದ್ಧಿ-ಬೇಧವನ್ನು ಮಾಡಿದರು. ಇದರಿಂದ ಪ್ರಥಮದಲ್ಲಿ ಎಲ್ಲರೂ ಚಾತುರ್ಮಾಸ್ಯ ಸಂಕಲ್ಪ ಮುಗಿದ ಕೂಡಲೇ ಆದವಾನಿಗೆ ಹೋಗುವದೆಂದು ಗೊತ್ತುಪಡಿಸಿದ್ದನ್ನು ನಿರಾಕರಿಸುವಂತಾಯಿತು. ಇವರು (ಈ ಚರಿತ್ರ ನಾಯಕರು) ಪ್ರಯಾಣ ಸಿದ್ಧರಾದದ್ದು ನೋಡಿ ಶ್ರೀ ರಘುದಾಂತತೀರ್ಥರನ್ನು ಮತ್ತು ಇವರನ್ನು ಕೂಡಿಸಿಕೊಂಡು "ನಾವು ಪೂರಾ ವೃದ್ಧರಾಗಿದ್ದೇವೆ", ಈ ಶ್ರೀಟೀಕಾಕೃತ್ಪಾದರ ಸನ್ನಿಧಾನದಲ್ಲಿಯೇ ವೃಂದಾವನಸ್ಥರಾಗುವ ಅಪೇಕ್ಷೆ ಇದೆ. ಆದ್ದರಿಂದ ನಾವು ಶ್ರೀ ಮದಾಚಾರ್ಯರಿಂದ ಅರ್ಚಿತವಾಗಿ ನಮ್ಮ ಮಠಕ್ಕೆ ಮೂಲ ರಾಮಚಂದ್ರನೆನಿಸಿದ ಪ್ರತಿಮಾ ನಮ್ಮಲ್ಲಿ ಇರತಕ್ಕದ್ದು, ಇನ್ನುಳಿದ 'ದಿಗ್ವಿಜಯ ರಾಮ' 'ಕೋದಂಡರಾಮ' ಪ್ರತಿಮಾಗಳಲ್ಲಿ ನಿಮ್ಮಿಬ್ಬರ ಪೈಕಿ ಯಾರು ಯಾವುದನ್ನು ಅಪೇಕ್ಷಿಸುವಿರೋ ಅದನ್ನು ಕೊಡುತ್ತೇವೆ. ತೆಗೆದುಕೊಂಡು ನಿಮ್ಮ ಮನ ಬಂದಂತೆ ವರ್ತಿಸಿರಿ. ಈಗ ನಿಮ್ಮ ವಿಚಾರಗಳನ್ನು ಹೇಳಿರಿ ಅಂತ ಶ್ರೀ ರಘುಕಾಂತತೀರ್ಥರು ಕೇಳಿದರು. ಆಗ ಶ್ರೀ ರಘುದಾಂತತೀರ್ಥರು (ಟಂಕಸಾಲಿ ಸ್ವಾಮಿಗಳು) ಅಂದದ್ದೇನೆಂದರೆ "ನಾವು ಉಭಯರು ಕೂಡಿಯೇ ಎರಡು ಮೇನೆ, ಐದಾರು ಭಂಡಿ, ನಾಲ್ಕಾರು ಕುದುರೆಗಳೊಂದಿಗೆ ಸಂಚಾರ ಮಾಡತಕ್ಕದ್ದು (ಆ ಕಾಲದಲ್ಲಿ ಮೋಟಾರುಗಳ ಪ್ರಚಾರ ವಿಶೇಷವಿದ್ದಿಲ್ಲ). ಇದಕ್ಕೆ ತಕ್ಕ ಸಿಬ್ಬಂದಿಗಳ

ಖರ್ಚಿಗಾಗಿಯೂ, ನಮ್ಮ ಉಭಯರ ಖರ್ಚಿಗೂ ಮತ್ತು ಇಲ್ಲಿಯ ತಮ್ಮ ಖರ್ಚಿಗೆ ಕಳಿಸುವದಕ್ಕೂ, ಅನುಕೂಲವಾಗಬೇಕಾದರೆ ಪ್ರತಿನಿತ್ಯ ಐವತ್ತು (೫೦) ರೂಪಾಯಿಗಳಂತ ಸಂಚಾರದಿಂದ ಸಂಪಾದನೆ ಮಾಡಿದರೆ ಅನುಕೂಲವಾಗುತ್ತದೆ. ಇದಕ್ಕಾಗಿ ಮಧ್ಯಾಹ್ನ ಪೂಜಾಕ್ಕೆ ನಲವತ್ತು (೪೦) ರೂಪಾಯಿ, ಸಾಯಂಕಾಲ ಪೂಜಾಕ್ಕೆ ಹತ್ತು (೧೦) ರೂಪಾಯಿಯಂತೆ ತಿಂಗಳಿಗೆ ಮೂರು ಸಾವಿರ ರೂಪಾಯಿಗಳು (೩೦೦೦) ತಮಗೆ ಕಳಿಸಲಿಕ್ಕೂ ವಿನಿಯೋಗಿಸಿ, ನಮಗೂ, ಅವರಿಗೂ (ಈ ಚರಿತ್ರ ನಾಯಕರಿಗೂ) ಪೂರ್ವಾಶ್ರಮ ಮಕ್ಕಳು ಒಬ್ಬೊಬ್ಬರಿದ್ದಾರೆ. ಅವರುಗಳಿಗೂ ಕುಟುಂಬವಿರೋಣದರಿಂದ ಆ ಶ್ರೀಪಾದ ಪುತ್ರರಿಗೆ ಆಗಿ ಉಳಿದ ದ್ರವ್ಯವನ್ನು ಸಮವಾಗಿ ಹಂಚಿ ಕೊಡುವದು. ಇದರಲ್ಲಿ ಒಂದೊಂದು ದಿವಸ ಕೈಯಿಂದ ಖರ್ಚು ಬೀಳುತ್ತಿರುತ್ತದೆ. ಮತ್ತು ಐಚ್ಛಿಕವಾಗಿ ಪಾದ ಪೂಜಾ ಕಟ್ಟಳೆ ಐದು (೫) ರೂಪಾಯಿ. ಹೆಚ್ಚು ಆದಾಯ ಉಂಟಾದರೆ ಮಠಕ್ಕೆ ಬೆಳ್ಳಿ, ಬಂಗಾರ ಪದಾರ್ಥಗಳನ್ನು ಮಾಡಿಸುತ್ತ ಮಠವನ್ನು ಊರ್ಜಿತಾವಸ್ಥೆಗೆ ತರುತ್ತೇವೆ. ಮತ್ತು ತಪ್ತಮುದ್ರಾ ಕೊಡುವ ಈ ಕ್ರಮವನ್ನು ಮುಂದುವರೆಸುತ್ತೇವೆ. ಈ ನಿಮಿತ್ತ ಪರಮತಗಳ ವಿರೋಧವನ್ನು ನಿರಾಕರಣೆ ಮಾಡಲು ಈ ನಮ್ಮ ಕರಕಮಲ ಸಂಜಾತರು ಸಮರ್ಥರಿದ್ದಾರೆ." ಅಂತ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆ ಮೇಲೆ ಶ್ರೀ ರಘುಕಾಂತತೀರ್ಥರು (ಕೋಡಂಗಲ್ ಸ್ವಾಮಿಗಳು) ಇವರ (ಶ್ರೀ ರಘುಪ್ರೇಮ ತೀರ್ಥರ) ಮುಖವನ್ನು ನೋಡಿದರು. ಅವರ ನೋಡುವಿಕೆಯ ಇಂಗಿತವನ್ನು ತಿಳಿದು "ಸ್ವಾಮಿ! **'ನಹಿ ದೃಷ್ಟಾಂತೇ ಸರ್ವಸಾಮ್ಯಂ'** ಎಂಬಂತೆ ಪರಮಾತ್ಮನು ಬ್ರಹ್ಮದೇವರನ್ನು ಸೃಷ್ಟಿಮಾಡಿ ಆ ಮಹರಾಯನಿಗೆ ವಿರಾಟ್‌ದೇಹವನ್ನು ಕೊಟ್ಟು ಜಗತ್ ಸೃಷ್ಟಿ ಮಾಡಲು ಆಜ್ಞಾ ಮಾಡಲು ಮಾತ್ರ ಮತ್ತು ಆ ಬ್ರಹ್ಮದೇವರು ಇಚ್ಛಾ ಮಾಡೋಣ ಮಾತ್ರ, ಹ್ಯಾಂಗೆ ಸೃಷ್ಟಿಗೆ ಕಾರಣವಾಯಿತೋ ಅದರಂತೆ, ತಮ್ಮಗಳ ದ್ವಾರ ಬಂದ ಈ ನನ್ನ ಸನ್ಯಾಸ ಕವಚದಲ್ಲಿ ನನಗೆ (ಉಪಾಸನಾಕ್ಕೆ) ಬೇಕಾದ ಎಲ್ಲಾ ಭಗವದ್ರೂಪಗಳೂ ಅಡಕವಾಗಿರುವವು. ಅಂದರೆ ನನ್ನ ಹೃತ್‌ಪದ್ಮ ಸ್ಥಿತ ಬಿಂಬರೂಪೀ ಸಂಕರ್ಷಣನೆಂತಲೂ, ಮೂಲೇಶನೆಂತಲೂ, (ಮೂಲ ಪುರುಷನೆಂತಲೂ) ಪ್ರಾಜ್ಞನೆಂತಲೂ ಕರೆಸಿಕೊಳ್ಳುವ ಪರಮಾತ್ಮ ವಾಯುದೇವರಿಂದ ಉಪಾಸ್ಯನಾಗಿ **'ದೀನಂ-ದೂನಂ ಅನಾಥಮೇನಮುದ್ಧರ'** ಅಂತ ನನಗಾಗಿ ಸಿಫಾರಸ್ಸು ಮಾಡಿಸಿಕೊಳ್ಳುತ್ತಾ ಇರುವ ಪರಮಾತ್ಮನೇ ಶ್ರೀ ಮದಾಚಾರ್ಯ ಕರಾರ್ಚಿತ **ಮೂಲ ರಾಮನು.** ಆ ಹೃತ್‌ಪದ್ಮ ದಳ ಸಂಚಾರಿಯಾಗಿ ಪ್ರೇರಕನಾದ ಪ್ರಾದೇಶ ನಾಮಕನೇ **ದಿಗ್ವಿಜಯ ರಾಮ.** ಈ ನನ್ನ ಹೃತ್‌ಪದ್ಮದ ಅಗ್ರ ಭಾಗದಲ್ಲಿದ್ದು ಅಗ್ರೇಶನಾಮಕನಾಗಿ ನನ್ನ ಜ್ಞಾನೇಚ್ಛಾಕ್ರಿಯಾಗಳಿಗೆ ಪ್ರಬೋಧತಾ ಕೊಟ್ಟು ಸನ್ಮಾರ್ಗ ಗಾಮಿಯನ್ನಾಗಿ ಮಾಡಲು ಇಂದ್ರಿಯಗಳನ್ನು ನಿಯಮನ ಮಾಡತಕ್ಕ ಆ ಪರಮಾತ್ಮನೇ **ಕೋದಂಡರಾಮ.** ಅಂದ ಮೇಲೆ ಈ ರೂಪಗಳು ಎಡೆಬಿಡದೇ ಸರ್ವಕಾಲದಲ್ಲಿ ನನ್ನಿಂದ ಉಪಾಸ್ಯವಾಗಿವೆ. ಹೀಗಿದ್ದರೂ ಈ ಲೋಹಾತ್ಮಕ ಬಾಹ್ಯ ಪ್ರತಿಮಾ ಕೇವಲ ಅನವಶ್ಯಕವೆಂದು ಹೇಳಲಾಗದು. ಈ ಪ್ರತಿಮಾ ಪೂಜಾದಿ ಸ್ಥೂಲ ಪೂಜಾ ಅಪ್ರಬುದ್ಧರ ಅಧಿಕಾರಕ್ಕೆ ಸಂಬಂಧಪಟ್ಟದ್ದು. ಶ್ರೀ ಮದಾಚಾರ್ಯರೇ ಮೊದಲಾದ ಸುಪ್ರಬುದ್ಧ

ಮಹಾಜ್ಞಾನಿಗಳೂ ಸಹ ಶಿಷ್ಯಸಂಪ್ರದಾಯ ಹಾಗೂ ಲೋಕಶಿಕ್ಷಣಾರ್ಥ ಈ ಸ್ಥೂಲ ಪೂಜಾವನ್ನು ಮಾಡಿದ್ದಾರೆ ಎಂದಲ್ಲಿ '**ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ। ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥**' ಎಂಬಂತೆ ಅಪ್ರಬುದ್ಧರಾದವರು ಪ್ರಬುದ್ಧದಶಾಕ್ಕೆ ಬರುವವರೆಗೂ, ಸುಲಭವಾಗಿ ಧ್ಯಾನಕ್ಕೆ ವಿಷಯವಾಗಬೇಕೆಂದೂ, ಲೋಕ ಸಂಗ್ರಹಾರ್ಥವೂ ಪೂಜಾ ಮಾಡಿದ್ದಾರೆಯೇ ಹೊರ್ತು ಈ ಪ್ರತಿಮಾ ಪೂಜೆಯೇ ಪ್ರಾಮುಖ್ಯವೆಂದು ಮಾಡಿಲ್ಲ. ಯತಿಗಳಿಗೆ **ಧ್ಯಾನ ಪ್ರವಚನಾಭ್ಯಾಂ ಚ ಂಥಾ ಯೋಗ್ಯ ಮುಪಾಸನಂ** ಅಂತ ಇರುವದರಿಂದ ಸುಧೃತಿಗೆ ಕಾರಣವಾದ ಧ್ಯಾನ ಯೋಗವನ್ನು, ಲೋಕೋದ್ಧಾರಕ್ಕಾಗಿ ಸಚ್ಛಿದ್ಧಾಂತ ಪ್ರವಚನವನ್ನೂ (ಕೇವಲ ಪುಸ್ತಕ ಮುಂದಿಟ್ಟುಕೊಂಡು ಗಿಳಿ ಪಾಠದಂತೆ ಕಲಿತ ವಾಕ್ಯವನ್ನೇ ಪ್ರತಿ-ಪಾದನ ಮಾಡೋಣವಲ್ಲ) ಮಾಡುತ್ತಾ ಕೇವಲ ಸಜ್ಜನರು ದುರ್ಮಾರ್ಗಗಾಮಿಗಳಾಗಿ ಕೆಟ್ಟು ಹೋಗುವದನ್ನು ತಪ್ಪಿಸಿ ಸನ್ಮಾರ್ಗಕ್ಕೆ ತಿರುಗಿಸುವಂತಹ ಪ್ರವಚನವನ್ನು ಮಾಡುವ ಸಲುವಾಗಿ ಅನುಪಾಧಿಕ ಸಂಚಾರ ಮಾಡುವದೇ ನಮ್ಮ (ಯತಿ) ಧರ್ಮ. ಏತದ್ವಿಪರೀತ ಅಂದರೆ ದ್ರವ್ಯಸಂಪಾದದಾರ್ಥ ಈ ಪ್ರತಿಮಾದಿಗಳ ಪೂಜಾ ಹಾಗೂ ಪ್ರವಚನಾದಿಗಳ ಮಾಡೋಣವು ಅನರ್ಥದಾಯಕ. ಆದರಿಂದ ದ್ರವ್ಯ ಸಂಪಾದನಾರ್ಥ ಈ ಪ್ರತಿಮಾದಿಗಳ ಪೂಜಾ, ದರ್ಶನ ಮಾಡುತ್ತಾ ಯತಿಗಳು ಸಂಚಾರ ಮಾಡೋಣವು ಅಯುಕ್ತ ಮತ್ತು ಅಕ್ಷಮ್ಯ."

"ಈ ಯತ್ಯಾಶ್ರಮ ಸಂಚಾರಕ್ಕೆ ದ್ರವ್ಯ ಸಂಪಾದನೆಯೇ ಧ್ಯೇಯವಾಗಿದ್ದರೆ ಇದು ನನ್ನ ಮನೋಕಾಮನೆಗಳಿಗೆ ಶ್ರಮ ಮತ್ತು ಪರ ಉಪದ್ರವ. ಆದರೂ ಶ್ರಮವನ್ನು ಕಡೆಗಣಿಸಿ ದ್ರವ್ಯ ಸಂಪಾದನವನ್ನೇ ಗುರಿಯಿಟ್ಟುಕೊಂಡು ಸಂಚರಿಸುವ ಬದಲಿ ಯಾವದಾದರೊಂದು ವ್ಯಾಪಾರ (ವಾಣಿಜ್ಯ ವೃತ್ತಿ) ವನ್ನು ಅವಲಂಬಿಸಿದರೆ ಈ ಸಂಚಾರದಿಂದ ಬರುವ ಲಾಭಕ್ಕಿಂತಲೂ ಎಷ್ಟೋ ಪಟ್ಟು ದ್ರವ್ಯ ಲಾಭವಾಗುವುದು."

ಈಷಣಾತ್ರಯಗಳು ಸ್ವಯೋಗ್ಯ ಜ್ಞಾನೋಪಾಸನ ಪ್ರತಿಬಂಧಕಗಳೆಂದು ತ್ಯಾಗ ಮಾಡಿದ ನಾನು ಪುನಃ ಅದನ್ನೇ ಸಂಪಾದಿಸಲು ಪ್ರವೃತ್ತಿ ಹೊಂದುವದಾದರೆ 'ಉಗುಳಿದ ತಾಂಬೂಲವನ್ನು ಪುನಃ ಬಾಯಿಯಲ್ಲಿ ಹಾಕಿಕೊಂಡಂತೆ' ಅನುಚಿತವಾಗುವದಾದ್ದರಿಂದ, ಅಂತಹ ಕಾರ್ಯದಲ್ಲಿ ಪ್ರಸಕ್ತನಾಗಲಾರೆ. ಇದರ ಮೇಲೆ ಶ್ರೀಹರಿಯು ತಾನಾಗಿಯೇ ಅನುಗ್ರಹಪೂರ್ವಕ ಕೊಟ್ಟದ್ದನ್ನೇ ಮಹಾ ಪ್ರಸಾದತ್ವೇನ ಸ್ವೀಕರಿಸಿಕೊಂಡು ಹೋಗುತ್ತೇನೆ. ನನ್ನ ಚರ್ಯೆ ಈ ರೀತಿ ಇರೋಣದರಿಂದ ಇದಕ್ಕೆ ಸಮ್ಮತಪಟ್ಟು, ಅನುಸರಿಸಿಕೊಂಡು ಇರುವವರೇ ನನ್ನ ಸಂಗಡ ಬರುವದಕ್ಕೂ, ಇರುವದಕ್ಕೂ ಅಡ್ಡಿಯಿಲ್ಲ. ಈ ಮಾತು, ಆ ಉಭಯ ಯತಿಗಳಿಗೆ ತತ್ರಾಪಿ ಶ್ರೀ ರಘುದಾಂತ ತೀರ್ಥರಿಗೆ ರುಚಿಸಲಿಲ್ಲ. ಆದರೆ ಆ ಉಭಯ ಯತಿಗಳು ಶಾಸ್ತ್ರಜ್ಞರಾದುದರಿಂದ ಈ ಮಾತುಗಳು ಕೇವಲ ಶಾಸ್ತ್ರೀಯವೂ ಹಾಗೂ ಯತಿಧರ್ಮದ್ದು ಆಗಿರೋಣದರಿಂದ ಖಂಡಿಸಲು ಬಾರದಂತಾಗಿ, ಇವರು ಅಂದದ್ದಕ್ಕೆ ಸಮ್ಮತಿ ತೋರಿಸಬೇಕಾಯಿತು. ಆ ಮೇಲೆ ಆದಿನ ಮಧ್ಯಾನ್ಹ ಶ್ರೀ ಕೋದಂಡರಾಮ ದೇವರನ್ನು ಇವರಿಗೂ, ಶ್ರೀ ದಿಗ್ವಿಜಯ ರಾಮ ದೇವರನ್ನು

ಅವರಿಗೂ (ಶ್ರೀ ರಘುದಾಂತತೀರ್ಥರಿಗೂ) ಶ್ರೀ ರಘುಕಾಂತತೀರ್ಥರು ಕೊಟ್ಟರು. ಶ್ರೀ ಕೋದಂಡರಾಮ ಪ್ರತಿಮಾವನ್ನಲ್ಲದೆ ಆ ಮಠದಲ್ಲಿಯ ಪರಂಪರಾಗತ ವೇದವ್ಯಾಸ ಪ್ರತಿಮಾ ಮತ್ತು ಎರಡು ಶಾಲಿಗ್ರಾಮಗಳನ್ನು ಇವರು ಶ್ರೀ ರಘುಪ್ರೇಮತೀರ್ಥರು ತೆಗೆದುಕೊಂಡರು. ಆಗ ಆ ಮಠದಲ್ಲಿ ಪೂಜಾ ಸಲಕರಣೆಗಳು ಅಂದರೆ ಬೆಳ್ಳಿ ಮಂಟಪ, ಬೆಳ್ಳಿ ತೊಟ್ಟಿಲು, ಬೆಳ್ಳಿ ತಂಬಿಗಿ, ತಾಲಿ, ತಟ್ಟೆ ವಗ್ಗೆರೆ ಎರಡು ಜೊತೆ ಪದಾರ್ಥಗಳಿದ್ದುದರಿಂದ ಒಂದು ಜೊತೆ ಸಾಮಾನುಗಳಲ್ಲಿ ಕೆಲವನ್ನು ಇವರಿಗೂ, ಕೆಲವನ್ನು ಅವರಿಗೂ ಹಂಚಿಕೊಡುವ ಇಚ್ಛಾ ವ್ಯಕ್ತಪಡಿಸಿದರು. ಇದಕ್ಕೆ ಶ್ರೀ ರಘುದಾಂತತೀರ್ಥರು ಒಪ್ಪಲಿಲ್ಲ, ಪ್ರಯುಕ್ತ ಆ ಒಂದು ಜೊತೆಯ ಯಾವತ್ತೂ ಸಾಮಾನುಗಳನ್ನು ಶ್ರೀ ರಘುದಾಂತರಿಗೆ ಕೊಟ್ಟರು. ಮರುದಿವಸ ಶ್ರೀ ರಘುಪ್ರೇಮ ತೀರ್ಥರು ಶೇಡಂ ಮಾರ್ಗವಾಗಿ ನಾಲ್ಕಾರು ದಿನಗಳಲ್ಲಿ ನಾರಾಯಣಪೇಟೆಗೆ ಬಂದು ಸೇರಿದರು.

೩. ತಪ್ತ ಮುದ್ರಾಪ್ರದಾನ ತಪ್ಪರನ್ನಾಗಿಸಿತು.

ಇತ್ತ ಉತ್ತರಾದಿ ಮಠದಿಂದ ಪ್ರೇರಿತರಾಗಿ ಬಂದು ರಾಯಚೂರಿನಲ್ಲಿ ನಿರೀಕ್ಷಿಸುತ್ತ ಕುಳಿತಿದ್ದ ಅಗ್ನಿಹೋತ್ರಿ ಹನುಮಂತಾಚಾರ್ಯ ವಗ್ಗೆರೆ ಪ್ರಭೃತಿಗಳು, ಶ್ರೀ ರಘುಪ್ರೇಮ ತೀರ್ಥರು ಮಳಖೇಡ ಬಿಟ್ಟು ಹೋದದ್ದು ತಿಳಿದುಕೊಂಡು ಏಕಾ-ಏಕೀ ಮಳಖೇಡಕ್ಕೆ ಹೋಗಿ ಶ್ರೀ ರಘುಕಾಂತತೀರ್ಥರೂ ಹಾಗೂ ಶ್ರೀ ರಘುದಾಂತತೀರ್ಥರೂ ವಾಸ ಮಾಡಿಕೊಂಡಿದ್ದ ಮನೆಯನ್ನು ಮುತ್ತಿಗಿ ಹಾಕಿದರು. ಈ ಕಾರ್ಯಕ್ಕೆ ಆ ಸ್ಥಳೀಯ ಉತ್ತರಾದಿ ಮಠಿಯ ಪಕ್ಷಪಾತಿಗಳು ಸಹಾಯಕರಾದರು. ಆ ಯತಿದ್ವಯರ ಮುಂದೆ ಇದ್ದ ಪುಸ್ತಕಗಳನ್ನು ಕೆಲವು ಕಾಗದ ಪುಸ್ತಕಗಳನ್ನು (ಪತ್ರ) (ಜಪ್ತಿಯಂತೆ ಮಾಡಿ) ತಮ್ಮ ಸ್ವಾಧೀನ ತೆಗೆದುಕೊಂಡರು. ಈ ಚರ್ಯವನ್ನು ನೋಡಿ "ಏನಿದು ಹುಡುಗಾಟ? ನೀವು ಯಾರು? ನಮ್ಮ ಪುಸ್ತಕ ಮತ್ತು ಕಾಗದ ಪತ್ರಗಳನ್ನು ಸ್ವಾಧೀನಪಡಿಸಿಕೊಳ್ಳಲು ಕಾರಣವೇನು?" ಅಂತ ಕೇಳಿದರು. "ನಾವು ಉತ್ತರಾದಿ ಮಠದಿಂದ ಆಜ್ಞಪ್ತರಾಗಿದ್ದೇವೆ, ಆದ್ದರಿಂದ ಈ ರೀತಿ ಮಾಡಲಾಗಿದೆ. ಇದರಲ್ಲಿ ನಮಗೆ ಏನಾದರೂ ಸಂಬಂಧ ಪಟ್ಟ ಕಾಗದ ಪತ್ರಗಳಿದ್ದರೆ ತೆಗೆದುಕೊಂಡು ಉಳಿದಿದ್ದು ನಿಮಗೆ ತಿರುಗಿ ಕೊಟ್ಟುಬಿಡುತ್ತೇವೆ" ಎಂದು ನುಡಿಯುತ್ತ ಅವರುಗಳಲ್ಲೊಬ್ಬರು ಶೋಧಿಸತೊಡಗಿದ್ದರು. "ನೀವು ಉಭಯ ಸ್ವಾಮಿಗಳು ದೃಢಾಂಗರಾಗಿದ್ದು ಆ ಮುತ್ತಿಗಿ ಆಚಾರ್ಯರಿಗೆ ನಿಮ್ಮ ಮಠಕ್ಕೆ ಮೂರನೇ ಸ್ವಾಮಿಗಳನ್ನಾಗಿ ಮಾಡಲು ಕಾರಣವೇನು?" ಅಂತ ಕೇಳಿದರು. "ನಮ್ಮ ಮಠಕ್ಕೆ ಬೇಕಾದಷ್ಟು ಸ್ವಾಮಿಗಳನ್ನು ನಿರ್ಮಾಣ ಮಾಡಲು ನಾವು ಸ್ವತಂತ್ರರು, ಈ ವಿಷಯ ನೀವು ಪ್ರಸ್ತಾಪಿಸುವದು ಅನವಶ್ಯಕ" ಅಂತ ಸ್ವಲ್ಪ ಧೈರ್ಯ ತಂದುಕೊಂಡು ಶ್ರೀ ರಘುಕಾಂತ ತೀರ್ಥರೂ ಉತ್ತರಕೊಟ್ಟರು. "ಹಾಗಾದರೆ ನಮ್ಮ ಮಠದ ಶಿಷ್ಯರಿಗೆ ಯಾತಕ್ಕೆ ತಪ್ತ ಮುದ್ರಾ ಪ್ರದಾನ ಮಾಡಿದಿರಿ?" ಎಂದು ಕೇಳಿದರು. "ನಿಮ್ಮ ಮಠದ ಶಿಷ್ಯರಿಗೆ ನಾವು ತಪ್ತಮುದ್ರಾ ಪ್ರದಾನ ಮಾಡಲಿಲ್ಲ, ಯಾರು ಪ್ರದಾನ ಮಾಡಿರುವರೋ, ಅವರನ್ನು ಕೇಳಿಕೊಳ್ಳತಕ್ಕದ್ದು" ಅಂತ ಉತ್ತರಿಸಿದರು. "ಹಾಗಾದರೆ ಈಗ ಅವರು ಇಲ್ಲಿ ಇಲ್ಲವಲ್ಲ?" ಅಂತ ರಭಸದಿಂದ ಕೇಳಿದರು. "ಆಶ್ರಮದಾರಭ್ಯ ಮೊನ್ನಿನವರೆಗೂ ಇಲ್ಲಿಯೇ ಇದ್ದರು. ಈಗ ಅವರು ನಾರಾಯಣ

ಪೇಟೆಕಡೆಗೆ ಹೋಗಿರುವರು. ಅವರು ಇಲ್ಲಿ ಇರುವವರೆಗೂ ಬಾರದೆ, ಅವರು ಇಲ್ಲಿಂದ ಹೋದಮೇಲೆ ಬಂದು ನಮ್ಮನ್ನು ವಿಚಾರಿಸಿದರೆ ನಾವೇನು ಹೇಳುವೆವು? ಬೇಕಾದರೆ ಅವರಿದ್ದಲ್ಲಿಗೆ ಹೋಗಿ ಕೇಳಿಕೊಳ್ಳಬಹುದು" ಅಂತ ಉತ್ತರ ಕೊಟ್ಟರು. "ಹಾಗಾದರೆ ಈ ರೀತಿ ಕೈಕಾಗದ ಬರೆದುಕೊಡಿರಿ" ಅಂತ ಕೇಳಿದರು. "ಅವಶ್ಯ ಬರೆದುಕೊಡುತ್ತೇವೆ" ಅಂದು "ಉತ್ತರಾದಿ ಮಠದ ಶಿಷ್ಯರಿಗೆ ನಾವು ತಪ್ತ ಮುದ್ರಾವನ್ನು ಕೊಡಲಿಲ್ಲ. ಮುಂದೆಯೂ ಕೊಡೋಣೆಲ್ಲ. ಯಾರೂ ಕೊಟ್ಟಿದ್ದಾರೋ ಅವರನ್ನೇ ಕೇಳತಕ್ಕದ್ದು" ಅಂತ ಕೈಕಾಗದವನ್ನು ಬರೆದುಕೊಟ್ಟರು. ಆ ಕಾಗದವನ್ನು ತೆಗೆದುಕೊಂಡು, ಅವರ ಪುಸ್ತಕ ವಗೈರೆ (ಜಪ್ತಿ ಮಾಡಿದ್ದು) ತಿರುಗಿಕೊಟ್ಟು, ಶ್ರೀ ರಘುದಾಂತರಿದ್ದಲ್ಲಿಗೂ ಸಹ ಈ ಪೂರ್ವದಲ್ಲಿಯೇ ಹೋಗಿ ಅವರನ್ನು ಮುತ್ತಿ ಧಾಂದಲೇ ಹಾಕುತ್ತಿರುವವರನ್ನು ಕೂಡಿಕೊಂಡರು. ಅವರಲ್ಲಿಯೂ ಇದ್ದ ಪುಸ್ತಕಗಳನ್ನು ಕಸಿದುಕೊಂಡು "ನೀವು ವೃಥಾಂಗರಾಗಿದ್ದರೂ, ಈ ಮಠಕ್ಕೆ ಶ್ರೀ ಮುತ್ತಿಗಿ ಆಚಾರ್ಯರಿಗೆ ಸನ್ಯಾಸಶ್ರಮ ಕೊಡುವ ಕಾರಣವೇನು?" ಅಂತ ಗರ್ಜಿಸಿದರು. "ಈ ಮಾತುಗಳನ್ನು ನೀವು ಕೇಳುವ ಅವಶ್ಯಕತಾ ಇಲ್ಲ. ನಾವು ಹೇಳುವ ಕಾರಣವೂ ಇಲ್ಲ. ನಮ್ಮ ಮಠಕ್ಕೆ ಬೇಕಾದಷ್ಟು ಜನರನ್ನು ಬೇಕಾದಾಗ ಸ್ವಾಮಿಗಳನ್ನು ಮಾಡಲು ನಾವು ಸ್ವತಂತ್ರರು. ಇದರಲ್ಲಿ ನಿಮ್ಮ (ಉತ್ತರಾದಿ) ಮಠದ ಅಧಿಕಾರವೇನೂ ಇಲ್ಲ" ಅಂತ ಕಣ್ಣುಗಳನ್ನು ಕೆಂಪುಮಾಡಿ ಉತ್ತರಕೊಟ್ಟರು. "ಹಾಗಾದರೆ ನಮ್ಮ ಮಠದ ಶಿಷ್ಯರಿಗೆ ಯಾತಕ್ಕೆ ತಪ್ತಮುದ್ರಾ ಕೊಟ್ಟರೆಂಬುವದನ್ನು ವಿಚಾರಿಸಿದರು." "ಅದು ಅವರಿಗೆ ವಿಚಾರಿಸಿರಿ." ಅಂತ ಹೇಳಿದರು. "ಆ ನೂತನ ಸ್ವಾಮಿಗಳು ತಾವಾಗಿ ನಮ್ಮ ಮಠದ ಶಿಷ್ಯರಿಗೆ ಆಶ್ರಮವಾದ ಮರುದಿನವೇ ತಪ್ತಮುದ್ರಾ ಕೊಡಲಿಕ್ಕೆ - ತಪ್ತಮುದ್ರಾ ಕೋಲುಗಳು ಎಲ್ಲಿಂದ ಬಂದವು?" ಅಂತ ಗಟ್ಟಿಯಾಗಿ ಕೇಳಿದರು. "ಯದ್ಯಪಿ ಆ ತಪ್ತಮುದ್ರಾ ಕೋಲುಗಳು ನಮ್ಮಲ್ಲಿಯೇ ಇದ್ದವು, ಅವರ ಉಪಯೋಗಾರ್ಥ ನಾವೇ ಕೊಟ್ಟಿದ್ದೇವೆ. ಮುದ್ರಾವನ್ನು ಅವರು ನಿಮ್ಮ ಮಠದ ಶಿಷ್ಯರಿಗೆ ಕೊಟ್ಟರೋ ಅಥವಾ ಯಾರಿಗೆ ಕೊಟ್ಟರೋ ನಮಗೆ ತಿಳಿಯದು" ಅಂತ ಉತ್ತರ ಕೊಟ್ಟರು. "ಈಗ ಮುದ್ರಾ ಎಲ್ಲಿರುವವು?" ಅಂತ ಕೇಳಿದರು. "ನಮ್ಮ ಮಠದ ಶಿಷ್ಯರಿಗೆ ತಪ್ತಮುದ್ರಾ ಕೊಡಲಿಕ್ಕೆ ನೀವೇ ಪ್ರೋತ್ಸಾಹಮಾಡಿ, ಈಗ ತಪ್ಪಿಸಿಕೊಳ್ಳಲಿಕ್ಕೆ ಈ ರೀತಿ ಸುಳ್ಳು ಹೇಳುತ್ತಿರಿ, ಇತಃ ಪೂರ್ವ ನಿಮಗೆ ಆಶ್ರಮವಾದ ಕೂಡಲೇ ನೀವು ರಾಯಚೂರಿನಲ್ಲಿ ಚಾತುರ್ಮಾಸ್ಯ ಸಂಕಲ್ಪಕ್ಕೆ ಕೂತಿದ್ದಾಗ, ಆ ಮುತ್ತಿಗಿ ಆಚಾರ್ಯರನ್ನೂ ಕರೆಸಿಕೊಂಡು ಆಗಲೇ ಈ ತಪ್ತಮುದ್ರಾ ಧಾಂದಲೇ ಹಾಕುವ ನಿಮ್ಮ ಯೋಚನೆ ಇದ್ದದ್ದು ನಮಗೆ ಗೊತ್ತಿದೆ. ಅವರು ಆಗ ನಿಮ್ಮನ್ನು ಬಿಟ್ಟು ಹೋದ ಮೇಲೆ ನೀವು ಧೈರ್ಯಗೊಂಡು ಸುರಪುರದ ಯಳಮೇಲಿ ವಿಠ್ಠಲಾಚಾರ್ಯರ ಮುಖಾಂತರ ಶ್ರೀ ಸತ್ಯಧ್ಯಾನರಲ್ಲಿ ಸಂಧಾನ ನಡೆಸಿ, ರಾಜೀ ಮಾಡಿಕೊಂಡಿದ್ದೀರಿ. ಈ ಪೂರ್ವದಿಂದಲೂ ನಮ್ಮ ಮಠದ ಶಿಷ್ಯರಿಗೆ ತಪ್ತಮುದ್ರಾ ಕೊಡುವ ಮನಸ್ಸು ನಿಮಗೆ ಇದ್ದು, ನಿಮಗೆ ಧೈರ್ಯ ಸಾಲದೆ ಅವರನ್ನು ಕರೆದು ಆಶ್ರಮಕೊಟ್ಟು, ಅವರನ್ನು ಈ ಕಾರ್ಯದಲ್ಲಿ ನಿಯೋಜನಾ ಮಾಡಿದ ಕುಟಿಲಾತ್ಮರು ನೀವೇ" ಅಂತ ಅಗ್ನಿಹೋತ್ರಿ ಹನುಮಂತಾಚಾರ್ಯರು ನಿಷ್ಠುರದಿಂದ ನುಡಿದರು. ಸ್ವಾಧೀನ ಪಡಿಸಿಕೊಂಡ ಪುಸ್ತಕಾದಿಗಳನ್ನು ಹಿಂತಿರುಗಿಕೊಡದೆ ತೆಗೆದುಕೊಂಡು ಹೋದರು.

೪. ವಿವಾದ ವಿಷಯ ವಿವರಿಸಲು ಮುಂದಾದರು.

ಇತ್ತ ರಾಯಚೂರಿನಲ್ಲಿ ಬಹುದಿನಗಳಿಂದಲೂ ಉತ್ತಾರಾದಿ ಮಠದಿಂದ ಬಂದು ನಿರೀಕ್ಷಿಸಿಗೊಂಡು ಕುಳಿತಿದ್ದ ಅಗ್ನಿಹೋತ್ರಿ ಹನುಮಂತಾಚಾರ್ಯ ಪ್ರಭೃತಿಗಳು ಮಳಖೇಡಕ್ಕೆ ಹೋದ ವರ್ತಮಾನವನ್ನು ತಿಳಿದುಕೊಂಡು, 'ಅರ್ಷಣಗೀ ರಾಘವೇಂದ್ರರಾಯನು' ಅಲ್ಲಿ (ಮಳಖೇಡದಲ್ಲಿ) ಏನು ನಡೆಯುತ್ತಿದೆಯೋ ಎಂದು ತಿಳಿದುಕೊಳ್ಳುವ ನಿಮಿತ್ತ ತಮ್ಮ ಅನುಯಾಯಿಯಾದ 'ಬ್ಯಾಗನ ವೆಂಕಣ್ಣ' ನೆಂಬುವನನ್ನು ಮಳಖೇಡಕ್ಕೆ ಕಳುಹಿಸಿದನು. ಈತನು ಅಲ್ಲಿಗೆ ಹೋಗುವಷ್ಟರಲ್ಲಿ ಇವರು ಶ್ರೀ ರಘುಪ್ರೇಮತೀರ್ಥರು ನಾರಾಯಣಪೇಟೆಗೆ ಪ್ರಯಾಣ ಮಾಡಿದ್ದು ತಿಳಿದು, ಸಮಾಧಾನಗೊಂಡು ಶ್ರೀ ರಘುದಾಂತತೀರ್ಥರಲ್ಲಿ ಬಂದನು. ಈತನು ಯಾರೆಂಬುದು ಪ್ರಥಮದಲ್ಲಿ ಅವರಿಗೆ ತಿಳಿಯದೆ ಇದ್ದುದರಿಂದ, ಉತ್ತರಾದಿಮಠದಿಂದಲೋ ರಾಯರಮಠದಿಂದಲೋ, ಅಥವಾ ಮತ್ಯಾವ ವಿರೋಧ ಪಕ್ಷದಿಂದಲೋ ಬಂದು, ಮತ್ತೇನಾದರು ಧಾಂದಲೇ ಮಾಡಲು ಬಂದಿರುವನೇನೋ ಎಂಬ ಸಂಶಯದಿಂದ ಗಾಬರಿಗೊಂಡು ಬಾಗಿಲು ಮುಚ್ಚಿಕೊಂಡು ಒಳಗೆ ಕೂತುಕೊಂಡು ವಿಚಾರ ಮಾಡಿ, ಈತನು ಶ್ರೀರಘುಪ್ರೇಮತೀರ್ಥರ ಪಕ್ಷದವನೆಂದು ಮನಗೊಂಡ ಮೇಲೆ ಒಳಗೆ ಕರೆದುಕೊಂಡು, ನಡೆದ ವೃತ್ತಾಂತವೆಲ್ಲವನ್ನು ತಿಳಿಸಿ, ಇನ್ನು ಮೇಲೆ ನಮಗೆ ಶ್ರೀ ರಘುಪ್ರೇಮತೀರ್ಥರು ಪತ್ರವನ್ನು ಬರೆಯಬೇಕೆಂದರೆ ಸಾಂಕೇತಿಕ ಭಾಷದಿಂದಾ ಬರೆಯುವುದಾಗಿ ತಿಳಿಸಿ, ತಮ್ಮಲ್ಲಿಂದ ತೀವ್ರ ಹೊರಟು ಹೋಗಲು ಹೇಳಿದರು. ಆಮೇಲೆ ಆತನು ಶ್ರೀ ರಘುಕಾಂತತೀರ್ಥರಲ್ಲಿ ಹೋಗಿ ನೋಡಲು ಅವರು ಸಹ ಗಾಬರಿಗೊಂಡದ್ದನ್ನು ಕಂಡು (ನಡೆದ ವೃತ್ತಾಂತ ಶ್ರೀ ರಘುದಾಂತ ತೀರ್ಥರೂ ತಿಳಿಸಿದ್ದರಿಂದ) ಕೂಡಲೇ ಮಳಖೇಡದಿಂದ ಹೊರಟು ನಾರಾಯಣಪೇಟೆಗೆ ಬಂದು ಪ್ರತೀಕ್ಷಿಸುತ್ತಿದ್ದ ಇವರನ್ನು (ಶ್ರೀ ರಘುಪ್ರೇಮತೀರ್ಥರನ್ನು) ಕಂಡು ನಮಸ್ಕರಿಸಿ, ಆರ್ಷಣಗೀ ರಾಘವೇಂದ್ರರಾಯರಿಂದ ಕಳುಹಿಸಲ್ಪಟ್ಟವನೆಂದು ಪರಿಚಯಿಸಿಕೊಂಡು, ಮಳಖೇಡದಲ್ಲಿ (ಇವರು ಬಿಟ್ಟು ಬಂದ ನಂತರ) ನಡೆದ ಎಲ್ಲ ವೃತ್ತಾಂತವನ್ನು (ಶ್ರೀ ರಘುದಾಂತತೀರ್ಥರಿಂದ ಕೇಳಲ್ಪಟ್ಟಿದ್ದು) ತಿಳಿಸಿ, ಇವರು (ಶ್ರೀ ರಘುಪ್ರೇಮತೀರ್ಥರು) ದಿನ ಕ್ರಮೇಣ ಜಾಡ್ಯದಿಂದ ಮುಕ್ತರಾಗುವದನ್ನೇ ನೋಡಿಕೊಂಡು, ಸಮಾಧಾನ ಹೊಂದಿ ರಾಯಚೂರಿಗೆ ಹೋಗಿ ಯಾವದ್ವೃತ್ತಾಂತವನ್ನು ಅರ್ಷಣಗಿ ರಾಘವೇಂದ್ರ ರಾಯರಲ್ಲಿ ತಿಳಿಸಿದನು. "ಶ್ರೀ ರಘುಪ್ರೇಮ ತೀರ್ಥರು ಮಳಖೇಡದಲ್ಲಿರುವವರಿಗೂ, ಅಲ್ಲಿಗೆ ಹೋಗಲು ಧೈರ್ಯವು ಸಾಲದೆ, ಅವರು ಅಲ್ಲಿ ಇರುವವರೆಗೂ ತಮ್ಮ ಅನುಯಾಯಿಗಳ ಮೂಲಕ ಉಪದ್ರವ ಕೊಡುತ್ತಾ ಇದ್ದು, ಅವರು ಇಲ್ಲಿಂದ ನಾರಾಯಣಪೇಟಿಗೆ ಪ್ರಯಾಣ ಮಾಡಿದ ಮೇಲೆ, ಆ ಉಭಯ ಯತಿಗಳಲ್ಲಿ ಧಾಂದಲೇ ಮಾಡಿದ್ದಾರೆ. ಏನೇಯಾಗಲಿ ನಮ್ಮ ಶ್ರೀ ರಘುಪ್ರೇಮತೀರ್ಥರು ಸುರಕ್ಷಿತ ಇದ್ದಾರೆ ಅಷ್ಟೇ ಸಾಕು!" ಅಂತ ಅಲ್ಲಿ ಕುಳಿತಿದ್ದ ನಾಲ್ಕು ಜನರಲ್ಲಿ ಉದ್ಗಾರ ತೆಗೆದರು. ಅತ್ತ ಶ್ರೀರಘುಪ್ರೇಮತೀರ್ಥರು ನಾರಾಯಣ ಪೇಟೆಯಲ್ಲಿ ಚಾತುರ್ಮಾಸ್ಯ ಸಂಕಲ್ಪ ದೀಕ್ಷಾ ಪೂರ್ತಿಗೊಳಿಸಿ (ಚಾತುರ್ಮಾಸ್ಯ ಸಂಕಲ್ಪ ದೀಕ್ಷಾಬದ್ಧರಾಗಿದ್ದೂ

ಆ ಸ್ಥಳದಲ್ಲಿ ವಾರವಾಡಿಕೊಂಡು ಇರುವದಕ್ಕೆ ಅನಾನುಕೂಲವಾಗುವಂತೆ ಉಪದ್ರವವೇನಾದರೂ ಉಂಟಾದರೆ, ಆ ಸ್ಥಳಬಿಟ್ಟು ಪ್ರಶಸ್ತವಾದ ಸ್ಥಳದಲ್ಲಿ ಅವಶಿಷ್ಟ ದೀಕ್ಷಾ ಕಾಲವನ್ನು ಮುಗಿಸಿಕೊಳ್ಳಲು ಶಾಸ್ತ್ರದಲ್ಲಿ ಅವಕಾಶವಿದೆ) ಈ ನಿಯಮಕ್ಕನುಸರಿಸಿ, ಚಾತುರ್ಮಾಸ್ಯ ದೀಕ್ಷಾಕಾಲ ಮುಗಿಯುವ ಪೂರ್ವವೇ ಮಳಖೇಡ ಬಿಟ್ಟು ಹೊರಟಿದ್ದರು ಜಾಜಾಪೂರ, ಜಠರ, ಇಡ್ಲೂರು, ಮಖತಲ್ ಮಾರ್ಗವಾಗಿ ರಾಯಚೂರಿಗೆ ಬಂದರು. ಇವರು ಬರುವ ಸಂದರ್ಭದಲ್ಲಿ (ಉತ್ತರಾದಿ ಮಠ, ರಾಯರಮಠದ ಸ್ವಾಮಿಗಳಿಗೆ ಇವರ ವಿಷಯದಲ್ಲಿ ಅಸೂಯಾ ಉಂಟಾಗಿತ್ತಾದ್ದರಿಂದ) 'ಕೂಡ್ಲಿ ಶ್ರೀ ಆರ್ಯ ಅಕ್ಷೋಭ್ಯ ತೀರ್ಥ ಮಠಕ್ಕೆ ಆಶ್ರಮ ಹೊಂದಿದ್ದ ಶ್ರೀ ರಘುಪ್ರೇಮತೀರ್ಥರು ನಮ್ಮ ಮಠದ ಶಿಷ್ಯರಿಗೆ ಆಗ್ರಹದಿಂದ ತಪ್ತಮುದ್ರಾ ಕೊಟ್ಟು ನಮ್ಮ ಮಠದ ಸ್ವಾಮಿಗಳಿಗೆ ಅತ್ಯಂತ ವಿರೋಧಿಗಳಾಗಿರೋಣದರಿಂದ ನಮ್ಮ ಮಠದ ಅನುಯಾಯಿಗಳು ಯಾರೂ ಅವರ ದರ್ಶನಕ್ಕೂ, ತೀರ್ಥ ಪ್ರಸಾದಕ್ಕೂ ಹೋಗಕೂಡದು ಮತ್ತು ಅವರನ್ನು ಕರೆದು ಪೂಜಾ ಅಥವಾ ಪಾದಪೂಜಾ ಮೊದಲಾದವುಗಳಿಂದ ಅವರಿಗೆ ಮರ್ಯಾದೆ ಮಾಡಕೂಡದು' ಅಂತ ತಮ್ಮ ಮಠಾಧಿಕಾರಿಗಳ ಮೂಲಕ ಅಪಪ್ರಚಾರ ಮಾಡಿದ್ದರು. ಈ ಕಾರಣದಿಂದ ಅನೇಕರು ಇವರಲ್ಲಿ ಬಾರದಿದ್ದರೂ, ಕೆಲವರು ಈ ತರದ ಕಾರಣವೇನೆಂಬುದನ್ನು ಪ್ರಶ್ನಿಸಲು, ಅವರನ್ನೇ ಕೇಳಿ. ನೀವು ಹೇಳುವಂತೆ ಅವರಲ್ಲಿ ಕೇವಲ ಆಗ್ರಹವೇ ಕಂಡುಬಂದರೆ ಅವರನ್ನು ಎಲ್ಲರೂ ತ್ಯಾಗ ಮಾಡುವದು ಸಮಂಜಸವಾಗುವದು ಎಂದು ಹೇಳಿದಾಗ , ಅಂದು 'ಕಸಬೇ ಶ್ರೀನಿವಾಸರಾವ್' ಮೊದಲಾದ ಕೆಲವು ಗೃಹಸ್ಥರು ತಥಾ 'ವರಾಪ್ಪಾ ಕೃಷ್ಣಾಚಾರ್ಯ' ಮೊದಲಾದ ಕೆಲವು ವೈದಿಕ ಬ್ರಾಹ್ಮಣರು ಕೂಡಿ ತಪ್ತಮುದ್ರಾ ಪ್ರದಾನ ಮಾಡಿದ ಕಾರಣವನ್ನು ವಿಚಾರಿಸಲೋಸುಗ ಇವರಿದ್ದ ಅರ್ಷಣಗಿ ಹನುಮಂತರಾಯರ ಮನಿಗೆ ಬಂದರು. ಆಗ ಇವರು (ಶ್ರೀ ರಘುಪ್ರೇಮತೀರ್ಥರು) ತಪ್ತಮುದ್ರಾ ಕೊಟ್ಟ ಉದ್ದೇಶವನ್ನು ತಿಳಿಸಲು, ಇದು ದುಷ್ಟಹೇತುವಿನಿಂದ ಕೊಡಲಾಗದಿದ್ದರೂ ಶಾಸ್ತ್ರ ಹಾಗೂ ಸಂಪ್ರದಾಯವನ್ನನುಸರಿಸುವದೋ ಹ್ಯಾಗೆಂಬ ವಿಷಯವನ್ನು ವಿಮರ್ಶಿಸಲೋಸುಗ ಅರ್ಷಣಗಿ ಹನುಮಂತರಾಯರ ಮನೆಯಲ್ಲಿ ಮರುದಿನ ಸಭೆಯನ್ನು ಸೇರಿಸುವುದಾಗಿ ಗೊತ್ತು ಮಾಡಿ ಅದರಂತೆ ಸಭಾ ಕೂಡಿಸಲಾಯಿತು. ಈ ಸಭೆಯಲ್ಲಿ ಶ್ರೀ ರಘುಪ್ರೇಮತೀರ್ಥರ ಪ್ರವಚನವು ಈ ಕೆಳಗೆ ಬರೆದಂತೆ ಇದೆ. (ಈ ಸಭೆಯಲ್ಲಿ ನೂರಾರುಜನ ಮುಖಂಡರು ಲೌಕಿಕ ವೈದಿಕರು ಸೇರಿದ್ದರು)

೫. ತತ್ವಾನುಷ್ಠಾತೃತತ್ವೋಪದೇಶಕರೇ ನಿಜಗುರುಗಳು. (ಕೇವಲಮುದ್ರಾಪ್ರದಾನ ಗುರುತ್ವಗಮಕವಲ್ಲ)

"ಕರ್ಮಣಾ ಬಧ್ಯತೇ ಜಂತುಃ ವಿದ್ಯಯಾ ಚ ವಿಮುಚ್ಯತೇ" ಅಂತ ಇರುವದರಿಂದ ಸೃಷ್ಟರಾದ ಯಾವಜ್ಜೀವರು ಬಾಹ್ಯ ಉಪಾಧಿ ಮೂಲಕ ತ್ರಿಗುಣಬದ್ಧರಾಗಿ ಆ ಕಾರಣದಿಂದ ಮಾಡುವ ಕರ್ಮಗಳು ಗಹನವಾಗಿ ಪರಿಣಮಿಸಿ, ಅಂದರೆ ಭಗವದಿಚ್ಛಾನುಸಾರ ಅತ್ಯಲ್ಪ ಕಾಲದಲ್ಲಿಯೇ ಅನೇಕ ಜನ್ಮಗಳು ಬರಲು ಕಾರಣವಾಗುವ ಕರ್ಮಗಳನ್ನು ಘಟಿಸಿ ಮುಕ್ತಿಗೆ

ಅವಕಾಶವೇ ಕೊಡುವುದಿಲ್ಲ. ಅಂದ ಮೇಲೆ ಮುಕ್ತಿಯು ಹ್ಯಾಗೆ ದೊರೆಯಬೇಕೆಂಬ ಪ್ರಶ್ನೆ ಬರುತ್ತದೆ. ಇದಕ್ಕೆ "ವಿದ್ಯೆಯೇ" ಮುಕ್ತಿಗೆ ಸಾಧನವೆಂದು ಹೇಳಲ್ಪಡುತ್ತದೆ. ಆದರೆ ಆ ವಿದ್ಯೆಯು ಯಾವುದೆಂದು ಸಹಜ ಪ್ರಶ್ನೆ ಕೂಡಾ ಬರುತ್ತದೆ. ಆದರೆ ಈ ವಿದ್ಯೆಯು ಕೇವಲ ಧರ್ಮ, ಅರ್ಥ, ಕಾಮಗಳ ಸಾಧಕವಾದದ್ದೊಂದು, ಮೋಕ್ಷಕ್ಕೆ ಸಾಧಕವಾದ "ಅಧ್ಯಾತ್ಮ" ವಿದ್ಯೆ ಮತ್ತೊಂದು. ಈ ಅಧ್ಯಾತ್ಮ ವಿದ್ಯೆಯು ಸರಿಯಾಗಿ ದೊರೆಯಬೇಕೆಂದರೆ **"ಕರ್ಮಣಾ ಜ್ಞಾನ ಮಾತನೋತಿ ಜ್ಞಾನೇನ ಅಮೃತೀಭವತಿ"** ಅಂತ ಇದ್ದುದರಿಂದ ಸತ್ಕರ್ಮಾನುಷ್ಠಾನ ಮಾಡುವದರಿಂದಲೇ ಜ್ಞಾನ ಬರುತ್ತದೆ, ಅಂತ ಸಾಮಾನ್ಯವಾಗಿ ಹೇಳಿಬಿಟ್ಟರೆ, ಅದು ಸರಿಹೋಗುವುದಿಲ್ಲ. ಯಾಕೆಂದರೆ ಅದರಲ್ಲಿ ವಿಧ್ಯುಕ್ತ ಕರ್ಮ ಒಂದು, ವಿಧಿ ವಿರುದ್ಧ ಕರ್ಮ ಮತ್ತೊಂದು. ಮೊದಲನೇಯದಾದ ವಿಧ್ಯುಕ್ತ ಕರ್ಮವು ಸಂಸಾರ ಧರ್ಮಗಳನ್ನೊಳಗೊಂಡು ಇರುವುದು. ಈ ಸಂಸಾರ ಧರ್ಮಗಳೆಲ್ಲವೂ ಬಂಧನಕ್ಕೆ ಕಾರಣವಾದವು. ಮತ್ತೊಂದಾದ ವಿಧಿ ವಿರುದ್ಧ ಕರ್ಮಗೆಲ್ಲವೂ ಅನರ್ಥದಾಯಿಗಳು ಅಂದಮೇಲೆ ಎಂತಹ ಕರ್ಮವನ್ನು ಅವಲಂಬಿಸಬೇಕೆಂಬ ಶಂಕೆಯು ಬರುತ್ತದೆ. **"ಜ್ಞಾನಾದೇವ ಮೋಕ್ಷಃ"** ಅಂತ ಇರುವದರಿಂದ ಉಭಯ ಕರ್ಮವಿಮರ್ಶನ ಮಾಡಿ ಆಚರಿಸಿದರೆ ಮುಕ್ತಿಗೆ ಕಾರಣವಾಗುವುದು. ಈ ವಿಮರ್ಶೆಯವನ್ನೇ ಜಿಜ್ಞಾಸೆ ಅಂತ ಹೇಳಬಹುದು. ಇದು ಹ್ಯಾಗೆ ಮಾಡಬೇಕೆಂದರೆ ಮೋಕ್ಷಾಪೇಕ್ಷೆಯಾದ ಪುರುಷನು (ಪುರುಷನೆಂದರೆ ದೇಹಧಾರಿಯಾದ ಜೀವ, ಈ ಮಾತಿನಿಂದ ಸ್ತ್ರೀಯರನ್ನೂ ಸೇರಿಸಿದುಂತಾಯಿತು) ಬ್ರಹ್ಮನಿಷ್ಠರಾದ ಗುರುಗಳ ಅನ್ವೇಷಣ ಮಾಡಿ, ಅವರಲ್ಲಿ ಹೋಗಿ ಪ್ರಾಣೈಃ, ಅರ್ಥೈಃ, ಧನೈರಪಿ, ಸೇವಾಮಾಡಿ, ಅವರನ್ನು ಪ್ರಸನ್ನೀಕರಿಸಿ, ಅವರಕಡೆಯಿಂದ ಬಾಹ್ಯಾಂತರ ದೀಕ್ಷಾವನ್ನು ಹೊಂದಬೇಕು. ಬಾಹ್ಯದೀಕ್ಷೆ ಎಂದರೆ ಮಂತ್ರೋಪದೇಶ ಹೊಂದುವುದು. ಇದಕ್ಕಾಗಿ ಪ್ರಥಮದಲ್ಲಿ ದೇಹ ಶುದ್ಧಿಗೋಸ್ಕರ ಪಂಚಗವ್ಯಪ್ರಾಶನ, ತಪ್ತಮುದ್ರಾ ಸ್ವೀಕಾರ ಮಾಡತಕ್ಕದ್ದು. ಇದು ಯಾವ ಕಾಲದಲ್ಲಿ ಯಾರಿಂದ ಸ್ವೀಕರಿಸಬೇಕೆಂದರೆ, ಉಪಾಕರ್ಮಾದಿ ಪ್ರಾಯಶ್ಚಿತ್ತ ಧರ್ಮಗಳಾಚರಿಸುವ ಕಾಲ ವಿಶೇಷಗಳಲ್ಲಿ ಪಂಚಗವ್ಯ ಪ್ರಾಶನವೂ, ತಪ್ತಮುದ್ರಾ ಸ್ವೀಕಾರವೂ ಶಾಸ್ತ್ರ ವಿಹಿತವಾಗಿದೆ ಮತ್ತು ಜಾತ ಕರ್ಮಾದಿ ಸಂಸ್ಕಾರ ಕಾಲಗಳಲ್ಲಿಯೂ ತಪ್ತಮುದ್ರಾ ಧಾರಣವು ಅವಶ್ಯಕವೆಂದು ಶಾಸ್ತ್ರಗಳು ಹೇಳುವವು. ಇಷ್ಟೇ ಅಲ್ಲ, ಪ್ರಥಮದಲ್ಲಿ ತಪ್ತಮುದ್ರಾ ಸಂಸ್ಕಾರ ವಿರಹಿತಮಾಡುವ ನಿತ್ಯ ನೈಮಿತ್ತಿಕ ಕರ್ಮಗಳು ವ್ಯರ್ಥವೆಂದು 'ಶ್ರುತಿ' ವಚನವಿದೆ. ಆದಾವುದೆಂದರೆ - **"ಪವಿತ್ರಂತೇ ವಿತತಂ ಬ್ರಹ್ಮಣಸ್ಪತೇ"** ಎಂಬ ಶ್ರುತಿಯು. ಇದರ ಅರ್ಥವೇನೆಂದರೆ 'ಹೇ ವಾಯುದೇವರೇ ! ಸಮರ್ಥರಾದ ನೀವು, ನಿಮ್ಮಿಂದ ಸಂಸ್ಕೃತವಾದ ಸುದರ್ಶನವನ್ನು ಯೋಗ್ಯ ಜೀವರ ದೇಹಕ್ಕೆ ತಗಲಿಸುತ್ತೀರಿ. ಈ ಸುದರ್ಶನದಿಂದ ತಪ್ತವಾದ ಶರೀರವುಳ್ಳವರೇ ಭಗವದ್ವಿಷಯಕ ಕರ್ಮಾನುಷ್ಠಾನವಂತರಾಗಿ ಶಾಸ್ತ್ರೋಕ್ತ ಕರ್ಮ ಫಲವನ್ನು ಪಡೆಯುವರು. ಈ ಸುದರ್ಶನದಿಂದ ತಪ್ತವಾಗದ ದೇಹವುಳ್ಳವನು, ಶಾಸ್ತ್ರೋಕ್ತ ಕರ್ಮ ಫಲವನ್ನು

ಹೊಂದುವುದಿಲ್ಲ. ಪ್ರಯುಕ್ತ ಕರ್ಮಾನುಷ್ಠಾನಾಧಿಕಾರ ಪ್ರಾಪ್ತಿಗೆ ತಪ್ತಮುದ್ರಾ ಪ್ರಥಮಾಂಗವಾಯಿತು. ಅಂದಮೇಲೆ ದ್ವಿಜತ್ವ ಪ್ರಾಪಕವಾದ ಉಪನಯನ ಸಂಸ್ಕಾರ ಕಾಲದಲ್ಲಿಯೂ, ಅದರಂತೆ ಶ್ರಾದ್ಧಾದಿ ನೈಮಿತ್ತಿಕ ಕರ್ಮಗಳಾಚರಿಸುವ ಕಾಲದಲ್ಲಿಯೂ, ಆದಿಯಲ್ಲಿ ತಪ್ತಮುದ್ರಾಧಾರಣವು ಅತ್ಯವಶ್ಯಕವೆಂದು ಹೇಳಿದಂತಾಯಿತು. ಈ ರೀತಿ ಆಗಾಗ ಅವಶ್ಯಕವಾಗಿರುವ ಈ ಸಂಸ್ಕಾರವನ್ನು ಮಠಾಧಿಪತಿಗಳು ದೊರೆತರೇನೆ ಮಾಡಿಕೊಳ್ಳುವದೆಂದು ಹೇಳಲಿಕ್ಕಾಗದು. ಆದ್ದರಿಂದಲೇ 'ವೃದ್ಧಹಾರೀತಸ್ಮೃತಿ, ಹಾರೀತಸ್ಮೃತಿ, ವಿಷ್ಣುರಹಸ್ಯ, ಚಾತುರ್ಮಾಸ್ವ ಕಲ್ಪ ಇತ್ಯಾದಿ ಶೃತಿ ಪುರಾಣಗಳಲ್ಲಿ 'ತಂದೆ, ಕಕ್ಕ, ಅಣ್ಣ, ಮಾವ, ಪುರೋಹಿತ, ಸೋದರಮಾವ, ಪತಿ (ಸ್ತ್ರೀಯರಿಗೆ) ಗುರು ಇವರುಗಳಲ್ಲಿ ಯಾರಾದರೊಬ್ಬರು (ಆ ಸಮಯದಲ್ಲಿ ಒದಗಿದವರು), ತನಗಿಂತಲೂ ಸಾಮಾನ್ಯ ಜೇಷ್ಠರಿಂದ ಸ್ವೀಕರಿಸುವುದಾಗಿ ಹೇಳಲಾಗಿದೆ. ಹೀಗಿದ್ದರೂ (ಈಗ ರೂಢಿ ಇದ್ದಂತೆ) ಮಠಾಧಿಪತ್ಯ ಉಳ್ಳ ಸನ್ಯಾಸಿಗಳಿಂದ ಒಮ್ಮೆ ತಪ್ತಮುದ್ರಾಧಾರಣ ಮಾಡಿಸಿಗೊಂಡವರು ತಥಾ ತದ್ವಂಶೀಯರು ಆ ಯತಿಗಳಿಂದಲೋ ಅಥವಾ ಆ ಪೀಳಿಗೆಗೆ ಹೊಂದಿದ ಯತಿಗಳಿಂದಲೋ ತಪ್ತಮುದ್ರಾ ಸ್ವೀಕರಿಸಬೇಕೇ ಹೊರತು ಅನ್ಯರಿಂದ ಸ್ವೀಕರಿಸಬಾರದೆಂದು ಉಂಟಾದ ಭಾವನೆಯು ಸಮಂಜಸವಾಗಲಾರದು. ಯಾಕೆಂದರೆ, ತಪ್ತಮುದ್ರಾಧಾರಣದ ಅವಶ್ಯಕ ಕಾಲ ವಿಶೇಷಗಳಲ್ಲಿ ಆ ಯತಿಗಳು ದೊರೆಯಲಾರರು. ಮತ್ತು ಸನ್ಯಾಸಿಗಳಿಗೆ ಹೋಮಾಧಿಕಾರವಿಲ್ಲದ್ದರಿಂದ (ಸುದರ್ಶನ ಹೋಮ ಮಾಡಿ) ತಪ್ತಮುದ್ರಾ ಪ್ರದಾನ ಮಾಡುವ ಅಧಿಕಾರವು ಇಲ್ಲವೆಂದು ಹೇಳಬೇಕಾಗುವುದು. ಹೀಗಿದ್ದ ಪಕ್ಷದಲ್ಲಿ ಯಾವ ಕಾಲದಿಂದ ಈ ರೂಢಿ ಉಂಟಾಯಿತೆಂದು ಸಭಿಕರಲ್ಲೊಬ್ಬರು ನಿಂತು ಪ್ರಶ್ನೆ ಮಾಡಿದರು. ಆ ವಿಷಯವನ್ನು ನಾವೇ ಪ್ರತಿಪಾದಿಸಲುದ್ಯುಕ್ತರಾಗಿದ್ದೆವು. ಅಷ್ಟರಲ್ಲಿ ನೀವೇ ಪ್ರಶ್ನೆ ಮಾಡಿದಿರಿ. ಇದು ಯೋಗ್ಯವಾಯಿತು. ಹಂಸನಾಮಕ ಪರಮಾತ್ಮನಿಂದ ಆರಂಭಿಸಿ ಶ್ರೀ ರಘೂತ್ತಮತೀರ್ಥ ಶ್ರೀಪಾದಂಗಳವರೆಗೂ ಶಾಸ್ತ್ರದಲ್ಲಿ ಹೇಳಿದಂತೆ ರೂಢಿ ಇತ್ತು. ಕಲಿಕಾಲ ಬಲದಿಂದ ಅಭಿಮಾನ, ಮತ್ಸರ ಇತ್ಯಾದಿ ದೋಷಗಳು ಪಂಡಿತ ಪಾಮರರುಗಳಲ್ಲಿಯೂ ವಿಶೇಷವಾಗಿ ಬೆಳೆದು ಸನ್ಯಾಸಿಗಳು ಗೃಹಸ್ಥಾಶ್ರಮಗಳಿಗಿಂತಲೂ ಜ್ಯೇಷ್ಠರೆಂಬ ಭಾವನೆಗೆ ಧಕ್ಕೆ ಬರಲು, ಆ ಶ್ರೀರಘೋತ್ತಮತೀರ್ಥರು ಪೂರ್ವ ಸಂಪ್ರದಾಯಗಳನ್ನು ಬದಲಾವಣೆ ಮಾಡುವಾಗ ಇದನ್ನು ಸ್ವಲ್ಪ ಬದಲು ಮಾಡಿದ್ದಾರೆ. ಆದರೆ ಅವರಾದರೂ ಇಂತಹ ವಂಶೀಯರು ಇಂತಹ ಪೀಠಾಧಿಪತಿಗಳಿಂದಲೇ ತಪ್ತಮುದ್ರಾ ಸ್ವೀಕರಿಸಬೇಕೆಂದು ನಿರ್ಬಂಧ ಮಾಡಿಲ್ಲ. ಆದಾಗ್ಯೂ ಆ ಒಂದು ಆಧಾರ ನಿಮಿತ್ತಮಾಡಿ ನಾವುಗಳು (ಪೀಠಾಧಿಪತಿಗಳು) ಪ್ರತಿಷ್ಠಾ ಮತ್ತು ದ್ರವ್ಯಲೋಭದಿಂದ ಅವುಗಳ ಸಂಪಾದನೆಗೆ ಇದನ್ನು (ತಪ್ತಮುದ್ರಾ ಪ್ರದಾನವನ್ನು) ಮುಖ್ಯ ಸಾಧನಾವನ್ನಾಗಿಟ್ಟುಕೊಂಡು ಲೋಕದಲ್ಲಿ ತದ್ವಿಷಯಕ ಯಥಾರ್ಥ ಜ್ಞಾನವಾಗದಂತೆ ದಕ್ಷತೆಯನ್ನು ವಹಿಸಿ, ನಮ್ಮ ಏಜೆಂಟರು (ಮಠೋಪ ಜೀವಿ) ಗಳಿಂದ ಅಪಪ್ರಚಾರ ಮಾಡಿ (ಸಿ) ದ್ದೇವೆ. ಇವರಲ್ಲಿ ಕೆಲವರಿಗೆ ಯಥಾರ್ಥ ಜ್ಞಾನವಿದ್ದರೂ ದ್ರವ್ಯಲೋಭಕ್ಕಾಗಿಯೇ ನಮ್ಮ ದಬ್ಬಾಳಿಕೆಯ

ಭಯದಿಂದಲೋ ಅಥವಾ ಉದಾಸೀನ ಬುದ್ಧಿಯಿಂದಲೋ, ಯಥಾರ್ಥ ವಿಷಯವನ್ನು ಬದಿಗಿಟ್ಟು ಅಂಧಾನುಕರಣ ಮಾಡುತ್ತ ನಡೆದಿದ್ದಾರೆ. ಈ ಮಾತಿಗೆ ಆಧಾರವೇನು? ಅಂತ ಸಭಿಕರಲ್ಲೊಬ್ಬರು ಪ್ರಶ್ನೆ ಮಾಡಿದರು. ಪೂರ್ವದಲ್ಲಿ ವೈಷ್ಣವ ದೀಕ್ಷಾ ಹೊಂದಬೇಕೆಂದು ಅಪೇಕ್ಷಿಸಿ ಬಂದವರಿಗೆ ಆದ್ಯರು, ಗುರ್ಜಾಲಿ ಆಚಾರ್ಯರೇ ಇತ್ಯಾದಿ ಪ್ರಸಿದ್ಧ ಆಚಾರ್ಯರು ಮತ್ತು 'ಪದ್ಮನಾಭ ತೀರ್ಥರೂ' 'ಶ್ರೀ ಮಾಧವ ತೀರ್ಥರೂ' ಮತ್ತು 'ಶ್ರೀ ಆರ್ಯ ಅಕ್ಷೋಭ್ಯ ತೀರ್ಥ ಮಠದ, ಶ್ರೀ ವ್ಯಾಸರಾಯರ ಮಠದ, ಶ್ರೀ ಉತ್ತರಾದಿ ಮಠದ, ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ಸ್ವಾಮಿಗಳವರು, ತಥಾ ಉಡುಪಿ ಅಷ್ಟಮಠದ ಸ್ವಾಮಿಗಳು, ಸುಬ್ರಹ್ಮಣ್ಯ ಮಠದ (ಶ್ರೀ ಮದಾಚಾರ್ಯರ ತಮ್ಮಂದಿರಾದ ಶ್ರೀ ವಿಷ್ಣುತೀರ್ಥರ ಮಠ) ಅಚ್ಯುತ ಪ್ರೇಕ್ಷಾಚಾರ್ಯರ ಮಠದ (ಶ್ರೀಮದಾಚಾರ್ಯರಿಗೆ ಸನ್ಯಾಸಾಶ್ರಮ ಕೊಟ್ಟವರು) ಸ್ವಾಮಿಗಳವರು, ಮಠಭೇದವೆಂಬ ಭಾವನೆಯನ್ನು ಮನಸ್ಸಿನಲ್ಲಿಯೂ ಸಹ ತಾರದೆ ವೈಷ್ಣವ ದೀಕ್ಷಾತ್ಮಕವಾದ ತಪ್ತಮುದ್ರಾವನ್ನು ಕೊಡುತ್ತಿದ್ದರು. ಅದನ್ನು ವ್ಯವಹಾರದಲ್ಲಿ ತೋರಿಸುವದಕ್ಕಾಗಿಯೇ ಏನೋ ಎಂಬಂತೆ ಉಡುಪಿ ಅಷ್ಟಮಠಗಳಲ್ಲಿ ಚಾತುರ್ಮಾಸ್ಯ ಆದ್ಯಂತ ಏಕಾದಶಿಗಳಲ್ಲಿ ಯಾವ ಮಠಾಧಿಪತಿಗಳಾದರೂ, ಇವರು ನಮ್ಮ ಮಠದ ಶಿಷ್ಯರು. ಅವರು ಬೇರೆ ಮಠದ ಶಿಷ್ಯರು ಎಂಬ ಭೇದಮಾಡದೆ ಮಧ್ವಮತಾನುಯಾಯಿಗಳಿಗೆ ತಪ್ತಮುದ್ರಾ ಕೊಡುವ ಪದ್ಧತಿಯನ್ನು ಅದ್ಯಾಪಿ ಕಾಣಬಹುದು. ಮತ್ತು ಹಿಂದಕ್ಕೆ ಶ್ರೀ ಅಕ್ಷೋಭ್ಯ ತೀರ್ಥರಮಠದ ಶಾಖಾ ಮಠದ ಸ್ವಾಮಿಗಳವರು ವೈಷ್ಣವ ದೀಕ್ಷಾ ಉಳ್ಳವರಿಗೆ ಪರಸ್ಪರ ತಪ್ತಮುದ್ರಾ ಕೊಡುತ್ತಿದ್ದರೆಂಬುದಾಗಿಯೂ, ಅನಂತರ ವೈಷಮ್ಯ ಮುಲಕ ವಿಶೇಷ ಕಲಹ ಉಂಟಾದ್ದರಿಂದ ತಮ್ಮ ತಮ್ಮೊಳಗೆ ಶಿಷ್ಯವರ್ಗವೆಂದು ಕಲ್ಪಿಸಿಕೊಂಡಂತೆಯೂ ಇತಿಹಾಸದಿಂದ ಕಂಡುಬರುತ್ತದೆ. ಹೀಗಿದ್ದ ಪ್ರಯುಕ್ತವೇ ಶ್ರೀ ಶ್ರೀ ಸತ್ಯಧ್ಯಾನತೀರ್ಥರೂ, ಶ್ರೀ ಸತ್ಯಧೀರತೀರ್ಥರೂ, ಶ್ರೀ ವಿದ್ಯಾರತ್ನಾಕರ ತೀರ್ಥರೂ ಹಾಗೂ ನಾವು ಶಾಸ್ತ್ರಕ್ಕೆ ಪ್ರಾಶಸ್ತ್ಯ ಕೊಟ್ಟು ಆ ಕಟ್ಟಳೆಯನ್ನತಿಕ್ರಮಿಸಿ ತಪ್ತಮುದ್ರಾಪ್ರದಾನ ಮಾಡಿದ್ದೇವೆ. ಆದರೆ ಅವರುಗಳು ಕೊಟ್ಟಿದ್ದಕ್ಕೂ, ನಾವು ಕೊಟ್ಟಿದ್ದಕ್ಕೂ ವೈಲಕ್ಷಣ್ಯವಿದೆ. ಅದೇನೆಂದರೆ : "ಅವರುಗಳು ತಪ್ತಮುದ್ರಾವನ್ನು ಕೊಟ್ಟು (ಸ್ವೀಕರಿಸಿದ) ಜನರನ್ನು ತಮ್ಮ ಮಠದ ಶಿಷ್ಯರನ್ನಾಗಿ ಮಾಡಿಕೊಂಡು ಕಲಹ ಬೆಳಸಿದ ಸಂಗತಿ ಸರ್ವವಿದಿತ. ಆ ರೀತಿ ನಾವು ಮಠಕ್ಕೆ ಶಿಷ್ಯರನ್ನಾಗಿ ಸೇರಿಸಿಕೊಳ್ಳುವ ವಿಚಾರವನ್ನು ಬಿಟ್ಟು ಕೇವಲ ಶಾಸ್ತ್ರ ಸಮ್ಮತ ಧರ್ಮವೆಂದು ಆಚರಿಸಿದ್ದೇವೆ. ಈಗಿನ ರೂಢಿ (ಸಂಪ್ರದಾಯ) ಯಿಂದ ಸರ್ವ ಶಿಷ್ಯವರ್ಗಕ್ಕೆ ಅನೇಕ ವಿಧ ತೊಂದರೆ ಉಂಟಾಗಿದ್ದಲ್ಲದೆ, ನಮ್ಮಗಳಿಗೂ ರಾಗ-ದ್ವೇಷಾದಿಗಳಿಗೆ ಕಾರಣವಾಗಿದೆ ಎಂದು ಆ ಸಂಪ್ರದಾಯ ಶೃಂಖಲಾವನ್ನು ಕಡಿದು ಪೂರ್ವದಲ್ಲಿದ್ದಂತೆ ಶಾಸ್ತ್ರಾನುಗುಣವಾದ ರೂಢಿ ಬರಲೆಂದು ತಪ್ತಮುದ್ರಾ ಪ್ರದಾನಮಾಡಿ ಉಕ್ತ ಕಾಲದಲ್ಲಿ ಜ್ಯೇಷ್ಠರಿಂದ ಅಥವಾ ಮಹನೀಯರು ಬಂದ ಸಮಯದಲ್ಲಾಗಲಿ ತಪ್ತಮುದ್ರಾ ಸೀಕರಿಸಲುಪದೇಶ ಮಾಡಿದ್ದೇವೆ. ಈ ಮಾತಿಗೆ ಅನುಸರಿಸಿ ನಮ್ಮಿಂದ ತಪ್ತಮುದ್ರಾ ಸ್ವೀಕರಿಸಿದವರು ಉತ್ತರಾದಿಮಠ, ರಾಯರಮಠದ ಸ್ವಾಮಿಗಳಲ್ಲಿಯೂ ತೆಗೆದುಕೊಂಡಿದ್ದಾರೆ. ಮತ್ತು ತಮ್ಮ

ತಮ್ಮ ಮನೆಗಳಲ್ಲಿ ಉಕ್ತ ಕಾಲದಲ್ಲಿ ಜ್ಯೇಷ್ಠರಾದವರು ಕನಿಷ್ಠರಿಗೆ ಹಾಕಿದ್ದಾರೆ" "ಸ್ವಾಮಿ! ಈ ಸಂಪ್ರದಾಯದಿಂದ ಮಠಾಧಿಪತಿಗಳಿಗೂ, ಶಿಷ್ಯ ವರ್ಗಕ್ಕೂ, ಅನೇಕ ವಿಧ ತೊಂದರೆ ಉಂಟಾಗಿದ್ದರಿಂದ ತಪ್ತಮುದ್ರಾ ಶೃಂಖಲಾವನ್ನು ಕಡಿಯಲು ಉದ್ಯುಕ್ತರಾಗಿದ್ದೇವೆ ಎಂದು ಹೇಳೋಣವಾಯಿತಷ್ಟೆ! ಯಾರಿಗೆ ಯಾವ ರೀತಿ ತೊಂದರೆಯಾಯಿತು ಎಂದು ವಿವರಿಸೋಣವಾಗಲಿ" ಎಂದು ಮಠಾಭಿಮಾನಿಗಳಲ್ಲಿ ಒಬ್ಬರು ಕೊಂಕುಮಾತಿನಿಂದ ಕೇಳಿದರು. "ಶ್ರೀ ಮಧ್ವಾಚಾರ್ಯರ ಕಾಲದಲ್ಲಿ ಹಾಗೂ ನಂತರ ಇದ್ದ ಮಠಗಳು ಈಗಿನಂತೆ (ಸಂಪತ್ತಿನ) ಆಡಂಬರದಿಂದ ಇದ್ದಿಲ್ಲವೆಂದು ಸರ್ವ-ಶ್ರುತ. ನಂತರ ಕಲಿ ಪ್ರಾಬಲ್ಯದಿಂದ (ಪ್ರವಾಹರೂಪೇಣ) ಸಜ್ಜನರಾಗಿಯೂ, ದುರ್ಮಾರ್ಗಗಾಮಿಗಳಾದವರನ್ನು ಹಾಗೂ ಆಗುವವರನ್ನು ಪರಾವೃತರನ್ನಾಗಿ ಮಾಡಲೋಸುಗ ದಿಕ್ಕುದಿಕ್ಕುಗಳಲ್ಲಿ ಸಂಚಾರ ಮಾಡಿ, ಶ್ರೀ ಮನ್ಮಧ್ವ (ದ್ವೈತ) ಸಂಪ್ರದಾಯವನ್ನು ಪ್ರಚಾರ ಮಾಡಿ, ಆ ತತ್ವಗಳು ಜನಗಳಿಗೆ ಅನುಕರಣೀಯವೆಂದು ಅನಿಸುವಂತೆ ಬೋಧಿಸಿ, ಅನುಪಾಧಿಕವಾಗಿ ತಪ್ತಮುದ್ರಾದಿಗಳನ್ನು ಕೊಟ್ಟು, ಶ್ರೀಮನ್ಮಧ್ವ (ದ್ವೈತ) ತತ್ವವನ್ನು ವಿಸ್ತರಿಸಲೋಸುಗ ಸನ್ಯಾಸಿಗಳ ಧರ್ಮವಿಹಿತವಾದ ಧ್ಯಾನ ಪ್ರವಚನವಲ್ಲದೆ ಸಜ್ಜನ ಆಕರ್ಷಣ ನಿಮಿತ್ತ ಪ್ರತಿಮಾರ್ಚನ ಮೊದಲಾದ ಲೋಕಸಂಗ್ರಹ ಕಾರ್ಯಗಳಲ್ಲಿ ಶ್ರೀ ಮಧ್ವಾಚಾರ್ಯರೂ ತಥಾ ಶ್ರೀ ಟೀಕಾಕೃತ್ಪಾದಾಚಾರ್ಯರು, ಶ್ರೀ ರಾಘವೇಂದ್ರ ತೀರ್ಥರಂತಹ ಮಹನೀಯರು ಯೋಜನಾ ಮಾಡಿದ್ದಾರೆ. ಆ ಮಹಾನುಭಾವರು ಯಾವ ಉದ್ದೇಶ ಮತ್ತು ಯಾವ ರೀತಿ ನಡೆದುಕೊಳ್ಳಲು ವಿಧಿಸಿರುವರೋ ಅದನ್ನು ಬದಿಗಿರಿಸಿ ನಾಟಕದಂತೆ ನಟಿಸಿ, ಅದಕ್ಕಿಂತ ಮೃಗನಾಟ್ಯದವನು ಒಂದು ಊರಿಗೆ ಬರುವ ಮುನ್ನ ಹಸ್ತಪತ್ರಿಕಾಗಳನ್ನು ಹಂಚುವಂತೆ (ಮಠಾಧಿಪತಿಗಳು) ರಾಯಸ ಪತ್ರವನ್ನು ಹಂಚಿ ಜನ ಗುಂಪುಕೂಡುವ ಸಲುವಾಗಿ ವಾದ್ಯಗಳ ಬಾರಿಸುವಂತೆ, ನಗಾರಿ ವಗೈರೆ ವಾದ್ಯಗಳು ಬಾರಿಸುತ್ತ, ಕುದುರೆ, ಆನೆ, ಹುಲಿ, ಸಿಂಹ, ಕರಡಿ, ಕೋತಿ ಇತ್ಯಾದಿ ಮೃಗಗಳು ಆಡಿಸಿ ತಾನು ಗೊತ್ತುಪಡಿಸಿದ ಕುರ್ಚಿ, ಬೆಂಚು, ಸೋಪಾನ, ನೆಲಗಳ ದರದಂತೆ ಜನಗಳಿಂದ ದ್ರವ್ಯಲಾಭ ಮಾಡಿಕೊಳ್ಳುವಂತೆ ರಾಮ, ಕೃಷ್ಣ, ನರಹರಿ, ವಿಠ್ಠಲ ಇತ್ಯಾದಿ ಮೂರ್ತಿಗಳ ಪೂಜಾರೂಪ ಆಟವಾಡಿಸಿ ನಾವು ಗೊತ್ತುಪಡಿಸಿದ ಪೂಜಾ ಕಟ್ಟಳೆ, ಕನಕಾಭಿಷೇಕ ಕಟ್ಟಳೆ, ಕನಕ ಮಂಟಪ, ಬಂಗಾರ ಮಂಟಪ, ರತ್ನ ಮಂಟಪದಲ್ಲಿ ಪೂಜಾ ಮಾಡುವ ಕಟ್ಟಳೆ, ತೊಟ್ಟಿಲು ಪೂಜಾ ಕಟ್ಟಳೆ, ಪಾದಪೂಜಾ ಕಟ್ಟಳೆ, ತಪ್ತಮುದ್ರಾ ಕಟ್ಟಳೆ ಇತ್ಯಾದಿ ತರ ತರಹದ ಕಟ್ಟಳೆಗಳಿಂದ ದ್ರವ್ಯ ಸಂಪಾದಿಸುವೆವು. ಅಂದಮೇಲೆ ಆ ಮೃಗ ನಟನಿಗೂ, ನಮಗೂ (ಮಠಾಧಿಪತಿಗಳಿಗೂ) ವೈಲಕ್ಷಣ್ಯವೇನು? ಇಷ್ಟೇ ಅಲ್ಲ, ನಾವುಗಳು ಉಚಿತವಾದ ಅನುಷ್ಠಾನದಲ್ಲಿ ವಿಮುಖರಾಗೋಣದರಿಂದ ಜಗತ್ತಿನಲ್ಲಿ ಅಧರ್ಮ, ಅನೀತಿ, ಅನ್ಯಾಯಗಳು ಪ್ರಬಲವಾಗುವದಕ್ಕೆ ಕಾರಣೀಭೂತವಾದದ್ದಲ್ಲದೆ ಶ್ರೀ ಮಧ್ವಾಚಾರ್ಯರ ಸಂದೇಶ ಪ್ರಕಾರ ಶ್ರೀಹರಿ ಸೇವಾದಲ್ಲಿ ವಿಮುಖರಾದ ಮೇಲೆ ನಾವುಗಳು (ಮಠಾಧಿಪತಿಗಳು) ಎಂಥಹ ದ್ರೋಹಿಗಳ ಶ್ರೇಣಿಯಲ್ಲಿ ಸೇರಿದ್ದೇವೆಂಬುದು ಯೋಚಿಸಬೇಕು. ಆದರೆ, ಸಂಸಾರದಲ್ಲಿ ಗಂಡನು ಅಡ್ಡದಾರಿ ನಡೆಯಹತ್ತಿದರೆ ಹೆಂಡತಿಯಾದರೂ ಬುದ್ಧಿವಂತಳಾಗಿ

ಸಂಸಾರವನ್ನು ಸುಸೂತ್ರ ಸಾಗುವಂತೆ ಹೇಗೆ ಮಾಡುವಳೋ ತದ್ವತ್ ಶಿಷ್ಯ ವರ್ಗದವರಾದ ನೀವುಗಳು ಇನ್ನು ಮುಂದೆಯಾದರೂ ಬುದ್ಧಿ ತಂದುಕೊಂಡು ಕಾಮಣಿ ಬರೆಯ ಕಟ್ಟಳೆಯಂತೆ ಕಟ್ಟಳೆಕೊಟ್ಟು ತಪ್ತಮುದ್ರಾಧಾರಣವಾಗಲಿ, ಪೂಜಾದಿ ಶ್ರೇಯಸ್ಕರ ಧರ್ಮಗಳನ್ನಾಗಲಿ ಮಾಡಿಸುವುದನುಚಿತವು. ಮತ್ತು ಶಾಸ್ತ್ರವಿಹಿತ ಧರ್ಮಗಳನ್ನು ಯಥಾರ್ಥ ಬೋಧಿಸದೆ ಅಡ್ಡದಾರಿ ಹಿಡಿಸುವ ನಮ್ಮಗಳ ಯಾವದೇ ಮಾತಿಗೆ ಬೆಲೆ ಇಡತಕ್ಕದ್ದಲ್ಲ. "**ಯಸ್ಯದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ, ಗುರೋರಾಜ್ಞಾಂ ನ ಲಂಘಯೇತ್**" ಎಂಬ ಪ್ರಮಾಣಕ್ಕೆ ವಿರೋಧ ಬರುವುದಲ್ಲ? ಮತ್ತು ಗುರುಗಳ ಗುಣದೋಷಗಳ ಗಣನೆ ಮಾಡುವ ಅಧಿಕಾರವಾದರೂ ನಮಗೆ ಉಂಟೇ?" ಎಂದು ಸಭಿಕರೆಲ್ಲೊಬ್ಬರು ಪ್ರಶ್ನೆ ಮಾಡಿದರು. ಈದಿನ ವೇಳೆಯು ಬಹಳವಾಗಿದೆ. ಈ ವಿಷಯವನ್ನು ನಾಳೆ ವಿವರಿಸುವೆವು ಎಂದು ಆ ದಿನದ ಸಭಾ ಅಷ್ಟಕ್ಕೆ ನಿಲ್ಲಿಸಿ, ಮರು ದಿವಸ ಪುನಃ ಸಭೆ ಸೇರಿಸಿದರು. ಈ ಸಭೆಯಲ್ಲಿ ನಿನ್ನಿನ ಪ್ರಶ್ನೆಯನ್ನು ಅವರ್ತನ ಮಾಡಿಕೊಂಡು ಪ್ರವಚನಾರಂಭಿಸಿದರು. ಈದಿನ ನಿನ್ನೆಯಕ್ಕಿಂತಲೂ ಹೆಚ್ಚು ಜನ ಸೇರಿದರು.

ನಿನ್ನೆಯ ಸಭೆಯಲ್ಲಿ "**ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ, ಗುರೋರಾಜ್ಞಾಂ ನ ಲಂಘಯೇತ್**" ಎಂಬ ಪ್ರಮಾಣಕ್ಕೆ ವಿರೋಧ ಬರುವದಲ್ಲಿ ಅದಕ್ಕೇನು ಗತಿ? ಮತ್ತು ಗುರುಗಳ ಗುಣದೋಷ ಗಣನೆ ಮಾಡುವ ಅಧಿಕಾರ ನಮಗೆ (ಶಿಷ್ಯರಿಗೆ) ಉಂಟೇ? ಎಂಬ ಎರಡು ಪ್ರಶ್ನೆಗಳು ಬಂದಿದ್ದವಷ್ಟೆ! ಪ್ರಥಮದಲ್ಲಿ ಗುರುತ್ವವು ನಮಗೆ (ಮಠಾಧಿಪತಿಗಳಿಗೆ) ಸಲ್ಲುವದೇ ಎಂಬುದನ್ನು ಸೂಕ್ಷ್ಮವಾಗಿ ವಿಚಾರಮಾಡಿ ನೋಡಿದರೆ ನಮಗೆ (ಮಠಾಧಿಪತಿಗಳಿಗೆ) ಸಲ್ಲುವದಿಲ್ಲ. ಯಾಕೆಂದರೆ ತಂದೆ-ಮಗ, ಪತಿ-ಪತ್ನೀ ಎಂಬ ವ್ಯವಹಾರವು ಹ್ಯಾಂಗೆ ಒಂದು ವಿಶಿಷ್ಟ ಧರ್ಮವನ್ನೊಳಗೊಂಡಿರುವದೋ ಅದರಂತೆ ಗುರುಶಿಷ್ಯರೆಂಬ ವ್ಯವಹಾರವಾದರೂ ಒಂದು ವಿಶಿಷ್ಟ ಧರ್ಮವನ್ನೊಳಗೊಂಡಿರುವದು. ಆದಾವದೆಂದರೆ ವಿವಿಧ ಸಾಂಸಾರಿಕ ದುಃಖ ದರ್ಶನದಿಂದ ತಪ್ತನಾಗಿ ಕೇವಲ ಮುಕ್ತಿಮಾರ್ಗಾನ್ವೇಷಣಪರನಾಗಿ, ಸ್ವಯಂವರದಲ್ಲಿ ಕನ್ನೆಯು ತನಗೆ ತಕ್ಕ ವರನನ್ನು ಶೋಧಿಸುವಂತೆ, ಶೋಧಿಸಿ ಯಾರು ಬ್ರಹ್ಮನಿಷ್ಠರೋ; ಅಂದರೆ, ಯಾರು ದೇಹೇಂದ್ರಿಯ ವಿಷಯಾದಿಗಳಲ್ಲಿ ಸ್ವಕರ್ತೃತ್ವ, ಭೋಕ್ತೃತ್ವ, ಸ್ವಾಮಿತ್ವವನ್ನು ಅಭಿಮಾನ ಮೂಲಕ ಆರೋಪಿಸಿಕೊಳ್ಳದೆ ಸರ್ವಕ್ಕೂ ಪರಮಾತ್ಮನೇ ಸ್ವತಂತ್ರವೆಂದು, ಅವನ ಆಜ್ಞಾ ಮೇರೆಗೆ ಬ್ರಹ್ಮಾದಿ ಸರ್ವತತ್ವೇಶರು ಶರೀರೇಂದ್ರಿಯಗಳಿಗೆ ವಿಷಯಗಳ ಸಂಬಂಧ ಮಾಡಿ ಮಾಡಿಸುವ ರೆಂದು ಅರಿತು, ತದ್ವಾರಾ ಸುಖ-ದುಃಖಕ್ಕೆ ಸಂಬಂಧವಿಲ್ಲವೆಂಬ ಜ್ಞಾನವನ್ನು ದೃಢತರವಾಗಿಟ್ಟು ಕೊಂಡು ಐಹಿಕಾಮುಷ್ಮಿಕನಶ್ವರ ಫಲಾಪೇಕ್ಷಾರಹಿತರಾಗಿ ಸಂಸಾರ ದಶಾ (ಸೃಷ್ಟಿದಶಾ)ದಲ್ಲಿ ಮಾಡುವ ಶಾಸ್ತ್ರ ವಿಹಿತ ಸರ್ವ ಕರ್ಮಗಳು ಭಗವದಾಜ್ಞಾತ್ವೇನ ಭಾವಿಸಿ ಭಗವದರ್ಪಣ ಬುದ್ಧಿಯಿಂದ ಮಾಡಿ, ಪರ ದ್ರವ್ಯಾದಿಗಳಲ್ಲಿ ಆಕಾಂಕ್ಷಾರಹಿತನಾಗಿ, ಅರಿಷಡ್ವರ್ಗಗಳ ಜಯಿಸಿ, ಮದಮತ್ಸರಾದಿಗಳ ಬಿಟ್ಟು, ಸರ್ವ ಪ್ರಾಣಿಗಳನ್ನು ಭಗವತ್ಪರಿವಾರತ್ವೇನ ಪರಿಗಣಿಸಿ,

ಈಷಣಾತ್ರಯದಲ್ಲಿ ವ್ಯಾಮೋಹ ಪರಿತ್ಯಾಗಮಾಡಿ, ಯದೃಚ್ಛಾ ಸಂತುಷ್ಟನಾಗಿ, ಇರತಕ್ಕಂತಹ ಮಹನೀಯರಿಗೆ ಬ್ರಹ್ಮಸಿಷ್ಠರೆಂದು ಹೇಳುವದು. ಅಂತಹ ಮಹನೀಯರಲ್ಲಿ ಹೋಗಿ ಪ್ರಾಣೈಃ ಅರ್ಥೈಃ ಧನೈರಪಿ ಸೇವಾ ಮಾಡಿ ಪ್ರಸನ್ನೀಕರಿಸಿ, ಪರಾಪರ ತತ್ವಗಳನ್ನು ವಿಚಾರ ಮಾಡುವವರಿಗೆ ಮುಖ್ಯವಾಗಿ ಶಿಷ್ಯರೆನಬೇಕು. ತರುವಾಯ ಶಾಸ್ತ್ರ ಶ್ರವಣ ಮಾಡಿಸಿ ಮಂತ್ರೋಪದೇಶ ಮಾಡುವವರಿಗೆ ಗುರುಗಳೆನ್ನಬಹುದು. ನಂತರ ಗಾಯಿತ್ರೀ ಉಪದೇಶ ಮಾಡಿದವರು, ಪುರೋಹಿತರು, ತದನಂತರ ನಾವು (ಸರ್ವ ಸನ್ಯಾಸಿಗಳು) ಹಾಗೂ ತಂದೆ ಮೊದಲಾದ ಜ್ಯೇಷ್ಠರೂ ಗುರುಗಳೆನಿಸುವರು. ನಾವಾದರೂ ಆಶ್ರಮ ಜ್ಯೇಷ್ಠತ್ವೇನ ಗುರುಶಬ್ದ ವಾಚ್ಯರೇ ಹೊರತು ಸಾಕ್ಷಾತ್ ಗುರುಗಳೆನಿಸಲಾರೆವು. ಯಾಕೆಂದರೆ, 'ಶ್ರೀ ಗುರುಭ್ಯೋನಮಃ ಪರಮ ಗುರುಭ್ಯೋನಮಃ' ಅಂತ ಹೇಳುವಲ್ಲಿ ಮೊದಲನೇ ಎರಡನೇ ನಮಸ್ಕಾರಗಳು ನಮ್ಮಗಳಿಗೆ (ಸನ್ಯಾಸಿಗಳಿಗೆ) ಸಲ್ಲುವದೇ ಇಲ್ಲ. ಯಾಕೆಂದರೆ ಈಗ ರೂಢಿಯಲ್ಲಿರುವ ಭಾವನೆಯಂತೆ ತಪ್ತಮುದ್ರಾ ಪ್ರದಾನ ಮಾಡಿದವರು ಯಾರೋ ಅವರಿಗೆ ಪ್ರಥಮ ನಮಸ್ಕಾರ ಸಲ್ಲುವುದು, ಅಂದರೆ ಅದು ಸರಿ ಹೋಗುವುದಿಲ್ಲ. ಮತ್ತು ಅವರಿಗೆ ಸನ್ಯಾಸಾಶ್ರಮ ಕೊಟ್ಟವರಿಗೆ ದ್ವಿತೀಯ ನಮಸ್ಕಾರವೆಂದರೆ ಅದೂ ಕೂಡುವುದಿಲ್ಲ. ಯಾಕೆಂದರೆ ಮೂರನೇ ನಮಸ್ಕಾರ ನೇರವಾಗಿ ಶ್ರೀ ಮದಾಚಾರ್ಯರಿಗೆ ಮುಟ್ಟುವ ಪ್ರಯುಕ್ತ ನಮಗೆ ತಪ್ತಮುದ್ರಾ ಪ್ರದಾನ ಮಾಡಿದ ಯತಿಗಳು, ನಂತರ ಅವರಿಗೆ ಸನ್ಯಾಸಾಶ್ರಮ ಕೊಟ್ಟವರ ಹೊರ್ತು ಶ್ರೀ ಮದಾಚಾರ್ಯರ ಪರ್ಯಂತ ಕ್ರಮವಾಗಿ (ಆರೋಹಣ ಕ್ರಮದಿಂದ) ಪೀಳಿಗೆಯಲ್ಲಿರುವ ಯತಿಗಳ ಗತಿಯೇನು? ಮತ್ತು ಒಬ್ಬನಿಗೆ ಒಂದೇ ಪೀಳಿಗೆಯ ಮೂರು ಮಂದಿ ಸ್ವಾಮಿಗಳವರಿಂದ ತಪ್ತಮುದ್ರಾ ಧಾರಣ ಸಂಭವಿಸಿದ್ದರೆ ಈಗಿನ ಭಾವನಾಕ್ಕನುಸರಿಸಿ 'ಶ್ರೀ ಗುರುಭ್ಯೋನಮಃ, ಪರಮ ಗುರುಭ್ಯೋನಮಃ'ವೆಂಬ ನಮಸ್ಕಾರಗಳು ಯಾವ ಯಾವ ಸ್ವಾಮಿಗಳಲ್ಲಿ ಯಾವ-ಯಾವ ರೀತಿ ಕೊಡುವವು? ಒಬ್ಬನಿಗೆ ಒಂದೇ ಪೀಳಿಗೆಯ ಇಬ್ಬರು ಮೂರುಮಂದಿ ಯತಿಗಳಿಂದ ತಪ್ತಮುದ್ರಾ ಧಾರಣವಾಗುವುದು ಅಸಂಭವನೀಯವೆನ್ನಲಿಕ್ಕಾಗದು. ಶ್ರೀ ಸತ್ಯಧ್ಯಾನತೀರ್ಥ, ಶ್ರೀ ಸತ್ಯಜ್ಞಾನತೀರ್ಥ, ಶ್ರೀ ಸತ್ಯಧೀರತೀರ್ಥ ಶ್ರೀಪಾದಂಗಳವರಿಂದಲೂ, ಇದರಂತೆ ಇತರ ಮಠೀಯ ಆಯಾ ಪೀಳಿಗೆಯ ಇಬ್ಬರು ಮೂರು ಮಂದಿ ಸ್ವಾಮಿಗಳವರಿಂದ ತಪ್ತಮುದ್ರಾ ಧಾರಣ ಮಾಡಿಸಿಕೊಂಡವರು ಅನೇಕರಿದ್ದಾರೆ. ಅಂದಮೇಲೆ ಕೇವಲ ತಪ್ತಮುದ್ರಾ ಪ್ರದಾನಕ್ಕೇನೇ ಮಹತ್ವಕೊಟ್ಟು, ತಪ್ತಮುದ್ರಾ ಪ್ರದಾತೃಗಳಿಗೇನೇ ಗುರುತ್ವದ ವೈಶಿಷ್ಟ್ಯವು ಸಂಭವಿಸುವ ದೆಂಬುವುದು ಕೂಡಲಾರದು ಮತ್ತು ಅಸಮಂಜಸವು.

ಇನ್ನು ಎರಡನೆ ಪ್ರಶ್ನೆಗೆ ಗುರುಶಿಷ್ಯರ ಧರ್ಮಗಳನ್ನು ವಿವರಿಸಿದ್ದೇವೆ. ಆದ್ದರಿಂದ ಪುನಃ ಪ್ರತಿಪಾದಿಸುವದನವಶ್ಯಕ. ಇನ್ನು ಪೂರ್ವೋಕ್ತ ಪ್ರಕಾರ ಗುರುಶಿಷ್ಯರ ಶ್ರೇಣಿಯಲ್ಲಿ ಸೇರಿದ್ದವರ ವಿಷಯದಲ್ಲಿ ಎರಡನೆಯ ಪ್ರಶ್ನೆ ಅನ್ವಯಿಸುವುದಿಲ್ಲ. ಆದಾಗ್ಯೂ ಆಶ್ರಮ ಜ್ಯೇಷ್ಠತ್ವ ಲಕ್ಷಣದಿಂದಲೂ, ತಪ್ತಮುದ್ರಾ ಪ್ರದಾನ (ಲಿಂಗ) ದಿಂದಲೂ ಹಟದಿಂದ ಗುರುತ್ವವನ್ನು ಕೂಡಿಸುವ ಪಕ್ಷದಲ್ಲಿ **'ಶತ್ರೋರಪಿ ಗುಣಾ ಗ್ರಾಹ್ಯಾಃ ದೋಷಾ ವಾಚ್ಯಾ ಗುರೋರಪಿ'** ಅಂತ

ಶ್ರೀಮದಾಚಾರ್ಯರೇ ಪ್ರಮಾಣೋದಾಹರಿಸಿರುವರೆಂದ ಮೇಲೆ ಗುರುಗಳ ಗುಣದೋಷಗಳನ್ನು ಎಣಿಸಬಾರದೆಂಬುದೇನು? ಶ್ರೀ ಪರಮಾತ್ಮನೊಬ್ಬನೇ ದೋಷ ರಹಿತನು ತರುವಾಯ ಶ್ರೀ ಲಕ್ಷ್ಮೀದೇವಿಯರು, ಅನಂತರ ವಾಯುದೇವರು. ಅವರಲ್ಲಿಯೂ (ಲಕ್ಷ್ಮೀದೇವಿಯರಲ್ಲಿಯೂ) ಪಾರತಂತ್ರ್ಯ ರೂಪದೋಷ ಹಾಗೂ ವಾಯು ದೇವರಲ್ಲಿ ಭಗವತ್‌ಪ್ರೀತ್ಯರ್ಥವಾಗಿಯೂ ತಾರತಮ್ಯ ದ್ಯೋತಕವಾಗಿಯೂ ಅಜ್ಞಾನ ಭಯ ದೋಷ, ಜೀವಕೋಟಿಪ್ರವಿಷ್ಟತ್ವ, ದಗ್ಧಪಟದಂತಾದರೂ ಲಿಂಗದೇಹ ಇರುವಿಕೆ ಹೇಳಲ್ಪಡುತ್ತದೆ. ತದನಂತರ ಗರುಡ, ಶೇಷ, ರುದ್ರಾದಿಗಳ ಮೊದಲ್ಗೊಂಡು ಸರ್ವ ಜೀವರೂ ದೋಷ ಉಳ್ಳವರೇ. ಈ ದೋಷವನ್ನು ಗುಣವೆಂದು ಹೇಳುವದೆಂದರೆ ಅದು ಯಥಾರ್ಥ ಜ್ಞಾನದಲ್ಲಿ ಸೇರುವುದಿಲ್ಲ. ಇಂತಹ ಜ್ಞಾನಕ್ಕೆ ವಿಪರೀತ ಜ್ಞಾನವೆಂದು ಹೇಳಲಾಗುವುದು. ಈ ತರ ವಿಪರೀತ ಜ್ಞಾನಕ್ಕೆ ತಮೋಯೋಗ್ಯರೇ ಪಾತ್ರರು. (ದೇವತೆಗಳಿಗೆ ಸಂಬಂಧಿಸಿದ ಈ ದೋಷ ಉಲ್ಲೇಖವು ತರತಮಭಾವಘಟಿತ ಜ್ಞಾನಕ್ಕೆ ಪೂರಕವಾದುದೇ ಹೊರತು ಕೇವಲ ದೋಷೋದ್ಘಾಟನೆಗೆ ಅಲ್ಲ.) ಆದರೆ, ಸ್ವಾಮಿಗಳ ಗುಣಗಳೇ ಇರಲಿ, ದೋಷಗಳೇ ಇರಲಿ, ಅವರ-ಅವರ ಗುಣ ಕರ್ಮಕ್ಕನುಸರಿಸಿದ ಫಲಕ್ಕೆ ಅವರೇ ಪಾತ್ರರಾಗುವರು. ಆ ಗುಣದೋಷಗಳು ನಮಗೆ ಕಾರಣವಿಲ್ಲ. ಅವರುಗಳು ಮಾಡುವ ಆಜ್ಞೆ ಸರ್ವಾತ್ಮನಾ ನಮಗೆ ಮುಖ್ಯವೆಂದು ಹೇಳುವದೂ ಯೋಗ್ಯವಾಗುವದಿಲ್ಲ. ಯಾಕೆಂದರೆ, **"ಗುರೂಕ್ತ ಮಪಿನಗ್ರಾಹ್ಯಂ ಯದನರ್ಥ್ಯೇಽರ್ಥ ಕಲ್ಪನಂ"** (ಪ್ರಹ್ಲಾದ ರಾಯರ ವಾಕ್ಯ) ಎಂದು ಭಾಗವತವಚನವಿರುವದರಿಂದ ಗುರುತ್ವ ವಿಶಿಷ್ಟ ಲಕ್ಷಣ ಉಳ್ಳ ಗುರುಗಳೇ ಆಗಲಿ, ಅವರು ಮಾಡುವ ಆಜ್ಞೆಯನ್ನು ಪ್ರತಿಯೊಬ್ಬರು ಶಾಸ್ತ್ರದೃಷ್ಟಿಯಿಂದ ವಿಚಾರ ಮಾಡಿ, ಕಾರ್ಯಗಳನ್ನು ನಿರ್ಣಯ ಮಾಡಿಕೊಳ್ಳಬೇಕು. ಗುರುಶಬ್ದ ವಾಚ್ಯರು ಕಲ್ಯಾವೇಶದಿಂದ ಮಾಡಿದ ಆಜ್ಞೆಯನ್ನು ಕೇವಲ ಅಂಧಶ್ರದ್ಧೆಯಿಂದ ನಡೆಸೋಣ ಅನರ್ಥದಾಯಕವಾಗುವದು. ಹ್ಯಾಗೆಂದರೆ, ವಿಶಿಷ್ಟ ಗುರುತ್ವ ಲಕ್ಷಣ ವಿರಹಿತರು ಮಾಡುವ ಆಜ್ಞಾತ್ಯಾಜ್ಯವೆಂದು ಕೈಮುತ್ಯನ್ಯಾಯದಿಂದ ಸಿದ್ಧವಾಗಿದೆ. ಯಾಕೆಂದರೆ, ಈ ಗುರುವಾಚ್ಯರು ಅಭಿಮಾನಾದಿ ದೋಷಗಳಿಂದ ಪೂರಿತರಾಗಿ, ಆತ್ಮಾತ್ಮೀಯ ಮೋಹಪಾಶದಿಂದ ಬದ್ಧರಾಗಿ, ಅಹಂಕಾರದಿಂದ ಧರ್ಮಾಧರ್ಮಗಳ ಯೋಗ್ಯ ವಿಮರ್ಶನಾ ಶೂನ್ಯರಾಗಿ ಮಾಡುವ ಆಜ್ಞೆಯು ಅನರ್ಥದಾಯಕವೇ ಇರುತ್ತದೆ. ಹ್ಯಾಗೆಂದರೆ : ಶ್ರೀ ಮದಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಸರ್ವ ಶಾಖೋಪ ಶಾಖಾ ಮಠಗಳ ಯತಿಗಳೆಲ್ಲರೂ ಆಶ್ರಮ ಜ್ಯೇಷ್ಠತ್ವೇನ ಹಾಗೂ ಶ್ರೀ ಮದಾಚಾರ್ಯರ ಶಾಖಾವಲಂಬತ್ವೇನ (ಪರಸ್ಪರ) ಮಾನ್ಯರು ಹಾಗೂ ಗೃಹಸ್ಥಾಶ್ರಮಿಗಳಿಗೆ ಏಕರೀತ್ಯಾ (ಸಮಾನವಾಗಿ) ಮಾನ್ಯರು. ಆ ಯತಿಗಳು ತಮ್ಮ ಧರ್ಮಕ್ಕನುಸರಿಸಿ ಗ್ರಾಮ-ಗ್ರಾಮಗಳಿಗೆ ಬಂದರೆ ಮತ್ತೊಬ್ಬರು ತಮ್ಮ ವೈಷಮ್ಯ ಮುಂದುಮಾಡಿ, ಬಂದ ಯತಿಗಳ ಸತ್ಕಾರ ಮಾಡದಾಗಿ ಆಜ್ಞಾ ಮಾಡುವರು. ಇದು ಅನುಚಿತವು. ಈ ಆಜ್ಞೆಯನ್ನು ಪಾಲಿಸುವವರು ಗೃಹಸ್ಥಾಶ್ರಮಿಗಳೆ. ಆದರೆ ಇದು ಅನರ್ಥದಾಯಕವಲ್ಲವೇ? ಪ್ರತಿಯೊಬ್ಬ ಯತಿಗಳಲ್ಲಿಯೂ ಯೋಗ್ಯತಾ ತಾರತಮ್ಯವಿದ್ದರೂ ಯತಿತ್ವರೂಪ ಸಾಮ್ಯ ಉಂಟು. **"ಕಾಷಾಯ ದಂಡಮಾತ್ರೇಣ ಯತಿಃ ಪೂಜ್ಯೋನ (ಕಿಂತು) ಸಂಶಯಃ"** ಎಂದು ಅರ್ಥ ಮಾಡಿ ಉಪದೇಶ

ಮಾಡುವರು. ಈ ರೀತಿ ಪ್ರತಿಪಾದಿಸುವ ಮಹನೀಯರಲ್ಲಿ ಈ ಅರ್ಥವು ಅನ್ವಯಿಸುವದು. ಈ ಯತಿಗಳು ಅಭಿಮಾನ ಮೂಲಕ ಮಾಡುವ ಆಜ್ಞೆಯು ಯಾವ ರೀತಿ ಅನರ್ಥದಾಯಕ ವೆಂಬುವದನ್ನು ಒಂದು ಉದಾಹರಣದಿಂದ ತೋರಿಸುತ್ತೇವೆ. ವಿಷ್ಣುಭಕ್ತರಿಂದ ಅವಶ್ಯಾನುಷ್ಠೇಯ ವಾದ ಏಕಾದಶೀ ವ್ರತವು ಯಾವರೀತಿ ಘಟಿ ಪಳಗಳು ಬಂದರೆ ಯಾವ ರೀತಿ ಅನುಷ್ಠಾನ ಮಾಡಬೇಕೆಂಬುವುದನ್ನು "ಕೃಷ್ಣಾಮೃತ ಮಹಾರ್ಣವ"ವೆಂದು ಸ್ವತಂತ್ರ ಗ್ರಂಥದಿಂದ ಶ್ರೀ ಮದಾಚಾರ್ಯರೂ ನಿಬಂಧನ ಮಾಡಿದ್ದಾರೆ. ಹೀಗಿದ್ದಾಗ್ಯೂ ಮಠತ್ರಯದವರು (ಉತ್ತರಾದಿ, ರಾಯರ, ವ್ಯಾಸರಾಯ ಮಠದವರು) ಬೇರೆ ಪ್ರಮಾಣಾಧಾರ ಮಾಡಿಕೊಂಡು ಆ ಒಂದು ಆಧಾರದಿಂದಲೇ ಬೇರೆ-ಬೇರೆ ಅರ್ಥಮಾಡಿ ಒಮ್ಮೊಮ್ಮೆ ಬೇರೆ-ಬೇರೆ ಏಕಾದಶೀಯಾಗು ವಂತೆ ಮಾಡುವರು, ಇದು ಉಚಿತವಾದೀತೆ? ಪ್ರವಾಹತ ನಿತ್ಯ ಕಾಲವನ್ನು ಸೂರ್ಯ ಚಂದ್ರಾದಿಗಳ ಉದಯಾಸ್ತಗಳಿಂದ ವಿಭಾಗ ಮಾಡಿ, ಲವ, ತ್ರುಟಿ ಮೊದಲ್ಗೊಂಡು ಯುಗಕಲ್ಪ ಪರ್ಯಂತ ಸಂಕೇತ ಮಾಡಲ್ಪಟ್ಟಿದೆ. ಈ ಸಂಕೇತವನ್ನನುಸರಿಸಿ ವಿಭಾಗಿಸಲ್ಪಡುವ ಕಾಲವನ್ನು ಜ್ಯೋತಿಃಶಾಸ್ತ್ರದಿಂದ ತಿಳಿದುಕೊಳ್ಳಬೇಕಾಗುವುದು. ಈ ಜ್ಯೋತಿಃ ಶಾಸ್ತ್ರದ ಸಿದ್ಧಾಂತವು, ಕಾಲಗತಿಸಿದಂತೆ ಶಿಥಿಲತ್ವವನ್ನು ಹೊಂದುವದರಿಂದ ಕಾಲವು ಗತಿಸಿದಂತೆ ಪೂರ್ವಗ್ರಂಥದ ಸಿದ್ಧಾಂತವು, ಪ್ರತ್ಯಕ್ಷ ವಿರೋಧ ಬರೋಣದರಿಂದ ನೂತನ ಗ್ರಂಥ ಸಿದ್ಧಾಂತಗಳು ಹುಟ್ಟಲು ಕಾರಣವಾಯಿತು. ಬೇರೆ ಬೇರೆ (ಗ್ರಂಥಗಳ) ಸಿದ್ಧಾಂತಗಳಲ್ಲಿ ಏಕವಾಕ್ಯತೆಯು ಇಲ್ಲದ್ದರಿಂದ ಯಾವ (ಗ್ರಂಥ) ಸಿದ್ಧಾಂತವನ್ನವಲಂಬಿಸಬೇಕೆಂದು ಸಂದೇಹ ಉಂಟಾಯಿತು. ಈ ವಿಷಯದಲ್ಲಿ ತ್ರಿವಿಕ್ರಮ ಪಂಡಿತಾಚಾರ್ಯರು ಆ ಕಾಲದಲ್ಲಿ ಪ್ರಚಲಿತವಿರುವ 'ಆರ್ಯಭಟ್ಟ' ಸಿದ್ಧಾಂತದಿಂದ ಗಣಿತ ಮಾಡಿಕೊಳ್ಳಬೇಕೆಂತಲೂ ಅಥವಾ ಸೂರ್ಯ ಸಿದ್ಧಾಂತ ಗಣಿತದಿಂದ ಬರುವ ವ್ಯತ್ಯಾಸವನ್ನು ಆರ್ಯಮಾನವೆಂಬ ಸಂಕೇತದಿಂದ ನ್ಯೂನತೆಯ ಪೂರ್ಣಕ್ಕಾಗಿ ಕೆಲವು ಘಟಿ, ಪಳಗಳ ತುಲನಾತ್ಮಕ ಪದ್ಧತಿಯನ್ನೇ ಯೋಜನಾ ಮಾಡಿ ಸರಿಪಡಿಸಿದರು. ಅನಂತರ ಸುಮಾರು ನಾಲ್ಕೈದುನೂರು ವರುಷಗಳ ಮೇಲೆ ಶ್ರೀ ವಿದ್ಯಾಧೀಶತೀರ್ಥರೂ (ಇವರು ಉತ್ತರಾದಿಮಠದ ಪೀಳಿಗೆಯಲ್ಲಿ ಪಾಂಡುರಂಗಿವಂಶೀಯ ಯತಿಗಳು) ಮತ್ತು ಶ್ರೀ ವ್ಯಾಸರಾಜತೀರ್ಥರೂ ಹಾಗೂ ಶ್ರೀ ಸುಮತೀಂದ್ರ ತೀರ್ಥರೂ ಆಗಿನಕಾಲಕ್ಕೆ ಅನುಸರಿಸಿ ಕಂಡುಬಂದ ವ್ಯತ್ಯಾಸವನ್ನು ಸೂರ್ಯ ಸಿದ್ಧಾಂತ ಗಣಿತದಿಂದ ಬರುವ ಘಟಿ ಪಳಗಳಿಗೆ ಆರ್ಯಮಾನ ಕೂಡಿಸುವುದಲ್ಲದೆ 'ಲಿಪಿಯನ್ನು' (Leap) ಕೂಡಿಸುವ ಪದ್ಧತಿಯನ್ನು ಯೋಜನಾಮಾಡಿದರು. ಈ ರೀತಿ ಯೋಜನಾತ್ಮಕ ಪದ್ಧತಿಯಿಂದ ಕಂಡುಬರುವುದೇನೆಂದರೆ, ಕಾಲವು ಗತಿಸಿದಂತೆ ಹಿಂದಿನ (ಗಣಿತ) ಸಿದ್ಧಾಂತವು ಸರಿಹೋಗುವುದಿಲ್ಲಾದ್ದರಿಂದ ಆಗಾಗ ಚಾಲನಾ ಕೊಡುತ್ತಾ ಹೋಗಬೇಕಾಗುವುದು ಅತ್ಯವಶ್ಯವೆಂದು ಕಂಡುಬರುತ್ತದೆ. ಆದ್ದರಿಂದ ಜ್ಯೋತಿಃಶಾಸ್ತ್ರ ಸಿದ್ಧಾಂತ (ಗಣಿತ) ಅಭಿಜ್ಞರು ಕೂಡಿ ಮತ್ಸರ, ಅಭಿಮಾನಾದಿ ದೋಷರಹಿತರಾಗಿ ಈ ವಿಷಯದಲ್ಲಿ ವಿಷ್ಟು ಮೇಲನಾ ಮಾಡಿದರೆ ಪ್ರತ್ಯಕ್ಷ ವಿರೋಧಬಾರದೆ ಸರಿಹೋಗುವದೆಂಬುದನ್ನು ನಿರ್ಣಯಮಾಡಿ, ಅದರಂತೆ ಸರ್ವ ವೈಷ್ಣವರು ಅನುಷ್ಠಾನ ಮಾಡುವುದಾಗಿ ಸಂದೇಶವಿತ್ತರೆ

ಯೋಗ್ಯವಾಗುತ್ತದೆ ಅಥವಾ ಆಧುನಿಕ ಸಂಶೋಧನಾತ್ಮಕ ಸಾಮಗ್ರಿಗಳಿಂದ ಕಂಡುಬರುವ 'ದೃಕ್ ಪ್ರತ್ಯಯ' ರೀತ್ಯಾ ಅಥವಾ ಆರ್ಯಭಟ್ಟ ಗಣಿತ ರೀತ್ಯಾ ಘಟಿ, ಪಳಗಳನ್ನು ತಿಳಿದುಕೊಂಡು ಸರ್ವ ತಿಥಿಗಳ ನಿರ್ಣಯ ಮಾಡಿಕೊಂಡು (ಪಂಚಾಂಗವನ್ನು ರಚಿಸಿದರೆ) ಅರ್ಥಾತ್ ತಿಥಿ-ತ್ರಯಗಳ ಯಥಾರ್ಥ ಘಟಿ, ಪಳಗಳು ಗೊತ್ತಾಗಿ 'ಶ್ರೀ ಕೃಷ್ಣಾಮೃತ ಮಹಾರ್ಣವ'ದಲ್ಲಿ ಹೇಳಿದಂತೆ ಸರ್ವ ಮಧ್ವ-ಮತಾನುಯಾಯಿಗಳಲ್ಲಿ ಮಠ (ಮತ) ಭೇದದಿಂದ ವ್ಯತ್ಯಾಸವಾಗದೆ ಉಕ್ತಕಾಲಕ್ಕೆ ಸರ್ವರಿಂದಲೂ ಏಕರೀತ್ಯಾ ಅನುಷ್ಠಾನ ಮಾಡಲು ಮಾರ್ಗವಾಗುವುದು. ಆದರೆ ಅಭಿಮಾನಾದಿ ದೋಷಗಳಿಂದ ಮಠಾಧಿಪತಿಗಳು ಹೇಳಿದಂತೆ ಮಾಡಿದರೆ ಅಂಥ ಶ್ರದ್ಧೆಯಿಂದ ವಿಧಿ ವಿಹಿತವೆನಿಸಲಾರದು. ಮತ್ತು ವಿಧಿ ವಿರುದ್ಧವಾಗುವುದರಿಂದ ಭಗವಂತನ ಭಕ್ತಿಗೆ ಕಾರಣವಾಗದೆ 'ಯಮರಾಯನ' ದಂಡನೆಗೆ ಕಾರಣವಾಗುವುದು. ಯಾಕೆಂದರೆ, ನಮ್ಮ ಗಣಿತದಿಂದಾಗಲಿ, ತಪ್ಪು ತಿಳುವಳಿಕೆಯಿಂದಾಗಲಿ ಘಟಿ, ಪಳಗಳ ಯಥಾರ್ಥ ಜ್ಞಾನ ಮಾಡಿಕೊಳ್ಳದೆ ದಶಮಿಯನ್ನು 'ಏಕಾದಶೀತ್ವೇನ' ಏಕಾದಶಿಯನ್ನು 'ದಶಮಿತ್ವೇನ' ಅನುಷ್ಠಾನ ಮಾಡಿದರೆ ತಪ್ಪಾಗದಿರುವದೇ? ನಮ್ಮ (ತಪ್ಪು) ಗಣಿತದಂತೆಯೇ ಸೂರ್ಯ ಚಂದ್ರಾದಿಗಳು ಚಲಿಸುವರೋ? ಎಂದಿಗೂ ಇಲ್ಲ. ಅವರ ಗತಿಯನ್ನೇ ನಾವು ಯಥಾರ್ಥವಾಗಿ ತಿಳಿದುಕೊಂಡು ಅನುಷ್ಠಾನ ಮಾಡಬೇಕು. ಇನ್ನು ಯಾರಾದರೊಬ್ಬರು ಹೇಳಿದಂತೆ ನಾವು ಅನುಷ್ಠಾನ ಮಾಡಿದರಾಯಿತು. ಅದರ ಪುಣ್ಯ ಪಾಪಕ್ಕೆ ನಾವು ಹೊಣೆಗಾರರಲ್ಲ, ಅಂತ ಕೆಲವರ ಮನಸ್ಸಿನಲ್ಲಿ ಭಾವನಾ ಇದೆ. ಇದು ಶುದ್ಧ ತಪ್ಪು. ಯಾಕೆಂದರೆ ನಾವುಗಳು ಮಾಡುವ ಸರ್ವ ಅನುಷ್ಠಾನಗಳು ಶ್ರೀ ಶ್ರೀ ಪರಮಾತ್ಮನು ಪ್ರೀತನಾಗಲೆಂದು ಭಕ್ತಿಯಿಂದಲೂ, ಶ್ರೀ ವಿಷ್ಣುಪ್ರೇರಣಯಾ, ಶ್ರೀ ವಿಷ್ಣು ಪ್ರೀತ್ಯರ್ಥಂ ಎಂದು ಅನುಷ್ಠಾನ ಮಾಡುವೆವು ಹೊರತು (ಹಿರಣ್ಯಕಶಿಪು ಪ್ರೇರಣಯಾ ಹಿರಣ್ಯಕಶಿಪು ಪ್ರೀತ್ಯರ್ಥಂ ಎಂಬಂತೆ) ಮಠಾಧಿಪತಿ ಪ್ರೇರಣಯಾ ಮಠಾಧಿಪತಿ ಪ್ರೀತ್ಯರ್ಥಂ ಎಂದು ಅನುಷ್ಠಾನ ಮಾಡುವುದಿಲ್ಲ. ಕಥಾಚಿತ್ ಮಾಡಿದರೆ ಅದು ಶಾಸ್ತ್ರವಿಹಿತ ಕರ್ಮವೆನಿಸದೆ ಹೇಳಿದವರೂ, ಕೇಳಿದವರೂ ಸಹ ಯಮರಾಯನ ಶಾಸನಕ್ಕೆ ಪಾತ್ರರಾಗುವರು. ಪ್ರಯುಕ್ತ ಶಾಸ್ತ್ರ ವಿಚಾರದಲ್ಲಿ ಅಭಿಮಾನಾದಿ ದೋಷಗಳನ್ನು ಮುಂದುಮಾಡದೆ ಶ್ರೀಮದಾಚಾರ್ಯರ ಮತಾವಲಂಬಿಗಳಾದ ಸರ್ವ ಮಠಾಧೀಶರೂ ಏಕತ್ರ ಮಿಳಿತರಾಗಿ ಪರಿಶೀಲಿಸಿ ನಿರ್ಣಯ ಮಾಡಿದಂತೆ ಸರ್ವರೂ ಅನುಷ್ಠಾನ ಮಾಡಬೇಕು. ಆದರೆ, ಅವರುಗಳಲ್ಲಿ ಐಕ್ಯಮತವಿಲ್ಲದೆ ಮನ ಬಂದಂತೆ ವಿಧಿ ವಾಕ್ಯಗಳನ್ನು ಆಜ್ಞಾ ಮಾಡಿದರೆ ಆಜ್ಞೆಯನ್ನು ಉಲ್ಲಂಘಿಸಿ, ಶಾಸ್ತ್ರ ಸಮ್ಮತವಾಗುವಂತೆ ನಡೆದುಕೊಂಡರೆ ಅನರ್ಥವಾಗಲಾರದು. ಮತ್ತು ಒಮ್ಮೊಮ್ಮೆ ಮಠಾಧಿಪತಿಗಳು ಹಾಗೂ ಶಾಸ್ತ್ರ ಪ್ರತಿಪಾದಕರ ಮತಭೇದದಿಂದ ಕಂಡುಬರುವ ವ್ಯತ್ಯಾಸದಿಂದ ಸಂಶಯ ಗ್ರಸ್ತನು ಪಾರಾಗುವ ಸಲುವಾಗಿಯೇ '**ಬಹ್ವಾಗಮ ವಿರೋಧೇಷು ಬ್ರಾಹ್ಮಣೇಷು ವಿವಾದಿಷು**' ಎಂಬ ಪ್ರಮಾಣವನ್ನು ಶ್ರೀ ಮದಾಚಾರ್ಯರು ಉದಾಹರಿಸಿರುವರು. ಮುಂದೆ ಶಾಸ್ತ್ರಜ್ಞರಲ್ಲಿ ಮತ್ತು ಮಠಾಧಿಪತಿಗಳಲ್ಲಿ ಯಾವ ಮತಭೇದ ಉಂಟಾಗುವುದೆಂಬುದನ್ನು ತಿಳಿದೇ ಮೇಲ್ಕಂಡ ಪ್ರಮಾಣವನ್ನು ಉದಾಹರಿಸಿರುವರು. ಶ್ರೀ ಮದಾಚಾರ್ಯರು ಸರ್ವಜ್ಞರು,

ಪ್ರಯುಕ್ತ '**ಗುರೂಕ್ತಮಪಿನಗ್ರಾಹ್ಯಂ ಯದನರ್ಥೇಽರ್ಥ ಕಲ್ಪನಂ**' ಎಂಬ ಪ್ರಹ್ಲಾದರಾಯರ ವಾಕ್ಯವನ್ನು ಅನುಸರಿಸಿ ಮೂಢಮತಿಗಳಾಗದೆ ಚೆನ್ನಾಗಿ ವಿಮರ್ಶನಾಮಾಡಿಕೊಂಡು ವಿಹಿತಾವಿಹಿತಗಳನ್ನು ತಿಳಿದು ಅನುಷ್ಠಾನ ಮಾಡಿದರೇನೇ ಶ್ರೇಯಃ ಪ್ರಾಪ್ತಿಯಾಗುವುದು. "**ಯಸ್ಯದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ**" ಎಂಬ ವಾಕ್ಯಾರ್ಥವು ಆಶ್ರಮ ಜ್ಯೇಷ್ಠತ್ವೇನ ಮಾತ್ರದಿಂದ ನಮ್ಮಗಳಲ್ಲಿ (ಮಠಾಧಿಪತಿಗಳಲ್ಲಿ) ಕೂಡಲಾರದು. ಇಷ್ಟೆಲ್ಲ ವಿಚಾರ ಮಾಡಿ ನೋಡಲಾಗಿ ನಮ್ಮ ಗುರುತ್ವವು, ಎಂತಹದೆಂದರೆ : ಲೋಕದಲ್ಲಿ ಹೆಣ್ಣು ಹುಡುಗಿಯರು ಕೂಡಿ, 'ಕೋಟಿ ಗೌರಿ' ಎಂಬ ಆಟವನ್ನು ಆಡುವಾಗ ಪರಸ್ಪರ ಗಂಡನ ಹೆಸರನ್ನೊಂದು ಕೇಳುವುದುಂಟು. ಅವರುಗಳಲ್ಲಿ ಲಗ್ನವಾದವರು ತಮ್ಮ ಗಂಡನ ಹೆಸರು ಹೇಳುವರು. ಲಗ್ನವಾಗದವರು ಚಂದ್ರನೆಂದು ಹೇಳುವರು. (ಚಂದ್ರಮನೆಂದು ಹೇಳುವಂತೆ) ಅದರಂತೆ ನಮ್ಮ ಮಠಾಧಿಪತಿಗಳ ಗುರುತ್ವವು" ಎಂದು ಉಪನ್ಯಾಸ ಮಾಡಿದರು.

೬. ಮಂತ್ರಾಲಯಕ್ಕೆ ತೆರಳದೆ ಮರಳಿದರು.

ಈ ಪ್ರವಚನಗಳಿಂದ ನಮ್ಮಲ್ಲಿದ್ದ ಮಠ ಮತ್ತು ತದಾಜ್ಞಾ ವಿಷಯಕ ಅನೇಕ ವಿಷಯಗಳು ಕೆಲವು ಮಟ್ಟಿಗಾದರೂ ನಿರಾಸವಾದವೆಂದು ಸಭಿಕರನೇಕರು ಸಂತೋಷ ವ್ಯಕ್ತಮಾಡಿದರು. ಇವರು (ಈ ಚರಿತ್ರನಾಯಕರು) ಹೋದ ಹೋದಲ್ಲಿ ಸನ್ಯಾಸಾದಿ ಧರ್ಮಗಳನ್ನು ಹೇಳುತ್ತಲೂ, ತಪ್ತಮುದ್ರಾ ವಿಷಯಕ ಯಥಾ ಶಾಸ್ತ್ರ ವಿಧಿ ಪ್ರತಿಪಾದನಾ ಮಾಡುತ್ತಲೂ, ತಾವು ಯಥಾರ್ಥ ಸನ್ಯಾಸ ಧರ್ಮದ ಆದರ್ಶ ಪುರುಷರಾಗಿಯೂ ಇರುವದರಿಂದ ನಿಜತತ್ವ ತಿಳಿಯುವ ಅಪೇಕ್ಷಿಗಳಿಗೆ ಅಲ್ಹಾದಕರವಿದ್ದರೂ ದ್ರವ್ಯ ಪ್ರತಿಷ್ಠಾ ಕಾಮಿಗಳಿಗೆ ಸಹನವಿರಲಿಲ್ಲ. ತತ್ರಾಪಿ ಮೇಲ್ಕಾಣಿಸಿದ ಪ್ರವಚನದಿಂದ ಪ್ರತಿಷ್ಠಾಕಾಮಿಗಳು ವಿಶೇಷ ತಳಮಳಗೊಂಡರು. ಅಲ್ಲಿಂದ ಮಂತ್ರಾಲಯಕ್ಕೆ ಹೋಗುವ ಇಚ್ಛಾದಿಂದ 'ಮಾಧವಾರ' ಕ್ಕೆ ಬರಲು ಆ ಕಾಲದಲ್ಲಿದ್ದ ರಾಯರ ಮಠಾಧಿಪತಿಗಳಾದ ಶ್ರೀಸುಶೀಲೇಂದ್ರತೀರ್ಥರು, ಮಂತ್ರಾಲಯಕ್ಕೆ ಬರಕೂಡದೆಂಬುದಾಗಿ ಖೇಡಕರ ಗುಂಡಾಚಾರ್ಯರ ಸಂಗಡ ಹೇಳಿಕಳಿಸಿದರು. 'ನಾವು ಮಂತ್ರಾಲಯಕ್ಕೆ ಬಂದಾಗ್ಯೂ ನಿಮ್ಮಗಳಿಗೆ ಯಾವ ವಿಧದ ತೊಂದರೆ ಕೊಡದೆ, ನಿಮ್ಮಿಂದ ಮರ್ಯಾದೆ ಹೊಂದಬೇಕೆಂಬ ಅಪೇಕ್ಷೆ ಇಲ್ಲದೆ, ಅನುಪಾಧಿಕವಾಗಿ ಪ್ರವಹಿಸುತ್ತಿರುವ ತುಂಗಭದ್ರಾ ನದಿಯಲ್ಲಿ ಸ್ನಾನಾಹ್ನಿಕ ತೀರಿಸಿಗೊಂಡು, ಶ್ರೀ ರಾಘವೇಂದ್ರತೀರ್ಥ ಶ್ರೀಪಾದಂಗಳವರ (ರಾಯರ) ವೃಂದಾವನ ದರ್ಶನ ತೆಗೆದುಕೊಂಡು ನಮ್ಮ ಮಾರ್ಗ ಹಿಡಿದುಕೊಂಡು ಹೋಗುವೆವು. ಆದ್ದರಿಂದ, ನಮ್ಮ ಬರುವಿಕೆಯಿಂದ ಯಾರಿಗೂ ಯಾವತರದ ಉಪಾಧಿ ಇರುವುದಿಲ್ಲ' ಅಂತ ಬಂದಿದ್ದ ಆ ಖೇಡಕರ ಗುಂಡಾಚಾರ್ಯರ ಸಂಗಡ ಹೇಳಿ ತಮ್ಮಲ್ಲಿದ್ದ 'ರಿತ್ತಿ ರಾಮಾಚಾರ್ಯ' ರೆಂಬುವವರನ್ನು ಅವರ ಸಂಗಡ ಕಳುಹಿಸಿದರು. "ಯಾವ ರೀತಿಯಿಂದಲಾದರೂ ಅವರು ಬರುವುದು ಸಮ್ಮತವಿಲ್ಲ. ಇದೂ ಮೀರಿ ಅವರು ಬಂದರೆ ಅವರು ಮಂತ್ರಾಲಯದಲ್ಲಿರುವವರೆಗೂ ರಾಯರ ಗುಡಿ ಬಾಗಿಲು ಮುಚ್ಚಿ ಬೀಗ ಹಾಕಿಬಿಡುತ್ತೇವೆ. ಇದರಿಂದ ರಾಯರ ಪೂಜಾ ಇಲ್ಲದೇ ಹೋಗಬೇಕಾದೀತು!" ಅಂತ ಉತ್ತರ ಹೇಳಿಕಳಿಸಿದರು.

ಈ ಮಾತಿಗೆ ಆಶ್ಚರ್ಯಹೊಂದಿ "ನಮ್ಮ ನಿಮಿತ್ತ ರಾಯರ ವೃಂದಾವನ ಪೂಜಾಸಿಂತು, ಇತರ ಭಾವುಕ ಜನರ ದರ್ಶನಾದಿಗಳಿಗೂ ಪ್ರತಿಬಂಧಕಾಗುವಂತಾದರೆ ನಾವು ಅಲ್ಲಿಗೆ ಹೋಗುವುದು ರಹಿತ ಮಾಡುವುದೇ ಯೋಗ್ಯ" ವೆಂದು ತಮ್ಮ (ಆಶ್ರಮರೀತ್ಯಾ) ಪರಮ ಗುರುಗಳಾದ ಶ್ರೀ ರಘುಕಾಂತತೀರ್ಥ ಪಾದಂಗಳವರಿಂದ ಪ್ರತಿಷ್ಠಾಪನಾ ಮಾಡಲ್ಪಟ್ಟ ಅಣು ಮಂತ್ರಾಲಯದ ರಾಯರ ಸನ್ನಿಧಾನಕ್ಕೆ ಬಂದು ದರ್ಶನ ತೆಗೆದುಕೊಂಡು, ಆದವಾನಿಗೆ ಬಂದು ತಾವು ಪೂರ್ವಾಶ್ರಮದಲ್ಲಿ ಸ್ಥಾಪಿಸಲ್ಪಟ್ಟ ರಾಮದೇವರ ಗುಡಿಯಲ್ಲಿ ವಾಸಮಾಡುವವರಾದರು.

೭. ವಿಷ್ಣುಪ್ರೀತಿಕರ ಸತ್ಕರ್ಮಾನುಷ್ಠಾನವೇ ಮಠದ ಕಟ್ಟಳೆ, ನಿವೃತ್ತಿ ಸಂಗಮಾದಿ ಯಾತ್ರೆ ನಿವೃತ್ತಕರ್ಮವಾಯಿತು.

ಈ ಸಂದರ್ಭದಲ್ಲಿ ಅಂದರೆ ನಾಲ್ಕಾರು ದಿನಗಳಲ್ಲಿ 'ನಾಗನಾಥನ ಹಳ್ಳಿ ಹುಚ್ಚಾರೆಡ್ಡಿ' ಎಂಬ ಶ್ರೀಮಂತನು ಬಂದು "ತಾವು ಇಲ್ಲಿಂದ ಪ್ರಯಾಣ ಮಾಡುವ ಕಾರಣವಿಲ್ಲ. ತಮ್ಮ ನಿತ್ಯ ಖರ್ಚಿಗೆ ಪ್ರತಿ ತಿಂಗಳಿಗೆ ಒಂದು ನೂರು ರೂಪಾಯಿಗಳಂತೆ ಕೊಡುತ್ತ ಹೋಗುತ್ತೇನೆ" ಅಂತ ಹೇಳಿಕೊಂಡನು. ಈ ರೀತಿ ಒಂದು ಸಂವತ್ಸರ ಆದ ಬಳಿಕ ಕನ್ಯಾರಾಶಿಗೆ ಬೃಹಸ್ಪತಿ (ಗುರು) ಬಂದದ್ದರಿಂದ ಕೃಷ್ಣಾ ನದೀಸ್ನಾನ ನಿಮಿತ್ತ ಕೃಷ್ಣಾ, ತುಂಗಭದ್ರಾ ಸಂಗಮವಾದ ಮತ್ತು 'ವಿಶ್ವಾಮಿತ್ರ ಋಷಿಗಳಿಗೆ' ಗಾಯತ್ರೀ ರೂಪ ಪ್ರತ್ಯಕ್ಷವಾದ ಕ್ಷೇತ್ರವನ್ನು ದರ್ಶನ ತೆಗೆದುಕೊಳ್ಳುವ ನಿಮಿತ್ತ ಪ್ರಯಾಣಮಾಡಿದರು.

ಇವರು ಗ್ರಾಮ-ಗ್ರಾಮಗಳಿಗೆ ಹೋದ ಹೋದಲ್ಲಿ ಆಯಾ ಗ್ರಾಮದ ಜನರು ಸ್ವಾಗತವನ್ನಿತ್ತು (ಈಗಿನ ಇತರ ಮಠದ ಪದ್ಧತಿ ಪ್ರಕಾರ) "ಈ ಮಠದ ಕಟ್ಟಳೆ ಏನು?" ಅಂತ ಕೇಳುತ್ತಿದ್ದರು. ಈ ಮಾತಿಗೆ "ನಮ್ಮ ಮಠದ ಕಟ್ಟಳೆ ದ್ರವ್ಯರೂಪದಲ್ಲಿಲ್ಲ ಅದು ಯಾವ ರೂಪದಲ್ಲಿರುವುದೆಂದರೆ, ನೀವುಗಳು ಸಕಾಲದಲ್ಲಿ ಸ್ನಾನ, ಸಂಧ್ಯಾವಂದನೆ (ತ್ರಿಕಾಲದಲ್ಲಿ) ಮೊದಲಾದ ವರ್ಣಾಶ್ರಮೋಚಿತ ಧರ್ಮಕರ್ಮಗಳಲ್ಲಿ ನಿರತರಾಗಿ ಇರುವಿಕೆಯೇ" ನಮ್ಮ ಕಟ್ಟಳೆಯೆಂದು ಹಿತೋಕ್ತಿಯಿಂದ ಜನರನ್ನು ಸಂತೋಷಪಡಿಸಿ ಸನ್ಮಾರ್ಗಕ್ಕೆ (ಅನುಷ್ಠಾನಕ್ಕೆ) ಹಚ್ಚುತ್ತಿದ್ದರು ಮತ್ತು ಈ ವಿಷಯದಲ್ಲಿ ಆದರ ಬುದ್ಧಿ ಹುಟ್ಟುವಂತೆ ತದರ್ಥಗಳ ಪ್ರತಿಪಾದಿಸಿ ಅದರ ಮಹತ್ವಜ್ಞಾನ ಉಂಟುಮಾಡಿಕೊಡುತ್ತಿದ್ದರು. ಈ ರೀತಿ ಅನುಪಾಧಿಕವಾಗಿ ಸಂಚಾರ ಮಾಡುತ್ತ 'ನಿವೃತ್ತಿ ಸಂಗಮ' ಮಾರ್ಗವಾಗಿ 'ಶ್ರೀಶೈಲ'ಕ್ಕೆ ಹೋದರು. ಅಲ್ಲಿ ಶಿವರಾತ್ರಿಯ ನಿಶೀಥಿಕಾಲದಲ್ಲಿ ರುದ್ರದೇವರ ದರ್ಶನ ತೆಗೆದುಕೊಂಡು ಪ್ರಾತಃಕಾಲಕ್ಕೆ ಬೆಟ್ಟದ ಕೆಳಭಾಗ (ಕೊಳ್ಳ)ದಲ್ಲಿ ಪ್ರವಹಿಸುತ್ತಿರುವ ಕೃಷ್ಣಾ (ಪಾತಾಲಗಂಗಾ ಎಂಬ ಹೆಸರಿನ) ನದಿಯ ನಿವೃತ್ತ ಪ್ರದೇಶದಲ್ಲಿ ಒಂದು ಸಪ್ತಕವಾಸ ಮಾಡಿದರು. ಈ ಸ್ಥಲದಲ್ಲಿ ಮಹದರಣ್ಯವಿದ್ದು ವ್ಯಾಘ್ರಾದಿ ಕ್ರೂರ ಮೃಗಗಳ ಸಂಚಾರ ಪ್ರದೇಶವಿದ್ದರೂ, ಕಿಂಚಿದಪಿ ಭೀತರಾಗದೆ, ಮನೋವೈಕಲ್ಯ ಹೊಂದದೆ ವಾಸಮಾಡಿಕೊಂಡಿದ್ದರು. ಆಮೇಲೆ ಪುನಃ ಪರ್ವತಾರೋಹಣ ಮಾಡಿ ನಿರ್ಜನವಾದ ಶ್ರೀಶೈಲದಲ್ಲಿಯೂ ಮೂರು ದಿನಗಳಿದ್ದು, "ಅಹೋಬಲಕ್ಕೆ" ಬಂದರು. ಈ ಸ್ಥಳವಾದರೂ ಜನರಹಿತವಾಗಿದ್ದು ಅಪೂರ್ಣ ಅವಸ್ಥೆಯಲ್ಲಿದ್ದ ದೊಡ್ಡ ಗುಡಿಯನ್ನು ನೋಡಿ "ಆಹಾ! ಈ

ಮಂದಿರವು, ಈ ರೀತಿ ಅನಾಥ ಸ್ಥಿತಿಯಲ್ಲಿ ಇರಲು, ವರ್ಣಾಶ್ರಮೋಚಿತ, ಧರ್ಮಗಳ ಪರಿಪಾಲಿಸುವ ಕ್ಷತ್ರಿಯ (ಹಿಂದು) ರಾಜರುಗಳು ಇಲ್ಲದಿರುವಿಕೆಯೇ ಕಾರಣ. ಮುಂದಾದರೂ ಅಂಥವರು ಭೂಮಿಯನ್ನಾಳುವವರು ಆಗದೆ, ಹುಚ್ಚುತರ ಆಳುವವರಾದರೆ ಈಗ ಊರ್ಜಿತಾವಸ್ಥೆಯಲ್ಲಿರುವ ಮಂದಿರಗಳು ಸಹ ಈ ಮಂದಿರದಂತೆ ದೀನಾವಸ್ಥೆಯನ್ನೇ ಹೊಂದಬಹುದೆಂದು ಖೇದವನ್ನು ವ್ಯಕ್ತಪಡಿಸಿದರು. ಆದರೆ, ಇದ್ದುದರಲ್ಲೇ ಸಮಾಧಾನಕಾರಕವೇನೆಂದರೆ, ಆ ಅದ್ಭುತ ನರಸಿಂಹ ದೇವರ ಗರ್ಭಗುಡಿ ಪೂರ್ಣವಾಗಿದ್ದು ಪೂಜಾ ಉತ್ಸವಾದಿಗಳಿಗೆ ತಕ್ಕ ಏರ್ಪಾಡುಗಳು ಇರುವುವು. ಮತ್ತು ಇತ್ತೀಚೆಗೆ ನೀರಿನ ಅನುಕೂಲತೆಯನ್ನು ಕಲ್ಪಿಸಿರುವರು. ಅಲ್ಲಿಂದ 'ಪ್ರೊದ್ದುಟೂರು' 'ಕಡಪಾ' ಮಾರ್ಗವಾಗಿ ತಿರುಪತಿಗೆ ಬಂದರು. ತಿರುಪತಿ ಪ್ರವೇಶ ಮಾಡುವಾಗ ಈ ಆರ್ಯಕೂಡ್ಲಿ ಅಕ್ಷೋಭ್ಯ ತೀರ್ಥಮಠಕ್ಕೆ ತಿರುಮಲೆ ತಿರುಪತಿ ದೇವಸ್ಥಾನದ ಕಛೇರಿಯಿಂದ ಗಜ-ತುರಗ ವಾದ್ಯ ವೈಭವ (ಇಸ್ತಶಪಾಲ) ದೊಂದಿಗೆ ಪಾಲಕಿಯಲ್ಲಿ ಮೆರವಣಿಗೆಯಿಂದ ಪುರ ಪ್ರವೇಶವಾಯಿತು. ಇಲ್ಲಿಯ ಪೂರ್ವಾಶ್ರಮದ ಶಿಷ್ಯರಾದ 'ನಾರಾಯಣದಾಸರು' 'ಶೇಲಂ ಸುಬ್ಬರಾಯರು ಎಂ.ಎ.' ಮೊದಲಾದವರು ಬಹು ಉತ್ಸುಕತೆಯಿಂದ ಆತಿಥ್ಯಾದಿಗಳನ್ನು ಮಾಡಿದರು. ಒಂದು ಸಪ್ತಾಹದ ನಂತರ ಪರ್ವತಾರೋಹಣ ಮಾಡೋಣವಾಯಿತು. ಆಗಲೂ, ದೇವಸ್ಥಾನದಿಂದ ಇಸ್ತಶಪಾಲ (ವಾದ್ಯ ವೈಭವ)ದೊಂದಿಗೆ ಕರೆದುಕೊಂಡು ಹೋಗಿ ಕೇವಲ ಇವರ ಪರಿವಾರದೊಡನೆ ಶ್ರೀ ವೆಂಕಟೇಶ ದೇವರ ಸಂದರ್ಶನ ಮಾಡಿಸಿ, ಇವರಿಗಾಗಿ ನಿಯಮಿಸಲ್ಪಟ್ಟ ಸ್ಥಳದಲ್ಲಿ ಇಳಿಸಿ 'ತಾವು ಇಲ್ಲಿ ಇರುವ ಪರ್ಯಂತ, ಯಾವ ಸಮಯದಲ್ಲಿಯೂ ನಿರಾತಂಕವಾಗಿ ದರ್ಶನಕ್ಕೆ ಆಸ್ಪದ ಉಂಟು' ಅಂತ ಅಲ್ಲಿಯ ಪೇಷ್ಕಾರನು ವಿಜ್ಞಾಪನಾ ಮಾಡಿಕೊಂಡು ಹೋದನು. ಇವರು ಮರುದಿವಸ ಅಮಂತ್ರಣೋತ್ಸವವನ್ನು, ಬ್ರಹ್ಮೋತ್ಸವವನ್ನು ಮಾಡಿಸಿ ಒಂದು ಸಪ್ತವಾಸ ಮಾಡಿ, (ದರ್ಶನ ಮಾಡಿಕೊಂಡು) ನಂತರ ಅಲ್ಲಿಯವರು ಪದ್ಮಸರೋವರದ ಸುತ್ತಲೂ ಮೆರವಣಿಗೆಯಿಂದ ಇಳಿದು ಕೊಳ್ಳುವ ಸ್ಥಳಕ್ಕೆ ತಂದು ಬಿಟ್ಟರು. (ದೇವಸ್ಥಾನ ಸಿಬ್ಬಂದಿ ತಥಾ ಪುರಜನರು) ಆ ಸಮೀಪದಲ್ಲಿಯೇ ಶ್ರೀ ಸತ್ಯಧ್ಯಾನತೀರ್ಥರೂ ವಾಸಮಾಡಿಕೊಂಡಿದ್ದರು. ಅವರಿಗೂ ಇವರಿಗೂ ಭೇಟಿಯಾಗಿ ಪರಸ್ಪರ ಕುಶಲ ಪ್ರಶ್ನೆಗಳಾದವು. ಮರುದಿನ ಆತಿಥ್ಯಕ್ಕೆ ಶ್ರೀ ಸತ್ಯಧ್ಯಾನತೀರ್ಥರು ಆಮಂತ್ರಣ ಕೊಟ್ಟರು. ನಾಳೆ ತಿರುಪತಿಯಲ್ಲಿ ಭಿಕ್ಷೆ ಇರುವದು. ಅವಕಾಶವಾದರೆ ಮತ್ತೊಂದು ದಿನ ಆಗಬಹುದು ಎಂದು ಸಮಾಧಾನ ಹೇಳಿ 'ಗೋವಿಂದರಾಜ ಪಟ್ಟಣ' (ತಿರುಪತಿ) ಗೆ ಬಂದರು. ಅಲ್ಲಿರುವ ಸಂದರ್ಭದಲ್ಲಿ ಬಿಜಾಪೂರದಿಂದ '(ನನ್ನ) ಹೆಂಡತಿಯು ಅಂತ್ಯವಸ್ಥಾದಲ್ಲಿದ್ದಾಳೆ. ದರ್ಶನಾಕಾಂಕ್ಷಿಯಾಗಿರೋಣದರಿಂದ ಬರುತ್ತೇವೆ. ಆಜ್ಞಾಮೂಲಕ ಉತ್ತರ ದಯಪಾಲಿಸಬೇಕು, (Wife serious, anxious darshana wire) ಅಂತ ಡಾಕ್ಟರ ಮಂಗಳವೇಢ ಗೋವಿಂದರಾಯನಿಂದ ತಾರುಬಂತು. 'ನಾವು ಇನ್ನು ಎರಡು ತಿಂಗಳಲ್ಲಿ ಆದವಾನಿಗೆ ಹೋಗುತ್ತೇವೆ, ಅಲ್ಲಿಗೆ ಬರಬೇಕು.' (Going to Adoni within two months, come there) ಅಂತ ಉತ್ತರ (ತಾರ) ಕೊಡುವದಾಗಿ ನನಗೆ

(ಮುತ್ತಿಗೀ ಸ್ವಾಮಿ ರಾಯಾಚಾರ್ಯರಿಗೆ) ತಿಳಿಸಿದರು. ಈ ಮಾತಿನಿಂದ ನನಗೆ ಸ್ವಲ್ಪ ನಗು ಬಂತು. "ನಿನಗೆ ನಗು ಬಂದದ್ದೇತಕ್ಕೆಂಬುದು ನನಗೆ ಅರ್ಥವಾಯಿತು. ನೀವುಗಳೆಲ್ಲರು ಸ್ಥೂಲ ದೃಷ್ಟಿಗೆ (ಸ್ಥೂಲೇಂದ್ರಿಯಗಳಿಗೆ) ಗೋಚರವಾದದ್ದರ ಮೇಲಿಂದ ನಿರ್ಣಯ ಮಾಡಿಕೊಂಡು ಅದರಂತೆ ನಡೆಯುವಿರಿ. ದೈವಸಂಕಲ್ಪ ತಿಳಿದು ನಡೆದರೆ ಎಲ್ಲವೂ ಸರಿಯಾಗಿ ಕಂಡುಬರುತ್ತದೆ ಮತ್ತು ಮನಸ್ಸು ದ್ವಂದ್ವಗಳ ವಿಷಯದಲ್ಲಿ ತಲ್ಲಣಿಸದೆ ಶಾಂತವಿರುತ್ತದೆ. ಹೆಚ್ಚಿನ ವಿಚಾರ ಆಮೇಲೆ ತಿಳಿಸುತ್ತೇವೆ. ಸದ್ಯಕ್ಕೆ ಹೇಳಿದಷ್ಟು ತಾರು ಮಾಡಿ ಬಾ" ಅಂತ ಹೇಳಿದರು. ನಾನು ಆ ಪ್ರಕಾರ ತಾರು (Wire) ಮಾಡಿಬಂದೆ. ಅಲ್ಲಿಂದ ಹೊರಟು ಮದನ ಪಲ್ಲಿ, ಕದರಿ, ವ್ಯಾಸ ಸಮುದ್ರ, ಅನಂತಪುರ, ಚಿಪ್ಪಗಿರಿ ಮಾರ್ಗವಾಗಿ ಆದವಾನಿಗೆ ಬರುವಷ್ಟರಲ್ಲಿ ಮೂರು ತಿಂಗಳು ಸುಮಾರಾಯಿತು.

೮. ಮಾಧ್ವಮಠಗಳೆಲ್ಲ ಮಾನ್ಯ.

ಅತ್ತ ಬಿಜಾಪುರದಲ್ಲಿ ಕುಂ॥ಸೌ॥ ಲಕ್ಷ್ಮಿಬಾಯಿಯು (ಡಾ॥ ಮಂಗಳವೇಢೆ ಗೋವಿಂದರಾಯರ ಕುಟುಂಬ) ಏಕ ಪ್ರಕಾರ ಸ್ಥಿತಿಯಲ್ಲಿಯೇ ಇದ್ದಳು. (ನಾವು) 'ಬಂದಿದ್ದೇವೆ ಲಕ್ಷ್ಮಿಬಾಯಿ ಸಹಿತ ಹೊರಟು ಬಾ' (Arrive at once with Laxmi bai) ಅಂತ (ಆದವಾನಿಯಿಂದ) ತಾರು (Wire) ಮಾಡುವುದಾಗಿ ಆಜ್ಞಾ ಮಾಡಿದರು. ಆ ಮೇರೆಗೆ ತಾರು ಮಾಡಿದೆ. ತಾರು ಮುಟ್ಟಿದ ಮರುದಿನವೇ ಡಾ॥ ಗೋವಿಂದರಾಯನು ಸಕುಟುಂಬ ಬಿಜಾಪೂರದಿಂದ ಬಂದನು. ಪೂರ್ವದಂತೆ ಈಗಲೂ ಲಕ್ಷ್ಮಿಬಾಯಿಯ ವಿಪತ್ತು ಪರಿಹಾರವಾಯಿತು. ಡಾ॥ ಗೋವಿಂದರಾಯನು ಸಂತೋಷದಿಂದ ಸಕುಟುಂಬ ಬಿಜಾಪೂರಕ್ಕೆ ಪ್ರಯಾಣೋನ್ಮುಖನಾಗಿ 'ಸ್ವಾಮಿ! ನಾನು ಮತ್ತು ಗುಂಡೇರಾಯನು ಕೂಡಿ ಮನೆಯನ್ನು ಕಟ್ಟಿಸುವ ವಿಚಾರದಿಂದ ಒಂದು ಬೈಲುಜಾಗಾ ಸರಕಾರ ಕಡೆಯಿಂದ ತೆಗೆದುಕೊಂಡು ಉಭಯರು ಮನೆಯನ್ನು ಕಟ್ಟಿಸಿದ್ದೇವೆ. ಅದನ್ನು ವಾಸ್ತು ಮಾಡಿ, ಗೃಹಪ್ರವೇಶ ಮಾಡಿದಾರಭ್ಯ ಪುರೋಹಿತರ ಮೊದಲ್ಗೊಂಡು ನಮ್ಮೆಲ್ಲರನ್ನು ಕಾಡುತ್ತಲಿದೆ. ಪ್ರಯುಕ್ತ ತಾವು ಬಿಜಾಪುರಕ್ಕೆ ಬಂದು ಆ ಸ್ಥಳದಿಂದ ಪೀಡಾ ಉಂಟಾಗದಂತೆ ಮಾಡಬೇಕು, ಅಂತ ಪ್ರಾರ್ಥನಾ ಮಾಡಿಕೊಂಡನು. ಆ ಪ್ರಕಾರ ನಾವು ಪ್ರಾರ್ಥನಾನುಗುಣವಾಗಿ ಪ್ರಯಾಣೋನ್ಮುಖರಾಗಿ ನಾರಾಯಣಪೇಟೆಯ ಬೊಜ್ಜಿ ಗುರುರಾಜಾಚಾರ್ಯನನ್ನು ಕರೆಸಿ "ಕೇವಲ ಬಿಜಾಪುರಕ್ಕಾಗಿಯೇ ಪ್ರಯಾಣ ಮಾಡುವದು ನಮಗಿಷ್ಟವಿಲ್ಲ. ತೀರ್ಥ, ಕ್ಷೇತ್ರಾರ್ಥ ಪ್ರಯಾಣವಿರಬೇಕು, ತನ್ಮಧ್ಯ ವಿಜಾಪೂರ ಒಳಗೊಂಡಿರಬೇಕು. ಈ ರೀತಿ ಪ್ರಯಾಣದ ವಿಚಾರ ಹೇಳು?" ಅಂತ ಕೇಳಲು "ಸ್ವಾಮಿ! ಕೆಲವು ಜನರು ಉಡುಪಿ, ಸುಬ್ರಹ್ಮಣ್ಯ ಯಾತ್ರಾಪೇಕ್ಷಿಗಳಾಗಿದ್ದಾರೆ. ಅವರುಗಳನ್ನು ಕರೆದುಕೊಂಡು ಬರುವ ವ್ಯವಸ್ಥೆ ಆದರೆ ಕರೆದುಕೊಂಡು ಬರುತ್ತೇನೆ."

ಇಲ್ಲಿಂದ ಹಂಪಿ, ಹರಿಹರ, ಶಿವಮೊಗ್ಗಾ, ಉಡುಪಿ, ಸುಬ್ರಹ್ಮಣ್ಯ, ಸೋದೆ, ಗೋಕರ್ಣ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ, ಕೊಲ್ಹಾಪುರ, ಸಾಂಗ್ಲಿ, ಮಿರಜ, ಬಿಜಾಪುರ, ಮುತ್ತಿಗಿ

(ನರಸಿಂಹದೇವರ ದರ್ಶನ) ಸುರಪುರ, ಯಾದಗಿರಿ, ನಾರಾಯಣಪೇಟೆ ಮಾರ್ಗವಾಗಿ ಪ್ರದಕ್ಷಿಣಾಕಾರ ಆದವಾನಿಗೆ ಬರಬಹುದೆಂದು" ಹೇಳಿದನು. ಈ ಮಾತಿಗೆ ಸಮ್ಮತಪಟ್ಟು, ಆ ಜನಗಳನ್ನು ಕರೆದುಕೊಂಡು ಬರುವುದಾಗಿ (ಗುರುರಾಜಾಚಾರ್ಯರಿಗೆ) ಅಜ್ಞಾ ಮಾಡಿದರು. ಈ ಆಲೋಚನೆಯ ಪ್ರಕಾರ 'ಕೋಟಂಕೊಂಡಗೆ' ಹೋಗಿ 'ಗಾರ್ಲಪಾಡ ರಾಮಾಚಾರ್ಯ'ರಲ್ಲಿ ಆಲೋಚನಾ ಮಾಡಿದನು. "ನಾವು ಕುಟುಂಬರಾಗಿ ಬರಬೇಕೆಂದು ಮಾಡಿದ್ದೇವೆ. ಆದರೆ ನಿಮ್ಮ ಪ್ರಯಾಣ ಕ್ರಮದ ರೀತ್ಯಾ ನನಗೆ ಬರುವುದಾಗದು. ಪ್ರಯುಕ್ತ ನನ್ನ ಭಾರ್ಯಳನ್ನು ನಿಮ್ಮ ಸಂಗಡ ಕಳಿಸಿ, ಪ್ರತಿಯೊಂದು ಕ್ಷೇತ್ರಕ್ಕೆ ನಾನು ರೈಲುಮಾರ್ಗವಾಗಿ ಬರುತ್ತ ಹೋಗುತ್ತೇನೆ. ಇದಕ್ಕೆ ಬೇಕಾಗುವ ಮಾರ್ಗ ಖರ್ಚು ನಾನು ವಹಿಸುತ್ತೇನೆ!" ಅಂತ ಹೇಳಿ ತನ್ನ ಕುಟುಂಬವನ್ನು ಗುರುರಾಜಾಚಾರ್ಯರ ಸಂಗಡ ಕಳುಹಿಸಿದನು. ಈ ಜತೆಯಲ್ಲಿ ಇನ್ನೂ ಕೆಲವರು ಹೆಂಗಸರು ಕೂಡಿದರು. ಇವರೆಲ್ಲರೂ ಕೂಡಿ ಮಾನವಿಗೆ ಬರುವಷ್ಟರಲ್ಲಿ ಇವರು (ಈ ಚರಿತ್ರ ನಾಯಕರು) ಮಾನವಿಗೆ ಬಂದಿದ್ದರು. ಅಲ್ಲಿ ಎಲ್ಲರೂ ಕೂಡಿದರು. ಅಲ್ಲಿಂದ 'ಗಂಗಾವತಿ'ಗೆ ಹೋಗುವಾಗ "ಸ್ವಾಮಿ! ಈ ರೀತಿ ಸಾವಕಾಶ ಪ್ರಯಾಣ ಮಾಡಿದರೆ ಬಹು ವಿಲಂಬವಾಗುತ್ತದೆ. ಪ್ರಯುಕ್ತ ತೀವ್ರವಾಗಿ ಅಂದರೆ ದಿನಂಪ್ರತಿ ಇಪ್ಪತ್ತು ಮೈಲು ಪ್ರಕಾರವಾದರೂ ಪ್ರಯಾಣ ಮಾಡಿದರೆ ಒಂದು ತಿಂಗಳಲ್ಲಿ ಸ್ವಗ್ರಾಮ ಸೇರಬಹುದು. ಈ ಒಂದು ತಿಂಗಳ ಮಾರ್ಗದ ಯಾವತ್ತೂ ಖರ್ಚು ಕೋಟಂಕೊಂಡ ಗಾರ್ಲಪಾಡ ರಾಮಾಚಾರ್ಯರ ಕುಟುಂಬ ವಹಿಸುವದಾಗಿ ವಿನಂತಿಸಿಕೊಳ್ಳುತ್ತಿದ್ದಾಳೆ" ಅಂತ ಗುರುರಾಜಾಚಾರ್ಯರು ಕೇಳಿಕೊಂಡರು. "ಆ ರೀತಿ ಪ್ರಯಾಣ ಮಾಡಿದರೆ (ದೇಹಕ್ಕೆ) ವಿಶೇಷ ಶ್ರಮವಾಗುವದು. ಅಷ್ಟು ರೀತಿ ಶ್ರಮಪಟ್ಟು, ತೀವ್ರ ಪ್ರಯಾಣ ಮಾಡುವ ಉದ್ದೇಶವೇನು? ಕೇವಲ ನಮಗೆ ಮಾತ್ರ ಶ್ರಮವೆಂದಲ್ಲ. ಹಿಂದಿದ್ದ ಸರ್ವ ಪರಿವಾರಕ್ಕೂ ಶ್ರಮವಾಗುವದು. ದಿವಸ ಹೆಚ್ಚಾದರೆ ಖರ್ಚು ಹೆಚ್ಚಾಗುವದೆಂಬ ಭೀತಿಯಿಂದ ಹೇಳುವುದಾದರೆ ಆ ಭೀತಿ ಅನವಶ್ಯಕ. ಯಾಕೆಂದರೆ, ಇದುವರೆಗೂ ನಾವು ಯಾವ ಧರ್ಮಗಳನ್ನು ಮಾಡಿದರೂ ಒಬ್ಬರ ದ್ರವ್ಯದೃಷ್ಟಿಯಿಂದ, ಅವರ ಅಧೀನರಾಗಿ ವರ್ತಿಸಿಲ್ಲ. **ಸರಕ್ಷಿತಾ ರಕ್ಷಿತಿಯೋಹಿ ಗರ್ಭೇ** ಎಂಬುವುದು ನಮ್ಮ ಬೀಜ ಮಂತ್ರವಾಗಿರುವದರಿಂದ ದೈವೇಚ್ಛಾ ಪ್ರಕಾರ ನಾವು ವರ್ತಿಸುವವರು. ನಮ್ಮನ್ನು ಅವಲಂಬಿಸುವವರು ನಮ್ಮನ್ನನುಕರಣೆ ಮಾಡಿಕೊಂಡಿರಬೇಕು. ಇಲ್ಲವಾದರೆ ಅವರವರ ಇಷ್ಟದಂತೆ ಪ್ರಯಾಣ ಮಾಡಬೇಕು" ಅಂತ ಸ್ಪಷ್ಟ ತಿಳುಹಿಸಲು ಗುರುರಾಜಾಚಾರ್ಯರಿಗೆ ಈ ಮಾತು ಸಮ್ಮತವಾಗದಿದ್ದರೂ ಗಂಗಾವತಿವರೆಗೂ ಕೂಡಿಯೇ ಬಂದರು ಆಗ ಆ ಊರಿಗೆ 'ವಾಯಿ ಕೃಷ್ಣಾಚಾರ್ಯರು' ಹಾಗೂ 'ಚಿಪ್ಪಗಿರಿ ವೆಂಕೋಬದಾಸರು' ಬಂದಿದ್ದರು. ಈ ಚಿಪ್ಪಗಿರಿ ವೆಂಕೋಬದಾಸರ ಕೂಡಿ ಆಲೋಚನಾ ಮಾಡಿಕೊಂಡು ಪ್ರತ್ಯೇಕ ಪ್ರಯಾಣೋನ್ಮುಖರಾದದ್ದು ತಿಳಿದು ಅವರಿಗೆ ಅಪ್ಪಣೆಕೊಟ್ಟು ಕಳುಹಿಸಿದರು. ಇವರು (ಈ ಚರಿತ್ರನಾಯಕರು) ಉಡುಪಿ ಪ್ರಯಾಣ ರಹಿತಮಾಡಿ ಹಂಪೆಗೆ ಬಂದರು. ಅಲ್ಲಿಯ ಯಂತ್ರೋದ್ಧಾರಕ ವಾಯುದೇವರ ಸನ್ನಿಧಿಗೆ ಆ ಸಂದರ್ಭದಲ್ಲಿ 'ನಾಯಿಕಲ ತಿರುಮಲರಾವ್' (ವಕೀಲ) ಎಂಬ ಹೈದ್ರಾಬಾದ ಗ್ರಹಸ್ಥನು ಬಂದಿದ್ದನು. ಈತನಿಗ

ಇವರಿಗೂ ಸಂವಾದ ನಡೆಯಿತು. ಅದೇನೆಂದರೆ, "ಉತ್ತರಾದಿ ಮಠಾಧೀಶರೇ ಸರ್ವ ಮಾಧ್ವಮಠಾಧಿಪತಿಗಳಿಗೆ ಸಾರ್ವಭೌಮರು ಮತ್ತು ತಮ್ಮ ಮಠವಾದ ಕೂಡ್ಲಿ ಆರ್ಯ ಅಕ್ಷೋಭ್ಯ ತೀರ್ಥ ಮಠವೂ ಉತ್ತರಾದಿ ಮಠಾಧೀನವಿದ್ದು ಸ್ವತಂತ್ರವಾಗಿರುವ ಮಾಧ್ವ ಮಠಾಧಿಪತಿಗಳಂತೆ ತಾವು ತಪ್ತಮುದ್ರಾ ಕೊಟ್ಟಿದ್ದು ಅಕ್ರಮವಲ್ಲವೇ?" ಎಂದು ನಾಯಿಕಲ ತಿರುಮಲ ರಾಯನು ಕೇಳಿದನು. "ರಾಯರೇ! ನೀವು ಶ್ರೀ ಮಾಧ್ವ ಮಠಗಳ ಉತ್ಪತ್ತಿಯ ವಿಷಯ ಪರಿಶೋಧಿಸಿದಂತೆ ಕಾಣುವುದಿಲ್ಲ". ಯಾಕೆಂದರೆ, ಪ್ರಥಮದಲ್ಲಿ ಹಂಸನಾಮಕ ಪರಮಾತ್ಮನಿಂದ ಪ್ರಾರಂಭವಾಗಿ ಶ್ರೀ ಚತುರ್ಮುಖ ಬ್ರಹ್ಮ, ಸನಕಾದಿಗಳು ದೂರ್ವಾಸರು, ಗರುಡವಾಹನ ತೀರ್ಥರು ಇತ್ಯಾದಿ ಯತಿಗಳಿಂದ ಕ್ರಮೇಣ ಒಬ್ಬೊಬ್ಬರಾಗಿ ಅಚ್ಯುತ ಪ್ರೇಕ್ಷಾಚಾರ್ಯರ ಪರ್ಯಂತ ಒಂದೇ ಮಠವಿತ್ತು. ನಂತರ ಶ್ರೀಮದಾನಂದತೀರ್ಥರು ಭೀಮನಕಟ್ಟೆ ಮಠವನ್ನು (ಅಚ್ಯುತ ಪ್ರೇಕ್ಷಾಚಾರ್ಯರ ಮಠ) - ಉಡುಪಿಯ ಎಂಟು ಮಠಗಳನ್ನು, ಶ್ರೀ ಮಧ್ವಾಚಾರ್ಯರ ತಮ್ಮಂದಿರಾದ ವಿಷ್ಣುತೀರ್ಥರ (ಸುಬ್ರಹ್ಮಣ್ಯ) ಮಠವನ್ನು ಹಾಗೂ 'ಪದ್ಮನಾಭ ತೀರ್ಥ' 'ನರಹರಿ ತೀರ್ಥ' 'ಮಾಧವ ತೀರ್ಥ' 'ಅಕ್ಷೋಭ್ಯ ತೀರ್ಥ' ಮಠಗಳನ್ನು ಸ್ಥಾಪಿಸಿದರು. ಇದರಲ್ಲಿ ಶ್ರೀ ಮದಾಚಾರ್ಯರ ಗುರುಗಳ ಮಠವೆಂದೆನಿಸಿದ 'ಭೀಮನಕಟ್ಟೆ ಮಠ'ಕ್ಕೆ ಶ್ರೇಷ್ಠತ್ವವನ್ನು ಹೇಳಬೇಕಾಗುತ್ತದೆ. ಅಥವಾ ಮಹಾ ಸಂಸ್ಥಾನವನ್ನಾಳಿದ ದೃಷ್ಟಿಯಿಂದ ನೋಡಿದರೆ ನರಹರಿ ತೀರ್ಥರಿಂದ ವಡ್ಡಿ ಜಗನ್ನಾಥದಲ್ಲಿಯ ಬೊಕ್ಕಸದಲ್ಲಿ ಇದ್ದ ಶ್ರೀ ರಾಮಸೀತಾ ಪ್ರತಿಮಾಗಳು ತರಲ್ಪಟ್ಟು, ಆ ಪ್ರತಿಮಾಗಳೊಂದಿಗೆ ಶ್ರೀ ಮದಾಚಾರ್ಯರ ಕರಾರ್ಚಿತ ದಿಗ್ವಿಜಯ ರಾಮ, ಪ್ರತಿಮಾವೇ ಮೊದಲಾಗಿ ಸುದರ್ಶನ, ಚಕ್ರಾಂಕಿತ, ಬಲಮುರಿ ಶಂಖ ಇತ್ಯಾದಿ ದೇವತಾರ್ಚನೋಪಯುಕ್ತ ಸಮೂಹಕ್ಕೆ ಮಹಾ ಸಂಸ್ಥಾನವೆಂದು ಹೆಸರು. ಪ್ರಥಮದಲ್ಲಿ ಈ ಮಹಾ ಸಂಸ್ಥಾನವು ಶ್ರೀ ಪದ್ಮನಾಭ ತೀರ್ಥರಿಗೆ ಪ್ರಾಪ್ತವಾದ ಪ್ರಯುಕ್ತ ಆ ಮಠಕ್ಕೆ (ಮುಳಬಾಗಿಲು ಶ್ರೀ ಪಾದರಾಯರ ಮಠಕ್ಕೆ) ಶ್ರೇಷ್ಠತ್ವವನ್ನು ಹೇಳಬೇಕಾಗುತ್ತದೆ. ಅಥವಾ ಕ್ರಮೇಣ ಶ್ರೀ ಅಕ್ಷೋಭ್ಯತೀರ್ಥ, ತ್ರೈಲೋಕ್ಯಭೂಷಣತೀರ್ಥ, ಜಯತೀರ್ಥ, ವಿದ್ಯಾಧಿರಾಜ ತೀರ್ಥರವರೆಗೂ ಈ ಮಹಾ ಸಂಸ್ಥಾನವು ಏಕರೀತ್ಯಾ (ವಿಚ್ಛಿನ್ನವಾಗದೆ) ಇದ್ದು ನಂತರ ಈ ವಿದ್ಯಾಧಿರಾಜ ತೀರ್ಥರಿಂದ ಪ್ರಥಮ ಸನ್ಯಾಸಾಶ್ರಮ ಸ್ವೀಕರಿಸಿ 'ಶ್ರೀ ಕವೀಂದ್ರತೀರ್ಥರು' ಮಹಾ ಸಂಸ್ಥಾನವನ್ನಾಳಿದರು. ಈ ಸಂದರ್ಭದಲ್ಲಿ ಶ್ರೀ ರಾಜೇಂದ್ರ ತೀರ್ಥರು ತಮ್ಮ ಅಧೀನದಲ್ಲಿದ್ದ ಮಹಾ ಸಂಸ್ಥಾನದ ಕೆಲವು ಭಾಗಗಳನ್ನು (ಪ್ರತಿಮಾವನ್ನು) ತೆಗೆದುಕೊಂಡು ಹೊರಬಿದ್ದ ಕಾರಣ ಮಹಾ ಸಂಸ್ಥಾನದ ಉಳಿದ ಪ್ರತಿಮಾಗಳು ಮಾತ್ರ ಕವೀಂದ್ರ ತೀರ್ಥರ ಕಡೆಬಂದವು. ಆ ಮಹಾ ಸಂಸ್ಥಾನವನ್ನು ಉಭಯರು ಆಳುತ್ತಿದ್ದರು. ಆಮೇಲೆ ಶ್ರೀ ರಾಜೇಂದ್ರತೀರ್ಥರಿಂದ ಇನ್ನೊಬ್ಬರು ಸನ್ಯಾಸಾಶ್ರಮ ಹೊಂದಿ **ಶ್ರೀ ವಾಗೀಶತೀರ್ಥ**ರೆಂದಾದರು. ಈ ಉಭಯರು ತಮ್ಮ ತಮ್ಮ ಮಠವು ಮುಂದುವರಿಯುವಂತೆ ಸನ್ಯಾಸಾಶ್ರಮವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕೊಟ್ಟರು. ಆ ರಾಜೇಂದ್ರತೀರ್ಥರ (ಮಠ) ಪೀಳಿಗೆಯಲ್ಲಿ **ಶ್ರೀ ವ್ಯಾಸರಾಜತೀರ್ಥ**ರು ಪ್ರಖ್ಯಾತರಾಗೋಣದರಿಂದ ಆ ಮಠಕ್ಕೆ 'ವ್ಯಾಸರಾಯರ ಮಠ'ವೆಂದು ಅದ್ಯಾಪಿ ಕರೆಯಲ್ಪಡುತ್ತದೆ.

ಅತ್ತ ಶ್ರೀ ವಾಗೀಶತೀರ್ಥರಿಂದ ಕ್ರಮೇಣ 'ಶ್ರೀ ರಾಮಚಂದ್ರತೀರ್ಥ'ರೂ ಈ ರಾಮಚಂದ್ರ ತೀರ್ಥರಿಂದ (ಪೂರ್ವದಂತೆ) ಇಬ್ಬರು ಸನ್ಯಾಸಿಗಳಾಗಿ 'ಶ್ರೀ ವಿಭುದೇಂದ್ರ ತೀರ್ಥ'ರೆಂದು ಮತ್ತು 'ಶ್ರೀ ವಿದ್ಯಾನಿಧಿತೀರ್ಥ'ರೆಂದು ಖ್ಯಾತರಾದರು. ಈ ಉಭಯರಿಂದಲೂ ಮಹಾ ಸಂಸ್ಥಾನವು ಪುನಃ ವಿಭಾಗವಾಗಿ **ಶ್ರೀವಿಭುದೇಂದ್ರತೀರ್ಥ**ರಿಂದ ಹಾಗೂ ಶ್ರೀ ವಿದ್ಯಾನಿಧಿತೀರ್ಥರಿಂದ ಎರಡು ಮಠಗಳು ಮುಂದುವರಿದವು. ಶ್ರೀ ವಿಭುದೇಂದ್ರತೀರ್ಥರ ಮಠ ಪೀಠಿಗೆಯಲ್ಲಿ 'ಶ್ರೀ ರಾಘವೇಂದ್ರ ತೀರ್ಥ'ರು ಪ್ರಖ್ಯಾತರಾಗುವುದರಿಂದ 'ಶ್ರೀ ರಾಘವೇಂದ್ರ ತೀರ್ಥರ (ರಾಯರ) ಮಠ'ವೆಂದು ಈಗಲೂ ಪ್ರಖ್ಯಾತಿ ಹೊಂದಿದೆ. ಶ್ರೀ ವಿದ್ಯಾನಿಧಿತೀರ್ಥರ ಮಠಕ್ಕೆ 'ಉತ್ತರಾದಿ ಮಠ'ವೆಂದು ಹೆಸರಿದೆ. ಈ ಹೆಸರು ಬರಲು ಕಾರಣವೇನಿರಬಹುದೆಂದು ಸೂಕ್ಷ್ಮವಾಗಿ ವಿಚಾರಮಾಡಿ ನೋಡಿದರೆ ಈ ಮಠಗಳೆಲ್ಲವೂ ಶ್ರೀ ಹಂಸನಾಮಕ ಪರಮಾತ್ಮನಿಂದ ಪ್ರಾದುರ್ಭೂತವಾಗಿ ಕ್ರಮೇಣ ಬಂದ ಪ್ರಯುಕ್ತ ಆದಿ ಮಠವೆಂದು ಹೇಳಬಹುದು. ಈ ಆದಿಮಠವು ಮಹಾ ಸಂಸ್ಥಾನದ ನಿಮಿತ್ತದಿಂದ 'ಶ್ರೀ ಮದಾನಂದತೀರ್ಥರಿಂದ' ಶ್ರೀ ಪದ್ಮನಾಭ ತೀರ್ಥರಾದಿಯಾಗಿ ಶ್ರೀ ವಿದ್ಯಾಧಿರಾಜತೀರ್ಥರ ಪರ್ಯಂತ ಏಕರೀತ್ಯಾ ಇದ್ದು ಅನಂತರ ಇಬ್ಭಾಗವಾಗೋಣದರಿಂದ ಪ್ರಥಮ ಭಾಗದ ಮಠಕ್ಕೆ ಉತ್ತರಾದಿ ಎಂದು ಹೆಸರು ಬಂದಿರಲಿಕ್ಕೆ ಸಾಕು. ಈ ವಿಷಯಕ್ಕೆ ಸರಿಯಾದ ಪ್ರಮಾಣಾಧಾರಗಳು ದೊರೆಯುವುದಿಲ್ಲ. ಅನೇಕರು ತಮ್ಮ ತಮ್ಮ ಮನಬಂದಂತೆ ಬರೆದಿದ್ದಾರೆ. ಅಸ್ತು ಆದರೆ ನೀವು ಹೇಳಿದಂತೆ ಉತ್ತರಾದಿ ಮಠಾಧೀಶರೇ ಸಾರ್ವಭೌಮರೆಂತಲೂ, ಉಳಿದ ಮಠಾಧೀಶರೆಲ್ಲರೂ ಮಾಂಡಲೀಕರಿದ್ದಂತೆಯೂ ಎಂದೂ ಹೇಳುವುದು ಯಾವ ದೃಷ್ಟಿಯಿಂದ ? ವೇದಾಂತ ರಾಜ್ಯಕ್ಕೆ ಐಹಿಕ ಸಂಪತ್ತು ಗಣನಾರ್ಹವಲ್ಲ. (ಕುಚ್ಛಿತವೆನಿಸುವುದು) ಮತ್ತು ನಿಮ್ಮ ಮಾತಿನಲ್ಲಿಯೇ ವ್ಯತ್ಯಾಸ ಉಂಟು. ಅದೇನೆಂದರೆ, ತಮ್ಮ ಮಠವಾದ ಆರ್ಯ ಅಕ್ಷೋಭ್ಯ ತೀರ್ಥ ಮಠವು, ಉತ್ತರಾದಿ ಮಠಾಧೀನವು, ಹೀಗಿದ್ದು ಸ್ವತಂತ್ರವಿರುವ ಇತರ (ಮಾಧ್ವ) ಮಠಾಧಿಪತಿಗಳಂತೆ ತಾವು ತಪ್ತಮುದ್ರಾ ಕೊಟ್ಟಿದ್ದು ಅಕ್ರಮವಲ್ಲವೇ? ಎಂದು ಕೇಳಿದ್ದಿರಷ್ಟೇ! ಈ ನಿಮ್ಮ ಮಾತಿನಲ್ಲಿ ಉತ್ತರಾದಿ ಮಠದಿಂದ ಭಿನ್ನವಾದ ಮಠವೆಲ್ಲವೂ ಸ್ವತಂತ್ರವೆಂದು ಹೇಳಿಬಿಟ್ಟಿದ್ದೀರಿ. ಅಂದ ಮೇಲೆ ಉತ್ತರಾದಿ ಮಠಕ್ಕೆ ಸಾರ್ವಭೌಮತ್ವವು ಹೇಗೆ ಸಿದ್ಧಿಸುವುದು? ಇನ್ನು ನಾವು ತಪ್ತಮುದ್ರಾ ಕೊಟ್ಟ ವಿಷಯ ವಿಚಾರಿಸಿದರೆ ಯಾವ ಶಾಸ್ತ್ರ, ಎಲ್ಲಾ ಯತಿಗಳಿಗೆ ಯಾವ ರೀತಿ ಅಧಿಕಾರ ಕೊಟ್ಟಿರುವದೋ ಅದರಂತೆ ನಮ್ಮಗಳಿಗೂ, ಅಧಿಕಾರ ಕೊಟ್ಟಿರುವದು. ಇದು ಶಾಸ್ತ್ರಜ್ಞರು ಬಲ್ಲರು. ಇನ್ನು ಸಂಪ್ರದಾಯಾತಿಕ್ರಮಣವೆಂದು ಹೇಳುವದಾದರೆ ಉತ್ತರಾದಿಮಠ, ರಾಯರಮಠ, ವ್ಯಾಸರಾಯರ ಮಠಾಧಿಪತಿಗಳು ಸಂಪ್ರದಾಯ ಅತಿಕ್ರಮಿಸಿದಂತೆ ನಾವು ಅತಿಕ್ರಮಿಸಿದ್ದೇವೆ. ಅಂದ ಮೇಲೆ ಅವರುಗಳ ಅತಿಕ್ರಮಣವು ಸಕ್ರಮವೆಂತಲೂ ಹೇಳುವುದು. ನಮ್ಮ ಅತಿಕ್ರಮಣ ಮಾತ್ರ ಅಕ್ರಮವೆಂತಲೂ ಹೇಳುವುದು ಕೇವಲ ದುರಾಭಿಮಾನದಿಂದ. ಇದೆಲ್ಲ ಕುವಾದಗಳು ದುರಾಗ್ರಹದಿಂದ ಆಡತಕ್ಕ ಮಾತುಗಳೇ ಹೊರ್ತು ಸುವಿಚಾರವಂತರು ಆಡತಕ್ಕ ಮಾತಲ್ಲ. ಅಂದಮೇಲೆ ಆ ವಿಚಾರಗಳ ಮಾತಿಗೆ ಬೆಲೆ ಕೊಡತಕ್ಕದ್ದಲ್ಲವೆಂದು ನಾವು

ಅದನ್ನು ಅಲಕ್ಷಿಸಿದ್ದೇವೆ ಮತ್ತು ನಮ್ಮ ಮಠಕ್ಕೆ 'ಶ್ರೀಮಜ್ಜಯತೀರ್ಥ'ರೇ 'ಆರ್ಯ' ಮಠವೆಂದು ಕರೆದಮೇಲೆ ಯಾವದು ವರಿಷ್ಠವಾಯಿತು? ನೀವೇ ಹೇಳಿರಿ? ಅಂತಹ ಶ್ರೇಷ್ಠ ಮಠದ ನಾವು ತಪ್ತಮುದ್ರಾ ಕೊಟ್ಟಿದ್ದು ಅಕ್ರಮವೇ?" ಎಂದು ಪ್ರತಿಪಾದಿಸಲು ಆ ನಾಯಿಕಲ್ ತಿರುಮಲರಾಯನು ನಿರುತ್ತರನಾಗಿ "ನಾನು ತಮ್ಮನ್ನು ಪ್ರಶ್ನೆ ಮಾಡಿದ್ದು ಕೇವಲ ನನ್ನ ಮಾತಲ್ಲ, ಇದು ಆಯಾ ಮಠಗಳಲ್ಲಿ ಕೇವಲ ಅಭಿಮಾನವಿರುವವರ ಮಾತುಗಳು. ಈ ವಿಷಯವನ್ನು ಶಾಸ್ತ್ರದೃಷ್ಟಿಯಿಂದ ಪರಿಶೋಧಿಸಿಕೊಂಡು ಇದ್ದಾಗ್ಯೂ ಸಂಪ್ರದಾಯ ವಿಷಯದಲ್ಲಿ ಡೋಲಾಯಮಾನವಿತ್ತು. ಅದು ಈಗ ಪರಿಹಾರವಾಯಿತು" ಎಂದು ನಮಸ್ಕಾರ ಮಾಡಿದನು.

೯. ಪಯೋವ್ರತಫಲ ಫಲಿಸುವದೆಂದರು.

ಈ ಚರಿತ್ರ ನಾಯಕರು ಒಂದು ಸಪ್ತಕವಿದ್ದು ಕೂಡ್ಲಿ ಆರ್ಯ ಅಕ್ಷೋಭ್ಯ ಮಠದ ಸಂಪ್ರದಾಯ ಪ್ರಕಾರ ಪಂಪಾಪತಿ ಗುಡಿಯಲ್ಲಿ ಮರ್ಯಾದೆ ಪೂರ್ವಕ ಪೂಜಾದಿಗಳನ್ನು ನಡೆಸಿಕೊಂಡು, ನಂತರ ಆನೆಗುಂದಿ, ನವವೃಂದಾವನ ದರ್ಶನ ತೆಗೆದುಕೊಂಡು ಕೊಪ್ಪಳ, ಮಾದನೂರು, ಗದಗ, ಹೊಳೆಆಲೂರು ಮಾರ್ಗವಾಗಿ ಬನಶಂಕರಿ, ಬಾದಾಮಿ, ಬಾಗಲಕೋಟೆ, ವಿಜಾಪುರಕ್ಕೆ ಹೋದರು. ಅಲ್ಲಿ ಕೂರ್ತಿ ನರಸಿಂಗರಾಯ, ಕೂರ್ತಿ ಗುರುರಾಯ, ಕೊಲ್ಹಾರ ಹನುಮಂತರಾಯ ಶಿಷ್ಯರಾದರು. ಶ್ರೀ ಕೂರ್ತಿ ಗುರುರಾಯನು ತನ್ನ ಹಿರೇಮಗಳ ಅವಸ್ಥೆಯನ್ನು ಹೇಳಿಕೊಂಡಾಗ 'ಪ್ರಾರಬ್ಧಕರ್ಮ' ಅನುಭವಿಸಲೇಬೇಕೆಂದು ಹೇಳಿದರು. ತದನಂತರ ಮಕ್ಕಳಿಗಾಗಿ ಪಯೋವ್ರತವನ್ನು ಮಾಡಲು ಹೇಳಿದರು. ಅದರಂತೆ ಕುಂ.ಸೌ. ತಾರಾಬಾಯಿ (ಗುರುರಾಯನ ಹೆಂಡತಿ) ವ್ರತವನ್ನು ಆಚರಿಸಿದಳು. ಕೆಲಕಾಲ ನಂತರ ಹುಟ್ಟುವ '**ಅವಳಿ ಜವಳಿ ಮಕ್ಕಳಿಗೆ ರಘುಪ್ರೇಮ**' ಎಂದು ಹೆಸರು ಇಡಲು ಸೂಚಿಸಿದ್ದರು.

೧೦. ಯಜ್ಞಕ್ಕಾಗಿ ಮಾಡಿದ ವಿಜ್ಞಾಪನೆ ವಿಫಲವಾಯಿತು.

ಇತ್ತ ಡಾ|| ಮಂಗಳವೇಢೆ ಗೋವಿಂದರಾಯನ ಮನೆಯ ನಿಮಿತ್ತ ಪೀಡಾ ಪರಿಹಾರ ಮಾಡುವ ಸಲುವಾಗಿ ಶ್ರೀಗಳವರು ಆತನ ಆಹ್ವಾನ ಮೇರೆಗೆ ವಿಜಾಪುರಕ್ಕೆ ಹೋಗಿದ್ದರಷ್ಟೆ! ಅಲ್ಲಿ ನೋಡಲಾಗಿ, ಈ ಗೋವಿಂದರಾಯನು ಮತ್ತು ಪೇರೂರು ಗುಂಡೆರಾಯನು ಮನೆಯನ್ನು ಕಟ್ಟಿಸಿಕೊಂಡಿದ್ದ ಸ್ಥಳವು ಪೂರ್ವದಲ್ಲಿ ಸ್ಮಶಾನವಾಗಿತ್ತು. ಆ ಮೂಲಕ ಅಲ್ಲಿ ಕ್ರೂರ ಗ್ರಹಗಳು ಈ ಉಭಯ ಕುಟುಂಬದವರನ್ನು ಪರಿಪರಿಯಿಂದ ಪೀಡಿಸುತ್ತಿದ್ದವು. ಈ ಪೀಡಾ ಪರಿಹಾರವಾಗಿ ಮುಂದೆಯೂ ಈ ಬಾಧೆ ಉಂಟಾಗದಂತೆ ನಿರಂತರ ಸತ್ಕರ್ಮಾನುಷ್ಠಾನ ನಡೆಯುವಗೋಸ್ಕರ ಕರ್ಮ ಪಥದಲ್ಲಿ ಶ್ರೇಷ್ಠವೆನಿಸಿದ 'ಅಗ್ನಿಹೋತ್ರ'ವನ್ನು ಇಡುವುದಾಗಿ ಡಾ|| ಗೋವಿಂದರಾಯನಿಗೆ ಆಜ್ಞಾ ಮಾಡಿದರು. ಅಗ್ನಿಹೋತ್ರವನ್ನು ಅಗ್ನಿಷ್ಟೋಮ (ಸೋಮ) ಯಾಗ ಪೂರ್ವಕ (ಆಧಾನ) ಅಂತ ಒಪ್ಪಿಗೊಂಡು ಈ ಯಾಗವನ್ನು ಕೃಷ್ಣಾನದಿ ತೀರದ 'ಸೀತಿಮನಿ' ಎಂಬ ಸ್ಥಳದಲ್ಲಿ ಮಾಡುವುದಾಗಿ ನಿಶ್ಚಯಿಸಿ, ತನ್ನಿಮಿತ್ತ ಧಾರವಾಡದ ಗೋಪಿಂದರಾವ, ಮೇಲಗಿರಿರಾವ ಕುಲಕರ್ಣಿ ಎಂಬ ಸ್ನೇಹಿತರೊಡನೆ ವಿಜಾಪುರ, ಧಾರವಾಡ, ಬೆಳಗಾವಿ, ಜಿಲ್ಲಾ ಪ್ರಾಂತದಲ್ಲಿ

ಈ ಯಾಗಕ್ಕೆ ಬೇಕಾಗುವಷ್ಟು ದ್ರವ್ಯ ಅನುಕೂಲವಾಗುವದೆಂದು ಸಂಚರಿಸಿ ತಕ್ಕಷ್ಟು ದ್ರವ್ಯ ಒದಗುವುದೆಂದು ಕಂಡುಬಂದ ಮೇಲೆ ಯಜ್ಞ ಮಾಡುವ ನಿಶ್ಚಯ ಮಾಡಿದರು. ಇಷ್ಟರಲ್ಲಿ ಈ ಚರಿತ್ರನಾಯಕರು ಆದವಾನಿಗೆ ಬಂದಿದ್ದರು. ಡಾಕ್ಟರ ಗೋವಿಂದರಾಯನು ಆದವಾನಿಗೆ ಬಂದು "ಸ್ವಾಮಿ! ಆಜ್ಞಾ ಪ್ರಕಾರ ನಮ್ಮ ಪ್ರಾಂತದಲ್ಲಿ ಸಂಚಾರ ಮಾಡಿ ನೋಡಲಾಗಿ ಯಜ್ಞಕ್ಕೆ ಬೇಕಾಗುವಷ್ಟು ದ್ರವ್ಯ ಅನಾಯಾಸೇನ ದೊರೆಯುವಂತೆ ಕಂಡುಬಂದಿದೆ. ಆದ್ದರಿಂದ ತಾವು ಅನುಗ್ರಹ ಮಾಡಿ ಸೀತಿಮನಿಗೆ ಪ್ರಯಾಣ ಮಾಡಬೇಕು. ತಾವು ಪ್ರಥಮದಲ್ಲಿಯೇ ಬಂದು, ಅಲ್ಲಿ ನಿಂತರೆ ನಾವು ಸಂಭಾರಗಳನ್ನು ಒದಗಿಸಲು ಅನುಕೂಲವಾಗುವುದು" ಅಂತ ಪ್ರಾರ್ಥಿಸಿಗೊಂಡನು. "ಸಂತೋಷ ಅವಶ್ಯ ಹೊರಡುತ್ತೇವೆ. ಆದರೆ ಹಿಂದಕ್ಕೆ ತುಂಗಭದ್ರ (ಅಣು ಮಂತ್ರಾಲಯ) ದಲ್ಲಿಯ ಯಜ್ಞದಂತೆ ಪ್ರತಿಬಂಧಕ ಮಾಡುವ ಪ್ರಸಕ್ತಿಯಾಗದಂತೆ ತಿರುಪತಿಯಲ್ಲಿರುವ (ಉತ್ತರಾದಿ ಮಠಾಧೀಶರಾದ) ಶ್ರೀ ಸತ್ಯಧ್ಯಾನ ತೀರ್ಥರಲ್ಲಿಗೆ ಹೋಗಿ, ಅವರಕಡೆಯಿಂದ ಅನುಮತಿ ಪಡೆದುಕೊಂಡು ಬನ್ನಿರಿ, ಅನಂತರ ನಾವು ಇಲ್ಲಿಂದ ಹೊರಟುಬರುತ್ತೇವೆ" ಅಂತ ಹೇಳಿದರು. ಆ ಪ್ರಕಾರ ಪದ್ಮಸರೋವರಕ್ಕೆ (ತಿರುಪತಿಗೆ) ಹೋಗಿ ಶ್ರೀ ಸತ್ಯಧ್ಯಾನತೀರ್ಥರನ್ನು ಯಜ್ಞದಸಲುವಾಗಿ ಆಜ್ಞಾ ಕೊಡಬೇಕೆಂದು ಡಾಕ್ಟರ ಗೋವಿಂದರಾಯರು ಕೇಳಲು, ಮಧ್ಯಾಹ್ನ ಮಾತಾಡೋಣ ಅಂತ ಹೇಳಿದರು. ಹಾಂಗೇ ಆಗಲಿ ಎಂದು ಶ್ರೀ ಗೋವಿಂದರಾಯರು ಹಾಗೂ ಅವರ ಜೊತೆಯಲ್ಲಿ ಹೋಗಿದ್ದ ಅಮಿತ ವಿಕ್ರಮರಾಯರು ಸ್ನಾನಕ್ಕೆಂದು ಹೊರಗೆ ಬರಲು, ಶ್ರೀ ಸತ್ಯಧ್ಯಾನತೀರ್ಥರೂ ತಥಾ ದಿವಾನ ಪಾಂಡುರಂಗಿ ಜಯಾಚಾರ್ಯರೂ ಕೂಡಿ ಆಲೋಚನ ಮಾಡಿ "ಹನುಮಂತಾಚಾರ್ಯ ಮಳಗಿ ಮತ್ತು ಜಯರಾಮಾಚಾರ್ಯ ಮುಂಡರಗಿ" ಇವರುಗಳನ್ನು ಈ ಡಾಕ್ಟರ ಗೋವಿಂದರಾಯನ ಕಡೆಗೆ ಕಳಿಸಿದರು. ಆ ಉಭಯ ಆಚಾರ್ಯರೂ ಬಂದು, ನೀವು ಉತ್ತರಾದಿ ಮಠದ ಶಿಷ್ಯರಿದ್ದು ಅನ್ಯತ್ರ ಅಕ್ಷೋಭ್ಯ ತೀರ್ಥ ಮಠಾಧೀಶರಲ್ಲಿ ಹೋದದ್ದು ಶ್ರೀ ಸತ್ಯಧ್ಯಾನರಿಗೆ ಸಿಟ್ಟುಬಂದಿದೆ. ಆದ್ದರಿಂದ, ಈಗ ನೀವು ಮಾಡಲುದ್ಯುಕ್ತವಾದ ಯಜ್ಞಕ್ಕೆ ಅಪ್ಪಣೆ ಕೊಡಲಾಗದು. ಪ್ರಯುಕ್ತ ನಾವು ಹೇಳಿದಂತೆ ಕೇಳಿದರೆ ಸುಲಭವಾಗಿ ಅಪ್ಪಣೆ ದೊರೆಯುವುದು ಅಂತ ಹೇಳಿದರು. "ಪಂಚಗವ್ಯ ಪ್ರಾಶನಾದಿ ಪ್ರಾಯಶ್ಚಿತ್ತ ಧರ್ಮಗಳಂತೆ ಈ ತಪ್ತಮುದ್ರಾ ಸ್ವೀಕರಣವು ಶಾಸ್ತ್ರದಲ್ಲಿ ಉಕ್ತವಾಗಿದೆ. ಆ ಪ್ರಕಾರ ಶಾಸ್ತ್ರಬದ್ಧಾನುಷ್ಠಾನ ಮಾಡಿದರೆ ಧರ್ಮ ಸ್ಥಾಪನಾಚಾರ್ಯರೆಂದೆನಿಸಿದವರಿಗೆ ಸಿಟ್ಟು ಬರುವ ಕಾರಣವಿಲ್ಲ, ಹೀಗಿದ್ದಾಗ್ಯೂ ಸಿಟ್ಟು ಬಂದರೆ, ಅದು ಕೇವಲ ಅಸೂಯೆ, ಈರ್ಷ್ಯಾದಿಗಳೆಂದು ಅದಕ್ಕೆ ಮಹತ್ವ ಕೊಡುವ ಕಾರಣವಲ್ಲ" ಅಂತ ಗೋವಿಂದರಾಯರು ಉತ್ತರ ಕೊಟ್ಟರು. "ಯದ್ಯಪಿ, ಶಾಸ್ತ್ರವಿಹಿತವಾದರೂ ಸಂಪ್ರದಾಯಕ್ಕೆ ವಿರೋಧವಾಗೋಣದರಿಂದ ಸಂಪ್ರದಾಯಾತಿಕ್ರಮಿಸಿದ ಕಾರಣ ನಿಮ್ಮ ಅನುಷ್ಠಾನ ತಪ್ಪಾಗಲಿಲ್ಲವೆ?" ಅಂತ ಉಭಯ ಆಚಾರ್ಯರು ನುಡಿದರು. "ನನಗೆ ಸಾಂಪ್ರದಾಯಿಕ ಯಥಾರ್ಥ ಜ್ಞಾನವಿಲ್ಲ. ಶಾಸ್ತ್ರೀಯಾನುಷ್ಠಾನವನ್ನು ಅವಶ್ಯಾನುಷ್ಠೇಯವೆಂದು ಭಾವಿಸಿ ಆಚರಿಸಿದ್ದೇವೆ" ಅಂತ ಉತ್ತರಕೊಟ್ಟರು. "ನಿಮ್ಮಿಂದ

ಸಂಪ್ರದಾಯಾತಿಕ್ರಮ ಅಪರಾಧವಾಯಿತೆಂದು ಒಪ್ಪವಿರಪ್ಪೆ ತತ್ತ್ವಯುಕ್ತ ಕ್ಷಮಾಪಣಾ ಬೇಡಿಕೊಳ್ಳುವ ರೀತಿಯಲ್ಲಿ ಒಂದು ಪತ್ರ ಬರೆದುಕೊಡಿರಿ. ಆದರಿಂದ ಸ್ವಾಮಿಗಳವರ ಸಿಟ್ಟು ಶಾಂತವಾಗಿ, ನಿಮಗೆ ಸುಸೂತ್ರ ಅಪ್ಪಣೆ ದೊರೆಯುವುದು" ಅಂತ ಹಿತೈಷಿಗಳಂತೆ ಬೋಧಿಸಿದರು. "ವಿಧಿ ಇಟ್ಟಿ ತಪ್ಪ[illegible]ಳುವುದಾಗಲಿ, ಹೇಳಿಸಿಕೊಳ್ಳುವುದಾಗಲಿ ಯೋಗ್ಯವಾಗಲಾರದು. ಆದ್ದರಿಂದ ನಾನು ಆ ರೀತಿ ಲೇಖನ ಮಾಡಿಕೊಡಲಾರೆ" ಅಂತ ಉತ್ತರ ಕೊಟ್ಟರು. "ನಮ್ಮ ಸ್ವಾಮಿಗಳವರಿಗೆ ನಿಮ್ಮಿಂದ ಕ್ಷಮಾಪಣಾ ಪತ್ರಿಕಾಬೇಕೆಂದು ಇಚ್ಛಾವಿರುವದರಿಂದ ಮುಂದಿನ ಮಹಾತ್ಕಾರ್ಯ ಸಾಧಿಸುವ ಸಲುವಾಗಿ ಅಲ್ಪ ವಿಷಯಕ್ಕೆ ಯಾತಕ್ಕೆ ಹಿಂಜರಿಯುವಿರಿ? ಆದ್ದರಿಂದ ಇಹ, ಪರ ಯಾರಿಗೂ ಬಾಧಕವಿಲ್ಲ" ಅಂತ ಉಭಯ ಆಚಾರ್ಯರೆಂದರು. "ಇಂತಹ ಅನುಪಯುಕ್ತ (ಇಹ, ಪರ ಪ್ರಯೋಜಕವಿಲ್ಲದ) ವಿಷಯಕ್ಕೆ ಅವರ (ಸತ್ಯಧ್ಯಾನತೀರ್ಥರ) ಆಗ್ರಹವಾದರೂ ಯಾತಕ್ಕ?" ಅಂತ ಗೋವಿಂದರಾಯರೆಂದರು. "ಮಠದಲ್ಲಿ ಅನೇಕ ಕ್ಷುಲ್ಲಕರಿರುತ್ತಾರೆ ಅವರುಗಳ ಸಮಾಧಾನಾರ್ಥ ಸ್ವಾಮಿಗಳವರು ಆ ರೀತಿ ಮಾಡಬೇಕಾಗುತ್ತದೆ" ಅಂತ ಹೇಳಿದರು. "ಮಠದಲ್ಲಿ ಕ್ಷುಲ್ಲಕರನ್ನು ತಿಳಿದೂ ತಿಳಿದು ಯಾತಕ್ಕೆ ಇಟ್ಟುಗೊಳ್ಳಬೇಕು? ಅವರುಗಳ ಪ್ರೀತ್ಯರ್ಥವಾಗಿ ಯುಕ್ತಾಯುಕ್ತಗಳ ನೋಡದೆ ವರ್ತಿಸುವ ಪ್ರಸಂಗ ಯಾತಕ್ಕೆ ತಂದುಕೊಳ್ಳಬೇಕು? ಇದರಿಂದ ಸರ್ವಸಂಗ ಪರಿತ್ಯಾಗ ಮಾಡಿದವರಿಗೆ (ಸನ್ಯಾಸಿಗಳಿಗೆ) ಶೋಭಿಸಲಾರದು" ಅಂತ ಉತ್ತರ ಕೊಟ್ಟರು. "ರಾಯರೇ ಇದು ಮಠ, ಇಲ್ಲಿ ಎಲ್ಲ ತರಹದ ಗುಣಗಳಿದ್ದರೇನೇ ಮಠವಾಗುತ್ತದೆ" ಅಂತ ಆಚಾರ್ಯರೆಂದರು. "ಇದು ವೇದಾಂತ ರಾಜಧಾನಿ, ಇಲ್ಲಿ ಎಲ್ಲರೂ ಸದ್ಗುಣಿಗಳೇ ಇರತಕ್ಕದ್ದು. ಆದರೆ, ನಿಮ್ಮ ಅಭಿಪ್ರಾಯದಲ್ಲಿ ಅಸೂಯೆ, ಈರ್ಷ್ಯಾದಿಗಳನ್ನು ಗುಣತ್ವೇನ ಭಾವಿಸುವದೆಂದು ಹೇಳುವಿರಿ. ಇದು ಅಮಿತಾಜ್ಞಾನದಲ್ಲಿ ಸೇರುವುದಿಲ್ಲವೇ?" ಎಂದು ಗೋವಿಂದರಾಯರು ಅಪೇಕ್ಷಿಸಿದರು. ಈ ಮಾತಿನಿಂದ ಆ ಉಭಯ ಆಚಾರ್ಯರಿಗೆ ಆಗ್ರಹ ಉಂಟಾದಾಗ್ಯೂ ಕುಟಿಲಭಾವದಿಂದ ಸಮಾಧಾನವನ್ನು ತಾಳಿ "ರಾಯರೇ ಹೆಚ್ಚಿನ ವಿಮರ್ಶನದಿಂದ ಪ್ರಯೋಜನವೇನು? ನೀವು ಬಂದ ಕಾರ್ಯವನ್ನು ಸಾಧಿಸಲೋಸಗ 'ಅಹಿಮೂಷಕ ನ್ಯಾಯ' ವನ್ನನುಸರಿಸಿ ಪತ್ರಿಕಾಲೇಖನ ಮಾಡಿಕೊಟ್ಟು ಅಪ್ಪಣೆ ಪಡೆದುಕೊಂಡು ಹೋಗಿರಿ" ಅಂತ ಹಿತ ವಚನಗಳಿಂದ ಬೋಧಿಸಿದರು. ಇದರಿಂದ ಅಮಿತ ವಿಕ್ರಮರಾಯರು ತಥಾ ಗೋವಿಂದರಾಯರು ಅದದ್ದಾಯಿತು ಎಂದು ಉದಾಸೀನ ಭಾವದಿಂದ ಒಪ್ಪಿಕೊಂಡು ಈ ಕೆಳಗಿನಂತೆ ಪತ್ರಿಕಾವನ್ನು ಲೇಖನಮಾಡಿಕೊಟ್ಟರು.

ಶ್ರೀಮದುತ್ತರಾದಿ ಮಠಾಧೀಶ-

ಶ್ರೀ ಶ್ರೀ ಸತ್ಯಧ್ಯಾನತೀರ್ಥ ಶ್ರೀ ಪಾದಂಗಳವರ ಚರಣ ಸನ್ನಿಧಿಗೆ ಮಂಗಳವೇಡೆ ಗೋವಿಂದರಾಯನು ಮಾಡುವ ತ್ರಿಕರಣಪೂರ್ವಕ ಶಿರಸಾಷ್ಟಾಂಗ ನಮಸ್ಕಾರಪೂರ್ವಕ ವಿಜ್ಞಾಪನಾ.

ನಾನು ಸಾಂಪ್ರದಾಯಿಕ ಯಥಾರ್ಥ ಜ್ಞಾನವಿಲ್ಲದೆ ಅನ್ಯತ್ರ ತಪ್ತಮುದ್ರಾ ತೆಗೆದುಕೊಂಡಿದ್ದೇನೆ. ಇದು ಅಕ್ರಮವೂ ಮತ್ತು ಪ್ರಮಾದಕರವೂ ಆಗಿದೆ. ಶ್ರೀ ಶ್ರೀಗಳವರು ಮನ್ನಿಸಿ ಪರಮಾನುಗ್ರಹ ಮಾಡಬೇಕಾಗಿ ಪ್ರಾರ್ಥನೆ.

ಇಂತಿ ನಿಮ್ಮ

ಪದ್ಮ ಸರೋವರ (ತಿರುಪತಿ) (ಸಹಿ ಗೋಪಿಂದರಾಯ)

ಶಕೆ ೧೮೪೫ ಚೈತ್ರ ಶುದ್ಧ ೬ (ರುಧಿರೋದ್ಗಾರಿ ಸಂವತ್ಸರ) ಈ ರೀತಿ ಲೇಖಿ ಮಾಡಿಕೊಟ್ಟು ಪತ್ರಿಕಾವನ್ನು ಕೈಯಲ್ಲಿ ತೆಗೆದುಕೊಂಡು "ಇದನ್ನು ಸ್ವಾಮಿಗಳವರಿಗೆ ತೋರಿಸಿ ಅವರ ಅನುಮತಿ ದೊರಕಿಸಿ, ನಿಮ್ಮನ್ನು ಅವರಲ್ಲಿ ಕರೆದುಕೊಂಡು ಹೋಗುತ್ತೇವೆ. ಅವರೆಗೂ ನೀವು ಇಲ್ಲಿಯೇ ಕುಳಿತುಕೊಳ್ಳಿರಿ ಅಂತ ಹೇಳಿ ಮಠದ ಒಳಗೆ ಹೋದವರು ಭೋಜನೋತ್ತರ ಹೊರಗೆಬಂದು ಏನು ರಾಯರೇ! ಆಗಿನಿಂದಲೂ ಇಲ್ಲಿಯೇ ಕೂತಹಾಗಿದೆ. ಮಠದಲ್ಲಿ ಪೂಜಾ, ತೀರ್ಥ, ಭೋಜನ ಎಲ್ಲವೂ ಆಯಿತು. ನೀವುಗಳು ಒಳಗಡೆ ಬರಬಾರದಾಗಿತ್ತೆ" ಅಂತ ಆಶ್ಚರ್ಯ ಮುಖಮುದ್ರಾದಿಂದ ನುಡಿದರು. ಸ್ವಾಮಿ! ನಾವು ಬರುವವರೆಗೂ ನೀವು ಇಲ್ಲಿಯೇ ಕೂತುಕೊಳ್ಳುವಂತೆ ಹೇಳಿಹೋಗಿ ಈಗ ಈ ರೀತಿ ಮಾತನಾಡುವದು ಯೋಗ್ಯವೆ? ಅಂತ ಅಮಿತ ವಿಕ್ರಮರಾಯನು ಅಂದದ್ದಕ್ಕೆ ಸ್ವಲ್ಪ ದೇಶಾವರಿ ನಗೆಯಿಂದ "ಮಠದಲ್ಲಿ ಹೋಗಿ ನಿಮ್ಮ ಪತ್ರಿಕಾವನ್ನು ಸ್ವಾಮಿಗಳವರಿಗೆ ಕೊಟ್ಟಕೂಡಲೇ ದಿವಾನರನ್ನು ಕಳಿಸುವುದಾಗಿ ಆಜ್ಞಾ ಮಾಡಿದರು. ಆ ಪ್ರಕಾರ ದಿವಾನರನ್ನು ಕರೆಯಹೋಗಿ ಶ್ರೀ ಶ್ರೀಗಳವರು ನಿಮ್ಮನ್ನೂ ಕಳಿಸುವುದಾಗಿ ಆಜ್ಞಾ ಮಾಡಿದ್ದಾರೆಂದು ತಿಳಿಸಿದೆವು; ಕೂಡಲೇ ಅವರು ಹೋದರು. ಆ ಸಮಯದಲ್ಲಿ ಉಗ್ರಾಣದ ಕೆಲವು ಲೆಕ್ಕ-ಪತ್ರಗಳ ತರಲೋಸುಗ ದಿವಾನರು ಹೇಳಿದ್ದರಿಂದ ಆ ಕೆಲಸದಲ್ಲಿ ತೊಡಗಿ ನಿಮ್ಮನ್ನು ಮರೆತುಬಿಟ್ಟೆವು. ಮಠದ ಕೆಲಸವೆಂದರೇ ಹೀಗೆ. ಮಾಡುವುದೇನು! ನೀವಾದರೂ ಸ್ವಲ್ಪ ಹೊತ್ತು ನೋಡಿ ಒಳಗೆ ಬಂದಿದ್ದರಾಗಿತ್ತು." "ಅಸ್ತು ಈಗಾದರೇನಾಯಿತು, ಒಳಗೆ ಹೋಗೋಣ ಬನ್ನಿರಿ" ಅಂತ ಅವಸರದಿಂದ ಮಠದೊಳಗೆ ಕರೆದುಕೊಂಡು ಹೋದರು. ಆಗ ಸ್ವಾಮಿಗಳವರೇ "ಓಹೋ! ಬರ್ರಿ ಬರ್ರಿ" ಅಂತ ಅವಸರಪಡಿಸಿ ಎರಡು ಎಲೆಗಳನ್ನು ತರಿಸಿ ಹಾಕಿಸಿ, ತಾವೇ ತೀರ್ಥ ಗಂಧಾಕ್ಷತಗಳನ್ನು ಕೊಟ್ಟು ಜಾಗ್ರತೆ ಬಡಿಸುವುದಾಗಿ ಹೇಳಿ ಭೋಜನಕ್ಕೆ ಕೂಡಿಸಿ ಸಾವಕಾಶ ಭೋಜನ ಮಾಡಿರಿ. ಭೋಜನೋತ್ತರ ಮಾತನಾಡೋಣ ಅಂತ ಹೇಳಿ ಪ್ರತ್ಯೇಕ ಖೋಲಿಯಲ್ಲಿ ದಿರಾನರ ಸಹ ಕುಳಿತುಕೊಂಡರು. ಭೋಜನೋತ್ತರ ಈ ಗೋವಿಂದರಾಯನು, ಅಮಿತ ವಿಕ್ರಮರಾಯರು ಸ್ವಾಮಿಗಳಲ್ಲಿ ಹೋಗಿ 'ಯಜ್ಞಕ್ಕೆ ಅಪ್ಪಣೆ ಕೊಡಬೇಕು' ಅಂತ ವಿನಯದಿಂದ ಕೇಳಲು, ನಿಮ್ಮ ಶ್ರೀರಘುಪ್ರೇಮತೀರ್ಥರು ಯಜ್ಞಕ್ಕೆ ಬರುವರೋ ಅಂತ ದೊಡ್ಡ ಧ್ವನಿಯಿಂದ ದಿವಾನರು ಕೇಳಿದರು. ಬರುವರು ಅಂತ ಗೋವಿಂದರಾಯ ಉತ್ತರ ಕೊಟ್ಟನು. ಹಾಗಾದರೆ ಅಪ್ಪಣೆ ಕೊಡುವುದಿಲ್ಲ ಅಂತ ಸ್ವಾಮಿಗಳವರೆಂದರು. "ಆ ಸ್ವಾಮಿಗಳವರು (ಶ್ರೀ ರಘುಪ್ರೇಮತೀರ್ಥರು) ಪ್ರೇಕ್ಷಕರಾಗಿ

ಬರುವರು, ಅದ್ದರಿಂದ ತಮ್ಮಗಳಿಗಾಗಲಿ, ತಮ್ಮ ಕಡೆಯವರಿಗಾಗಲಿ ಯಾವ ಅನುಮಾನಕ್ಕೆ ಕಾರಣವಿಲ್ಲವೆಂದು" ವಿಜ್ಞಾಪನ ಮಾಡಿಕೊಂಡನು. "ಯಾವ ರೀತಿಯಿಂದಲೇ ಆಗಲಿ, ಯಜ್ಞ ಸ್ಥಲ ಸಮೀಪಕ್ಕೆ ಸಹ ನಿಮ್ಮ ಗುರುಗಳು ಬರಕೂಡದು. ಹೀಗಾದ ಪಕ್ಷದಲ್ಲಿ ಯಜ್ಞಕ್ಕೆ ಅಪ್ಪಣೆ ದೊರೆಯುವದು, ಇಲ್ಲವಾದರೆ ಬಂದ ದಾರಿ ಹಿಡಿದು ಹೋಗಿರಿ." ಅಂತ ದಿವಾನ ಪಾಂಡುರಂಗಿ ಜಯಾಚಾರ್ಯರೂ ಗರ್ಜಿಸಿದರು. ಈ ರೀತಿ ಆಗ್ರಹವಿದ್ದರೆ ಉಪಾಯವಿಲ್ಲ ಎಂದು ಹೇಳುತ್ತ ಆ ಮಠದಿಂದ ಹೊರಗೆ ಬಂದು, ನಾನು ಬರೆದುಕೊಟ್ಟ ಕಾಗದವನ್ನು ತಿರುಗಿ ಕೊಡಿರಿ ಅಂತ ಆ ಉಭಯ (ಮಳಗೀ ಹನುಮಂತಾಚಾರ್ಯ, ಮುಂಡರಗಿ ಜಯರಾಮಾಚಾರ್ಯ)ರನ್ನು ಕೇಳಿದರು. "ಅದು ಸ್ವಾಮಿಗಳ ಕೈಯಿಂದ ದಿವಾನರ ಕೈ ಸೇರಿದೆ. ಅದನ್ನು ತಿರುಗಿ ತಂದುಕೊಡಲು ನಮ್ಮಿಂದ ಸಾಧ್ಯವಿಲ್ಲ" ಅಂತ ಉಭಯ ಆಚಾರ್ಯರು ಕೈ ಅಲ್ಲಾಡಿಸಿದರು. (ಪದ್ಮ ಸರೋವರದಲ್ಲಿ) ಈ ರೀತಿ ಆದದ್ದಕ್ಕೆ ಖಿನ್ನರಾಗಿ ಅಮಿತ ವಿಕ್ರಮರಾಯನ ಸಹಿತ ಗೋವಿಂದರಾಯರು ಆದವಾನಿಗೆ ಬಂದು ಅಲ್ಲಿ, ಉತ್ತರಾದಿ ಮಠದಲ್ಲಿ ನಡೆದ ವೃತ್ತಾಂತವನ್ನೆಲ್ಲ ತಮ್ಮ ಗುರುಗಳಾದ ಶ್ರೀ ರಘುಪ್ರೇಮತೀರ್ಥರಲ್ಲಿ ತಿಳಿಸಲು, "ಶ್ರೀಶನ ವಿಹಾರ ಪ್ರಾಸಾದವೆನಿಸಿದ, ವೇದಾಂತ ರಾಜಧಾನಿಯೆನಿಸಿದ ಮಠಗಳು ಸದ್ಭಕ್ತರಿಗೆ ಸಂಸ್ಥಾನವಾಗಿಯೂ, ಶಿಷ್ಯರಿಗೆ ಶ್ರೇಷ್ಠ ಸ್ಥಲವಾಗಿಯೂ, ಪ್ರಾಮಾಣಿಕರಿಗೆ ಪುಣ್ಯ ಸ್ಥಲವಾಗಿಯೂ, ಸುಶೀಲರಿಗೆ ಶ್ಲಾಘ್ಯ ಸ್ಥಲವಾಗಿಯೂ, ಮೋದತೀರ್ಥಮತಾನುಗರಿಗೆ ಪ್ರಮೋದದಾಯಕವಾಗಿಯೂ ಇರದೆ ತದ್ವಿರುದ್ಧವಾಗಿ ಕುಟಿಲನೀತಿ ಪಟುಗಳಿಗೆ ಪೀಠವಾಗಿಯೂ, ಮೋಸಗಾರರಿಗೆ ಮೀಸಲಿಟ್ಟ ಸ್ಥಲವೂ, ಕುಹಕರಿಗೆ ವಿಹಾರ ಸ್ಥಲವೂ, ಡಾಂಭಿಕರಿಗೆ ನಂಬಿಕೆಯಾದ ಸ್ಥಲವೂ, ಉಡಾಳರಿಗೆ ಉಗಮ ಸ್ಥಲವೂ, ಸುಳ್ಳರಿಗೆ ಶೀಲಸ್ಥಲವೂ ಆಗಿರೋಣದರಿಂದ, ಅಲ್ಲಿ ಸತ್ಕರ್ಮಾನುಷ್ಠಾನಕ್ಕೆ ಪ್ರೋತ್ಸಾಹ ಸಿಗದೆ ಪ್ರತ್ಯುತ ಭಂಗಕ್ಕೆ ಮಾರ್ಗವಾಗುವದು. ಹೀಗಿರುವಾಗ ಯಜ್ಞಾರ್ಥ ಅಪ್ಪಣೆ ಕೇಳುವುದಕ್ಕಾಗಿ ಅಲ್ಲಿಯವರೆಗೆ ಹೋದದ್ದೇ ತಪ್ಪು. ಅಲ್ಲಿ ಈ ರೀತಿಯೇ ಆಗಬಹುದೆಂದು ಅಂತರಾತ್ಮದಿಂದ ತಿಳಿದಿದ್ದರೂ ಬಹಿರಂಗದಲ್ಲಿ ಮಠದ ವ್ಯವಹಾರಗಳು ವ್ಯಕ್ತವಾಗಲೆಂದು ನಿಮ್ಮನ್ನು ಕಳಿಸಿದ್ದೆವು. ಆದರೆ ವಿಧಿ (ಶಾಸ್ತ್ರ) ಬದ್ಧ ಕರ್ಮಾನುಷ್ಠಾನಕ್ಕೆ ಸಂಪ್ರದಾಯಾತಿಕ್ರಮಣವೆಂದು ದುರುದ್ದೇಶ (Mislead) ಮಾಡಿ ನಿಮ್ಮಿಂದ ಆ ರೀತಿ ಕಾಗದ ಬರಸಿಗೊಂಡದ್ದೇ ಅಕ್ರಮವಾಗಿದೆ. ಆದರೆ ಈ ಪತ್ರಿಕಾದಂತೆ ಅವರಿಗಾಗಲೀ, ನಮಗಾಗಲೀ, ನಿಮಗಾಗಲೀ, ಇಹ ಪರ ಸಾಧಕ ಬಾಧಕವು ಇಲ್ಲದಿದ್ದರೂ, ಕುತ್ಸಿತರಿಗೆ ಕುಚೋದ್ಯ ಮಾಡಲಿಕ್ಕೆ ಬಾರದಂತೆ ಏನಾದರೂ ಮಾಡಲು ಶಕ್ಯವಿದ್ದರೆ ಮಾಡುವದು ಒಳ್ಳೆಯದು" ಅಂತ ಅಂದರು. 'ಅದಕ್ಕೇನೂ ಪ್ರಯಾಸ ಪಡುವ ಕಾರಣವಿಲ್ಲ. ಆ ಉತ್ತರಾದಿ ಮಠೀಯರು ಸುಳ್ಳು ಹೇಳಿ ಮೋಸದಿಂದ ಬರೆಸಿಕೊಂಡ ಕಾಗದದ ವಿರುದ್ಧವಾಗಿ ಆ ಮಠಾಧೀಶರಿಗೆ ಒಂದು ಪತ್ರವನ್ನು ಬರೆದು ಈ ನನ್ನ ಎರಡೂ ಪತ್ರಗಳನ್ನು ಪ್ರಚಾರಾರ್ಥ ವರ್ತಮಾನ ಪತ್ರಿಕಾಗಳಲ್ಲಿ ಛಾಪಿಸಲು ಕಳಿಸಿದರಾಯಿತು' ಅಂತ ಗೋವಿಂದರಾಯನು ಹೇಳಿ ಆ ಪ್ರಕಾರ ಉತ್ತರಾದಿ ಮಠಾಧೀಶರಿಗೆ ಬರೆದ ಪತ್ರವು ಈ ಕೆಳಗಿನಂತಿದೆ.

ಶ್ರೀ ಶ್ರೀ ಸತ್ಯಧ್ಯಾನತೀರ್ಥ ಶ್ರೀ ಪಾದಂಗಳವರ ಸನ್ನಿಧಿಗೆ -

ಶಿಷ್ಯನಾದ ಮಂಗಳವೇಢೆ ಗೋವಿಂದರಾಯನು ಮಾಡುವ ಸಾಷ್ಟಾಂಗ ನಮಸ್ಕಾರಪೂರ್ವಕ ವಿಜ್ಞಾಪನೆಗಳು. ನಾನು ಮೊನ್ನೆ ಸನ್ನಿಧಾನಕ್ಕೆ ಬಂದಾಗ ವೇದಮೂರ್ತಿ ಹನುಮಂತಾಚಾರ್ಯ ಮಳಗಿ ಮತ್ತು ಜಯರಾಮಾಚಾರ್ಯ ಮುಂಡರಗಿ ಇವರು ಬಂದು ಮಠದ ಶಿಷ್ಯರಿಗೆ ಮತ್ತೊಂದು ಮಠದ ಶ್ರೀಗಳವರು ತಪ್ತಮುದ್ರಾ ಕೊಡೋಣ ಎಂದಿಗೂ ಸಂಪ್ರದಾಯ ಬಂದಿಲ್ಲವಾದ ಪ್ರಯುಕ್ತ ನೀವು ಅನ್ಯತ್ರ ತಪ್ತಮುದ್ರಾ ತೊಗೊಂಡದ್ದು ಕೇವಲ ಅಕ್ರಮ ಅಂತ ಹೇಳಿ ನನ್ನ ಕೈಯಿಂದ ಆ ಪ್ರಕಾರ ಕಾಗದ ಬರೆಸಿಕೊಂಡರು. ಆದರೆ ಅವರು ಹೇಳಿದ್ದು ಯಥಾರ್ಥವಲ್ಲ ಅಂತ ನನಗೆ ಕಂಡುಬರುತ್ತದೆ. ಯಾಕೆಂದರೆ ಉತ್ತರಾದಿ ಮಠದ ಶ್ರೀಗಳವರೇ ವ್ಯಾಸರಾಯರ ಹಾಗೂ ರಾಯರ ಮಠಗಳ ಶಿಷ್ಯರಿಗೆ ಹಾಗೂ ಆ ಶ್ರೀಗಳವರು ಉತ್ತಾರಾದಿ ಮಠದ ಶಿಷ್ಯರಿಗೆ ತಪ್ತಮುದ್ರಾ ಹಾಕಿದ್ದಲ್ಲದೆ ಆಯಾ ಜನರನ್ನು ತಮ್ಮ ತಮ್ಮ ಮಠಕ್ಕೆ ಸೇರಿಸಿಕೊಂಡ ಅನೇಕ ಉದಾಹರಣೆಗಳಿವೆ ಎಂದು ಈಗ ನನಗೆ ತಿಳಿದು ಬಂದಿದೆ. ಅಂದಮೇಲೆ ನನಗೆ ಪರಮ ಮಾನ್ಯರಾದವರಲ್ಲಿ ತಪ್ತಮುದ್ರಾ ತೊಗೊಂಡದ್ದು ಅಕ್ರಮವೆನಿಸಲಾರದು. ಆ ಉಭಯ ಆಚಾರ್ಯರು ಅಲ್ಲಿ ಯಥಾರ್ಥ ಹೇಳಿದಂತೆ ನಟಿಸಿ ನನ್ನ ಕೈಯಿಂದ ಕಾಗದ ಬರೆಸಿಕೊಂಡಿದ್ದು ಅಕ್ರಮವಾಗಿ ತೋರುತ್ತದೆ. ಬರೆದು ಕೊಟ್ಟ ಮಾತಿನ ಬಗ್ಗೆ ಪ್ರಾಯಶ್ಚಿತ್ತವೆಂದು ಈ ಹೊತ್ತು ತಪ್ತಮುದ್ರಾ ತೆಗೆದುಕೊಂಡಿದ್ದೀನಿ. ಶ್ರೀಗಳವರು ಅನುಮೋದಿಸಿ ಪರಮಾನುಗ್ರಹ ಮಾಡಬೇಕೆಂದು ಪ್ರಾರ್ಥನಾ. ನನ್ನ ಕೈಯಿಂದ ಬರೆಸಿಕೊಂಡ ಕಾಗದದ ಮೇಲಿಂದ ಕುಚೋದ್ಯ ಮಾಡಲಿಕ್ಕೆ ಆಸ್ಪದ ಸಿಗಬಾರದೆಂಬ ಉದ್ದೇಶದಿಂದ ಈ ವಿಜ್ಞಾಪನಾ ಪತ್ರವನ್ನು ಪೇಪರುಗಳಿಗೆ (ವರ್ತಮಾನ ಪತ್ರಗಳಿಗೆ) ಕಳಿಸುತ್ತಿದ್ದೇನೆ.

೧೯೪೫ ರುಧಿರೋದ್ಗಾರಿ ಸಂ॥ ಚೈತ್ರ ಶುದ್ಧ ೯ ಸೋಮವಾರ

ಆದವಾನಿ ಇತಿ ಅತ್ಯಂತ ಸಾಷ್ಟಾಂಗ ನಮಸ್ಕಾರ

೨೬-೩-೧೯೨೩ (ಸಹಿ) ಗೋವಿಂದ ನಾರಾಯಣ ಮಂಗಳವೇಢಕರ.

೧೮೪೫ ರುಧಿರೋದ್ಗಾರ ಸಂವತ್ಸರದ ಚೈತ್ರ ಶುದ್ಧ ೯ ಸೋಮವಾರ ೨೬-೩-೧೯೨೩ ಇಸವಿ ಎಂಬುವದಾಗಿ ಬರೆದ ಪತ್ರವನ್ನು ರಿಜಿಷ್ಟರ ಟಪಾಲದಿಂದ ಸತ್ಯಧ್ಯಾನತೀರ್ಥರಿಗೆ ಕಳಿಸಿಕೊಟ್ಟನು. (ಈ ಗೋವಿಂದರಾಯನು ತನ್ನ ಗುರುಗಳಾದ ಶ್ರೀ ರಘುಪ್ರೇಮತೀರ್ಥರನ್ನು ತನ್ನಲ್ಲಿಗೆ (ಬಿಜಾಪೂರಕ್ಕೆ) ಬರುವುದಾಗಿ ಪ್ರಾರ್ಥನಾ ಮಾಡಿಕೊಂಡು ತನ್ನ ಊರಿಗೆ (ಬಿಜಾಪುರಕ್ಕೆ) ಹೋದನು.

೧೧. ಆನಂದವನ ಆರೋಗ್ಯತಂದಿತು.

ಈ ಪ್ರಾರ್ಥನಾನುಗುಣವಾಗಿ ಶ್ರೀಗಳವರು ಬಿಜಾಪೂರಕ್ಕೆ ಹೋದರು. ಅಲ್ಲಿ ಕೆಲವು ದಿನಗಳಿದ್ದು ನಂತರ ನಾರಾಯಣಪೇಟೆಗೆ ಬಂದರು. ಈ ಒಳಗಾಗಿ ಅನ್ಯತ್ರ ಉಪದೇಶದಿಂದ

12AF

ಬೊಜ್ಜಿ ಗುರುರಾಜಾಚಾರ್ಯರ ಮನಸ್ಸು ಈ ಶ್ರೀಗಳವರ ವಿಷಯದಲ್ಲಿ ಕಲುಷಿತವಾದದ್ದು, ದಿನೇ-ದಿನೇ ಅಭಿವೃದ್ಧಿ ಹೊಂದುತ್ತಲಿತ್ತು. ಇದನ್ನು ತಿಳಿದಾಗ್ಯೂ ಪ್ರತ್ಯಕ್ಷ ನೋಡಿದರೂ ಪ್ರಮಾಣಿಸಿ ನೋಡಬೇಕು ಎಂಬ ನಾಣ್ಣುಡಿಯನ್ನು ಅನುಸರಿಸಿ, ಆ ಗುರುರಾಜಾಚಾರ್ಯರ ಮನೋವೃತ್ತಿಗಳನ್ನನುಸರಿಸಿ "ನಾವು ಇಲ್ಲಿರುವ ನಿಮಿತ್ತ ಕೆಲವು ಜನಗಳಿಗೆ ಸಂಕೋಚ ಉಂಟಾಗಿ, ಅವರು ಇಲ್ಲಿಯ ರಾಯರ ಆರಾಧನಾ ಉತ್ಸವಕ್ಕೆ ಬರುವುದು ರಹಿತ ಮಾಡಬಹುದು. ಆ ರೀತಿ ಆಗುವ ಕಾರಣವಿಲ್ಲ. ನಾವು ನಮ್ಮ ಅನ್ಹೀಕ ಪೂಜಾದಿಗಳನ್ನು ಪ್ರತ್ಯೇಕ ಮಾಡಿಕೊಳ್ಳುವೆವು. ಇಲ್ಲಿ ಆಗತಕ್ಕ ಉತ್ಸವವು ಯಥಾ ಪ್ರಕಾರ ನಡೆಯುವ ಸಲುವಾಗಿ ಈ ಪ್ರಾಂತದ ರೂಢಿಯಂತೆ 'ಗಾರ್ಲಪಾಡ' ವಂಶೀಯರಿಂದಲೇ ನೈವೇದ್ಯವನ್ನು ವ್ಯವಸ್ಥೆ ಮಾಡಿ, ಆ ಪ್ರಕಾರ ಸರ್ವರಿಗೂ ತಿಳಿಸಿಬಿಡು. ಇದರಿಂದ ಜನಗಳಿಗೆ ಸಂತಸ ಉಂಟಾಗಿ ಆ ಜನಗಳೆಲ್ಲರೂ ಬರುವರು. ಆದರಿಂದ ಉತ್ಸವವು ವಿಜೃಂಭಣೆಯನ್ನು ಹೊಂದುವದು" ಎಂದು ಮನಃಪೂರ್ವಕ ಹೇಳಿದರು. ಈ ಮಾತು ಗುರುರಾಜಾಚಾರ್ಯನಿಗೆ ಇಷ್ಟವಾದ್ದರಿಂದ ಮನ ಉಬ್ಬಿಸಿ ಕೋಟಂಕೊಂಡ ಮೊದಲಾದ ಗ್ರಾಮಗಳಿಗೆ ಹೇಳಿಕಳುಹಿಸಿದನು. ಇದು ಕೇಳಿ ಅಪೇಕ್ಷಿಯರು (ಉತ್ತರಾದಿ ಮಠಪಕ್ಷಿಯರು) ಬಹುಜನ ಬಂದರು. 'ಕೋಟಂಕೊಂಡದ ಗಾರ್ಲಪಾಡರಾಮಾಚಾರ್ಯ' ರಿಂದಲೇ ನೈವೇದ್ಯ ಮಾಡಲಾಯಿತು. ಉತ್ಸವವೂ ಮುಗಿಯಿತು. ಈ ಉತ್ಸವಕ್ಕೆ ಬಂದಿದ್ದ 'ಜಠರದ ಆನಂದರಾಯನು' ತಾವು ಆದವಾನಿಗೆ ಪ್ರಯಾಣ ಮಾಡುವಾಗ ಮಾರ್ಗತ್ವೇನ ನಮ್ಮ ಊರಿಗೆ ಬರಬೇಕೆಂದು ಪ್ರಾರ್ಥಿಸಿದನು. "ನಿಮ್ಮ ಊರಿಗೆ ಬರುವೆವು. ಆದರೆ ನಿಮ್ಮ ಊರಿನಲ್ಲಿ ಇರುವದು ನಮಗೆ ಸಮ್ಮತವಿಲ್ಲ. ಊರ ಹೊರಗೆ ಪರ್ಣಕುಟೀರ ನಿರ್ಮಿಸಿದರೆ ಬರವೆವು" ಎಂದು ಹೇಳಿದರು. "ಹಾಗೆ ಮಾಡಿಸುತ್ತೇನೆಂದು" ಜಠರಕ್ಕೆ ಹೋದನು. ಇತ್ತ ಚಾತುರ್ಮಾಸ್ಯ ದೀಕ್ಷಾ ವಿಸರ್ಜನಾದ ನಂತರ ಜಠರಕ್ಕೆ ಹೋಗಿ, ಊರಿಗೆ ಸುಮಾರು ಅರ್ಧ ಮೈಲು ದೂರದಲ್ಲಿರುವ ಹೊಸಬಾವಿಯ ಹತ್ತಿರ ಹಾಕಿರುವ ಪರ್ಣಕುಟೀರದಲ್ಲಿ ವಾಸ ಮಾಡಿದರು. ಅಲ್ಲಿಯ ಹವೆ ಮತ್ತು ನೀರಿನ ಪ್ರಭಾವದಿಂದ ಶ್ರೀಗಳವರ ಕೆಮ್ಮು, ದಮ್ಮಿನ ಭಾಧೆ ಕಡಿಮೆಯಾಯಿತು. ಪ್ರಯುಕ್ತ ಆ ಸ್ಥಳಕ್ಕೆ "ಆನಂದವನ" ಎಂಬ ಹೆಸರನ್ನಿಟ್ಟು, ಅಲ್ಲಿ ಕೆಲಕಾಲ ವಾಸಮಾಡುವ ಇಚ್ಛಾದಿಂದ ಪ್ರಾಣಪತ್ರೀಕವನ್ನು ಸ್ಥಾಪಿಸಿ ವಾಸ ಮಾಡುವವರಾದರು. ಈ ಸಂದರ್ಭದಲ್ಲಿ ಆನಂದರಾಯನು ಹಳೆಯ ಮನೆಯನ್ನು ಬಿಚ್ಚಿಸಿ ಹೊಸದಾಗಿ ಕಟ್ಟಿಸುತ್ತಿದ್ದನು. ಅದರಲ್ಲಿ ತನ್ನ ತಂದೆಯವರ ಇಚ್ಛಾ ಪ್ರಕಾರ ಒಂದು ಗರ್ಭಗುಡಿಯನ್ನು ಕಟ್ಟಿಸಿ ಅದರಲ್ಲಿ ಶ್ರೀ ಉಡುಪಿ ಕೃಷ್ಣ ಪ್ರತಿಮಾವನ್ನು ಪ್ರತಿಷ್ಠಾಪನ ಮಾಡಬೇಕೆಂಬ ಇಚ್ಛಾ ಇದ್ದದ್ದನ್ನೂ ವಿವರಿಸಿದನು. ಆದರೆ ಶ್ರೀಗಳವರು ವಾಸಮಾಡಿದ ಸ್ಥಲವು ಇವರಿಗೆ ಆರೋಗ್ಯವನ್ನುಂಟು ಮಾಡಿದ್ದಕ್ಕೆ "ಆನಂದವನ" ವೆಂದು ಹೆಸರಿಟ್ಟದ್ದರಷ್ಟೆ! ಆ ಹೆಸರಿಗೆ ಮಹತ್ವ ಬರಲಿರುವಾಗ ಶ್ರೀ ಮದಾನಂದತೀರ್ಥರ ಹಾಗೂ ಬದರೀನಾರಾಯಣ ಪ್ರತಿಮಾಗಳನ್ನೂ ಸ್ಥಾಪಿಸುವಾ. ಮನೆಯಲ್ಲಿ ಕಟ್ಟಿಸುವ ದೇವಾಲಯದ ಬದಲಾಗಿ ಈ ಸ್ಥಲದಲ್ಲಿ ಗುಡಿಯನ್ನು ಕಟ್ಟಿಸುವುದಾಗಿ ಆನಂದರಾಯನಿಗೆ ಹೇಳಿದರು. ಇದಕ್ಕೆ ಒಪ್ಪಿ ಅಲ್ಲಿಯೇ ದೇವಾಲಯವನ್ನೂ

ಕಟ್ಟಿಸುವ ಸಂಕಲ್ಪ ಮಾಡಿದನು. ಆದರೆ, ಆಗಲೇ ಕಟ್ಟಿಸಲು ಆತನಿಗೆ ಕೆಲವು ಲೌಕಿಕ ಪ್ರತಿಬಂಧಕ ಇದ್ದ ಮೂಲಕ ಕೆಲಸಾರಂಭವಾಗದ್ದರಿಂದ ಇವರು ಆದವಾನಿಗೆ ಬಂದರು.

೧೨. ಕೃಪಾಸಾಗರ ಶ್ರೀರಾಘವೇಂದ್ರರು ರೋಗಹರಣಗೈದರು.

ಈ ಮಧ್ಯ ಅತ್ತ ನಡೆದ ವಿಷಯವೇನೆಂದರೆ ಕೋಟಂಕೊಂಡ ಗಾರ್ಲಪಾಡ ರಾಮಚಾರ್ಯರ ಕುಟುಂಬ 'ಕುಂ॥ ಸೌ॥ ಕಮಲಾಬಾಯಿ'ಗೆ ಬಹುಕಾಲದಿಂದ ಹೊಟ್ಟೆ ಶೂಲಿ ಇತ್ತು. ಇದು ಕಾಲ ಗತಿಸಿದಂತೆ ಪ್ರಬಲವಾಗುತ್ತ ಮೂರ್ಛಾವಸ್ಥೆವರೆಗೂ ಬಂತು. ಇದಕ್ಕಾಗಿ ಅನೇಕ ವೈದ್ಯರಿಂದ ಚಿಕಿತ್ಸಾ ಮಾಡಿಸಿದಾಗ್ಯೂ ಪ್ರಯೋಜನವಾಗದೆ ಇದ್ದ ಪ್ರಯುಕ್ತ ಪ್ರಸಿದ್ಧವಾದ 'ಪನವೇಲ ಆಯುರ್ವೇದ' ಔಷಧ ಶಾಲಾಕ್ಕೆ ಹೋಗಿ, ಅಲ್ಲಿ ಚಿಕಿತ್ಸಾ ಮಾಡಿಸಲಾಯಿತು. ಆದರೂ ಪ್ರಯೋಜನವಾಗಲಿಲ್ಲ. ಹಿಂತಿರುಗಿ ಬಂದು 'ಬೆಜವಾಡ' (ವಿಜಯವಾಡ) ದಲ್ಲಿಯ ಒಬ್ಬ ಪ್ರಸಿದ್ಧ ವೈದ್ಯನಲ್ಲಿ ಹೋಗುವದೆಂದು ಪ್ರಯಾಣೋನ್ಮುಖರಾಗಿ, ನಾರಾಯಣಪೇಟೆಗೆ ಬಂದು ಪ್ರಾಕ್ಟೂರ ಜಯಾಚಾರ್ಯರ ಮನೆಯಲ್ಲಿಳಿದುಕೊಂಡರು. ಮಾರ್ಗಯಾಸ ಪರಿಹಾರಕ್ಕೋಸ್ಕರ ಎರಡುದಿನ ನಿಲ್ಲುವ ವಿಚಾರ ಮಾಡಿದರು. ಇಷ್ಟರಲ್ಲಿ ಅವರ ಹಿತಚಿಂತಕರಲ್ಲೊಬ್ಬರಾದ 'ಖಾಸನವೀಸ ಶೇಷಗಿರಿರಾಯರ' ಕುಟುಂಬ 'ಕುಂ॥ ಸೌ॥ ರುಕ್ಮಿಣೀಬಾಯಿ' ಬಂದು ಈ ಅವಸ್ಥೆಯನ್ನು ನೋಡಿ ಮರುಕ ಹೊಂದಿ "ರಾಮಾಚಾರ್ಯರೇ! ಈವರೆಗೂ ಔಷಧೋಪಚಾರ ಸಲುವಾಗಿ ಬಹು ಪ್ರಯಾಸಪಟ್ಟಿದ್ದೀರಿ. ಅದೆಲ್ಲವೂ ವ್ಯರ್ಥವಾಗಿದೆಯಷ್ಟೆ! ಅಂದಮೇಲೆ ಪುನಃ ಪುನಃ ಅದನ್ನೇ ಕುರಿತು ಧಾವಿಸುವುದು ಯುಕ್ತವಲ್ಲ. ಇದು ಅಧಿದೈವಿಕ ವ್ಯಾಧಿ, ಆದ್ದರಿಂದ ಇದಕ್ಕೆ ಭಗವತ್ಸೇವಾ ಅಥವಾ ಮಹನೀಯರ ಸೇವಾ ಮಾಡಿ ಅವರ ಅನುಗ್ರಹ ಸಂಪಾದನೆ ಮಾಡಿದರೇನೇ ಪ್ರಯೋಜನವಾಗುವುದು. ಪ್ರಯುಕ್ತ ಇಲ್ಲಿ (ಪಳ್ಳಿಯಲ್ಲಿ) ಬೊಜ್ಜಿ ಗುರುರಾಜಾಚಾರ್ಯರ ಮನೆಯಲ್ಲಿ ಅವರ ಗುರುಗಳಾದ ಆದವಾನಿ ಮುತ್ತಿಗಿ ಆಚಾರ್ಯರಿಂದ ಶ್ರೀ ರಾಘವೇಂದ್ರ ತೀರ್ಥರ (ರಾಯರ) ವೃಂದಾವನವು ಪ್ರತಿಷ್ಠಾಪನಾ ಮಾಡಲ್ಪಟ್ಟು, ಅಲ್ಲಿ ಅನೇಕರು ಸೇವಾಮಾಡಿ ಅನಿಷ್ಟ ನಿವೃತ್ತಿ, ಇಷ್ಟ ಪ್ರಾಪ್ತಿಯನ್ನು ಹೊಂದಿದ್ದಾರೆ. ನೀವೂ ಕೂಡಾ ಅಲ್ಲಿಗೆ ಹೋಗಿ ಒಂದು ಸಪ್ತಕವಾದರೂ ಸೇವಾಮಾಡಿ ನೋಡಿರಿ. ಅಷ್ಟರಲ್ಲಿ ಸ್ವಲ್ಪವಾದರೂ ಪ್ರಯೋಜನ ಕಂಡರೆ ಸೇವಾ ಮುಂದುವರಿಸಿರಿ. ಇಲ್ಲವಾದರೆ ನಿಮ್ಮ ಮನಬಂದಂತೆ ಮಾಡಿರಿ" ಅಂತ ಹೇಳಿದಳು. 'ರುಕ್ಕಮ್ಮವ್ವಾ,' "ನಾವು ಆ ಸ್ಥಲಕ್ಕೆ ಹೋಗಕೂಡದು, ಯಾಕೆಂದರೆ, ಆ ಮುತ್ತಿಗಿ ಆಚಾರ್ಯರಿಗೆ ಉತ್ತರಾದಿ ಮಠದಿಂದ ಬಹಿಷ್ಕಾರವಿರುವಾಗ ಸ್ಥಾಪಿಸಲ್ಪಟ್ಟಿದ್ದಾಗಿದೆ. ಆದ್ದರಿಂದ ಅಂತಹ ಸ್ಥಲದಲ್ಲಿ ನಾವು ಸೇವಾ ಮಾಡಲಿಕ್ಕೆ ಬಾರದು" ಅಂತ ರಾಮಾಚಾರ್ಯರು ಉತ್ತರಿಸಿದರು. 'ಸ್ವಾಮಿ! ಆಪತ್ಕಾಲದಲ್ಲಿ ಸಣ್ಣ ವಿಚಾರಗಳನ್ನು ಮನಸ್ಸಿನಲ್ಲಿ ತಂದುಕೊಂಡು ಹಿಂಜರಿಯಬಾರದು. ಪ್ರಸಂಗ ಬಂದಾಗ ಕೀಳುಜಾತಿಯವರ ಕಾಲು ಹಿಡಿಯಬೇಕಾಗುವುದಿಲ್ಲವೇ? ಅಂದಮೇಲೆ ಆ ಸ್ಥಳಕ್ಕೆ ಹೋಗಬಾರದೆಂಬ ಹಟ ಬೇಡ, ಅಂತ ರುಕ್ಕಮ್ಮ ಹೇಳುತ್ತಿರುವಾಗ ಅಲ್ಲಿಗೆ ಬೊಜ್ಜಿ ಗುರುರಾಜಾಚಾರ್ಯರೂ ಗೋಪಾಳಕ್ಕಾಗಿ ಬರಹತ್ತಿದ್ದರು. ಈ ಸಂದರ್ಭದಲ್ಲಿ ಯಾರೋ

"ರೋಗ ಹರಣ ಕೃಪಾ ಸಾಗರ ಗುರು ಶ್ರೀ ರಾಘವೇಂದ್ರ ಪರಿಪಾಲಿಸೋ" ಎಂಬ ಪದವನ್ನು ಸುಸ್ವರದಿಂದ ಹಾಡುತ್ತಿದ್ದಂತೆ ಮಲಗಿದ್ದ ಕುಂ.ಸೌ. ಕಮಲಾಬಾಯಿಗೆ ಕೇಳಿದಂತಾಗಿ ಆ ಕ್ಷಣದಲ್ಲಿ ಹೊಟ್ಟೆಶೂಲಿ ನಿಂತು ಆರಾಮವೆನಿಸಿತು. ಯಾರೋ ಒಬ್ಬ ದಾಸರು ಸುಸ್ವರದಿಂದ ಹಾಡುತ್ತ ಬರುತ್ತಿರುವರು, ಅವರನ್ನು ಒಳಗೆ ಕರೆದು ಸತ್ಕಾರಮಾಡಿರಿ ಅಂತ ಕುಂ.ಸೌ. ಕಮಲಾಬಾಯಿ ಹೇಳಿದಳು. ಇತ್ತ ಕಡೆ ಯಾರೂ ಹಾಡುತ್ತಾ ಬರುತ್ತಿಲ್ಲ. ಬೊಜ್ಜಿ ಗುರುರಾಜಾಚಾರ್ಯರು ಮಾತ್ರ ಸುಮ್ಮನೆ ಗೋಪಾಳಕ್ಕೆ ಬರುತ್ತಲಿದ್ದಾರೆ. ಅವರು ಒಳಗೆ ಬಂದ ಕೂಡಲೇ ಗೋಪಾಳ ಹಾಕುವೆವೆಂದು ಮನೆಯೊಳಗಿದ್ದವರಲ್ಲೊಬ್ಬರು ಹೇಳಿದರು. - "ಹಾಂಗಲ್ಲ ತಂಬೂರಿ, ಕಾಲಗೆಜ್ಜೆ ಸಪ್ಪಳದೊಂದಿಗೆ ಒಬ್ಬ ದಾಸರು ದಾರಿಹಿಡಿದು ಹೋಗುತ್ತಿರುವರು. ಅವರನ್ನು ಒಳಗೆ ಕರೆಯಿರಿ. ಅವರು ಎಷ್ಟು ಸುಸ್ವರದಿಂದ ಹಾಡುತ್ತಿರುವರು, ಅದು ನನ್ನ ಕಿವಿಗೆ ಬೀಳುತ್ತಿರುವುದು. ಆಗಿನಿಂದಲೂ ನನ್ನ ಬಾಧೆ ಕಡಿಮೆಯಾಗಿ ಆರಾಮ ಅನಿಸಹತ್ತಿದೆ" ಅಂತ ಪುನಃ ಒತ್ತಿ ಹೇಳಿದಳು. ಈ ಮಾತಿಗೆ ಸರ್ವರು ಬೆರಗಾದರು. "ನೋಡಿದಿರಾ, ರಾಮಾಚಾರ್ಯರೇ! ಇದು ರಾಯರ ಪ್ರಭಾವವೇ ಸರಿ. ಇನ್ನು ನೀವು ಎರಡನೇ ಯೋಚನೆ ಮಾಡತಕ್ಕದ್ದಲ್ಲ" ಅಂತ ರುಕ್ಕಮ್ಮ ಹೇಳುತ್ತಿರುವಾಗ ಬೊಜ್ಜಿ ಗುರುರಾಜಾಚಾರ್ಯರೂ ಗೋಪಾಳಾರ್ಥ ಒಳಗೆ ಬಂದರು. "ಅವರನ್ನು ಕುರಿತು ನಾವು ರಾಯರ ಸೇವಾರ್ಥ ನಿಮ್ಮಲ್ಲಿಗೆ ಬರುವವರಿದ್ದೇವೆ, ನಮಗಾಗಿ ಒಂದು ಖೋಲಿ ಕೊಡಿರಿ. ಆದರೆ ಈಗ ಸದ್ಯಕ್ಕೆ ಅಲ್ಲಿಗೆ ಬರಲು ಶಕ್ತಿ ಇಲ್ಲ. ಪ್ರಯುಕ್ತ ಮೂರು ದಿನಗಳು ರಾಯರ ಪಾದೋದಕ ತಂದುಕೊಡಿರಿ" ಅಂತ ರಾಮಾಚಾರ್ಯರನ್ನು ಕೇಳಿಕೊಂಡರು. "ರಾಯರ ಪಾದೋದಕ ತಂದುಕೊಡಲು ನನಗೆ ಅವಕಾಶವಾಗುವುದಿಲ್ಲ. ನೀವು ಯಾರಾದರೂ ಬಂದು ತೆಗೆದುಕೊಂಡು ಹೋಗಬಹುದು" ಅಂತ ಉತ್ತರ ಕೊಟ್ಟರು. "ಹಾಗಲ್ಲ ನಿಮ್ಮ ಹಸ್ತದಿಂದ ಪಾದೋದಕ ಕೊಡಿಸಬೇಕೆಂಬ ಅಪೇಕ್ಷೆಯಿಂದ ಈ ಮಾತು ಹೇಳುತ್ತೇವೆ. ನಿಮಗೆ ಯಾವಾಗ ಅವಕಾಶವಾಗುತ್ತದೋ ಆಗ ಪಾದೋದಕ ತಂದುಕೊಟ್ಟು ಹೋಗಬಹುದು" ಅಂತ ರಾಮಾಚಾರ್ಯರು ಸ್ವಲ್ಪ ದೀನವಾಣಿಯಿಂದ ಕೇಳಿಕೊಂಡರು. ಈ ಮಾತಿಗೆ ಅಲ್ಲಿದ್ದ ಖಾಸನವೀಸ ರುಕ್ಕಮ್ಮ ಅನುಮೋದನಪೂರ್ವಕ ಸಿಫಾರಸು ಮಾಡಿದಳು. "ಒಳ್ಳೇದು" ಅಂತ ಗುರುರಾಜಾಚಾರ್ಯರು ಒಪ್ಪಿಗೊಂಡು, ಮರುದಿನ ತಮ್ಮ ಭಾವಮೈದುನನ ಸಂಗಡ ಪಾದೋದಕವನ್ನು ಕಳಿಸಿಕೊಟ್ಟರು. ಇದರಿಂದ ಸಂತತ ಸಹನಾತೀತವಾದ ವೇದನೆಯು ಕಡಿಮೆಯಾಗಿ ಆ ಸ್ಥಲಕ್ಕೆ ಹೋಗಲು ಶಕ್ತಿಯೂ ಬಂದು, ಹೆಚ್ಚು ವಿಶ್ವಾಸ ಉಂಟಾಗಿ ಅಲ್ಲಿಗೆ ಹೋಗಿ ಸೇವಾಸಕ್ತರಾದರು. ಇದರಿಂದ ಬರುಬರುತ್ತ ವ್ಯಾಧಿಯು ಪರಿಹಾರವಾಗಿದ್ದಲ್ಲದೆ ಈ ರಾಮಾಚಾರ್ಯರಿಗೂ ಪೂರ್ವದಿಂದ ಇದ್ದ ಪೀಡೆಯು ಅಭಿವ್ಯಕ್ತವಾಗಿ, ಅದು ಕೂಡಾ ನಿವಾರಣವಾಯಿತು. ಈ ಮೂಲಕ ಅವರಿಗೆ ಅತ್ಯಂತ ವಿಶ್ವಾಸ ಉಂಟಾಗಿ ವರುಷಗಟ್ಟಲೆ ಅಲ್ಲಿ ವಾಸಮಾಡುವವರಾದರು. ತನ್ಮಧ್ಯೆ ಈ ಗುರುರಾಜಾಚಾರ್ಯರು ತಮ್ಮ ಗುರುಗಳ ಸಂದರ್ಶನಾರ್ಥ ಆಗಾಗ ಆದವಾನಿಗೆ ಬರುತ್ತಿರುವಾಗ ಈ ರಾಮಾಚಾರ್ಯರು ಸಹ

ಸಕುಟುಂಬರಾಗಿಯೂ ಒಬ್ಬೊಬ್ಬರಾಗಿಯೂ ಆಗಾಗ ಹಿಂಬಾಲಿಸುತ್ತಿದ್ದರು. ಹೀಗಿರುವಾಗ ಸ್ವಲ್ಪ ಕಾಲಾವಧಿಯಲ್ಲಿ ಆ ರಾಮಾಚಾರ್ಯ ದಂಪತಿಗಳ ವಿಪತ್ತು ಪರಿಹಾರವಾಯಿತು. ಇದಕ್ಕಾಗಿ 'ರಾಯರ ವೃಂದಾವನದ ಮೇಲೆ ಷೋಡಶ ಬಾಹು ನರಸಿಂಹ ದೇವರ ಶಿಲಾ ಪ್ರತಿಮಾವನ್ನು ಪ್ರತಿಷ್ಠಾಪನಾ ಮಾಡುವ ಸಲುವಾಗಿ ರಾಯರ ಆಜ್ಞಾ (ಸ್ವಪ್ನ ಮುಖೇನ) ಆಗಿದೆ' ಎಂದು ಅವರು ಹೇಳಿಕೊಂಡಿದ್ದಕ್ಕೆ ಅನುಮೋದನಾ ಕೊಟ್ಟರು. ಈ ಕಾಲಾವಧಿಯಲ್ಲಿ ಬೊಜ್ಜಿ ಗುರುರಾಜಾಚಾರ್ಯರಿಗೆ ತಮ್ಮ ಗುರುಗಳ ವಿಷಯದಲ್ಲಿ ಮನಸ್ಸು ಪಲ್ಲಟವಾಗಿತ್ತು. ಈ ರೀತಿ ಮನಸ್ಸು ಪಲ್ಲಟವಾಗುವುದಕ್ಕೆ ಈ ರಾಮಾಚಾರ್ಯರ ಸೇವಾ ಪ್ರಭಾವ ನಿಮಿತ್ತ ಉಂಟಾದ ಅಹಂಕಾರವೇ ಕಾರಣವಾಯಿತೆನ್ನಲಿಕ್ಕೆ ಅಡ್ಡಿಯಿಲ್ಲ. ಈ ರೀತಿ ಮನಸ್ಸು ಪಲ್ಲಟವಾದದ್ದು ಗುರುಗಳಿಗೆ (ಶ್ರೀ ರಘುಪ್ರೇಮತೀರ್ಥರಿಗೆ) ತಿಳಿದೇ ಇತ್ತು. ಈ ರಾಮಾಚಾರ್ಯರು ಷೋಡಶ ಬಾಹುನರಸಿಂಹ ಮೂರ್ತಿಯನ್ನು ಮಾಡಿಸಿ ತರಿಸಿಕೊಂಡರು. ಪ್ರತಿಷ್ಠಾಪನಾ ಮಾಡುವ ಸಲುವಾಗಿ ತಮ್ಮ ಗುರುಗಳನ್ನು (ಶ್ರೀ ರಘುಪ್ರೇಮತೀರ್ಥರನ್ನು) ಕರೆದುಬರುವ ಸಲುವಾಗಿ ಈ ಬೊಜ್ಜಿ ಗುರುರಾಜಾಚಾರ್ಯರು ಆದವಾನಿಗೆ ಬಂದರು. "ನಾವು ಬರೋಣದರಿಂದ ಆ ಪ್ರಾಂತದ ಜನರು ಬರುವದಕ್ಕೆ ಅನುಮಾನ ಹೊಂದುವರಾದ್ದರಿಂದ ಈ ಪ್ರತಿಷ್ಠಾಪನಾಕ್ಕೆ ನಾವು ಬರುವದಿಲ್ಲ. ನೀವೂ ಹಾಂಗೂ ಆ ಪ್ರಾಂತದ ಜನರೂ ಕೂಡಿ ಈ ಕಾರ್ಯ ನಿರ್ವಾಹ ಮಾಡಿಕೊಳ್ಳಿರಿ" ಅಂತ ಹೇಳಿದರು. ಈ ಮಾತಿಗೆ ಗುರುರಾಜಾಚಾರ್ಯನು ಸ್ತಬ್ಧನಾದನು. ಆ ದಿನ ಸುಮ್ಮನಿದ್ದು ಮರುದಿನ ಪ್ರತಿಷ್ಠಾಪನಾ ಸಲುವಾಗಿ ದಯಮಾಡಿ ಬರಬೇಕೆಂಬುದಾಗಿ ಬೇಡಿಕೊಂಡನು. "ಈ ವಿಷಯದಲ್ಲಿ ನಿನ್ನೆಯೇ ಉತ್ತರ ಹೇಳಿದ್ದೇವೆ. ಪುನಃ ಪ್ರಶ್ನಿಸೋಣ ಅನವಶ್ಯಕ. ಯಾಕೆಂದರೆ ನಮ್ಮಿಂದ ಪ್ರತಿಷ್ಠಾಪನಾ ಮಾಡಿದ್ದು ಪ್ರಯೋಜನಕಾರಿಯಾಗಲಾರದು. ಆದ್ದರಿಂದ ನಮ್ಮನ್ನಪೇಕ್ಷಿಸುವದು ಅನವಶ್ಯಕ" ಎಂದು ಗಂಭೀರವಾಣಿಯಿಂದ ನುಡಿದರು. "ಸ್ವಾಮಿ! ತಮ್ಮಿಂದಲೇ ಪ್ರತಿಷ್ಠಾಪನಾ ಮಾಡಿಸುವುದಾಗಿ ರಾಯರ ಆಜ್ಞಾ ನನಗೆ ಆಗಿದೆ. ಆದ್ದರಿಂದಲೇ ಬಂದಿದ್ದೇನೆ. ತಮ್ಮನ್ನು ಬಿಟ್ಟು ಹೋಗುವಂತಿಲ್ಲ" ವೆಂದು ಆಗ್ರಹಪೂರ್ವಕ ವಿಜ್ಞಾಪಿಸಿಗೊಂಡನು. "ನಿನಗೆ ರಾಯರ ಆಜ್ಞಾವಾದರೆ ನಾನೇನು ಮಾಡಲಿ? ಈಗ ನಾನು ಪ್ರತಿಷ್ಠಾಪನಾ ಮಾಡಲು ಅರ್ಹನಾಗಿಲ್ಲ. ಯಾಕೆಂದರೆ ಸನ್ಯಾಸ ಧರ್ಮಕ್ಕೆ ಅಯೋಗ್ಯವಾದ ಅರಿಷಡ್ವರ್ಗಗಳಿಂದ ನನ್ನ ಮನಸ್ಸು ಪೂರಿತವಾಗಿದೆ. ಈ ಅವಸ್ಥಾದಲ್ಲಿ ಪ್ರತಿಷ್ಠಾಪನಾ ಮಾಡಿದರೇ, ಆ ಪ್ರತಿಮಾದಲ್ಲಿ ಭಗವತ್ಸನ್ನಿಧಾನ ಉಂಟಾಗದೆ **"ಯೇ ಯಥಾಮಾಂ ಪ್ರಪದ್ಯಂತೇ ತಾನ್ ತಥೈವ ಭಜಾಮ್ಯಾಹಂ"** ಎಂಬ ಗೀತೋಕ್ತಿಯಂತೆ ಯಾರಿಂದ ಯಾವ ಭಾವದಿಂದ ಉಪಾಸನಾ ಮಾಡಲ್ಪಡುವದೋ ತದನುಗುಣ ಫಲಕ್ಕೆ ಕಾರಣವಾಗುವುದು; ಪ್ರಯುಕ್ತ ನಾವು ಬರುವುದಿಲ್ಲ. ನಮ್ಮನ್ನು ನಿರೀಕ್ಷಿಸುತ್ತಾ ಕೂಡಬೇಡ ಹೊರಟುಹೋಗು" ಎಂದು ಕೋಪಿಸಿಗೊಂಡರು. ಈ ಮಾತಿನಿಂದ ಖಿನ್ನನಾಗಿ, "ಹಿಂದಕ್ಕೆ ನನ್ನಿಂದ ಯಾವ ಅಪರಾಧವಾಗಿದ್ದರೂ ಕ್ಷಮಿಸಿ ಅನುಗ್ರಹ ಮಾಡಿ ಬಂದು ಪ್ರತಿಷ್ಠಾಪನಾ ಮಾಡಬೇಕೆಂದು" ನಮಸ್ಕಾರ ಮಾಡಿದನು. ಸಾಧುಗಳು ಕ್ಷಣ ಕೋಪ ಉಳ್ಳವರು ಮತ್ತು ಅವರು ಭಗವತ್ಸಂಕಲ್ಪಾನುವರ್ತಿಗಳು ಹಾಗೂ ಧರ್ಮಾಭಿಮುಖಿಗಳು

ಮತ್ತು ಈಶ ಕರ್ತೃತ್ವಾನು ಸಂಧಾನ ಉಳ್ಳವರು. ಆದ್ದರಿಂದ ಕ್ಷಮಿಸಿ ನಾರಾಯಣಪೇಟೆಗೆ ಪ್ರಯಾಣ ಮಾಡಿ, ಅಲ್ಲಿ ಶಾ|| ಶ|| ೧೮೪೫ನೇ ರುಧಿರೋದ್ಗಾರಿ ಸಂವತ್ಸರದ ಶ್ರಾವಣ ವದ್ಯಪಂಚಮೀ ಶುಕ್ರವಾರ (೩೧-೮-೧೯೨೩ ಇಸವಿ) ದಿನ ಷೋಡಶಬಾಹು ನರಸಿಂಹ ದೇವರ ಪ್ರತಿಮಾವನ್ನು ರಾಯರ ವೃಂದಾವನದ ಮೇಲ್ಭಾಗದಲ್ಲಿ ಸ್ಥಾಪಿಸಿದರು.

೧೩. ಆನಂದವನ ಮಂದಿರವಾಯಿತು.

ನಂತರ ಆನಂದವನ (ಜಠರಕ್ಕೆ) ಕ್ಕೆ ಹೋಗಿ ಪೂರ್ವದಲ್ಲಿ ಗೊತ್ತಾದಂತೆ ಬಾದರಾಯಣ ದೇವರ ಗುಡಿ ಕಟ್ಟಿಸುವ ಸಲುವಾಗಿ ಆನಂದರಾಯನನ್ನು ವಿಚಾರಿಸಲು "ಲೌಕಿಕ ಕಾರ್ಯಗಳ ಪ್ರತಿಬಂಧಕ ನಿಮಿತ್ತ ನಿಂತು ಕಟ್ಟಿಸುವ ಸಲುವಾಗಿ ನನಗೆ ಅವಕಾಶವಾಗದಂತಾಗಿದೆ, ಪ್ರಯುಕ್ತ ಬೊಜ್ಜಿ ಗುರುರಾಜಾಚಾರ್ಯರಿಗೆ ಇಲ್ಲಿ ಇದ್ದು ಕಟ್ಟಿಸುವ ಸಲುವಾಗಿ ತಾವು ಆಜ್ಞಾ ಮಾಡಬೇಕು, ನಾನು ಕೂಡಾ ಹೇಳುತ್ತೇನೆ" ಅಂತ ಆನಂದರಾಯನು ಹೇಳಿದನು. ಈ ಮಾತಿಗೆ ಅನುಸರಿಸಿ ಗುರುರಾಜಾಚಾರ್ಯರನ್ನು ಕರಿಸಿ ಗುಡಿ ಕಟ್ಟಿಸಲಾರಂಭವಾಯಿತು. ಈ ಕೆಲಸವು ತ್ವರೆಯಿಂದ ಸಮಾಧಾನಕರವಾಗಿ ನಡೆಯದೆ, ಬಹು ಮಂದಗತಿಯಿಂದ ನಡೆಯಹತ್ತಿತ್ತು ಮತ್ತು ಮಧ್ಯ-ಮಧ್ಯ ಕುಂಠಿತವೂ ಆಗಹತ್ತಿತು. ಇದರಿಂದ ಇವರಿಗೆ (ಶ್ರೀಗಳವರಿಗೆ) ಜಿಗುಪ್ಸೆ ಉಂಟಾಗಿ, "ಈ ರೀತಿ ವಿಲಂಬವಾಗುವುದಾದರೆ ತನ್ನಿಮಿತ್ತ ನಾವು ಕಾಲ ಅಪವ್ಯಯ ಮಾಡಿಕೊಳ್ಳಲಾರೆವು. ಪ್ರಯುಕ್ತ ಇಲ್ಲಿಂದ ಪ್ರಯಾಣ ಮಾಡುವೆವು. ಆದರೆ ಈ ವಿಚಾರ ಗ್ರಾಮಾಂತರ (ರಣವಾಟಲಕ್ಕೆ) ಆನಂದರಾಯಾನಿಗೆ ತಿಳಿಸದೆ ಹೋಗುವುದುಚಿತವಲ್ಲ. ಪ್ರಯುಕ್ತ ನೀನು ಆತನಲ್ಲಿ ಹೋಗಿ ಈ ವಿಚಾರವನ್ನು ತಿಳಿಸಿ ಇದಕ್ಕೆ ಆತನ ವಿಚಾರವನ್ನು ತಿಳಿದುಕೊಂಡು ಬಾ" ಅಂತ ಗುರುರಾಜಾಚಾರ್ಯರಿಗೆ ಆಜ್ಞಾಪಿಸಿದರು. ಕಲುಷಿತ ಮನಸ್ಕನಾದ ಈ ಗುರುರಾಜಾಚಾರ್ಯನು ರಣವಾಟಲಕ್ಕೆ ಹೋಗುವುದಕ್ಕಿಂತ ಮೊದಲೇ "ಸ್ವಾಮಿ! ನಾವು ಸಾಂಸಾರಿಕರು, ನಮಗೆ ಎಷ್ಟೋ ಅನಾನುಕೂಲತೆಗಳು ಇರುತ್ತವೆ. ತಮ್ಮ ಇಚ್ಛಾದಂತೆ ಅನುಕೂಲವಾಗುವುದು ಸಾಧ್ಯವಿಲ್ಲ. ಇದರ ಮೇಲೆ ತಮ್ಮ ಚಿತ್ತಕ್ಕೆ ಬಂದಂತೆ ಮಾಡಬಹುದು" ಎಂದು ಹೇಳಿದನು. "ಈ ವಿಷಯ ನಮಗೂ ತಿಳಿಯುತ್ತದೆ. ಈ ಕಾರ್ಯ ಮಾಡಿಯೇ ತೀರಬೇಕೆಂಬ ನಮ್ಮ ಆಗ್ರಹವಿಲ್ಲ. ಆನಂದರಾಯನೇ ತನ್ನ ಹಿರಿಯರ ಇಚ್ಛಾವನ್ನು ತಿಳಿಸಿ, ನಮ್ಮ ಅನುಮತಿಯನ್ನು ಕೇಳಿದ್ದಕ್ಕೆ ಧರ್ಮ ಪ್ರತಿಷ್ಠಾಪನಾಚಾರ್ಯರೆಂದೆನಿಸಿದ ನಾವು ಶ್ರೀ ಹರಿವಾಯುಗಳ ಸಂಕಲ್ಪವನ್ನು ಸಮೀಕ್ಷಿಸಿ ಈ ಕಾರ್ಯಕ್ಕೆ ಪ್ರಬೋಧತಾ ಕೊಟ್ಟೆವು. ಆ ಗೃಹಸ್ಥನಾದರೂ ಮನಃಪೂರ್ವಕ ಸಮ್ಮತಪಟ್ಟಂತೆ ಕಂಡುಬಂತು. ಆದ್ದರಿಂದ, ಇಲ್ಲಿಯ ವಿಷಯ ಆತನಿಗೆ ತಿಳಿಸಿ ಪ್ರಯಾಣಮಾಡುವುದು ಯೋಗ್ಯವೆಂದು ನಿನಗೆ ತಿಳಿಸಿದ್ದೇವೆ, ನೀನು ಹೋಗಿ ಬಾ" ಅಂತ ಅಂದರು. "ಸ್ವಾಮಿ! ನನಗಾದರೂ ಧರ್ಮ ಮಾಡಬೇಕೆಂಬ ಆಸಕ್ತಿ ಇದ್ದರೂ ಅನೇಕ ತೊಂದರೆಗಳ ಮೂಲಕವಾಗುವುದಿಲ್ಲ. ಆದಾಗ್ಯೂ ಲೌಕಿಕ ಮರ್ಯಾದೆ ನಿಮಿತ್ತ ಸಂಕೋಚ. ವಿಷಯ ಬಹಿರಂಗ ಪಡಿಸಲಾಗಲಿಲ್ಲವಾದ್ದರಿಂದ ಆ ಇಂಗಿತವನ್ನು ತಾವುಗಳೇ ತಿಳಿದುಕೊಂಡು ಅದರಂತೆ ನಡೆಯುವುದೇ ಒಳ್ಳೆಯದು" ಅಂತ ಉತ್ತರ ಕೊಟ್ಟನು. 'ಏನೇ ಇರಲಿ, ನೀನು ಹೋಗಿ

ಬಾ' ಅಂತ ರಣವಾಟಲಕ್ಕೆ ಜುಲುಮೆಯಿಂದ ಕಳುಹಿಸಿದರು. ಈ ವಿಚಾರವನ್ನು ಕೇಳಿ ಆನಂದರಾಯನು ಬಂದನು. "ಸ್ವಾಮಿ! ನಾನು ಇಲ್ಲಿ ನಿಂತುಕೊಂಡು ಕಟ್ಟಿಸಲಾಗದೇ ಇದ್ದುದರಿಂದ ಈ ಗುರಣ್ಣ (ಗುರುರಾಜಾಚಾರ್ಯ) ನನ್ನು ಕರೆಸಿದ್ದು. ಆತನು ಯಾವ ರೀತಿ ಒದಗಿಸಿಕೊಟ್ಟರೆ, ನಾನು ಆ ರೀತಿ ಕಟ್ಟಿಸುವೆನು". "ನಾನಾಗಿಯೇ ಹೆಚ್ಚು ಕೂಲಿಯವರನ್ನು ಕರೆದುಕೊಂಡು ಬಂದು ಕೆಲಸ ಮಾಡಿಸಹತ್ತಿದರೆ ನಿನಗೆ ತೊಂದರೆಯಾದೀತೆಂದು ತಿಳಿದು ಈ ರೀತಿ ಮಂದಗತಿಯಿಂದ ಮಾಡಿಸುತ್ತಲಿದ್ದೇನೆ" ಅಂತ ಗುರುರಾಜಾಚಾರ್ಯನು ಅಂದನು. "ದ್ರವ್ಯದ ದಸೆಯಿಂದ ನೀನು ಆಲೋಚನೆ ಮಾಡುವ ಕಾರಣವಿಲ್ಲ. ಕಾಲಕಾಲಕ್ಕೆ ಬೇಕಾಗುವ ದ್ರವ್ಯವನ್ನು ಒದಗಿಸುವಲೋಸುಗ ನನ್ನ ತಮ್ಮನಾದ 'ನಾರಾಯಣನಿಗೆ' ಹೇಳಿ ಮತ್ತೆ ಬೇಕಾದರೆ ಒಬ್ಬ ಸಾಹುಕಾರನಿಗೂ ಹೇಳುತ್ತೇನೆ" ಎಂದು ಆನಂದರಾಯನು ಅಂದನು. ಈ ಉಭಯರವಾದ ಪ್ರತಿವಾದವನ್ನು ಕೇಳಿ "ಇಷ್ಟೇಕೆ, ನೀವು ವಾದ ಮಾಡುವಿರಿ. ನಿಮಗೆ ಅನುಕೂಲವಾದ ರೀತಿಯಲ್ಲಿ ಗುಡಿಯನ್ನು ಕಟ್ಟಿಸಿ ಪ್ರತಿಮಾವನ್ನು ಸಿದ್ಧಮಾಡಿ ಪ್ರತಿಷ್ಠಾಪನೆ ಸಲುವಾಗಿ ಕರೆಯಬಂದರೆ ಆಗ ಬಂದು ಪ್ರತಿಷ್ಠಾಪನೆ ಮಾಡಿ ಹೋಗುವೆವು" ಅಂತ ಹೇಳಿದರು. "ಈ ಗುಡಿಯನ್ನು ಕಟ್ಟಿಸುವ ಕಾರ್ಯವನ್ನು ತಾವು ಇದ್ದು ನೆರವೇರಿಸದಿದ್ದರೆ, ಈ ಕಾರ್ಯವು ಇಷ್ಟಕ್ಕೆ ನಿಂತುಹೋಗುವದು. ಪ್ರಯುಕ್ತ ತಾವೇ ಅಮಿತ ವಿಕ್ರಮರಾಯನನ್ನು ಕರೆಸಿ ಪ್ರತಿಮಾ ತಯಾರುಮಾಡಿಸಲು ಹೇಳಿ, ಅಷ್ಟರಲ್ಲಿಯೇ ಗುಡಿ ಕಟ್ಟಿಸಿ ಪ್ರತಿಷ್ಠಾಪನಾ ಮಾಡಿಸಿಯೇ ಪ್ರಯಾಣ ಮಾಡಬೇಕು, ಹಾಗೆ ಹೋಗಕೂಡದು" ಅಂತ ಆನಂದರಾಯನು ಮನಃಪೂರ್ವಕ ಬೇಡಿದನು. ಇದಕ್ಕೆ ಗುರುರಾಜಾಚಾರ್ಯನು ಯಾವುದನ್ನು ಮಾತನಾಡದೆ ಸುಮ್ಮನಿದ್ದನು. ಆ ಕೂಡಲೇ ಬರಲೋಸುಗ ಅಮಿತ ವಿಕ್ರಮರಾಯನಿಗೆ ಪತ್ರಬರೆದು ತ್ವರಿತಗತಿಯಿಂದ ಗುಡಿಕಟ್ಟಿಸುವ ಕೆಲಸ ನಡೆಸಿದರು. ಅಮಿತ ವಿಕ್ರಮರಾಯನು ಒಂದು ವಾರದಲ್ಲಿ ಬಂದು ಪ್ರತಿಮಾಕ್ಕೆ ಸಂಚಕಾರ *(Advance)* ತೆಗೆದುಕೊಂಡು ಹೋದನು. ಇಷ್ಟೆಲ್ಲವನ್ನು ವ್ಯವಸ್ಥೆಮಾಡಿ ಆನಂದರಾಯನು ಗುರುರಾಜಾಚಾರ್ಯರ ಕಡೆ ಮುಂದಿನ ಕಾರ್ಯ ಭಾಗವನ್ನು ಒಪ್ಪಿಸಿ ರಣವಾಟಲಕ್ಕೆ ಹೋದನು. ಈ ಗುರುರಾಜಾಚಾರ್ಯರು ಕೆಲವು ದಿವಸ ಸರಿಯಾಗಿ ಕೆಲಸ ಮಾಡಿಸುತ್ತ "ನಾನು ಊರು ಬಿಟ್ಟು ಬಂದು ಬಹು ದಿನಗಳಾದವು. ಸ್ವಗ್ರಾಮಕ್ಕೆ ಹೋಗಿ ನಾಲ್ಕಾರು ದಿನಗಳಲ್ಲಿ ಬರುತ್ತೇನೆ" ಅಂತ ಹೇಳಿಕೊಂಡು ನಾರಾಯಣ ಪೇಟೆಗೆ ಹೋದನು. ಹದಿನೈದು ದಿನಗಳಾದರೂ ಬರಲಿಲ್ಲ. ಬರಲು ಹೇಳಿಕಳಿಸಿದರೂ ಬರಲಿಲ್ಲ. ನಂತರ ಆನಂದರಾಯನಿಗೆ ಹೇಳಿಕಳಿಸಲಾಯಿತು. ಆತನೂ ಬರಲಿಲ್ಲವಾದ್ದರಿಂದ ಈ ಕೆಲಸವನ್ನು ತಾವೇ (ಶ್ರೀ ಶ್ರೀಗಳವರೇ) ಕೈಕೊಂಡು ನೆರವೇರಿಸಬೇಕೆಂದು ಸಂಕಲ್ಪಿಸಿ, ಇಡ್ಲೂರು, ಬಿಜಾಪುರಕ್ಕೆ ಬಂದು, ಈ ಗರ್ಭಗುಡಿಗೆ ಬೇಕಾಗುವಷ್ಟು ತಗಡ *(Zink sheets)* ಗಳನ್ನು, ಇದಕ್ಕೆ ತಕ್ಕಷ್ಟು ಕಟ್ಟಿಗೆ *(Timber)* ಯನ್ನು ಸಂಗ್ರಹಿಸಿಕೊಂಡು ಹೋಗಿ ಸ್ಥಗಿತವಾಗಿದ್ದ ಗುಡಿಯನ್ನು ಮುಗಿಸಿದರು. ಅಷ್ಟರಲ್ಲಿ ಪ್ರತಿಮಾ ಸಿದ್ಧವಾಗಿದೆ. ಅವಸಿಷ್ಟ ದ್ರವ್ಯ ಹಾಗೂ ಮಾರ್ಗದ ಖರ್ಚು ಕಳಿಸಿದರೆ ತರುತ್ತೇನೆಂದು ಅಮಿತ ವಿಕ್ರಮರಾಯನಿಂದ ಪತ್ರ ಬಂತು. ಆ ಪತ್ರವನ್ನು ರಣವಾಟಲಕ್ಕೆ

ಕಳುಹಿಸಿದರು. ಕೂಡಲೇ ಆನಂದರಾಯನು ಬಂದು ಅಮಿತ ವಿಕ್ರಮರಾಯನಿಗೆ ದ್ರವ್ಯವನ್ನು ಕಳುಹಿಸಿದನು. ಪ್ರತಿಮೆಯೂ ಬಂತು. ಶಾ. ಶಕೆ ೧೮೪೭ನೇ 'ಕ್ರೋಧನ' ಸಂ. ಫಾಲ್ಗುಣ ಶುಕ್ಲ ತೃತೀಯ ಸೋಮವಾರ (15-2-1926) ಶ್ರೀ ಬದರೀನಾರಾಯಣ ಹಾಗೂ ಶ್ರೀ ಮದಾನಂದ ತೀರ್ಥರಪ್ರತಿಮಾ ಮತ್ತು ಟೀಕಾರಾಯರ, ವ್ಯಾಸರಾಯರ ಮತ್ತು ವಾದಿರಾಜರ ವೃಂದಾವನಗಳ ಪ್ರತಿಷ್ಠಾಪನಾ ಮಾಡಿದರು.

೧೪. ಹೃಷಿಕೇಶದಲ್ಲಿ ಅನ್ನದಾನಕ್ಕೆ ಆಜ್ಞೆ

ನಂತರ, ಈ ಗುರುರಾಜಾಚಾರ್ಯರನ್ನು ಕರೆದು, ನೀನು ಆ ಬದರಿಕಾಶ್ರಮಕ್ಷೇತ್ರಕ್ಕೆ ಹೋಗಿ ಬರತಕ್ಕವರ ಮಾರ್ಗಾಯಾಸ ಪರಿಹಾರಗೋಸ್ಕರ ಶ್ರೀ ಹೃಷಿಕೇಶ ಕ್ಷೇತ್ರದಲ್ಲಿ ಆರು ತಿಂಗಳಕಾಲ ಅನ್ನದಾನ ಮಾಡಿ ಬಾ, ಆ ನಿಮಿತ್ತ ನಿನ್ನ ಪರಿಚಿತ ಸ್ಥಳಗಳಲ್ಲಿ ಯಾಚನೆ ಮಾಡಿಕೊಂಡು ಬಾ. ಕಡಿಮೆ ಬೀಳುವ ದ್ರವ್ಯವನ್ನು ನಾವು ವ್ಯವಸ್ಥೆ ಮಾಡುತ್ತೇವೆ, ಅಂತ ಆಜ್ಞೆ ಮಾಡಿದರು. ಇದು ಆತನಗೆ ಸಮ್ಮತವಾಗದಿದ್ದರೂ ಅನಿವಾರ್ಯದಿಂದ 'ಒಳ್ಳೇದು' ಅಂದನು. ಇದಕ್ಕಾಗಿ ಮುಂತನಗೋಡ ಗೋಪಾಲರಾಯನೆಂಬುವನನ್ನು ಈ ಗುರುರಾಜಾಚಾರ್ಯರ ಸಂಚಾರಕ್ಕೆ ಸಹಾಯಕನನ್ನಾಗಿ ಯೋಜನಾ ಮಾಡಿದರು. ಆ ಉಭಯರು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಒಂದು ವಾರ ಸಂಚಾರ ಮಾಡಿಕೊಂಡು ಸ್ವಗ್ರಾಮಕ್ಕೆ (ನಾರಾಯಣಪೇಟೆಗೆ) ತಿರುಗಿ ಬಂದರು. ಈ ಕ್ರಮ ಸಂಚಾರದಿಂದ ವಿಶೇಷ ಪ್ರಯೋಜನವಾಗದಂತಾಯಿತು. ಅಗ್ನಿಹೋತ್ರ ನಿಮಿತ್ತ ಪ್ರತಿ ದ್ವಾದಶೀ ಸಮಯಕ್ಕೆ ಊರಿಗೆ ಬಂದು ತೃತೀಯಾ, ಚತುರ್ಥೀ ಊರು ಬಿಡಬೇಕಾಗಿ ಬರುತ್ತದೆ. ಇದರಿಂದ ಸಂಚಾರ ಸರಿಯಾಗಿ ಆಗುವದಿಲ್ಲವಾದ್ದರಿಂದ ಆರು ತಿಂಗಳು ಹೃಷಿಕೇಶ ಕ್ಷೇತ್ರದಲ್ಲಿ ಅನ್ನಛತ್ರ ನಡೆಸುವದು ಅಸಾಧ್ಯವೆಂದು ವಿಜ್ಞಾಪನೆ ಮಾಡಿಕೊಂಡನು. "ಒಂದು ಮಹತ್ತರವಾದ ಧರ್ಮವನ್ನು ಮಾಡುವ ನಿಮಿತ್ತ ಮತ್ತೊಂದು ಧರ್ಮವನ್ನು ಉಪಕ್ರಮಿಸಿದರೂ ಬಾಧಕವಿಲ್ಲ. ಪ್ರಯುಕ್ತ ಈ ಕಾರ್ಯ ಆಗುವವರಿಗೂ ಅಗ್ನಿಹೋತ್ರವನ್ನು ಸಂಕ್ಷೇಪ ಮಾಡು, ಅನಂತರ ಪುನರಾಧಾನ ಮಾಡಿದರೆ ಬರುತ್ತದೆ" ಅಂತ ಹೇಳಿದರು. ಅಗ್ನಿಹೋತ್ರ ನೆಪ ಹೇಳಿದರೆ ಈ ಕೆಲಸ ತಪ್ಪುವದೇನೋ ಎಂದೆಣಿಸಿ ಹೇಳಿಕೊಂಡದ್ದಕ್ಕೆ ಪ್ರತ್ಯುತ ಅಗ್ನಿಹೋತ್ರ ಸಂಕ್ಷೇಪ ಮಾಡುವಂತೆ ಆಜ್ಞೆ ಮಾಡಲಾಯಿತು. ಈ ವಿಚಾರ ಗುರುರಾಜಾಚಾರ್ಯನಿಗೆ ಸರಿಬೀಳಲಿಲ್ಲ. ಇದನ್ನು ಅರಿತು ಸ್ವಲ್ಪ ದಿನಗಳಾದ ನಂತರ "ಈ ಸ್ಥಲ (ಆನಂದವನ)ದಲ್ಲಿ ಚಾತುರ್ಮಾಸ್ಯೇಷ್ಟಿ, (ಯಜ್ಞಯಾಗ ವಿಶೇಷವನ್ನು) ಮಾಡುವ ಇಚ್ಛಾ ಇದೆ. ಆದ್ದರಿಂದ ಅಗ್ನಿಹೋತ್ರ ಸಹಿತ ಬಾ," ಅಂತ ಆಜ್ಞೆ ಮಾಡಿದರು. "ತಥಾಸ್ತು" ಅಂದು ಅಗ್ನಿಹೋತ್ರ ಸಮೇತ ಬಂದನು. ಚಾತುರ್ಮಾಸ್ಯೇಷ್ಟಿ ಮಾಡಿಸಿ "ಹೃಷಿಕೇಶದಲ್ಲಿ ನಾವು ಹೇಳಿದ ಪ್ರಕಾರ ಅನ್ನದಾನ ಮಾಡಿ ಬರುವವರಿಗೂ ಅಗ್ನಿಹೋತ್ರವನ್ನು ಉಪಕ್ರಮಿಸು" ಎಂದು ಅರಣಿಯನ್ನು ಗುಡಿಯಲ್ಲಿ ತೆಗೆದಿಟ್ಟರು. ಈ ರೀತಿ ಮಾಡೋಣದರಿಂದ ಈ ಗುರುರಾಜಾಚಾರ್ಯನಿಗೆ ವಿಶೇಷ ಸಿಟ್ಟು ಬಂದು ಜಠರಕ್ಕೆ ಹೋದನು. ಇದೇ ಸಂದರ್ಭದಲ್ಲಿ

ಕೋಟಿಂಕೊಂಡ ವಾಸಿಗಳಾದ ಆ ಪ್ರಾಂತದ ಉತ್ತರಾದಿ ಮಠದ ಸರ್ ಸುಭೇದಾರರಾದ ಜೋಯಿಸ ಹನುಮಂತಾಚಾರ್ಯರು ತಮ್ಮ ಮಗಳಾದ ಭೀಮಾರತಿ ಎಂಬ ಕನ್ಯಾವನ್ನು ಆನಂದರಾಯನ ದೊಡ್ಡ ಮಗನಾದ ರಾಘವೇಂದ್ರನಿಗೆ ಕೊಟ್ಟು ಲಗ್ನ ಮಾಡುವ ವಿಚಾರದಿಂದ ಬಿಜಾಪುರಲ್ಲಿದ್ದ ಆನಂದರಾಯನ ಕಕ್ಕನಾದ ಲಕ್ಷ್ಮಣರಾಯನಲ್ಲಿ, ಆನಂದರಾಯ ಹಾಗೂ ಗುರುರಾಜಾಚಾರ್ಯ, ಗಾರ್ಲಪಾಡ ಕೃಷ್ಣಚಾರ್ಯರ ಸಹಿತ ಬಿಜಾಪುರದಲ್ಲಿ ಶ್ರೀಗಳವರ ಸಮ್ಮುಖದಲ್ಲಿ ವಿವಾಹದ ಮಾತುಗಳಾಡಿದರು. ಆ ವಿಷಯದಲ್ಲಿ ವೈಮನಸ್ಸಿನಿಂದ ಮುತ್ತಿಗಿಸ್ವಾಮಿರಾಯಾಚಾರ್ಯರನ್ನು ಲಗ್ನಕ್ಕೆ ಆಹ್ವಾನಿಸದೆ ಜಠರದಲ್ಲಿ ಶ್ರೀಗಳವರ ನೇತೃತ್ವದಲ್ಲಿ ವಿವಾಹವನ್ನು ನೆರವೇರಿಸಿದರು. ಆದರೆ ಶ್ರೀಗಳವರಾಗಲಿ, ಸ್ವಾಮಿ ರಾಯಾಚಾರ್ಯರಾಗಲಿ ಅದಕ್ಕೆ ಹೆಚ್ಚು ಮಹತ್ವ ಕೊಡದೆ ಸರ್ವರೂ ಆನಂದವನದಿಂದ ಇಡ್ಲೂರು, ರಾಯಚೂರು ಮಾರ್ಗವಾಗಿ ಆದವಾನಿಗೆ ಬಂದು ಸೇರಿದರು.

೧೫. ಶ್ರೀವಿಷ್ಣುತೀರ್ಥರಂತೆ ವಿರಕ್ತರಾಗುವ ಇಚ್ಛೆ, (ನ ವಾ ಮಾತಾಪತ್ಯೇ...) ಭೂಸುರರು ಬಾಷ್ಪಭಾವಭೂಷಿತರಾದರು

ಶ್ರೀಮದಾರ್ಯಅಕ್ಷೋಭ್ಯ ಮಠಾಧೀಶರಾದ ಶ್ರೀ ಶ್ರೀ ರಘುಕಾಂತತೀರ್ಥರು (ಕೋಡಂಗಲ್ ಸ್ವಾಮಿಗಳು) ಶ್ರೀಕ್ಷೇತ್ರ ಮಳಖೇಡದಲ್ಲಿ ವೃಂದಾವಸ್ಥರಾದ ನಂತರ ಶ್ರೀ ರಘುದಾಂತ ತೀರ್ಥರು (ಟಂಕಸಾಲಿ ಸ್ವಾಮಿಗಳು) ಶಿವಮೊಗ್ಗಾ ಸಮೀಪ ತಮ್ಮ ಮಠದ ಜಹಗೀರ, ಗ್ರಾಮ ಭೂಮಿಗಳ ಆದಾಯ, ವ್ಯಯಗಳ ಸರಿಪಡಿಸಲೋಸುಗ ಅಲ್ಲಿಗೆ ಹೋಗಿ ನೋಡಿ ಪರಿಸ್ಥಿತಿಯನ್ನು ಸುಧಾರಿಸಲು ಶಿವಮೊಗ್ಗಾಕ್ಕೆ ಪ್ರಯಾಣೋನ್ಮುಖರಾದರು. ಈ ಸಮಯದಲ್ಲಿ ಉತ್ತರಾದಿಮಠಾಧೀಶರಾದ ಶ್ರೀ ಸತ್ಯಧ್ಯಾನ ತೀರ್ಥರು ಧಾರವಾಡದಲ್ಲಿದ್ದರು. ಅಲ್ಲಿಯ ಗೃಹಸ್ಥರು ಬಲವಂತರಾವ್ ಫೋತದಾರ, ಸಬ್‌ಜಡ್ಜ್ ಅಣ್ಣಾಚಾರ್ಯ, ಕಟ್ಟಿ ವಕೀಲ ಗೋವಿಂದರಾವ್, ಮೇಲಗಿರಿ ಕುಲಕರ್ಣಿ ಮೊದಲಾದವರು ಅವರ (ಶ್ರೀ ಸತ್ಯಧ್ಯಾನತೀರ್ಥರ) ಇವರ (ಶ್ರೀ ರಘುಪ್ರೇಮತೀರ್ಥರ) ಮಧ್ಯ ಇರುವ ವೈಮನಸ್ಸನ್ನು ತೊಲಗಿಸುವ ಪ್ರಯತ್ನ ಮಾಡಿ ಶ್ರೀ ಸತ್ಯಧ್ಯಾನತೀರ್ಥರಿಂದ ಆಶ್ವಾಸನಾ ಹೊಂದಿ ಅಣ್ಣಾಚಾರ್ಯ ಕಟ್ಟಿ ಮತ್ತು ಮಂಗಳವೇಢೆ ಗೋವಿಂದರಾಯರು ಮೋಟಾರ ತೆಗೆದುಕೊಂಡು ಕರೆಯಬಂದರು. ಈ ಮೊದಲೇ ಶಿವಮೊಗ್ಗಾಕ್ಕೆ ಪ್ರಯಾಣ ಮಾಡುವ ವಿಚಾರವಿದ್ದುದರಿಂದ ಧಾರವಾಡ ಮಾರ್ಗವಾಗಿಯೇ ಹೋದರಾಯಿತೆಂದು ಪ್ರಯಾಣ ಮಾಡಿದರು. ಧಾರವಾಡದಲ್ಲಿ ಕಟ್ಟಿ ಅಣ್ಣಾಚಾರ್ಯರು ತಮ್ಮ ಪಾಂಡುರಂಗ ದೇವಾಲಯದಲ್ಲಿಳಿಸಿಕೊಂಡು, ಮರುದಿವಸ ಈ ಉಭಯ ಯತಿಗಳ ಸಮಾಗಮ ಮಾಡಿಸಿದರು. ಕೆಲವು ಕುಹಕ ಪ್ರಿಯರು ಇದಾಗಬಾರದೆಂದು ಬಗೆದರು. ಇವರ ವಿಷಯಕ ಇದ್ದ ವೈಷಮ್ಯವನ್ನು ಕಿಂಚಿತ್ತಾದರೂ ತೋರಪಡಿಸದೆ ಸ್ನೇಹ (friends ship)) ಭಾವವನ್ನೇ ವ್ಯಕ್ತಪಡಿಸಿ , ಶ್ರೀ ಅಕ್ಷೋಭ್ಯತೀರ್ಥ ಮಠಾಧೀಶರಿಗೆ ಉತ್ತರಾದಿ ಮಠಾಧೀಶರು ಮರ್ಯಾದೆಗಳನ್ನು ಮಾಡಿದರು. ನಂತರ ಶಿವಮೊಗ್ಗಾಕ್ಕೆ ಹೋಗಿ ಶ್ರೀ ರಘುದಾಂತ ತೀರ್ಥರೊಂದಿಗೆ ಇರಹತ್ತಿದರು. ಏತನ್ಮಧ್ಯೆ ಈ ಚರಿತ್ರ ನಾಯಕರಾದ ಶ್ರೀ ರಘುಪ್ರೇಮ

ತೀರ್ಥರಿಗೆ ಮಠದ ಆಧಿಪತ್ಯದಲ್ಲಿ ಇಷ್ಟವಿಲ್ಲದಾಗಿ ತಮ್ಮ ಗುರುಗಳಲ್ಲಿ ಈ ರೀತಿಯಾಗಿ ವಿಜ್ಞಾಪನೆ ಮಾಡಿಕೊಂಡರು. **"ನಮಗೆ ಮಾದನೂರಿನ ಶ್ರೀ ವಿಷ್ಣುತೀರ್ಥರಂತೆ ವಿರಕ್ತರಾಗಿ ಪಾರಮಾರ್ಥಿಕ ಸಾಧನೆಯನ್ನು ನಿರಂತರವಾಗಿ ಮಾಡಿಕೊಂಡಿರುವ ಪ್ರಬಲ ಇಚ್ಛೆ ಉಂಟಾಗಿದೆ. ಕಾರಣ ತಾವು ಈ ಮಠದ ಉತ್ತರಾಧಿಕಾರವನ್ನು ಇನ್ನೊಬ್ಬರಿಗೆ ವಹಿಸಿಕೊಟ್ಟು ನಮ್ಮನ್ನು ಮುಕ್ತರನ್ನಾಗಿ ಮಾಡಬೇಕು"** ಎಂದು ಹೇಳಿದರು. ನಂತರ ಗುರುಗಳಲ್ಲಿ ಅಪ್ಪಣೆ ಪಡೆದು 'ಹೊನ್ನಾಳಿ' ಎಂಬ ಗ್ರಾಮಕ್ಕೆ ಬಂದರು. ಅಲ್ಲಿಯ ಮಹಾಜನಗಳು ಇವರನ್ನು ತುಂಗಭದ್ರಾ ತೀರದ ಶ್ರೀ ರಾಘವೇಂದ್ರ ತೀರ್ಥರ ವೃಂದಾವನ ಸನ್ನಿಧಾನಕ್ಕೆ ಕರೆದೊಯ್ದು ರಾಯರ ಮಠದಲ್ಲಿ ಚಾತುರ್ಮಾಸ್ಯ ಸಂಕಲ್ಪ ನೆರವೇರಿಸಿಕೊಳ್ಳಲು ಪ್ರಾರ್ಥನೆ ಮಾಡಿಕೊಂಡರು. "ತಥಾಸ್ತು" ಅಂದು, ಅಲ್ಲಿ ಚಾತುರ್ಮಾಸ್ಯ ದೀಕ್ಷಾ ಸಂಕಲ್ಪ ಮಾಡಿದರು. ಈ ಮಧ್ಯ ರಾಯರ ಆರಾಧನೆ ಉತ್ಸವದಲ್ಲಿ ಅಲ್ಲಿಯ ಕೆಲವು ಗೃಹಸ್ಥರು ವಿದ್ವತ್ಸಭೆಯನ್ನು ಏರ್ಪಾಡು ಮಾಡಿದರು. ಈ ಸಭೆಗೆ ಇವರನ್ನು (ಈ ಚರಿತ್ರ ನಾಯಕರನ್ನು) ಅಧ್ಯಕ್ಷರನ್ನಾಗಿ ನೇಮಿಸಿದರು. ಪ್ರಥಮದಲ್ಲಿ ಕಾರ್ಯದರ್ಶಿಯು ಸಮಯೋಚಿತ ಭಾಷಣವನ್ನು ಸ್ವಲ್ಪ ಕಾಲದಲ್ಲಿ ಮುಗಿಸಿದ ಮೇಲೆ ಅಧ್ಯಕ್ಷೀಯ ಭಾಷಣ ಮಾಡಲಾರಂಭಿಸಿದರು. ಆಗ ಅಲ್ಲಿ ನೆರೆದಿದ್ದ ವಿದ್ವಾಂಸರುಗಳನ್ನು ಕುರಿತಾಗಿ ಹೇಳಿದ್ದೇನೆಂದರೆ "ಈ ಸಭ್ಯ ಗೃಹಸ್ಥರು ನಮ್ಮ ವಿದಗ್ಧತೆಯನ್ನು ಪರೀಕ್ಷಿಸಿ, ತಕ್ಕ ಸಂಭಾವನೆ ಕೊಟ್ಟು ತೃಪ್ತಿಪಡಿಸುವದಕ್ಕಾಗಿ ಈ ಸಭೆಯನ್ನು ಏರ್ಪಾಟು ಮಾಡಿಲ್ಲ. ನಮ್ಮ ಮಧ್ವಮತದ ರಹಸ್ಯವನ್ನು ಮತ್ತು ಮಧ್ವರು ಅವತಾರಮಾಡಿದ ಉದ್ದೇಶವನ್ನು ಸ್ವಲ್ಪಮಟ್ಟಿಗಾದರೂ ತಿಳಿದುಕೊಳ್ಳುವ ಕುತೂಹಲದಿಂದ ಈ ಸಭೆಯನ್ನು ನೆರವೇರಿಸಿದ್ದಾರೆ. ನಾವುಗಳು ದ್ವೈತ (ಮಧ್ವ) ಮತ ಗ್ರಂಥಸ್ಥ ವಿಷಯವನ್ನು ಕನ್ನಡ ಭಾಷೆಯಿಂದ ತಿಳಿಹೇಳಿದರೆ ಅವರುಗಳ ಮನಸ್ಸಿನ ಇಚ್ಛೆ ನೆರವೇರಿಸಿದಂತಾಗುತ್ತದೆ. ಮತ್ತು ನಮ್ಮ ಮಧ್ವಮತವನ್ನು ಪ್ರಚಾರಗೊಳಿಸಿ ಶ್ರೀ ಮದಾಚಾರ್ಯರ ಅವತಾರ ಪ್ರಯೋಜನ ಕಾರ್ಯದಲ್ಲಿ ಭಾಗ ತೆಗೆದುಕೊಂಡಂತೆ ಆಗುತ್ತದೆ" ಅಂತ ಹೇಳುತ್ತ ಶ್ರೀ ಬ್ರಹ್ಮಸೂತ್ರ ಭಾಷ್ಯದ ನಾಲ್ಕು ಅಧ್ಯಾಯದ ಪ್ರಮೇಯವನ್ನು ಕನ್ನಡ ಭಾಷೆಯಿಂದ ಪ್ರತಿಪಾದನಾ ಮಾಡಿ ಶ್ರೀ ಮದಾಚಾರ್ಯರ ಅವತಾರ ಪ್ರಯೋಜನ ವಿಷಯವನ್ನು ವಿಸ್ತಾರವಾಗಿ ಎಲ್ಲರಿಗೂ ಅರ್ಥವಾಗುವಂತೆ ಹೇಳತೊಡಗಿದರು. ಇದು ಆದಕೂಡಲೇ ಆ ಸ್ಥಳವನ್ನು ಬಿಟ್ಟು ಪ್ರಯಾಣ ಮಾಡಬಹುದಾಗಿತ್ತು. ಆದರೆ ಹಾಗೆಯೇ ಮುಂದುವರೆಸಿ, "ಅವರು (ಮಧ್ವರು) ಉದ್ಧಾರ ಮಾಡಿದ ದ್ವೈತಮತವು ಚಿರಸ್ಥಾಯಿಯಾಗಿರಬೇಕೆಂದು ಮಠಗಳನ್ನು ನಿರ್ಮಾಣಮಾಡಿ, ಮಠಾಧಿಪತಿಗಳು ಯಾವರೀತಿ ವರ್ತಿಸಬೇಕೆಂದು ಸಂದೇಶವಿತ್ತದ್ದು, ಜನ (ಶಿಷ್ಯ) ಸಮೂಹಕ್ಕೆ ತಿಳಿದಿಲ್ಲ. ಇದರಲ್ಲಿ ಕೆಲವರಿಗೆ ಗೊತ್ತಿದ್ದರೂ ಮಠದ ಪ್ರತಿಬಂಧಕಾಜ್ಞಾ ಪದ್ಧತಿಯ ಹೆದರಿಕೆಯ ಮೂಲಕ ಅದನ್ನು ಹಲವರಿಗೆ ತಿಳಿಸಲು ಧೈರ್ಯವಿಲ್ಲದೆ ಮತ್ತು ಕೆಲವರಿಗೆ ಮಠಗಳಿಂದಲೇ ಉದರಂಭರಣವಾಗುವುದರಿಂದ ತಮ್ಮ ಹೊಟ್ಟೆಯ ಮೇಲೆ ಕಲ್ಲು ಬೀಳುವುದೆಂದು ಯಥಾರ್ಥ ವಿಷಯ ಪ್ರತಿಪಾದನಾಕಾರ್ಯಕ್ಕೆ ಕೈ ಹಾಕಲಿಲ್ಲ. ಅಂತೂ ಇಂತೂ ಶ್ರೀ ಮದಾಚಾರ್ಯರ ಮಠಗಳ ನಿರ್ಮಾಣ ಪ್ರಯೋಜನದ

ತತ್ವದ ಅರಿವೇ (ಜ್ಞಾನವೇ) ಶಿಷ್ಯ ವರ್ಗಕ್ಕಿಲ್ಲ. ಇಂತಹ ಸ್ಥಿತಿಯಲ್ಲಿ ನಾವು ಮಠಗಳ ನಿಜವಾದ ಸಂಪ್ರದಾಯವನ್ನು ಬೈಲಿಗಿಡಬೇಕೆಂಬ ಉದ್ದೇಶದಿಂದಲೇ ತಪ್ತಮುದ್ರಾ ಕೊಡುವ ಸಾಹಸ ಮಾಡಿದೆವು. (ನಾವು ಕೊಟ್ಟ ತಪ್ತಮುದ್ರಾ ಚುರುಕು ಹಾಕಿಸಿಗೊಂಡವರ ಬದಲಿ ಕೆಲವು ಮಠದವರಿಗೆ ಹತ್ತಿತ್ತು) ಜಗತ್ತಿನಲ್ಲಿ ಸುಪ್ತವಾಗಿದ್ದ ನಿಜ ತತ್ವವನ್ನು ಪ್ರಬೋಧನಗೊಳಿಸುವ ಸಲುವಾಗಿ ಸನ್ಮಾರ್ಗ ಕ್ರಮಣದಲ್ಲಿ ಇಂದು ಅನೇಕ ಪ್ರತಿಬಂಧಕಗಳನ್ನು ನಿರ್ಲಕ್ಷಿಸಿ, ವೈಷ್ಣವ (ಮಧ್ವ) ಸಮಾಜದ ಮಠಗಳ (ಸನ್ಯಾಸಿಗಳ) ಸ್ಥಾನವನ್ನು ದೀರ್ಘವಾಗಿ ಯೋಚಿಸಿ, ಆ ವಿಷಯವನ್ನೇ ವಿಮರ್ಶನಮಾಡಿ (ವೈಷ್ಣವ) ಸಮಾಜಕ್ಕೆ ಶೂಲಪ್ರಾಯವಾಗಿರುವ ಮಠಗಳ ಕೆಟ್ಟ ಸಂಪ್ರದಾಯಗಳನ್ನು ಬೈಲಿಗೆಳೆದವು. ಇದು ಕೆಲವರಿಗೆ ನಿಜವಾಗಿ ಶೂಲಪ್ರಾಯವಾಯಿತು. ಈ ಕ್ರಾಂತಿಕಾರಕ ಭಾವನೆಗಳು ಕೆಲವು ಸ್ವಾರ್ಥಪರ ಸ್ವಾಭಿಮಾನದ ಮಠಾಧಿಪತಿಗಳನ್ನು ಕೆರಳಿಸಿದವು. ಮಠದ ಸಂಪ್ರದಾಯಗಳನ್ನು ಹಾಳುಮಾಡುವವರೆಂದು ಹಾರಾಡಿದರು. ಮತ್ತು ಇಂತಹವರನ್ನು ಮಠಾಧಿಪತಿಗಳನ್ನಾಗಿ ಉಳಿಸಬಾರದೆಂದು ಹುಯಿಲು ಹಾಕಿದರು. ಆದರೆ ಅವರ ಹುಯಿಲಗಳನ್ನು ಉಪೇಕ್ಷಿಸದಿದ್ದರೆ, ಈ ಹುಯಲಿಗೆ ಗೌರವಕೊಟ್ಟಂತಾಗುವದರಿಂದ ಅದನ್ನು ತಿರಸ್ಕರಿಸಲೇಬೇಕೆಂದು ನಿಶ್ಚಯಿಸಿ ನಮ್ಮ ಕರ್ತವ್ಯವನ್ನೇ ಸಾಗಿಸಿದೆವು. ಲೋಕವೆಲ್ಲವನ್ನು ಮೆಚ್ಚಿಸಲಾದೀತೆ? ಸತ್‌ಪಕ್ಷ ಒಂದು ಇದ್ದರೂ ಜನಕ್ಕೆ ತಿಳಿಯಬೇಡವೇ? ಇದು ಸತ್‌ಪಕ್ಷವೆಂತಲೂ, ಇದು ಅಸತ್ಪಕ್ಷವೆಂತಲೂ ವಿಮರ್ಶನಮಾಡಿ ನಿರ್ಣಯಿಸುವದು ನಿಷ್ಪಕ್ಷಪಾತಿಗಳ ಕರ್ತವ್ಯ. ನಡೆ-ನುಡಿಗಳ ಬೆಲೆಗಳನ್ನು ಕಾಲವು ನಿರ್ಣಯಿಸುವದು.ಮೋಹಾಂಧರಾದ ತಪ್ಪು ವಿಮರ್ಶಕರು ಸರಿಯಾದ ಹಾದಿಗೆ ಬರುವರೆ? ಇಲ್ಲ. ಅವರಿಗಾಗಿ ಯೋಚಿಸಬೇಕಾಗಿಲ್ಲ. ಆದರೆ ಶಾಸ್ತ್ರ ವಿಹಿತ ಮಾರ್ಗವನ್ನು ಬಿಡದೇ ಆಚರಿಸುತ್ತಲೂ, ಭೋದಿಸುತ್ತಲೂ ಹೋಗಬೇಕು. ಸತ್ಯಕ್ಕೆ ಸಾವಿಲ್ಲ. ಪ್ರಕೃತ ನಮ್ಮ ನಡೆ-ನುಡಿಗಳ ಪಥವು ಸಮ್ಮತವಾಗದಿದ್ದಾದರೆ ಕಾಲಾಂತರದಲ್ಲಾದರೂ ಫಲಕಾರಿಯಾಗಿಯೇ ತೀರುತ್ತದೆ. ಇದಕ್ಕೆ ಯಾರ ನಿಂದಿಸಿ ಟೀಕಿಸಿದರೇನು? "ಘೋಷಕಾದಿತ್ಯನ್ಯಾಯವೇ ಸರಿ". ಇಂದು (ಸರಿಯಾಗಿ ತಿಳಿಯದ) ಬಿಡಿ ನುಡಿಯುವ ಲೋಕ, ನಾಳೆ ಇದನ್ನೇ ಕೊಂಡಾಡುವದು, ಶಿರಸಾವಹಿಸಿ ಅನುಕರಣ ಮಾಡುವದು" ಅಂತ ಮೂರು ತಾಸು ಉಪನ್ಯಾಸ ಮಾಡಿ ಸಭಿಕರ ಮನಸ್ಸು ಸಂತೋಷಪಡಿಸಿದರು.

೧೬. ಪಾಂಡಿತ್ಯ ಅರ್ಥಹೀನವಾಕ್ಯಾರ್ಥಕಲ್ಲ, ಮಂಗನ ಸಾಮ್ಯಕಥನ ಯತಾರ್ಥ.

ಆಮೇಲೆ ಪಂಡಿತ ಶಿಕಾರಪುರ ವಿಠ್ಠಲಮೂರ್ತಿ ಆಚಾರ್ಯರು, ಪಾಂಡುರಂಗಿ ವೆಂಕಟರಮಣಾಚಾರ್ಯರು 'ಸುಧಾ' ಗ್ರಂಥಸ್ಥ ದ್ವಿತೀಯಾಧ್ಯಾಯದ ವಿಷಯವನ್ನು ತೆಗೆದುಕೊಂಡು, ಪೂರ್ವ ಪಕ್ಷವನ್ನು ಮಾಡಿದರು. ಇದಕ್ಕೆ 'ಹರಪನಹಳ್ಳಿಯ ಚಿಕ್ಕೇರೂ ಬಂಡಾಚಾರ್ಯರು' ಉತ್ತರ ಹೇಳುತ್ತಿದ್ದರು. ಮೇಲಿನ ಆಚಾರ್ಯದ್ವಯರು ಈ ಬಂಡಾಚಾರ್ಯರ ವಿಷಯಕ ಮಾತ್ಸರ್ಯವಿದ್ದ ಮೂಲಕ ಸದುತ್ತರ ಹೇಳುತ್ತಿದ್ದರೂ ಅಲ್ಲಗಳೆಯಹತ್ತಿದರು. ಅಧ್ಯಕ್ಷಸ್ಥಾನದಲ್ಲಿದ್ದ ಈ ಚರಿತ್ರಾನಾಯಕರು "ಸದುತ್ತರ ಬಂದಾಗ್ಯೂ

ಅಪಲಾಪ ಮಾಡುವದು ನ್ಯಾಯವಲ್ಲ" ಅಂತ ಹೇಳಿದ್ದಾಗ್ಯೂ ಮೇಲಿನ ಇಬ್ಬರು ಆಚಾರ್ಯರು ಕೇಳದೆ ತಮ್ಮದೇ ಸಾಧಿಸತೊಡಗಿದರು. ಇದರಿಂದ ಬಂಡಾಚಾರ್ಯರು ಸಭಾ ಪರಿತ್ಯಾಗ ಮಾಡಿ ನಡೆದರು. ಆಗ ಕೆಲವು ಗೃಹಸ್ಥರು ಅವರನ್ನು ಸಮಾಧಾನಪಡಿಸಿ ಸಭೆಗೆ ಕರೆದುಕೊಂಡು ಬಂದರು. ನಂತರ "ಈ ರೀತಿ ವಾದಮಾಡೋಣದರಿಂದ ಯಾರಿಗೆ ಪ್ರಯೋಜನವಾಯಿತು? ಈ ಸಭೆಯ ವಿಷಯವನ್ನು ಕೇಳಿ ಸಂತೋಷ ಪಡುವ ಇಚ್ಛಾದಿಂದ ಬಂದ ಅನೇಕ ಜನರಿಗೆ ಈ ವಿಷಯವು ಏನು ತಿಳಿದಹಾಗಾಯಿತು? ಈ ವಾದದಿಂದ ಪಂಡಿತರೆನಿಸಿದವರಿಗಾದರೂ ಏನು ಪ್ರಯೋಜನವಾಯಿತು? ಆದ್ದರಿಂದಲೇ ನಮ್ಮ ಶ್ರೀ ಮಧ್ವಾಚಾರ್ಯರ ಮತಾಭಿಪ್ರಾಯವನ್ನು ಈ ಸರ್ವರಿಗೂ ತಿಳಿಯುವಂತೆ ಪ್ರತಿಪಾದನೆಮಾಡಲು ಈ ಸಭೆಯನ್ನು ಏರ್ಪಾಟು ಮಾಡಿದ ವಿಷಯವನ್ನು ಪ್ರಥಮದಲ್ಲಿಯೇ ಸೂಚಿಸಿದ್ದವು. ಅದನ್ನು ಬಿಟ್ಟು ಪಾಂಡಿತ್ಯ ಪ್ರದರ್ಶನೆಗಾಗಿ ನಿಮ್ಮ ನಿಮ್ಮಗಳಲ್ಲಿಯೇ ವೈಷಮ್ಯ (ಮತ್ಸರ) ಮುಂದು ಮಾಡಿ ಒಬ್ಬರನ್ನೊಬ್ಬರು ಅಪಮಾನ ಮಾಡೋದು ಅನುಚಿತವಾದ್ದರಿಂದ, ಇನ್ನು ಮೇಲಾದರೂ ನಾವು ಸೂಚಿಸಿದಂತೆ ಪ್ರವರ್ತಿಸುವುದಾದರೆ ಮೂರು ದಿನಗಳ ಸಭಾ ನಡೆಯಲಿ, ಇಲ್ಲವಾದರೆ ಇಲ್ಲಿಗೆ ವಿಸರ್ಜನೆ ಮಾಡುತ್ತೇವೆ" ಅಂತ ಸ್ಪಷ್ಟವಾಗಿ ಹೇಳಿದರು. ಆಮೇಲೆ ಇವರು (ಈ ಅಧ್ಯಕ್ಷರು) ಹೇಳಿದಂತೆ ಪಂಡಿತರೊಬ್ಬೊಬ್ಬರಾಗಿ ಒಂದೊಂದು ತಾಸು ಶ್ರೀ ಮಧ್ವಸಿದ್ಧಾಂತ ಗ್ರಂಥ ವಿಷಯವನ್ನು ಉಪನ್ಯಾಸರೂಪದಿಂದ ಸರ್ವರಿಗೂ ತಿಳಿಯುವಂತೆ ಹೇಳಿದರು. ಈ ಸಭೆಯನ್ನು (ಪೂರ್ವದಂತೆ ವಾದ ಪದ್ಧತಿಯನ್ನು) ಈ ರೀತಿ ಬದಲಿಸಿದ್ದಕ್ಕೆ 'ಹಾವೇರಿಯ ಬೆಳ್ಳಿ ಕಮಲದಾಸಿ ಲಕ್ಷ್ಮಣರಾಯ, ನಾಡಗೀರ ತಿರುಮಲರಾಯರು' ವಗೈರೆ ಗೃಹಸ್ಥರು ಸಂತೋಷಪಟ್ಟರು. ಈ ಸಮಯದಲ್ಲಿ ಶಿವಮೊಗ್ಗದಿಂದ ಕೆಲವು ಗೃಹಸ್ಥರು ಬಂದು ಶ್ರೀ ರಘುಪ್ರೇಮತೀರ್ಥರನ್ನು ಶಿವಮೊಗ್ಗಾಕ್ಕೆ ಕರೆತಂದು ಶ್ರೀ ರಘುದಾಂತರಲ್ಲಿ ತಾತ್ಕಾಲಿಕ ರಾಜೀ ಮಾಡಿಸಲು ಮುಂದಾದರು. ಆದರೆ ಅವರಿಗೆ ಶ್ರೀ ರಘುಪ್ರೇಮತೀರ್ಥರು ತಿರುಗಿ ಬಂದದ್ದು ಮನಸ್ಸಿನ ಕಳವಳಕ್ಕೆ ಕಾರಣವಾಯಿತು. ಆದರೂ ಉಭಯರು ಏಕತ್ರ ಪೂಜಾ ಮಾಡುತ್ತ ಕಾಲ ಕಳೆಯುತ್ತಿರಲು ಅಕಸ್ಮಾತ್ ಒಂದು ದಿನ ಒಂದು ಕೋತಿಯು ಯಾರ ಮನೆಯಿಂದಲೋ ಒಂದು ಕನ್ನಡಿಯನ್ನು ತಂದು ಅದರ ಸಂಗಡ ಆಡುತ್ತಿರಲು, ಶ್ರೀ ರಘುದಾಂತತೀರ್ಥರು ಕರೆದು ತೋರಿಸಿ, ಹಿಂದಕ್ಕೊಂದು ದಿನ ಒಂದು ಕೋತಿಯು ಇದರಂತೆ ಬಂದು, ದೊಡ್ಡ ಕನ್ನಡಿಯನ್ನು ಯಾರ ಮನೆಯಿಂದಲೊ ತಂದು ಈ ಕೊಂಬಿನ ಮೇಲೆ ಕುಳಿತುಕೊಂಡು ಕನ್ನಡಿಯನ್ನು ನೋಡಿಕೊಂಡಿತ್ತು. ಅದರಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಭ್ರಾಂತಿಯಿಂದ ಅದರಲ್ಲಿ ಮತ್ತೊಂದು ಕೋತಿ ಇದೆ ಎಂದು ಅಂದುಕೊಂಡು, ಆ ಪ್ರತಿಬಿಂಬಾತ್ಮಕ ಕೋತಿಯನ್ನು ತನ್ನ ಕೈಯಿಂದ ಹೊಡೆಯಿತು. ಆ ಬಡಿತದಿಂದ ತನ್ನ ಕೈಗೆ ಪೆಟ್ಟು ಹತ್ತಿತ್ತು. ಈ ಪೆಟ್ಟು ಕನ್ನಡಿಯೊಳಗಿದ್ದ ಕೋತಿಯ ಹೊಡೆತವೆಂದುಕೊಂಡು ನೆಟ್ಟಗೆದ್ದು ಬಲವಾಗಿ ಹೊಡೆಯಿತು. ಈ ಪೆಟ್ಟಾದರೂ ತನ್ನ ಕೈಗೆ ಹತ್ತಿದ್ದರಿಂದ ಪೂರ್ವದಂತೆ ಭ್ರಾಂತಿಗೊಂಡು ಕನ್ನಡಿಯೊಳಗಿದ್ದ ಕೋತಿಗೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕೆಂದು, ಆ ಕನ್ನಡಿಯನ್ನು ಅಪ್ಪಳಿಸಿತು. ಆದ್ದರಿಂದ ಆ

ಕನ್ನಡಿಯು ಒಡೆದು ಚೂರು ಚೂರಾಯಿತು. ಈ ಪ್ರಾಯಶ್ಚಿತ್ತ ಹ್ಯಾಗಾಯಿತೆಂದು ಪ್ರತಿಬಿಂಬ ಕೋತಿಯನ್ನು ಕೇಳುವಂತೆ ಒಂದು ಚೂರು ಕನ್ನಡಿಯನ್ನು ಇಣಕಿ ನೋಡಿತು. ಅದರಲ್ಲಿ ಪೂರ್ವದಂತೆ ಪೂರ್ಣರೂಪಾತ್ಮಕ ಕೋತಿಯನ್ನು ಕಂಡಿತು ಮತ್ತು ಉಳಿದ ಚೂರುಗಳನ್ನು ನೋಡಿತು. ಅವುಗಳಲ್ಲಿಯೂ ಪೂರ್ಣರೂಪಾತ್ಮಕ ಕೋತಿಯನ್ನೇ ಕಂಡಿತು. ನಾನು ಮಾಡಿದ ಪ್ರಾಯಶ್ಚಿತ್ತಕ್ಕಾಗಿ ಮೂರು-ನಾಲ್ಕು ಕೋತಿಗಳನ್ನು ಕರೆದುಕೊಂಡು ಬಂದಿದೆ ಎಂದು ಅಂದುಕೊಂಡು, ಆ ಮೂರುನಾಲ್ಕು ಕೋತಿಗಳನ್ನು ಹೊಡಿದೋಡಿಸಬೇಕೆಂದು ತನ್ನ ಎರಡೂ ಕೈಗಳಿಂದ ಆ ಎಲ್ಲ ಪ್ರತಿಬಿಂಬ ಕೋತಿಗಳಿಗೆ ಹೊಡೆಯಿತು. ಈ ಹೊಡೆತವಾದರೂ ಇದಕ್ಕೇ ಹತ್ತಿತು. ಆದಾಗ್ಯೂ ಯಥಾರ್ಥ ಜ್ಞಾನವಾಗದೆ ಮತ್ತಷ್ಟು ಸಿಟ್ಟಿನಿಂದ ಆ ಚೂರುಗಳನ್ನೆಲ್ಲ ಅಪ್ಪಳಿಸಿತು. ಈ ದೊಡ್ಡ ಚೂರುಗಳು ಸಣ್ಣ ಸಣ್ಣ ಚೂರುಗಳಾದವು. ಆಗಲೂ ಆ ಚೂರುಗಳನ್ನು ನೋಡಲು (ಪೂರ್ವದಂತೆ) ಅನೇಕ ಕೋತಿಗಳು ತನ್ನನ್ನು ಎದುರಿಸಲಿಕ್ಕೆ ಬಂದಂತೆ ಭಾಸವಾಗಿ (ಭ್ರಾಂತಿಗೊಂಡು) ಆ ಚೂರು-ಚೂರು ಕನ್ನಡಿಗಳನ್ನು ಅಪ್ಪಳಿಸಿ ಚಿಕ್ಕ ಚಿಕ್ಕ ಚೂರುಗಳನ್ನಾಗಿ ಮಾಡಿ ಆ ಚೂರುಗಳನ್ನೇ ನೋಡೋಣದರಿಂದ ಅವುಗಳಲ್ಲಿಯೂ ಅನೇಕ (ಪ್ರತಿಬಿಂಬ) ಕೋತಿಗಳನ್ನು ಕಂಡು ಹೆದರಿ ಓಡಿಹೋಯಿತು" ಅಂತ ಆಭಾಸಾಲಂಕಾರಕ ಪರಿಹಾಸವನ್ನು ಮಾಡಿದರು. ಅದಕ್ಕೆ ಇವರು (ಶ್ರೀ ಶ್ರೀ ರಘುಪ್ರೇಮತೀರ್ಥರು) "ನಮ್ಮಂತಹ ಪಂಡಿತರ ಲಕ್ಷಣ ಕೋತಿಯಂತೆ" ಅಂತ ಪ್ರತಿ ಮಾತನಾಡಿದರು. ಈ ಮಾತಿನಿಂದ ಸ್ವಾಮಿಗಳಿಗೆ (ಟಂಕಸಾಲಿ ಸ್ವಾಮಿಗಳಿಗೆ) ಸಿಟ್ಟು ಬಂದು "ಆ ಕೋತಿಗೂ, ಪಂಡಿತರಿಗೂ ಸಾಮ್ಯ ಹ್ಯಾಗೆ ಅಂತ" ಕೇಳಿದರು. "ನಾವುಗಳು ನಮ್ಮ ಸ್ವರೂಪಭೂತ ಜ್ಞಾನಾಭಿವ್ಯಕ್ತಿಗೆ ಕಾರಣವಾದ ಸಚ್ಛಾಸ್ತ್ರವನ್ನು ಅಭ್ಯಾಸ ಮಾಡಲು ಅದರಲ್ಲಿ ಹೇಳಿರುವಂತೆ ಸರ್ವೇಂದ್ರಿಯದಮನಮಾಡಿ (ವಶದಲ್ಲಿಟ್ಟುಕೊಂಡು) ಶಾಂತನಾಗಿಯೂ, ಸಂತುಷ್ಟನಾಗಿಯೂ, ಆತ್ಮಸಂಸ್ಥ ಮನಸ್ಕನಾಗಿಯೂ,ದ್ವಂದ್ವ ಚೇತನನಾಗಿಯೂ, ನಿರ್ಮತ್ಸರನಾಗಿಯೂ, ಜಗತ್ಪಾರತಂತ್ರ್ಯ ವಿಷಯಕ ಯಥಾರ್ಥಜ್ಞಾನ ಉಳ್ಳವನಾಗಿಯೂ, ಸರ್ವೇಂದ್ರಿಯಗಳಿಂದ ಬದ್ಧನಾಗಿ, ಸರ್ವತ್ರ ಭಗವದ್ವ್ಯಾಪ್ತಿ ತಿಳಿಯಲಿಕ್ಕೆ ಸಾಮರ್ಥ್ಯ ಉಳ್ಳವನಾಗಿರುವದರ ಬದಲು, ಸರ್ವೇಂದ್ರಿಯಗಳಿಂದ ಏಕಕ್ಷಣಿಕವಾದರೂ ವಿಷಯಗಳಲ್ಲಿ ದ್ರವಿಸುತ್ತ, ಈರ್ಷ್ಯಾಪಾಶಗಳಿಂದ ಬದ್ಧರಾಗಿ ಸರ್ವತ್ರ ಭಗವದ್ವ್ಯಾಪ್ತಿಗಳ ತಿಳಿಯುವವರಾಗುವದಿಲ್ಲವೆಂದ ಮೇಲೆ, ದರ್ಪಣದ ಪ್ರಯೋಜನವನ್ನು ತಿಳಿಯದ ಆ ಮಂಗನಂತೆ ನಮ್ಮ ಸ್ವರೂಪಭೂತಜ್ಞಾನಾಭಿವ್ಯಕ್ತಿಗೆ ಕಾರಣವಾದ ಸಚ್ಛಾಸ್ತ್ರವನ್ನು ದ್ರವ್ಯ, ಪ್ರತಿಷ್ಠಾದಿಗಳಿಗಾಗಿ ಉಪಯೋಗ ಮಾಡಿಕೊಂಡರೆ ನಮ್ಮಗಳಿಗೆ ಆ ಕೋತಿಸಾಮ್ಯ ಬರುವುದಿಲ್ಲವೇ?" ಎಂದು ಇವರು (ಶ್ರೀ ರಘುಪ್ರೇಮತೀರ್ಥರು) ಅಂದರು. ಈ ಮಾತಿನಿಂದ ಅವರಿಗೆ (ಶ್ರೀ ರಘುದಾಂತತೀರ್ಥರಿಗೆ) ಹೆಚ್ಚು ಚುರುಕು ಹತ್ತಿತು. "ನಿಮಗೆ ಪುಸ್ತಕ ಮುಂದಿಟ್ಟುಕೊಂಡು ಪಾಠ, ಪ್ರವಚನ ಮಾಡತಕ್ಕ ದೀಕ್ಷಾ ಹೆಚ್ಚು ಇಲ್ಲವಾದ್ದರಿಂದ, ಪಾಠ ಪ್ರವಚನ ಮಾಡತಕ್ಕವರನ್ನು ನಿಂದಾ ಮಾಡುತ್ತಾ ಪರ್ಯಾಯದಿಂದ ನಮ್ಮನ್ನು ನಿಂದಿಸುತ್ತಿದ್ದೀರಿ" ಅಂತ ಕೋಪದಿಂದ ನುಡಿದರು. "ನಾವು ಪರ್ಯಾಯದಿಂದ ತಮ್ಮನ್ನಾಗಲಿ, ಇತರರನ್ನಾಗಲಿ

(ವೈಯಕ್ತಿಕ) ನಿಂದಾ ಮಾಡುವ ತಾತ್ಪರ್ಯ ಉಳ್ಳವರಾಗಿಲ್ಲ. ಮರುಕದಿಂದ (ವಿಷಾದದಿಂದ) ಆ ರೀತಿ ಅನ್ನುತ್ತೇವೆ." "ಹಾಗೆಂದರೆ ನೀವು ಅನ್ನುವ ಗುಣ ವಿರಹಿತರು ಪಾಠ ಪ್ರವಚನಾಧಿಕಾರಿಗಳಾಗಲಾರರ?" ಅಂತ ರಭಸದಿಂದ ಕೇಳಿದರು. "ಶಾಸ್ತ್ರಕ್ಕೆ ಅಧಿಕಾರಿಗಳು ಎಂಥವರೆನ್ನುವ ಶಾಸ್ತ್ರವೇ ಗೊತ್ತಿರುವಾಗ ನಾವೇನು ಬೇರೆ ಹೇಳಬೇಕಾಗಿಲ್ಲ?!" ಅಂತ ಮೆತ್ತಗೆ ನುಡಿದರು. "**ನಹಿಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ; ಜ್ಞಾನಾದೇವ ಮೋಕ್ಷಃ** ಅಂದಮೇಲೆ ಶಾಸ್ತ್ರಾಧ್ಯಾಯನ ಮಾಡದಿದ್ದರೆ, ಮುಕ್ತಿ ದೊರೆಯುವ ಬಗೆ ಹೇಗೆ?" ಅಂತ ಅವರು ಆಕ್ರೋಶದಿಂದ ಕೇಳಿದರು. "ತಾವು ಆಡುವುದು ನಿಜ! ಆದರೆ ನಮ್ಮ ಮುಖ ಹ್ಯಾಗಿರುವದೆಂಬುದು ನಮಗೆ ತಿಳಿಯದ ಪ್ರಯುಕ್ತ ಇದ್ದ ಮುಖಲಕ್ಷಣವು ಏನನ್ನೂ ವ್ಯಕ್ತಪಡಿಸಲಾರದು. ಅಂದರೆ ನಮಗೆ ಒಂದು ಕಣ್ಣು ಲೋಪವಿದ್ದರೆ ದರ್ಪಣವು ಪೂರ್ಣಗೊಳಿಸಿ ತೋರಿಸಲಾರದು. ಅದರಂತೆ ಅನಧಿಕಾರಿ (ಶಮಾದಿಮಾಡಿ ಗುಣರಹಿತ) ಶಾಸ್ತ್ರಾಧ್ಯಯನ ಮಾಡಿದರೆ, ಸುಜ್ಞಾನವು ಅಭಿವ್ಯಕ್ತವಾಗದೆ ಪಾಂಡಿತ್ಯಾದಿ ಮದಗಳಿಂದ ಮತ್ತರಾಗಿ ಪ್ರತಿ ಪ್ರಾಣಿಗಳ ಯೋಗ್ಯತೆ ವಿಮರ್ಶಕಜ್ಞಾನವಾಗದೆ ಶ್ರೇಯೋಭಂಗಕ್ಕೆ ಭಾಗಿಗಳಾಗುವರು. ಅಂದಮೇಲೆ ಈ ಮಹಾಶಾಸ್ತ್ರದಿಂದ ಹೊಂದಬೇಕಾದ ಪ್ರಯೋಜನವನ್ನು ಹೊಂದಲಾರರು. ಅಂದ ಬಳಿಕ ಸ್ವರೂಪ ಭೂತ ಜ್ಞಾನಾಭಿವ್ಯಕ್ತಿಗೆ ಸಾಧಕವಾದ ಈ ಮಹಾಶಾಸ್ತ್ರದ ಮುಖ್ಯ ಪ್ರಯೋಜನ ಮಾಡಿಕೊಳ್ಳದ ಮೇಲೆ (ದರ್ಪಣದ ಯೋಗ್ಯ ಪ್ರಯೋಜನ ಮಾಡಿಕೊಳ್ಳದ ಮೇಲೆ) ಮಂಗನ ಸಾಮ್ಯವೇ ಬಂದಂತಾಯಿತು" ಅಂತ ಉತ್ತರ ಕೊಟ್ಟರು. ಇದರಿಂದ ಇವರಿಗೆ (ಟಂಕಸಾಲಿ ಸ್ವಾಮಿಗಳಿಗೆ) ವಿಶೇಷ ಸಿಟ್ಟು ಬಂದು "ಈ ಮಾತಿನ ಪರ್ಯಾಯದಿಂದ ನಮ್ಮನ್ನು ನಿಂದಾ ಮಾಡಿದಂತೆಯೇ ಆಯಿತು" ಎಂದು ನುಡಿದರು.

೧೭. ಗುರೌ ರುಷ್ಟೇ ನ ಕಶ್ಚನ

ಇತ್ತ ಗುರುರಾಜಾಚಾರ್ಯನು ನಾರಾಯಣಪೇಟೆಯ ಸ್ವಗೃಹದಲ್ಲಿ ಗುಡಿಕಟ್ಟಿಸಿ ಶ್ರೀ ರಾಘವೇಂದ್ರತೀರ್ಥರ ವೃಂದಾವನವನ್ನು ಮತ್ತು ಷೋಡಶ ಬಾಹು ನರಸಿಂಹದೇವರ ಮೂರ್ತಿಯನ್ನು ಪ್ರತಿಷ್ಠಾಪನಾ ಮಾಡಿಕೊಂಡು, ಅಗ್ನಿಹೋತ್ರವನ್ನು ಇಟ್ಟುಕೊಂಡು ಸತ್ಕರ್ಮಾನುಷ್ಠಾನವನ್ನು ಗುರೂಪದಿಷ್ಟಮಾರ್ಗದಿಂದ ಆಚರಿಸುತ್ತ, ಆ ಪ್ರಾಂತದಲ್ಲಿ ಮಹಾತ್ಮನೆಂದೆನಿಸಿಕೊಂಡು, ಜನರಿಂದ ಪೂಜ್ಯನೂ ಆದರಣೀಯನೂ ಆಗಿದ್ದನು. ಈ ಸ್ಥಿತಿಯಲ್ಲಿದ್ದ ಈತನು ತನ್ನ ಗುರುಗಳಲ್ಲಿ ವಿಮುಖನಾಗೋಣದರಿಂದ ದೇವತೆಗಳು ಕೂಡಾ ಕೈ ಬಿಡುವಂತಾದರು. ದೂರೀಕರಿಸುವವರಾದರು. **"ಹರೌರುಷ್ಟೇ ಗುರುಸ್ತ್ರಾತಾ, ಗುರೌರುಷ್ಟೇ ನ ಕಶ್ಚನ"** ಎಂಬ ಉಕ್ತಿಯು ನಿದರ್ಶನಕ್ಕೆ ಬಂತಲ್ಲವೇ! ದೇವತೆಗಳ ದಯೆಯಿಂದ ದೂರಾಗಿ ಈ ಗುರುರಾಜಾಚಾರ್ಯನು ಭ್ರಮಿಷ್ಠನಾದನು ಮತ್ತು ದೇಹಕ್ಕೆ ಜಾಡ್ಯವು ಪ್ರಾಪ್ತವಾಯಿತು. ಔಷಧ ಸೇವನಾ ನಿಮಿತ್ತ ಕೋಟಂಕೊಂಡಕ್ಕೆ ಹೋದನು. ಅಲ್ಲಿ ಜಾಡ್ಯವು ಹೆಚ್ಚಿತು. ಅಲ್ಲಿರತಕ್ಕ ಆಪ್ತವರ್ಗದವರೂ, ಹಿತಚಿಂತಕರೂ, ಅನುರಾಗಿಗಳೂ ಹೀಗೆ ಎಲ್ಲರೂ "ಆದವಾನಿಗೆ ಹೋಗಿ ಆ ಗುರುಗಳಲ್ಲಿ ಅನನ್ಯಗತಿತ್ವೇನ ಶರಣಾಗತಿ ಹೊಂದಿ, ಆಜ್ಞಾಪಿಸಿದ ಪ್ರಾಯಶ್ಚಿತ್ತವನ್ನು ಆಚರಿಸಿ

ಪುನಃ ಅನುಗ್ರಹ ಸಂಪಾದನೆ ಮಾಡಿಕೊಂಡು ಬನ್ನಿರಿ" ಅಂತ ಹೇಳಿದಾಗ ಕಾಲ ಮೀರಿತ್ತಾದ್ದರಿಂದ, ಹೋದಾಗ್ಯೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಆದವಾನಿಯಿಂದ ಹೊರಟು ನಾರಾಯಣಪೇಟೆಯ ಒಂದು ಮೈಲುಮೇಲಿನ ವಾಯುವ್ಯ ದಿಕ್ಕಿನಲ್ಲಿರುವ ಏಕಲಾಸಪುರವೆಂಬ ಗ್ರಾಮದ ಸಮೀಪ ಪರ್ಣಕುಟೀರ ಹಾಕಿಕೊಂಡು ಇರಹತ್ತಿದನು. ಮುಂದೆ ಸ್ವಲ್ಪ ಕಾಲದಲ್ಲಿಯೇ ಮರಣ ಹೊಂದಿದನು. ಈತನು ಅಗ್ನಿಹೋತ್ರಿಯಾಗಿದ್ದರಿಂದ ಆನಂದವನದಲ್ಲಿಟ್ಟಿದ್ದ ಅರಣೀ ವಗೈರೆ ಅಗ್ನಿಹೋತ್ರ ಸಲಕರಣೆಗಳನ್ನು ಈತನ ಭಾವಮೈದುನನಾದ 'ಜೋಯಿಸ್ ವೆಂಕೋಬಾಚಾರ್ಯ' ಹಾಗೂ ಆತನ ತಮ್ಮಂದಿರು ತಂದುಕೊಂಡು ಮಾಡಬೇಕಾದ ವಿಧ್ಯುಕ್ತ ಸಂಸ್ಕಾರಗಳನ್ನು ಮಾಡಿ ಉತ್ತರ ಕ್ರಿಯಾದಿಗಳನ್ನು ಮಾಡಿದರು. ಮುಂದೆ ಗುರುರಾಜಾಚಾರ್ಯನಿಗೆ ಬ್ರಹ್ಮರಾಕ್ಷಸ ಜನ್ಮ ಪ್ರಾಪ್ತವಾಯಿತು. ನಂತರ ಕೋಟಂಕೊಂಡದ ಗಾರ್ಲಪಾಡ ರಾಮಾಚಾರ್ಯರ ಕುಟುಂಬವನ್ನು ಅವ್ಯಕ್ತಪೀಡಿಸಹತ್ತಿದನು.

೧೮. ದೈವಬಲ ಪ್ರಬಲ.

ಇತ್ತ ಚರಿತ್ರನಾಯಕರು ಶಿವಮೊಗ್ಗದಿಂದ ಪ್ರಯಾಣ ಮಾಡಿ ಆದವಾನಿಗೆ ಬಂದರು. ಇಲ್ಲಿರುವಾಗ ಬಿಜಾಪುರದಿಂದ 'ಮಣೂರ ನಾರಾಯಣರಾಯ'ನೆಂಬ ಗೃಹಸ್ಥನು (ಈತನ ವಿಷಯ ಮೂರನೇ ಅಧ್ಯಾಯದಲ್ಲಿ ಬಂದಿದೆ ಅದು ವಾಚಕರ ಜ್ಞಾಪಕದಲ್ಲಿರಲು ಸಾಕು) ತನ್ನ ಅಣ್ಣನ ಮಗನಾದ 'ರಾಘವೇಂದ್ರರಾಯನನ್ನು' ಕರೆದುಕೊಂಡು ಕುಟುಂಬ ಸಮೇತ ಇಲ್ಲಿಗೆ ಬಂದನು. "ನಮ್ಮಿಬ್ಬರ ಅಣ್ಣ-ತಮ್ಮಂದಿರ ಮಧ್ಯ ಈ ರಾಘವೇಂದ್ರರಾಯನೊಬ್ಬನೆ ಮಗನು. ಇವನ ಕುಟುಂಬ ಹತ್ತೆಂಟು ವರುಷಗಳ ಕೆಳಗೆ ಗರ್ಭಿಣಿಯಾಗಿದ್ದಳು. ಸರಿಯಾಗಿ ಪ್ರಸವವಾಗದಿರುವದರಿಂದ ಜಿಲ್ಲಾಧಿಕಾರಿಯಾದ ಡಾಕ್ಟರ *(Civil Surgeon)* ನಿಂದ ಗರ್ಭಾಶಯವು ಅಪರೇಷನ್ *(Operation)* ಮಾಡಿ ಶಿಶುವನ್ನು ಹೊರಗೆ ತೆಗೆಯಲಾಯಿತು. ಆಗ ಈಕೆಯ ಗರ್ಭಕೋಶದಲ್ಲಿಯೇ ದೋಷವಿರೋಣದರಿಂದ ಈಕೆಯು ಗರ್ಭಧರಿಸಲಾರಳು, ಕದಾಚಿತ್ ಗರ್ಭಧಾರಣವಾದರೆ ಈಕೆಯು ಬದುಕುವುದಿಲ್ಲ" ಅಂತ ಹೇಳಿದ್ದಾರೆ. "ಪ್ರಯುಕ್ತ ಈಕೆಯ ಮೂಲಕ ನಮ್ಮ ವಂಶಾಭಿವೃದ್ಧಿಯಾಗುವಂತಿಲ್ಲವಾದ್ದರಿಂದ ನಮ್ಮ ಮಗನಿಗೆ (ರಾಘವೇಂದ್ರನಿಗೆ) ದ್ವಿತೀಯ ವಿವಾಹ ಮಾಡುವ ಯತ್ನ ಮಾಡಿದೆವು. ಇದಕ್ಕೆ ನಮ್ಮ ಸೊಸೆಯು ಸಮ್ಮತವಿತ್ತರೂ ಈತನು ನಿರಾಕರಿಸಿದನು. ಇದರಿಂದ ನಮ್ಮ ವಂಶವೇ ನಿಂತುಹೋಗುವ ಸಂಭವವಿದೆ. ಪ್ರಯುಕ್ತ ಈತನ ಮನಸ್ಸು ದ್ವಿತೀಯ ವಿವಾಹಕ್ಕೆ ಒಪ್ಪುವಂತೆ ಪರಿವರ್ತನ ಆಗುವ ರೀತಿಯಲ್ಲಿ ಅನುಗ್ರಹ ಮಾಡಬೇಕೆಂದು" ಪ್ರಾರ್ಥನಾ ಮಾಡಿಕೊಂಡನು.

"ಆ ಡಾಕ್ಟರನು ಸ್ಥೂಲಮತಿಯು, ಅವನು ಸೃಷ್ಟ್ಯಾದಿಗಳಿಗೆ ನಿಯಾಮಕನಲ್ಲ; ಅಥವಾ ತನ್ನಿಯಾಮಕನ ಸಂಕಲ್ಪವನ್ನು ತಿಳಿಯುವ ಜ್ಞಾನಿಯೂ ಅಲ್ಲ. ಅಂದಮೇಲೆ ಅವನ ಮಾತುಗಳೇ ಸಿದ್ಧಾಂತವೆಂದು ಹ್ಯಾಗೆ ನಂಬತಕ್ಕದ್ದು?" ಅಂತ ಕೇಳಿದರು. "ಆ ಡಾಕ್ಟರನು ಹೇಳಿದಂತೆ ಏತಾವತ್ಪರ್ಯಂತರ ನಮ್ಮ ಸೊಸೆಯು ಗರ್ಭಧಾರಣ ಮಾಡದದ್ದರಿಂದ ಅವನ ಮಾತಿನಲ್ಲಿ

ನಂಬಿಕೆ ಉಂಟಾಗಿದೆ." ಅಂದನು. ಕಾಲ ನಿಯಾಮಕನ ಸಂಕಲ್ಪವನ್ನು ಒಂದೊಂದು ಸಾರಿ ಜ್ಞಾನಿಗಳು ಸಹ ತಿಳಿಯಲಾರರು. ಅಂದಮೇಲೆ ಭಗವತ್ಸಂಕಲ್ಪದ ಕುರುಹು ಸಹ ಅರಿಯದೆ ಡಾಕ್ಟರನ ಮಾತು ನಿರ್ಣಯಿಸುವಂತಿಲ್ಲ. ಈ ನಿಮ್ಮ ಸೊಸೆಯಾದ ಕುಂ.ಸೌ. ಸೀತಾಬಾಯಿಗೆ ಸಂತಾನವಾಗಬಾರದೇಕೆ? ಈವರೆಗೂ ಆಗಲಿಲ್ಲವಲ್ಲ ಎಂದರೆ ಅದಕ್ಕೆ ಜನ್ಮಾಂತರ ಪ್ರತಿಬಂಧಕವಿರುತ್ತದೆ. ತತ್ಪರಿಹಾರಾರ್ಥವಾಗಿ ಭಗವದಾರಾಧನಾ (ಸೇವಾ) ಮಾಡಿದರೆ ಪ್ರತಿಬಂಧಕ ನಿವಾರಣವಾಗಿ ಸಂತಾನಕ್ಕೆ ಕಾರಣರಾಗಬಹುದು" ಅಂತ ಹೇಳಿದರು. "ಹಾಗಾದರೆ ಉತ್ತಮವಾಯಿತು. ಮಾಡಬೇಕಾದ ಸೇವಾ ಕ್ರಮವನ್ನಾದರೂ ದಯಪಾಲಿಸಬೇಕು. ಆದರೆ ಈ ನಮ್ಮ ರಾಘವೇಂದ್ರರಾಯನು ಆಧುನಿಕನಾಗಿರೋಣದರಿಂದ ಇಂತಹ ವಿಷಯಗಳ ವಿಶೇಷ ವಿಶ್ವಾಸ ಉಳ್ಳವನಲ್ಲ. ಆತನ ಹೆಂಡತಿಯು ಕಠಿಣ ಸೇವಾ ಆದರೂ ಮಾಡಬಲ್ಲಳು. ಇದಕ್ಕನುಗುಣವಾಗಿಯೇ ಸೇವಾ ಹೇಳಬೇಕು" ಅಂತ ನಮ್ರ ಭಾವದಿಂದ ಕೇಳಿಕೊಂಡನು. "ತಥಾಸ್ತು" ಅಂದು "ಮರುದಿವಸ ಇದ್ದರೆ ಭಗದತ್ಸಂಕಲ್ಪ ತಿಳಿದು ಹೇಳುತ್ತೇವೆ!" ಅಂತ ಅಭಯ ಪ್ರಧಾನ ಮಾಡಿ, ಆ ಮೇರೆಗೆ ರಾಘವೇಂದ್ರರಾಯನಿಗೂ, ಕುಂ.ಸೌ. ಸೀತಾಬಾಯಿಗೂ ಅನುಷ್ಠಾನವನ್ನು ಹೇಳಿ, ಇನ್ನು ಕೆಲವು ಅನುಷ್ಠಾನವನ್ನು ನಿಮ್ಮ ಊರಲ್ಲಿಯ (ಬಿಜಾಪೂರ) ಇರುವ 'ಉಮರ್ಜಿ ಕೃಷ್ಣಾಚಾರ್ಯರಿಗೆ' ಹೇಳುತ್ತೇವೆ." ಆ ಅನುಷ್ಠಾನವನ್ನು ಅವರ ಸಂಗಡ ಮಾಡಿಸಿರಿ ಅಂತ ಆಜ್ಞಾ ಮಾಡಿದರು. ಒಳ್ಳೇದು ಅಂದು ಈ ನಾರಾಯಣರಾಯನು ಬಿಜಾಪುರಕ್ಕೆ ಹೋಗಿ ಉಮರ್ಜಿ ಕೃಷ್ಣಾಚಾರ್ಯರಲ್ಲಿಗೆ ಹೋದನು. ಆ ಆಚಾರ್ಯರು ಅವರಿಗೆ ಒಂದು ಮಂಡಲ (ನಲವತ್ತು ದಿನ) ಅಲವಣದಿಂದ ಅನುಷ್ಠಾನ ಮಾಡಲು ಹೇಳಿ ಮಂತ್ರೋಪದೇಶವನ್ನು ಮಾಡಿದರು. ಮತ್ತು ಕುಂ. ಸೌ. ಸೀತಾಬಾಯಿಗೆ ಇವರು ಅನುಷ್ಠಾನ ಮಾಡಿ ಅಭಿಮಂತ್ರಿಸಿದ ಕ್ಷೀರ (ಹಾಲನ್ನು) ಸ್ವೀಕಾರಮಾಡುವುದಾಗಿಯೂ, ಇತರ ಕಠಿಣ ನಿಯಮಗಳನ್ನು ಹೇಳಿ, ಈ ಅನುಷ್ಠಾನವನ್ನು ಬಿಜಾಪುರದಲ್ಲಿಯೇ ಡಾಕ್ಟರ ಗೋವಿಂದರಾಯರ ದೇವರ ಮನೆಯಲ್ಲಿಯೇ ಮಾಡುವುದಾಗಿ ತಿಳಿಸಿದರು. ಆ ಪ್ರಕಾರ ಅವರುಗಳು ಅನುಷ್ಠಾನವನ್ನು ೪೦ ದಿನ ಮಾಡಿದರು. ಅಲವಣದಿಂದ ಕ್ಲಿಷ್ಟ ಸೇವಾ ಸ್ವಪ್ನವಾದಾಗ್ಯೂ ಈರೀತಿ ಸೇವಾದಿಂದ ತಲ್ಲಣಿಸಿ ಗುರುಗಳಲ್ಲಿ ತಿಳಿಸದೆ, ನಲವತ್ತು ದಿನಗಳು ಮುಗಿಯುವದನ್ನೇ ಎದುರು ನೋಡುತ್ತಿದ್ದರಿಂದ ತಮ್ಮಷ್ಟಕ್ಕೆ ತಾವೇ ಸೇವಾ ಮುಗಿಸಿಬಿಟ್ಟರು. ಆದಾಗ್ಯೂ ಸ್ವಲ್ಪ ಕಾಲದಲ್ಲಿ ಈ ಕುಂ. ಸೌ. ಸೀತಾಬಾಯಿಯು ಗರ್ಭಧಾರಣ ಮಾಡಿದಳು. ಆದಾಗ್ಯೂ ಪ್ರಸವ ಆಗುವ ಪರ್ಯಂತರ (ಗರ್ಭಧಾರಣವಾದರೆ ಈಕೆಯು ಬದುಕುವದಿಲ್ಲೆಂಬ) ಆ ಡಾಕ್ಟರ ಮಾತು ಮನಸ್ಸನ್ನು ವ್ಯಗ್ರಗೊಳಿಸುತ್ತಿತ್ತು. ಅಸ್ತು, ಇತ್ತ ನವಮಾಸವು ಪೂರ್ತಿಯಾಗಿ ಕನ್ಯಾರತ್ನವು ಸುಸೂತ್ರವಾಗಿ ಪ್ರಸೂತವಾಯಿತು. ಸುಖ ಪ್ರಸೂತವಾದ ಬಗ್ಗೆ ಸಂತೋಷವು, ಪುತ್ರರತ್ನವಾಗದ ಬಗ್ಗೆ ಕಿಂಚಿತ್ ಅಸಮಾಧಾನವೂ ಈ ನಾರಾಯಣರಾಯನಿಗೆ ಉಂಟಾಗಿ ಈ ವಿಷಯವನ್ನು ಗುರುಗಳಲ್ಲಿ ತಿಳಿಸಿ, ಆ ಕೂಸಿನ ಹೆಸರನ್ನು ಗುರುಗಳಿಂದ ಕೇಳಿಕೊಂಡು ಹೋಗುವಸಲುವಾಗಿ ಆದವಾನಿಗೆ ಬಂದನು.

ಅನುಷ್ಠಾನ ಮಾಡಿದಾರಭ್ಯ ಏತತ್ಪರ್ಯಂತರ ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿ, ಪುತ್ರರತ್ನದ ಬದಲಿ ಕನ್ಯಾರತ್ನವಾಯಿತೆಂದು ಅಸಮಧಾನ ವ್ಯಕ್ತಗೊಳಿಸಿದನು. "ಆಗಲೇ ಇನ್ನು ಸ್ವಲ್ಪ ಕಾಲ ಅನುಷ್ಠಾನ ಮಾಡಲು ಸ್ವಪ್ನವಾದಾಗ್ಯೂ ಆತುರದಿಂದ ಸೇವಾ ಮುಗಿಸಿಬಿಟ್ಟಿರಿ" ಉಪಾಯವಿಲ್ಲ. ಆದದ್ದಕ್ಕೆ ತೃಪ್ತರಾಗಿರಿ. ಈ ಕನ್ಯಾರತ್ನದಿಂದಲೇ ಉತ್ತರೋತ್ತರಕ್ಕೆ ಕಾರಣವಾಗುವುದು. ಈ ಕೂಸಿಗೆ "ದೇವಯಾಸಿ" ಅಂತ ಹೆಸರಿಡಿರಿ ಎಂದು ಸಮಾಧಾನ ಪಡಿಸಿ ಕಳುಹಿಸಿದರು.

೧೯.ದುಷ್ಟಬಾಧೆ ನಿವಾರಣೆ (ಭೂತಪ್ರೇತಪಿಶಾಚಾದಿಪೀಡಾ ತಸ್ಯ ನ ಜಾಯತೇ)

ಆಮೇಲೆ ಪೇರೂರು ಶ್ರೀ ಗುಂಡೇರಾಯರು ಬಿಜಾಪುರದಿಂದ ಬಂದು 'ಈ ಪ್ರಾರ್ಥದಲ್ಲಿ ನಾನು ಹಾಗು ಡಾಕ್ಟರ ಗೋವಿಂದರಾಯರು ಕೂಡಿ ಬೈಲುಜಾಗ ತೆಗೆದುಕೊಂಡು ಮನೆಗಳನ್ನು ಕಟ್ಟಿಸಿಕೊಂಡು ವಾಸಮಾಡಿಕೊಂಡಾರಭ್ಯ ನನ್ನನ್ನು ಮತ್ತು ಗೋವಿಂದರಾಯನನ್ನು ಒಂದು ಪಿಶಾಚವು ಪೀಡಿಸುತ್ತಿರುವುದಾಗಿ ತಮಗೆ ತಿಳಿದ ವಿಷಯವಾಗಿದೆ. ತತ್ಪರಿಹಾರದ ಸಲುವಾಗಿ ಗೋವಿಂದರಾಯನಿಗೆ ಯಜ್ಞ (ಹೋಮ) ಮಾಡಿ ಅಗ್ನಿಹೋತ್ರ ಇಡುವುದಾಗಿ ಆಜ್ಞಾ ಮಾಡೋಣವಾಗಿತ್ತು. ಇದಕ್ಕೆ ಉತ್ತರಾದಿ ಮಠಾಧೀಶರು ಪ್ರತಿಬಂಧಕರಾಗಿರೋಣದರಿಂದ ಆ ಕಾರ್ಯವು ಸಂಕ್ಷೇಪವಾಗಿದ್ದರಿಂದ ನಮ್ಮನ್ನು ಪೀಡಿಸುತ್ತಿರುವ ಗ್ರಹ ಬಾಧಾದಿಂದ ಮುಕ್ತರಾಗುವ ಮಾರ್ಗ ನಿಂತಿತು. ಅದು ಹೋದರು ಹೋಗಲಿ ಮತ್ತೊಂದು ಉಪಾಯದಿಂದಲಾದರೂ ಪೀಡಾ ಪರಿಹಾರವಾಗುವಂತೆ ವಿಚಾರ ಮಾಡಬೇಕು' ಅಂತ ಪ್ರಾರ್ಥನಾ ಮಾಡಿಕೊಂಡನು. "ಒಳ್ಳೆಯದು" ಅಲ್ಲಿಗೆ ಬಂದು ವಿಚಾರಮಾಡಿ, ಏನು ಮಾಡಿದರೆ ಆ ಗ್ರಹಬಾಧೆ ಪರಿಹಾರವಾಗುವದೋ ಅದನ್ನು ಹೇಳುತ್ತೇವೆ ಅಂತ ಅಭಯ ಪ್ರದಾನ ಮಾಡಿ ಕಳುಹಿಸಿದರು. ಆ ಮಾತಿನ ಪ್ರಕಾರ ಪ್ರಯಾಣಮಾಡಿ ಬಿಜಾಪುರಕ್ಕೆ ಹೊರಟರು. ಅಲ್ಲಿ ಬಂದು ಸಪ್ತಕ ನಿರೀಕ್ಷಿಸಿ "ಈ ಸ್ಥಳವು ದುಷ್ಟ ಗ್ರಹಗಳಿಂದ ಕೂಡಿದೆ" ಸದ್ಯಕ್ಕೆ ಓಡಿಸಿದರೂ ಕಾಲಾಂತರದಲ್ಲಿ ಇವು ಅಥವಾ ಬೇರೆ ಗ್ರಹಗಳು ಬಂದು ಸೇರಿಕೊಂಡು ಪೀಡಿಸುವ ಸಂಭವವುಂಟು. **ಪ್ರಯುಕ್ತ ಈ ಸ್ಥಳದಲ್ಲಿ ಶ್ರೀಪಾದಂಗಳವರ ಬೃಂದಾವನವನ್ನು ಪ್ರತಿಷ್ಠಿಸಿದರೆ ಯಾವ ಕಾಲಕ್ಕೂ ಕ್ರೂರ ಗ್ರಹಗಳ ಬಾಧೆ ಉಂಟಾಗಲಾರದು** ಅಂತ ಯೋಚಿಸಿದರು. ಈ ಮಾತಿಗೆ ಗುಂಡೇರಾಯನು ಒಪ್ಪಿಕೊಂಡನು. ವೃಂದಾವನ ಸ್ಥಾಪಿಸಲೋಸುಗ ತಕ್ಕಂತೆ ಮನೆಯನ್ನು ಪರಿವರ್ತಿಸಿ ಕ್ರೂರ ಗ್ರಹಗಳ ನಾಶಕ್ಕೆ ವ್ಯವಸ್ಥಾ ಮಾಡಲು ನೆಲಮನೆಯಲ್ಲಿಯೇ ಬೃಂದಾವನ ಸ್ಥಾಪನಾ ಮಾಡಬೇಕು. ಅದಕ್ಕಾಗಿ ಪ್ರಶಸ್ತವಾಗಿರುವಂತೆ ಆಲಯವನ್ನು ನಿರ್ಮಿಸಿ ಅಲ್ಲಿಯವರೆಗೆ ಮೆಟ್ಟಲುಗಳನ್ನು ಕಟ್ಟಿಸಬೇಕಾಗುವುದೆಂದು ತಿಳಿಸಿದರು.

"ಸ್ವಾಮಿ! ನಾನು ಸರಕಾರಿ ನೌಕರನಾಗಿರುವುದರಿಂದ ಇಷ್ಟು ಕೆಲಸ ಮುಗಿಯುವವರೆಗೂ ಇಲ್ಲಿರುವಂತಿಲ್ಲ. ಈವರೆಗೂ ರಜೆ ತೆಗೆದುಕೊಂಡಿದ್ದಕ್ಕೆ ರಜ ಮುಗಿದು ಉದ್ಯೋಗದಲ್ಲಿ ಸೇರುವ ದಿನಗಳು ಹತ್ತಿರಬಂದಿವೆ. ಆದ್ದರಿಂದ ನಾನು ಬಾದಾಮಿ ಮಾಮಲೆದಾರ್‌ನಾಗಿ (ತಹಸಿಲ್ದಾರ್) ಚಾರ್ಜು (charge) ತೆಗೆದುಕೊಳ್ಳಬೇಕಾಗಿದೆ. ಪ್ರಯುಕ್ತ, ತಾವು ಇಲ್ಲಿದ್ದು

ತಮ್ಮ ಮನಸ್ಸಿಗೆ ಬಂದಂತೆ ಸ್ಥಲರಚನೆ ಮಾಡಿ ರಾಯರ ವೃಂದಾವನರನ್ನು ಪ್ರತಿಷ್ಠಿಸಿ ನಮ್ಮನ್ನು ಉದ್ಧರಿಸಬೇಕು. ಈ ಕಾರ್ಯಕ್ಕೆ ದ್ರವ್ಯವನ್ನು ಕಳಿಸುತ್ತಾ ಹೋಗುತ್ತೇನೆ'' ಎಂದೆನಲು 'ಹಾಗೆ ಆಗಲಿ' ಅಂತ ಒಪ್ಪಿಗೊಂಡು ಆಲಯ ನಿರ್ಮಿಸಿ ಶ್ರೀ ಮದಾಚಾರ್ಯರ ತಂತ್ರಸಾರ ಸಂಗ್ರಹ ಪ್ರಕಾರ ನಾಲ್ಕಾರು ತಿಂಗಳಲ್ಲಿ ಆಲಯ ಕಟ್ಟಿಸಿ ಕ್ರಿ.ಶ. ೧೯೩೦ ರಲ್ಲಿ ರಾಯರ ವೃಂದಾವನವನ್ನು ಪ್ರತಿಷ್ಠಿಸಿ, ದುಷ್ಟ ಗ್ರಹಬಾಧೆಯನ್ನು ನಿವಾರಿಸಿದರು.

೨೦. ವಿವಾಹನಿಮಿತ್ತ ಅನಿಷ್ಟ ಅಳಿಯಿತು, ಆನಂದವನ ವೃದ್ಧಿಯಾಯಿತು.

ತದನಂತರ ಶ್ರೀಗಳವರು ಬಿಜಾಪುರ ಬಿಟ್ಟು ಆದವಾನಿಗೆ ಬಂದರು. ಈ ಹೊತ್ತಿಗೆ ಆನಂದರಾಯನ ಮಗನಾದ ರಾಘವೇಂದ್ರನು ಕಾಲವಶನಾಗಿದ್ದನು. ಆನಂದರಾಯನು, "ತಮ್ಮ ತಪ್ಪುಗಳೇನಾದರು ಇದ್ದರೆ ಮನ್ನಿಸಿ, ಅನುಗ್ರಹ ಮಾಡಿ ಆನಂದವನಕ್ಕೆ ಬರುವುದಾಗಿ ಶ್ರೀಗಳವರನ್ನು ಪ್ರಾರ್ಥಿಸಿಗೊಂಡನು. ಯದ್ಯಪಿ ಅಪರಾಧವಾದಾಗ್ಯೂ ಸಾಧುಗಳು ದೀನ ವತ್ಸಲರಾದುದರಿಂದ ಅಪರಾಧವನ್ನು ಮನ್ನಿಸಿ ನಾವು ಆನಂದವನಕ್ಕೆ ಸುಮ್ಮನೆ ಬರಲಾರೆವು, ಅಲ್ಲಿ ಏನಾದರೂ ಮಹತ್ಕಾರ್ಯ (ಭಗವಧಾರಾಧನೆ) ಮಾಡುವುದಕ್ಕೆ ನಮಗೆ ಅಭಿಮುಖರಾಗಿ, ಪೂರ್ವದಂತೆ ಮಠ ನಿಮಿತ್ತ ಕಲಾಪಗಳಿಗೆ ಆಸ್ಪದ ಕೊಡದಂತೆ ವರ್ತಿಸುವುದಾದರೆ ಬರುವೆವು'' ಅಂತ ಆಜ್ಞಾ ಮಾಡಿದರು. 'ತಾವು ನಮ್ಮನ್ನು ಯಾವ ಕಾರ್ಯದಲ್ಲಿ ಪ್ರಸಕ್ತರಾಗುವದಕ್ಕೆ ಉತ್ತೇಜನ ಕೊಡುವಿರೋ ಅದಕ್ಕೆ ಬದ್ಧವಾಗಿದ್ದೇನೆ. ಆ ಮಹತ್ಕಾರ್ಯವಾದರು ಯಾವುದೆಂಬುದನ್ನು ನಿರೂಪಿಸೋಣವಾಗಬೇಕು' ಅಂತ ದೀನವಾಣಿಯಿಂದ ಕೇಳಿಕೊಂಡನು. ಅದನ್ನು ಅಲ್ಲಿಗೆ ಬಂದ ನಂತರ ಯೋಚಿಸಿ ತಿಳಿಸುತ್ತೇವೆ ಅಂತ ಅಪ್ಪಣೆ ಕೊಟ್ಟರು. ಈ ರೀತಿ ಇವರು ಪ್ರಸನ್ನರಾದದ್ದು ಮಹಾ ಭಾಗ್ಯವೆಂದೆನಿಸಿ ಮರುಮಾತಾಡದೆ ಆನಂದರಾಯನು ಸಾಷ್ಟಾಂಗ ನಮಸ್ಕರಿಸಿದನು. ಆಗ ಶ್ರೀಗಳವರು ತಮ್ಮ ಹಸ್ತವನ್ನಿಟ್ಟು 'ಇನ್ನು ನೀನು ಗಾಬರಿ ಆಗುವ ಕಾರಣವಿಲ್ಲ, ಆದದ್ದು ಆಗಿಹೋಯಿತು. ಈಶ ಇಚ್ಛೆ; ಉಪಾಯವಿಲ್ಲ.' ಅಂತ ಸಮಾಧಾನ ಪಡಿಸಿದರು. ಫಲ-ಮಂತ್ರಾಕ್ಷತೆಯನ್ನು ಸ್ವೀಕರಿಸಿ ಅಲ್ಲಿಂದ ಸ್ವಗ್ರಾಮವಾದ ರಣವಾಟಲಕ್ಕೆ ಹೋದನು. ಈ ಕಡೆ ಕೋಟಂಕೊಂಡ ಗಾರ್ಲಪಾಡು ರಾಯಾಚಾರ್ಯರಿಗೂ ಆ ವಿವಾಹದ ನಿಮಿತ್ತವಾಗಿ ಅನಿಷ್ಟವಾದ್ದರಿಂದ ಅವರು ಭುವನಪಾಡು ಪ್ರಾಣದೇವರಲ್ಲಿ ಹೋಗಿ ಅನಿಷ್ಟ ಪರಿಹಾರಕ್ಕೆ ಸಕುಟುಂಬ ಸೇವಾ ಮಾಡುತ್ತಿದ್ದರು. "ನನ್ನ ವಿಶೇಷ ಸನ್ನಿಧಾನವಿರುವಲ್ಲಿಗೆ ಹೋಗಿರಿ'' ಅಂತ ಇವರಿಗೆ ಸ್ವಪ್ನವಾಗಲು 'ಮೋತಂಪಲ್ಲಿ' ಎಂಬ ಗ್ರಾಮಕ್ಕೆ ಬಂದರು. ಈ ಗ್ರಾಮದ ಪ್ರಾಣದೇವರು ಪ್ರಸಿದ್ಧಿ ಇರೋಣದರಿಂದ ಪ್ರತಿ ಕುಟುಂಬದವರು ಅದರಂತೆ ಬರುತ್ತಿದ್ದರು. ಅಲ್ಲಿ ಈ ದಂಪತಿಗಳು ಸೇವಾ ಮಾಡುತ್ತಿರುವಾಗ ಇವರಿಗೆ,'ಇಲ್ಲಿಗೇಕೆ ಬಂದೆ!' ಎಂದು ಅಂದಂತಾಯಿತು. ಇವರಿಗೆ ದಿಕ್ಕು ತೋಚದೆ ತಮ್ಮ ಸ್ವಪ್ನವನ್ನು ಆನಂದರಾಯನ ಮುಂದೆ ನಿವೇದಿಸಿಕೊಂಡಾಗ, ಆನಂದರಾಯನು ತನ್ನ ಗುರುಗಳಾದ ಶ್ರೀ ರಘುಪ್ರೇಮ ತೀರ್ಥರಲ್ಲಿಗೆ ಹೋಗಿ ಅನುಗ್ರಹ ಸಂಪಾದಿಸುವುದೇ ಸರಿಯಾದ ಮಾರ್ಗವೆಂದು ತಿಳಿದು ಆ ದಂಪತಿಗಳನ್ನು ಕರೆದುಕೊಂಡು ಆದವಾನಿಗೆ ಬಂದನು. ಶ್ರೀಗಳವರಲ್ಲಿ ತಮ್ಮ ಕಷ್ಟಗಳನ್ನು

ನಿವೇದಿಸಿಗೊಂಡನಂತರ ಸ್ವಲ್ಪ ದಿನಗಳಲ್ಲಿಯೇ ಅವರ ಅನಿಷ್ಟ ಪರಿಹರಿಸಿ ಅನುಗ್ರಹಿಸಿದರು. ಅಷ್ಟರಲ್ಲಿ ಶ್ರೀಗಳವರು ಆನಂದರಾಯನಿಗೆ ಅಭಿವಚನವಿತ್ತಂತೆ ಆನಂದವನಕ್ಕೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಕೃಷ್ಣಾ ನದಿತೀರದ ಬಿಜಾಪುರ ಜಿಲ್ಲೆಯ 'ಕೊರ್ತಿ' ಎಂಬ ಗ್ರಾಮಕ್ಕೆ ಬಂದು ಅಲ್ಲಿದ್ದ **ಗೋವಿಂದಿನ್ನಿ** ಎಂಬ ಪ್ರಸಿದ್ಧ ಪ್ರಾಣದೇವರ ದರ್ಶನ ತೆಗೆದುಕೊಂಡರು. ಇವರ ಹಿಂದೆಯೇ ಬಂದ ರಾಮಾಚಾರ್ಯರು ಮತ್ತು ಅವರ ಕುಟುಂಬ ಶ್ರೀಗಳವರಿಂದ ಫಲ-ಮಂತ್ರಾಕ್ಷತೆ ತೆಗೆದುಕೊಂಡು ತಮ್ಮ ಗ್ರಾಮಕ್ಕೆ ಹೋದರು. ಇತ್ತ ಶ್ರೀಗಳವರು ಕೊರ್ತಿ ಗುರುರಾಯನ ಅತಿಥ್ಯ ಪಡೆದು ಒಂದು ತಿಂಗಳನಂತರ ಆನಂದವನಕ್ಕೆ ಬಂದರು. ನಂತರ ಕೋಟಂಕೊಂಡದಲ್ಲಿದ್ದ ರಾಮಾಚಾರ್ಯರನ್ನು ಕರೆಸಿ "ಆ ನಿಮ್ಮ ಅಪರಾಧದ ಪ್ರಾಯಶ್ಚಿತ್ತಕ್ಕಾಗಿ ನಿಮ್ಮ ಕುಟುಂಬದ ಯಾವದಾಭರಣಗಳನ್ನು ಶ್ರೀ ಬಾದರಾಯಣ ದೇವರಿಗೆ ಸಮರ್ಪಿಸಬೇಕು. ಅಂದರೆ ನಮಗೆ ಆನಂದ" ಅಂತ ಆಜ್ಞಾ ಮಾಡಿದರು. ಅದರಂತೆ ಇವರು ಒಂದು ಡಾಬು (ಸೊಂಟಪಟ್ಟಿ) ಬಿಟ್ಟು ಉಳಿದ ಎಲ್ಲಾ ಚಿನ್ನಾಭರಣಗಳನ್ನು ಶ್ರೀ ಬಾದರಾಯಣ ದೇವರಿಗೆ ಸಮರ್ಪಿಸಿ 'ಶ್ರೀ ಕೃಷ್ಣಾರ್ಪಣಮಸ್ತು' ಅಂದರು. ಆದರೆ ದೈವಸಂಕಲ್ಪವೇ ಬೇರೆ ಆಗಿತ್ತು. ಆ ತೆಗೆದಿಟ್ಟ ಡಾಬು ಕೊಡದೇ ಇದ್ದುದರಿಂದ ವಿಶೇಷ ಹೊಟ್ಟೆನೋವು ಉಂಟಾಗಿ ಅಷ್ಟರಲ್ಲಿಯೇ ಅರ್ಥಮಾಡಿಕೊಂಡು, ಟೊಂಕದಲ್ಲಿದ್ದ ಡಾಬನ್ನು ಸಹ ಬಿಚ್ಚಿ ದೇವರಿಗೆ ಸಮರ್ಪಿಸಿ, ಪರಮಾನುಗ್ರಹಮಾಡಿ ಬಾಧೆಯನ್ನು ಕಡಿಮೆಮಾಡಬೇಕೆಂದು ಕೈಜೋಡಿಸಿ ಆರ್ತರಾಗಿ ಪ್ರಾರ್ಥನಾ ಮಾಡಿಕೊಂಡರು. 'ತಥಾಸ್ತು' ಎಂದು ಅಭಯವಸ್ನಿತ್ತು ಬಾದರಾಯಣ ದೇವರಿಗೆ ಅಲಂಕಾರ ಮಾಡಿದರು. 'ಈ ಮೂರು ದಿವಸ ಯಾರೂ ಈ ಗುಡಿಯನ್ನು ಕಾಯಬಾರದು, ಬಾಗಿಲು ಮುಚ್ಚಬಾರದು' ಎಂದು ಹೇಳಿದರು. ಮೂರು ದಿವಸಗಳಾದನಂತರ ಯಾವತ್ತು ಆಭರಣಗಳನ್ನು ಮಾರಿ ಬಂದ ಹಣದಿಂದ ಗುಡಿಯ ಮುಂಭಾಗಕ್ಕೆ ಶಿಲಾಮಂಟಪ ಹಾಕಿಸಿದರು ಹಾಗೂ ರಥವನ್ನು ನಿರ್ಮಿಸಿದರು. ಪ್ರಾಕಾರ ಸುತ್ತಲು ನಾನಾ ವಿಧವಾದ ಫಲ-ಪುಷ್ಪಗಳ ಮರಗಳನ್ನು ನೆಟ್ಟು ವೃದ್ಧಿಗೊಳಿಸಿ 'ಆನಂದವನ' ಎಂಬ ಹೆಸರನ್ನು ಸಾರ್ಥಕಗೊಳಿಸಿದರು.

೨೧. ಶಾಸ್ತ್ರಗ್ರಂಥಪಾರಾಯಣ ನಡೆಸಿ ಶಾಂತಿಸ್ಥಾಪಕರಾದರು.

ಆನಂದರಾಯನು ಶ್ರೀಗಳವರನ್ನು ಪ್ರಸನ್ನೀಕರಿಸಿಕೊಂಡಾಗ ಇವರು ಆನಂದವನದಲ್ಲಿ ಮಾಡುವ ಮಹತ್ಕಾರ್ಯವನ್ನು ಅಲ್ಲಿ ನಿರೂಪಿಸುವೆವೆಂದು ಮಾಡಿದ ಆಜ್ಞಾವನ್ನು ಯಾವ ಸಮಯದಲ್ಲಿ ಏನು ಆಜ್ಞಾ ಮಾಡುವರೊ ಎಂದು ನಿರೀಕ್ಷಿಸುತ್ತಿದ್ದನು. ಆ ಪ್ರಸಂಗ ಈಗ ಒದಗಿದ್ದರಿಂದ ಶ್ರೀ ಮಧ್ವಸಿದ್ಧಾಂತ ಶಾಸ್ತ್ರ ಗ್ರಂಥಗಳ ಪಾರಾಯಣ, ತಥಾ ಪ್ರವಚನ, ತಥಾ ವೇದ ಪಾರಾಯಣ ಹಾಗೂ ಹೋಮ ಮಾಡುವದೆಂದು ಯೋಚಿಸಿದರು. ಇದರಿಂದ ಜಗತ್ತಿನ ಅನಿಷ್ಟ ಪರಿಹಾರಕ್ಕೆ ಕಾರಣವಾಗುವುದೆಂದು ಜ್ಞಾನಸತ್ರ ಯಾಗಕ್ಕೆ ಸಿದ್ಧನಾಗಲು ಆನಂದರಾಯನಿಗೆ ಆಜ್ಞಾಮಾಡಿದರು. ಇದಕ್ಕೆ ಬೇಕಾಗುವ ಸಲಕರಣೆಗಳು ಸಿದ್ಧಪಡಿಸಲು ಉದ್ಯುಕ್ತನಾದನು. ಅನೇಕ ಸ್ಥಳಗಳಿಗೆ ಆಹ್ವಾನ ಪತ್ರಿಕೆಗಳು ಅತಿ ಶೀಘ್ರದಲ್ಲಿಯೇ ತಲುಪುವಂತೆ ಮಾಡಿದನು. ಅದರಿಂದ ಅನೇಕ ಜನರು ಬಂದು ಸಪ್ತಕ ಉತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು.

ಈ ಮಧ್ಯ ನಮ್ಮ (ಮುತ್ತಿಗಿ ಸ್ವಾಮಿ ರಾಯಾಚಾರ್ಯರ) ಜೇಷ್ಠ ಪುತ್ರನಾದ ಶ್ರೀನಿವಾಸನಿಗೆ, ವಿಜಾಪುರ ಜಿಲ್ಲೆಯ ಕೊಲ್ಹಾರ ಹನುಮಂತರಾಯನ ಪುತ್ರನಾದ ರಾಘವೇಂದ್ರನಿಗೆ ಉಪನಯನವನ್ನು ಹಾಗೂ ಆನಂದರಾಯನ ಅಣ್ಣ ಭೀಮರಾಯನ ಮಗಳಾದ ಕುಂ. ಸೌ. ಗಂಗಾಬಾಯಿಯನ್ನು ಸೋದರಳಿಯನಾದ ಉಟಕೂರ ಜಯರಾಜನಿಗೆ ಕೊಟ್ಟು ವಿವಾಹ ಮಾಡಿಸಿದರು. ಈ ಯಾಗ ಪ್ರಭಾವದಿಂದ ಆ ಕಾಲದಲ್ಲಿ ಬ್ರಿಟೀಷರ ಸರಕಾರಕ್ಕೂ ಕಾಂಗ್ರೆಸ್ಸಿಗೂ ಪ್ರಜ್ವಲಿಸುತ್ತಿರುವ ಕಲಾಪವು ಇರ್ವಿನ್ ಗಾಂಧಿ ಪ್ಯಾಕ್ಟ *(By the efforts of Sri Tej Bhadur Sapru and M.R. Jayakar, Gandhi Irwin Pact being signed in March 1931, by which all political prisonors were released and Civil Disobedience Movement called off for peace)* ರೂಪವನ್ನು ತಾಳಿ ದೇಶದಲ್ಲಿ ಶಾಂತಿ ಉಂಟಾಯಿತು. ಈ ವಿಷಯ ಇಲ್ಲಿ ಅನಾವಶ್ಯಕವಾದರೂ ಆಧುನಿಕ ದೃಷ್ಟಿಯಿಂದ ಆದ ಶಾಂತಿಯನ್ನು ಕಡೆಗಣಿಸಲಾಗದು. ಉತ್ಸವವಾದ ಮೇಲೆ ಕೆಲವು ದಿನಗಳು ಅಲ್ಲಿಯೇ ವಾಸಮಾಡಿ ನಂತರ ಆದವಾನಿಗೆ ಬಂದು ಸೇರಿದರು.

೨೨. ರಂಗರಾಯನ ಮಗಳಿಗೆ ಮದುವೆಯಾಯಿತು.

ಈ ಊರಲ್ಲಿ ನಬಾತೆ ರಂಗರಾಯನೆಂಬ ಆಗರ್ಭ ಶ್ರೀಮಂತನು (ಈ ಮನೆತನದವರು ಶ್ರೀ ರಾಯರ ಮಠದಿಂದ ಮುದ್ರಾ ಸ್ವೀಕರಿಸಿದ್ದಾರೆ) ಇಲ್ಲಿ ಸೇವಾಕ್ಕೆ ಬಂದನು. ಕಾರಣ ತನ್ನ ಮಗಳಾದ ಕುಂ.ಸೌ. ನಾಗಮಣಿ ಎಂಬ ಕನ್ಯೆಯು ಪ್ರಬುದ್ಧಳಾಗಿದ್ದರಿಂದ ತಕ್ಕ ವರವನ್ನು ಗೊತ್ತು ಮಾಡಿ ಲಗ್ನ ಮಾಡುವ ಪ್ರಯತ್ನ ಎಷ್ಟೋ ಸಲ ಮಾಡಿದಾಗ್ಯೂ ಸಫಲವಾಗಿರಲಿಲ್ಲ. ಯಾಕೆಂದರೆ ಆ ಕನ್ಯೆಗೆ ಗದ್ದದ ಮೇಲೆ (ಕೆಳತುಟಿಯ ಕೆಳ ಭಾಗದಲ್ಲಿ) ದೊಡ್ಡದಾದ ಶ್ವೇತವರ್ಣದ ಮಚ್ಚೆ ಇದ್ದು, ಅದು ಬಿಳಿ ಕುಷ್ಠದಂತೆ ಭಾಸವಾಗೋಣದರಿಂದ ಬಂದ ವರಗಳೆಲ್ಲವು ವಿಮುಖರಾಗಿ ಹೋಗುತ್ತಿದ್ದರು. 'ಇದು ಕುಷ್ಠರೋಗವಲ್ಲ. ಹುಟ್ಟಿದಾರಭ್ಯ ಇದ್ದ ಬಿಳಿಮಚ್ಚೆ ಇದ್ದು, ವೃದ್ಧಿಹೊಂದದೆ ಇದ್ದಷ್ಟೇ ಇದೆ. ಕುಷ್ಠರೋಗವಾಗಿದ್ದರೆ ವೃದ್ಧಿ ಹೊಂದುತ್ತಿತ್ತು ಮತ್ತು ಅನ್ಯತ್ರವೂ ವ್ಯಾಪಿಸುತ್ತಿತ್ತು' ಅಂತ ಕನ್ಯೆಯ ತಂದೆ ತಾಯಿಗಳು ನೋಡಲು ಬಂದ ವರದವರಿಗೆ ಎಷ್ಟು ಹೇಳಿದಾಗ್ಯೂ ಅವರುಗಳು ಒಡಂಬಡುತ್ತಿರಲಿಲ್ಲ. ಈರೀತಿ ಆಗೋಣದರಿಂದ ಆ ರಂಗರಾಯನು ದೊಡ್ಡ ಚಿಂತೆಗೊಳಗಾಗಿ ಇವರಲ್ಲಿ ಬಂದು ಖಿನ್ನನಾಗಿ ತನ್ನ ವೃತ್ತಾಂತವನೆಲ್ಲವನ್ನು ನಿವೇದನೆ ಮಾಡಿಕೊಂಡನು. 'ಇದನ್ನು ಪರಿಹರಿಸಿ ಉದ್ಧಾರಮಾಡಬೇಕೆಂದು' ಪರಿಪರಿಯಾಗಿ ಬೇಡಿಕೊಂಡನು. ಈ ಚರಿತ್ರನಾಯಕರು 'ಮಂತ್ರಾಲಯ ಪ್ರಭುಗಳಲ್ಲಿ ಹೋಗಿ ಸೇವಾ ಮಾಡಿರಿ' ಎಂದು ಹೇಳಲು ಅದರಂತೆ ಆ ದಂಪತಿಗಳು ಮಂತ್ರಾಲಯಕ್ಕೆ ಹೋಗಿ ಸೇವಾ ಮಾಡಲು, ಮೂರೇ ದಿನಗಳಲ್ಲಿ 'ರಘುಪ್ರೇಮ ತೀರ್ಥರ ಬಳಿಗೆ ಹೋಗಿರಿ' ಅಂತ ಸ್ವಪ್ನವಾಗಲು ಮತ್ತೆ ಆ ದಂಪತಿಗಳು ಬಂದು ಶ್ರೀಗಳವರ

ಪಾದಗಳನ್ನು ಘಟ್ಟಿಯಾಗಿ ಹಿಡಿದು ಉದ್ಧಾರಮಾಡಬೇಕೆಂದು ಪ್ರಲಾಪಿಸತೊಡಗಿದರು. ಶ್ರೀಗಳವರು ರಂಗರಾಯನ ತಲೆಯ ಮೇಲೆ ತಮ್ಮ ಹಸ್ತವನ್ನಿಟ್ಟು ಸಂತೈಸಿ "ನಾವು ಹೇಳಿದಂತೆ ಸೇವಾ ಮಾಡುವುದಾದರೆ ಪ್ರಯೋಜನವಾಗುತ್ತದೆ" ಅಂತ ಹೇಳಿದರು. ರಂಗರಾಯನು 'ಎಂಥ ಕಷ್ಟವಾದ ಸೇವಾವಾದರೂ ಅಡ್ಡಿಯಿಲ್ಲ. ನಾವು ಮಾಡಲು ಸಿದ್ಧರಿದ್ದೇವೆ, ವಿವಾಹವಾದರೆ ಸಾಕು' ಅಂತ ನುಡಿದನು. ಮರುದಿವಸ ಸಕುಟುಂಬ ಆ ಕನ್ಯಾ ಸಹಿತ ಬಂದನು. ಅದಿನ ಸೇವೆ ಹೇಳಿದಂತೆ, ಪ್ರತಿದಿವಸ ಒಪ್ಪತ್ತು ಭೋಜನ, ಕೆಲವು ದಿನಗಳು ಕಳೆದನಂತರ ಒಪ್ಪತ್ತೆ ಆಕಳಹಾಲು, ಹಣ್ಣು ತೆಗೆದುಕೊಂಡು ಸೇವಾ ಮಾಡಲು ಸೂಚಿಸಿದರು. ಕನ್ಯೆಯಾದ ನಾಗಮ್ಮಳೆ ಬಹು ಶ್ರದ್ಧೆಯಿಂದ ಸೇವಾ ಮಾಡಿದ್ದರಿಂದ ಇಷ್ಟಾರ್ಥ ಸಿದ್ಧಿಸಿ ಆಕೆಗೆ ಶೀಘ್ರದಲ್ಲಿಯೇ ವಿವಾಹವಾಗಿ ಪುತ್ರಪ್ರಾಪ್ತಿ ಆಯಿತು. ಕೂಸಿಗೆ ಶ್ರೀಗಳವರೇ 'ಪ್ರಕಾಶ' ಎಂದು ನಾಮಕರಣ ಮಾಡಿ ಆ ದಂಪತಿಗಳಿಗೆ ಪ್ರತಿವರ್ಷ ತಪ್ಪದಲೆ ಶ್ರೀ ರಾಮದೇವರ ಗುಡಿಗೆ ಬಂದು ಗಣಪತಿ ತಂದುಕೊಡಲು ಆಜ್ಞಾ ಮಾಡಿದರು. ತದನಂತರ ಇವರ ಕುಟುಂಬದವರೆಲ್ಲ ಶಿಷ್ಯರಾದರು. ರಂಗರಾಯನ ಮಕ್ಕಳಾದ ಶ್ರೀನಿವಾಸರಾಯ, ವಸಂತರಾಯ ಹಾಗೂ ಅನಂತರಾಯನ ಮಕ್ಕಳಾದ ರಾಜರಾಯ, ವಿಠಲರಾಯ ಚಿಕ್ಕವರಾದಾಗ್ಯೂ ವಿಶೇಷ ಭಕ್ತಿಯಿಂದ ಸೇವೆ ಮಾಡುತ್ತ ಇವರಲ್ಲಿ ಶಿಷ್ಯತ್ವವನ್ನು ವಹಿಸಿದರು. ಅಂದಿನಿಂದ ಇಂದಿನವರೆಗೆ ಎಡೆಬಿಡದೆ ನಡೆದುಕೊಳ್ಳುತ್ತಿದ್ದಾರೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

೨೩. ಭಾನುಮತಿಗೆ ಅಭಯವಿತ್ತರು.

ಇತ್ತ ಆನಂದರಾಯನ ತಮ್ಮನಾದ ಜಠಾರ ನಾರಾಯಣರಾಯನ ಮಗಳಾದ ಕುಂ.ಸೌ. ರಾಧಾಬಾಯಿಯನ್ನು "**ಭಾನುಮತಿ**" ಎಂಬ ಒಂದು ಬ್ರಹ್ಮ ರಾಕ್ಷಸವು ವಿಪರೀತವಾಗಿ ಪೀಡಿಸುತ್ತಿತ್ತು. ಈ ರಾಧಾಬಾಯಿಯು ಕೃಷ್ಣಾನದಿ ತೀರದ 'ಗುಡೆ ಬಲ್ಲೂರು' ಎಂಬ ಸ್ಥಳದಲ್ಲಿ ತನ್ನ ಗಂಡನಮನೆಯಲ್ಲಿ ಇರುತ್ತಿದ್ದಳು. ಅಲ್ಲಿ ಸ್ವಯಂ ವ್ಯಕ್ತ ವೆಂಕಟೇಶ ದೇವರಲ್ಲಿ ಸೇವಾ ಮಾಡುತ್ತಿದ್ದಳು. ಈ ರಾಕ್ಷಸವು ಸಾಮಾನ್ಯವಾಗಿರದೆ ಪ್ರತಿ ಪೌರ್ಣಿಮಾ, ಅಮಾವಾಸ್ಯೆಗಳಲ್ಲಿ ವಿಶೇಷ ಬಾಧೆಯನ್ನು ಕೊಡುತ್ತಿತ್ತು. ಈ ರಾಕ್ಷಸವು ರಾಧಾಬಾಯಿ ಮೈಮೇಲೆ ಆವಿರ್ಭೂತವಾದಾಗ 'ಸಂಚಾರ ಮಾಡಿರಿ; ಸಂಚಾರ ಮಾಡರಿ' ಅಂತ ಹೇಳುತ್ತ ಮನೆಯಲ್ಲಿ ಪೆಟ್ಟಿಗೆಯಲ್ಲಿಟ್ಟಿದ್ದ ದ್ರವ್ಯ, (ಬೀಗ ಹಾಕಿದ್ದರೂ) ಕೋಲಮೇಲೆ ಹಾಕಿದ್ದ ಸೀರೆ, ಬಟ್ಟೆ ವಗೈರೆ ಹೊರಗೆ ಚೆಲ್ಲೋಣ, ಹೊರಗಿನ ಕಲ್ಲುಗಳನ್ನು ಮನೆಯಲ್ಲಿ ಹಾಕೋಣ, ಅಡಿಗೆ ಪದಾರ್ಥಗಳನ್ನೆಲ್ಲವನ್ನು ಮನೆತುಂಬ ಚೆಲ್ಲೋಣ, ಅಹಿತ ಪದಾರ್ಥಗಳನ್ನು ಮನೆಯಲ್ಲಿ ತರೋಣ; ಇಂತಹ ಎಷ್ಟೋ ಅಮಾನುಷ ಕಾರ್ಯಗಳನ್ನು ಮಾಡುತ್ತಿದ್ದಳು. ಈ ಉಪದ್ರವವನ್ನು ತಾಳಲಾರದೆ ಈ ರಾಧಾಬಾಯಿಯನ್ನು ವೆಂಕಟೇಶ ದೇವರಲ್ಲಿ ಸೇವಾ ಮಾಡಿಸುತ್ತಿದ್ದರು. ಆದಾಗ್ಯೂ ಸೇವಾ ಪ್ರಯೋಜನವಾಗಲಿಲ್ಲ. ಒಂದು ಅಮಾವಾಸ್ಯೆ ಆವಿಷ್ಟಳಾಗಿ, "ನಾನು ಸಾಮಾನ್ಯ ಪಿಶಾಚಿಯಲ್ಲ; ನನ್ನ ಹೆಸರು "**ಭಾನುಮತಿ**" ನಾನು ಶಾಪವಶಾತ್ ಬಂದವಳು.

ನಾನು ಮಂತ್ರಕ್ಕೆ ವಶಳು, ಯಾರು ನನ್ನನ್ನು ವಶಮಾಡಿಕೊಂಡು ಯಾರ ಮೇಲೆ ನನ್ನನ್ನು ಪ್ರಯೋಗಿಸುವರೋ, ಅವರನ್ನು ನಾನು ನಾನಾ ಪರಿ ಪೀಡಿಸುವಳು; ನನ್ನಿಂದ ಕೊಡಲ್ಪಡುತ್ತಿರುವ ಬಾಧೆಯಿಂದ ಮುಕ್ತರಾಗಬೇಕಾದರೆ, ಈಗ ಪ್ರಯೋಗ ಮಾಡುವ ಮಾಂತ್ರಿಕನಿಗಿಂತಲೂ ಹೆಚ್ಚು ಸಾತ್ವಿಕ ಮಂತ್ರಜ್ಞನಿಂದ ಮಂತ್ರಗಳನ್ನು ಪ್ರಯೋಗಿಸೋಣ ಅಥವಾ ಒಬ್ಬ ಮಹನೀಯರ ಅನುಗ್ರಹ ಸಂಪಾದಿಸೋಣ, ಈ ಎರಡು ಮಾರ್ಗಗಳಿಂದ ಮಾತ್ರ ನಾನು ಮುಕ್ತಳಾಗುವೆ. ನೀವು ಇದರಿಂದ ನನ್ನ ಜನ್ಮದ ಉದ್ಧೃತಿಗೂ ಕಾರಣವಾಗುವಿರಿ. ನಾನು ಸ್ವರೂಪದಿಂದ ಯೋಗ್ಯಳಿದ್ದು ಪಿಶಾಚಿ ಗಣಕ್ಕೆ ಸೇರಿದವಳಾದ್ದರಿಂದ ನಿಮಗೆ ತಿಳಿಯಲೋಸುಗ ಆವಿಷ್ಟಳಾಗಿ ಹೇಳುತ್ತಿರುವೆನು, ಸಂಚಾರ ಮಾಡಿರಿ ಎಂದು. ಏಕೆಂದರೆ ಹಿಂದಕ್ಕೆ ಒಬ್ಬ ಮಹನೀಯರನ್ನು ಕಂಡಿದ್ದೆ. ಈಗ ಅವರನ್ನು ಹುಡುಕಬೇಕಾಗಿದೆ" ಅಂತ ಹೇಳಿಕೊಂಡಳು. ಹಾಗಾದರೆ ಪೂರ್ವದಲ್ಲಿ 'ನೀನು ಯಾರು?' ಅಂತ ಅಲ್ಲಿದ್ದವರು ಪ್ರಶ್ನೆ ಮಾಡಿದರು. "ನಾನು ಪೂರ್ವದಲ್ಲಿ ಒಬ್ಬ ಮಹನೀಯರ ಶಾಪದಿಂದ ಈ ಜನ್ಮವನ್ನು ತಾಳಿದವಳಾಗಿದ್ದೇನೆ. ನನಗೆ ಈಗ ಈ ಜನ್ಮ ಪರಿಹಾರಕ್ಕಾಗಿ ಸಂಚರಿಸುತ್ತಾ ಇರುವೆನು. ನನಗೆ ಈ ಜನ್ಮಬಂದು ಸುಮಾರು ಆರು ನೂರು ವರ್ಷಗಳಾಗಿವೆ. ಆಗ್ಗೆ ಒಬ್ಬ ಮಹನೀಯರು ಸಿಕ್ಕಿದ್ದರು. ಅವರನ್ನು ಕಂಡು ಪರಿಹಾರಕ್ಕಾಗಿ ಅಂಗಲಾಚಿದೆ, ಆದರೆ ಅವರು 'ಇದು ಸಮಯವಲ್ಲ' ನಡಿ ಎಂದು ಝುಬರಿಸಿಗೊಂಡರು. ಆದಾಗ್ಯೂ ನಾನು ಅವರ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ದೀನಳಾಗಿ ಈ ರಾಕ್ಷಸ ಜನ್ಮದಿಂದ ವಿಮುಕ್ತಳನ್ನಾಗಿ ಮಾಡಬೇಕೆಂದು ಬೇಡಿಕೊಂಡೆನು. ದಯಾಶೀಲರಾದ ಅವರು ಶಾಂತರಾಗಿ "ನನ್ನ ಇನ್ನೊಂದು ಜನ್ಮದಲ್ಲಿ ನಿನ್ನನ್ನು ಉದ್ಧರಿಸುವೆವು. ಅಲ್ಲಿವರೆಗೂ ನೀನು ಸಂಚಾರ ಮಾಡುತ್ತ ಕಾಲ ನಿರೀಕ್ಷಣೆಮಾಡು" ಎಂದು ಹೇಳಿದ್ದರು. ಆ ಪ್ರಕಾರವಾಗಿಯೇ ಕಾದುಕೊಂಡು ೫೦ ವರ್ಷಗಳ ಹಿಂದೆ ಒಬ್ಬ ಮಹನೀಯರನ್ನು (ಅವರಂತೆ ನನಗೆ ಕಂಡದ್ದರಿಂದ) ತಡೆದು, ಅವರ ಪಾದಗಳನ್ನು ಗಟ್ಟಿಯಾಗಿ ಹಿಡಿದು, 'ನಿಮಗಾಗಿ ಕಾಯುತ್ತಿದ್ದೇನೆ ಈಗಲಾದರೂ ದಯತೋರಬೇಕೆಂದು ಬೇಡಿಕೊಂಡೆನು. ಆಗಲೂ ಸಹ ಹಿಂದಿನವರಂತೆ 'ಇದು ಸಮಯವಲ್ಲ' ನಡಿ ಎಂದು ಝುಬರಿಸಿದರು. ಆಗ ನನಗೆ ಅವರೇ ಇವರು ನಿಸ್ಸಂದೇಹವಿಲ್ಲವೆಂದು ತಿಳಿದು ಹಿಂದಕ್ಕೆ ತಾವೇ ಅಭಯ ಕೊಟ್ಟಿರುವಿರಿ. ಈಗ ಉದ್ಧರಿಸಬೇಕೆಂದು ಕೇಳಿಕೊಂಡೆನು. 'ಇನ್ನು ಕೆಲವೇ ವರ್ಷಗಳು ತಡೆದುಕೋ, ಹರಿವಾಯುಗಳ ಆಜ್ಞಾ ಪ್ರಕಾರ ಉದ್ಧರಿಸುವೆವು' ಎಂದು ಅಭಯಕೊಟ್ಟಿದ್ದರಿಂದ ನಾನು ಸಂಚರಿಸುತ್ತಿರುವಾಗ ಒಬ್ಬ ಮಾಂತ್ರಿಕನು ಕ್ಷುದ್ರ ಮಂತ್ರಗಳಿಂದ ನನ್ನನ್ನು ವಶಪಡಿಸಿಕೊಂಡು ನಾನಾ ಬಾಧೆಗಳನ್ನು ಕೊಡುತ್ತಿರುವನು. ಆ ಬಾಧೆಗಳನ್ನು ನಾನು ತಾಳಲಾರದೆ ಯಾರಮೇಲಾದರೂ ಆವಿಷ್ಟಳಾಗಿ ಅವರಿಗೆ ಬಾಧೆಗಳನ್ನು ಕೊಡುತ್ತಿರುವೆನು. ತದಾರಭ್ಯ ಸಂಚರಿಸುತ್ತ ನಿಮ್ಮಲ್ಲಿಗೆ ಬಂದೆನು. ಸ್ವಲ್ಪ ದಿನಗಳಲ್ಲಿ ಆ ಮಹನೀಯರನ್ನು ಕಂಡೆ. ಪ್ರಯುಕ್ತ ನೀವು ಆಲಸ್ಯಮಾಡದೆ ಆ ಮಹನೀಯರಲ್ಲಿಗೆ ಹೋಗಿ ಸೇವಾಸಕ್ತರಾದರೆ ಈ ಪೀಡೆಯಿಂದ ಇಬ್ಬರಿಗೂ ವಿಮುಕ್ತಿ ಸಿಗುತ್ತದೆ" ಎಂದು ತನ್ನ ವೃತ್ತಾಂತವನ್ನೆಲ್ಲ ಹೇಳಿಕೊಂಡಳು. ಈ ಮಾತುಗಳನ್ನು ಕೇಳಿದ ಆನಂದರಾಯನು ಆದವಾನಿಯಲ್ಲಿರುವ ಈ ಚರಿತ್ರ ನಾಯಕರಾದ

ಶ್ರೀಗಳವರಲ್ಲಿಗೆ ಈ ರಾಧಾಬಾಯಿಯನ್ನು ಕರೆದುಕೊಂಡುಬಂದು ವೃತ್ತಾಂತವನ್ನೆಲ್ಲವನ್ನು ನಿವೇದನ ಮಾಡಿಕೊಂಡು, 'ಉದ್ಧಾರ ಮಾಡಬೇಕೆಂದು' ಸಾಷ್ಟಾಂಗ ನಮಸ್ಕರಿಸಿದನು. ಕೂಡಲೆ ಆ ಗ್ರಹವು ರಾಧಾಬಾಯಿಯ ಮೇಲೆ ಆವಿಷ್ಟಳಾಗಿ, 'ಐವತ್ತು ವರ್ಷಗಳ ಹಿಂದೆ ಅರಣ್ಯದಲ್ಲಿ ಮದ್ದಾನೆಯಂತೆ ಸಂಚರಿಸುತ್ತಿರುವಾಗ ಕಂಡ ಅವರೇ ಈ ಮಹನೀಯರು! ಸಂದೇಹವಿಲ್ಲ ಎಂದು ತಿಳಿದು, ಈ ದೀನಳನ್ನು ಉದ್ಧಾರ ಮಾಡಬೇಕು ನಾನು ಯಾರಗೋಸ್ಕರ ಸಂಚಾರ ಮಾಡುತ್ತಿದ್ದೇನೊ, ಆ ಮೂರ್ತಿಯೇ ಪ್ರತ್ಯಕ್ಷವಾಯಿತು, ಕೈಲಾದಷ್ಟು ಸೇವ ಮಾಡಲು ಸಿದ್ಧಳಿದ್ದೇನೆ; ಆಜ್ಞಾ ಮಾಡಿ ನನ್ನಿಂದ ಸೇವಾ ತೆಗೆದುಕೊಂಡು ಈ ಬಂಧನದಿಂದ ವಿಮುಕ್ತಗೊಳಿಸಬೇಕು' ಎಂದು ಪಾದಗಳನ್ನು ಬಿಗಿಹಿಡಿದಳು. (ಈ ಸ್ತ್ರೀಯು, ಚರಿತ್ರ ನಾಯಕರು ಹಿಂದಕ್ಕೆ ಪಾದಾಚಾರಿಗಳಾಗಿ ಭೂಸಾಳವರ್ಧಾ ಮಾರ್ಗತ್ವೇನ ಸಂಚರಿಸುತ್ತಿರುವಾಗ, ಅರಣ್ಯದಲ್ಲಿ ಗೋಚರಿಸಿದ ಸ್ತ್ರೀಯೇ ಎಂಬುದು ವಾಚಕರ ಲಕ್ಷ್ಯದಲ್ಲಿರಲು ಸಾಕು. ದ್ವಿತೀಯಾಧ್ಯಾಯದ ಆ ಮಾತುಗಳೇ ಇಲ್ಲಿ ಪುನಃ ವಿವರಿಸಲಾಗಿದೆ) ಒಳ್ಳೇದು 'ನೀನು ನಮಗೆ ಯಾವ ಯಾವ ಸೇವೆ ಮಾಡಬಲ್ಲೆ? ನಮಗೆ ತಿಳಿದಂತೆ ನಿನಗೆ ಬರುವುದು ಪರಪೀಡೆ ಒಂದೇ ಅಲ್ಲವೆ? ಇದು ನಮಗೆ ಬೇಡ; ಅಂದಮೇಲೆ ನಿನ್ನಿಂದ ನಾವು ಯಾವ ಸೇವೆ ತೆಗೆದುಕೊಳ್ಳಬೇಕು?' ಅಂತ ಹಸನ್ಮುಖದಿಂದ ಕೇಳಿದರು. 'ನಿಜ! ನನ್ನಲ್ಲಿರುವ ಸಾಮರ್ಥ್ಯವೇ ಇದು. ಈ ವಿಷಯ ಅನುಚಿತವೆಂದು ನನಗೂ ಗೋಚರಿಸುತ್ತದೆ; ಆದರೆ ತಮ್ಮಲ್ಲಿ ದ್ರೋಹ ಮಾಡುವ ಯಾರೇ ಇರಲಿ ಅವರನ್ನು ಪೀಡಿಸಿ ಅವರನ್ನು ತಮ್ಮ ಪಾದಗಳಿಗೆ ಬೀಳಿಸುವಂತೆ ಮಾಡಬಲ್ಲೆ, ಆಜ್ಞಾ ಮಾಡೋಣವಾಗಲಿ' ಅಂತ ಗಂಭೀರವಾಣಿಯಿಂದ ನುಡಿದಳು. "ಇದು ಈ ನಿನ್ನ ಜನ್ಮದ ಸ್ವಭಾವವೇ ಸರಿ; ಇರಲಿ, ಈ ರೀತಿ ಸೇವೆ ತೆಗೆದುಕೊಳ್ಳುವುದು ನಿನ್ನಿಂದ ನಮಗೆ ಬೇಡ; ಅದು ಯೋಗ್ಯವು ಮತ್ತು ಶ್ರೇಯಸ್ಕರವು ಅಲ್ಲ. ಆದ್ದರಿಂದ ನಮ್ಮಲ್ಲಿ ಬರುವ ಅತಿಥಿಗಳಿಗೆ ಪೂಜಾರೂಪ ಸೇವಾ ಮಾಡಿಕೊಂಡಿರು. ಅಂದರೆ ಅವರುಗಳಿಗೆ ಸ್ನಾನಕ್ಕೆ ನೀರು ಹಾಕೋಣ, ಬಟ್ಟೆಗಳನ್ನು (ಸ್ವಚ್ಛ) ಒಗೆಯೋಣ, ಬಾವಿಯಿಂದ ನೀರು ಸೇದೋಣ, ಕೊಳಾಯಿಯಿಂದ ನೀರು ತರೋಣ, ಗಿಡಗಳಿಗೆ ನೀರು ಹಾಕೋಣ, ಪೂಜಾಕ್ಕೆ ಹೂ ತೆಗೆಯೋಣ ಇತ್ಯಾದಿ ಸೇವಾ ಮಾಡುತ್ತ ವಾಸಮಾಡು, ಯಾರಿಗೂ ಬಾಧೆ ಕೊಡಬ್ಯಾಡ, ನಿನ್ನನ್ನು ಕರೆದಕೂಡಲೆ ಆವಿಷ್ಟಳಾಗಿ ಬರಬೇಕು. ಅಲ್ಲಿಯವರೆಗೆ ಬರಬಾರದು, ನಿನ್ನ ಕೆಲಸವಾದ ನಂತರ ನಿನ್ನ ಸ್ಥಳವಾದ ಈ ಬೇವಿನ ಗಿಡದಲ್ಲಿ ವಾಸಮಾಡುತ್ತಿರಬೇಕು, ನೀನು ಯಾವಾಗಲೂ ಆವಿಷ್ಟಳಾಗಿರಬಾರದು, ಸೇವಾ ಮಾಡುವಾಗ್ಗೆ ಮಾತ್ರ ನೀನು ರೂಪ ತಾಳಬೇಕು. ಯಾವದೇ ಗಿಡ, ಮರ, ಹೂ, ಹಣ್ಣುಗಳನ್ನು ಹಾಳುಮಾಡಬಾರದು. ಮನಸ್ಸಿಗೆ ಬಂದಂತೆ ನಮ್ಮಲ್ಲಿ ವರ್ತಿಸಬಾರದು. ನಾವು ಹೇಳಿದಂತೆ ಕೇಳಬೇಕು. ಅಂದರೆ ಕೆಲವು ಕಾಲದ ನಂತರ ಹರಿವಾಯುಗಳ ಆಜ್ಞಾನುಸಾರ ನಮ್ಮಿಂದ ನಿನಗೆ ಪೀಡಾ ಪರಿಹಾರವಾಗುವದು" ಎಂದು ಅಭಯಪ್ರಧಾನ ಮಾಡಿದರು. 'ಧನ್ಯಳಾದೆ' ಅಂದು ಮನೆಯಲ್ಲಿ ಹೋಗಿ ಬೇಕಾದಷ್ಟು ಬಾವಿ ನೀರನ್ನು ಕ್ಷಣಮಾತ್ರದಲ್ಲಿ ಸೇದಿಹಾಕಿದಳು. ಈ ರೀತಿ ನಾಲ್ಕಾರು ದಿನಗಳಾದ ಮೇಲೆ 'ನಾಳೆ

ಪೌರ್ಣಿಮಾ ಬರುವುದಷ್ಟೆ! ಆ ದಿನ ನನ್ನನ್ನು ವಶಮಾಡಿಕೊಂಡಿದ್ದ ಮಾಂತ್ರಿಕನು ಜಪಿಸೋಣದರಿಂದ ಆಕರ್ಷಿತಳಾಗಿ ಪೂರ್ವದಂತೆ ಹಿಂಸಾ ಕಾರ್ಯದಲ್ಲಿ ನಿಯೋಜಿಸುವನು. ಆದ್ದರಿಂದ, ಅವನು ನನ್ನನ್ನು ವಶಪಡಿಸಿಕೊಳ್ಳದಂತೆ ಮಾಡಬೇಕು. ಅಂದರೆ, ನಾನು ಇಲ್ಲಿ ಬಂದದ್ದಕ್ಕೆ ಸಾರ್ಥಕವಾಗುವುದೆಂದಳು'. 'ಒಳ್ಳೇದು! ಹಾಂಗಾದರೆ ಈ ದಿನದಿಂದ ಮೂರು ದಿನಗಳು ಈ ನಮ್ಮ ಸ್ಥಳದ ಆವರಣವನ್ನು ದಾಟದೆ, ನಾವು ತೋರಿಸಿದ ಬೇಪಿನ ವೃಕ್ಷದಲ್ಲಿ ಆಶ್ರಯವನ್ನು ಮಾಡಿಕೊಂಡು ವಾಸಮಾಡು, ಅಂದರೆ ಆ ಮಾಂತ್ರಿಕನ ಮಂತ್ರ ಪ್ರಭಾವವು ನಿನ್ನ ಮೇಲೆ ನಡೆಯಲಾರದು.' ಅಂತ ಉತ್ತರ ಕೊಟ್ಟರು.

೨೪. ಮಾಂತ್ರಕನ ಆರ್ಭಟದ ಆಟ ಅಡಗಿತು.

ಮರುದಿವಸ ಪೌರ್ಣಿಮಾ ಅರ್ಧರಾತ್ರಿಯಲ್ಲಿ ಪುನಃ ಆ ರಾಧಾಬಾಯಿಯ ದೇಹದ ಮೇಲೆ ಅವಿಷ್ಟಳಾಗಿ ಸ್ವಾಮಿ! ಈಗ! ನನಗೆ ಆ ಮಾಂತ್ರಿಕನ ಹತ್ತಿರ ಹೋಗಬೇಕೆನಿಸುತ್ತದೆ; ಏನು ಮಾಡಲಿ? ಅಂತ ಕೇಳಿದಳು. ಈ ರೀತಿ ನಿನಗೆ ಅನಿಸಿದ್ದು ಆ ಮಾಂತ್ರಿಕನ ಕ್ಷುಲ್ಲಕ ಪ್ರಭಾವವಲ್ಲದೆ ಬೇರಿಲ್ಲ. ಸಂಸ್ಕಾರದ ವ್ಯಾಮೋಹವು ಇದ್ದ ಪ್ರಯುಕ್ತ ನೀನು ಈಗ ಮನೋನಿಗ್ರಹ ಮಾಡಲೇಬೇಕು. ಇಲ್ಲವಾದಲ್ಲಿ ಬಹುಕಾಲ ಸಂಸ್ಕಾರಬಲದಿಂದ ಇಂದ್ರಿಯ ಯಾವತ್ತು ಮರು ಪ್ರವೃತ್ತಿ ಹೊಂದುವದರಲ್ಲಿಯೇ ಧಾವಿಸುವವು. ಅವುಗಳನ್ನು ಮನೋನಿಗ್ರಹದ ಲಗಾಮದಿಂದ ಬಿಗಿ ಹಿಡಿಯದಿದ್ದರೆ ದುಷ್ಟ ವಿಷಯಗಳ ಕಡೆ ಧಾವಿಸುವವು. ಇದಕ್ಕೆ ಅವಕಾಶವೇ ಕೊಡಬಾರದು ಇತ್ಯಾದಿ ಉಪದೇಶ ಮಾಡಹತ್ತಿದರು. ಈ ರೀತಿ ಮೂರು ರಾತ್ರಿಗಳು ವೈರಾಗ್ಯ ಪಟ್ಟವಳಂತೆ ಅವರ ಹಿತೋಪದೇಶ ಕೇಳಿದ್ದರಿಂದ, ಆ ತನ್ನ ದುಷ್ಕಾರ್ಯ ಪ್ರವೃತ್ತಿ ರೂಪದ ಮನಸ್ಸನ್ನು ಹಿಂತೆಗೆದವಳಾಗಿ ಆಜ್ಞಾಮೇರೆಗೆ ಅತಿಥಿ ಸೌಕರ್ಯದಲ್ಲೇ ಆಸಕ್ತಳಾದಳು.

ಅತ್ತ ಮಾಂತ್ರಿಕನು ಕ್ಷುಲ್ಲಕ ಮಂತ್ರವನ್ನು ನಾನಾ ರೀತಿಯಿಂದ ಜಪಿಸಿದಾಗ್ಯೂ ಈ ಭಾನುಮತಿಯು ತನ್ನಲ್ಲಿ ಬಾರದಿರುವದರಿಂದ ಚಿಂತಾಗ್ರಸ್ತನಾಗಲು ಆಕ್ರೋಶದಿಂದ ಮುಂದೆ ಬರುವ ಅಮವಾಸ್ಯೆ ದಿನ ಇದಕ್ಕೂ ಅಧಿಕ ಮಂತ್ರವನ್ನು ಜಪಿಸುವುದಲ್ಲದೆ ಅದಕ್ಕೆ ತಕ್ಕ ಬಲಿಕೊಟ್ಟು ಗ್ರಹ ಪರಿವಾರಕ್ಕೆ ತೃಪ್ತಿ ಪಡಿಸಿ, ಈ ಭಾನುಮತಿಯ ಅನ್ವೇಷಣಾರ್ಥ ಕಳಿಸುವ ಸಂಕಲ್ಪ ಮಾಡಿ ಆ ಪ್ರಕಾರ ಆ ದಿನ ಶೋಧನಾರ್ಥವಾಗಿ ಅವರುಗಳ ಪೈಕಿ 'ಲಕ್ಷ್ಮಣ' ನೆಂಬ ಒಂದು ಗಂಡು ಗ್ರಹವನ್ನು ಕಳಿಸಿದನು. ಅವನು ಅಲ್ಲಲ್ಲಿ ಅನ್ವೇಷಣಮಾಡಿ (ಪತ್ತೆಹಚ್ಚಿ) ಈ ಭಾನುಮತಿಯಿದ್ದಲ್ಲಿಗೆ ಬಂದನು. 'ನಿನಗಾಗಿ ನಮ್ಮ ಯಜಮಾನನು ಪರಿಪರಿಯಾಗಿ ವಿಚಾರಿಸುತ್ತಿದ್ದಾನೆ. ಈ ದಿನ ನಮಗೆಲ್ಲಾ ಬೇಕಾದಷ್ಟು ಆಹಾರ ಬಲಿಗಳನ್ನು ಕೊಟ್ಟು ಸಂತೋಷಪಡಿಸಿದನು. ನೀನು ಇಲ್ಲದಿರುವುದರಿಂದ ನಮಗೆಲ್ಲಾ ಅಸಮಾಧಾನವಾಗಿತ್ತು. ಮತ್ತು ಆ ನಮ್ಮ ಯಜಮಾನನು ಕುಪಿತನಾಗಿ ಸಿಟ್ಟುಗೊಂಡು ಆರ್ಭಟಿಸುತ್ತ, "ಇನ್ನೂ ಭಾನುಮತಿ ಬರಲಿಲ್ಲ, ಎಲ್ಲಿ ಅಡಗಿರುವಳು, ಯಾರು ಅವಳನ್ನು ವಶಪಡಿಸಿಗೊಂಡಿದ್ದಾರೆ? ನೋಡಿ ಬನ್ನಿರಿ" ಎಂದ ಆಜ್ಞಾ ಮೇರೆಗೆ ನಾನು ನಿನ್ನನ್ನು ಹುಡುಕಿಕೊಂಡು ಬಂದಿರುವೆನು. ಈಗ

ನೀನು ಬಾರದಿದ್ದರೆ ನಮ್ಮ ಯಜಮಾನನು ಬೇತಾಳಕ್ಕೆ ತಿಳಿಸುವನೆಂದು ಬೆದರಿಸುತ್ತಿರುವನು. ಇದರಿಂದ ಅವನು ನಮಗೆ ಇನ್ನಷ್ಟು ಕಷ್ಟ ಕೊಡುವನು. ಆದ್ದರಿಂದ ನೀನು ಈಗ ನನ್ನ ಸಂಗಡ ಬರುವಂತವಳಾಗು' ಅಂತ ಬೇಡಿಕೊಂಡನು. 'ನಾನು ಬರುವುದಿಲ್ಲ ಯಾಕೆಂದರೆ ಆ ಯಜಮಾನನು ಕೊಡುವ ತಿಸಿಸಿಗೆ ಆಶೆ ಪಟ್ಟು, ಅವನ ಆಜ್ಞಾದಂತೆ ಪರಹಿಂಸಾ ಮಾಡುತ್ತ ಉನ್ಮತ್ತವಾಗಿರೋದು ನನಗೆ ಬೇಡವಾಗಿದೆ. ಇಲ್ಲಿ ನಾನು ಸುಖದಿಂದಿದ್ದೀನಿ. ಬೇಕಾದರೆ ನೀನು ಸಹ ನನ್ನ ಜೊತೆಯಲ್ಲಿದ್ದು ಈ ಮಹನೀಯರ ಉಪದೇಶ ಹೊಂದಿ ಶಾಪವಶಾತ್ ಬಂದ ಬಾಧೆಯನ್ನು ಕಳೆದು ಕೊಂಡು. ಈ ಜನ್ಮದಿಂದ ಇಬ್ಬರು ಮುಕ್ತರಾಗೋಣ' ಎಂದು ಇವನಿಗೆ ಉಪದೇಶ ಮಾಡಿದಳು. ಸರಿ ಎಂದು ಆ ಲಕ್ಷ್ಮಣನು ಸಹ ಇರಹತ್ತಿದನು. (ಆದಿನ ನಾನು, ರಾವುಜಿ, ಶ್ರೀಗಳವರು ಒಂದು ಬದಿಯಲ್ಲಿ ಹಾಗು ಮತ್ತೊಂದು ಮೂಲೆಯಲ್ಲಿ ಭಾನುಮತಿಯು ಮಲಗಿದ್ದಳು. ಆ ರಾತ್ರಿ ವೇಳೆಯಲ್ಲಿ ಭಾನುಮತಿ ಆಡುವ ಮಾತುಗಳು ನಮಗೆ ಕೇಳಹತ್ತಿದವು, ಎದ್ದು ಕುಳಿತೆವು. ಆ ಹೊತ್ತಿಗಾಗಲೇ ಶ್ರೀಗಳವರು ಎದ್ದು ಕುಳಿತು ಅವಳು ಚಡಪಡಿಸುವ ಮಾತುಗಳನ್ನು ಕೇಳುತ್ತಿದ್ದರು. ಅದರಂತೆ ನಾವು ಕೇಳಲು ಸಂಜ್ಞಾ ಮಾಡಿದರು. ಅದರಂತೆ ಕೇಳಿದೆವು. ಅದನ್ನು ಓದುಗರಿಗೆ ಆಶ್ಚರ್ಯವಾಗುವಂತೆ ಬರೆಯಲಾಗಿದೆ) ನಾಲ್ಕಾರು ದಿನಗಳಲ್ಲಿ ಆ ಭಾನುಮತಿಯ ಉಪದೇಶದಂತೆ ಲಕ್ಷ್ಮಣನು ಭಾನುಮತಿಯೊಡನೆ ಕೂಡಿಕೊಂಡಿದ್ದು "ಈ ನನ್ನ ಜನ್ಮದಿಂದ ಉದ್ಧಾರಮಾಡಬೇಕು, ಕೈಲಾದಷ್ಟು ಭಾನುಮತಿಯಂತೆ ನಾನು ಸೇವಾ ಮಾಡಲು ಸಿದ್ಧನಿದ್ದೇನೆ. ಆಜ್ಞಾ ಮಾಡಿ" ಎಂದು ಗಂಡು ಧ್ವನಿಯಿಂದ ಕೇಳಿಕೊಂಡನು. ಪುರುಷರಂತೆ ನಡೆ, ನುಡಿಗಳ ಮಾಡಹತ್ತಿದನು. 'ನಾನು ಪುರುಷ ಗ್ರಹ, ಸ್ತ್ರೀಯ ದೇಹದಲ್ಲಿದ್ದಾಗ್ಯೂ ಸೀರೆ, ಕುಪ್ಪಸ, ಬಳೆ, ಕುಂಕುಮ, ಹೆರಳು, ಹೂ ಮುಡಿತ ಇತ್ಯಾದಿ ಸ್ತ್ರೀಯರು ಧರಿಸುವಂತಹ ಪದಾರ್ಥಗಳು, ನನಗೆ ಸರಿಹೋಗುವುದಿಲ್ಲ. ಆದ್ದರಿಂದ ಧೋತ್ರ ಉಟ್ಟುಕೊಂಡು ಸೇವಾ ಮಾಡುತ್ತೇನೆ' ಅಂತ ಒಂದು ವಾರದವರೆಗೂ ಅದರಂತೆ ಧೋತ್ರ ಅಂಗಾರಕ್ಷತೆ ಜಡೆಯನ್ನು ಮುಡಿಯಾಗಿ ಕಟ್ಟಿ, ಕುಪ್ಪಸ ಧರಿಸಿ, ಸೇವಾ ಮಾಡಹತ್ತಿದನು. ಇದರಿಂದ ಕೆಲವರಿಗೆ ನಗು, ತಮಾಷೆ ಆಗಿತ್ತು. ಶ್ರೀಗಳವರಿಗೆ ಸಿಟ್ಟು ಬಂದು 'ನೀನು ಈ ರೀತಿ ಹುಚ್ಚು, ಹುಚ್ಚು, ವೇಷ ಹಾಕತಕ್ಕದ್ದಲ್ಲ. ಬೇಕಾದರೆ, ಅಂಗಾರ, ಅಕ್ಷತೆ, ಧರಿಸು. ಯದ್ಯಪಿ ಪುರುಷಗ್ರಹವಾದಾಗ್ಯೂ ನಾಟಕದಲ್ಲಿ ಪುರುಷನಾದವನು ಸ್ತ್ರೀಯರ ವೇಷಧಾರಣ ಮಾಡಿದರೆ ನಡೆ, ನುಡಿಗಳು, ವಸ್ತ್ರ ಧರಿಸಿ ಪಾತ್ರಗಳು ಸ್ತ್ರೀಯರಂತೆ ನಟನ ಮಾಡುವುದಿಲ್ಲವೇ? ಅದರಂತೆ ನೀನು ನಟಿಸಬೇಕು' ಅಂತ ಝುಬರಿಸಿದರು. 'ಒಳ್ಳೇದು' ಅಂತ ಒಪ್ಪಿಗೊಂಡು, ಅದಿನ ಭಾನುಮತಿ ಮಾಡತಕ್ಕ ಸೇವೆ ಆ ಲಕ್ಷ್ಮಣ ಗ್ರಹವೇ ಮಾಡಿತು. ಮರುದಿವಸದಿಂದ ರಾಧಾಬಾಯಿಯಲ್ಲಿ ಭಾನುಮತಿ ಮತ್ತು ಲಕ್ಷ್ಮಣನು ಅವಿಷ್ಟರಾಗಿ ಸೇವಾ ಮಾಡಹತ್ತಿದರು. ಈ ಭಾನುಮತಿ ಆವಿಷ್ಟಳಾದಾಗ ರೆಪ್ಪೆಗಳು ಬಡಿಯದೆ ಏಕರೀತ್ಯಾ ಕಣ್ಣುಗಳು ತೆಗೆದಿರೋಣ, ವಿನಯಾದಿ ಗುಣಗಳಿಂದ ಸಂಪನ್ನಳಾಗಿ ಗಾಂಭೀರ್ಯದಿಂದ ವರ್ತಿಸೋಣ, ಈ ಲಕ್ಷ್ಮಣನು ಅವಿಷ್ಟನಾದಾಗ ಕಿಂಚಿತ್ ಕಾಲ ಕಣ್ಣುಗಳು ತೆಗೆದಿರೋಣ, ಸ್ವಲ್ಪ ಕಾಲ ಮುಚ್ಚಿರೋಣ,

ಪುರುಷರಂತೆ ಚೇಷ್ಟೆ ಮಾಡೋಣ, ಈ ರೀತಿ ವ್ಯತ್ಯಾಸವಾಗಿ ಗುರ್ತಿಸಬರುವಂತಿತ್ತು. ಆಮೇಲೆ ಪೌರ್ಣಿಮಾ ಸಮೀಪಿಸಿದಂತೆ ಈ ಲಕ್ಷ್ಮಣನಿಗೆ ಆ ಮಾಂತ್ರಿಕನಲ್ಲಿ ಹೋಗುವ ಲವಲವಿಕೆಯುಂಟಾಯಿತು. ಈ ಭಾನುಮತಿ ಲಕ್ಷ್ಮಣನಿಗೆ ಎಷ್ಟು ಉಪದೇಶ ಮಾಡಿದಾಗ್ಯೂ ಅವನು ಕೇಳದೆ ಪೌರ್ಣಿಮಾ ರಾತ್ರಿ ಮಾಂತ್ರಿಕನಲ್ಲಿ ಹೋಗಿ ಇಲ್ಲಿಯ ವೃತ್ತಾಂತವನ್ನೆಲ್ಲಾ ತಿಳಿಸಿದನು. ಆ ಮಾಂತ್ರಿಕನು ಆಕರ್ಷಕವಾಗುವಂತೆ ಪ್ರಯತ್ನವನ್ನೆಲ್ಲವನ್ನು ಒಟ್ಟುಗೂಡಿಸಿ, 'ನೀವೆಲ್ಲರು ಹೋಗಿ ಆ ಭಾನುಮತಿಯನ್ನು ಹಿಡಿದು ತರಲಿಕ್ಕೇಬೇಕು ಅಂತ ಕಟ್ಟಪ್ಪಣೆ ಮಾಡಿ, ಹೆಚ್ಚು ಬಲಿಯನ್ನು ಕೊಟ್ಟು ತೃಪ್ತಿ ಪಡಿಸಿ' ಕಳಿಸಿದನು. ಆ ಗ್ರಹಗಳೆಲ್ಲ ರಭಸದಿಮದ ಬರುವುದನ್ನು ನೋಡಿ ಭಾನುಮತಿ (ಸಮರ್ಥಳಾದಾಗ್ಯೂ) ಭೀತಿಗೊಂಡು ಆ ಬರುವ ಗ್ರಹಗಳ ವಿಚಾರವನ್ನೆಲ್ಲವನ್ನು ಗುರುಗಳಲ್ಲಿ ಅರಿಕೆಮಾಡಿಕೊಂಡಳು. 'ಒಳ್ಳೇದು' ಈ ಆವರಣದಲ್ಲಿ ಅವುಗಳಿಗೆ ಒಳಗೆ ಪ್ರವೇಶವಾಗಲಿಕ್ಕೆ ಅವಕಾಶವಾಗದಂತೆ ಮಾಡುತ್ತೇವೆ, ನೀನು ಮಾತ್ರ ಈ ಆವರಣವನ್ನು ಬಿಟ್ಟು ಹೋಗಬೇಡ. ಆ ಗ್ರಹಗಳು ಏನೇ ಆಸೆ ತೋರಿಸಿದರೂ, ಭಯಪಡಿಸಿದರೂ, ಮೋಸಹೋಗದೆ, ಈ ಬೇವಿನ ವೃಕ್ಷದಲ್ಲಿಯೇ ವಾಸಮಾಡು; ಅಥವಾ ನಮ್ಮ ಸನ್ನಿಧಾನದಲ್ಲಿಯೇ ವಾಸಮಾಡಿಕೊಂಡಿರು' ಅಂತ ಆಶ್ವಾಸನಕೊಟ್ಟರು. ಅದರಂತೆ ಈ ಭಾನುಮತಿ ವರ್ತಿಸಲು ಆ ಗ್ರಹಗಳ ಪ್ರಭಾವವು ಏನು ನಡೆಯದೆ ಹಿಂತಿರುಗಿ ಹೋದವು. ಇದರಿಂದ ಈ ಮಾಂತ್ರಿಕನಿಗೆ ವಿಶೇಷ ಸಿಟ್ಟು ಬಂದು ಈ ಭಾನುಮತಿಯನ್ನು ವಿಶೇಷ ಬಾಧಪಡಿಸಲು ನಿಶ್ಚಯಿಸಿ ತನ್ನ ಗುರುವಾದ ಬೇತಾಳನಿಗೆ ತಕ್ಕ ಬಲಿಯನ್ನು ಕೊಟ್ಟು ಈ ಭಾನುಮತಿಯನ್ನು ಹಿಡಿದು ತಂದು ತಕ್ಕ ಶಿಕ್ಷಾ ಮಾಡುವುದಾಗಿ ಕೇಳಿಕೊಂಡನು. ಇದಕ್ಕೆ ಅನುಸರಿಸಿ ಬೇತಾಳನು ತನ್ನ ಅನೇಕ ಪರಿವಾರದೊಂದಿಗೆ ಈ ಭಾನುಮತಿಯನ್ನು ಹಿಡಿದುಕೊಂಡು ಹೋಗಲು ಬಂದನು. ಆದರೆ, ಶ್ರೀಗಳವರು ಆ ದುಷ್ಟ ಗ್ರಹಗಳನ್ನು ಇವಳ ಹತ್ತಿರ ಬಾರದಂತೆ ಮಾಡಿ, ರಾಧಾಬಾಯಿಯನ್ನು ತಮ್ಮ ಸಂಗಡ ಬಿಜಾಪುರಕ್ಕೆ ಕರೆದುಕೊಂಡು ಹೋದರು.

ಬೇತಾಳನಿಗೆ ಭಾನುಮತಿ ಕಾಣದಿರಲು ಅವಳನ್ನು ಪತ್ತೆ ಹಚ್ಚಲು ತನ್ನ ಪರಿವಾರವನ್ನು ದಿಕ್ಕು ದಿಕ್ಕುಗಳಿಗೆ ಕಳುಹಿಸಿದನು. ಆ ಗ್ರಹಗಳೆಲ್ಲ ಶೋಧಿಸತೊಡಗಿ ಅವುಗಳ ಪೈಕಿ ಕೆಲವು ಇವರು ಇದ್ದ ಸ್ಥಳವನ್ನು ಪತ್ತೆ ಹಚ್ಚಿಕೊಂಡು ಬಂದವು. ಆದರೆ ಶ್ರೀಗಳವರು ಶ್ರೀ ರಾಯರ ಬೃಂದಾವನ ಸನ್ನಿಧಾನದಲ್ಲಿ ಇವಳನ್ನು ಇಟ್ಟಿದ್ದರು. ಈ ಗ್ರಹಗಳು ತಾವು ಕಂಡ ಭಾನುಮತಿಯನ್ನು ಮತ್ತು ಆ ಸ್ಥಳದ ವಿಷಯವನ್ನು ತಮ್ಮ ಗುರುಗಳಿಗೆ ಹೇಳಿಕೊಂಡವು. ಅದೇನೆಂದರೆ, 'ಆ ಸ್ಥಳದ ಹತ್ತಿರ ಹೋಗಲು ನಮಗೆ ಆಗಲಿಲ್ಲ, ಅವಳು ಹೊರಗೆ ಬಂದಿದ್ದರೆ ಅವಳನ್ನು ಹೊತ್ತುಕೊಂಡಾದರೂ ಬರುತ್ತಿದ್ದೆವು' ಅಂತ ಆ ಗ್ರಹಗಳು ತಮ್ಮ ಬೇತಾಳನಿಗೆ ಹೇಳಿದವು. "ಸರಿ! ನಾನೇ ಹೋಗುವೆನು" ಅಂತ ಆ ಬೇತಾಳವು ರಭಸದಿಂದ ಬರುವುದನ್ನು ನೋಡಿದ ಭಾನುಮತಿ 'ಸ್ವಾಮಿ! ದೊಡ್ಡಗುರು ಬೇತಾಳನು ಬರುತ್ತಿರುವನು' ಎಂದು ಚೀರಿದಳು. 'ಬರಲಿ, ಬರಲಿ;' ಎಂದು ಶ್ರೀಗಳವರು ತಮ್ಮ ಶಾಟಿಯನ್ನು ಅವಳ ಮುಂದೆ ಹಾಕಿ ಕೈಯಲ್ಲಿದ್ದ ಮಂತ್ರಾಕ್ಷತೆಯನ್ನು ಹಾಕಿದರು. ತಕ್ಷಣವೇ 'ಅಯ್ಯೋ! ಸತ್ತೆ, ಮೈಯಲ್ಲಿ ಉರಿ, ಉರಿ'

ಎಂದು ಶಬ್ದ ಮಾಡುವುದು ನಮಗೆ ಕೇಳಿದಾಗ ಒಳಗೆ ಇದ್ದವರು ಹೊರಗೆ ಬಂದು ನೋಡಿದಾಗ ಆಕೆಯ ಮುಂದೆ ಇದ್ದ ಶಾಟಿ, ಮಂತ್ರಾಕ್ಷತೆ ಚೆಲ್ಲಿರುವುದನ್ನು ನೋಡಿ ಆಕೆಯನ್ನು ವಿಚಾರಿಸಿದಾಗ "ಅವನಿಗೆ ಹಾಗೆ ಆಗಬೇಕು, ಹೀ, ಹೀ," ಎಂದು ನಗುತ್ತಿದ್ದಳು. ನಮಗೆ ಏನು ತಿಳಿಯದಿದ್ದರಿಂದ ನಂತರ ಶ್ರೀಗಳವರು ನಡೆದುದೆಲ್ಲವನ್ನೂ ವಿವರವಾಗಿ ತಿಳಿಸಿದರು. ಇಲ್ಲಿ ಶ್ರೀಗಳವರು ಮೊಟ್ಟ ಮೊದಲು ತಮ್ಮ ಶಾಟಿ ಮತ್ತು ಮಂತ್ರಾಕ್ಷತೆ ಮಹಿಮೆಯನ್ನು ತೋರಿಸಿದರು.

೨೫. ಭಾನುಮತಿಯ ಭಯಾನಕಚೇಷ್ಟೆ ನಿಗ್ರಹಿಸಿದರು.

ಇತ್ತ ಶ್ರೀಗಳವರು ತಮ್ಮ ಪರಿವಾರದೊಡನೆ ಬಿಜಾಪುರವನ್ನು ಬಿಟ್ಟು ಒಂದು ದಿನ ಬಾಗಲಕೋಟೆಗೆ ಹೋದರು. ಈ ಸಂದರ್ಭದಲ್ಲಿ ಈ ಭಾನುಮತಿ ತನ್ನ ಸ್ವಭಾವಕ್ಕನುಸರಿಸಿ ಚೇಷ್ಟಾ ಮಾಡುತ್ತಾ ಹುಬ್ಬಿನಿಂದ ಮೂಗಿನ ತುದಿಯವರೆವಿಗೂ ಒಂದು ದೊಡ್ಡ ಪಿನ್ನು (Safty Pin) ಸೂಜಿ ತರಿಸಿದಳು. ಇದರಿಂದ ರಾಧಾಬಾಯಿಗೆ ವಿಶೇಷ ವೇದನೆ ಆಯಿತು. ಇದನ್ನು ನೋಡಿ ಅಲ್ಲಿಯವರೆಲ್ಲ ಗಾಬರಿಯಾಗಿ ಅಲ್ಲದ್ದ ಡಾಕ್ಟರು ಮಂಗಳವೇಢೆ ಗೋವಿಂದರಾವು ಆ ಸೂಜಿಯನ್ನು ತೆಗೆಯಲು ಯತ್ನಿಸಿ, ಒಂದು ಚಿಮಟದಿಂದ ಆ ಸೂಜಿಯನ್ನು ಜಗ್ಗುವುದರಲ್ಲಿ ಆ ಸೂಜಿಯು ಸ್ವಲ್ಪ ಮುರಿಯಿತು. ಈ ರೀತಿ ಆಗೋಣದರಿಂದ ಶಸ್ತ್ರಪ್ರಯೋಗ (Operation) ಮಾಡಿ ತೆಗೆಯುವ ಯೋಚನೆ ಮಾಡುತ್ತಿರಲು ಭಾನುಮತಿಯು ನಗುತ್ತ "ನೀವು ಎಂತ ಹುಚ್ಚರಿದ್ದೀರಿ! ಈ ಸೂಜಿಯನ್ನು ಹೇಗೆ ಚುಚ್ಚಿದ್ದೇನೆಂದು ಯೋಚಿಸದೆ ತೆಗೆಯುವ ಪ್ರಯತ್ನದಲ್ಲಿದ್ದೀರಿ. ಸಾಮಾನ್ಯ ಗುಂಡುಸೂಜಿ (Ball Pin) ಆಗಿದ್ದರೆ ನೆಟ್ಟಿರಬಹುದೆಂದು ಕಲ್ಪಿಸಬಹುದು. ಕದಾಚಿತ್ ನೀವು ಶಸ್ತ್ರಪ್ರಯೋಗ ಮಾಡಿದರೆ, ಆ ಸೂಜಿಯನ್ನು ತತ್ಕಾಲ ಸ್ಥಳಾಂತರ ಮಾಡುತ್ತೇನೆ; ಅಲ್ಲಿ ನೀವು ಕೊಯ್ಯುವುದಾದರೆ ಆ ಸ್ಥಳದಿಂದ ಮತ್ತೆ ಬೇರ್ಪಡಿಸುತ್ತೇನೆ (ಸರಿಸುತ್ತೇನೆ). ಈ ರೀತಿ ಸರಿಸಿದಂತೆಲ್ಲ ನೀವು ಕೊಯ್ಯುತ್ತಾ ಹೋದರೆ ದೇಹಾದ್ಯಂತ ಕೊಯ್ಯಬೇಕಾಗುತ್ತದೆ. ಆದಾಗ್ಯೂ ಆ ಸೂಜಿಯನ್ನು ನಿಮ್ಮ ಕೈಗೆ ಸಿಗದಂತೆ ಮಾಡಬಲ್ಲೆ. ಆದ್ದರಿಂದ ಶಸ್ತ್ರಚಿಕಿತ್ಸಾ ಹವ್ಯಾಸಕ್ಕೆ ಹೋಗದೆ ಉಪಯಾಂತರದಿಂದ ತೆಗೆಯುವ ಪ್ರಯತ್ನ ಮಾಡಿರಿ" ಅಂತ ನಗುತ್ತಾ ನುಡಿದಳು. ರಾಧಾಬಾಯಿಯ ಮೇಲೆ ಆವಿಷ್ಟಳಾದ ಆ ಭಾನುಮತಿಯನ್ನು ಕುರಿತು "ನಾವು ಮಾನವರಾದ ಪ್ರಯುಕ್ತ ನಮ್ಮ ಬುದ್ಧಿಗನುಸರಿಸಿ ಯೋಚಿಸಿದೆವು, ಇದು ಕ್ಷುದ್ರ ಮಾಂತ್ರಿಕ ಶಕ್ತಿ ಕಾರ್ಯವಾದ್ದರಿಂದ ಈ ಸೂಜಿ ತೆಗೆಯುವ ಉಪಾಯ ನಮಗೆ ತೋರುವುದಿಲ್ಲವಾದ್ದರಿಂದ, ನೀನೆ ಆ ಸೂಜಿಯನ್ನು ಹೊರಕ್ಕೆ ಬರುವಂತೆ ನಿನ್ನ ಶಕ್ತಿ ಪ್ರದರ್ಶಿಸು, ನೋಡಿ ನಾವು ಆನಂದಪಡುವೆವು ಮತ್ತು ನೀನು ಈ ಸೂಜಿಯನ್ನು ಹೇಗೆ ಸೇರಿಸಿದ್ದು ನೋಡಿಲ್ಲವಾದ್ದರಿಂದ ಈಗ ತೆಗೆಯುವುದಾದರೂ ತೋರಿಸು. ನಿನ್ನ ಮಾಂತ್ರಿಕ ಶಕ್ತಿಯ ಕೌತುಕವನ್ನಾದರೂ ನೋಡುವವರಾಗುತ್ತೇವೆ" ಅಂತ ಗೋವಿಂದರಾವು ಅಂದಿದ್ದಕ್ಕೆ, ತನ್ನ ಅದ್ಭುತ ಶಕ್ತಿಯನ್ನು ಕೊಂಡಾಡಿದರೆಂಬ ಹಿಗ್ಗಿನಿಂದ ತಲೆ ಝಾಡಿಸಿದಳು. ಈ ರೀತಿ ತಲೆ

ಝಾಡಿಸೋಣದರಿಂದ ಆ ಮಂಡು ಸೂಜಿ ಕೆಳಗೆ ಬಿದ್ದಿದ್ದಲ್ಲದೆ ಇನ್ನೂ ಕೆಲವು ವಸ್ತುಗಳು ಬಿದ್ದವು. ಇದನ್ನು ನೋಡಿದವರೆಲ್ಲ ಚಕಿತರಾದರು ಮತ್ತು ಭಾನುಮತಿಯ ದುಷ್ಟ ಸ್ವಭಾವಕ್ಕನುಸರಿಸಿ ಯಾವಾಗ ಯಾವ ರೀತಿ ವಿಪತ್ತು ತಂದೊಡ್ಡುವಳೊ ಎಂದು ಭೀತಿಗೊಂಡು ಕೂಡಲೆ 'ತಿರಿಗಿ ಬರುವುದಾಗಿ' (Return Immediately) ಶ್ರೀಗಳವರಿಗೆ ಬಾಗಲಕೋಟೆಗೆ ತಾರು ಮಾಡಿದರು. ಶ್ರೀಗಳವರು ತಾರು ನೋಡಿದ ಕೂಡಲೆ ಭಾನುಮತಿ ಏನಾದರೂ ಚೇಷ್ಟೆ ಮಾಡಿರಬೇಕೆಂದು ಭಾವಿಸಿ ಅಲ್ಲಿಂದ ವಿಜಾಪುರಕ್ಕೆ ಬಂದರು. ಇಲ್ಲಿ ನಡೆದ ವೃತ್ತಾಂತವನ್ನೆಲ್ಲಾ ಗೋವಿಂದರಾಯರ ಮುಖಾಂತರ ಕೇಳಿ ಕುಪಿತರಾಗಿ 'ಹೇ ಭಾನುಮತಿ ನಿನ್ನಲ್ಲಿ ಅದ್ಭುತ ಶಕ್ತಿಯಿದೆ ಎಂದು ಸೊಕ್ಕು ಇದೆ, ಈಗ ನಮ್ಮ ಶಕ್ತಿಯಿಂದ ನಿನ್ನನ್ನು ಬಂಧಿಸುತ್ತೇವೆ. ಅದರಿಂದ ನೀನು ಬಿಡಿಸಿಕೊಂಡು ಹೋಗು ನೋಡೋಣ; ನಾವಿಲ್ಲವೆಂದು ಅವರನ್ನೆಲ್ಲ ಮತ್ತು ರಾಧಾಬಾಯಿಯನ್ನು ಪೀಡಿಸುತ್ತಿರುವೆಯಾ? ಹಾಗಾದರೆ ಈ ಜನ್ಮ ಇನ್ನೂ ನಿನಗೆ ಬೇಕಾಗಿದೆಯಲ್ಲ? ಹೋಗು; ಎಂದು ಝುಬರಿಸಿ ಧ್ಯಾನ ಪರರಾದರು. ತದನಂತರ ಭಾನುಮತಿ 'ಅಪರಾಧವನ್ನು ಕ್ಷಮಿಸಬೇಕು. ನೀವೇ ಈ ರೀತಿ ಬೈದು ಕಳಿಸಿದರೆ ನನ್ನ ಗತಿಯೇನು? ಇಲ್ಲಿಗೆ ಈ ದುಷ್ಟ ಜಡದೇಹ ಸಾಕಾಗಿದೆ. ಆಗ ಆರುನೂರು ವರ್ಷಗಳ ಹಿಂದೆ ನಿಮ್ಮ ಕಾಲು ಹಿಡಿದಾಗ ಇದೇ ರೀತಿ ಝುಬರಿಸಿಗೊಂಡು ಮತ್ತೆ ಕರುಣೆಯಿಂದ 'ಈಗಲ್ಲ ನನ್ನ ಇನ್ನೊಂದು ಜನ್ಮದಲ್ಲಿ ನಿನ್ನನ್ನು ಉದ್ಧರಿಸುವೆವು' ಎಂದು ಆಶ್ವಾಸನೆ ಕೊಟ್ಟು ಕಳಿಸಿದಿರಿ. ಈಗ ಅದೇ ರೀತಿ ಶಪಿಸಿದರೆ ನಾನು ಇನ್ನಾರಲ್ಲಿ ಹೋಗಲಿ? ನನ್ನ ಸ್ವಭಾವ ಹಿಂದಿನಕ್ಕಿಂತಲೂ ಕಡಿಮೆ ಮಾಡಿಕೊಂಡಿದ್ದೇನೆ. ಇನ್ನು ಮುಂದೆ ಯಾರಗೊಡವೆಗೂ ಹೋಗುವುದಿಲ್ಲ' ಎಂದು ರೋದಿಸುತ್ತಾ ಶ್ರೀಗಳವರ ಕಾಲು ಗಟ್ಟಿಯಾಗಿ ಹಿಡಿದಳು. ಕರುಣಾಮಯಿಗಳಾದ ಶ್ರೀಗಳವರು ಪ್ರೇಮದಿಂದ ಭಾನುಮತಿಯ ತಲೆಯ ಮೇಲೆ ತಮ್ಮ ಅಭಯ ಹಸ್ತವನ್ನಿಟ್ಟು 'ಕ್ಷಮಿಸಿದ್ದೇವೆ' ಎಂದು ಸಮಾಧಾನ ಪಡಿಸಿದರು.

೨೬. ತಪಃಶಕ್ತಿ ಪ್ರಭಾವ.

ಪ್ರತಿದಿವಸ ಅವಳಿಗೆ ಉಪದೇಶ ಹೆಚ್ಚು ಮಾಡಿದರು. ಒಂದು ದಿನ ಶ್ರೀಗಳವರು ತಮ್ಮ ತಪಃಶಕ್ತಿಯಿಂದ ಅವಳನ್ನು ಕೇವಲ ಬಾಳೆನಾರಿನಿಂದ ಕಟ್ಟಿಹಾಕಿದರು. ಆ ಬಂಧನದಿಂದ ಬಿಡಿಸಿಕೊಳ್ಳಲು ಅವಳಿಂದ ಆಗಲಿಲ್ಲ. 'ನಿನಗೆ ಕೇವಲ ಈ ನಾರಿನಿಂದ ಬಂಧನ ಬಿಡಿಸಿಕೊಳ್ಳಲಾಗಲಿಲ್ಲವೆ? ಆಗ ನಾವಿಲ್ಲದಿರುವಾಗ ಅಷ್ಟು ಮಾಂತ್ರಿಕ ಶಕ್ತಿಯನ್ನು ತೋರಿಸಿದೆಯಲ್ಲ; ಈಗ ಆ ನಿನ್ನ ಸಾಮರ್ಥ್ಯ ಎಲ್ಲಿಗೆ ಹೋಯಿತು?' ಎಂದು ಕೇಳಿದರು. 'ನಿಮ್ಮ ಸಾತ್ವಿಕ ಶಕ್ತಿಯ ಮುಂದೆ ನನ್ನ ಕ್ಷುಲ್ಲಕ ಸಾಮರ್ಥ್ಯ ಎಲ್ಲಾ ಅಡಗಿಹೋಗಿದೆ. ನನ್ನ ಸೊಕ್ಕು ಈಗ ಕಡಿಮೆಆಗಿದೆ. ನಿರುಪಯೋಗಿಯಾದ ನಾನು ತಲೆಬಾಗಿ ಪ್ರಾರ್ಥಿಸುತ್ತೇನೆ ಈ ಬಂಧನದಿಂದ ಬಿಡಿಸಿ' ಎಂದು ಗೋಳಿಟ್ಟಳು. 'ಹಾಗಾದರೆ ರಾಯರನ್ನು ಪ್ರಾರ್ಥಿಸು. ಅವರು ಬಿಡಿಸು ಎಂದು ಆಜ್ಞಾ ಮಾಡಿದರೆ ಈ ಬಂಧನದಿಂದ ಬಿಡಿಸುವೆವು. ಇನ್ನು ಮುಂದೆ

ಶ್ರೀ ರಾಯರ ಹತ್ತಿರ ಈ ರೀತಿಯ ಕ್ಷುದ್ರ ನಿನ್ನ ಮಾಂತ್ರಿಕ ಶಕ್ತಿಯನ್ನು ಪ್ರದರ್ಶಿಸಬೇಡ' ಎಂದು ಹೇಳಿದರು. ಆ ದಿನವೆಲ್ಲ ರಾಯರನ್ನು ಪ್ರಾರ್ಥಿಸಿದ್ದರಿಂದ ಶ್ರೀ ಗುರುರಾಜರ ಅಪ್ಪಣೆಯಂತೆ ಬಂಧನದಿಂದ ಮುಕ್ತಿಗೊಳಿಸಿದರು. (ಇಲ್ಲಿ ಸಾತ್ವಿಕಯೋಗದ ಉಪಶಕ್ತಿಯನ್ನು ತೋರಿಸಿದ್ದಾರೆ). 'ಇನ್ನು ಮುಂದೆ ಈ ರೀತಿ ಮಾಡದೆ ಆ ದುಷ್ಟ ಬಾಧೆಗಳನ್ನು ರಾಧಾಬಾಯಿಗೆ ಕೊಡದೆ ನೀನೆ ಅನುಭವಿಸಬೇಕು' ಅಂತ ಶಾಸನ ಮಾಡಿದರು. ಈ ಭಾನುಮತಿಯು ಮಾಂತ್ರಿಕನ ಹತ್ತಿರ ಹೋಗದೆ, ಬೇತಾಳನಿಗೂ ವಶಳಾಗದೆ ಇರೋಣದರಿಂದ ಆ ಮಾಂತ್ರಿಕನಿಗೆ ವಿಶೇಷ ಸಿಟ್ಟಿಗೆ ಕಾರಣವಾಗಿ ತನ್ನಿಮಿತ್ತ ಈ ಭಾನುಮತಿಯನ್ನು ಚಿತ್ರಹಿಂಸಾಪಡಿಸಬೇಕೆಂತಲೂ, ಇದಕ್ಕೂ ತನ್ನ ವಶಕ್ಕೆ ಬಾರದಿದ್ದರೆ ಸಂಹಾರ ಮಾಡಬೇಕೆಂತಲೂ ನಿರ್ಧರಿಸಿ ತದನುಗುಣವಾಗಿ ದುಷ್ಟ ಮಂತ್ರಗಳನ್ನು ಜಪಿಸತೊಡಗಿದನು. ತತ್ಪ್ರಭಾವದಿಂದ ಈ ಭಾನುಮತಿಯ ಅಂಗಾಂಗಗಳಲ್ಲಿ ಮಹಾವೇದನೆ ಉಂಟಾಗುತ್ತಿತ್ತು. ಈ ವೇದನೆಯು ದಿನೇ ದಿನೇ ಹೆಚ್ಚುತ್ತ ಗುರುಗಳ ಅಜ್ಞಾಪ್ರಕಾರ ತಾನೆ ಆ ವೇದನೆಯನ್ನು ಅನುಭವಿಸತೊಡಗಿದಳು. ಈ ನನ್ನ ಅದೃಶ್ಯ ಶರೀರದಿಂದಲೇ ಬಾಧೆಯನ್ನು ಅನುಭವಿಸುತ್ತಿದ್ದರೆ, ಉಪಚಾರಕ್ಕೆ, ಸೇವಾಕ್ಕೆ ಅವಕಾಶವಾಗುವುದಿಲ್ಲ. ಪ್ರಯುಕ್ತ ಈ ರಾಧಾಬಾಯಿ ದೇಹದಲ್ಲಿ ಅವಿಷ್ಟಳಾಗಿ ಅನುಭವಿಸುವೆನು; ಮತ್ತು ಆಕೆಯ ಅವಶ್ಯಕತೆ, ನಿತ್ಯಕರ್ಮಗಳಿಗೆ ತೊಂದರೆ ಕೊಡದೆ ದೇಹಾಶ್ರಯವನ್ನು ಮಾಡಿಕೊಳ್ಳಲು ಅಪ್ಪಣೆ ಕೊಡಬೇಕು' ಅಂತ ಕೇಳಿಕೊಂಡಳು. 'ಈ ರೀತಿ ಸರ್ವದಾ ಆಶ್ರಯ ಮಾಡಿಕೊಂಡು ಆಕೆಯ ದೇಹದಿಂದಲೇ ಬಾಧೆಯನ್ನು ಅನುಭೋಗಿಸುವುದಾದರೆ ಆ ದೇಹ ನಿಮಿತ್ತ ಬಾಧೆಯು ಆಕೆಗೆ ಆಗಲಾರದೆ?' ಅಂತ ಕೇಳಿದರು. 'ಸ್ವಾಮಿ! ನಾನಾಗಿ ಆ ಬಾಧೆಯನ್ನು ಆಕೆಗೆ ಕೊಟ್ಟರೆ ಆಗುತ್ತದೆ, ಇಲ್ಲವಾದರೆ ಇಲ್ಲ. ಇನ್ನು ಮೇಲೆ ಆಕೆಗೆ ಕಿಂದಪಿ ಬಾಧೆಕೊಡದೆ ಯಾವತ್ತು ಬಾಧೆಯನ್ನು ನಾನೆ ವಹಿಸುವೆನೆಂದು ತಮಗೆ ವಚನ ಕೊಟ್ಟಿದ್ದೇನೆ ಅಷ್ಟೆ! ಯದ್ಯಪಿ ಆ ದೇಹದಿಂದಲೇ ನಾನು ಅನುಭವಿಸುವುದಾದರೂ, ಆ ದೇಹ ನಿಮಿತ್ತ ಆಕೆಗೆ ಕಿಂಚಿದಪಿ ಬಾಧೆ ಆಗದಂತೆ ಆಕೆಯನ್ನು ನಿದ್ರಾವಸ್ಥೆಯಲ್ಲಿರಿಸಿ, ಆ ದೇಹಾದ್ಯಂತ ನಾನೇ ವ್ಯಾಪಿಸಿ, ಆ ಎಲ್ಲ ಬಾಧೆಯನ್ನು ನಾನೇ ಅನುಭವಿಸುತ್ತೇನೆ' ಅಂತ ಹೇಳಿದಳು. ಈ ಮಾತಿಗೆ ಶ್ರೀಗಳವರು ಸಮ್ಮತಿಸಿ ಅಜ್ಞಾ ಕೊಟ್ಟರು. ತದಾರಭ್ಯ ರಾಧಾಬಾಯಿಯ ಸ್ನಾನಕ್ಕೆ, ಭೋಜನಾದಿಗಳಿಗೆ ಮಾತ್ರ ಅವಕಾಶಕೊಟ್ಟು ಸರ್ವಕಾಲ ಅವಿಷ್ಟಳಾಗಿದ್ದು; ಆ ಮಾಂತ್ರಿಕನು ಕೊಡುವ ಬಾಧೆಯನ್ನು ಅನುಭವಿಸುತ್ತಿದ್ದಳು. ಈ ಬಾಧೆಯು ನೋಡುವವರಿಗೆ ಸಹ ಶ್ರಮವಾಗಿ ಕಾಣುತ್ತಿತ್ತು. ಆ ಬಾಧೆಗಳೆಂಥವುಗಳೆಂದರೆ; ಕಣ್ಣುಗಳಿಂದ ಆಗಾಗ ನೀರಿನಂತೆ ರಕ್ತ, ಕೀವು, ಹೊಲಸು ಬರುತ್ತಿತ್ತು. ನಾಲಿಗೆಯ ಮೇಲೆ ಸ್ವಲ್ಪವೂ ದ್ರವವಿಲ್ಲದೆ ಮುಳ್ಳಿನಂತೆ (ಹಲಸಿನಕಾಯಿಯ ತೊಗಟೆಯಂತೆ) ಇರೋಣ, ಗಂಟಲು ಉಬ್ಬಿ ನುಂಗಲಿಕ್ಕೆ, ಮಾತಾಡಲಿಕ್ಕೆ ಬಾರದಂತಿರೋಣ, ನಾಡಿಯುಗತಿ ಹಾಗೂ ಹೃದಯು ಕ್ರಿಯೆ ತಿಳಿಯದಂತಾಗೋಣ, ಕೈಕಾಲುಗಳು ಡೊಂಕಾಗೋಣ ಇತ್ಯಾದಿ ನಾನಾವಿಧ ವೇದನೆ ಇದ್ದು ಕೆಂಡದ ಮೇಲೆ ಕೂಡಿಸಿದಂತಿದೆ ಅಂತ ಅನ್ನುತ್ತ ಹಾಹಾಕಾರ ಮಾಡುತ್ತಿದ್ದಳು. ಇದಕ್ಕಾಗಿ ಉಪಚರಿಸಲೋಸಗ ತಾಸು ತಾಸಿಗೆ ಒಬ್ಬೊಬ್ಬರಂತೆ ಉಪಚರಿಸಲು ತಮ್ಮ ಶಿಷ್ಯರನ್ನು

ನೇಮಿಸಿದರು. ಮಧ್ಯಾನ್ಹ ಹಾಗೂ ಸಾಯಂಕಾಲ ಒಂದು ಸಣ್ಣ ಬಟ್ಟಲು ತುಂಬ ಗೋಕ್ಷೀರವನ್ನು ಅಭಿಮಂತ್ರಿಸಿ ಕೊಡುತ್ತಿದ್ದರಿಂದ ಇದನ್ನು ಸ್ವತಃ (ಭಾನುಮತಿಗೆ) ಕುಡಿಯಲು ಬರುತ್ತಿರಲಿಲ್ಲ. ಆದ್ದರಿಂದ ನಾನೇ (ಸ್ವಾಮಿರಾಯಾಚಾರ್ಯರು) ತೀರ್ಥವನ್ನು ಕೊಟ್ಟು ಅಭಿಮಂತ್ರಿಸಿದ ಹಾಲನ್ನು ಚಿಕ್ಕ ಸೌಟಿನಿಂದಲೇ ಒಂದೊಂದು ಹನಿಯಂತೆ ಕುಡಿಸುತ್ತಿದ್ದೆನು. ಈ ಒಂದು ಹನಿ ಹಾಲು ಗಂಟಲಿನೊಳಗಿಂದ ಉದರ ಪ್ರವೇಶವಾಗಬೇಕಾದರೆ ಎರಡು ಮೂರು ನಿಮಿಷಗಳು ಬೇಕಾಗುತ್ತಿತ್ತು. ಈ ಪರಿಸ್ಥಿತಿ ಇದ್ದಾಗ್ಯೂ ರಾಧಾಬಾಯಿಯ ಸ್ನಾನ ಭೋಜನಾದಿಗಳಿಗೆ ಅವಕಾಶ ಕೊಡಲೋಸುಗ ರಾಧಾಬಾಯಿಯ ಅಂಗಾಂಗಗಳಲ್ಲಿ ಯಾವ ತರವಾದ ವಿಕಾರವಾಗಲಿ, ವೇದನೆಯಾಗಲಿ ಇರದೆ, ಸ್ವಾಭಾವಿಕ ಸ್ತ್ರೀಯಳಂತೆ ನಡೆ, ನುಡಿಗಳು ಆಡುತ್ತ ಯಥಾಪ್ರಕಾರ ಭೋಜನಾದಿಗಳು ಮಾಡುತ್ತಿದ್ದಳು. ಇದಾದ ಕೂಡಲೇ ಪುನಃ ಭಾನುಮತಿಯು ಅವಿಷ್ಟಳಾಗುತ್ತಿದ್ದಳು. ಯಥಾಪ್ರಕಾರ ಮತ್ತು ಕೈಕಾಲುಗಳು ಸೊಟ್ಟವಾಗುತ್ತಿದ್ದವು. ಈ ಚಮತ್ಕಾರವನ್ನು ನೋಡಿ ಅನೇಕ ಆಧುನಿಕ ಮಹಾಶಯರು, ನಾಸ್ತಿಕಾದಿಗಳು ಸಹ ಆಶ್ಚರ್ಯ ಹೊಂದಿ ಶಾಸ್ತ್ರದಲ್ಲಿ ಪ್ರತಿಪಾದಿಸುವ ಮಂತ್ರ ಯಂತ್ರಗಳು, ಪಾಪಪುಣ್ಯಗಳು, ಇಹಪರಗಳು ಉಂಟೆಂಬುದು ಮಿಥ್ಯವಲ್ಲದೆ ಸತ್ಯವೆಂದು ಒಪ್ಪಿಕೊಂಡು ಪ್ರಶಂಸಿಸಿದರು. ಈ ಸಂದರ್ಭದಲ್ಲಿ ಒಂದು ದಿನ ಆ ಭಾನುಮತಿಗೆ ನಾನು ಹಾಲು ಕುಡಿಸುತ್ತಿರುವಾಗ ಏನೋ ಒಂದು ಸಣ್ಣ ಕಡ್ಡಿ ಗಂಟಲಿನೊಳಗೆ ಸಿಕ್ಕಿದಂತಾಯಿತು. ಇದರಿಂದ ಹನಿ ಹನಿಯಂತೆ ಹೊಟ್ಟೆಯಲ್ಲಿ ಇಳಿಯುವ ಹಾಲು ಸಹ ಗಂಟಲಿನಲ್ಲಿ ಇಳಿಯದಂತೆ ಪ್ರತಿಬಂಧಕವಾಯಿತು. ಇದರಿಂದ ಅಷ್ಟಕ್ಕೆ ಹಾಲು ಕುಡಿಸುವುದು ಬಿಡಬೇಕಾಯಿತು. ಆಮೇಲೆ ಯಥಾಪ್ರಕಾರ ರಾಧಾಬಾಯಿಯನ್ನು ಸ್ನಾನ ಭೋಜನಾದಿಗಳಿಗೆ ಅವಕಾಶ ಕೊಡುವುದಕ್ಕಾಗಿ ಆಕೆಯ ದೇಹದಿಂದ ಭಾನುಮತಿ ಪ್ರತ್ಯೇಕವಾಗಿ ಆಕೆಗೆ ಯಥಾಪ್ರಕಾರ ಸ್ನಾನ ಭೋಜನಾದಿಗಳಿಗೆ ಅವಕಾಶ ಮಾಡಿಕೊಡುತ್ತಿದ್ದಳು. (ಇದು ನಿಜವಾಗಿಯೂ ಆಶ್ಚರ್ಯವಲ್ಲವೆ!)

೨೭. ಭಾನುಮತಿ ಭಾವಿಸಮೀರರ ಸನ್ನಿಧಿ ಸೇರಿದಳು.

ತದನಂತರ ಭಾನುಮತಿ ಆಕೆಯ ದೇಹವನ್ನು ಹೊಕ್ಕು ಪೂರ್ವದಂತೆ ಬಾಧೆ ಪಡಿಸುತ್ತಿದ್ದಳು. ಮರುದಿನ ಮಧ್ಯಾನ್ಹ ಭಾನುಮತಿಯು ಒಂದು ಸಲ ಘಟ್ಟಿಯಾಗಿ ಕೆಮ್ಮಿದಳು. ಆಗ ಅಡ್ಡ ಬಿದ್ದಿದ್ದ ಕಡ್ಡಿ ಹೊರಗೆ ಬಂದು ಮೊದಲಿನಂತೆ ಹಾಲು ಗಂಟಲಿನಲ್ಲಿ ಹನಿ ಹನಿಯಾಗಿ ಇಳಿಯಹತ್ತಿತು. ಈ ರೀತಿ ಒಂದು ವಾರದ ಮೇಲೆ ಆಯಿತು. ಈ ಸಂಧಿಯಿಂದ ಅಮಾವಾಸ್ಯೆ ಬರಲು ಆ ಮಾಂತ್ರಿಕನು ಎಷ್ಟು ರೀತಿಯಿಂದ ಪ್ರಯತ್ನಪಟ್ಟರೂ ಈ ಭಾನುಮತಿಯು ಅವನ ವಶಕ್ಕೆ ಒಳಗಾಗಲಿಲ್ಲ. ಆದಿನ ಭಾನುಮತಿಗೆ ಅಂಗಾಂಗಗಳಲ್ಲಿ ವಿಚಿತ್ರ ವೇದನೆ ಉಂಟಾಯಿತು. ಕಡೆಯ ಯತ್ನವಾದ ಮರಣ ಪ್ರಯೋಗವನ್ನೇ ಮಾಡಿದನು. ಈ ಕ್ಷುದ್ರ ಮಂತ್ರ ಜಪಿಸೋಣದರಿಂದ ಸಹನಾತೀತ ವೇದನೆ ಆಗಲಾರಂಭಿಸಿತು. ಮೈಮೇಲೆ ಗುಳ್ಳಿಗಳು ಕಾಣಿಸಿಗೊಂಡವು. ಟೊಂಕ, ಕೈಕಾಲುಗಳು ಮುರಿದಂತಾದವು. ವಿಶೇಷ ದಾಹ ಉಂಟಾಗುವುದು ಇತ್ಯಾದಿ ಅನೇಕ ಬಾಧೆಯನ್ನು ಹಾಹಾಕಾರ ಮಾಡುತ್ತ, ಈ ಗುರುಗಳಲ್ಲಿ ತನ್ನ ಮರಣ

ಸಂಕಟವನ್ನು ಹೇಳಿಕೊಂಡು ಅಳಲಾರಂಭಿಸಿದಳು. ಆಗ ಶ್ರೀಗಳವರು ಶ್ರೀ ಹರಿವಾಯು ಗುರುಗಳ ಸ್ಮರಣೆ ಮಾಡುತ್ತ ಒಂದು ಪ್ರಹರ (ಮೂರುಗಂಟೆ) ಅವಳಿಗಾಗಿಯೇ ಧ್ಯಾನಕ್ಕೆ ಕುಳಿತರು. ಈ ಅವಧಿಯಲ್ಲಿ ಈ ಶ್ರಮಪಡುವುದು ನೋಡುವ ಜನರಿಗೂ ವೇದನೆಯಾಗಿ ಆ ಜನಗಳಲ್ಲಿ ಅನೇಕರು ಭಾನುಮತಿಯ ಸಂಕಷ್ಟವನ್ನು ನೋಡಲಾರದೆ ಕಣ್ಣೀರು ಸುರುಸುತ್ತಿದ್ದರು. ರಾತ್ರಿಯು ಈ ರೀತಿ ಕಳೆದನಂತರ 'ಭಾನುಮತಿ' ಇನ್ನು ನೀನು ಈ ಮರಣಸಂಕಟ ವಿಪತ್ತಿನಿಂದ ಪಾರಾಗಿರುವಿ' ಎಂದು ಹೇಳುತ್ತಿರಲು, ಹೊರಳಾಡುತ್ತಿರುವ ಅವಳು ಶ್ರೀಗಳವರ ಪಾದಗಳನ್ನು ಘಟ್ಟಿಯಾಗಿ ಹಿಡಿದು 'ಉದ್ಧಾರ ಮಾಡಿದಿರಿ' ಎಂದು ತೊದಲು ನುಡಿಗಳಿಂದ ಆಡತೊಡಗಿದಳು. ಶ್ರೀಗಳವರು ತಮ್ಮ ವರದ ಹಸ್ತವನ್ನು ತಲೆಯ ಮೇಲಿಟ್ಟು 'ಇನ್ನು ಮೇಲೆ ಕ್ರಮೇಣ ಬಾಧೆಗಳು ಒಂದೊಂದಾಗಿ ಕಡಿಮೆ ಆಗುತ್ತ ಹೋಗುವುವು, ಗಾಬರಿಯಾಗುವ ಕಾರಣವಿಲ್ಲ' ಅಂತ ಸಮಾಧಾನ ಪಡಿಸಿದರು. ಅದೇ ಪ್ರಕಾರ ಬಾಧೆಗಳು ಒಂದೊಂದಾಗಿ ಕಡಿಮೆ ಆಗುತ್ತ ಬಂದವು. ಆದರೆ ಟೊಂಕ ಮತ್ತು ನಾಲಿಗೆ ಸುಮಾರು ತಿಂಗಳವರೆಗೂ ಸರಿಯಾಗಲಿಲ್ಲ. ನಂತರ 'ಭಾನುಮತಿ ರಾಧಾಬಾಯಿಯ ಮೇಲೆ ಆವಿಷ್ಟಳಾಗೋಣ, ಗುರುಗಳಿಂದ ಭಾಗವತ್ತಶಾಸ್ತ್ರಗಳ ಶ್ರವಣ ಮಾಡೋಣ, ಅವರು ಮಾಡುವ ಆಜ್ಞಾಪ್ರಕಾರ ನಡೆಯೋಣ, ಜನಗಳಿಗೆ ಆಶ್ಚರ್ಯಕರವಾದ ತನ್ನ ಸಾಮರ್ಥ್ಯ ಪ್ರದರ್ಶನ ಮಾಡೋಣ, ಮದ್ದು-ಬಾಣ ಇಲ್ಲದೆ ಹೂಬಾಣ ಬಿಟ್ಟಂತೆ ಕಾಣಿಸೋಣ, ಸುಗಂಧ ದ್ರವ್ಯಗಳಿಲ್ಲದೆ ಪರಿಮಳೋಪೇತವಾಗಿರೋಣ ಮತ್ತು ರಾಧಾಬಾಯಿಯ ದೇಹದ ಮೇಲೆ ಅವಿಷ್ಟಳಾಗದೆ ಪ್ರತ್ಯೇಕ ರೂಪದಿಂದ ಅಡ್ಡಾಡಿದಂತೆ ಕಾಣಿಸೋಣ, ಪ್ರದಕ್ಷಣೆ, ನಮಸ್ಕಾರ ಹಾಕುವಂತೆ ಕಾಣಿಸೋಣ, ತೀರ್ಥ ಪಾದೋದಕ ತೆಗೆದುಕೊಳ್ಳೋಣ, ಪ್ರತ್ಯೇಕ ಎಲೆಯಲ್ಲಿ ಭೋಜನ ಮಾಡುವಂತೆ ಕಾಣಿಸೋಣ' ಇತ್ಯಾದಿ ವಿಲಕ್ಷಣ ರಾಧಾಬಾಯಿಗೆ ಕಾಣಿಸೋಣ ವಗೈರೆ ಚಮತ್ಕಾರ ಶಕ್ತಿಯನ್ನು ಪ್ರದರ್ಶಿಸುತ್ತಿದ್ದಳು. 'ನಾನು ತಮ್ಮಲ್ಲಿ ಬಂದು ಸೇವಾಮಾಡುತ್ತ ಇದ್ದುದರ ಜ್ಞಾಪಕಾರ್ಥ ನನ್ನ ಸಹಿತ (ಅಂದರೆ ರಾಧಾಬಾಯಿಯ ಮೇಲೆ ಭಾನುಮತಿ ಅವಿಷ್ಟಳಾಗಿದ್ದುದು ಸಹಿತ) ತಾವು ಫೋಟೋ *(Photo)* ತೆಗೆಸಿಕೊಳ್ಳಬೇಕು. ಅಂದರೆ ಪಿಶಾಚಾದಿ ಬಾಧೆಗಳ ಬಂಧನದಿಂದ ಬಿಡಿಸಿ ಮುಕ್ತಳನ್ನಾಗಿ ಮಾಡಿ, ಮುಕ್ತಿ ಮಾರ್ಗವನ್ನು ತೋರಿಸುವ ಮಹಾನುಭಾವರೆಂದು ಜಗತ್ಪಸಿದ್ಧಿ ಪಡೆಯುವಿರಿ' ಎಂದು ಹೇಳಲು ಅದರಂತೆ ಶ್ರೀಗಳವರು ರಾಧಾಬಾಯಿಯ ಮೇಲೆ ಭಾನುಮತಿ ಅವಿಷ್ಟಳಾದ ಜ್ಞಾಪಕಾರ್ಥಕವಾಗಿ ಅವಳಿಗೆ ಕೊರಳಲ್ಲಿ ಹೂವಿನಹಾರ, ಹಣೆಯಲ್ಲಿ ಉದ್ದ ಕುಂಕುಮವಿಟ್ಟು ಅಂಚಿನಸೀರೆ ಉಡಿಸಿ ಅವಳ ಸಂಗಡ ಫೋಟೋವನ್ನು ತೆಗೆಸಿಗೊಂಡರು. ಆಮೇಲೆ ಕೆಲವು ದಿನಗಳ ನಂತರ ಗುರುಗಳ ಸಂಗಡವೇ ವಿಜಾಪುರದಿಂದ ಆದವಾನಿಗೆ ಬಂದಳು. ಆಕೆಯು ಇಲ್ಲಿಯೂ ಒಂದು ವರ್ಷ ಸೇವೆ ಮಾಡಹತ್ತಿದಳು. ಒಂದು ದಿನ ನನ್ನ ಮಗಳಾದ ಕುಮಾರಿ ಸರಸಿಜಗೆ ಚೇಳು ಕಚ್ಚಿತು. ಆಗ ಶ್ರೀಗಳವರು 'ಹೇ! ಭಾನುಮತಿ ಸರಸಿಜಗೆ ಚೇಳು ಕಚ್ಚಿದೆಯಂತೆ ನೋಡು' ಎಂದರು. ಹಾಗೇನು! ಕೂಡಲೆ ಸರಸಿಜಳನ್ನು ತನ್ನ ತೊಡೆಯಮೇಲೆ ಮಲಗಿಸಿಕೊಂಡು ದೇಹವೆಲ್ಲವನ್ನು ಸವರಿದಳು. ಇದನ್ನು ನೋಡಿದ ನನ್ನ ಹೆಂಡತಿ ಕು.ಸೌ. ನಾಮಗಿರಿ (ತುಂಗಾ) ಬಾಯಿ ಬೇಗ

ಬಂದು ಅವಳನ್ನು ಎತ್ತಿಕೊಂಡಳು. 'ನಿನ್ನ ಮಗಳನ್ನು ಏನು ಮಾಡಿಲ್ಲ, ಚೇಳು ಕಚ್ಚಿದ ಬಾಧೆಯಿಂದ ತಪ್ಪಿಸಿದೆ, ಇವಳನ್ನು ನಾನು ಮತ್ತು ಯಾರು ಏನೂ ಮಾಡಲಾರರು. 'ಇವಳಿಂದಲೇ ಮುಂದೆ ನಮ್ಮ ಗುರುಗಳು ಸೇವಾ ತೆಗೆದುಕೊಳ್ಳುವರು' ಎಂದಳು. ಮತ್ತೊಂದು ದಿವಸ ಕಾರ್ತಿಕ ಮಾಸದಲ್ಲಿ ಬೇವಿನಗಿಡದ ಮೇಲೆ ಕುಳಿತು ಎಲ್ಲ ಎಲೆಗಳನ್ನು (ಒಂದುಬಿಡದೆ) ಕಿತ್ತಿಹಾಕಿದ್ದಳು. ಇದನ್ನು ಸೇವಾಕ್ಕೆಂದು ಬಂದ ನಖಾತಿ ತುಳಸಮ್ಮ 'ಇದೇನು; ಸ್ವಾಮಿ! ಅಕಾಲದಲ್ಲಿ ಎಲೆಯಲ್ಲ ಉದಿರಿವೆಯಲ್ಲ?' ಎಂದು ಶ್ರೀಗಳವರನ್ನು ಪ್ರಶ್ನೆ ಮಾಡಿದಳು. ಆಗ ಶ್ರೀಗಳವರು 'ಇದೆಲ್ಲ ಆ ಭಾನುಮತಿ ಚೇಷ್ಟೆ ಇರಬೇಕು' ಎಂದುತ್ತರಿಸಿದರು. ಸೇವಾಕ್ಕೆಂದು ಬಂದವರೆಲ್ಲ ತಮ್ಮ ತಮ್ಮ ಸೇವಾ ಮುಗಿಸಿಕೊಂಡು ಮನೆಗೆ ಹೋದನಂತರ ಭಾನುಮತಿ ಕೆಳಗೆ ಇಳಿದುಬಂದು 'ಸ್ವಾಮಿ! ನಾನು ಗಿಡದ ಮೇಲೆ ಕೂತಿನಿ ಅಂತ ಆ ಬಂಗಾರ ಕಡಗದ ಕೈ ತುಳಸಮ್ಮಗೆ ತಿಳಿಯದೆ ಸುಮ್ಮಸುಮ್ಮನೆ ಅಕಾಲವೆಂದು ಹೇಳುತ್ತಾಳೆ; ಇರಲಿ; ಸ್ವಾಮಿ ನೋಡಿರಿ ಏನು ಮಾಡುವೆನೋ ಈ ದಿನ'. ಅಂದು ಆ ರಾತ್ರಿ ಅವರ ಮನೆಗೆ ಹೋಗಿ, ಅಲ್ಲಿದ್ದ ಕಡ್ಡಿ ಚೀಲವನ್ನು ಇಲ್ಲಿಗೆ ತಂದು, ಆ ಸ್ಥಳದಲ್ಲಿ ಬರೆ ಹೊಟ್ಟಿನ ಚೀಲವನ್ನಿಟ್ಟು ಬಂದು, ತನ್ನ ಶೌರ್‍ಯವನ್ನು ಶ್ರೀಗಳವರ ಮುಂದೆ ತೋರಿಸಿಗೊಂಡಳು. ಭಾನುಮತಿ ನಿನಗೆ ಇನ್ನು ಬುದ್ಧಿ ಬರಲಿಲ್ಲವೇ? ಹೀಗೆ ಎಷ್ಟು ದಿವಸಾಂತ ಈ ಜನ್ಮ ಹೊತ್ತಿರಬೇಕೆಂದಿರುವೆ?' ಅಂತ ಶ್ರೀಗಳವರು ಎನಲು 'ಇಲ್ಲ ಸ್ವಾಮಿ; ತಪ್ಪಾಯಿತು, ಕ್ಷಮಿಸಿರಿ' ಎಂದಳು. ಮುಂದೆ ಕೆಲವು ತಿಂಗಳು ವಿಶೇಷ ಶ್ರೀಗಳವರ ಸೇವಾಮಾಡಿ ಅವರ ಪರಮಾನುಗ್ರಹ ಪಡೆದು ಅವರ ಆಜ್ಞಾಪ್ರಕಾರ **'ಸೋದೆ ಕ್ಷೇತ್ರದಲ್ಲಿರುವ ವಾದಿರಾಜ ಭೂತರಾಜರ ಸನ್ನಿಧಿ'**ಯಲ್ಲಿ ತನ್ನ ಶೇಷಾಯುಷ್ಯವನ್ನು ಕಳೆದು ಮುಕ್ತಳಾಗುವ ಸಲುವಾಗಿ ಆದವಾನಿಯಿಂದ ತೆರಳಿದಳು.

೨೮. ಸರ್ವರಿಂದ ಮಾನ್ಯತೆ.

ಹೀಗಿರುವಾಗ ಈ ಭಾನುಮತಿಯು ಮಾಡುವ ಅಗಾಧ ಕಾರ್ಯಗಳನ್ನು ನೋಡಲು ಬಂದ ತಂಡೋಪತಂಡ ಜನರು ಶ್ರೀಗಳವರ ಸೇವಕರಾದರು. ಅವರುಗಳಲ್ಲಿ ತುಂಬಳಂಗುತ್ತಿ ಪಂಪಯ್ಯ, ಮೆದೆಹಾಳ, ಯಾಡಿಕಿಯವರು, ಮೆತುಕಲ್ ಪುಲ್ಲಯ್ಯ. ಕೋಸಿಗಿ ರಾಮಯ್ಯ, ರಾಯಜೋಷಿ ಮನೆತನದವರು, ನೇಕಾರನಾದ ಜಿಜಾರಿ ಶೇಷಗಿರಿಯಪ್ಪ ಮೊದಲಾದ ಶ್ರೀಮಂತ ಮನೆತನದವರು ಇವರ ಶಿಷ್ಯತ್ವ ಹೊಂದಿದರು. ಇವರಲ್ಲಿ ಅನೇಕರು ಈ ಊರಿನ 'ಲಕ್ಷ್ಮಮ್ಮ' ಎಂಬ ಓರ್ವ ಯೋಗಿ ಹತ್ತಿರ ನಡೆದುಕೊಳ್ಳುತ್ತಿದ್ದರು. ಈಕೆಗೆ ಶುದ್ಧಾಶುದ್ಧ ಹೇಯ ಎಂಬ ಭಾವನೆ ಯಾವುದು ಇರುತ್ತಿರಲಿಲ್ಲ. ಒಂದು ತುಂಡು ಹರಕು ಮುರುಕು ಹೊಲಸು ಸೀರೆಯನ್ನು ಉಡುತ್ತಿದ್ದಳು. ಆಕೆ ಯಾವಾಗಲೂ ಗಂಟುಮುಖ ಮಾಡಿಕೊಂಡೆ ಕಾಯಿಪಲ್ಯ ಮಾರುವ ಕಟ್ಟೆಯ ಸಂಧಿಯಲ್ಲಿ ವಾಸವಾಗಿರುತ್ತಿದ್ದಳು. ಆಕೆ ಸಿಟ್ಟಿನಿಂದ ಆಡಿದ ಮಾತುಗಳು ನಡೆದುಕೊಳ್ಳುವವರಿಗೆಲ್ಲ ಶುಭಕಾರ್ಯವಾಗುತ್ತಿದ್ದವು. ತನಗೆ ಮೀರಿದ (ಅಸಾಧ್ಯವೆಂದು ತೋರಿದ) ಶುಭ ಕಾರ್ಯಗಳಿಗೆ ತನ್ನಲ್ಲಿ ಬಂದ ಸೇವಕರನ್ನು 'ಆ ಮುತ್ತಿಗಿ ಸ್ವಾಮಿ ಹತ್ತಿರವೇ ಹೋಗಿರಿ' ಎಂದು ಹೇಳಿ ಕಳುಹಿಸುತ್ತಿದ್ದಳು. ಇದರಿಂದ ಜನರು ಇನ್ನೂ ಹೆಚ್ಚಾಗಿ ಇವರ ಸೇವಾರ್ಥವಾಗಿ ಬರಹತ್ತಿದರು. 'ನಾನು ಸತ್ತ ಮೇಲೆ ನನ್ನಲ್ಲಿ ನಡೆದುಕೊಳ್ಳುವವರು ನನ್ನ

ಸತ್ತದಿವಸ ನನ್ನ ನೆನಪಿಗಾಗಿ ಆ ಮುತ್ತಿಗೆ ಸ್ವಾಮಿಗೆ ಮೊದಲು ಕಾಣಿಕೆ ಸಲ್ಲಿಸಿರಿ' ಎಂದು ಹೇಳಿದ್ದಳಂತೆ. ಅದರಂತೆ ಈಗಲು ಮೊದಲ ಕಾಣಿಕೆ ಅವಳ ಗುಡಿಯಿಂದ ಬರುತ್ತದೆ. ಇವರು ಯಾತ್ರಾಮಾಡುವ ಸಮಯದಲ್ಲಿ ಸ್ನಾನ ಮಾಡುವಾಗ ನದಿಯಲ್ಲಿ ಇವರಿಗೆ ಪಾರ್ವತಿ ಪರಮೇಶ್ವರ ಪಂಚಲೋಹದ ಪ್ರತಿಮೆಗಳು ಸಿಕ್ಕಿದ್ದವು. ಅದರಂತೆ ಮತ್ತೊಂದು ಸಲ ನದಿಯಲ್ಲಿ ಸ್ನಾನ ಮಾಡುತ್ತಿರಲು ಇವರಿಗೆ ಮಹಮ್ಮದೀಯರ (ಪೀರಲ) ದೇವರುಗಳು ಸಿಕ್ಕಿದ್ದರಿಂದ ಇವರು ಮಹನೀಯರೆಂದು ತಿಳಿದು ಮಹಮ್ಮದೀಯರು ಇವರಲ್ಲಿ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಇವರಲ್ಲಿದ್ದ ತಮ್ಮ ದೇವರುಗಳನ್ನು ತೆಗೆದುಕೊಂಡು ಹೋಗಿ ವಿಶೇಷ ಪೂಜಿಸುತ್ತಿದ್ದರು. ಕೆಲವು ವರ್ಷ ಇದರಂತೆ ನಡೆಯಿತು. ತದನಂತರ ಇವರು ಆ ದೇವರುಗಳನ್ನು ಅವರಿಗೆ ವಹಿಸಿಕೊಟ್ಟರು. ಈಗ್ಯೂ ಕೂಡ ದೊಡ್ಡ ಮಸೀದಿಯಲ್ಲಿ ಇವರ ಜ್ಞಾಪಕಾರ್ಥವಾಗಿ ಇಟ್ಟಿರಬಹುದೆಂದು ತಿಳಿದುಬಂದಿದೆ. ಇದರಿಂದ ಎಲ್ಲ ಮತಸ್ಥರು ಇವರನ್ನು ಕೊಂಡಾಡುತ್ತಿದ್ದರು. ಇವರು ಇದ್ದ ಕಾಲವು ಆದವಾನಿಯ ಸುವರ್ಣ ಕಾಲದಂತೆ ಮೆರಯಿತು ಎಂದು ಹೇಳಲು ಯಾವ ಅತಿಶಯೋಕ್ತಿಯಲ್ಲ.

೨೯. ಊಹಾಸಿದ್ಧಿ ಸಂಪನ್ನರು, ಸ್ವಾಮಿ ಸರ್ವಾಂತರ್ಯಾಮಿ

ಈ ಅವಧಿಯಲ್ಲಿ ನಮ್ಮ ಗೋತ್ರಜದವರ ಪೈಕಿ ರಾಮಾಚಾರ್ಯ ಮುತ್ತಿಗಿ ಮತ್ತು ಅವರ ಅಣ್ಣಂದಿರು ಹಡಗಲಿಯಲ್ಲಿ ವಾಸಮಾಡುತ್ತಿದ್ದರು. ಇವರ ಬೀಗರುರಿತ್ತಿ ಮನೆತನದವರು ಇರುತ್ತಿದ್ದರು. ಕಾಲಾಂತರದಲ್ಲಿ ರಾಮಾಚಾರ್ಯ ಮತ್ತು ರಿತ್ತಿ ನರಸಿಂಹಾಚಾರ್ಯರು ಮರಣ ಹೊಂದಿದ್ದರಿಂದ ರಾಮಾಚಾರ್ಯರ ಹೆಂಡತಿ ಕುಂ.ಸೌ. ಸೀತಮ್ಮ ಹಾಗೂ ಇವರ ಮಕ್ಕಳಾದ ಭೀಮಸೇನ, ಸೇತು ಹಾಗೂ ರಾಮಾಚಾರ್ಯರ ಅಣ್ಣನ ಮಗನಾದ ನರಸಿಂಹ ಆಚಾರ್ಯರು ಹಾಗೂ ರಿತ್ತಿಯವರು ಎಲ್ಲರೂ ಚಿಕ್ಕಂದಿನಿಂದಲೇ ಶ್ರೀಗಳವರಲ್ಲಿ ಬಂದು ಆದವಾನಿಯಲ್ಲಿಯೇ ಇರುತ್ತಿದ್ದರು. ಇವರುಗಳಿಗೆ ಚಿಕ್ಕಂದಿರಿರುವಾಗಲೇ ಶ್ರೀಗಳವರು ಉಪನಯನವನ್ನು ನೆರವೇರಿಸಿದ್ದರು. (ಇವರೆಲ್ಲ ನನಗೆ ಅಣ್ಣ-ತಮಂದಿರಾಗಬೇಕು) ಭೀಮಸೇನನಿಗೆ ಪ್ರಾಪ್ತವಯಸ್ಸು ಬಂದುದರಿಂದ ಬಳ್ಳಾರಿ ಜಿಲ್ಲೆಯ ಗುಡೇಕೋಟೆ ವಾಸಸ್ಥರಾದ ರಾಮಾಚಾರ್ಯರೆಂಬ ವೈದಿಕ ಮನೆತನದವರು ಭೀಮಸೇನನಿಗೆ ತನ್ನ ಮಗಳಾದ ಕುಮಾರಿ ಶ್ಯಾಮಾಳನ್ನು ಕೊಟ್ಟು ವಿವಾಹ ಮಾಡಿದ್ದರು. ಆದರೆ ಆಗ ಭೀಮಸೇನನಿಗೆ ಇನ್ನು ಉದ್ಯೋಗ ಸಿಕ್ಕಿರಲಿಲ್ಲ. ಉದ್ಯೋಗದ ಅನ್ವೇಷಣಾರ್ಥ ಮುಂಬಯಿಗೆ ಓಡಿಹೋಗಿದ್ದನು. ಬಹಳ ದಿವಸ ಅಲೆದಾಡಿ ಕೆಲಸ ಸಿಗದೆ ವ್ಯಾಕುಲ ಮನಸ್ಸಿನಿಂದ ಆದವಾನಿಗೆ ತಿರುಗಿಬಂದನು. ಆಗ ಇವನಿಗೆ ವಿಜಯರಾಯರ ಗುಡಿಯ ಪ್ರಾಣದೇವರ ಪೂಜೆ ಹಾಗೂ ಕಡಪ ರಾವುಜಿ ಶ್ರೀನಿವಾಸರಾಯನೆಂಬ ಮೇಷ್ಟು ಮನೆಯಲ್ಲಿ ಪೂಜೆ ಮಾಡಲು ಒಪ್ಪಿಸಿದ್ದರು. ಅದರಂತೆ ಮಾಡಿಕೊಳ್ಳುತ್ತ ಕೆನರಾ ಇಂಡಸ್ಟ್ರಿಯಲ್ ಬ್ಯಾಂಕಿಂಗ್ ಮತ್ತು ಸಿಂಡಿಕೇಟ್ ಬ್ಯಾಂಕಿನಲ್ಲಿ ಪಿಗ್ಮಿ ಏಜೆಂಟನಾಗಿ ಕೆಲಸಮಾಡುತ್ತ ಕ್ಲಾರ್ಕು ಕೆಲಸಕ್ಕಾಗಿ ಅರ್ಜಿಯನ್ನು ಕಳಿಸಿದ್ದನು. ಈ ವಿಷಯ ಶ್ರೀಗಳವರಿಗೆ ತಿಳಿದಿತ್ತು. ಆದರೆ ಪಿಗ್ಮಿ ಕೆಲಸದಲ್ಲಿ ಬೇಸತ್ತು ಈ ಕೆಲಸವನ್ನು ಸಾಕುಮಾಡಿಕೊಂಡು ತನ್ನ ಊರಾದ ಹಡಗಲಿಗೆ ಹೋಗಲು

ಸಿದ್ಧನಾಗಿದ್ದ. ಅರ್ಜಿ ಹಾಕಿದ್ದಕ್ಕೆ ಯಾವ ವಿಧವಾದ ಪ್ರತಿಕ್ರಿಯೆ ಕಂಡುಬರಲಿಲ್ಲ. ಈ ಅವಧಿಯಲ್ಲಿ ಇವನಿಗೆ ವಿಶೇಷ ಜಾಡ್ಯ ಉಂಟಾದ್ದರಿಂದ ನನ್ನ ಹೆಂಡತಿ ತುಂಗಾಬಾಯಿ ಇವನಿಗೆ ವಿಶೇಷ ಶುಶ್ರೂಷೆ ಮಾಡಿದಳು. ಜಾಡ್ಯವು ಕಡಿಮೆ ಆದ ಮೇಲೆ ತನ್ನ ತಾಯಿಯೊಡನೆ ಹಡಗಲಿಗೆ ಹೋಗಲು ಶ್ರೀಗಳವರನ್ನು ಅಪ್ಪಣೆ ಕೇಳಿದನು. 'ಅಲ್ಲಿಗೆ ಹೋಗಿ ಏನು ಮಾಡುವಿ ?' ಎಂದು ಹೇಳಿ, ಹಾಗೇನು! ಆದರೆ ಈ ದಿನ ಟಪಾಲು ನೋಡಿಕೊಂಡು ಮಧ್ಯಾನ್ಹ ಊಟ ತೀರಿಸಿ ಸಾಯಂಕಾಲ ಊರಿಗೆ ಹೋಗುವಿಯಂತೆ' ಎಂದು ಹೇಳಿ ಸ್ನಾನಕ್ಕೆಂದು ಶ್ರೀಗಳವರು ಹೊರಟರು. ಆ ಹೊತ್ತಿಗೆ 'ಟೆಲಿಗ್ರಾಂ' ಎಂದು ಭೀಮಸೇನನನ್ನು ಕರೆದನು. ಅದನ್ನು ತಾನೆ ತೆಗೆದುಕೊಂಡು, ಅದನ್ನು ಬಿಚ್ಚಿ ಓದಿ ಸಂತೋಷ ತಡೆಯಲಾರದೆ ಕುಣಿದಾಡಿ ತನಗೆ ಬ್ಯಾಂಕಿನಲ್ಲಿ ಉದ್ಯೋಗ ಸಿಕ್ಕಿತೆಂದು ಹಿಗ್ಗಿ ಶ್ರೀಗಳವರಲ್ಲಿಗೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿ ನನಗೆ ಅನ್ನಕೊಟ್ಟು ಉದ್ಧಾರ ಮಾಡಿದಿರಿ' ಎಂದು ಕಾಲುಗಳನ್ನು ಘಟ್ಟಿಯಾಗಿ ಹಿಡಿದನು. ಶ್ರೀಗಳವರು ಮೈದಡವಿ ಎಬ್ಬಿಸಿ 'ಅದಕ್ಕೆ ನಿನ್ನನ್ನು ಟಪಾಲು ನೋಡಿಕೊಂಡು ಹೋಗು' ಎಂದು ಹೇಳಿದೆ. **ನಮ್ಮ ಸ್ವಾಮಿ ಕೈಬಿಡುವುದಿಲ್ಲ. ದುಷ್ಟ ಶಿಕ್ಷಕ, ಶಿಷ್ಟ ರಕ್ಷಕನಾದ ಸರ್ವಾಂತರ್ಯಾಮಿ.** ಈಗ ನೀನು ಸಣ್ಣ ಸಂಬಳ ತೆಗೆದುಕೊಂಡಾಗ್ಯು ಮುಂದೆ ದೊಡ್ಡ ಪದವಿಯಿಂದ ನಿವೃತ್ತಿಯಾಗು ಎಂದು ಆಶೀರ್ವದಿಸಿದರು. ಇದು ಗುರುಗಳ ಪರಮಾನುಗ್ರಹವಲ್ಲವೇ! ಇದರಂತೆ ಎಷ್ಟೋ ಜನರಿಗೆ ಇವರು ಆಶ್ರಯದಾತರಾದರು.

೩೦. ಮಾತು ಮಂತ್ರವಾಯಿತು.

ಇದರಂತೆ ಲಾಂಗ್ಲಿ ಭೀಮಸೇನರಾಯರು ಮನೆ ಕಟ್ಟಿಸಲು ಇವರ ಆಜ್ಞೆಯನ್ನು ಕೇಳಲು ಶ್ರೀಗಳವರು ಭೀಮಸೇನರಾಯ 'ನೀನು ಮನೆ ಕಟ್ಟಬೇಡ. ಒಂದು ಪಕ್ಷ ಕಟ್ಟಿಸಿದರೆ ನಿನಗೆ ಆಗಿಬರದಾಗಿ ವಿನಾಕಾರಣವಾಗಿ ಮನೆ ಮಾರಿಕೊಳ್ಳುವ ಪರಿಸ್ಥಿತಿ ಬರಬಹುದು. ಕೊಂಡವನು ವೃದ್ಧಿಗೆ ಬರುತ್ತಾನೆ' ಎಂದು ಹೇಳಿದರು. ಆದರೆ ಈತನು ಜಿದ್ದಿಗೆ ಬಿದ್ದು ಕಟ್ಟಿಸಿದ ನಂತರ ಯಾವುದೋ ಕಾರಣದಿಂದ ಲಾಂಗ್ಲಿ ಎಂಬ ಇಂಗ್ಲೀಷು ಕಂಪನಿಗೆ ನಷ್ಟ ಬಂದದ್ದರಿಂದ ಈತನ ಮೇಲೆ ಹಣದ ಹೊರೆಯ ಅಪವಾದ ಬಂದದ್ದರಿಂದ ಮನೆಯನ್ನು ಮಾರಿಕೊಳ್ಳಬೇಕಾಯಿತು. ಈ ಮಾತುಗಳನ್ನು ಕೇಳುತ್ತಿದ್ದ ಇಂಗಳದಾಳು ಗೌಡನು ಆ ಮನೆಯನ್ನು ಖರೀದಿಗೆ ತೆಗೆದುಕೊಂಡನು. ಶ್ರೀಗಳವರು ಹೇಳಿದ ಪ್ರಕಾರ ಈಗ ಗೌಡ ಮನೆತನದಿಂದ ಸುಖ ಸಂಪತ್ತಿನಿಂದ ವೃದ್ಧಿ ಹೊಂದಿದ್ದರು. ಈಗಲೂ ಈ ಶ್ರೀಗಳವರಿಗೆ ನಡೆದುಕೊಳ್ಳುತ್ತಿದ್ದಾರೆ. ಮನೆ ಮಾರಿಕೊಂಡ ಭೀಮಸೇನರಾಯನ ಸಂಸಾರ ತಾಪತ್ರಯ ನೋಡಲಾರದೆ ಗೌಡರು ಅವರಿಗೆ ತಮ್ಮ ಸ್ವಂತ ಮನೆಯನ್ನು ವೆಂಕಣ್ಣಪೇಟೆಯಲ್ಲಿ ಕೊಟ್ಟಿರುವರು.

೩೧. ಮೃತ್ತಿಕೆ, ಮಂತ್ರಾಕ್ಷತೆ ಮಹಿಮೆ.

ಇದೇ ರೀತಿಯಲ್ಲಿ ಪಡಕಂಡ್ಲ ಗುರಾಚಾರ್ಯ ಮನೆತನ, ರಾವುಜಿ ಶ್ರೀನಿವಾಸರಾಯನ ಮನೆತನ, ನಾಗನಾಥನಹಳ್ಳಿ ಪಾಂಡುರಂಗರಾಯನ ಮನೆತನ, ಚೊಕ್ಕನಹಳ್ಳಿ ರಾಮರಾಯನ

ಮನೆತನ, ನಾಗನಾಥನಹಳ್ಳಿ ಹುಚ್ಚಾರೆಡ್ಡಿ ಮನೆತನ ಹೀಗೆ ಎಷ್ಟೋ ಮನೆತನದವರು ಇವರ ಶಿಷ್ಯತ್ವ ಹೊಂದಿ ಗುರುಗಳ ಅನುಗ್ರಹಕ್ಕೆ ಪಾತ್ರರಾಗಿ ವೃದ್ಧಿ ಹೊಂದಿದರು. ಮತ್ತೇನು ಹೇಳುವುದು ಲಿಂಗಾಯತ ಲಕ್ಷಾಧೀಶನಾದ ಎಲೆ ಮಲ್ಲೇಶಪ್ಪನು, ಜೈನನಾದ ರತ್ನಾ ಎಂಬ ವ್ಯಾಪಾರಸ್ಥನು ಇವರಲ್ಲಿ ವಿಶೇಷ ಭಕ್ತಿ ಭಾವವುಳ್ಳವರಾಗಿದ್ದರು. ಕಡುಬಡವರಾದ ಉಡುಪಿ ಅಡಿಗಿ ಗೋಪಾಲಾಚಾರ್ಯರು, ಪ್ರಾಣೇಶಾಚಾರ್ಯರು, ಹುಚ್ಚುಂತಿದ್ದ ಶಾಮಾಚಾರ್ಯರು, ಕಾಶಿ ಅನಂತಾಚಾರ್ಯರು, ಇವರುಗಳಿಗೆ ಶ್ರೀಗಳವರು ಗೋಪಾಳ ವೃತ್ತಿ ಹೇಳಿದ್ದರಿಂದ ಅದನ್ನೇ ನಂಬಿ ವೃದ್ಧಿಗೆ ಬಂದರು. ಕಾಶಿ ಅನಂತಾಚಾರ್ಯರು ವೆಂಕಣ್ಣ ಪೇಟೆಯಲ್ಲಿರುವ ಮಾಧವ ದೇವರಗುಡಿ ಪೂಜೆ ಮಾಡಿಕೊಂಡಿದ್ದಾಗ್ಯೂ ಆತನ ಪರಿವಾರವೆಲ್ಲ ಇಲ್ಲಿ ದೊಡ್ಡವರಾಗಿ ಅನುಗ್ರಹಕ್ಕೆ ಪಾತ್ರರಾದರು. ಇದರಿಂದ ಗುರುಗಳ ಅನುಗ್ರಹವಾಗುವತನಕ ಮುಕ್ತಿ (ಸುಖಿ, ಸಂತೋಷ, ಜ್ಞಾನ) ಸಿಗುವುದಿಲ್ಲವೆಂಬುದು ಖಚಿತವಾಗುತ್ತದೆ. ಇದರಂತೆ ಖಂಡೇರಾಯ ದೇಸಾಯಿ ಎಂಬ ಬಿಜಾಪುರ ಗೃಹಸ್ಥನು ಬಂದು ಶ್ರೀಗಳವರ ಎಡಬಲ ಸೇವ ಮಾಡುತ್ತ ಇದ್ದು ಬಿಟ್ಟನು. ಈ ಚರಿತ್ರನಾಯಕರು ಬಿಜಾಪುರದಲ್ಲಿರುವಾಗ ಅಲ್ಲಿಯ ದೇಶಪಾಂಡೆ ರಾಘವೇಂದ್ರರಾಯರ ಪುತ್ರಿ ಬಿದ್ದು ಕಾಲಿನ ಎಲುಬು ಮುರಿದಿತ್ತು. ಇದಕ್ಕೆ ತಕ್ಕ ಚಿಕಿತ್ಸೆ ಆಗದೆ ಇದ್ದರಿಂದ ಮುರಿದ ಸ್ಥಳದಲ್ಲಿ ಕೀವು ರಕ್ತ ಸೋರುತ್ತಿತ್ತು. ಇದನ್ನು ನೋಡಿದ ಅಲ್ಲಿಯ ಡಾಕ್ಟರು ಮುಂಬಯಿಗೆ ಹೋಗಿ ಶಸ್ತ್ರಚಿಕಿತ್ಸೆ *(Operation)* ಮಾಡಿಸಬೇಕೆಂದು ಅಭಿಪ್ರಾಯವನ್ನು ಕೊಟ್ಟರು. ಮುಂಬಯಿಗೆ ಹೋಗುವುದು ಬಹು ದ್ರವ್ಯ ಖರ್ಚೆಯೆಂತಲೂ ಹಾಗೂ ಶಸ್ತ್ರಚಿಕಿತ್ಸೆಯ ಗಾಬರಿ ಮೂಲಕ ಮುಂಬಯಿಗೆ ಹೋಗದೆ ಕಂಡ ಕಂಡವರಿಗೆ ತೋರಿಸುತ್ತ, ಅವರುಗಳು ಹೇಳಿದ ಚಿಕಿತ್ಸೆ ಮಾಡಿಸುತ್ತ ಎರಡು ಮೂರು ವರ್ಷ ಕಳೆದರು. ಆದಾಗ್ಯೂ ವಾಸಿಯಾಗದೆ ಕಾಯಿಲೆ ಹೆಚ್ಚುತ್ತಲೇ ಇತ್ತು. ಹೀಗಿರುವಾಗ ಪೇರೂರು ಗುಂಡೇರಾಯರ ಮನೆಯಲ್ಲಿ ಗುರುರಾಜರ ವೃಂದಾವನ ದರ್ಶನ ತೆಗೆದುಕೊಂಡು ಅಲ್ಲಿ ಕುಳಿತಿದ್ದ ಈ ಶ್ರೀಗಳವರಿಗೆ ಸಾಷ್ಟಾಂಗ ನಮಸ್ಕರಿಸಿ, ತನ್ನ ಮಗಳ ಕಾಲಿನ ವಿಚಾರ ತಿಳಿಸಿ, ನಮ್ಮ ಬುದ್ಧಿಗೆ ತೋಚಿದ ಚಿಕಿತ್ಸೆಗಳೆಲ್ಲ ಮಾಡಿದ್ದಾಗಿದೆ, ಅದರಿಂದ ಏನು ಪ್ರಯೋಜನವಾಗಿಲ್ಲ; ಮುಂಬಯಿಗೆ ಹೋಗಿ ಶಸ್ತ್ರಚಿಕಿತ್ಸೆ ಮಾಡಿಸುವುದಾಗಿ ಕೆಲಡಾಕ್ಟರು ಸಲಹೆ ಕೊಟ್ಟರು. ಇದು ಶ್ರೀಮಂತರಿಂದ ಸಾಧ್ಯವೇ ಹೊರತು ನನ್ನಂಥವನಿಂದ ಅಸಾಧ್ಯ, ತಮ್ಮಂತಹ ಮಹನೀಯರ ಅನುಗ್ರಹ ಬಲದಿಂದಲೇ ಗುಣವಾಗಬೇಕೇ ಹೊರತು ಬೇರೆ ಉಪಾಯವಿಲ್ಲ ಅಂತ ವಿನಂತಿಸಿಗೊಂಡನು. ಆಗ ಶ್ರೀಗಳವರು ಕೃಪಾದೃಷ್ಟಿಯಿಂದ ಆ ಕನ್ಯೆಗೆ ಮೃತ್ತಿಕೆ, ಪಾದೋದಕ ಕೊಟ್ಟು, ಮಂತ್ರಾಕ್ಷತೆಯನ್ನು ಸೆರಗಿನಲ್ಲಿ ಕಟ್ಟಿಸಿ, ಗಾಯವಾದ ಸ್ಥಳದಲ್ಲಿ ಹತ್ತಿಬಟ್ಟೆಯಿಂದ (ಬ್ಯಾಂಡೇಜ) ಕಟ್ಟಿಸಿ ಮರುದಿವಸ ಬರಲು ಹೇಳಿದರು. ತತ್ಪ್ರಭಾವದಿಂದ ಬೆಳಗುಮುಂಜಾನೆ ಆ ಮುರಿದ ಎಲುಬು ಚೂರು ಹೊರಗೆ ಬಿದ್ದು ಕೆಟ್ಟ ರಕ್ತ ಕೀವು ಯಾವತ್ತೂ ಹೊರಗೆ ಸೋರಿಹೋಯಿತು. ಇದರಿಂದ ಆ ಕನ್ಯೆಯ ಕಾಲಿನ ಬಾಧೆ ದಿನಕ್ರಮೇಣ ಕಡಿಮೆಯಾಗಿ ಸರಿಯಾಗಿ ನಡೆಯಲು ಬರುವಂತಾಯಿತು. ತದನಂತರ ಶ್ರೀಗಳವರು ಆದವಾನಿಗೆ ಬಂದರು.

ಇತ್ತ ಅಮಿತವಿಕ್ರಮರಾಯನು ತಾನು ತಿರುಪತಿಯಲ್ಲಿಟ್ಟಿದ್ದ ಅನ್ನ ಛತ್ರಕ್ಕೆ ಅಡಿಗೆ ಪಾತ್ರೆ ಸಲಕರಣೆ ಕಡಿಮೆ ಬಂದಿದ್ದರಿಂದ ತನ್ನ ಜಮೀನಿನ ಸ್ವಲ್ಪ ಭಾಗವನ್ನು ಮಾರಿ ಪಾತ್ರೆ ಪದಾರ್ಥಗಳನ್ನು ಕೊಂಡು ತಂದು ಅದರಲ್ಲಿ ಅರ್ಧ ಅಡಿಗೆ ಸಲಕರಣೆಗಳನ್ನು ಆದವಾನಿಗೆ ತಂದು ಶ್ರೀಗಳವರಿಗೆ ಅರ್ಪಿಸಿದನು. 'ಅಮಿತರಾಯ ನಿನ್ನ ಸೇವೆ ಬಹುದೊಡ್ಡದು. ಹೆಸರಿಗೆ ತಕ್ಕ ನಿನ್ನ ಮನಸ್ಸು, ಕಾರ್ಯ, ಶೌರ್ಯ, ಹರಿವಾಯು ಗುರುಗಳು ನಿನಗೆ ಸದ್ಗತಿ ಕೊಡಲಿ. ಮುಂದೆ ನಿನ್ನ ಮಗಳ ಮಕ್ಕಳಿಂದಲೇ ಹರಿವಾಯು ಗುರುಗಳು ಸೇವಾ ತೆಗೆದುಕೊಳ್ಳುವರು' ಅಂತ ನನ್ನ ಮಾವನಿಗೆ ಅಭಯವಿತ್ತರು. ಎರಡು ದಿವಸ ಇದ್ದು ತದನಂತರ ಶ್ರೀಗಳವರನ್ನು, ಊರಿಗೆ ಹೋಗಲು ಫಲ-ಮಂತ್ರಾಕ್ಷತೆಯನ್ನು ಕೇಳಿದನು. ಆಗ ಶ್ರೀಗಳವರು 'ಅಮಿತರಾಯ ಮತ್ತೆ ಯಾವಾಗ ಬರುತ್ತಿ?' ಅಂತ ಕೇಳಲು, 'ಸ್ವಾಮಿ ಕಾಲ ಹೆಚ್ಚಾಗಬಹುದು. ಅಂದರೆ ಐದಾರು ತಿಂಗಳು ಮೇಲೆ ಆಗಬಹುದು'. ಹಂಗಾದರೆ ನಿನ್ನ ಮೊಮ್ಮಗ ಶ್ರೀಕರನಿಗೆ ಜಾವಳ ಮಾಡಿ ಮುಗಿಸಿಬಿಡುತ್ತೇವೆ. ಅದನ್ನು ನೋಡಿಕೊಂಡು ಹೊರಡುವಿಯಂತೆ ಎಂದು ಹೇಳಿ ಜಾವಳ ಮಾಡಿ ಮುಗಿಸಿಬಿಟ್ಟರು. ಸ್ವಾಮಿ ಕಾರಣ ಕೇಳಬಹುದಾ! 'ದೈವಸಂಕಲ್ಪ ಹೇಗಿದೆಯೋ ತಿಳಿಯದು. ಆದ್ದರಿಂದ ಆದಷ್ಟು ಬಹಳ ತಿಂಗಳು ತಡಮಾಡದಲೆ ಆದಷ್ಟು ತೀರ್ವ ಬಂದುಬಿಡು' ಎಂದು ಹೇಳಿ ಫಲ-ಮಂತ್ರಾಕ್ಷತೆ ಕೊಟ್ಟರು. ಹಾಗೆ ಆಗಲಿ ಸ್ವಾಮಿ ಪ್ರಯತ್ನಿಸುವೆ ಎಂದನು ಅಮಿತರಾಯ.

೩೨. ಬಾದರೀ ಆಚಾರ್ಯರ ಭಾಗ್ಯ ಅನಂತಾಚಾರ್ಯರು ಸಾಧನದಸಾರ ಸವಿದರು.

ಈ ಕಡೆ ಧಾರವಾಡ ಜಿಲ್ಲೆಯಲ್ಲಿ ರೋಣ ತಾಲೂಕ 'ಇಟಗಿ' ಗ್ರಾಮಸ್ಥ ಹನುಮಂತಾಚಾರ್ಯ, ಅವರ ತಮ್ಮ 'ಅನಂತಾಚಾರ್ಯ' ರೆಂಬುವರು ಕಂಪ್ಲಿಯಲ್ಲಿದ್ದ ರಾಮಾಚಾರ್ಯರೆಂಬ ಸದ್ಗೃಹಸ್ಥರಲ್ಲಿ ಬಾಲ್ಯದಲ್ಲಿ ಸೇವಾ ಮಾಡಿಕೊಂಡಿದ್ದರು. ಅವರು ಭಗವತ್ತತ್ತ್ವ ವಿಚಾರವನ್ನು ಈ ಉಭಯರಿಗೆ ತಿಳಿಸುತ್ತ ಮಧ್ಯ ಮಧ್ಯ ಆದವಾನಿಯಲ್ಲಿರುವ ಮುತ್ತಿಗಿ ಆಚಾರ್ಯರೆಂಬ ಜ್ಞಾನಿಗಳಿದ್ದಾರೆ. ನೀವು ಒಂದುಸಲವಾದರೂ ದರ್ಶನ ತೆಗೆದುಕೊಳ್ಳಬೇಕು ಅಂತ ಹೇಳುತ್ತಿದ್ದರು. ಅವರು ಮಾಡಿದ ಸಾಧನಾ ಕ್ರಮಗಳನ್ನು ತಿಳಿಸುತ್ತಿದ್ದರು. ಈ ಉಭಯರಿಗೆ ಇವರ ದರ್ಶನ ತೆಗೆದುಕೊಳ್ಳಬೇಕೆಂದು ಬಹುಕಾಲದಿಂದ ಲವಲವಿಕೆ ಇದ್ದರೂ ಸಾಧಿಸದೇ ಇತ್ತು. ಹೀಗಿರುವಾಗ ಈ ಉಭಯರು ಕರೋಡಗಿರಿ (ನೈಜಾಮ ಕಾಲದಲ್ಲಿ) ಕಛೇರಿಯಲ್ಲಿ ನೌಕರಿ ಮಾಡುತ್ತಿರುವಾಗ ಕೊಪ್ಪಳ ಸಮೀಪ ಗಿಣಿಗೇರ ಎಂಬ ಗ್ರಾಮಕ್ಕೆ ವರ್ಗವಾಗಿ ಬಂದಿದ್ದರು. ಮುಂದೆ ಕೆಲವು ದಿನಗಳ ನಂತರ ಈ ಅನಂತಾಚಾರ್ಯರು ಕರೋಡಗಿರಿ ಕೆಲಸ ಬಿಟ್ಟು ವಿರಕ್ತಿ ಮಾರ್ಗಾವಲಂಬಿಯಾಗಿ ಕೊಪ್ಪಳದಲ್ಲಿ ವಾಸಮಾಡಿಕೊಂಡು ಬಾದರೀ ಕೃಷ್ಣಾಚಾರ್ಯರಲ್ಲಿ ಶಿಷ್ಯತ್ವ ವಹಿಸಿದ್ದರು. ಈ ಬಾದರೀ ಕೃಷ್ಣಾಚಾರ್ಯರು, ರಾವುಜಿರಾಯರು, ಮದೋಳ ಕಿಶನ್‌ರಾಯರಿಗೂ ಪರಿಚಯವಿತ್ತು. ರಾವುಜಿರಾಯರ ಕಡೆಯಿಂದ ಬಾದರಿ ಕೃಷ್ಣಾಚಾರ್ಯರು ಮುತ್ತಿಗಿ ಶ್ರೀಪಾದಂಗಳವರನ್ನು ನೋಡಿದ್ದರು. (ರಾವುಜಿರಾಯರಿಗೆ ಶ್ರೀಗಳವರು

ಅವರ ಪೂರ್ವಾಶ್ರಮದಲ್ಲಿಯೇ ಪರಿಚಯವಿತ್ತೆಂಬುದು ತಿಳಿದ ವಿಷಯವೇ) ಆ ಸಮಯದಲ್ಲಿ ಈ ಅನಂತಾಚಾರ್ಯರು ಹುಲಿಗಿ ಹುಚ್ಚಾಚಾರ್ಯರಲ್ಲಿ ಪಾಠ ಪ್ರವಚನ ವ್ಯಾಸಂಗ ಮಾಡುತ್ತ ಬಾದರಿಯವರಲ್ಲಿ ವಿಶೇಷ ಶಿಷ್ಯತ್ವ ವಹಿಸಿದ್ದರು. (ಹಿಂದಕ್ಕೆ ಬಾದರಿಕೃಷ್ಣಾಚಾರ್ಯರಿಗೆ ಒಂದು ರಾತ್ರಿಯಲ್ಲಿ ಒಬ್ಬ ದಾಸಶ್ರೇಷ್ಠರು ಇವರಿಗೆ ಒಂದು ತಂಬೂರಿಯನ್ನು ಕೊಟ್ಟಿದ್ದರು. ಅದನ್ನು ಪ್ರತಿ ದಿವಸ ಮೀಟಿಸಿ ಪುಷ್ಪಾದಿಗಳಿಂದ ಪೂಜೆ ಮಾಡುವ ಪದ್ಧತಿಯನ್ನಿಟ್ಟುಕೊಂಡಿದ್ದರು) ಈ ಆಚಾರ್ಯರು ಹೆಚ್ಚಿನ ಹವ್ಯಾಸಕ್ಕೆ ಹೋಗದೆ ತಮ್ಮ ಹೊಲದಲ್ಲಿ ಬೆಳೆದು ಬಂದದ್ದರಲ್ಲಿ ಜೀವನೋಪಾಯ ಮಾಡಿಕೊಂಡಿದ್ದರು. ಈಗಲೂ ಕೊಟ್ಟ ತಂಬೂರಿ ಇದೆ. ನೋಡಬಹುದು. ಹೀಗೆ ಕೆಲವು ಕಾಲ ಗತಿಸಿದನಂತರ ಈ ಸಾರಿ ಶ್ರೀರಾಮನವಮಿ ಉತ್ಸವಕ್ಕೆ ಹೋಗಿ ಆ ಗುರುಗಳ ದರ್ಶನ ತೆಗೆದುಕೊಳ್ಳಬೇಕೆಂದು ನಿರ್ಧರಿಸಿ. 'ನೀವು ಶ್ರೀರಾಮನವಮಿಯ ಉತ್ಸವಕ್ಕೆ ಆದವಾನಿಗೆ ಹೋಗುವಾಗ ನಮ್ಮನ್ನು ಕರೆದುಕೊಂಡು ಹೋಗಿರಿ' ಅಂತ ಅನಂತಾಚಾರ್ಯರು ರಾವುಜಿರಾಯರನ್ನು ಕೇಳಿಕೊಂಡರು. (ಆಗ ಹನುಮಂತಾಚಾರ್ಯರು ನೌಕರಿ ನಿಮಿತ್ತ ಸ್ಥಳಾಂತರದಲ್ಲಿದ್ದ ಪ್ರಯುಕ್ತ ಈ ಆನಂತಾಚಾರ್ಯರೊಬ್ಬರೆ ಹೊರಡತಕ್ಕವರಾದರು) ಆದರೆ ಆ ಸಮಯದಲ್ಲಿ ಅನಂತಾಚಾರ್ಯರಿಗೆ ವಿಶೇಷ ಜ್ವರ ಬಂದ ಕಾರಣ ಆದವಾನಿಗೆ ಬರಲಾಗಲಿಲ್ಲ. ರಾವುಜಿರಾಯರು ಮಾತ್ರ ಬಂದದ್ದನ್ನು ಶ್ರೀಗಳವರು ಕಂಡು 'ರಾವುಜಿರಾಯ ಅನಂತಾಚಾರ್ಯರನ್ನು ನಿನ್ನ ಸಂಗಡ ಏಕೆ ಕರೆದುಕೊಂಡು ಬರಲಿಲ್ಲ?' ಅಂತ ಪ್ರಶ್ನೆ ಮಾಡಿದರು. ಆಗ ರಾವುಜಿರಾಯರು ಅವಾಕ್ಕಾದರು. ಇದುವರೆಗೆ ರಾವುಜಿರಾಯರಾಗಲಿ, ಬಾದರಿಯವರಾಗಲಿ ಈ ಅನಂತಾಚಾರ್ಯರ ಹೆಸರೇ ಎತ್ತಿದ್ದಿಲ್ಲ. ಅವರ ವಿಷಯವು ತಿಳಿಸಿದ್ದಿಲ್ಲ. 'ಈಗ ಇವರು ಅವರ ಹೆಸರು ಹೇಳಿ ಕೇಳುತ್ತಿರುವರಲ್ಲ ಏನಾಶ್ಚರ್ಯ! ಇದರಿಂದ ಇವರು ಅಪರೋಕ್ಷ ಜ್ಞಾನಿಗಳಾಗಿರಲೇ ಬೇಕು' ಎಂದು ರಾವುಜಿರಾಯರು ತಮ್ಮ ಮನಸ್ಸಿನಲ್ಲಿ ಅಂದುಕೊಂಡಿದ್ದನ್ನು ನನಗೆ ತಿಳಿಸಿದರು. 'ಸ್ವಾಮಿ! ಆಚಾರ್ಯರಿಗೆ ಸ್ವಲ್ಪ ಅಸ್ವಸ್ಥರಾದ್ದರಿಂದ ಅವರಿಗೆ ಬರಲಾಗಲಿಲ್ಲ' ಅಂತ ಹೇಳಿದನು. ಇಲ್ಲಿಯ ಉತ್ಸವ ನೋಡಿಕೊಂಡು ಕೊಪ್ಪಳಕ್ಕೆ ಹೋಗುವಾಗ ಫಲ-ಮಂತ್ರಾಕ್ಷತೆಯನ್ನು ತೆಗೆದುಕೊಂಡು ಅಲ್ಲಿಯ ಯಾವತ್ ಜನಗಳಿಗೆ ಕೊಡಲು ನಿಶ್ಚಯಿಸಿದರು. ಈ ಸಂದರ್ಭದಲ್ಲಿ ಜ್ವರ ಬಂದ ತಾಪದಲ್ಲಿ ರಾತ್ರಿಯಲ್ಲಿ ಈ ಅನಂತಾಚಾರ್ಯರು 'ಶ್ರೀ ರಘುಪ್ರೇಮತೀರ್ಥ ಗುರುಭ್ಯೋ ನಮಃ' ಎಂದು ೨, ೩ ಸಲ ಸ್ಮರಿಸಿ ನಿದ್ದೆ ಮಾಡಿದ್ದರು. ಆ ಸಮಯದಲ್ಲಿ ಮಾಳಿಗೆಯ ಜಂತಿಯಿಂದ ಮಂತ್ರಾಕ್ಷತೆ ಅವರ ತಲೆಯಮೇಲೆ, ಹಾಸಿಗೆಯ ಮೇಲೆಲ್ಲಾ ಬಿದ್ದಿದ್ದರಿಂದ ಪಕ್ಕದಲ್ಲಿ ಮಲಗಿದ್ದ ಹೆಂಡತಿ ಕುಂ.ಸೌ. ವೆಂಕುಬಾಯಿ ಕೂಡಲೆ ಎಚ್ಚತ್ತು 'ಏನಿದು ಇಷ್ಟೊಂದು ಮಂತ್ರಾಕ್ಷತೆ ಎಲ್ಲಿಂದ ಬಿತ್ತು' ಎಂದು ತನ್ನ ಪತಿಯನ್ನು ಕೇಳಲು 'ಅದೇ' ನನಗೂ ಆಶ್ಚರ್ಯ, ಜ್ವರದ ತಾಪವೆಲ್ಲ ಕ್ಷಣಮಾತ್ರದಲ್ಲಿ ಕಡಿಮೆ ಆಗಿದೆ'. ಮಂತ್ರಾಕ್ಷತೆಯನ್ನು ಸವರಿ ಬಳಿದುಕೊಂಡು ತಮ್ಮ ಪತ್ನಿಯ ಸೆರಗಿನಲ್ಲಿ ಸ್ವಲ್ಪ ಕಟ್ಟಿ ಮತ್ತು ತಮ್ಮ ತಲದಿಂಬು ಬುಡದಲ್ಲಿಟ್ಟು ಮಲಗಿದರಂತೆ. ಮರುದಿವಸ ರಾವುಜಿರಾಯರು ಬಂದು ಶ್ರೀಗಳವರು ಕಳಿಸಿಕೊಟ್ಟ ಮಂತ್ರಾಕ್ಷತೆಯನ್ನು ಈ ಅನಂತಾಚಾರ್ಯರಿಗೆ ಕೊಟ್ಟರು. ಕೂಡಲೆ

ಅನಂತಾಚಾರ್ಯರು ತಮ್ಮಲ್ಲಿದ್ದ ಅಕ್ಷತೆ ಮತ್ತು ರಾವುಜಿರಾಯರು ಕೊಟ್ಟ ಅಕ್ಷತೆಗೆ ಹೋಲಿಸಿ ನೋಡಲಾಗಿ ಒಂದೇ ರೀತಿಯಲ್ಲಿದ್ದವು. ಆಶ್ಚರ್ಯದಿಂದ ರಾವುಜಿರಾಯರು ಶ್ರೀಗಳವರು ತಮ್ಮನ್ನು ಸ್ವತಃ ವಿಚಾರಿಸಿದ್ದು ವಿವರಿಸಿದರು. ಅನಂತಾಚಾರ್ಯರು ಶ್ರೀಗಳವರನ್ನು ಸ್ಮರಿಸುತ್ತ ಕೂಡಲೇ ಅವರನ್ನು ನೋಡಲು ಆತುರ ಪಟ್ಟು ರಾವುಜಿರಾಯರನ್ನು ವಿನಯದಿಂದ ಕೇಳಿಕೊಳ್ಳುತ್ತ ಕಣ್ಣಿನಲ್ಲಿ ನೀರು ತಂದುಕೊಂಡು 'ನನ್ನ ಮನೋಭಾವ ಬಲ್ಲ; ದಯಾಮಯರಾದ ಆ ಮಹನೀಯರು ನನ್ನಲ್ಲಿ ನಿರ್ವ್ಯಾಜ ಪರಮ ಕೃಪಾಕಟಾಕ್ಷವಿಟ್ಟು ತಾವಾಗಿಯೇ ಮಂತ್ರಾಕ್ಷತೆಯನ್ನು ದಯಪಾಲಿಸಿದ ಆ ಮಹಾತ್ಮರನ್ನು ಎಷ್ಟು ಕೊಂಡಾಡಿದರೂ ಸಾಲದೆಂದು' ಕಂಠಬಿಗಿದು ರೋಮಾಂಚಕರಾಗಿ ಆನಂದ ಭಾಷ್ಪಗಳುದುರಿಸುತ್ತ ಗದ್ಗದ ಸ್ವರದಿಂದ ನುಡಿದರು. ಈ ವಾರ್ತಾ ಹರಡಿ ತಿಳಿದವರಿಗೆ ಬಹು ಕೌತುಕವಾಗಿ ತೋರಿಬಂದರೂ, ಅದು ಸತ್ಯವಾಗಿತ್ತು ಮತ್ತು ಯಥಾರ್ಥವಾಗಿತ್ತು, ನಂತರ ಕೆಲವು ದಿನಗಳಾದ ಮೇಲೆ ಬಾದರೀ ಕೃಷ್ಣಾಚಾರ್ಯರು, ಅನಂತಾಚಾರ್ಯರು ಕೂಡಿ ಇಲ್ಲಿಗೆ (ಆದವಾನಿಗೆ) ಬಂದರು. ಶ್ರೀಗಳವರು ಈ ಅನಂತಾಚಾರ್ಯರನ್ನು ನೋಡಿದಾಕ್ಷಣ 'ಆರೋಗ್ಯವೇ; ಕ್ಷೇಮವೇ; ಎಂಬುದಾಗಿ ಬಹು ಹಿಂದಿನ ಪರಿಚಯಸ್ಥರಂತೆ ವಿಚಾರಿಸಿದರು. ಅದಲ್ಲದೆ ಅನಂತಾಚಾರ್ಯರಿಗೆ ಆಗಾಗ ಬಿಕ್ಕುಗಳು ತನ್ನಷ್ಟಕ್ಕೆ ತಾನೇ ಬರುತ್ತಿತ್ತು. ಅದರಂತೆ, ಆಗ ಇವರಿಗೆ ಬರಲು ಭಾಗಮ್ಮ ಎಂಬ ಮಡಿ ಹೆಂಗಸನ್ನು ಕರೆದು ಒಂದು ಮುಷ್ಟಿ ಅವಲಕ್ಕಿ ತರಿಸಿ ಸ್ವೀಕರಿಸಲು ಹೇಳಿದರು. ಆಚಾರ್ಯರೇ ಈ ಬಿಕ್ಕು ಇಂದಿನದಲ್ಲ. ನೀವು ಕೆಲಕಾಲ ಅನುಭಬಿಸಲೇಬೇಕು ತಪ್ಪಿದ್ದಲ್ಲ. ಮುಂದೆ ಕಾಲಗತಿಸಿದಂತೆ ತನ್ನಷ್ಟಕ್ಕೆ ತಾನೇ ನಿಂತುಹೋಗುವುದು' ಅಂತ ಹೇಳಿದರು. ಕೆಲವು ವಿಷಯಗಳು ಗುಹ್ಯವಾಗಿ ವಿಚಾರಿಸುತ್ತ 'ಆ ಕಂಪ್ಲಿ ರಾಮಾಚಾರ್ಯರು ಸಹ ನಮ್ಮ ಶಾಖಾವಲಂಬಿಗಳೇ. ನೀವು ಅವರ ಶಾಖಾವಲಂಬನ ಮಾಡೋಣದರಿಂದ ಪೂರ್ವದಲ್ಲಿ ನಮ್ಮ ಶಾಖಾವಲಂಬನ ಮಾಡಿದಂತಾಯಿತು'. ಅಂದು ಕೆಲವು ರಹಸ್ಯ ತತ್ವೋಪದೇಶ ಮಾಡಿ ಶ್ರೀ ಮದಾಚಾರ್ಯರ ತಂತ್ರಸಾರ ಸಂಗ್ರಹದಲ್ಲಿದ್ದ ಮಹಾ ಮಂತ್ರಗಳನ್ನು ಈ ಉಭಯರಿಂದ ಜಪ ಮಾಡಿಸಿ ಹೋಮಾದಿಗಳನ್ನು ಮಾಡಿಸಿದರು. ನಾವು ನಾರಾಯಣಪೇಟೆಯ ಬೊಜ್ಜಿ ಗುರುರಾಜಾಚಾರ್ಯರಿಗೆ ಪರಲೋಕ ಸಾಧಕ ಉಪಾಸನಾ ಮಾರ್ಗಗಳನ್ನೇ ತಿಳಿಸಿದ್ದೆವು. ಅವರ ದುಷ್ಕರ್ಮದಿಂದ ಅದೆಲ್ಲವು ವ್ಯರ್ಥವಾಯಿತು. ಪುನಃ ಅಂತಹ ಉಪಾಸನಾದಿ ಕಾರ್ಯಗಳನ್ನು ಮಾಡಲಿದ್ದೇವೆ. ಆದರೆ, ನೀವು ಬಂದದು ಅಸ್ತಮಯ ಕಾಲವಾದ್ದರಿಂದ ಹೆಚ್ಚಿಗೆ ಹೇಳುವ ಅವಕಾಶವಿಲ್ಲ. ಕೆಲವರು ತಾವು ಹಾಕಿದ ವೃಕ್ಷವು ಅಭಿವೃದ್ಧಿ ಹೊಂದಿ ಫಲ-ಪುಷ್ಪಾದಿಗಳು ನೋಡಿಯೂ, ಅನುಭವಿಸಿಯೂ, ಆನಂದಪಡುವರು. ಕೆಲವರಿಗೆ ವೃಕ್ಷ ಹಾಕೋಣ, ಮತ್ಯಾವ ಲಾಭ ಅನುಭವಿಸುವುದಿಲ್ಲ ಮತ್ತು ನೋಡುವುದು ಸಹಾ ಆಗುವುದಿಲ್ಲ. ಅದರಂತೆ ನಾವು ಹಾಕಿದ ಪಾರಮಾರ್ಥಿಕ ಸಾಧನ ವೃಕ್ಷದ ಬೀಜವು ಮೊಳೆತು ಪುನಃ ವೃಕ್ಷವಾಗಿ ಫಲ-ಪುಷ್ಪಗಳಾಗದೆ ಒಣಗಿಹೋದದ್ದು ನಮ್ಮ ದುರ್ದೈವವೆಂದು ವಿಷಾದ ವ್ಯಕ್ತಪಡಿಸುತ್ತ ವೃಕ್ಷಗಳನ್ನು ಹಾಕಿದ್ದವರು, ಮುಂದೆ ಮಕ್ಕಳು ಮೊಮ್ಮಕ್ಕಳು ಅನುಭವಿಸುವರೆಂದು ಆನಂದ

ಪಡುವಂತೆ ನಿಮ್ಮ ನಿಮಿತ್ತ ಆನಂದಪಡುವಂತಾಯಿತು' ಅಂತ ನುಡಿದರು. ಈ ಉಭಯರು ೨, ೩ ದಿವಸಗಳಿದ್ದು ಫಲ ಮಂತ್ರಾಕ್ಷತೆ ಸ್ವೀಕರಿಸಿ ತಮ್ಮ ಊರಾದ ಕೊಪ್ಪಳಕ್ಕೆ ಬಂದರು.

೩೩. ಅಂತ್ಯಕಾಲ ತಿಳಿದು ಆತಂಕಗೊಳ್ಳಲಿಲ್ಲ

ಅನಂತರ ಶ್ರಾವಣ ವದ್ಯ ತೃತೀಯ ಆಗತಕ್ಕ ರಾಘವೇಂದ್ರ ತೀರ್ಥರ ಆರಾಧನೆಗಾಗಿ ನಾನು (ಶ್ರೀಗಳವರಿಂದ ಸ್ಥಾಪಿಸಲ್ಪಟ್ಟ ರಾಯರ ಬೃಂದಾವನ) ನಾರಾಯಣಪೇಟೆಗೆ ಹೊರಡುವ ಇಷ್ಟದಿಂದ ನಮಸ್ಕಾರ ಮಾಡಿ ಮಂತ್ರಾಕ್ಷತೆಯನ್ನು ಕೊಡಬೇಕೆಂದು ಅವರನ್ನು ಕೇಳಿದೆನು. ಪ್ರಯಾಣ ಮಾಡುವಾಗಲೆಲ್ಲ ಈ ರೀತಿ ಕೇಳುವುದು ರೂಢಿಯಾಗಿತ್ತು. ಆದರೆ ಮರು ಮಾತಾಡದೆ ಮಂತ್ರಾಕ್ಷತೆಯನ್ನು ಕೊಟ್ಟು, 'ಈಸಾರೆ ಯಾವಾಗ ಬರುತ್ತಿ?' ಅಂತ ಪ್ರಶ್ನೆ ಮಾಡಿದರು. 'ಒಂದು ತಿಂಗಳಲ್ಲಿ ತಿರಗಿ ಬರುತ್ತೇನೆ' ಎಂದು ಉತ್ತರ ಕೊಟ್ಟೆ. 'ಅಷ್ಟು ದಿನ ಏತಕ್ಕೆ ಹೋಗುವಿ?' ಅಂತ ಕೇಳಿದರು. ಆ ಪ್ರಾಂತದ ಹತ್ತೆಂಟು ಗ್ರಾಮಗಳಲ್ಲಿದ್ದ ನಮ್ಮ ಶಿಷ್ಯರುಗಳ ಮನೆಗೆ ೨, ೩ ದಿನಸದಂತೆ ಇದ್ದರೂ. ಸುಮಾರು ಒಂದು ತಿಂಗಳು ಬೇಕಾಗುತ್ತದೆ. 'ಅಷ್ಟು ದಿನಗಳು ಹೋಗಬೇಡ, ಆದಷ್ಟು ತೀವ್ರವಾಗಿ ಬಾ' ಅಂತ ಮತ್ತೊಮ್ಮೆ ಹೇಳಿ ನನ್ನ ಹೆಂಡತಿಯನ್ನು ಕರೆದು, 'ತುಂಗ, ಇನ್ನು ಮುಂದೆ ನೀನು ಎಲ್ಲಿಗೂ ಹೋಗಬೇಡ. ಮುಂದೆ ಹರಿವಾಯುಗಳು ನಿನ್ನಿಂದ ಸೇವಾ ತೆಗೆದುಕೊಳ್ಳುವರು, ಅದಲ್ಲದೆ, ಕೆಲಕಾಲ ನಂತರ ಇಲ್ಲಿಗೆ ಒಂದು ಕೋತಿ (ಮಂಗ) ಸೇವಾರ್ಥವಾಗಿ ಬರುತ್ತದೆ ಅದನ್ನು ಹೊಡೆದು ಹೊರಗೆ ಹಾಕಸಬೇಡ. ತನ್ನ ಸ್ವಭಾವತಃ ಏನು ಚೇಷ್ಟೆ ಮಾಡಿದರೂ ಸುಮ್ಮನಿರು. ಏಕೆಂದರೆ ನಿನ್ನ ಗಂಡ ಸ್ವಾಮಿ ಮತ್ತು ಮೈದುನ ಕೃಷ್ಣ ಇಬ್ಬರು ಮುಂಗೋಪಿಗಳು, ಸಿಟ್ಟಿನ ಭರದಲ್ಲಿ ಹೊಡೆಯಬಹುದು, ಅದಕ್ಕೆ ಹೇಳಿದೆ'. 'ಆಗಲಿ ಸ್ವಾಮಿ! ಎಲ್ಲಿಗೆ ಹೋಗುವುದಿಲ್ಲ. ಆ ಕೋತಿ ಬಂದಾಗ ಜಾಗ್ರತೆಯಾಗಿ ನೋಡಿಕೊಳ್ಳುವೆನು. ಕೆಲವು ದಿನಗಳ ಕೆಳಗೆ ಅನಂತಾಚಾರ್ಯರೆಂಬುವರು ಬಂದಿದ್ದರಲ್ಲ ಅವರಿಗೆ ಆಗಾಗ ಬಿಕ್ಕುಗಳು ಬರುತ್ತಿರುತ್ತವೆ. ಅವು ಬಂದಕೂಡಲೆ ಅವರಿಗೆ ಒಂದು ಮುಷ್ಟಿ ಅವಲಕ್ಕಿ ಕೊಟ್ಟುಬಿಡು. ಮರೆಯಬೇಡ' ಅಂದರಂತೆ. ನಮ್ಮ ಗುರುಗಳ ಮೊಮ್ಮಕ್ಕಳ ಹನುಮಂತಾಚಾರ್ಯರಿಗೆ ಏನು ಬೇಕೆಂದರೆ ಅದರಂತೆ ಅಡಿಗೆ ಮಾಡಿ ಹಾಕು ಅಂತ ಹೇಳಿದರು. ಅದರಂತೆ ನನಗು, ಸ್ವಾಮಿ! ನೀನು ಅವರಿಗೆ ಮೊದಲು ತೀರ್ಥ ಕೊಟ್ಟು ನಂತರ, ಬಾದರಿ, ರಾವುಜಿ, ಅನಂತಾಚಾರ್ಯರಿಗೆ ಕೊಟ್ಟು ನಂತರ ಎಲ್ಲರಿಗೆ ಕೊಡು ಎಂದು ಹೇಳಿದರು. ನಾನು ಹೆಚ್ಚಿಗೆ ನಿಲ್ಲದೆ ಮಂತ್ರಾಕ್ಷತೆಯನ್ನು ತೆಗೆದುಕೊಂಡು ಪ್ರಯಾಣೋನ್ಮುಖನಾದೆನು. ಅಷ್ಟರಲ್ಲಿ ಗಾರ್ಲಪಾಡು ಕೃಷ್ಣಾಚಾರ್ಯರು ಬಂದರು. ಅವರಿಗೆ ಕೃಷ್ಣಾಷ್ಟಮಿ ತೀರಿಸಿಕೊಂಡು ಹೋಗಲು ಹೇಳಿದರು. ಅಷ್ಟಮಿ ದಿವಸ ಶ್ರೀಗಳವರಿಗೆ ಸ್ವಲ್ಪ ದೇಹಾಲಸ್ಯವಾಯಿತು. ಮರುದಿನ ಬೆಳಿಗ್ಗೆ ಪಾರಣೆ ಆದಕೂಡಲೆ ಈ ಗಾರ್ಲಪಾಡು ಕೃಷ್ಣಾಚಾರ್ಯರು ತಮ್ಮ ಸ್ವಗ್ರಾಮಕ್ಕೆ ಹೋಗಲು ಮಂತ್ರಾಕ್ಷತೆಯನ್ನು ಶ್ರೀಗಳವರನ್ನು ಕೇಳಿದರು. 'ಈಗ ಹೋಗುವುದು ಬೇಡ ಅಮಾವಾಸ್ಯೆ ನಂತರ ಅಪ್ಪಣೆ ಕೊಡುವೆವು' ಅಂತ ಹೇಳಿ ಅವರನ್ನು ನಿಲ್ಲಿಸಿಕೊಂಡರು. ಕೆಲವರಿಗೆ

ಪತ್ರಬರೆದು ವಿಜಾಪುರದಿಂದ ಡಾಕ್ಟರು ಗೋವಿಂದರಾಯ, ಬಂಡೆಪ್ಪ ಇನ್ನೂ ಕೆಲವರನ್ನು ಆದವಾನಿಗೆ ಕರೆಸಿಕೊಂಡರು. ನನಗೋಸ್ಕರ ಹೊಳಗುಂದಿ ಭೀಮಸೇನರಾಯನ ಮುಖಾಂತರ ನಾರಾಯಣಪೇಟೆ ಜೋಯಿಸ ವೆಂಕೋಬಾಚಾರ್ಯರಿಗೆ ನನ್ನನ್ನು ಶೀಘ್ರವಾಗಿ ಬರಲು ಕರೆಕಳಿಸಿದರು. ಆಗ್ಗೆ ಬಳ್ಳಾರಿಯಲ್ಲಿದ್ದ ನನ್ನ ತಮ್ಮ ಭೀಮಸೇನನಿಗೆ ಶ್ರೀಗಳವರು ಅಸ್ವಸ್ಥರಾಗಿದ್ದಾರೆ ತೀವ್ರ ಹೊರಟು ಬಾ *(Swamiji sick start immidiately)* ಅಂತ ತಾರು ಮಾಡಿಸಿದರು. ನಾನು ಪ್ರಯಾಣ ಮಾಡುತ್ತಿರುವುದರಿಂದ ನನಗೆ ಸಕಾಲದಲ್ಲಿ ವಾರ್ತಾ ಮುಟ್ಟಿದ್ದರಿಂದ ರಣಪಾಟ್ಲ, ಕೋಟಂಕೊಂಡ, ಜಠರ ಮೂಲಕ ಆನಂದರಾಯ, ರಾಘವೇಂದ್ರರಾಯ ಸಮೇತ ತ್ರಯೋದಶಿ ಆದವಾನಿಗೆ ಬಂದು ಮುಟ್ಟಿದೆವು. ಅಷ್ಟರಲ್ಲಿ ಬಳ್ಳಾರಿಯಿಂದ ಭೀಮಸೇನ, ಹುಬ್ಬಳ್ಳಿಯಿಂದ ವಿಠ್ಠಲರಾಯ ದೇಶಪಾಂಡೆ, ಆತನ ಮಗ ರಂಗರಾಯ ಬಂದರು. ಅಷ್ಟೊತ್ತಿಗೆ ಶ್ರೀಗಳವರಿಗೆ ದೇಹ ಆಯಾಸವು ದಿನೇ ದಿನೇ ಹೆಚ್ಚಾಯಿತು. ಬಿಜಾಪುರದಿಂದ ಕೂರ್ತಿ ಗುರುರಾಯರ ಹೆಂಡತಿ ತಾರಾಬಾಯಿ ಇವರ ತಾಯಿ ತುಲಸಾಬಾಯಿ ಬಂದರು. ಶ್ರೀಗಳವರು ನಳಿನಗಂಡ ಹನುಮಂತರಾಯ ಬರಲಿಲ್ಲವೇ? ಅಂತ ಕೇಳಿದರು. 'ಇಲ್ಲ ಸ್ವಾಮಿ' ಅಂತ ಗುರುರಾಯ ಅಂದನು. ಅಷ್ಟರಲ್ಲಿ ಕಾಮವಾರ ಎಂಬ ಹಳ್ಳಿಯಿಂದ ಸ್ವಾಮಿರಾಯ, ಅವನ ತಮ್ಮ ರಾಘವೇಂದ್ರ ಬಂದಿದ್ದರು. (ಈ ಸ್ವಾಮಿರಾಯನು ಶ್ರೀಗಳವರ ಪೂರ್ವಾಶ್ರಮ ಶ್ರೀನಿವಾಸಾಚಾರ್ಯರ ಹೆಂಡತಿ ಕಡೆಯ ಬಳಗದವನು) ಸಾಧಾರಣ ಎಲ್ಲರೂ ಬಂದರು. ಆದರೆ ನನ್ನ ಮಾವ, ವೆಂಕಟರಾವು, ಆಮಿತರಾಯ ಬರಲಿಲ್ಲ. (ಶ್ರೀಗಳವರು ಅಕ್ಕಿಯನ್ನು ಬಿಟ್ಟು ನವಣೆ ಅಕ್ಕಿ ಊಟಮಾಡುತ್ತಿದ್ದರು. ಆದರೆ ೩, ೪ ದಿವಸದಿಂದ ಅದನ್ನು ಸ್ವೀಕರಿಸುತ್ತಿದ್ದಿಲ್ಲ) ಅದಲ್ಲದೆ ಕೆಲವು ಸಮಯದಿಂದಲೇ ಇವರಿಗೆ ಕಣ್ಣುಗಳು ಸರಿಯಾಗಿ ಕಾಣಿಸದೆ, ಮಸಕು ಮಸಕಾಗಿ ಕಾಣಿಸುತ್ತಿದ್ದವು. ಬಂದವರನ್ನು ಅವರ ನಡತೆ ಧ್ವನಿಗಳಿಂದಲೇ ಗುರುತು ಹಿಡಿದು ಮಾತಾಡಿಸುತ್ತಿದ್ದರು.

೩೪. ವೃಂದಾವನ ಹಾಗು ಸನ್ನಿಧಿಮಹಿಮೆ ಸಾರಿದರು.

'ಸ್ವಾಮಿ, ನೀನು, ಆದಷ್ಟು ತೀವ್ರ ಸ್ನಾನ ಆಹ್ನಿಕವನ್ನು ತೀರಿಸಿ ಕೊಂಡು ಬಾ' ಅಂತ ನನಗೆ ಹೇಳಿದರು. ಅದರಂತೆ ನಾನು ಎಲ್ಲಾ ಕಾರ್ಯಗಳನ್ನು ಶೀಘ್ರದಲ್ಲಿ ಮುಗಿಸಿಕೊಂಡು ಅವರ ಹತ್ತಿರದಲ್ಲಿ ಬಂದು ಕೂತೆ. ಡಾಕ್ಟರ ಗೋವಿಂದರಾಯನನ್ನು ಕರೆದು ಕೂಡಲು ಹೇಳಿ ಉಳಿದವರನ್ನು ಹೊರಗೆ ಕಳಿಸಿದರು. ನಾವು ವೈರಾಗ್ಯದ ಶಿಖರವನ್ನು ಮುಟ್ಟಿರುವೆವೆಂಬುದು ನಿಮಗೆ ತಿಳಿದೇ ಇದೆ. ಆದರೆ ನಮ್ಮ ವೃಂದಾವನ ಸ್ಥಾಪಿಸುವ ವಿಷಯದಲ್ಲಿ ಕೆಲವು ವಿಷಯಗಳನ್ನು ತಿಳಿಯ ಬಯಸುವೆವು. ಯದ್ಯಪಿ ಈ ದೇಹದಲ್ಲಿ ನಾವು ಇದ್ದಾಗ್ಯೂ ಈ ದೇಹಾಭಿಮಾನ ಪರಿತ್ಯಾಗ ಮಾಡಿ ನಾವು ಹೊರಟುಹೋದ ಮೇಲೆ ಈ ದೇಹದಲ್ಲಿದ್ದ ಮೋಹ ಇರದೆ, ಹೊರಟುಹೋಗುತ್ತದೆ. ಆದಾಗ್ಯೂ ಶ್ರೀಹರಿ ವಾಯುಗಳು ನಮ್ಮ ದೇಹದಿಂದ ಹೆಚ್ಚು ಸಾಧನ ಮಾಡಿಸಿದ್ದುದರಿಂದ ಆ ಪುಣ್ಯರಾಶಿಯನ್ನು ಲೋಕದಲ್ಲಿ ಬಂದ ಸಾತ್ವಿಕ ಜನರ ಅನಿಷ್ಟ ನಿವೃತ್ತಿಗೂ,

ಇಷ್ಟ ಪ್ರಾಪ್ತಿಗೋಸ್ಕರ ಹುಡುಕುವ ಸಲುವಾಗಿ **ಮೊಹೆಂದ, ರುದ್ರನಿಂದ** ಒಡಗೂಡಿ ನನ್ನ ಒಂದಂಶ ಸಹಿತರಾಗಿ, ಈ ರೂಪಗಳಿಂದ ಉಪಾಸ್ಯರಾಗಿ, ಅಷ್ಟು ರೂಪಗಳಿಂದ ನಮ್ಮ ವೃಂದಾವನದಲ್ಲಿ ಸನ್ನಿಹಿತರಾಗಿದ್ದು ಭಜಕ ಭಕ್ತರ ಮನೋಭೀಷ್ಟಕ್ಕೆ **ನಾಲ್ಕು ನೂರು ವರ್ಷಗಳು** ಶ್ರಮಿಸುವರು. ಆದ್ದರಿಂದ ಶಿಲಾ ವೃಂದಾವನವನ್ನು ನಿರ್ಮಾಣಮಾಡಿ ಅದರ ಮೇಲೆ ಲಕ್ಷ್ಮೀನರಸಿಂಹ ಪ್ರತಿಮ, ಸಾಲಿಗ್ರಾಮ, ಹಾಗೂ ನಮಗೆ ದಯಪಾಲಿಸಿದ ಶ್ರೀರಾಮದೇವರ ಪ್ರತಿಮೆಯನ್ನು ಇಡಿರಿ. ಅದರ ಜೊತೆಗೆ ಚಕ್ರಾಂಕಿತ, ವಿಷ್ಣುಪಾದ ಇತರ ದೇವರುಗಳನ್ನು ನನ್ನ ವೃಂದಾವನದ ಮೇಲೆ ಇಡಬೇಕು. ಅದಕ್ಕನುಸರಿಸಿ ಈ ರಾಮದೇವರ ಗುಡಿ ಬಲಭಾಗದಲ್ಲಿ ತುಳಸಿ ವೃಂದಾವನ ಇರುವ ಸ್ಥಳದಲ್ಲಿ ಗುಡಿ ಕಟ್ಟಿಸಿ ನಮ್ಮ ವೃಂದಾವನವನ್ನು ಸ್ಥಾಪನೆ ಮಾಡಿರಿ' ಅಂತ ನಮಗೆ ಆಜ್ಞಾ ಮಾಡಿದರು. ಆಗ ನಾನು 'ಸ್ವಾಮಿ ತಾವು ವಿಜ್ಞಾಪಿಸಿದಂತೆ ವರ್ತಿಸಲು ನಾನು ಹಾಗೂ ಶಿಷ್ಯರುಗಳು ಸಿದ್ಧರಿದ್ದೇವೆ, ಆದರೆ ತಾವು ಹೇಳುವ ಸ್ಥಳದಲ್ಲಿ ಗುಡಿ ಕಟ್ಟಿಸಿ ವೃಂದಾವನವನ್ನು ಸ್ಥಾಪಿಸಲು ಖರ್ಚು ಬಹಳ ಬರುತ್ತದೆ. ಆದ್ದರಿಂದ, ಈಗಿರುವ ರಾಮದೇವರ ಗುಡಿಯ ಲಕ್ಷ್ಮಣದೇವರ ಬಲಭಾಗದಲ್ಲಿ ಚಿಕ್ಕ ವೃಂದಾವನವನ್ನು ಪ್ರತಿಷ್ಠಾಪನ ಮಾಡುವುದರಿಂದ ತಾರತಮ್ಯ ಪ್ರಕಾರ ಪೂಜೆ ಮಾಡಲು ಅನುಕೂಲವಾಗುತ್ತದೆ. ಪ್ರತ್ಯೇಕವಾದರೆ ಅಡ್ಡಾಡಲು ಕಷ್ಟವಾಗಬಹುದು' ಎಂದು ನಾನು ಮತ್ತು ಗೋವಿಂದರಾವು ವಿಜ್ಞಾಪಿಸಿಗೊಂಡೆವು. 'ನಿಮ್ಮ ಆಲೋಚನೆಯೇನೋ, ಯೋಗ್ಯವೇ ಇದೆ' **ಆದರೆ, ಮಂತ್ರಾಲಯ ಪ್ರಭುಗಳಲ್ಲಿ ಬಂದಂತೆ, ಮುಂದೆ ನಮ್ಮ ವೃಂದಾವನ ದರ್ಶನ ನಿಮಿತ್ತವಾಗಿ ಮತ, ಕುಲ, ಅಂತ ಭೇದವಿಲ್ಲದಂತೆ ಜನರು ತಮ್ಮ ಮನೋಭಿಷ್ಟಸಿದ್ಧಿಗಾಗಿ ಸೇವಾ ಮಾಡಲು ಬರುವವರಿದ್ದಾರೆ.** ಆದ್ದರಿಂದ ನಮ್ಮ ವೃಂದಾವನವನ್ನು ಪ್ರತ್ಯೇಕ ಸ್ಥಳದಲ್ಲಿ ಸ್ಥಾಪಿಸುವುದು ಹಿತಕರ. ಇಲ್ಲವಾದಲ್ಲಿ ಜನರಿಗೂ, ಪೂಜಾದಿಗಳಿಗೂ ತೊಂದರೆ ಆಗಬಹುದು. ಮತ್ತು ಅವರವರ ಸೇವಾ ವಿಧಾನದಿಂದ ಹರಿವಾಯುಗಳು ನಮ್ಮ ಮೂಲಕ ಅವರಿಗೆ ಫಲವನ್ನು ಕೊಡುವರು. ನಿಮ್ಮ ಮನಸ್ಸಿನಲ್ಲಿ ಕೊರೆಯುತ್ತಿರುವ ವಿಷಯವೇನೆಂದರೆ ಅಷ್ಟು ಹಣವಿಲ್ಲವಂತಲ್ಲವೆ? ಅದಕ್ಕೆ ನೀನು ಯೋಚಿಸಬೇಕಾಗಿಲ್ಲ. ಅದಕ್ಕೆ ತಗಲುವ ಖರ್ಚು ನಮ್ಮ ಹರಿವಾಯು ಗುರುಗಳು ನಿನಗೆ ಆ ಸಮಯಕ್ಕೆ ಸರಿಯಾಗಿ ಒದಗಿಸುವರು. ಆದ್ದರಿಂದ, ನೀನು ಈ ವಿಚಾರದಲ್ಲಿ ಗಾಬರಿ ಆಗುವ ಕಾರಣವಿಲ್ಲ' ಅಂತ ಅಭಯ ಪ್ರದಾನ ಮಾಡಿದರು.

೩೫. ಡಾಕ್ಟರ್ ದಿಙ್ಮೂಢನಾದ, ಅನಿತರ ಚಿಂತನೆ ಚಿಮ್ಮಿತು.

ಮರು ದಿವಸ ಅಮಾವಾಸ್ಯ ಮಧ್ಯಾಹ್ನ ೩ ಗಂಟೆಗೆ ಒಂದು ಚಾಪೆಯನ್ನು ಹಾಕಿರಿ, ನಾವು ಮಂಚವನ್ನು ಬಿಟ್ಟು ಚಾಪೆ ಮೇಲೆ ಬರುತ್ತೇವೆ ಅಂತ ಆಜ್ಞೆ ಮಾಡಿದರು. ಅದರಂತೆ ಬಂಡೆಪ್ಪ ಚಾಪೆಯನ್ನು ತಂದು ಹಾಕಿದನು. ಆ ಚಾಪೆಯ ಮೇಲೆ ಮಲಗಿದ ಕೂಡಲೆ ಕೈಕಾಲುಗಳು ಏಕ ಕ್ಷಣದಲ್ಲಿ ತಣ್ಣಗಾದವು. ಆಗ ಐದು ಬ್ರಾಹ್ಮಣರನ್ನು ಕರೆತರಲು ಹೇಳಿದರು. ಅದರಂತೆ ಅವರ ಪೂರ್ವಾಶ್ರಮದ ಗುರುಗಳಾದ ಹತ್ತಿ ಬೆಳಗಲ್ ಆಚಾರ್ಯರ ಮೊಮ್ಮಕ್ಕಳಾದ ಹನುಮಂತಾಚಾರ್ಯರು ಹಾಗೂ ತ್ರಿವಿಕ್ರಮ ನರಸಿಂಹಾಚಾರ್ಯರು ಮೊದಲೇ ಬಂದಿದ್ದ

ಗಾರ್ಲಪಾಡ ಕೃಷ್ಣಾಚಾರ್ಯರು ಮತ್ತು ಇನ್ನಿಬ್ಬರು ಆಚಾರ್ಯರನ್ನು ಕರೆಯಿಸಿ ಬಂದ ಬ್ರಾಹ್ಮಣರಿಗೆ ಒಂದೊಂದು ರೂಪಾಯಿ ಸಮೇತ ಗೋಪಿಚಂದನದ ತುಂಡು ಕೊಡುತ್ತಾ **'ಇನ್ನು ಹೋಗಿ ಬರುತ್ತೇವೆ ಕೃಪಾ ಇರಲಿ'** ಅಂತ ಹೇಳಿದರು. ಈ ಮಾತುಗಳನ್ನು ಕೇಳಿದ ಆ ಬ್ರಾಹ್ಮಣರು ಆಶ್ಚರ್ಯ ಚಕಿತರಾಗಿ ಸೂಕ್ಷ್ಮವಾಗಿ ತಿಳಿದುಕೊಂಡು ತಮ್ಮ ತಮ್ಮ ಮನೆಗೆ ಹೋಗುವ ಮಾರ್ಗದಲ್ಲಿ ತಮಗೆ ತಿಳಿದವರಿಗೆ, ರಾಮದೇವರ ಗುಡಿಯಲ್ಲಿರುವ ಶ್ರೀಗಳವರು ಪರಲೋಕ ಯಾತ್ರ ಮಾಡುವಂತಿದೆ. ದರ್ಶನಾಕಾಂಕ್ಷಿಗಳು ಈಗಲೆ ಹೋಗಿ ಕೊನೆಯ ದರ್ಶನವನ್ನು ತೆಗೆದುಕೊಳ್ಳಬಹುದೆಂದು ಹೇಳುತ್ತ ಹೋದರು. ಆ ವಿಷಯವನ್ನು ಕೇಳಿದ ಪಡಕಂಡ್ಲ ಗುರಾಚಾರ್ಯರು, ರಾವುಜಿ ಶ್ರೀನಿವಾಸರಾಯರು ಇತರ ಅನೇಕ ಮುಖ್ಯಸ್ಥರು ಧಾವಿಸಿಬಂದರು. ಮಲಗಿದ್ದ ಶ್ರೀಗಳವರ ಎಡ, ಬಲ ಸಮೀಪ ಕುಳಿತಿದ್ದ ನಾನು, ಬಂಡೆಪ್ಪ, ಡಾಕ್ಟರ್ ಗೋವಿಂದರಾಯರು ಅನೇಕ ಜನರನ್ನು ಬರಮಾಡಿಕೊಳ್ಳುತ್ತಿದ್ದೆವು. ಬಂದವರ ಧ್ವನಿ, ಗುರ್ತು ಹಿಡಿದು **'ನಾವು ಹೋಗಿ ಬರುತ್ತೇವೆ. ಕೃಪಾಯಿರಲಿ'** ಎಂದು ಅನ್ನುತ್ತಿದ್ದರು. ಇದರಂತೆ ಲಿಂಗಾಯಿತರು, ಮುಸಲ್ಮಾನರು, ನೇಕಾರರು ಅನೇಕರು ಅವರಲ್ಲಿ ವಿಶ್ವಾಸವಿಟ್ಟವರು ಬಂದು ಹೋಗುತ್ತಿದ್ದರು. ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಹೂ, ಹಣ್ಣು, ಟೆಂಗಿನಕಾಯಿ ದಕ್ಷಿಣೆಯನ್ನು ಅರ್ಪಿಸುತ್ತಿದ್ದರು. ಯದ್ಯಪಿ ಮುಸಲ್ಮಾನರನ್ನು ಕಂಡರೆ 'ಕೃಪಾರಖೋ' ಎಂದು ಹೇಳುತ್ತಿದ್ದರು. ಅವರಲ್ಲಿ ಕೆಲವರು 'ಆಪ್ ಮಂತ್ರಾಲಯಂ ಸ್ವಾಮಿಕೆ ಜೇಸೆ ಬಡಾ ಸ್ವಾಮಿ ಹೈ, ಆಪ್ ಹಮಾರೆ ಊಪರ್ ದಯಾ ರಖೋ' ಎಂದು ಗದ್ಗದ ಸ್ವರದಿಂದ ನಮಸ್ಕರಿಸುತ್ತಿದ್ದರು. ಈ ಹೊತ್ತಿಗೆ ಸುಮಾರು ೬ ಘಂಟೆ ಸಾಯಂಕಾಲವಾಯಿತು. ಆ ಹೊತ್ತಿಗೆ ಬಿದರಳ್ಳಿ ಡಾ. ನರಸಿಂಗರಾಯರು (M.B.B.S) ಸುಂಕದ ನಾರಾಯಣಾಚಾರ್ಯರು ನಮಸ್ಕಾರಕ್ಕೆಂದು ಬಂದರು. ಆಗ ನರಸಿಂಗರಾಯರು ಶ್ರೀಗಳವರ ಹತ್ತಿರ ಕೂತು ಅವರ ಹೃದಯಬಡಿತ, ನಾಡಿ ಪರೀಕ್ಷೆ ಮಾಡಲಾಗಿ ಆಶ್ಚರ್ಯ ಚಕಿತರಾದರು. ಕಾರಣ ಅವರ ಹೃದಯಬಡಿತ ನಾಡಿಗಳ ಕಾರ್ಯ ನಿಂತುಹೋಗಿ ಸುಮಾರು ಅರ್ಧಗಂಟೆ ಮೇಲೆ ಆದಂತೆ ಇದೆ, ಮೂಗು ತಣ್ಣಗಾಗಿದೆ. ಆದಾಗ್ಯೂ ಇನ್ನು ಜೀವಂತರಾಗಿಯೇ ಇದ್ದಾರೆಂದರೆ ಇವರು ಒಬ್ಬ ದೊಡ್ಡ ದೇವಸಂಭೂತರಿರಲೇಬೇಕು. ಇಲ್ಲವಾದಲ್ಲಿ ಈ ರೀತಿ ಜೀವಂತ ಇರಲು ಶಕ್ಯವೇ ಇಲ್ಲ ಎಂದು ಉದ್ಗಾರ ತೆಗೆದರು. ಆಗ ಶ್ರೀಗಳವರು ನಿಮ್ಮ ಆಲೋಪತಿ ಥೀಸಸ್ ಏನು ಹೇಳುತ್ತಿದೆ? ಅಂತ ಡಾಕ್ಟರನನ್ನು ಪ್ರಶ್ನಿಸಿದರು. 'ಸ್ವಾಮಿ, ಸಾಧನದಿಂದ ನೀವು ವಾಯುದೇವರನ್ನು ನಿಮ್ಮ ಹೃದಯ ಕಮಲದಲ್ಲಿ ಕೂಡಿಸಿಕೊಂಡಿರುವಾಗ ನಮ್ಮ ವಿದ್ಯೆ ಯಾವತರಹದ್ದು!' ಎಂದು ಡಾಕ್ಟರು ಉತ್ತರಿಸಿದರು. ಈ ಸ್ಥಿತಿಯಲ್ಲಿ ತಮ್ಮನ್ನು ನೋಡಿದರೆ ಭೀಷ್ಮಾಚಾರ್ಯರ ಸ್ವಚ್ಛಂದ ಮೃತ್ಯುವನ್ನು ಪ್ರಾಮಾಣ್ಯಗೊಳಿಸುತ್ತದೆ. ಏಕೆಂದರೆ, ಆಗ ನೋಡಿದರೆ ದೇಹದ ಪ್ರತಿ ಅವಯವಗಳು ತಣ್ಣಗಾಗಿದ್ದವು. ಈಗ ನೋಡಲಾಗಿ ಮತ್ತು ಯಥಾಪ್ರಕಾರದಂತೆ ಬೆಚ್ಚಗಾಗಿವೆ. ಇನ್ನು ಬಹುಕಾಲ ಜೀವಿಸುವರೆಂಬ ನಂಬಿಕೆ ತೋರುತ್ತದೆ. ಇದರಿಂದ ನೀವು ಇಚ್ಛಾ ಮರಣಿಗಳು ಎಂದು ಧೃಢವಾಗಿ ಹೇಳಬಹುದು ಎಂದು ಅಂದರು. ಇದು ಸರ್ವರಿಗೂ ಕೌತುಕವಾಗಿ

ತೋರಿತು. ಆ ಹೊತ್ತಿಗೆ ನಖಾತೆ ಮನೆತನದವರು ಗುಂಪಾಗಿ ಬಂದು ನಮ್ಮ ಗುರುಗಳು ನಮ್ಮನ್ನು ಅಗಲಿ ಪರಂಧಾಮಕ್ಕೆ ತೆರಳುವರಿದ್ದಾರೆ. ಇನ್ನು ಇಂಥ ಗುರುಗಳು ಎಲ್ಲಿ ದೊರೆಯಬೇಕು, ಎಂದು ಅತೀವ ದುಃಖವನ್ನು ತಡೆಯಲಾರದೆ ಅಳಲಾರಂಭಿಸಿದರು. ಆ ಹೊತ್ತಿಗೆ ರಾತ್ರಿ ಎಂಟುಗಂಟೆ ಆಯಿತು. ಸುಮಾರು ಐದು, ಆರು ಸಾವಿರ ಜನ ಸಮೂಹಕೂಡಿತ್ತು. ನಾಲ್ಕುವರೆ ಗಂಟೆಗೆ ಮುಂಬಯಿಂದ ಕಾಡ್ಲೂರ ಹನುಮಂತರಾಯನು ಬಂದು ಇಳಿದನು. ಆತನು ಕೃಷ್ಣಾದ ಹತ್ತಿರವಿರುವ ಕಾಡ್ಲೂರಿನವನು. ಇವರಲ್ಲಿ ಆತನೊಬ್ಬ ಸಂಗೀತಗಾರ ಮತ್ತು ಕುಸ್ತಿ ಪೈಲ್ವಾನನಾಗಿದ್ದ. ತನ್ನ ಹರೆಯ ವಯಸ್ಸಿನಲ್ಲಿ ಶ್ರೀಗಳವರ ಶಿಷ್ಯನಾಗಿದ್ದನಲ್ಲದೆ ಯಾತ್ರೆಗೆ ಹೋಗುವ ಸಮಯದಲ್ಲಿ ನನ್ನನ್ನು, ನನ್ನ ಹೆಂಡತಿಯನ್ನು ಅನಾಯಾಸವಾಗಿ ತನ್ನ ಭುಜದ ಮೇಲೆ ಕೂಡಿಸಿಕೊಂಡು ಮೈಲುಗಟ್ಟಲೆ ನಡೆಯುತ್ತಿದ್ದನು. ಈ ಗುಂಪಿನಲ್ಲಿ ಯಳ್ಕರ್ತಿ ನಾರಾಯಣನೆಂಬ ಸ್ಕೂಲು ಮಾಸ್ತರನು ಇವರು ಮಲಗಿದ್ದ ಸ್ಥಳದಲ್ಲಿ ಬಹು ಜನರು ಸೇರಿದ್ದರಿಂದ ಸಮೀಪಕ್ಕೆ ಬಂದು ನಮಸ್ಕಾರ ಮಾಡುವ ಅವಕಾಶವಾಗದೆ ಇದ್ದುದರಿಂದ ದೂರದಿಂದಲೇ ನಮಸ್ಕಾರ ಮಾಡಿ ಒಂದು ಮೂಲೆಯಲ್ಲಿ ನಿಂತುಗೊಂಡಿದ್ದನು. **'ನಾರಾಯಣರಾಯ ಹೋಗಿ ಬರುತ್ತೇವೆ ಕೃಪಾ ಇರಲಿ,'** ಎಂದು ಹೇಳಿದಾಗಲೇ ನಮಗೆಲ್ಲ ಅವನ ಮೇಲೆ ದೃಷ್ಟಿ ಬಿತ್ತು. ಆತನು ತನ್ನ ಮನಸ್ಸಿನಲ್ಲಿದ್ದದ್ದನ್ನು ಈ ರೀತಿಯಾಗಿ ಹೇಳಿದನು. ಇಲ್ಲಿ ನೆರೆದ ಅನೇಕ ಶ್ರೀಮಂತರು, ಅಧಿಕಾರಿಗಳು ಇದ್ದು, ನನ್ನನ್ನು ಯಾರು ಕೇಳುವವರೆಂದು ಅಂದುಕೊಂಡು ದೂರದಲ್ಲಿಯೇ ನಿಂತುಕೊಂಡಿದ್ದುದನ್ನು ಶ್ರೀಗಳವರಿಗೆ ಕಾಣದಿದ್ದರೂ ಅವರನ್ನು ಕುರಿತು 'ಹೋಗಿ ಬರುತ್ತೇವೆ ಕೃಪಾ ಇರಲಿ' ಅಂತ ಹೇಳಿದರೆಂದರೆ, ಇವರು ಎಂತ ದಯಾಳುಗಳು ಮತ್ತು ಜ್ಞಾನಿಗಳು ಎಂಬುದಕ್ಕೆ ಸಂದೇಹವೇ ಇಲ್ಲ ಎಂದು ಉದ್ಗಾರ ತೆಗೆದನು. ಇದರಿಂದ ಶ್ರೀಗಳವರಿಗೆ ಬಹಿರ್ನೇತ್ರಗಳು ಕಾಣದಿದ್ದರೂ ಜ್ಞಾನ ನೇತ್ರಗಳು ಎಲ್ಲರ ಮೇಲೆ ಇದ್ದಿತೆಂದು ಹೇಳಲು ಆಶ್ಚರ್ಯವೇನಿಲ್ಲ.

ಆ ನೆರೆದವರಲ್ಲಿ ಕೆಲವರು ಇವರ ಪ್ರಾಣೋತ್ಕ್ರಮಣ ನಂತರ ಮಾಡುವ ವಿಧಿಯನ್ನು ತಿಳಿದುಕೊಂಡು ಒಬ್ಬ ವರ್ತಕನು ನಾಲ್ಕು ಚೀಲ ಉಪ್ಪು ಒಂದು ಚೀಲ ಸಾಸ್ವಿಯನ್ನು ತರಿಸಿ ಪುಡಿಮಾಡಿಸಹತ್ತಿದನು. ಕೆಲವರು ಕರ್ಪೂರ, ಟೆಂಗಿನಕಾಯಿಗಳನ್ನು ತರಿಸುತ್ತಿದ್ದರು. ಈ ರೀತಿ ರಾತ್ರಿ ಎರಡು ಗಂಟೆಯವರೆಗೆ ಗಲಾಟೆ ನಡೆಯಿತು. '**ಎಷ್ಟು ಗಂಟೆಯಾಯಿತು**' ಎಂದು ಡಾ. ಗೋವಿಂದರಾಯನನ್ನು ಕೇಳಿದರು. **'ರಾತ್ರಿ ಎರಡು ಗಂಟೆ ಆಗಿದೆ'** ಎಂದು **ಉತ್ತರಿಸಿದನು. 'ಹಾಗಾದರೆ ನಮ್ಮ ಸ್ವಾಮಿ ಈದಿನ ರಥದಿಂದ ಇಳಿಯಲಿಲ್ಲ, ಆತನ ಇಚ್ಛಾ ಯಾವ ಕಾಲದಲ್ಲಿ ಇಳಿಯುವದಿದೆಯೋ!'** ಈಗ ನಾವು ಮಾತ್ರ ಮೇಲೆ ಬರುತ್ತೇವೆ. ಹಾಸಿಗೆ ಹಾಸಿರಿ ಅಂತ ಬಂಡೆಪ್ಪನಿಗೂ ಗಂ.ಬಾ. ಭಾಗಮ್ಮಗೂ ಹೇಳಿದರು. ಯಾರ ಸಹಾಯವಿಲ್ಲದೆ ಕೂಡಲೆ ಎದ್ದು ಮಂಚದ ಮೇಲೆ ಬಂದು ಮಲಗಿದರು. ಯಥಾಪ್ರಕಾರ ನರನಾಡಿಗಳಲ್ಲಿ ಚಲನವಲನಾದಿಗಳು ಸಕ್ರಮವಾಗಿ ಮತ್ತೆ ನಡೆಯಹತ್ತಿತು. ಡಾ. ಗೋವಿಂದರಾಯ

ಹಾಗೂ ಡಾ. ನರಸಿಂಗರಾಯನು ಇಬ್ಬರು ಶ್ರೀಗಳವರ ನಾಡಿ, ಹೃದಯ ಪರೀಕ್ಷಿಸಿದಾಗ ಯಾವ ತರದ ವ್ಯತ್ಯಾಸ ಕಂಡುಬರದೆ ಉಚ್ಛ್ವಾಸ ನಿಚ್ಛ್ವಾಸ ಸರಿಯಾಗಿ ನಡೆಯ ಹತ್ತಿತು. ತದನಂತರ ನೆರೆದ ಜನರೆಲ್ಲ ಆ ರಾತ್ರಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

೩೬. ಧ್ಯಾನಿಸುವಂತೆ ಪ್ರಾಣೋತ್ಕ್ರಮಣ. (ವೃಂದಾವನಸ್ಥರಾದರು)

ಮರುದಿವಸ ಶಾಲಿವಾಹನ ಶಕೆ ೧೮೯೫ ಸ್ವಭಾನು ಸಂವತ್ಸರದ ಭಾದ್ರಪದ ಶುಕ್ಲ ಪ್ರತಿಪದ (ಕ್ರಿ.ಶ. ೧೯೪೩ ಸೆಪ್ಟಂಬರ್) ಮಧ್ಯಾಹ್ನ ಸಮಯದಲ್ಲಿ ಪುನಃ **'ಚಾಪೆ ಹಾಕಿರಿ, ಅದರ ಮೇಲೆ ಬರುವೆವು'** ಅಂತ ಅಪ್ಪಣೆ ಮಾಡಿದರು. ಆ ಪ್ರಕಾರ ಚಾಪೆ ಹಾಕಿದ ಮೇಲೆ ಬಂದು ಮಲಗಿದಕೂಡಲೆ ಪೂರ್ವದಲ್ಲಿ ಆದಂತೆ ಕೈಕಾಲುಗಳು ತಣ್ಣಗಾದವು. ಈ ಸುದ್ದಿಯನ್ನು ಕೆಲವು ಶಿಷ್ಯರಿಂದ ಊರೊಳಗೆ ಕಳಿಸಿ ಎಲ್ಲರನ್ನು ಬರಲು ಹೇಳಿಕಳಿಸಿದರು. ಒಂದು ಗಂಟೆಯೊಳಗೆ ಸುಮಾರು ೪, ೫ ಸಾವಿರ ಜನ ಸಮೂಹ ಕಲೆಯಿತು. ಸಾಯಂಕಾಲ ೬ ಗಂಟೆ ಸಮಯದಲ್ಲಿ **'ಎಬ್ಬಿಸಿರಿ ಎದ್ದು ಕೂಡುತ್ತೇವೆ'**, ಅಂತ ಹೇಳಿದರು. ಆಗ ನಾನು ಬಂಡೆಪ್ಪ, ಗೋವಿಂದರಾಯರ ಸಹಾಯದಿಂದ ಎಬ್ಬಿಸಲು ಉದ್ಯುಕ್ತರಾಗುವಷ್ಟರಲ್ಲಿ ತಾವಾಗಿಯೇ ಎದ್ದು ಪದ್ಮಾಸನಾ ರೂಢರಾಗಿ ಧ್ಯಾನಪರರಾದರು. ಅವರ ಸಮೀಪದಲ್ಲಿದ್ದವರು ಪಡಕಂಡ್ಲ ಗುರಾಚಾರ್ಯ, ಹತ್ತಿ ಬೆಳಗಲ್ ಆಚಾರ್ಯರ ಮೊಮ್ಮಕ್ಕಳಾದ ಹನುಮಂತಾಚಾರ್ಯರು, ತ್ರಿವಿಕ್ರಮ ನರಸಿಂಹಚಾರ್ಯರು ಇನ್ನಿತರ ಆಚಾರ್ಯರು ಕಣ್ಣು ರೆಪ್ಪೆ ಸಹ ಬಿಡದೆ ಏಕಚಿತ್ತದಿಂದ ನೋಡಹತ್ತಿದರು. ರಾತ್ರಿ ಎಂಟುಗಂಟೆಯ ಸಮಯದಲ್ಲಿ ಶ್ರೀಗಳವರ ನಾಭಿ ಕಮಲದಿಂದ ಒಂದು ರೂಪವು (ಸಿನಿಮಾದಲ್ಲಿ ರಾತ್ರಿ ದೃಶ್ಯ ಸನ್ನಿವೇಶದಲ್ಲಿ ಓಡಾಡುವುದು ಕಂಡುಬಂದಂತೆ) ಮೇಲಕ್ಕೇರುತ್ತ ಹೃದಯುದವರೆವಿಗೂ ಬಂದಂತೆ ಕಂಡುಬಂದದ್ದು, ಕೆಲವರು ಕಂಡು ಬಂದದ್ದನ್ನು ನೋಡಿ ಆಶ್ಚರ್ಯಚಕಿತರಾದರು.ಆ ಸಮಯದಲ್ಲಿ **'ಅಸ್ತ್ರಾಯ ಫಟ ಮಾಡುವಂತೆ ಬಲಗೈಯನ್ನು ತಮ್ಮ ತಲೆಯ ಸುತ್ತ ಸುತ್ತಿಸಿ ಹೋಗಿ ಬರುತ್ತೇವೆ ಕೃಪಾ ಇರಲಿ' ಎಂದು ಎಡಗೈ ಹಸ್ತದ ಮೇಲೆ ಬಲಗೈ ಹಸ್ತವನ್ನು ಇಟ್ಟುಗೊಂಡು ಯಾವ, ಯಾರ ಆಧಾರವಿಲ್ಲದೆ ಪದ್ಮಾಸನದಲ್ಲಿ ಕಣ್ಣುಮುಚ್ಚಿ ಧ್ಯಾನಿಸುವರಂತೆ ಪ್ರಾಣೋತ್ಕ್ರಮಣ ಮಾಡಿದರು. ಆ ಸಕಾಲದಲ್ಲಿ ಆ ದೃಶ್ಯದ ಸ್ಮರಣಾರ್ಥವಾಗಿ ಶ್ರೀ ಕುಪ್ಪುರಾವು ಎಂಬ ಫೋಟೋಗ್ರಾಫರನಿಂದ ಫೋಟೋವನ್ನು ತೆಗಿಸಲಾಯಿತು. ಅಂತ್ಯಕಾಲದಲ್ಲಿ ಯೋಗ ಮಾರ್ಗಾವಲಂಬನ ಮಾಡಿದ ಪ್ರಭಾವದಿಂದ ಕೃಶದೇಹವು ದಷ್ಟಪುಷ್ಟವಾಗಿ, ಇದಕ್ಕು ಆರು ತಿಂಗಳ ಪೂರ್ವದಲ್ಲಿ ತೆಗೆದ ಫೋಟೋಕ್ಕು ಕಂಡುಬರುವ ವೃದ್ಧಾಪ್ಯ ಲಕ್ಷಣವು ಕಾಣದೆ ಇತಃ ಪೂರ್ವದಲ್ಲಿ ೩೦ (ಮೂವತ್ತು) ವರ್ಷದ ಫೋಟೋದಲ್ಲಿ ಕಂಡು ಬರುವಂತೆ ಶರೀರ ಸ್ಪಷ್ಟವಾಗಿ ಕಾಣುವುದು.**

ಆ ರಾತ್ರಿಯೇ ಸನ್ಯಾಸವಿಧಿಗನುಸರಿಸಿ ಶ್ರೀ ರಾಮದೇವರ ಮುಂಭಾಗದಲ್ಲಿ ಅಂದರೆ ಈಗಿರುವ ನಳದ ಹತ್ತಿರದಲ್ಲಿ ಅವರ ದೇಹವನ್ನು ಭೂ ಸ್ಥಾಪನಾ ಮಾಡುವ ಸಮಯದಲ್ಲಿ

ನೂರಾರು ಶಿಷ್ಯರು ನೆರೆದಿದ್ದವರಲ್ಲಿ ಶ್ರೀ **ಪಡಕಂಡ್ಲ ಗುರಾಚಾರ್ಯ**ರು ಈ ರೀತಿ ಅಂದಿದ್ದೇನೆಂದರೆ ಶ್ರೀ ಮಧ್ವರಾಯರು, ಶ್ರೀ ಟೀಕಾರಾಯರು, ವಾದಿರಾಜರು, ವ್ಯಾಸರಾಯರು, ಜಿತಾಮಿತ್ರರು, ಶ್ರೀ ರಾಘವೇಂದ್ರರು, ಪುರಂದರದಾಸರು, ಜಗನ್ನಾಥ ದಾಸರು, ಅವರ ಅವಸಾನ ಕಾಲದಲ್ಲಿ ಅದೃಶ್ಯರಾದದ್ದು ಸ್ವತಃ ಕಣ್ಣಿನಿಂದ ನೋಡದಿದ್ದರೂ ಕೇಳಿದ್ದೆವು. ಓದಿದ್ದೇವೆ ಹೊರತು ನೋಡಿರಲಿಲ್ಲ. ಆದರೆ ಆ ಭಾಗ್ಯ ಈಗ ಈ ಮಹನೀಯರನ್ನು ನೋಡಿ, ನಮ್ಮ ಜನ್ಮ ಸಾರ್ಥಕ ಮಾಡಿಕೊಂಡ ನಾವೇ ಧನ್ಯರು. ಇವರು ಶ್ರೀ ವಾಯುದೇವರ ವಿಶೇಷ ಉಪಾಸಕರಾಗಿದ್ದರಿಂದ ಯಾರ, ಯಾವ ಆಧಾರವಿಲ್ಲದೆ ಪದ್ಮಾಸನ ಹಾಕಿ ಪ್ರಾಣೋತ್ಕ್ರಮಣ ಮಾಡಿದ್ದು ನೋಡಿದರೆ, ಈ ಜಡ ದೇಹದಲ್ಲಿ (ಹರಿ ಕಥಾಮೃತಸಾರದಲ್ಲಿ ಹೇಳಿದಂತೆ) ಶ್ರೀ ಹರಿವಾಯುಗಳು ಇವರ ದೇಹದಲ್ಲಿ ದೋಷ ದೂರವಾಗಿದ್ದುಕೊಂಡು, ಇವರಿಂದಲೇ ಅನೇಕ ಅಗಾಧ ಸಾಧನೆ ಮಾಡಿತೋರಿಸಿದ್ದಾರೆ. ಸಾಧಕಶ್ರೇಣಿಯ ಸೇನಾನಿಗಳಲ್ಲಿ ಈ ಶ್ರೀ ರಘುಪ್ರೇಮತೀರ್ಥರೊಬ್ಬರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಎಂದು ಹೇಳುತ್ತ ಎಲ್ಲರ ಕಣ್ಣಲ್ಲಿ ಆನಂದಭಾಷ್ಪವನ್ನು ಉದುರಿಸಿದರು.

ಈ ರೀತಿ ಆನಂದಭಾಷ್ಪವನ್ನು ಉದರಿಸಿದವರಾದ ಶ್ರೀ ತ್ರಿವಿಕ್ರಮ ನರಸಿಂಹಾಚಾರ್ಯರು, ಹತ್ತಿ ಬೆಳಗಲ್ಲ ಹನುಮಂತಾಚಾರ್ಯರು, ಕೊಪ್ಪಳ ರಾವುಜಿರಾಯ, ಮುಧೋಳ ಕಿಶನರಾಯ, ನಾಗನಾಥನಹಳ್ಳಿ ಪಾಂಡುರಂಗರಾಯ, ಚೊಕ್ಕನಹಳ್ಳಿ ಕ್ರಿಷ್ಣಾರಾಯ, ನನ್ನ ಅಣ್ಣ ತಮ್ಮಂದಿರಾದ (ವೆಂಕೋಬಾಚಾರ್ಯ, ನರಸಿಂಹಾಚಾರ್ಯ, ರಘುನಾಥಾಚಾರ್ಯ, ರಾಜಾಚಾರ್ಯ, ರಾಘವೇಂದ್ರಾಚಾರ್ಯ, ಭೀಮಸೇನ, ಕ್ರಿಷ್ಣಾಚಾರ್ಯ) ಮತ್ತು ಧಾರವಾಡದ ದೇಶಪಾಂಡೆ ವಿಠ್ಠಲರಾಯ, ರಂಗರಾಯ, ನಖಾತೆ ಶ್ರೀನಿವಾಸರಾಯ, ವಾಸುದೇವರಾಯ, ವಸಂತರಾಯ, ರಾಜಾರಾಮ, ವಿಠಲರಾಯ, ಯಳ್ಳರ್ತಿ ನಾರಾಯಣರಾಯ, ಕಾಮವಾರ ಸ್ವಾಮಿರಾಯ, ರಾಘವೇಂದ್ರರಾಯ, ರಣವಾಟ್ಲ ಆನಂದರಾಯ, ಜಠರ ನಾರಾಯಣರಾಯ, ಇಡ್ಲೂರು, ಜಾಜಾಪುರ ಜಯಣ್ಣ, ನಾರಾಯಣಪೇಟೆಯವರು, ಕೋಟಂಕೊಂಡ ರಾಘವೇಂದ್ರರಾಯ ಇನ್ನು ಅನೇಕ ಶಿಷ್ಯರು ಹಾಗೂ ವೈಶ್ಯಶಿಷ್ಯರು ಆನಂದಿಸಿದರು. ಈ ರೀತಿ ನೆರೆದಿದ್ದವರಲ್ಲಿ '**ವರಕವಿಗಳಾದ ಮಾನ್ವಿ ಗುಂಡಾಚಾರ್ಯ**'ರು ಕಳಾಕಾಷ್ಟವನ್ನು ಮುಚ್ಚುವಾಗ ಎಲ್ಲಿಂದಲೋ ಕೇಳಿಸುವಂತೆ ನಿಧಾನವಾಗಿ ಆನಂದವನ್ನು ತಡೆಯಲಾರದೆ ಹೃದಯ ಉಕ್ಕಿಬಂದು ಸುಶ್ರಾವ್ಯವಾಗಿ, ಭಾವೋದ್ರೇಕವಾಗಿ '**ಏನು ಧನ್ಯರೋ ಜಗದಿ । ಎಂಥಾ ಮಾನ್ಯರೋ ಕ್ಷೋಣಿವಿಭುಧ ಶ್ರೇಣಿ ನಮಿಪ ಮೌನಿ ಶ್ರೀ ರಘುಪ್ರೇಮತೀರ್ಥರು**' ಎಂದು ಹಾಡುತ್ತ ಕುಣಿಯತೊಡಗಿದರು. ಈ ಸಮಯದಲ್ಲಿಯೇ ಶ್ರೀಗಳವರ ಸ್ತೋತ್ರದ ಫಲಶೃತಿಯಾದ '**ಚಿಂತಾಮಣಿಂ ಸ್ವಭಕ್ತಾನಾಂ ಕಲ್ಪವೃಕ್ಷಂಚ ಕಾಮದಮ್ । ಸ್ವಾಮಿನಂತ್ವಾಂ ರಘುಪ್ರೇಮ ತೀರ್ಥಂ ವಂದೇಹ್ಯಭಿಷ್ಟದಮ್ ॥**' ಎಂದು ಡಾ. ಮಂಗಳವೇಢೆ ಗೋವಿಂದರಾಯ ತಮ್ಮ ಉಚ್ಚಕಂಠದಿಂದ, ಎರಡು ಕೈಗಳನ್ನು ಮೇಲಕ್ಕೆ ಜೋಡಿಸಿ ಗುರುಗಳ ಚಿರಸ್ಮರಣೆ ಮಾಡುತ್ತ ಬಾಹ್ಯ ಪ್ರಪಂಚವನ್ನೇ ಮರೆತು ಕುಣಿಯತೊಡಗಿದರು.